ಕನ್ನಡ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಧ್ಯಯನದ ಮಹಾಪ್ರಬಂಧ)

ಸಂಶೋಧಕರು

ಬಸಪ್ಪ ಪಿ. ಕುಂಬಾರ

ನೋಂದಣಿ ಸಂಖ್ಯೆ: BVVBKS00211

ಮಾರ್ಗದರ್ಶಕರು

ಡಾ. ಗುರುಪಾದ ಮರಿಗುದ್ದಿ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ.

ಮಾನ್ಯತಾ ಸಂಸ್ಥೆ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ - ೫೮೩೨೭೬

8/5

815

[illegible]

ಕನ್ನಡ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಧ್ಯಯನದ ಮಹಾಪ್ರಬಂಧ)

ಸಂಶೋಧಕರು

ಬಸಪ್ಪ ಪಿ. ಕುಂಬಾರ

ನೋಂದಣಿ ಸಂಖ್ಯೆ: **BVVBKS00211**

ಮಾರ್ಗದರ್ಶಕರು

ಡಾ. ಗುರುಪಾದ ಮರಿಗುದ್ದಿ

ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ.

ಮಾನ್ಯತಾ ಸಂಸ್ಥೆ

ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ - ೫೮೩೨೭೬

ಅಭ್ಯರ್ಥಿಯ ಪ್ರಮಾಣ ಪತ್ರ

ಕನ್ನಡ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಡಾ. ಗುರುಪಾದ ಮರಿಗುದ್ದಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ವಿಭಾಗದ, ಬಾಗಲಕೋಟದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಮಾನ್ಯತಾ ಸಂಸ್ಥೆಯ ಮುಖಾಂತರ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವತಂತ್ರ ಪರಿಶ್ರಮದ ಫಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ದಿನಾಂಕ:

ಸ್ಥಳ:

ಬಸಪ್ಪ ಪಿ. ಕುಂಬಾರ

ಸಂಶೋಧನಾ ವಿದ್ಯಾರ್ಥಿ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನ ಕೇಂದ್ರ ಬಾಗಲಕೋಟ.

ಮಾರ್ಗದರ್ಶಕರ ದೃಢೀಕರಣ ಪತ್ರ

ಕನ್ನಡ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳು ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಕನ್ನಡ ಸಾಹಿತ್ಯ ವಿಭಾಗ, ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ ಬಾಗಲಕೋಟ, ಮಾನ್ಯತಾ ಸಂಸ್ಥೆಯ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ **ಶ್ರೀ ಬಸಪ್ಪ ಪಿ. ಕುಂಬಾರ** ಅವರು ನನ್ನ ಮಾರ್ಗದರ್ಶದಲ್ಲಿ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ:

ಸ್ಥಳ: ಬಾಗಲಕೋಟ

ಮಾರ್ಗದರ್ಶಕರು

ಡಾ. ಗುರುಪಾದ ಮರಿಗುದ್ದಿ
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ.

ಮಾರ್ಗದರ್ಶಕರು,
ಡಾ. ಗುರುಪಾದ ಮರಿಗುದ್ದಿ
ಸಂಯುಕ್ತ ವಿಜ್ಞಾನ ಮಹಾವಿದ್ಯಾಲಯ,
ಸಂಕೇಶ್ವರ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಸಂಶೋಧನೆಗಳು ಸಾಮಾಜಿಕ ದೃಷ್ಟಿಕೋನವನ್ನಿಟ್ಟುಕೊಂಡು ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಕಾರಣ ಸಾಮಾಜಿಕ ಜಾಗೃತಿ, ಜಾಗತೀಕರಣದ ಪ್ರಭಾವ, ಭಾಷಾ ಬೆಳವಣಿಗೆ ಮುಂತಾದವುಗಳ ಪರಿಣಾಮ ಇರಬಹುದು. ಕನ್ನಡ ಸಾಹಿತ್ಯದ ಸಂಶೋಧನೆ ಆರಂಭವಾಗಿ ಶತಮಾನದ ಅಂಚು ಮುಟ್ಟಿದೆ. ಸ್ವಾತಂತ್ರ್ಯ ಪೂರ್ವಕಾಲದಿಂದ ಅರವತ್ತು ಎಪ್ಪತ್ತರ ದಶಕದವರೆಗೂ ಜರುಗಿದ ಸಂಶೋಧನೆಗಳು ಗತಕಾಲದ ಇತಿಹಾಸ ಶೋಧಿಸುವ ಪ್ರಯತ್ನ ಮಾಡಿದಂತಿವೆ. ಬಹುತೇಕ ಸಂಶೋಧನೆಗಳು ವೈಭವೀಕರಣದಿಂದ ಮುಕ್ತವಾಗಿರಲಿಲ್ಲ. ಕಾಲ ಬದಲಾದಂತೆ ಸಾಮಾಜಿಕ, ಸಾಂಸ್ಕೃತಿಕ ವಲಯ ಬದಲಾಗಲು ಕಾರಣವಾದ ಶಿಕ್ಷಣದಿಂದ ಸಾಹಿತ್ಯ ವಲಯದಲ್ಲೂ ಸಮಗ್ರ ಅಲ್ಲದಿದ್ದರೂ ಕ್ರಮೇಣ ಬದಲಾವಣೆಯ ಗಾಳಿ ಬೀಸತೊಡಗಿತು. ವಿಶೇಷವಾಗಿ ಸಂಶೋಧನೆಯು ಸಾಮಾಜಿಕ ಕ್ಷೇತ್ರಕ್ಕೆ ಮುಖ ಮಾಡಿರುವುದು ಕಾರಣ. ಅದರ ಜೊತೆಗೆ ಹಿಂದುಳಿದ ಮತ್ತು ಕೆಳವರ್ಗಕ್ಕೆ ಸೇರಿದ ಸಂಶೋಧಕರು ಈ ಕಾಲದ ಸಾಹಿತ್ಯ ಸಂಶೋಧನೆಯ ಕ್ಷೇತ್ರದಲ್ಲಿ ಪ್ರವೇಶ ಪಡೆದಿದ್ದಾರೆ. ಈ ಸಂಶೋಧನೆ ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುವುದು. ಇಂತಹ ವಿಭಿನ್ನವಾದ ದೃಷ್ಟಿಕೋನದಿಂದ ಸಂಶೋಧನೆಯಲ್ಲಿ ಸಮಾಜಶಾಸ್ತ್ರೀಯ ನಿಲುವುಗಳನ್ನು ಗುರುತಿಸಲು ಕಾರ್ಯ ನಡೆಯತೊಡಗಿತು. ಅಧ್ಯಯನಗಳು ಅದೇ ದಿಶೆಯಲ್ಲಿ ಆರಂಭವಾದವು. ಸಾಹಿತ್ಯವನ್ನು ಸಾಮಾಜಿಕ ಉದ್ದೇಶಗಳಿಗೆ ಕನ್ನಡವನ್ನು ಮಾಧ್ಯಮವಾಗಿ ಬಳಸಿಕೊಂಡಿದ್ದಕ್ಕೆ ಸಾಕಷ್ಟು ನಿದರ್ಶನಗಳಿವೆ.

ಈ ಹಿನ್ನೆಲೆಯಲ್ಲಿ "ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳು" ಎಂಬ ವಿಷಯ ಕುರಿತು ಸಂಶೋಧನೆಯನ್ನು ಕೈಗೊಂಡಿದ್ದೇನೆ. ಹತ್ತೊಂಬತ್ತನೆಯ ಶತಮಾನದ ಸಾಹಿತ್ಯದಲ್ಲಿ ಹಳತು-ಹೊಸತುಗಳ ಪ್ರಾಯೋಗಿಕತೆಯು ಕಾಣುವುದು. ಬರಹಕ್ಕೆ ಆಕರಗಳ ಕೊರತೆ ಇರಲಿಲ್ಲ. ಪ್ರಕಟಿಸಲು ಅವಕಾಶಗಳ ಕೊರತೆ ಇಲ್ಲಿ ಕಾಣುತ್ತಿತ್ತು. ಅಂತೆಯೇ ಹೊಸಗನ್ನಡದ ಸಾಹಿತ್ಯಕ್ಕೆ ಪಾಶ್ಚಾತ್ಯ ಸಾಹಿತ್ಯ ಪ್ರೇರಕ ಶಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅದೇ ಮೂಲವಾಗಿರಲಿಲ್ಲ. ಆ ಸಮಯದಲ್ಲಿ ಹಲವಾರು ಸ್ವತಂತ್ರ ಕೃತಿಗಳು ಮೂಡಿಬಂದವು. ಆ ಕೃತಿಗಳಲ್ಲಿ ಸಮಕಾಲೀನ ಸಾಮಾಜಿಕ ಚಿತ್ರಣ, ಸಮಸ್ಯೆಗಳನ್ನು ಅರ್ಥವತ್ತಾಗಿ ಚಿತ್ರಿಸಿದರು. ಆದ್ದರಿಂದ ಕಾದಂಬರಿ ಕ್ಷೇತ್ರ ಸಾಹಿತ್ಯದ ಒಂದು ಪ್ರಕಾರವಾಗಿ ಮೂಡಿಬಂದಿತು. ಈ ಕಾಲದ ಕಾದಂಬರಿಗಳು ಪಾಶ್ಚಾತ್ಯ ವಿಷಯ, ವಸ್ತು ಆಯ್ಕೆ ಮಾಡಿಕೊಂಡು ಬರೆದವುಗಳಲ್ಲ. ಎಷ್ಟೋ ಬರಹಗಾರರು ತಮ್ಮ ಮೂಲ ನೆಲೆಯ ಸಮಸ್ಯೆ

ಎತ್ತಿಕೊಂಡರು. ಆಗ ಅಲ್ಲಿ ಸ್ವತಂತ್ರ ಕಾದಂಬರಿಗಳು ರಚನೆಗೊಂಡವು. ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಮಾಧ್ಯಮದ ಅವಶ್ಯಕತೆ ಇತ್ತು. ಅಂದಿನ ಸಮಾಜಕ್ಕೆ ಇಂದಿನಷ್ಟು ಸೌಲಭ್ಯಗಳಿರಲಿಲ್ಲ ಎಂಬ ಅಂಶವನ್ನು ಗಮನಿಸಿದರೆ ಆಗ ಕ್ರಿಯಾಶೀಲ ಮನೋವೃತ್ತಿ ತೋರ್ಪಡಿಸಿರುವುದು ಸ್ತುತ್ಯರ್ಹವಾದ ಸಂಗತಿಯೇ ಸರಿ. ಆ ಹೊಸ ಪ್ರೇರಣೆಗಳು ನಮ್ಮ ಸಂಪ್ರದಾಯದ, ಸಮಾಜದ ಕೆಲ ಅಂಶಗಳನ್ನು ಪ್ರಶ್ನಿಸುವ ಮನೋವೃತ್ತಿಯನ್ನು ಬೆಳೆಸಿದವು.

ನಮ್ಮ ಸಂಸ್ಕೃತಿ, ನಾಡು-ನುಡಿಯ ಕಲ್ಪನೆ ಬೆಳೆದಿದ್ದೇ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದ. ಈ ದಿಶೆಯಲ್ಲಿ ನಾವು ಪಾಶ್ಚಾತ್ಯರನ್ನು ನೆನೆಯಲೇಬೇಕು. ಅಂತೆಯೇ ಹಾ.ಮಾ. ನಾಯಕರು ಈ ಕಾಲವನ್ನು "ಹಳತು ಹೊಸತರೊಳಗಿನ ಸಂಘರ್ಷ ಒಂದೆಡೆಯಾದರೆ, ಅವುಗಳ ಕಸಿಯಿಂದ ಮೂಡಿದ ಚಿಗುರು ಇನ್ನೊಂದೆಡೆ"[೧] ಎಂದು ಹೇಳಿರುವುದು ಅರ್ಥವತ್ತಾಗಿದೆ. ಹಾಗೆಯೇ ಹೊಸಗನ್ನಡದ ಸಾಹಿತ್ಯದ ಪ್ರಕಾರಗಳು ವಸ್ತು ಶೈಲಿಯಲ್ಲಿ ದಟ್ಟವಾದ ಪ್ರಭಾವ ಗುರುತಿಸುವುದು ಜೊತೆಗೆ ಹೊಸತನಕ್ಕಾಗಿ ತುಡಿಯುತ್ತಿರುವುದು ಇಲ್ಲಿ ವಿಶೇಷವಾಗಿ ಕಾಣುವುದು.

ಬ್ರಿಟಿಷರು ಭಾರತಕ್ಕೆ ಬಂದದ್ದು ವ್ಯಾಪಾರ ದೃಷ್ಟಿಯಿಂದ. ಆಳರಸರಂತೆ ಕಾರ್ಯಭಾರ ಮಾಡಿದ್ದು ಇತಿಹಾಸ. ಅಲ್ಲದೇ ಭಾರತೀಯ ಸಮಾಜದ ಬದಲಾವಣೆಗೂ ಕಾರಣರಾದರು. ಜನರ ದೌರ್ಬಲ್ಯಗಳನ್ನು ಅರಿತು ಅವರನ್ನು ಗೆಲ್ಲಲು 'ಹವಣಿಸಿ' ಗೆದ್ದರು. ಇದರ ಜೊತೆಗೆ ವಿದ್ಯಾಭ್ಯಾಸದ ಪದ್ಧತಿಯಲ್ಲಿ, ಸುಧಾರಣೆಗಳು ಪ್ರಭಾವ ಬೀರಿದವು. ಭಾರತೀಯರಿಗೆ ವಿದ್ಯಾಭ್ಯಾಸ ನೀಡುವುದರಲ್ಲಿ ಅವರ ಸ್ವಾರ್ಥಭಾವನೆ ಕಾಣುವುದು. ಆಡಳಿತದ ಅನುಕೂಲಕ್ಕೆ ಹಿತಾಹಿತಗಳ ವಿನಿಮಯಕ್ಕೆ ಭಾಷೆಯ ಅಗತ್ಯ ಅರಿತಿದ್ದರು. ಈ ವಿಚಾರ ಭಾರತೀಯ ಬುದ್ಧಿಜೀವಿಗಳಲ್ಲಿ ಸ್ವಾತಂತ್ರ್ಯದ ಪ್ರೇರಕಶಕ್ತಿಯಾಗಿ ಪ್ರಚೋದಿಸಿತು. ಇದೆಲ್ಲಕ್ಕಿಂತ ಪೂರ್ವಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ದಟ್ಟವಾಗಿ ಮೂಡಿ ಬಂದಿದೆ. ಇದು ಮಾರ್ಗ ಸಾಹಿತ್ಯದಲ್ಲಿ ವಿಶೇಷವಾಗಿ ಕಾಣಿಸಿದೆ. ಅನಂತರ ಕನ್ನಡ ಕವಿಗಳೆಲ್ಲ ದೇಶೀಯ ಪರಂಪರೆಯಿಂದ ಪ್ರಭಾವಿತರಾಗಿರುವುದು ಕಾಣುವುದು. ಕ್ರಿ.ಶ. ಹನ್ನೆರಡನೆ ಶತಮಾನದ ವಚನ, ಷಟ್ಪದಿ, ರಗಳೆ ಮತ್ತು ಕೀರ್ತನ ಸಾಹಿತ್ಯದಲ್ಲಿ ದೇಶಿಯ ಪರಂಪರೆ ಮುಂದುವರೆಯಿತು. ಈ ಕಾರಣದಿಂದ ಕನ್ನಡ ಭಾಷೆ ದೇಶಿಯ ಸಂಸ್ಕೃತಿಯ ಹಿನ್ನಲೆಯಲ್ಲಿ ದಾಖಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಇದಕ್ಕಿಂತ ತುಸು ಭಿನ್ನವಾಗಿದೆ. ಬ್ರಿಟಿಷ್ ಆಡಳಿತದ ಮೂಲಕ ಆಧುನಿಕ ಶಿಕ್ಷಣ ಪದ್ಧತಿ ಜನರ ಸಂಪರ್ಕಕ್ಕೆ ಬಂದಿತು. ಇಂಗ್ಲಿಷ್ ಭಾಷೆ ಭಾರತೀಯ ಸಂಸ್ಕೃತಿ ಮತ್ತು ಸಮಾಜದ ಮೂಲಕ ಪರಿಣಾಮ ಬೀರಿತು. ಶಿಕ್ಷಣ ಮೇಲ್ಜಾತಿಯವರ ಸ್ವತ್ತಾಗದೇ ಇತರರಿಗೂ ದೊರೆಯುವಂತೆ ಪ್ರೇರಣೆ ನೀಡಿತು.

ಮೊದಲ ಘಟ್ಟದ ಕಾದಂಬರಿಗಳನ್ನು ಕುರಿತು ಸಾಕಷ್ಟು ಸಂಶೋಧನೆಗಳು, ಚಿಂತನೆಗಳು ಜರುಗಿವೆ. ಸಾಹಿತ್ಯ ಚರಿತ್ರೆ, ಸಿದ್ಧಾಂತ ಬರವಣಿಗೆ ಆಕರ ಕೃತಿಗಳು, ಸಮೀಕ್ಷಾ ಲೇಖನಗಳು, ಕೃತಿನಿಷ್ಠ ವಿಮರ್ಶೆಗಳು ಪ್ರಕಟವಾಗಿವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸದಾಗಿ ರೂಪುಗೊಂಡ ಭಾವಗೀತೆ, ಕಥೆ, ಕಾದಂಬರಿ ಪ್ರಕಾರಗಳು ನೇರವಾಗಿ ಇಂಗ್ಲಿಷ್ ಸಾಹಿತ್ಯದಿಂದಲೇ ಬಂದಿದ್ದು. ಕನ್ನಡ ಸಾಹಿತ್ಯಕ್ಕೆ ಇದು ಸಂಕ್ರಮಣ ಕಾಲ. ಇಂಗ್ಲಿಷ್‌ನಂತಹ ಹೊರಗಿನ ಭಾಷೆ ಮತ್ತು ಸಂಸ್ಕೃತಿಯ ಸಂಪರ್ಕದಿಂದ ಹೊಸಗಾಳಿ ಬೀಸಲಾರಂಭಿಸಿತು. ಸಾಹಿತ್ಯದಲ್ಲಿ ಸಾಮಾನ್ಯ ಅನುಭವ ದಾಖಲಾದದ್ದು ಈ ಕಾಲದಲ್ಲಿಯೇ. ಗದ್ಯ ಸಾಹಿತ್ಯ ಬೆಳವಣಿಗೆ ಸಾಮಾಜಿಕ ಜಾಗೃತಿಯನ್ನೇ ಮುಖ್ಯ ಉದ್ದೇಶವಾಗಿರಿಸಿಕೊಂಡು ರೂಪುಗೊಂಡದ್ದಾಗಿದೆ. ಇದೇ ಕಾರಣಕ್ಕೆ ಭಾರತೀಯರಲ್ಲಿ ಪಾರಂಪರಿಕವಾಗಿ ಉಳಿದುಕೊಂಡು ಬಂದಿದ್ದ ನಂಬಿಕೆ, ಸಂಪ್ರದಾಯಗಳನ್ನು ಪರಿಶೀಲಿಸುವ ಪ್ರಯತ್ನಗಳು ನಡೆದವು. ಇಂಗ್ಲಿಷ್ ಪ್ರಭಾವದಿಂದ ಕೆಟ್ಟು ಹೋಗದಂತೆ ಗತಕಾಲದ ನಮ್ಮ ಪರಂಪರೆಯನ್ನು ಉಳಿಸಿಕೊಂಡು ಬರುವ ಶ್ರದ್ಧೆ ಇಲ್ಲಿ ಕಾಣುವುದು. ಮತ್ತೊಂದೆಡೆ ಸಂಸ್ಕೃತಿಯ ಹೆಸರಿನಲ್ಲಿ ಉಳಿದುಕೊಂಡು ಬಂದಿರುವ ನಂಬಿಕೆ, ಅಂಧಶ್ರದ್ಧೆ ಮತ್ತು ಕಂದಾಚಾರಗಳನ್ನು ನಿರಾಕರಿಸಿ ಹೊಸ ಮೌಲ್ಯ ಆವಿಷ್ಕಾರ ಮಾಡಿಕೊಳ್ಳುವ ಹಂಬಲ ಕಾಣಿಸತೊಡಗಿತು.

ಮೊದಲ ಹಂತದ ಸ್ವತಂತ್ರ ಕಾದಂಬರಿಗಳು ಸಾಮಾಜಿಕ ಸಮಸ್ಯೆಗಳನ್ನು ಆಧರಿಸಿ ರಚಿತವಾಗಿವೆ. ವಿಶೇಷವಾಗಿ ಸ್ತ್ರೀಪರ ಕಾಳಜಿಯ ಕಾದಂಬರಿಗಳೇ ಹೇರಳವಾಗಿವೆ. ನಂತರದಲ್ಲಿ ಕಾದಂಬರಿಯ ಸಮಾಜಶಾಸ್ತ್ರೀಯ ವಿವರಣೆ, ವಿಷಯವಸ್ತುವಿನ ಆಶಯ, ಸನ್ನಿವೇಶಗಳನ್ನು ಕುರಿತು ಅನೇಕರು ವಿಶ್ಲೇಷಣೆ ನಡೆಸಿದರು. ತಾತ್ವಿಕತೆಯ ವಿಶ್ಲೇಷಣೆ ನಡೆಯದಿರುವುದನ್ನು ಜಿ.ಎಸ್.ಅಮೂರವರು "ಕಾದಂಬರಿಯ ವಿಮರ್ಶೆ ಇದುವರೆಗೂ ತುಳಿದ ವಿವರಣೆ, ವಿಶ್ಲೇಷಣೆಗಳಾಗಿದ್ದಾಗಿದ್ದು ತಾತ್ವಿಕ ಸಮಸ್ಯೆಗಳ ಹಾಗೆ ಉಳಿದಿವೆ"[3] ಎಂಬುದು ನನ್ನ ಅಧ್ಯಯನಕ್ಕೆ ಪುಷ್ಟಿ ನೀಡಿದಂತಿದೆ. ಈ ಕಾದಂಬರಿಗಳ ವಿಶ್ಲೇಷಣೆಗಳ ಮೊದಲ ಮತ್ತು ಅಂತಿಮ ಆಸಕ್ತಿ ಎಂದರೆ ಕಾಲಘಟ್ಟಕ್ಕನುಗುಣವಾಗಿ ಅರ್ಥೈಸುವುದಾಗಿದೆ.

ಕನ್ನಡ ಕಾದಂಬರಿಯ ಸುತ್ತಲಿನ ಸಾಂಸ್ಕೃತಿಕ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು ಕಾದಂಬರಿಗಳಲ್ಲಿಯ ಸಾಮಾಜಿಕ ಸಂಘರ್ಷವನ್ನು ವಿಶ್ಲೇಷಿಸುವುದೆ ಈ ಅಧ್ಯಯನದ ಉದ್ದೇಶ. ಕನ್ನಡ ಸಾಹಿತ್ಯದ ಜಾತಿ, ವರ್ಗ, ಸ್ವರೂಪವನ್ನು ತೆರೆದಿಡುವ ಪ್ರಯತ್ನ ಈ ಕಾಲದಲ್ಲಿ ಜರುಗಿತು. ಸಾಹಿತ್ಯವನ್ನು ತಾಂತ್ರಿಕ ದೃಷ್ಟಿಯಿಂದ ಅಳೆದು-ತೂಗಿದರು. ಈ ಕಾಲಘಟ್ಟದಲ್ಲಿ ವಿಮರ್ಶೆಯ ಪರಿಕಲ್ಪನೆ ವಿಸ್ತಾರವಾಗುತ್ತಾ ಹೋಯಿತು. ಸಾಂಸ್ಕೃತಿಕ, ಸಾಮಾಜಿಕ ಸಂಘರ್ಷ ಕುರಿತು ಅಧ್ಯಯನಕ್ಕೆ ದಾರಿ ತೆರೆದುಕೊಂಡಿತು. ಕಾದಂಬರಿಯ ಸಾಂಸ್ಕೃತಿಕ ರೂಪ (Culture form) ಎಂದು ಪರಿಗಣಿಸಿಕೊಂಡಿದೆ

ಈ ಸಂಸ್ಕೃತಿಯ ರೂಪಗಳು ಒಂದು ಕಾಲಘಟ್ಟದ ಸನ್ನಿವೇಶದಲ್ಲಿ ಉತ್ಪಾದಿತವಾಗಿ ಅವು ಮರಳಿ ತಮ್ಮ ಕಾಲದ ಸಂಸ್ಕೃತಿಯನ್ನು ಮುರಿದು ಕಟ್ಟುವವು.

ಮುಂದೆ ಕಾದಂಬರಿ ಸ್ವರೂಪ ಬರಹದಲ್ಲಿ ಜಿ.ಎಸ್.ಅಮೂರವರ ಅಭಿಪ್ರಾಯದಂತೆ "ಕಾದಂಬರಿಯ ಸ್ವರೂಪದ ಚರ್ಚೆಯನ್ನು ಕಲ್ಪನೆ(Function) ಹಾಗೂ 'ಕಾದಂಬರಿ'(Novel) ಇವುಗಳ ನಡುವಿನ ಅಂತರವನ್ನು ಗಮನಿಸುವುದರೊಡನೆ ಪ್ರಾರಂಭಿಸಬಹುದೆಂದು ತೋರುತ್ತದೆ."[೩] ಇಲ್ಲಿ ಕಲ್ಪನೆ, ಎಂಬುದು ಕಾದಂಬರಿ ಸ್ವರೂಪ ಸ್ಪಷ್ಟಪಡಿಸುವಂತೆ ಕಾಣುವುದು. ಕಲ್ಪನೆಯ ವಿಶಾಲತೆ ಕಾದಂಬರಿಗಳಲ್ಲಿ ವಿಸ್ತರಿಸಿಕೊಳ್ಳುತ್ತಾ ಹೋಗುವುದು. ಕಲ್ಪನೆಯು ವಿಜ್ಞಾನ, ಧರ್ಮಶಾಸ್ತ್ರ, ಪರಮಾರ್ಥ ವಿದ್ಯೆಗಳ ಉಗಮಸ್ಥಾನ ಅದಕ್ಕೆ ಕಾದಂಬರಿ ರಚನೆಯು ಇಲ್ಲಿ ಮಹತ್ವ ಪಡೆದುಕೊಳ್ಳುವುದು.

ಕಾದಂಬರಿಯ ಸ್ವರೂಪ:

ಮೊದಲ ಘಟ್ಟದ ಕಾದಂಬರಿಗಳ ಸಾಮಾಜಿಕ ಸಂಘರ್ಷ ನೆಲೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ನಾವು ಕಾದಂಬರಿ ಎಂದರೇನು? ಎಂಬ ಪ್ರಶ್ನೆಯೊಂದಿಗೆ ಆರಂಭಿಸಬೇಕು. ಡಾ. ಡಿ.ಆರ್. ನಾಗರಾಜರವರು ಅದಕ್ಕೊಂದು ರೂಪವಿರುವುದನ್ನು ಸೂಚಿಸಿದ್ದಾರೆ. "ಕಾದಂಬರಿ ಎಂದರೇನು? ಈ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾದರೆ ಸದ್ಯಕ್ಕೆ ಪಾಶ್ಚಿಮಾತ್ಯರ ವಿಮರ್ಶೆಯ ಮೊರೆ ಹೋಗಲೇಬೇಕಾಗಿದೆ. ಸದ್ಯಕ್ಕೆ ಆ ಮಾನದಂಡಗಳಿಂದ ಕನ್ನಡ ಕಾದಂಬರಿಯ ಉಗಮವನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದರೆ ಕನ್ನಡದ ಸಂದರ್ಭದಲ್ಲಿ ಪಾಶ್ಚಿಮಾತ್ಯ ಪ್ರಕಾರವೊಂದು ಪಡೆದುಕೊಳ್ಳುವ ವಿಶಿಷ್ಟ ರೂಪ ಕೂಡಾ ಜಿಜ್ಞಿಕೊಳ್ಳಲು ಪ್ರಾರಂಭವಾಗುತ್ತದೆ. ನಮ್ಮ ಬಹುಮಟ್ಟಿನ ವಿಮರ್ಶಾ ಸಂವೇದನೆಯಲ್ಲಿ ತುಂಬಿರುವ ಒಂದು ಬಗೆಯ ತಾತ್ವಿಕ ಮುಗ್ದತೆಯಿಂದ ಬಿಡಿಸಿಕೊಳ್ಳುವ ಕ್ರಮ ಕೂಡಾ ಹೌದು. ನಮ್ಮ ಪ್ರಜ್ಞಾಪೂರ್ವಕ ಗ್ರಹಿತಗಳ ಕಡೆಗೆ ನಿರ್ದಿಷ್ಟ ಗಮನಕೊಟ್ಟರೆ ನಮ್ಮ ವೈಚಾರಿಕ ಬಿಡುಗಡೆ ಕೂಡಾ ಪ್ರಾರಂಭವಾಗುತ್ತದೆ. ಕನ್ನಡ ವಿಮರ್ಶೆ ತನ್ನ ಸಂಸ್ಕೃತಿ ವಿಶಿಷ್ಟ ಪರಿಕಲ್ಪನೆಯನ್ನು ರೂಢಿಸಿಕೊಳ್ಳುವ ಮಹಾನ್ ಪ್ರಯತ್ನದ ಅನಿವಾರ್ಯ ಅಂಗ ಇದು".[೪] ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರ ಈಚಿನದು. ಈ ಬಗ್ಗೆ ಸುದೀರ್ಘ ಚರ್ಚೆ ಇಲ್ಲ. "ಭಾರತೀಯ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ಕಾದಂಬರಿ ಪ್ರಕಾರ ಸ್ವಲ್ಪ ತಡವಾಗಿಯೇ ಪಾದಾರ್ಪಣೆ ಮಾಡಿದೆ. ಆದರೆ ಜನಪ್ರಿಯತೆಯಲ್ಲಿ ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಮೀರಿಸಿ ಜನಪ್ರಿಯ ಮಾಧ್ಯಮವಾಗಿ ಬೆಳೆದಿದೆ. ಮಧ್ಯಮವರ್ಗದ ಜೀವಾನುಭವವೇ ಕಾದಂಬರಿಯ ಮುಖ್ಯ ವಿಷಯವಸ್ತುವಾಗಿರುವುದು ಜನಪ್ರಿಯತೆಯ ಮೂಲಮಂತ್ರ"[೫] ಎಂಬ ಅಭಿಪ್ರಾಯ ಕಾಣುವುದು.

ಶ್ರೀ ಡಿ.ಎಚ್.ಲಾರೆನ್ಸ್ ಹೇಳುವಂತೆ "The novel is the one bright book of life"[1] ಕಾದಂಬರಿಯು ಜೀವನದ ಥಳಥಳಿಸುವ ಗ್ರಂಥ ಆಗಿದೆ. ಕ್ರಿ.ಶ. ಹತ್ತೊಂಭತ್ತನೆಯ ಶತಮಾನದಲ್ಲಿ ಕಾಲಿಟ್ಟ ಈ ಕಾದಂಬರಿ ಕೇವಲ ಹೊಸ ಪ್ರಕಾರವಾಗಿರದೆ ವಿನೂತನ ಪ್ರಯೋಗವಾಗಿ ಜನಪ್ರಿಯವಾಗಿದೆ. ಇಂಗ್ಲಿಷ್ ಸಾಹಿತ್ಯ ಭಾರತದಲ್ಲಿ ಮೊದಲು ಹೆಜ್ಜೆ ಇರಿಸಿದ್ದು ಬೆಂಗಾಲಿ ಮತ್ತು ಮರಾಠಿ ಸಾಹಿತ್ಯದಲ್ಲಿ. ನಂತರ ಅನುವಾದ ಕಾರ್ಯ ಚುರುಕಾಗಿಯೇ ನಡೆದು ಕನ್ನಡದಲ್ಲೂ 'ನಾವೆಲ್' ಎಂಬುದು ಕಾಣಿಸಿಕೊಂಡಿತು. "ಕನ್ನಡದಲ್ಲಿ ೧೮೯೨ರಲ್ಲಿ ಪ್ರಕಟವಾದ ಲಕ್ಷ್ಮಣ ಭೀಮರಾವ ಗದಗಕರ 'ಸೂರ್ಯಕಾಂತ'ದಲ್ಲಿ ಮೊದಲಬಾರಿಗೆ 'ಕಾದಂಬರಿ' ಎಂಬ ಪದವು ಸಾಹಿತ್ಯ ಪ್ರಕಾರದ ಸೂಚಕಪದವಾಗಿ ಬಳಕೆಯಾದದ್ದು ಗೊತ್ತಾಗುತ್ತದೆ.[2] ಕಾದಂಬರಿ ಎಂದು ಕರೆದು ದಾಖಲಿಸಿದವರಲ್ಲಿ ಗದಗಕರ ಮೊಟ್ಟ ಮೊದಲಿಗರು.

ಸೂರ್ಯಕಾಂತ ಕಾದಂಬರಿಯ ಪೀಠಿಕಾ ಭಾಗದಲ್ಲಿ 'ಜನರಲ್ಲಿ ಓದುವ ಅಭಿರುಚಿ ಹುಟ್ಟದ ಹೊರತು ಯಾವ ಭಾಷೆಯೂ ಉತ್ತಮ ಸ್ಥಿತಿಯಲ್ಲಿ ಇರಲಾರದು. ಇಂತಹ ಅಭಿರುಚಿ ಹುಟ್ಟಬೇಕಾದರೆ ಕಾದಂಬರಿ ಇತಿಹಾಸ, ನಾಟಕ ಮುಂತಾದ ಪುಸ್ತಕ ಸಾಮಗ್ರಿಯೂ ಅವಶ್ಯವಾಗಿ ಬೇಕಾಗುತ್ತದೆ. .... ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ನಿವಾರಿಸಬೇಕೆಂದು ಆಶೆಯುಳ್ಳವನಾಗಿ ಈ ಚಿಕ್ಕ ಕಾದಂಬರಿ ಬರೆದಿದ್ದೇನೆ"[3] ಅಲ್ಲಿ ಕಾದಂಬರಿ ಕುರಿತು ಪ್ರಾರಂಭ ಹಂತದ ನಿಲುವು ಪ್ರಕಟವಾಗಿದೆ. ಅಲ್ಲಿ ಕಾದಂಬರಿಯ ಗುರಿ ಮನರಂಜನೆ, ಸೌಂದರ್ಯಾನುಭವವಾಗಿದೆ.

ಕಾದಂಬರಿಯು ಅನುಭವದ ಪರೀಧಿಯನ್ನು ವಿಸ್ತರಿಸುವುದು. ವಾಸ್ತವ ಸ್ಥಿತಿ ಗುರುತಿಸುವ ಶಕ್ತಿಯೂ ಆದಕ್ಕಿದೆ. ಜಗತ್ತಿನ ಪ್ರತಿಯೊಂದು ವಿಷಯಗಳ ಒಳಗೊಂಡ ಜನಕ್ಕೆ ಸ್ಪಂದಿಸುವ ಕಾದಂಬರಿ ಜನಪ್ರಿಯ ಪ್ರಭಾವಶಾಲಿ ಮಾಧ್ಯಮವಾಗಿ ಬೆಳೆಯಿತು.

ರಾಗಂ(ರಾಜಶೇಖರ ಮಠಪತಿ)ಯವರು 'ಕಾದಂಬರಿಯೆಂಬ ರೂಪ(Form) ಇಂಗ್ಲಿಷರ ವ್ಯಾಪಾರದೊಂದಿಗೆ ಕೈಗಾರಿಕೀಕರಣ, ಪತ್ರಿಕೋದ್ಯಮದ ಮೂಲಕ ಭಾರತೀಯ ಸಾಹಿತ್ಯದ ಸರಕಾಗಿದೆ. ಇದು ಮೊದಲು ನಾಯಿಕರ ಜೀವನ ಕಥೆ ವಿವರಿಸುವುದಾಗಿತ್ತು. ಕಂತುಗಳ ರೂಪದಲ್ಲಿ ಮೂಡಿ ಬರುತ್ತಿತ್ತು. ನಂತರ ಧಾರಾವಾಹಿ ರೂಪ ಪಡೆದುಕೊಂಡಿತು. ಸ್ತ್ರೀಕುಲದ ಮನಸ್ಸು ಸೆಳೆದುಕೊಂಡಿತು. ಮೊದಲು ಮಹಿಳಾ ವರ್ಗದ ಕಾದಂಬರಿಗಳು ಮೂಡಿ ಬಂದವು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಹೋರಾಟ, ವಿಘಟನೆಗಳು, ಜನಾಂಗೀಯ ಕಲಹಗಳು ಪ್ರಾರಂಭದ ಕಾದಂಬರಿಗಳ ವಿಷಯ ವಸ್ತುಗಳಾದವು. ಕನ್ನಡದಲ್ಲಿ ಕಾದಂಬರಿ ಪ್ರ್ಯಾಕ್ಟಿಸ್ ಪ್ರಕಾರವಾಯಿತು. ಆದ್ದರಿಂದ ಮನುಷ್ಯನ ಆಲೋಚನೆ ಬದಲಾಯಿಸುವ ಕಾದಂಬರಿ ಆ ಕಾಲದಲ್ಲಿ ಹೇರಳವಾಗಿ ಬರಲಿಲ್ಲ. ಮೂರು ಸ್ವರೂಪದಲ್ಲಿ ಕಥನ, ವರ್ಣನೆ ಪ್ರಚಾರಕ್ಕೆ ಒತ್ತು ಕೊಟ್ಟಂತೆ ಕಾಣುವುದು"[4] ಸಾಮಾನ್ಯರಿಗೆ ತಿಳಿದಿರುವಂತೆ ಇದು ಯಥಾರ್ಥತೆಯ ತಳಹದಿಯ

ಮೇಲೆ ನಿರ್ಮಿಸಲ್ಪಟ್ಟ ಪ್ರಕಾರ. ಇ.ಎಂ. ಫಾರ್‌ಸ್ಟರ್ ಹೇಳುವಂತೆ "We get from the novel.... a reality of a kind we can never get in daily life"[೧೦] ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಂದುವರೆದು "Fiction is truer than History because it goes beyond the evidence and each of us knows from his experience that there is some their beyond the evidence."[೧೧] ಈ ರೀತಿಯಾಗಿ ಕಾದಂಬರಿ ಎನ್ನುವುದು ನಿಜ ಜೀವನಕ್ಕಿಂತಲೂ ಹೆಚ್ಚು ವಾಸ್ತವವಾದದ್ದು. ಜೀವನಾನುಭವದ ತಳಹದಿಯ ಮೇಲೆ ಬೆಳೆದು ಬರುತ್ತದೆ ಎಂಬುದು ಸ್ವೀಕಾರಾರ್ಹವಾದದು. ಕೀರ್ತಿನಾಥ ಕುರ್ತಕೋಟಿಯವರು "ಈ ಸಾಹಿತ್ಯ ಪ್ರಕಾರ ಒಂದು ರೀತಿಯಿಂದ ಜಾನಪದ ಸಾಹಿತ್ಯದಂತೆ ಸಾಮಾನ್ಯ ಜನರ ಆಶೋತ್ತರಗಳನ್ನು ಅಭಿರುಚಿಗಳನ್ನು ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಬಿಂಬಿಸುವ ಮಾರ್ಗವಾಗಿದೆ"[೧೨] ಇಂತಹ ವಿಶಿಷ್ಟ ಶಕ್ತಿ ಸ್ವರೂಪ ಹೊಂದಿರುವುದರಿಂದಲೇ ಕಾದಂಬರಿ ಸಾಮಾನ್ಯ ಜನರನ್ನು ಮುಟ್ಟಿತು. ಜನರನ್ನು ಎಚ್ಚರಿಸಿತು. ಸಾಹಿತ್ಯ ಲೋಕದಲ್ಲಿ ತನ್ನ ವಿಸ್ತಾರ ಹೆಚ್ಚಿಸಿಕೊಂಡಿತು. ಸಮಕಾಲೀನ ಜೀವನಕ್ಕೆ ತೀರಾ ಹತ್ತಿರವಾದ ಜೀವಂತ ರೂಪ ಪಡೆಯಿತು. ಕಾದಂಬರಿ ಉಗಮವನ್ನು ಶ್ರೀನಿವಾಸ ಹಾವನೂರವರು "೧೮೧೦ರಿಂದ ೧೮೪೦ರ ವರೆಗೆ ಕಾದಂಬರಿ ನಸುಕಿನ ಕಾಲ, ೧೮೪೧ ರಿಂದ ೧೮೮೦ರವರೆಗೆ ಮುಂಬೆಳಕಿನ ಕಾಲ, ೧೮೮೦ ರಿಂದ ೧೮೯೯ರ ವರೆಗೆ ಹೊಂಬೆಳಕಿನ ಕಾಲ"[೧೩] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜಿ.ಎಸ್.ಅಮೂರವರು ಹೇಳುವಂತೆ "ಕ್ರಿ.ಶ.೧೮೭೫ ರಿಂದ ೧೯೩೦ರ ವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉಗಮಕಾಲವೆಂದು ಗುರುತಿಸಲಾಗಿದೆ. ಈ ಘಟನೆಯ ಹಿಂದಿನ ಮುಖ್ಯ ಪ್ರೇರಣೆ ಇಂಗ್ಲಿಷ್ ಶಿಕ್ಷಣದಿಂದ ನೇರವಾಗಿ ಬಂಗಾಲಿ ಮತ್ತು ಮರಾಠಿಯಂತಹ ಭಾರತೀಯ ಭಾಷೆಗಳಿಂದ ಸುತ್ತಾಗಿ ಹರಿದು ಬಂದ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೆಂಬುದು ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಸಲ ದಾಖಲಾದ ಮಾತು."[೧೪] ಇದು ಇಡೀ ಭಾರತೀಯ ಆಯಾ ಸಾಹಿತ್ಯ ಚರಿತ್ರೆ ಅವಲೋಕಿಸಿದಾಗ ಇಂಗ್ಲಿಷ್ ಸಾಹಿತ್ಯದಿಂದ ಬೆಳೆದು ಬಂದದ್ದಾಗಿ ತಿಳಿಯುವುದು. ಇಂತಹ ಆಧಾರಗಳಿಂದಾಗಿಯೆ ಕೊರಟ ಶ್ರೀನಿವಾಸರವರು "ಕಾದಂಬರಿ ಕನ್ನಡದ ಹೆಣ್ಣಲ್ಲ ಕಡಲಾಚೆಯ ಕನ್ನೆ"[೧೫] ಎಂದು ಹೇಳಿರುವುದು ಔಚಿತ್ಯಪೂರ್ಣವಾದದ್ದು. ಹೀಗಾಗಿ ಕಾದಂಬರಿಯ ಉಗಮ ಎಲ್ಲಾಯಿತು? ಹೇಗಾಯಿತು? ಎಂಬ ಪ್ರಶ್ನೆ ಸಹಜವಾಗಿಯೇ ಏಳುವುದು. ವಿದ್ವಾಂಸರು ಹೇಳುವಂತೆ ಕಾದಂಬರಿ ಯುರೋಪಿನಲ್ಲಿ ಜನಿಸಿರುವುದು ನಿಜ. ಕೈಗಾರಿಕಾ ಕ್ರಾಂತಿಯ ಫಲವಾಗಿ, ಜಮೀನ್ದಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯೆಡೆಗೆ ಚಲಿಸುವ ಕಾದಂಬರಿಯ ಲೋಪ-ದೋಷ ಚರ್ಚಿಗೊಂಡಿವೆ.

ಕನ್ನಡದ ವಿಮರ್ಶಕರಲ್ಲಿ ಒಬ್ಬರಾದ ಡಿ.ಆರ್. ನಾಗರಾಜರವರು ಕಾದಂಬರಿಯ ಉಗಮ ಕುರಿತು ಹೀಗೆ ಹೇಳಿದ್ದಾರೆ "ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಶಿಯ ಸಂಸ್ಕೃತಿಗಳ ನಡುವಿನ ಮುಖಾಮುಖಿಯಲ್ಲಿ ಕಾದಂಬರಿ ಹುಟ್ಟುತ್ತದೆ. ದೇಶಿಯ ಮಧ್ಯಮ ವರ್ಗ ರೂಪುಗೊಂಡು ತನಗೊಂದು ಆಧುನಿಕ ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವಾಗ ಉಂಟಾಗುವ ದ್ವಂದ್ವದಲ್ಲಿ ಕಾದಂಬರಿ ಹುಟ್ಟುತ್ತದೆ"[೧೬] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿವರಾಮ ಪಡಿಕ್ಕಲ್ "ತನ್ನ ಸಾಮಾಜಿಕ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಧ್ಯಮವರ್ಗ ಪ್ರಾದೇಶಿಕ ಮತ್ತು ರಾಷ್ಟ್ರೀಯ ಅನನ್ಯತೆಗಳೆರಡನ್ನು ಪಡೆಯಲು ಪ್ರಯತ್ನಿಸುತ್ತಿತ್ತು ಮತ್ತು ಒಂದು ಕ್ರಿಯೆಯಲ್ಲಿಯೇ ಕಾದಂಬರಿ ಉದಯವಾಯಿತು. ಅತ್ಯಂತ ಕ್ಷಿಪ್ರವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ತನ್ನ ಸ್ಥಾನ ಹಾಗೂ ಕಾರ್ಯಗಳನ್ನು ಗುರುತಿಸಿಕೊಳ್ಳಲು ಮಧ್ಯಮ ವರ್ಗದಿಂದ ವಿಶಿಷ್ಟ ಕಥನ ಪ್ರಭೇದವು ರೂಪಿಸಲ್ಪಟ್ಟಿತು"[೧೭] ಡಿ.ಆರ್. ನಾಗರಾಜ ಹಾಗೂ ಪಡಿಕಲ್‌ರ ಅಭಿಪ್ರಾಯ ಒಪ್ಪಿಕೊಳ್ಳುವಂತೆ ಆಗಿವೆ.

ಕನ್ನಡ ಕಾದಂಬರಿಯ ಉಗಮ ಮತ್ತು ವಿಕಾಸ ಕುರಿತು ಹಲವರಲ್ಲಿ ವಾದ-ಪ್ರತಿವಾದಗಳಿವೆ. ಕಾದಂಬರಿ ಭಾರತೀಯರಿಗೆ ಹೊಸದಲ್ಲ. 'ನಾವೆಲ್' ಎಂಬ ಹೆಸರು ಬರುವ ಪೂರ್ವದಲ್ಲಿಯೇ ಕಾದಂಬರಿಯ ರೂಪು ಕನ್ನಡದಲ್ಲಿತ್ತು. ಪಾಶ್ಚಿಮಾತ್ಯರಿಂದ ಸ್ವೀಕರಿಸಲಾಯಿತೆಂದು ಹೇಳಲಾಗದು. 'ತಂತ್ರ' ಮಾತ್ರ ಹೊಸದು.

೧೯ನೇ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯ ಪ್ರಭಾವದಿಂದ 'ನಾವೆಲ್' ಎಂಬ ಪ್ರಕಾರವು 'ಕಾದಂಬರಿ' ಎಂಬ ಹೆಸರಿನಿಂದ ಪ್ರಚಾರವಾಯಿತು."[೧೮] ಎಂಬರ್ಥದಲ್ಲಿ ಬಳಕೆಯಾಗಿದೆ. ಇದನ್ನು ಪೂರ್ತಿಯಾಗಿ ಒಪ್ಪುವುದು ಕಷ್ಟ. ಕನ್ನಡದಲ್ಲಿ 'ಕಾದಂಬರಿ' ಎಂಬ ಪದ ವ್ಯಾಪಕವಾಗಿ ಬಳಕೆಯಲ್ಲಿ ಕಾಣುವುದು ೧೯೦೦ರಿಂದ ಈಚೆಗಷ್ಟೆ. ಕಾದಂಬರಿಯಂತಹ ರಚನೆಗಳು ಪ್ರಾರಂಭವಾಗಿವೆ. ೧೯ನೇ ಶತಮಾನದ ಪೂರ್ವಾರ್ಧದಲ್ಲಿಯೇ ಬಂದಿವೆ."[೧೯] ಇದು ಸಾಮಾಜಿಕ ಕಾಳಜಿಗೆ ಪೂರಕವಾಗಿ ಬಂದಂತೆ ಕಾಣುವುದು. ಸಮಾಜದ ಸಮಸ್ಯೆಗಳ ಹೂರಣ ತುಂಬಿಕೊಂಡ ಕೃತಿಗಳು ಇಲ್ಲಿವೆ.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಎಂಬ ಹೆಸರು ಬಂದಿದ್ದು ಬಾಣ ಕವಿಯ ಸಂಸ್ಕೃತ ಕಾದಂಬರಿ ಹೆಸರಿನಿಂದ. ಕೃತಿಯಲ್ಲಿ ನಾಯಕಿಯ ಹೆಸರೆ ಕಾದಂಬರಿ. ಕನ್ನಡದಲ್ಲಿ ಇಂಗ್ಲಿಷ್ 'ನಾವೆಲ್' ಗೆ ಸಮನಾಗಿ ಕಾದಂಬರಿ ಎಂದು ಕರೆಯಲಾಗಿದೆ. ಇದನ್ನು ಕಥನದಂತೆ ಗೋವಿಂದ ಪೈ ಯವರು "ಕ್ರಿ.ಶ.೬-೭ನೇ ಶತಮಾನದಲ್ಲಿ ಆಗಿಹೋದ ಬಾಣಭಟ್ಟನೆಂಬುವವನು ಸಂಸ್ಕೃತದಲ್ಲಿ ರಚಿಸಿದ 'ಕಾದಂಬರಿ ಎಂಬ ಹೆಸರಿದೆ. ಕಾದಂಬರಿ ಪ್ರಾಯಶಃ ಸಂಸ್ಕೃತದಲ್ಲಿನ ಮೊಟ್ಟಮೊದಲಿನ ಕಾದಂಬರಿಯಂತೆ. ಆ

ಕಾರಣದಿಂದಲೆ ಆ ಬಳಿಕ ನಮ್ಮ ಭಾರತ ಭೂಮಿಯಲ್ಲಿ ಬರೆಯಲ್ಪಟ್ಟ ಕಾದಂಬರಿಗಳಿಗೆಲ್ಲ 'ಕಾದಂಬರಿ' ಎಂದು ಹೆಸರಿಸಲಾಯಿತು"[೨೦] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು, ಕಾದಂಬರಿ ಒಂದು ರೂಪ, ಬೆಳವಣಿಗೆ ಹೊಂದಿದ್ದು ಮುಂದೆ ಅದೇ ಹೆಸರು ಕೃತಿಗೆ ಮೂಡಿ ಬಂದಿತು.

ಕನ್ನಡ ಕಾದಂಬರಿಕಾರರು ಹಾಗೂ ವಿಮರ್ಶಕರು ಗುರುತಿಸಿದ ರೀತಿಯೆ ಬೇರೆ. ಬಿ. ವೆಂಕಟಾಚಾರ್ಯರು ಬಂಗಾಲಿಯಿಂದ ಅನುವಾದಿಸಿದ "ದುರ್ಗೇಶನಂದಿನಿ" ಮುನ್ನುಡಿಯಲ್ಲಿ'A naval in the sense in which it is understood in English is not familiar to the canaries speaking public" ಎಂದಿದ್ದು ಸಿ.ಎನ್. ರಾಮಚಂದ್ರನ್‌ರವರು "ಬಂಕಿಮಚಂದ್ರರ 'ದುರ್ಗೇಶ ನಂದಿನಿ' ಪ್ರಣಯ ಸಾಹಸಗಳ ರೋಚಕ ಕಥೆಯಾದರೆ ವೆಂಕಟಾಚಾರ್ಯರು 'ಇಂಗ್ಲಿಷ್ ನಾವೆಲ್' ನಲ್ಲಿ ಏನನ್ನು ಕಂಡರು? ವಾಸ್ತವತೆಯಂತೂ ಅಲ್ಲ"[೨೧] ಎಂಬ ವಾದ ಸರಿಯೆಂಬಂತೆ ಕಾಣುವುದು. ಇದಕ್ಕೆ ಪೂರಕವಾಗಿ ಶ್ರೀನಿವಾಸ ಹಾವನೂರರು ಹೇಳುವಂತೆ "ಸ್ವಾತಂತ್ರ್ಯವೆನ್ನಬಹುದಾದ 'ಕಲಾವತಿ ಪರಿಣಯ' ಮತ್ತು 'ಸೌಗಂಧಿಕ ಪರಿಣಯ'ಗಳು ಕಾದಂಬರಿ ಎಂಬ ನೂತನ ಸಾಹಿತ್ಯ ರೂಪವನ್ನು ಗಮನಿಸಿ ರಚಿತವಾದವುಗಳಲ್ಲ."[೨೨] ಅವರೆ ಮತ್ತೊಂದೆಡೆ ಹೇಳುವಂತೆ 'ಕಲಾವತಿ ಪರಿಣಯ' (೧೮೮೫) ಕನ್ನಡದ ಆದ್ಯ ಕಾದಂಬರಿ ಮಾದರಿಯಂತಿದ್ದರೂ ಅದರಲ್ಲಿ ಕಾದಂಬರಿಯ ಪದ ಬಳಕೆ ಇಲ್ಲ. ಆದರೆ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರಕ್ಕೆ ಆರಂಭದಲ್ಲಿ 'ವಚನ ಪ್ರಬಂಧ' ಎಂದು ಕರೆಯುತ್ತಿದ್ದರೆಂಬ ಹೆಸರನ್ನು ಮಾತ್ರ ನೋಡಬಹುದು*. ಕಲಾವತಿ ಪರಿಣಯವೆಂಬ ಈ ವಚನ ಪ್ರಬಂಧದ ಮನ್ನಾರು ಬರದೊದಿ ಕೇಳುತ ಅಭ್ಯಾಸಗೈವರೋ(ಯಾದವ-ಕಲಾವತಿ ಪರಿಣಯ) ಕಾದಂಬರಿ ಕುರಿತು ಗಮನಿಸಬಹುದಾದ ಸಂಗತಿ. ಎಂದರೆ ಕನ್ನಡಕ್ಕಿಂತ ಪೂರ್ವದಲ್ಲಿ ಮರಾಠಿ ಭಾಷೆಗಳಲ್ಲಿ 'ಕಾದಂಬರಿ' ಎಂಬ ಸಾಹಿತ್ಯ ಪ್ರಕಾರ ಬಳಕೆಯಲ್ಲಿತ್ತು. ಕ್ರಿ.ಶ. ೧೮೭೭ರಲ್ಲಿಯೇ ಮುಂಬೈ ಸರಕಾರ ಪ್ರಕಟಿಸಿದ ಮರಾಠಿ ಭಾಷಾ ಕೋಶದಲ್ಲಿ ಕಾದಂಬರಿಗೆ 'ಕಲ್ಪಿತ ಕತೆ' ಎಂಬರ್ಥವಿದೆ. ಇದಿಷ್ಟಲ್ಲದೆ ಚಂದಿಕಾ ಎಂಬ ಪತ್ರಿಕೆಯಲ್ಲಿ ೧೮೫೪ರ ಅಕ್ಟೋಬರ್ ಸಂಚಿಕೆಯಿಂದ 'ನೀತಿಪರ ಕಾದಂಬರಿ' ಎಂಬ ಹೆಸರಿನಿಂದ ಧಾರಾವಾಹಿ ಪ್ರಕಟವಾಗಿದ್ದಿವೆ.

'ಕ್ರಿ.ಶ.೧೮೯೬ರಲ್ಲಿಯೇ ಪ್ರಕಟವಾದ ಮರಾಠಿಯ 'ವಿಚಿತ್ರಪುರಿ' ಎಂಬ ಕೃತಿಯಲ್ಲಿ 'ಕಾದಂಬರಿ' ಎಂಬ ಹೆಸರಿದೆ.[೨೩] ಲಕ್ಷ್ಮಣ ಭೀಮರಾವ ಗದಗಕರವರ ಕೃತಿ 'ಚಂದ್ರಪ್ರಭಾ' (೧೮೯೬) 'ಹೊಸ ಕಾದಂಬರಿ' ಎಂಬ ಪದ ಪ್ರಯೋಗವಿದೆ ಎಂಬುದು ತಿಳಿದು ಬರುವುದು.[೨೪] ಲಕ್ಷ್ಮಣ ಭೀಮರಾವ್ ಗದಗಕರವರ ಮೇಲೆ ಮರಾಠಿ ಸಾಹಿತ್ಯದ ಪ್ರಭಾವ ಇದ್ದಂತೆ ತೋರುತ್ತದೆ. ಕಾದಂಬರಿ ಕುರಿತಾಗಿ 'ಸೂರ್ಯಕಾಂತ' ಪೀಠಿಕೆಯಲ್ಲಿ ಜನರಲ್ಲಿ ಓದುವ ಅಭಿರುಚಿ ಹುಟ್ಟದ ಹೊರತು ಯಾವ ಭಾಷೆಯೂ ಉತ್ತಮ ಕೃತಿಯಲ್ಲಿ ಓದಲಾರದು. ಇಂತಹ ಅಭಿರುಚಿ ಹುಟ್ಟಬೇಕಾದರೆ ಕಾದಂಬರಿ, ಇತಿಹಾಸ-ನಾಟಕ

ಮುಂತಾದ ಸಾಮಗ್ರಿಯೂ ಅವಶ್ಯವಾಗಿ ಬೇಕಾಗುತ್ತದೆ. ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ನಿವಾರಿಸಬೇಕೆಂಬ ಆಶೆಯುಳ್ಳವನಾಗಿ ಈ ಚಿಕ್ಕದಾದ ಕಾದಂಬರಿ ಬರೆದಿದ್ದೇನೆ.[೨೫] ಎಂದು ಹೇಳಿದ ಮಾತಿನಿಂದ ಕಾದಂಬರಿ ಬಾಗಿಲು ತೆರೆಯುತ್ತಿರುವ ಸಂಗತಿ ತಿಳಿಯುವುದು ಎಂಬುದನ್ನು ಭರಣ್ಯ ಹರಿಕೃಷ್ಣ ಅವರು ಗುರುತಿಸಿದ್ದಾರೆ. ಒಟ್ಟಾರೆಯಾಗಿ 'ಕಾದಂಬರಿ' ಎಂಬ ಪದವನ್ನು ಮೊದಲು ಪರಿಚಯಿಸಿದವರು ಲಕ್ಷ್ಮಣ ಭೀಮರಾವ್ ಗದಗಕರರವರಾದರೂ ಗಳಗನಾಥರ ಶ್ರಮದ ಫಲವಾಗಿ 'ಕಾದಂಬರಿ' ಎಂಬ ಪದ ಉತ್ತರ ಕರ್ನಾಟಕದೆಲ್ಲೆಡೆ ಜನ ಬಳಕೆಯಾಗಿ ನಂತರದ ದಿನಗಳಲ್ಲಿ ಕರ್ನಾಟಕದಾದ್ಯಂತ ಪ್ರಚಾರವನ್ನು ಪಡೆದುಕೊಂಡು ಇಂದು ಸುಭದ್ರ ನೆಲೆ ಕಂಡುಕೊಂಡಿದೆ. ಹೀಗೆ ಕಾದಂಬರಿ ಸಾಹಿತ್ಯದ ಮೂಲಕ ಸಾಮಾಜಿಕ ವಿಷಯಗಳಿಗೆ ಮುಖಾಮುಖಿಯಾಗಿದೆ.

ಕಾದಂಬರಿ ಮತ್ತು ಸಮಾಜದ ನಡುವೆ ಸಂಬಂಧವಿದೆ. ಪ್ರತಿಫಲನಾತ್ಮಕ ಸಂಬಂಧವು ಕಾಣುವುದು. ಇದು ವಿಮರ್ಶೆಯ ನಿಲುವು ಆಗಿರಬಹುದು. ಸಮಾಜ ಅವುಗಳ ಪರಸ್ಪರ ಸಂಬಂಧದ ಪೂರ್ಣ ಒಳನೋಟ ಕೊಡಬಹುದು ಕೊಡದೆ ಇರಬಹುದು. ಇಲ್ಲಿ ಅಂಶಿಕವಾಗಿ ಕೆಲವು ಅಂಶಗಳನ್ನು ಸೂಚಿಸಬಹುದು. ಕಾದಂಬರಿಕಾರರನ್ನು ಸುತ್ತುವರಿದ ವಾಸ್ತವಿಕ ವಿವರಗಳು ಅವ್ಯವಸ್ಥಿತ, ಅಸಂಘಟಿತವಾಗಿರುವವು. ಈ ಸಂಗತಿಗಳು ಲೇಖಕರನ್ನು ಕೃತಿರಚನೆಯಲ್ಲಿ ತೊಡಗಿಸಿಕೊಳ್ಳಲು ಪ್ರಚೋದಿಸುತ್ತವೆ. ಆ ವಿವರಗಳನ್ನು ಸಂಗ್ರಹಿಸಿ ಜ್ಞಾನ ಸಿಂಧು ಕಟ್ಟುವನು. ಸಾಂಸ್ಕೃತಿಕ ಕೇಂದ್ರಗಳಿಂದ ತಮಗೆ ಬೇಕಾದುದನ್ನು ಪಡೆದು ವಿನ್ಯಾಸವನ್ನು ಕೊಡಲೆತ್ನಿಸುವ ಲೇಖಕರು ಬಳಸಿದ ವಿವರಗಳಿಗೆ ತಮ್ಮತನದ ಅಸ್ತಿತ್ವದ ಅರಿವು ಇರಲಾರದು. ಸಾಮಾಜಿಕ ಸಮಸ್ಯೆಗಳನ್ನು ಜೊತೆಗೆ ವಿವರವನ್ನು ಚಾರಿತ್ರಿಕ ಫಲವೆಂದು, ಆ ಬೆಳವಣಿಗೆಯಲ್ಲಿ ಸಮಾಜದ ರಚನೆಯಲ್ಲಿಯೇ ಆಗುವ ಬದಲಾವಣೆಗಳಿಗೆ ಹಲವಾರು ಸಂಗತಿಗಳು ಪೂರಕವಾಗಿ ಮೂಡಿಬರುವವು. ಅಂತೆಯೇ ಬರಹಗಾರ ಪ್ರತಿನಿಧಿಸುವ ಸಾಮಾಜಿಕ ಸಮುದಾಯಗಳ ಆಲೋಚನಾ ಕ್ರಮದೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡಿರುವದು. ಅಂತಹ ಆಲೋಚನಾ ಕ್ರಮಗಳನ್ನು ಕನ್ನಡ ಕಾದಂಬರಿ ಸಂಬಂಧದಲ್ಲಿ ಖಚಿತಪಡಿಸಿಕೊಳ್ಳಬಹುದು. ೧೯ನೇ ಶತಮಾನದ ಅವಸ್ಥಾಂತರಗಳು ರಾಜಕೀಯವಾಗಿ ಸಾಮಾಜಿಕವಾಗಿ. ಸಾಂಸ್ಕೃತಿಕವಾಗಿ ಸಾಮಾಜಿಕ ರಚನೆಯಲ್ಲಿ ವ್ಯತ್ಯಾಸಗಳನ್ನು ಉಂಟುಮಾಡಿದವು. ಆ ವ್ಯತ್ಯಾಸಗಳು ಒಂದು ನಿರ್ದಿಷ್ಟ ಸಮುದಾಯ ದೊಂದಿಗೆ ಅಂತರ ಸಂಬಂಧ ಕಾಣುವವು. ೧೯ನೇ ಶತಮಾನದ ವಿದ್ಯಾವಂತ ವರ್ಗ ವೈಚಾರಿಕ ವಿನ್ಯಾಸಕ್ಕೂ ಸಮಾಜ ರಚನೆಗೂ ಅಂತರಸಂಬಂಧ ಕಲ್ಪಿಸಿದ ಕಾದಂಬರಿ ಎನ್ನುವ ಸಾಂಸ್ಕೃತಿಕ ರೂಪ (Form) ರಚನೆಗೊಂಡಿದ್ದಿರಬೇಕು.

ಕಾದಂಬರಿಯ ರೂಪ(Form) ಎಂಬ ಪರಿಕಲ್ಪನೆಯು ಸಾಮಾಜಿಕ ಸಮುದಾಯದ ಹಿನ್ನೆಲೆಯಲ್ಲಿ ಮೂಡಿಬಂದಿದೆ. ಕಾಣುವ ಸಾಮಾಜಿಕ ಸನ್ನಿವೇಶದಿಂದಲೇ ಕಾದಂಬರಿಯ ಸಂಬಂಧವನ್ನು ಆ ಕೃತಿಯ ಸಾಹಿತ್ಯ ಸ್ವಭಾವ ಎರಡನ್ನು ಗಮನದಲ್ಲಿರಿಸಿಕೊಂಡು ಕಾದಂಬರಿಯನ್ನು ಸಮಾಜ ಶಾಸ್ತ್ರೀಯ ವಿಶ್ಲೇಷಣೆ ಮಾಡಬಹುದು. ಕಾದಂಬರಿ ಕೇವಲ ವಾಸ್ತವದ ಅನುಕರಣೆ ಅಲ್ಲ. ಆದರ್ಶವು ಕಾದಂಬರಿಯಲ್ಲಿ ನೇರವಾಗಿ ಮಂಡಿತವಾಗುವುದಿಲ್ಲ. ಗ್ರಹಿಕೆಯಾಗಿ ಮೂಡಿಬರುವುದು. ವೈಚಾರಿಕತೆಯು, ಕಲಾತ್ಮಕತೆಯ ಅನುಭವವು ನೇರವಾಗಿ ಮೂಡಿಬರುವವು. ಅಂತೆಯೇ ಶಿವರಾಮ ಪಡಿಕಲ್ ಅವರು 'ಕಾದಂಬರಿಯ ಸಮಸ್ಯೆ ಇರುವುದು ನಿರೂಪಣಾ ಪ್ರಜ್ಞೆಯಲ್ಲಿ ಅಮೂರ್ತವು(Abstract), ನೈತಿಕವು (Ethical)ಆಗಿರುವ ಕಲಾತ್ಮಕ ಸತ್ವಪೂರ್ಣ ಅಂಶವನ್ನು ವಾಸ್ತವದ ಚಿತ್ರಣದ ಮೂಲಕ ಹೊಮ್ಮಿಸಬೇಕಾಗಿರುವುದು.'[೨] ಸಾಮಾಜಿಕ ರಚನೆ ಅನೇಕ ಬಗೆಯನ್ನು ಹೊಂದಿದೆ. ಸಂಬಂಧ ಮತ್ತು ನಿಲುವುಗಳು ಪೂರ್ಣಗ್ರಹಿತವಾಗಿರುವವು. ಅದೇ ಹಳೆಯ ರಚನೆಯಲ್ಲಾಗುವ ಸಂರಚನಾನಿರಸನವೆಂದು ಹೊಸ ರಚನೆಯೆಡೆಗೆ ಚಲಿಸಲೆಂದು ಮಾಡಿಕೊಳ್ಳುವ ಹೊಸ ರಚನೆಯ ನಿರ್ಮಾಣವನ್ನು ಸಂರಚನೆ ಎಂದು ಗುರುತಿಸಬಹುದು. ಕಾದಂಬರಿಯ ರಚನೆ ನಿರ್ದಿಷ್ಟ ಸನ್ನಿವೇಶ ನಿಭಾಯಿಸಲು ಮತ್ತು ಸಮತೋಲನ ಕಾಪಾಡಲು ಸಮಾಜದ ಸ್ವಪ್ರೇರಿತ ಪ್ರತಿಕ್ರಿಯೆ ಕಾಣುವುದು. ಕನ್ನಡದ ಮೊದಲ ಕಾದಂಬರಿಗಳ ಸ್ವರೂಪ, ತಾತ್ವಿಕತೆ ಮತ್ತು ಸಾಮಾಜಿಕತೆಯನ್ನು ತಿಳಿಯಲು ಕರ್ನಾಟಕ ಆಧುನಿಕತೆಯನ್ನು ವಸಾಹತುಶಾಹಿ ರಾಜಕೀಯ ಚರಿತ್ರೆಯನ್ನು ಅರಿಯಲೇಬೇಕು. ಆ ದಿನದ ರಾಷ್ಟ್ರದ ಸಮಯ ಸಂದರ್ಭಗಳ ಸಂಗತಿ, ಕನ್ನಡದ ಸಂದರ್ಭ ವಿಶ್ಲೇಷಿಸುವ ಪ್ರಯತ್ನಗಳು ಜರುಗಿವೆ. ಈ ಪ್ರಬಂಧದಲ್ಲಿ ಮೊದಲ ಘಟ್ಟದ ಕನ್ನಡ ಸ್ವಾತಂತ್ರ್ಯ ಸಾಮಾಜಿಕ ಕಾದಂಬರಿಗಳಲ್ಲಿನ ಸಂಘರ್ಷದ ನೆಲೆಗಳ ಸ್ವರೂಪವನ್ನು ತಾತ್ವಿಕ ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಕಾದಂಬರಿಗಳು ಹುಟ್ಟಿಕೊಂಡ ಚಾರಿತ್ರಿಕ ಸಂದರ್ಭ, ಕೃತಿಕಾರನ ಹಿನ್ನೆಲೆ ಮತ್ತು ಪ್ರಕಟಿಸುವ ಆಶಯ ಉದ್ದೇಶಗಳನ್ನು ಸ್ಪಷ್ಟಪಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ಉದ್ದೇಶ:

ಪ್ರಸ್ತುತ ಅಧ್ಯಯನದಲ್ಲಿ ಕನ್ನಡದ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷವನ್ನು ಕುರಿತು ಪ್ರಾತಿನಿಧಿಕ ಕೃತಿಗಳನ್ನಿಟ್ಟುಕೊಂಡು ವಿಶ್ಲೇಷಣೆ ಮಾಡುವುದೆ ಉದ್ದೇಶವಾಗಿದೆ. ಕನ್ನಡ ಕಾದಂಬರಿಗಳ ಸಾಂಸ್ಕೃತಿಕ ಸನ್ನಿವೇಶಗಳನ್ನು ಗಮನಿಸಿಕೊಂಡು ಈ ಅಧ್ಯಯನ ಹಮ್ಮಿಕೊಳ್ಳಲಾಗಿದೆ. ಈ ಕಾಲದ ಕಾದಂಬರಿಗಳ 'ಸಾಂಸ್ಕೃತಿಕ' 'ಸಾಮಾಜಿಕ' ಆಯಾಮವನ್ನು ಗ್ರಹಿಸಿಕೊಂಡು ಸಂಘರ್ಷವನ್ನು ಹೊರ ಹಾಕುವುದಾಗಿದೆ. ಆ ಕಾಲದ ಬದುಕು, ಆಲೋಚನಾಕ್ರಮ,

ಸಾಮಾನ್ಯ ತಿಳುವಳಿಕೆ, ವೈಯಕ್ತಿಕತೆಯ ಸಂಗತಿಗಳನ್ನು ಗಮನಿಸಲಾಗುವುದು. ಈ ಸಂಗತಿಗಳನ್ನು ಧರ್ಮ, ವಿದ್ಯಾಭ್ಯಾಸ, ವರ್ಗ ಸಂಘರ್ಷ, ಲಿಂಗ ಸಂಘರ್ಷ, ಕುಟುಂಬ ಪದ್ಧತಿ, ಸಮುದಾಯಿಕ ನೆಲೆಗಟ್ಟುಗಳು, ತಲೆಮಾರಿನ ನೋಟಗಳ ಮುಖಾಂತರ ಪಾರಂಪರಿಕ, ಧಾರ್ಮಿಕ ವಿಧಿಗಳನ್ನು ಇಟ್ಟುಕೊಂಡು ಗಮನಿಸಲಾಗುವುದು.

'ಕನ್ನಡ ಮೊದಲ ಘಟ್ಟದ ಕಾದಂಬರಿಗಳ ಸಾಮಾಜಿಕ ಸಂಘರ್ಷದ ಹಿನ್ನೆಲೆಯಲ್ಲಿ ಉದ್ದೇಶಗಳನ್ನು ಅಧ್ಯಯನದ ಸ್ವರೂಪಕ್ಕನುಗುಣವಾಗಿ ರೂಪಿಸಿಕೊಳ್ಳಲಾಗಿದೆ.

ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಜಮೀನ್ದಾರ, ಬಡ ರೈತ, ಶ್ರೀಮಂತರ ಅಂತರವನ್ನು ಗಮನಿಸಲಾಗುವುದು. ಲಿಂಗ ಸಂಘರ್ಷವನ್ನು ಗಮನದಲ್ಲಿರಿಸಿಕೊಂಡು ಗಂಡು ಹೆಣ್ಣಿನ ತಾರತಮ್ಯಗಳನ್ನು ಅನುಲಕ್ಷಿಸುವುದಾಗಿದೆ.

ಕೌಟುಂಬಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ವಿಭಕ್ತ–ಅವಿಭಕ್ತ ಕುಟುಂಬಗಳು, ಒಂಟಿ ಕುಟುಂಬಗಳ ಕಾರಣ ಪರಿಣಾಮಗಳನ್ನು ವಿಶ್ಲೇಷಿಸುವುದಾಗಿದೆ. ಆ ಕಾಲದ, ವೃತ್ತಿ, ಅಲೆಮಾರಿ ಜನಾಂಗ, ಚಿಕ್ಕ–ಪುಟ್ಟ ಜಾತಿ ವಿವಿಧ ವೇಷಭೂಷಣ ಕಲೆಗಳ ಆಚರಣೆ ಚರ್ಚಿಸುವುದು. ಬದಲಾದ ಸಾಮಾಜಿಕ ತಲೆಮಾರುಗಳಲ್ಲಿನ ತುಮುಲುಗಳು, ಹೊಸ ಶಿಕ್ಷಣದ ಪರಿಣಾಮ, ಅಜ್ಜ, ತಂದೆ, ಮಗ ಹಾಗೂ ಅಜ್ಜಿ, ತಾಯಿ–ಮಗಳು ಎಂಬ ಪರಿಧಿಯ ಹಿನ್ನೆಲೆಯಲ್ಲಿ ವಿಶ್ಲೇಷಣೆ.

ಆ ಕಾಲದಲ್ಲಿ ಧರ್ಮ, ಧರ್ಮಗಳ ಪ್ರಸಾರ, ಮತಾಂತರ ಮಿಷನರಿಗಳ ಪಾತ್ರ, ಪ್ರಭಾವ ಸ್ವರೂಪ ಚರ್ಚಿಸಲಾಗುವುದು. ಸಮುದಾಯಗಳ ಪ್ರಕ್ರಿಯೆಯನ್ನು ಗಮನಿಸಲಾಗುವುದು. ಅಂದಿನ ಕಾಲದ ರಾಜಕೀಯ ಸಂಗತಿಗಳಲ್ಲಿ ರಾಷ್ಟ್ರೀಯತೆ, ಭಾರತೀಯ ಕಾಂಗ್ರೆಸ್ ಸ್ಥಾಪನೆ, ಸ್ವಾತಂತ್ರ್ಯದ ಪರಿಕಲ್ಪನೆ, ಕುರಿತು ಅಧ್ಯಯನ ಕೈಗೊಳ್ಳಲಾಗುವುದು(ಪೋರ್ಚುಗೀಸ್, ಇಂಗ್ಲಿಷ್, ಸಾಮ್ರಾಜ್ಯದ ದಾಹ ಕುರಿತು).

ಪರಂಪರಾಗತ ಮತ್ತು ಆಧುನಿಕ ಶಿಕ್ಷಣ ಪದ್ಧತಿ, ಪ್ರಭಾವ ಮತ್ತು ಪರಿಣಾಮವನ್ನು ಗಮನಿಸಲಾಗುವುದು. ಮುದ್ರಣಯಂತ್ರ ಬಳಕೆ, ಪತ್ರಿಕೆಗಳ ಪ್ರವೇಶ, ಬದಲಾದ ಶಿಕ್ಷಣದ ನೆಲೆಗಟ್ಟು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಕುರಿತು ವಿಶ್ಲೇಷಿಸುವುದು.

ಅಂದಿನ ಕಾಲದ ಜಾತಿ ಭೇದ, ತಾರತಮ್ಯ ಭಾವನೆಗಳು, ಜನರ ಮೇಲೆ ಬೀರಿದ ಪರಿಣಾಮ ಮತ್ತು ಪ್ರಭಾವವನ್ನು ಕುರಿತು ಅವಲೋಕಿಸುವುದು. ಧಾರ್ಮಿಕ ಸ್ಥಿತಿಯನ್ನು ಅನ್ಯ ಧರ್ಮಗಳ ಪ್ರಭಾವವನ್ನು ಪರ್ಷಿಯನ್ ಮತ್ತು ಕ್ರೈಸ್ತ ಮತದ ಪ್ರಸಾರವನ್ನು ಕುರಿತು ವಿಶ್ಲೇಷಿಸುವುದು.

ಬಾಲ್ಯವಿವಾಹ, ಕಾರಣ ಮತ್ತು ಪರಿಣಾಮ ಕುರಿತು ಅವಲೋಕನದೊಂದಿಗೆ ವಿಶ್ಲೇಷಿಸುವುದು. ೧೯ನೇ ಶತಮಾನದಲ್ಲಿ ಜಾರಿಯಲ್ಲಿದ್ದ ಸತಿ ಪದ್ಧತಿ, ಅದರ ಲೋಪ-ದೋಷಗಳನ್ನು ಗಮನಿಸುವುದು.

ವಿಧವಾ ವಿವಾಹ ಮತ್ತು ಕಾರಣ, ವಿಧವಾ ಪುನರ್ ವಿವಾಹದ ಸಂಗತಿಯನ್ನು ಕುರಿತು ಗಮನಿಸುವುದು. ದೇವದಾಸಿ ಪದ್ಧತಿ, ಹಸಬಿ ಬಿಡುವುದು ಅವರ ನಂಜಿಕೆಗಳನ್ನು, ಕಾರಣ, ಪರಿಣಾಮಗಳನ್ನು ವಿಶ್ಲೇಷಣೆ ಮಾಡುವುದು ಸ್ತ್ರೀಯರು ಓದು-ಬರಹ ಕಲಿತು ಪುರುಷ ಸಮಾನತೆ ಸಾಧಿಸುವ ತವಕಗಳನ್ನು ಗಮನಿಸುವುದು. ಬಾಲ್ಯ ವಿವಾಹ ತಿರಸ್ಕರಿಸುವ ಅದರ ಬಗ್ಗೆ ತಿಳುವಳಿಕೆ ಜಾಗೃತಿ ಮೂಡಿಸುವುದು.

ಮಿಷನರಿಗಳ ಸ್ಥಾಪನೆ, ಧರ್ಮಪ್ರಸಾರ, ಮಿಷನರಿಗಳ ಪಾತ್ರ, ಶಿಕ್ಷಣ ಪ್ರಸಾರ, ಪ್ರಭಾವ, ಪಾತ್ರಗಳ ಸ್ವರೂಪ ಚರ್ಚಿಸುವುದು. ವಸಾಹತುಶಾಹಿ ಸಂದರ್ಭದ ಹಿನ್ನೆಲೆಯಲ್ಲಿ ಕೈಗಾರಿಕೀಕರಣ, ನಗರೀಕರಣ ಹಾಗೂ ಔದ್ಯೋಗಿಕೀಕರಣ ಸಂಗತಿಗಳನ್ನು ವಿಶ್ಲೇಷಿಸುವುದು.

ಅಧ್ಯಯನದ ವ್ಯಾಪ್ತಿ:

ಕನ್ನಡ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತಾಗಿ ಕಾದಂಬರಿಗಳು ಹೆಚ್ಚಾಗಿ ಬರದಿದ್ದರೂ ಬಂದ ಕಾದಂಬರಿಗಳು ಆ ದಿಸೆಯಲ್ಲಿ ಸತ್ವಪೂರ್ಣವೆ ಆಗಿವೆ. ಗುಲ್ವಾಡಿ ವೆಂಟಕರಾಯರ 'ಇಂದಿರಾಬಾಯಿ' (೧೮೯೯), ಬೋಳಾರು ಬಾಬುರಾಯರ 'ವಾಗ್ದೇವಿ' (೧೯೦೫), ಕೆರೂರು ವಾಸುದೇವಾಚಾರ್ಯರ 'ಇಂದಿರೆ'(೧೯೦೫), ಎಂ.ಎಸ್. ಪುಟ್ಟಣ್ಣವರ 'ಮಾಡಿದ್ದುಣ್ಣೋ ಮಹಾರಾಯ' (೧೯೧೩), ನಂಜನಗೂಡು ತಿರುಮಲಾಂಬರವರ 'ಸುಶೀಲೆ' (೧೯೧೩), 'ನಭಾ' (೧೯೧೪), 'ವಿರಾಗಿಣಿ' (೧೯೧೬), ಗುಬ್ಬಿ ಮುರುಗಾರಾಧ್ಯರ 'ಶೃಂಗಾರಚಾತುರ್ಯೋಲ್ಲಾಸಿನಿ' (೧೮೯೬), ಲಕ್ಷ್ಮಣ ಭೀಮರಾವ್ ಗದಗಕರವರ 'ಸೂರ್ಯಕಾಂತ' (೧೮೯೨), ಮುಂತಾದ ಕೃತಿಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದೇನೆ. ಈ ಎಲ್ಲಾ ಕಾದಂಬರಿಗಳು ಸ್ತ್ರೀ ಜೀವನ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳನ್ನು ಕುರಿತದ್ದೇ ಆಗಿವೆ. ಇಲ್ಲಿಯ ವಿಶೇಷತೆ ಎಂದರೆ ಬಹುತೇಕ ಕಾದಂಬರಿಗಳು ಸ್ತ್ರೀ ವಾಚಕ. ಈ ಕಾಲಘಟ್ಟದ ಕಾದಂಬರಿಗಳು ಸ್ತ್ರೀ ಜೀವನದ ಮೇಲೆ ಹೆಚ್ಚಿನ ಆಸಕ್ತಿ ಪ್ರಕಟವಾಗಿರುವುದು ಕುತೂಹಲಕರ ಸಂಗತಿಯಾಗಿದೆ. ಆದರೂ ಪುರುಷ ಪ್ರಧಾನ ಸಮಾಜ ಸ್ತ್ರೀಯರ ಮೇಲೆ ಅನೇಕ ಕಟ್ಟುಪಾಡುಗಳ ದಿಗ್ಭಂದನ ವಿಧಿಸಿದೆ. ಆದ್ದರಿಂದ ಸ್ತ್ರೀಯರ ಬೆಳವಣಿಗೆ ಕುಂಟಿತಗೊಂಡಿದೆ. ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ. ಆ ಕಾಲಘಟ್ಟದ ಕಾದಂಬರಿಗಳು ಸ್ತ್ರೀಜೀವನದ ಮೇಲೆ ಹೆಚ್ಚಿನ ಆಸಕ್ತಿ ಪ್ರಕಟವಾಗಿರುವದು ಕುತೂಹಲಕರ ಸಂಗತಿಯಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಜಾರಿಯಲ್ಲಿದೆ. ಸ್ತ್ರೀ ನಂತರದ ಸ್ಥಾನಕ್ಕೆ ಇಳಿಸಲ್ಪಟ್ಟಿದ್ದಾಳೆ. ಪುರುಷ ಪುರಷನನ್ನು ಗುಲಾಮನನ್ನಾಗಿಸುವ ಪೂರ್ವದಲ್ಲೆ ಸ್ತ್ರೀ ಗುಲಾಮತನಕ್ಕೆ ಒಳಗಾಗಿದ್ದಾಳೆ. ಪುರುಷಪ್ರಧಾನ ಸಮಾಜ ಸ್ತ್ರೀಯರ ಮೇಲೆ ಅನೇಕ ಕಟ್ಟುಪಾಡುಗಳ ದಿಗ್ಬಂಧನ ವಿಧಿಸಿದೆ. ಆದ್ದರಿಂದ ಸ್ತ್ರೀಯರ ಬೆಳವಣಿಗೆ ಕುಂಟಿತಗೊಂಡಿದೆ. ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ.

ಸಾಮಾಜಿಕ ಸಮಸ್ಯೆಯ ನೆಲೆಗಟ್ಟನ್ನು ಗಮನಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಈ ಕಾಲದ ಸ್ತ್ರೀಪರ ಚಿಂತನೆಯ ಗಮನಹರಿಸಿಕೊಂಡು ಚರ್ಚಿಸಲಾಗಿದೆ. ಸಾಮಾಜಿಕ ಕಾದಂಬರಿಗಳ ಮೇಲೆ ಸಮಾಜ ಸುಧಾರಕರ ಹಲವಾರು ಪ್ರತಿಭಟನಾತ್ಮಕವಾಗಿ ಬುದ್ಧಿ ಜೀವಿಗಳಿಂದ ಚರ್ಚಿತವಾಗಿದೆ. ಈ ರೀತಿಯಾಗಿ ಸಾಮಾಜಿಕ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಅನೇಕ ಬರಹಗಾರರು ಸಾಹಿತ್ಯದ ಮೂಲಕ ಸುಧಾರಣೆ ಪ್ರಯತ್ನ ಮಾಡಿರುವುದನ್ನು ಸಹ ಮನಗಾಣಬಹುದು. ಈ ಅಂಶವನ್ನು ಅನುಸರಿಸಿಯೇ ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನ ಕ್ಷೇತ್ರಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳಿಂದ ಅಧ್ಯಯನ ಮಾಡುವ ಪ್ರಯತ್ನ ನಡೆದಿದೆ. ಅಂತಹವುಗಳಲ್ಲಿ ಜಿ.ಎಸ್. ಅಮೂರವರ 'ಕನ್ನಡ ಕಥನ ಸಾಹಿತ್ಯ ಕಾದಂಬರಿ' ಕೆ.ಟಿ. ಲಕ್ಷ್ಮಣಗೌಡರ 'ಸ್ವತಂತ್ರಪೂರ್ವದ ಕನ್ನಡ ಸಾಮಾಜಿಕ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಸಂಘರ್ಷ' ಶಿವರಾಮ ಪಡಿಕಲ್ 'ಮೊದಲ ಘಟ್ಟದ ಕಾದಂಬರಿಗಳು', ದು.ನಿಂ. ಬೆಳಗಲಿಯವರ 'ಕನ್ನಡದಲ್ಲಿ ಕಾದಂಬರಿ ಸಾಹಿತ್ಯ' ಡಾ.ಎಚ್. ತಿಪ್ಪೇರುದ್ರಸ್ವಾಮಿಯವರ 'ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಸಾಹಿತ್ಯ ಮತ್ತು ಸಮಕಾಲೀನ ಸಂದರ್ಭಗಳ ಹಿನ್ನೆಲೆ'ಯಲ್ಲಿ ಚರ್ಚಿತವಾಗಿವೆ. ಡಾ.ಹರಿಕೃಷ್ಣ ಭರಣ್ಯ 'ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ', ಶ್ರೀನಿವಾಸ ಹಾವನೂರ 'ಹೊಸಗನ್ನಡದ ಅರುಣೋದಯ', ಅಪ್ಪಾಜಿಗೌಡ ಅರ್ಜುನ ಪುರಿಯವರ 'ನಂಜನಗೂಡು ತಿರುಮಲಾಂಬ ಒಂದು ಅಧ್ಯಯನ', ಮಹದೇವ ಕಣವಿಯವರ 'ಕನ್ನಡದ ಪ್ರಾತಿನಿಧಿಕ ಪ್ರಾದೇಶಿಕ 'ಕಾದಂಬರಿಗಳ ಒಂದು ಅಧ್ಯಯನ', ಮಹೇಶ್ವರಿ ಯು. ಅವರ ಇದು 'ಮಾನಷಿಯ ಓದು', ಸಿಂತ್ರಿ ಸರೋಜಿನಿ 'ಮಹಿಳೆ ನಡೆದು ಬಂದ ದಾರಿ', ಕೀರ್ತಿನಾಥ ಕುರ್ತಕೋಟಿಯವರ 'ವಿಮರ್ಶೆ ವಿನಯ ಕಾದಂಬರಿ', ಕೊರಟ ಶ್ರೀನಿವಾಸರಾವ್' 'ಕನ್ನಡ ಕಾದಂಬರಿಗಳಲ್ಲಿ ಇತಿಹಾಸ', ಹಾ.ಮಾ ನಾಯಕರ 'ಕನ್ನಡ ಕಾದಂಬರಿಗಳ ಹಿನ್ನೆಲೆಯ ಇತಿಹಾಸ', ನೆಲೆಗಟ್ಟನ್ನು ಗುರುತಿಸಿರುವುದು. ಡಾ.ಬಿ.ಎ. ವಿವೇಕ ರೈ, 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು': ಮಹತ್ವ ಕೃತಿಗಳಲ್ಲೊಂದಾಗಿದೆ. ಜಿ.ಎಸ್. ಆಮೂರರ 'ಸಮಕಾಲೀನ ಕಥೆ ಕಾದಂಬರಿಗಳ ಹೊಸ ಪ್ರಯೋಗಗಳು', ನಾಯಕ ವಿನಯಾ 'ಕನ್ನಡದಲ್ಲಿ ಮಹಿಳಾ ಸಾಹಿತ್ಯ ವಿಕಾಸ ಘಟ್ಟಗಳು', ಪುರುಷೋತ್ತಮ ಬಿಳಿಮಲೆ ಅವರ 'ಕಾದಂಬರಿ ಶತಮಾನದ ಕನ್ನಡ ಸಾಹಿತ್ಯ', ಕೃಷ್ಣಮೂರ್ತಿ ಕಿತ್ತೂರ ಅವರ 'ಗಳಗನಾಥರು ಮತ್ತು ಅವರ ಕಾದಂಬರಿಗಳು', ಎಚ್.ಎಸ್.

ಸುಜಾತ 'ಎಂ.ಎಸ್. ಪುಟ್ಟಣ್ಣ ಒಂದು ಅಧ್ಯಯನ' ಹಾಗೂ ಮುದಗಲ್ ಪವಾರ ಅವರ 'ಕೆರೂರು ವಾಸುದೇವಾಚಾರ್ಯರು ಒಂದು ಅಧ್ಯಯನ' ಕೃತಿಗಳು ಈಗಾಗಲೇ ಒಂದೊಂದು ವಿಭಿನ್ನ ಮುಖಗಳಲ್ಲಿ ಅಧ್ಯಯನವಾಗಿವೆ.

ಈ ರೀತಿಯಾದ ಹಲವಾರು ಕಾದಂಬರಿಗಳಲ್ಲಿ ಸ್ತ್ರೀ ಕೇಂದ್ರಿತ ವಿಷಯ ವಸ್ತುಗಳಿವೆ. ಆದರೆ ನನ್ನ ಅಧ್ಯಯನವು ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಪಟ್ಟಿರುತ್ತದೆ. ಈವರೆಗೆ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಕುರಿತು ಸಮಗ್ರವಾಗಿ ಅಧ್ಯಯನ ಕನ್ನಡದಲ್ಲಿ ನಡೆದಿಲ್ಲ. ಸಕಾರಣದಿಂದಲೆ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಅಧ್ಯಯನಕ್ಕೆ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳನ್ನು ಪ್ರಾತಿನಿಧಿಕವಾಗಿ ಗುರುತಿಸಿಕೊಳ್ಳಲಾಗಿದೆ. ಆದರೆ ಇಲ್ಲಿ ಸಾಮಾಜಿಕವಾಗಿ ಸಂಘರ್ಷದ ನೆಲೆಗಳ ಅಧ್ಯಯನ ಆಗದಿರುವದನ್ನು ಗಮನಿಸಿ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು:

೧. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ– IX, X ಮುನ್ನುಡಿಯ ಪುಟಗಳು.

೨. ಅಮೂರ ಜಿ.ಎಸ್ – ಕನ್ನಡ ಕಾದಂಬರಿ ಬೆಳವಣಿಗೆ, ಪುಟ.೧.

೩. ಅಮೂರ ಜಿ.ಎಸ್ – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪು.೧೧.

೪. ನಾಗರಾಜ. ಡಿ.ಆರ್ – ಕನ್ನಡ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ.

೫. ವಿವೇಕ ರೈ. ಬಿ.ಎ – ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು.

೬. ಶಾಂತಿನಾಥ ದೇಸಾಯಿ – ಕನ್ನಡ ಕಾದಂಬರಿ ನಡೆದು ಬಂದ ರೀತಿ, ಪ್ರಸಾರಾಂಗ, ಕ.ವಿ.ವಿ. ಧಾರವಾಡ, ಪು.೫.

೭. ಭರಣ್ಯ ಹರಿಕೃಷ್ಣ – ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪು.೯.

೮. ಶ್ರೀನಿವಾಸ ಹಾವನೂರ – ಹೊಸಗನ್ನಡ ಅರುಣೋದಯ, ಕಾದಂಬರಿ, ಪು.೫೭೨.

೯. ರಾಗಂ (ರಾಜಶೇಖರ ಮಠಪತಿ) – ದಿನಾಂಕ ೧೮–೬–೨೦೧೪ ಸಂದರ್ಶನದ ಅಭಿಪ್ರಾಯ.

೧೦. Forster E.M.- Aspects of the novel ಚಿನ್ನದ ಗರಿ, ಪು.೯.

೧೧. Forster E.M.- Aspects of the novel ಚಿನ್ನದ ಗರಿ, ಪು.೯೯.

೧೨. ಕೀರ್ತಿನಾಥ ಕುರ್ತಕೋಟಿ – ಯುಗಧರ್ಮ ಸಾಹಿತ್ಯ ದರ್ಶನ, ಪು.೧೭೩.

೧೩. ಶ್ರೀನಿವಾಸ ಹಾವನೂರ – ಹೊಸಗನ್ನಡ ಅರುಣೋದಯ, ಪು.೩೨೬.

೧೪. ಆಮೂರ ಜಿ.ಎಸ್ – ಆಧುನಿಕ ಕನ್ನಡ ಸಾಹಿತ್ಯ: ಕಾದಂಬರಿ ವಿಶ್ವಕನ್ನಡ, ಸಂಪುಟ–೨,ಪು.೨೧೦.

೧೫. ಕೊರಟ ಶ್ರೀನಿವಾಸ – ಕನ್ನಡ ಕಾದಂಬರಿಗಳ ಇತಿಹಾಸ, ಚಿನ್ನದಗರಿ, ಪು.೧೧೨.

೧೬. ನಾಗರಾಜ ಡಿ.ಆರ್ – ಕನ್ನಡ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ, ಸಾಹಿತ್ಯ ಕಥನ, ಪು.೧೭೮.

೧೭. ರಾಮಚಂದ್ರ ಸಿ.ಎನ್ – ಕಾದಂಬರಿ ೧೯೦೦ ರಿಂದ ೧೯೨೫ ಶತಮಾನದ ಕನ್ನಡ ಸಾಹಿತ್ಯ, ಪು.೧೭೮

೧೮. ಕನ್ನಡ ವಿಶ್ವಕೋಶ ಸಂಪುಟ ೨, ಪು.೭೧೨.

೧೯. ಹರಿಕೃಷ್ಣ ಭರಣ್ಯ - ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ. ಪು.೭ ರಿಂದ ೯

೨೦. ರಾಮಚಂದ್ರನ್ ಸಿ.ಎನ್ - ಕಾದಂಬರಿ ೧೯೦೦-೧೯೨೫ ಶತಮಾನದ ಕನ್ನಡ ಸಾಹಿತ್ಯ, ಪು.೧೭೬.

೨೧. ರಾಮಚಂದ್ರನ್ ಸಿ.ಎನ್ - ಕಾದಂಬರಿ ೧೯೦೦-೧೯೨೫ ಶತಮಾನದ ಕನ್ನಡ ಸಾಹಿತ್ಯ, ಪು.೧೭೫.

೨೨. ಶ್ರೀನಿವಾಸ ಹಾವನೂರ - ಹೊಸಗನ್ನಡ ಅರುಣೋದಯ, ಪು.೫೪೧.

೨೩. ಭರಣ್ಯ ಹರಿಕೃಷ್ಣ - ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ, ಪು.೯.

೨೪. ಭರಣ್ಯ ಹರಿಕೃಷ್ಣ - ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ, ಪು.೯.

೨೫. ಬೆಳಗಲಿ ದು.ನಿಂ - ಕನ್ನಡದಲ್ಲಿ ಕಾದಂಬರಿ ಸಾಹಿತ್ಯ, ಪು.೨.

೨೬. ಶಿವರಾಮ ಪಡಿಕಲ್ - ಕನ್ನಡ ನಾಡು ನುಡಿಯ ರೂಪಕ, ಪು.೨೩.

ಅಧ್ಯಾಯ – ೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – ೨

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

'ಕಾದಂಬರಿ' ಕನ್ನಡ ಸಾಹಿತ್ಯದ ಬಹು ಜನಪ್ರಿಯವಾದ ಸಾಹಿತ್ಯ ಮಾಧ್ಯಮ. ಅದು ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶ ಪಡೆದದ್ದು, ಪಾಶ್ಚಿಮಾತ್ಯ ಸಾಹಿತ್ಯದ ಸಂಪರ್ಕದ ಕಾರಣವಾಗಿ. ಇಂಗ್ಲಿಷ್ ಭಾಷೆಯ ಮೂಲಕ ಯುರೋಪಿನಲ್ಲಿ ಜನ್ಮ ತಳೆದು ಈ ಸಾಹಿತ್ಯ ಪ್ರಕಾರ ಆಧುನಿಕ ಜೀವನದ ಒತ್ತಾಸೆಯಿಂದ ಜಗತ್ತಿನ ಮೂಲೆ ಮೂಲೆಗೆ ಚಾಚಿಕೊಂಡಿತು. ಬಂಡವಾಳಶಾಹಿ ವ್ಯವಸ್ಥೆ ವಿರುದ್ಧ ಧ್ವನಿ ಎತ್ತಲೆಂದು ಹುಟ್ಟಿಕೊಂಡ ಕಾದಂಬರಿ ಓದುಗರ ಮೇಲೆ ಪರಿಣಾಮ ಬೀರತೊಡಗಿತ್ತು. ಜನಮನವನ್ನು ಸ್ಪಂದಿಸುವ ಸಾಧನದಂತೆ ತೋರ ತೊಡಗಿತು. ಅದಕ್ಕೆ ಬಹುಬೇಗ ಜನಪ್ರಿಯತೆಯನ್ನು ಪಡೆದುಕೊಂಡಿತು. ಮಾನವ ಬದುಕು. ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿ ಸಂಭವಿಸಿದ ಸುಧಾರಣೆ ಮತ್ತು ಜೀವನ ಸಮಸ್ಯೆಯನ್ನು ಸಶಕ್ತವಾಗಿ ಪ್ರತಿಬಿಂಬಿಸಬಲ್ಲ ಸಾಹಿತ್ಯ ಪ್ರಕಾರವಾಯಿತು. ಕಾದಂಬರಿಯನ್ನು ಕುರಿತು 'ಸಾಂತಾಯನ್ ಹೇಳುವಂತೆ "A Theoretic vision of things"ಆಗಿರುವಂತೆ ಆರ್ನಾಲ್ಡರ್ ಪ್ರಕಾರ "An interpretation of life" ಈ ಎರಡೂ ಆಗಬಲ್ಲದು. ಆದರೆ ಕಾವ್ಯಕ್ಕಿಂತ ಭಿನ್ನವಾದ ರೀತಿಯಲ್ಲಿ ಇದನ್ನು ಸಾಧಿಸುತ್ತದೆ.[೧] ಅದೇ ರೀತಿ ಮೇರಿಯನ್ ಕ್ರಾಫರ್ಡ ಸೊಗಸಾಗಿ ಹೇಳಿದಂತೆ "ಕರತಲ ರಂಗಭೂಮಿ" ಅದು ಸಂವಿಧಾನ ಮತ್ತು ಪಾತ್ರಗಳನ್ನು ಮಾತ್ರವಲ್ಲದೆ ಉಡಿಗೆ ತೊಡಿಗೆ ಹಾಗೂ ರಂಗ ದೃಶ್ಯಗಳನ್ನು ನಾಟಕ ಪ್ರಯೋಗದ ಇತರ ಎಲ್ಲಾ ಪರಿಕರಗಳನ್ನು ತನ್ನೊಳಗೆ ಇರಿಸಿಕೊಂಡಿದೆ"[೨] ಈ ರೀತಿಯಾಗಿ ಕನ್ನಡದ ಮೊದಲ ಕಾದಂಬರಿಗಳು ವಸಾಹತುಶಾಹಿ ಆಡಳಿತಕ್ಕೆ ಎದುರುಗೊಂಡು ತಮ್ಮ ಸ್ವರೂಪ ಪಡೆದುಕೊಂಡವು. ಇದು ಸಾಂಸ್ಕೃತಿಕ ಕಾಳಜಿಗೆ ಸಾಮಾಜಿಕ ಸಂಘರ್ಷಕ್ಕೆ ವೇದಿಕೆ ಒದಗಿಸಿತು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆರಂಭಕಾಲಿನ ಲೇಖಕರು ಸಾಮಾಜಿಕ ಕಾದಂಬರಿಗಳನ್ನು ರಚನೆ ಮಾಡಿರುವುದರಿಂದ, ಸಾಮಾಜಿಕ ಸಂಘರ್ಷಕ್ಕೆ ಮಾರ್ಗ ಸೂಚಿಸಿದರು. ಮಧ್ಯಮ ವರ್ಗ, ಕೆಳವರ್ಗದ ಬದುಕಿನ ಕಡೆ ಪ್ರಾಧಾನ್ಯತೆ ಕೊಡಲಾಗಿದೆ. ಈ ಕಾಲದ ಸ್ವತಂತ್ರ ಕಾದಂಬರಿಗಳು ಸಮಾಜ ಮುಖಿಯಾಗಿವೆ. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ, ವ್ಯಕ್ತಪಡಿಸಿರುವ ಸಹಾನುಭೂತಿ ಕಾಳಜಿಯನ್ನು ಗುರುತಿಸಲು ಸಾಧ್ಯವಾಗುವ ರೀತಿಯಲ್ಲಿವೆ. ಸಮಾಜದ ಸಂಘರ್ಷ ಮತ್ತು ಬದಲಾವಣೆಯ ಸ್ವರೂಪ ಕಂಡುಕೊಳ್ಳಲು ಹೆಚ್ಚಿನ ಸಹಾಯ ದೊರೆಯಬಹುದೆಂಬ ನಿರೀಕ್ಷೆಯಿಂದ ಅಧ್ಯಯನವನ್ನು ಇಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಅವುಗಳನ್ನು ಈ ರೀತಿ ವಿಂಗಡಿಸಬಹುದು.

೨.೧ ಕೃತಿಗಳು

೨.೨ ಸಂಗ್ರಹಗಳು /ಸಂಪಾದನೆಗಳು

೨.೩ ಲೇಖನಗಳು

೨.೪ ಕಿರು ಪ್ರಬಂಧಗಳು (ಎಂ.ಫಿಲ್)

೨.೫ ಮಹಾ ಪ್ರಬಂಧಗಳು (ಪಿಎಚ್.ಡಿ)

೨.೬ ಅನುವಾದ ಲೇಖನಗಳು

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಇದುವರೆಗೂ ಆಗಿರುವ ಅಧ್ಯಯನಗಳನ್ನು ಈ ರೀತಿಯಾಗಿ ವಿಭಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಸಾಮಾಜಿಕ ಸ್ಥಿತಿಗತಿಯನ್ನು ಸಂಘರ್ಷದ ನೆಲೆಗಳನ್ನು ಕಂಡುಕೊಳ್ಳಲು ಸಹಾಯಕವಾದ ರೀತಿಯನ್ನು ಇಲ್ಲಿ ಗಮನಿಸಲಾಗಿದೆ.

೨.೧ ಕೃತಿಗಳು

ಗಳಗನಾಥರು[೩]

ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಗಳಗನಾಥರ 'ಜೀವನ ವಾಙ್ಮಯ' ವಿಮರ್ಶೆಯನ್ನು ಕುರಿತು ಕ್ರಿ.ಶ.೧೯೪೬ರಲ್ಲಿ ಜೀವನ ವೃತ್ತಾಂತದ ವಿಶ್ಲೇಷಣೆ ಬಂದಿತು. ಕೃತಿಗಳ ವಿವರಣೆ, ಕಾಲ ವಿವರಣೆ, ಕಾಣಿಕೆಯ ರೂಪಗಳಲ್ಲಿ ಕೃತಿಯ ಮೇಲೆ ಬೆಳಕು ಚೆಲ್ಲಿರುವುದು. ವಿ.ಆರ್.ಜಾಗೀರದಾರ ಕಾರ್ಯಾಧ್ಯಕ್ಷರಾಗಿರುವ ಕಾಲದಲ್ಲಿ ಈ ಕೃತಿ ಹೊರ ಬಂದಿತು. ಈ ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದಿಂದ ಬೆಳಕು ಕಂಡಿತು. ಭಾರತೀಯ ಸಾಹಿತ್ಯ ನಿರ್ಮಾತೃಗಳು ಎಂಬ ಪುಸ್ತಕ ಅಡಿಯಲ್ಲಿ ಮೂಡಿಬಂದಿತು. ಕನ್ನಡ ಕಾದಂಬರಿಯ ಪ್ರಾರಂಭ ಅನುವಾದದ ಮೂಲಕ ಜರುಗಿದ ವಿಷಯ, ವಸ್ತು, ಕಾಲ, ಸಾಹಿತ್ಯ ಸಂದರ್ಭಗಳ ಸಂಗತಿ ಚರ್ಚಿತವಾಗಿದೆ.

ದು. ನಿಂ. ಬೆಳಗಲಿ: ಕನ್ನಡ ಕಾದಂಬರಿ ಸಾಹಿತ್ಯ[೪]

ಕ್ರಿ.ಶ.೧೯೭೫ರಲ್ಲಿ ಕನ್ನಡಸಾಹಿತ್ಯದಲ್ಲಿ ಕಥೆಗಾರರಾಗಿ ಕಾದಂಬರಿಕಾರರಾಗಿ ತೊಡಗಿಸಿಕೊಂಡವರು. ಸಾಹಿತ್ಯವನ್ನು ಉಸಿರಾಗಿಸಿಕೊಂಡು ಸೇವೆ ಸಲ್ಲಿಸಿದರು. "ಕನ್ನಡದಲ್ಲಿ ಕಾದಂಬರಿ ಸಾಹಿತ್ಯ" ಎಂಬ ಉಪನ್ಯಾಸ ಗ್ರಂಥಮಾಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ರಜತ ಮಹೋತ್ಸವದ ಸಂದರ್ಭದಲ್ಲಿ ಬೆಳಕು ಕಂಡಿತು: ಕಾದಂಬರಿಯ ಮೂಲ; ಕಾದಂಬರಿಯ ಬಗೆಗಳು. ಮೊದಲ ಘಟ್ಟದ ಸ್ವತಂತ್ರ ಕೃತಿಗಳು. ಕನ್ನಡ ಸಾಮಾಜಿಕ ಕಾದಂಬರಿಗಳ ವಾಲ್ಯ, ಮುಂತಾದ ಅಂಶಗಳ ಕುರಿತು ಚರ್ಚಿಸಿ ಹೊಸ

ದೃಷ್ಟಿ ಬೆಳೆಯಲು ಅನುಕೂಲ ವಾತಾವರಣ ನಿರ್ಮಾಣ ಮಾಡುವಲ್ಲಿ ಈ ಕೃತಿ ಮಹತ್ವದ ಮುನ್ನುಡಿಯಾಗಿದೆ.

ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು

ಮಂಗಳೂರು ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಪ್ರಕಟಗೊಂಡ ಡಾ. ಬಿ.ಎ. ವಿವೇಕ ರೈಯವರಿಂದ ಸಂಪಾದಿಸಲ್ಪಟ್ಟ 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು' ಅನನ್ಯವಾದದ್ದು. ಈ ಕೃತಿಯಲ್ಲಿ ಮೊದಲ ಘಟ್ಟದ ಕಾದಂಬರಿಗಳ ಕುರಿತು ಸ್ಥೂಲವಾದ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ವಿಶೇಷವಾಗಿ ಕನ್ನಡ ಕಾದಂಬರಿಯ ಉಗಮದಿಂದ ಸಾಮಾಜಿಕ ಸ್ಥಿತಿಗತಿ, ಸಾಂಪ್ರದಾಯಿಕ ಕಥನ ಕಾದಂಬರಿಗಳ ಅಂತರಸಂಬಂಧ, ಜಾನಪದದ ಪ್ರಭಾವ, ಕಾದಂಬರಿಗಳ ಸ್ವರೂಪ, ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಕುರಿತು ವಿಶ್ಲೇಷಣೆ ಇದೆ. ಭಾಷೆ, ಶೈಲಿ ಹಾಗೂ ಕನ್ನಡದ ಮೊದಲ ಕಾದಂಬರಿಗಳ ವಾಚನಾಭಿರುಚಿ ಕುರಿತು ಆಳ ಅಧ್ಯಯನ ಕಂಡು ಬರುವುದು.

ಡಾ.ಶಿವರಾಮ ಕಾರಂತ, ಬಿ.ಷೇಕ್‌ಅಲಿ, ಪ್ರೊ.ಅನಂತನಾರಾಯಣ, ಐ.ಎಂ.ವಿಠ್ಠಲ ಮೂರ್ತಿ, ಡಾ.ಶ್ರೀನಿವಾಸ ಹಾವನೂರು, ಡಾ.ಜಿ.ಶಂ.ಪರಮಶಿವಯ್ಯ, ಡಾ.ಬಿ.ದಾಮೋಧರ ರಾವ್, ಜಿ.ಎಚ್.ನಾಯಕ, ಡಾ.ಸಿ.ಎನ್.ರಾಮಚಂದ್ರ, ಡಾ.ಡಿ.ಆಲ್.ನಾಗರಾಜ, ಡಾ.ಕೆ.ವಿ. ನಾರಾಯಣ, ಬೆನಕಾಡಿ ವೆಂಕಟಕೃಷ್ಣರಾಯ ಹಾಗೂ ಶಿವರಾಮ ಪಡಿಕ್ಕಲ್‌ರವರ ಲೇಖನಗಳು ಇಲ್ಲಿ ಒಂದೆಡೆಗೆ ಬಂದಿವೆ. ಅನೇಕ ಪ್ರಶ್ನೆ, ಸಂದೇಹ, ಹೊಳಹು ವಿಚಾರ ಸಂಕಿರಣದ ಈ ಪ್ರಬಂಧ ಲೇಖನಗಳಲ್ಲಿ ಚರ್ಚಿತವಾಗಿದೆ. ಕಾದಂಬರಿ ವಿಮರ್ಶೆ ದೃಷ್ಟಿಯಿಂದ ಈ ಅಂಶಗಳೆಲ್ಲ ಗಮನಾರ್ಹ ಎನಿಸುತ್ತವೆ. ಚರ್ಚೆಯು ಅನೇಕ ಮುಖ್ಯ ಅಂಶಗಳನ್ನು ಒಳಗೊಂಡಿದ್ದು, ಕಾದಂಬರಿ ಮತ್ತು ಸಾಮಾಜಿಕ ಪರಿಸರ ಓದು ವರ್ಗ ಕುರಿತಾದ ಟಿಪ್ಪಣೆಗಳಿವೆ.

ತಿರುಮಲಾಂಬ – ಚಿ.ನ.ಮಂಗಳಾ

ಕ್ರಿ.ಶ.೧೯೯೧ರಲ್ಲಿ 'ತಿರುಮಲಾಂಬಾ' ಎಂಬ ಕೃತಿಯನ್ನು ಚಿ.ನ.ಮಂಗಳಾರವರು ರಚಿಸಿದ್ದಾರೆ. ಸಮಕಾಲೀನ ಪ್ರಸ್ತುತತೆ, ಜೀವನ, ವಿವಾಹ, ವೈದವ್ಯ, ವಿದ್ಯಾಭ್ಯಾಸ, ಸಾಹಿತ್ಯ ಕೃಷಿ, ಪ್ರಕಾಶನ ಕಾರ್ಯದೊಂದಿಗೆ ಸಾಹಿತ್ಯಿಕವಾಗಿ ಕೆಲವು ಗಮನಾರ್ಹ ಕಾದಂಬರಿಗಳನ್ನು ರಚಿಸಿದ್ದರ ಮಾಹಿತಿ ಇದೆ. ಸ್ತ್ರೀ ಪರವಾದ ಚಿಂತನ ಮುಂತಾದ ಸಂಗತಿಗಳನ್ನು ಕುರಿತು ತಾರ್ಕಿಕವಾಗಿ ಚರ್ಚಿಸಲಾಗಿದೆ. ಒಳಸ್ತರದ ಅಧ್ಯಯನದ ಅವಶ್ಯವಿದೆ.

ಒತ್ತೈಸಿಗೆಯ ಹೆಜ್ಜೆಗಳು– ವಿಜಯ ದಬ್ಬೆ–೧೯೯೨

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಕನ್ನಡ ಸಾಹಿತ್ಯದ ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ದಿಶೆಯಲ್ಲಿ ನಂಜನಗೂಡು ತಿರುಮಲಾಂಬರವರು ಸಾಹಿತ್ಯ ಸಾಹಸ

ಗಾಥೆಯನ್ನು ಪ್ರಕಟ ಮಾಡಿದರು. ಕ್ರಿ.ಶ.೧೯೯೨ರಲ್ಲಿ ವಿಜಯದಬ್ಬೆಯವರ ಸಂಪಾದಕತ್ವದಲ್ಲಿ ತಿರುಮಲಾಂಬಾರವರ ಕುರಿತು 'ಹಿತೈಷಿಣಿಯ ಹೆಜ್ಜೆಗಳು' ಕೃತಿಯು ತುಂಬಾ ಪ್ರಮುಖ. ಮೊದಲ ಭಾಗ ಹಿತೈಷಿಣಿಯ ಬದುಕು–ಬರಹ, ಪ್ರಮುಖ ಕಾದಂಬರಿಗಳು, ಪ್ರಬಂದಾವಲಿ, ಭಾವನಾಲೋಕ, ಗೀತಾವಲಿ ಜೊತೆಗೆ ಲೇಖಕರೊಂದಿಗೆ ನಡೆದ ಸಂದರ್ಶನ ಭಾಗಗಳನ್ನು ಸೂಕ್ತ ರೀತಿಯಲ್ಲಿ ವಿವರಿಸಿದ್ದಾರೆ. ಸಾಮಾಜಿಕ ಸಂಗತಿಯನ್ನು ಬಾಲ್ಯ ವಿವಾಹ, ವಿಧವಾ ವಿವಾಹ, ಸಾಮಾಜಿಕ ಸ್ಥಾನಮಾನ ಕುರಿತು ವಿವರಣೆ ಇದೆ. ವಿಮರ್ಶೆಯ ಅವಶ್ಯಕತೆ ಎದ್ದು ಕಾಣವುದು.

ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ: ಡಾ. ಪಿ.ಕೆ. ಖಂಡೋಬಾ[೮]

ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿದೆ. ಕೃತಿಯು ಸಾಮಾಜಿಕ ವ್ಯವಸ್ಥೆ, ಸಾಮಾಜಿಕ ಸ್ತರ ವಿನ್ಯಾಸ, ಸಂಸ್ಕಾರಗಳು, ವಿವಾಹ ಪದ್ಧತಿ, ಮರಣ ಸಂಸ್ಕಾರ, ವೇಷ ಭೂಷಣಗಳು, ಆಹಾರ ಪಾನೀಯಗಳ ವಿಶ್ಲೇಷಣೆ ಇದೆ. ಧಾರ್ಮಿಕ ಜೀವನ, ಭಾಷೆ ಹಾಗೂ ಸಾಹಿತ್ಯ ಪ್ರಾದೇಶಿಕ ಭಾಷಾ ನೆಲೆ ಹಾಗೂ ಸಾಮಾಜಿಕ ಸಂಬಂಧಗಳು, ಗಾದೆ ಮಾತುಗಳ ವೈಶಿಷ್ಟ್ಯ, ಪ್ರಾದೇಶಿಕತೆಯನ್ನು ಕುರಿತು ತಾರ್ಕಿಕವಾಗಿ ಚರ್ಚಿಸಲಾಗಿದೆ. ಸಾಮಾಜಿಕ ಸ್ತರ ವಿನ್ಯಾಸ ಚರ್ಚೆ ಕಡಿಮೆ. ಸಾಮಾಜಿಕತೆಯ ಅವಶ್ಯಕತೆ ಕಾಣುವುದು.

ಭಾರತೀಯ ಸಾಹಿತ್ಯ ನಿರ್ಮಾಪಕರು[೯]

ಭಾರತೀಯ ಸಾಹಿತ್ಯ ನಿರ್ಮಾಪಕರು ಎಂಬ ಶೀರ್ಷಿಕೆಯಡಿ 'ಕಾದಂಬರಿಕಾರ ಗಳಗನಾಥರು' ಎಂಬ ಕೃತಿಯನ್ನು ಕನ್ನಡದ ಖ್ಯಾತ ವಿಮರ್ಶಕ ಹಾಗೂ ಸಂಶೋಧಕ ಶ್ರೀನಿವಾಸ ಹಾವನೂರರಿಂದ ರಚಿಸಲ್ಪಟ್ಟ ಸಾಹಿತ್ಯ ಅಕಾಡೆಮಿ ನವದೆಹಲಿಯವರಿಂದ ಬೆಳಕು ಕಂಡ ಕೃತಿ. ಈ ಕೃತಿಯಲ್ಲಿ ಸಮಕಾಲೀನ ಸ್ಥಿತಿ, ಸಾಹಿತ್ಯ ಪ್ರೇರಣೆ, ಗಳಗನಾಥರ 'ಸುರಸ' ಗ್ರಂಥಮಾಲೆ, ಶೈಕ್ಷಣಿಕ, ಸಾಮಾಜಿಕ ಬರಹಗಳು, ಕೃತಿ ಸಂಪಾದನಾ ಕೃಷಿ ಕುರಿತು ಚರ್ಚಿಸಲಾಗಿದೆ. ಈ ಕೃತಿಯಲ್ಲಿ ಹೆಚ್ಚಾಗಿ ಅನುವಾದ ಕೃತಿಗಳ ಚರ್ಚೆ ಇದೆ.

ಇದು ಮಾನಷಿಯ ಓದು. ಮಹೇಶ್ವರಿ ಯು[೧೦]

ಈ ಕೃತಿ ಮೊದಲ ಘಟ್ಟದ ಕಾದಂಬರಿಗಳು ಒಂದು ಸ್ತ್ರೀವಾದಿ ಅಧ್ಯಯನವಾಗಿದ್ದು, ಶಿವರಾಮ ಕಾರಂತ ಅಧ್ಯಯನ ಕೇಂದ್ರ ಪುತ್ತೂರಿನ ಮಹೇಶ್ವರಿ ಯು. ರವರು ಹೊರತಂದಿದ್ದಾರೆ. ಕೃತಿಯು ಮಹಿಳಾಪರ ಚಿಂತನೆಗೆ ಮಹತ್ವ ನೀಡಿದ್ದು, ಜೊತೆಗೆ ಸಾಮಾಜಿಕ ಸಂಘರ್ಷದ ಮುಖಗಳನ್ನು ಪರಿಚಯಿಸುವ ಕೃತಿಯಾಗಿದೆ. ಕೃತಿಯಲ್ಲಿ ಸ್ತ್ರೀವಾದಿ ಅಧ್ಯಯನದ ಸ್ವರೂಪ, ಸ್ಥಿತ್ಯಂತರ, ಯುಗದ ಹೆಜ್ಜೆ ಪಾಶ್ಚಾತ್ಯ ಜಗತ್ತಿನಲ್ಲಿ, ಮೊದಲು ಕನ್ನಡ ಕಾದಂಬರಿಗಳ ಸಾಮಾಜಿಕ ಹಿನ್ನೆಲೆ, ಸಾಮಾಜಿಕ ಕಾದಂಬರಿಗಳು ಭಾಗ ೧, ೨, ೩ ಎಂದು ಮಹಿಳಾಪರ ಚಿಂತನೆಯ ವಿಷಯ ಕಾದಂಬರಿಗಳು ಹಲವಾರು ಮುಖಗಳಲ್ಲಿ

ಚರ್ಚೆಗೆ ಬಂದಿದೆ. ಮಹಿಳಾಪರ ಚಿಂತನೆಗಳ ಚಿಕಿತ್ಸಕ ದೃಷ್ಟಿ, ವಿಶ್ಲೇಷಣೆ, ಚರ್ಚೆ, ತರ್ಕಬದ್ಧವಾದ ಮಂಡನೆ ಇಲ್ಲಿ ಕಂಡುಬರುವುದು.

ಎಂ.ಎಸ್.ಪುಟ್ಟಣ್ಣ-ಎಚ್.ಎಸ್. ಸುಜಾತ[೧೧]

ಸಾಹಿತ್ಯ ಅಕಾಡೆಮಿಯು ಭಾರತೀಯ ಸಾಹಿತ್ಯ ನಿರ್ಮಾಪಕರು ಎಂಬ ಮಾಲಿಕೆಯಲ್ಲಿ ಪ್ರಕಟಗೊಂಡ ಪುಸ್ತಕವಿದು. ಎಂ.ಎಸ್. ಪುಟ್ಟಣ್ಣನವರ ಜೀವನ ವೃತ್ತಾಂತ ಆ ಕಾಲದ ಕನ್ನಡ ಭಾಷೆ, ಸಾಹಿತ್ಯ ಪ್ರೇರಣೆ, ಧೋರಣೆಗಳನ್ನು ಕುರಿತು ಚರ್ಚಿಸಲಾಗಿದೆ. ಕಥೆ, ಕಾದಂಬರಿಗಳು, ರೂಪಾಂತರ, ಭಾಷಾಂತರಗಳು ಪತ್ರಿಕೋದ್ಯಮ, ಲೇಖನಗಳು, ಸಂಶೋಧನಾ ಕೃತಿಗಳನ್ನು ಕುರಿತು ಸಾಹಿತ್ಯಿಕ ಆಶಯಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಚಾರಿತ್ರಿಕ ಅಂಶಗಳ ದಟ್ಟ ಪ್ರಭಾವ ಕೂಡಾ ಕಂಡು ಬರುತ್ತವೆ.

ಎಂ.ಎಸ್. ಪುಟ್ಟಣ್ಣವರ ಕಾದಂಬರಿಗಳು: ಎಚ್.ಎಸ್.ಸುಜಾತ[೧೨]

ಕ್ರಿ.ಶ. ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ 'ಮಂಟಪ ಮಾಲೆ' ಪುಸ್ತಕ ಸರಣಿಯಲ್ಲಿ ಈ ಪುಸ್ತಕ ಹೊರ ಬಂದಿದೆ. ಪ್ರಮುಖ ಕಾದಂಬರಿಗಳಾದ ಮಾಡಿದ್ದುಣ್ಣೋ ಮಹಾರಾಯ, ಮುಸುಕು ತೆಗಿಯೇ ಮಾಯಾಂಗನೆ, ಅವರಲ್ಲಿದೂಟ ಕಾದಂಬರಿಯ ಕುರಿತು ಚರ್ಚೆ ಇದೆ. ಸೀತೆ, ಅಪ್ಪಾಜಿ, ಅಪ್ರಮೇಯ, ಇಂಗ್ರೀಜಿ, ಹಯಾತ ಖಾನ್, ಜಾನಕಿ ಮಲ್ಲಿ, ಪಾತ್ರಗಳ ಸಾಮಾಜಿಕತೆಯ ಚಿತ್ರಣವಿದೆ. ಅಲ್ಲದೆ ರಾಜಸ್ಥಾನದ ಚಿತ್ರಣ, ಹಾಸ್ಯ, ಸಾಮಾಜಿಕ, ಜನಪದಿಯ ವಿಚಾರಗಳ ಕುರಿತು ಚರ್ಚಿತವಾಗಿರುವುದು ಗಮನಾರ್ಹವಾದದ್ದು.

ಕಾದಂಬರಿ: ಸಾಮಾನ್ಯ ಮನುಷ್ಯ; ಪ್ರೊ.ಎಲ್.ಎಸ್.ಶೇಷಗಿರಿರಾವ್[೧೩]

ಪ್ರೊ.ಎಲ್.ಎಸ್. ಶೇಷಗಿರಿರಾವ, ಕನ್ನಡದ ಪ್ರಬುದ್ಧ ವಿಮರ್ಶಕರು. ಅವರ ಮೊದಲ ವಿಮರ್ಶಾ ಕೃತಿ ಕಾದಂಬರಿ, ಕಾದಂಬರಿಕಾರನ ಸೃಷ್ಟಿ, ವಸ್ತು, ಪಾತ್ರಗಳು, ಕಾದಂಬರಿಯ ತಂತ್ರಗಾರಿಕೆ ಕಾದಂಬರಿ ಪ್ರಪಂಚವನ್ನು ಕುರಿತು ಸಂಶೋಧನಾ ಚೌಕಟ್ಟನ್ನು ರೂಪಿಸಿಕೊಳ್ಳುವುದು ಇಲ್ಲಿ ಕಂಡುಬರುತ್ತದೆ. ತಾತ್ವಿಕತೆ, ಬಿಚ್ಚಿಕೊಳ್ಳುತ್ತಿರುವ ಸ್ವರೂಪ, ಲೋಕವನ್ನು ಸಮಗ್ರವಾಗಿ ಗ್ರಹಿಸುವ, ಮಂಡಿಸುವ ಒಂದು ನೋಟದ ಪ್ರೇಮವು ಈ ಕೃತಿಯಲ್ಲಿ ಕಾಣುವುದು.

ಕಾದಂಬರಿ ವಸ್ತು ಮತ್ತು ತಂತ್ರ; ಡಾ.ಗಿರಡ್ಡಿ ಗೋವಿಂದರಾಜ[೧೪]

ಕ್ರಿ.ಶ.೧೯೭೭ರಲ್ಲಿ ರಚನೆಗೊಂಡ ಈ ಮಹತ್ತರ ಕೃತಿ ಗಿರಡ್ಡಿ ಗೋವಿಂದರಾಜರವರು ಸಾಹಿತ್ಯ ವಾಙ್ಮಯಕ್ಕೆ ನೀಡಿದರು. ಕಾದಂಬರಿ: ವಸ್ತು ಮತ್ತು ತಂತ್ರ ಕೃತಿಯಲ್ಲಿ ವೈಚಾರಿಕ ಪ್ರಜ್ಞಾ ಪ್ರವಾಹ

ಕಾಣುವುದು. 'ವಿಶ್ವಾಮಿತ್ರನ ಸೃಷ್ಟಿ', 'ಮರಳಿ ಮಣ್ಣಿಗೆ', ಅಡಿಗರ 'ಆಕಾಶದೀಪ', 'ಅನಾಥೆ' ಎರಡು ಕಾದಂಬರಿಗಳು, ಲೇಖನಗಳು, ವೈಶಿಷ್ಟ್ಯಪೂರ್ಣವಾಗಿವೆ. ಎಂ.ಆರ್. ಶ್ರೀನಿವಾಸಮೂರ್ತಿಯವರ 'ಮಹಾತ್ಯಾಗ' ಕಾದಂಬರಿಯಲ್ಲಿ ಪ್ರತಿಭೆಯ ಬಿಂಬವಿದೆ. ಡಾ.ಎಸ್.ಎಲ್. ಭೈರಪ್ಪ ಅವರ 'ವಂಶವೃಕ್ಷ' ಕನ್ನಡದ ಬಹುಮುಖ ಪ್ರತಿಭೆಯ ವಿಶ್ಲೇಷಣೆ, ಲಂಕೇಶರವರ 'ಬಿರುಕು' ಕಾದಂಬರಿಯಲ್ಲಿ ಕೃತಿಗಳ ವಿಶಿಷ್ಟ ಚರ್ಚೆ ಇದೆ. ಕೊನೆಯದಾಗಿ ಕಾದಂಬರಿ 'ಆಳನಿರಾಳ', 'ಮುಕ್ತಿ', 'ವಿಕ್ಷೇಪ', 'ಮೂರುದಾರಿಗಳು', 'ಸಂಸ್ಕಾರ', 'ಮುಗಿಯದ ಕಥೆ' 'ಸ್ವರೂಪ', 'ಕಾದಂಬರಿಗಳು ಹಲವಾರು ಪ್ರಯೋಗಗಳ ಮೂಲಕ ಗಮನಸೆಳೆಯುತ್ತವೆ.

೨.೨ ಸಂಗ್ರಹಗಳು / ಸಂಪಾದನೆಗಳು:

ಸಾಹಿತ್ಯದ ಮುಖ್ಯ ಉದ್ದೇಶ ಸಂವಹನ. ಈ ಸಂವಹನದ ಮೂಲಕ ಸಾಹಿತ್ಯವು ಓದುವ, ಕೇಳುವ ವರ್ಗಕ್ಕೆ ತಾಕುವಂತಿರಬೇಕು. ವಿಮರ್ಶಕ ಸಂಶೋಧಕರಿಗೆ ಹೊಸ ಹೊಳಹು ಹುಟ್ಟಿಸುವಂತಿರಬೇಕು. ಈ ಉದ್ದೇಶದಿಂದ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ಅರ್ಥಮಾಡಿಸುವ ಕ್ರಿಯೆ ನಡೆಯುವುದು. ಸಾಹಿತ್ಯ ಸಂಶೋಧನೆಯಲ್ಲಿ ಸೂಕ್ತವಾದ ನೆಲೆ ಕಾಣಲು ಸಾಹಿತ್ಯದ ಭಾಗವಾದ ಸಂಪಾದನೆಗಳು ಹಾಗೂ ಸಂಗ್ರಹಗಳು ಪ್ರಮುಖ ಪಾತ್ರ ನಿರ್ವಹಿಸುವ ಗಟ್ಟಿತನವನ್ನು ಕಂಡುಕೊಳ್ಳಲು ಸಹಾಯಕಾರಿ. ಅಲ್ಲದೇ ಪೂರಕವಾದ ವಾತಾವರಣ ಕಟ್ಟಿಕೊಡುವುದು.

'ಮಹಿಳೆ ಮತ್ತು ಕನ್ನಡ ಸಾಹಿತ್ಯ'[೧೩] ಎಂಬ ಕೃತಿಯನ್ನು ಡಾ.ಜಿ.ಎಸ್.ಶಿವರುದ್ರಪ್ಪ ಸಂಪಾದಿಸಿದ್ದಾರೆ. ಮಹಿಳಾ ಬರಹಗಾರ್ತಿಯರ ಕುರಿತು ಎಂಟು ಲೇಖನಗಳಿದ್ದು, ಸ್ತ್ರೀ ಪರ ಚಿಂತನೆ, ಸಾಮಾಜಿಕ ಸಮಸ್ಯೆಯನ್ನು ಕುರಿತು ಚರ್ಚಿತವಾಗಿರುವುದು. ಸಂಸ್ಕೃತಿಯ ಚಿತ್ರಣ, ವಸ್ತು ನಿರ್ವಹಣೆ ಬರಹಗಾರ್ತಿಯರ ಇತಿಮಿತಿಗಳು, ವೈಚಾರಿಕತೆ, ಮಹಿಳೆ ಮತ್ತು ಜನಪದ ಸಾಹಿತ್ಯ, ಸಾಮಾಜಿಕ ಪ್ರಜ್ಞೆ, ಬರಹಗಾರ್ತಿಯರ ನಿಲುವು ಒಲವುಗಳನ್ನು ಕುರಿತು ಚರ್ಚಿಸಿದೆ.

"ಸಮಕಾಲೀನ ಕಥೆ-ಕಾದಂಬರಿ ಹೊಸ ಪ್ರಯೋಗಗಳು"[೧೪] ಕೃತಿಯನ್ನು ಡಾ.ಜಿ.ಎಸ್. ಆಮೂರ ಕ್ರಿ.ಶ. ೧೯೮೧ರಲ್ಲಿ ಸಂಪಾದಿಸಿದರು. ಎಚ್.ಬಿ. ಜ್ವಾಲನಯ್ಯ ಅವರು ಬೆಟ್ಟದ ಜೀವದ ಸಂವಿಧಾನ. ಅರ್ಥವ್ಯಾಪ್ತಿ, ಮರಳಿ ಮಣ್ಣಿಗೆ ವಸ್ತುವಿನ್ಯಾಸ ಕ್ರಮ ಚರ್ಚಿಸಿದ್ದಾರೆ. ಸಂಸ್ಕಾರಕ್ಕೆ ಅಪ್ರಾತಿನಿಧಿಕ ಸಂಪ್ರದಾಯ ಕುರಿತು ಆಲೋಚನೆ ಹರಿಸಿದ್ದಾರೆ. ಹಳದಿ ಮೀನು, ಕಲೆ ಮತ್ತು ತತ್ವ ಮುಕ್ತಿಯಲ್ಲಿ ವೈಯಕ್ತಿಕ ದರ್ಶನದ ವಿಶ್ಲೇಷಣೆ ನೀಡಿದ್ದಾರೆ. ಗ್ರಾಮಾಯಣದ ನವ್ಯತೆ ಮತ್ತು ಸಂಪ್ರದಾಯ. ಕುರಿತು ಆಲೋಚನೆ ಇದೆ. ವಂಶವೃಕ್ಷದ ಮೌಲ್ಯ ವ್ಯವಸ್ಥೆ ಜೊತೆಗೆ ಶಾಂತಿನಾಥ ದೇಸಾಯಿ. ಅನಂತಮೂರ್ತಿ. ಯಶವಂತ ಚಿತ್ತಾಲರ

ಕಥಾ ಸಾಹಿತ್ಯದ ಸಂಘರ್ಷದ ಸ್ವರೂಪ ವಿವರಿಸಿದೆ. ಸರಸಮ್ಮನ ಸಮಾದಿ- ಪುನರ್ ವಿಮರ್ಶೆ ಆಳಿದ ಮೇಲೆ ಮತ್ತು ಮಾನವತಾವಾದ ಕುರಿತು ಚರ್ಚೆಯಾಗಿದೆ.

'ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ'[೧೭] ಕೃತಿ ಬೆಂಗಳೂರು ವಿಶ್ವವಿದ್ಯಾಲಯದ್ದು. ಎಂಟು ಸಂಪಾದಕೀಯ ಲೇಖನಗಳಿವೆ. ಕೊನೆಯ ೨ ಲೇಖನಗಳು 'ಕಾದಂಬರಿ-೧೯೨೦-೧೯೪೭. ಎಸ್. ಅನಂತ ನಾರಾಯಣ ಕಾದಂಬರಿ ೧೯೪೭-೧೯೬೮. ಟಿ.ಆರ್. ರಾಮಭಟ್ಟರ ಲೇಖನಗಳಿವೆ. ೧೯ನೇ ಶತಮಾನದ ಕೊನೆಯಲ್ಲಿ 'ಇಂದಿರಾಬಾಯಿ' ಮತ್ತು ಇಂದಿರಾ ಎಂಬ ಸಾಮಾಜಿಕ ಕಾದಂಬರಿಗಳು ತಮ್ಮ ಸುತ್ತಲಿನ ಸಮಾಜವನ್ನು ಪರಿಚಯ ಮಾಡಿಕೊಡುವ ಪ್ರಯತ್ನವನ್ನು ಈ ಕೃತಿ ತಿಳಿಸುತ್ತದೆ.

ಸ್ತ್ರೀವಾದಿ ಸಾಹಿತ್ಯ[೧೮] ಕೃತಿ ಕ್ರಿ.ಶ.೧೯೯೪ರಲ್ಲಿ ತೇಜಸ್ವಿನಿ ನಿರಂಜನ ಹಾಗೂ ಸೀಮಂತಿನಿ ನಿರಂಜನ ಸಂಪಾದಿಸಿದ್ದಾರೆ. ಸ್ತ್ರೀವಾದಿ ವಿಮರ್ಶೆ, ಸಾಮಾಜಿಕ, ಬೌದ್ಧಿಕ ಪಂಪರೆಯನ್ನು ಪರೀಕ್ಷಿಸುವ ಒಂದು ದೃಷ್ಟಿಕೋನ. ಮಹಿಳೆಯರು ಅಧೀನತೆಯಿಂದ, ಪರಿಸ್ಥಿತಿಯಿಂದ ಬದಲಾಯಿಸುವ ಅವಶ್ಯಕತೆಯನ್ನು ಪ್ರತಿಪಾದಿಸುವದು. ಅಹಿಕರ ಸಂಬಂಧಗಳ ಮೇಲೆ ಲಿಂಗಭೇದ ಸಂಬಂಧಗಳ ಮೇಲೆ ಸಾಮಾಜಿಕ ಪರಿಕಲ್ಪನೆಯ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ವಿಮರ್ಶೆಯ ವೈಶಿಷ್ಟ್ಯ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ರೂಪಗಳು:[೧೯] ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪ್ರಸಾರಾಂಗದಿಂದ ಹೊರಬಂದಿತು. ಹೊಸಗನ್ನಡ ಸಾಹಿತ್ಯದ ವಿವಿಧ ರೂಪಗಳ ಕುರಿತ ಲೇಖನಗಳ ಗುಚ್ಛವಿದು. ಇದರಲ್ಲಿ 'ಕಾದಂಬರಿ' ಲೇಖನವನ್ನು ಡಾ. ಗುರುಪಾದ ಮರಿಗುದ್ದಿ ಪರಿಚಯಿಸಿದ್ದಾರೆ. ಮೊದಲ ಹಾಗೂ ನವೋದಯ ಪೂರ್ವ ಹಾಗೂ ನಂತರ ಕಾಲದ ಕಾದಂಬರಿಗಳ ಸಾಮಾಜಿಕ ಸ್ತರವಿನ್ಯಾಸ ಸ್ವರೂಪವನ್ನು ಸ್ಪಷ್ಟಪಡಿಸುವುದು.

ಕಾದಂಬರಿ ವಿಮರ್ಶೆ:[೨೦] ಕ್ರಿ.ಶ.೨೦೦೦ ರಲ್ಲಿ ಸಂಪಾದಿಸಿದ ಕೃತಿ. ಸಂಪಾದಕರು ಡಾ. ಅರವಿಂದ ಮಾಲಗತ್ತಿ ಸಂಪಾದಕರಾಗಿ ಡಾ.ಡಿ.ವ್ಹಿ. ಹೆಗಡೆ. ಡಾ. ನೀಲಗಿರಿ ತಳವಾರ ಕಾರ್ಯ ಮಾಡಿದ್ದಾರೆ. ಚೋಮನದುಡಿ, ದಾಟು, ವೈಶಾಖ, ಸೂರ್ಯ, ಒಡಲಾಳ, ಕುಸುಮಬಾಲೆ, ಕಾರ್ಯ, ಮಾಗಿ, ಮರಣ ಮಂಡಲ ಮಧ್ಯದೊಳಗೆ, ಹೂಲಗೇರಿಯ ರಾಜಕುಮಾರ ಕೃತಿಗಳ ಕುರಿತು ಚರ್ಚೆ ಇದೆ. ಪ್ರಬುದ್ಧ ಕರ್ನಾಟಕ ಪತ್ರಿಕೆಯ ಕಾರ್ಯ ಇಲ್ಲಿ ಮುಖ್ಯವಾದದ್ದು.

ಶತಮಾನದ ಕನ್ನಡ ಸಾಹಿತ್ಯ:[೨೧] ಕೃತಿ ಸಂಪಾದನೆ ಜಿ.ಎಚ್.ನಾಯಕ ಸಂಪಾದಿಸಿದ್ದಾರೆ. ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ವಿಮರ್ಶಾ ಲೇಖನಗಳಿವೆ. ಕಾದಂಬರಿ ೧೯೦೦-೧೯೨೫ ಸಿ.ಎನ್. ರಾಮಚಂದ್ರನ್. ಕಾದಂಬರಿ ೧೯೨೫-೧೯೫೦ ಡಾ.ಪುರುಷೋತ್ತಮ ಬಿಳಿಮಲೆಯವರ ಲೇಖನಗಳಿವೆ.

ಪಾಶ್ಚಾತ್ಯ ಪ್ರಭಾವದಿಂದ ಒಡಿದು ೧೯ನೇ ಶತಮಾನದುದ್ದಕ್ಕೂ ಶಿಕ್ಷಣದ ಪ್ರಸಾರದ ಕಾರಣ ಜನರ ವಾಚನಾಭಿರುಚಿ ಬಹಳಮಟ್ಟಿಗೆ ಬೆಳೆದದ್ದು ಸಾಮಾಜಿಕ ಪರಿವರ್ತನೆಗೆ ಎಡೆಮಾಡಿದೆ. ಸಾಮಾಜಿಕ ಸಮಸ್ಯೆ ಎತ್ತಿಕೊಂಡು ಕಾದಂಬರಿ, ಕಥೆಗಳಿಂದ ವಿಶ್ಲೇಷಿಸಲು ಸಹಾಯಕ ಸಲಕರಣೆ ಒದಗಿಸಿತು. ಸಾಮಾಜಿಕ ಸಮಸ್ಯೆಗಳು ಜನರನ್ನು ಆಕರ್ಷಿಸಿದವು. ಇಲ್ಲಿ ಗದ್ಯ ಸಾಹಿತ್ಯ ವಿಫುಲವಾಗಿ ಬೆಳೆಯಿತು. ಬಿಳಿಮಲೆಯವರ ಲೇಖನದಲ್ಲಿ ಮೊದಲ ಘಟ್ಟದ ಲೇಖಕರ ಅಸ್ಪಷ್ಟತೆಗಳೆಲ್ಲ ಮಾಯವಾದವು. ಶ್ರೇಷ್ಠ ಕೃತಿಗಳು ಬೆಳಕು ಕಂಡವು. ಆದರೆ ಗಂಭೀರ ಅಧ್ಯಯನದ ಅವಶ್ಯಕತೆ ಇಲ್ಲಿ ಕಾಣುವುದು.

'ಸಾಲು ದೀಪಗಳು:[೨೨] ಕೃತಿ ಜಿ.ಎಸ್. ಸಿದ್ದಲಿಂಗಯ್ಯ ಮತ್ತು ಎಂ.ಎಚ್. ಕೃಷ್ಣಯ್ಯರವರು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ನೂರಾ ಒಂಭತ್ತು ಲೇಖಕರ ಲೇಖನಗಳಿವೆ. ಮೊದಲ ಘಟ್ಟದ ಬಿ.ವೆಂಕಟಾಚಾರ್ಯ, ವಿಜಯ ಸುಬ್ಬರಾಜರು ಬರೆದಿದ್ದಾರೆ. ಎಂ.ಎಸ್. ಪುಟ್ಟಣ್ಣ ಕುರಿತು ಎಚ್.ಎಸ್. ಸುಜಾತ, ಕೆರೂರು ವಾಸುದೇವಾಚಾರ್ಯರ ಕುರಿತು ಜಿ.ಎಸ್. ಕಾಪಸೆ, ಗಳಗನಾಥರ ಕುರಿತು ದೇವೇಂದ್ರಕುಮಾರ ಹಕಾರಿ ಅವರ ಲೇಖನಗಳಿವೆ. ಪುಟ್ಟಣ್ಣನವರ ಸಾಮಾಜಿಕ ಕಳಕಳಿ, ಚಾರಿತ್ರಿಕ ವಿಚಾರಗಳು ವ್ಯವಸ್ಥೆ, ಕೆರೂರು ವಾಸುದೇವಾಚಾರ್ಯರ ಸಾಮಾಜಿಕ ಸುಧಾರಣಾವಾದ, ಐತಿಹಾಸಿಕ ಸಂಗತಿಗಳ ವಿಶ್ಲೇಷಣೆ ಹಾಗೂ ಗಳಗನಾಥರ ಅನುವಾದ, ಗದ್ಯ, ಸಾಹಿತ್ಯದ ವಿವರವಿದೆ.

ಎಚ್.ದಂಡಪ್ಪ ಮತ್ತು ಬಿ.ಎನ್. ಸುಮಿತ್ರಾಬಾಯಿಯವರಿಂದ ಸಂಪಾದಿಸಲ್ಪಟ್ಟ **'ಸುವರ್ಣ ಸಾಹಿತ್ಯ ವಿಮರ್ಶೆ'**[೨೩] ಕೃತಿ ಮಹತ್ವದ್ದು. ಕೃತಿಯಲ್ಲಿ ನಲವತ್ತೈದು ಲೇಖನಗಳಿದ್ದು. ಆಧುನಿಕತೆಯ ಸಮಸ್ಯೆಗಳು, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕಾದಂಬರಿ ಜಾತಕ, ಲೇಖನಗಳು ಪರ್ಯಾಯ ಆಲೋಚನೆ ಹಾಗೂ ಸಾಧ್ಯತೆ ಹುಟ್ಟು ಹಾಕಿವೆ. ವಿಮರ್ಶೆಯ ಆಯಾಮ ದೊರಕಿಸಲು ಅನುಕೂಲಕರವಾಗಿದದ್ದು. ಸಾಹಿತ್ಯ ವಿಮರ್ಶೆಯ ಪ್ರಾತಿನಿಧಿಕ ಕೃತಿಯಲ್ಲೊಂದಾಗಿದೆ.

ಕೆರೂರು ವಾಸುದೇವಾಚಾರ್ಯ:[೨೪] ಸಂಪಾದಕರು ಡಾ.ಬಾಳಾಸಾಹೇಬ ಲೋಕಾಪೂರ. ಕಾದಂಬರಿ ಕುರಿತು ಸ್ವತಂತ್ರ ಪೂರ್ವಕಾಲಿನ ಕನ್ನಡ ಕಾದಂಬರಿಗಳು ಮತ್ತು ಇಂದಿರಾ ಕಾದಂಬರಿಯ ವಸ್ತು ಸ್ವರೂಪ ಡಾ.ಗುರುಪಾದ ಮರಿಗುದ್ದಿ, ಇಂದಿರಾ ಕಾದಂಬರಿಯ ಸಾಂಸ್ಕೃತಿಕ ಸವಾಲುಗಳು ಡಾ.ಶಶಿಕಲಾ ಮೊರಬದ. ಕೆರೂರು ವಾಸುದೇವಾಚಾರ್ಯರ ಕಾದಂಬರಿಲೋಕ ಡಾ.ಶಾಮಸುಂದರ ಬಿದರಕುಂದಿ. ಅಧ್ಯಕ್ಷೀಯ ಟಿಪ್ಪಣಿ ಡಾ.ಶ್ರೀರಾಮ ಇಟ್ಟಣ್ಣನವರ ಲೇಖನಗಳನ್ನು ಒಳಗೊಂಡ ಕೃತಿ. ಒಟ್ಟಾರೆ ಇಂದಿರಾ ಕಾದಂಬರಿಯ ಸಾಮಾಜಿಕ ಸುಧಾರಣೆ, ಸವಾಲುಗಳು, ಪಾತ್ರ ಸನ್ನಿವೇಶಗಳ ನಿರ್ವಹಣೆ ಆಧುನಿಕ ಬದುಕಿನ ಪ್ರಬಲ ಗಾಳಿ ಬೀಸಿದ ಸಂಗತಿಯ ಲೇಖನಗಳನ್ನೊಳಗೊಂಡಿದೆ.

೨.೩. ಲೇಖನಗಳು:

ಸಾಹಿತ್ಯ ರೂಪಗಳ ಬಗೆಗೆ ಅವುಗಳನ್ನು ಓದುವ, ಆಲೋಚಿಸುವ, ಮಾತನಾಡುವ ಮತ್ತು ಬರೆಯುವ ಕೆಲಸ ನಡೆಯುತ್ತಾ ಬಂದಿದೆ. ಸಾಹಿತ್ಯದ ಓದು, ಆಲೋಚನೆ ಮತ್ತು ಬರವಣಿಗೆಯನ್ನು ಎಲ್ಲರು ಒಂದೇ ರೀತಿಯಲ್ಲಿ ಮಾಡುವುದಿಲ್ಲ. ಸಾಹಿತ್ಯ ಪಠ್ಯದ ಓದು ಸರಳೀಕರಿಸಿ ಸೀಮಿತ ಮಾಡಲು ಬರುವುದಿಲ್ಲ. ಸಾಮಾಜಿಕ, ರಾಜಕೀಯ ವಿದ್ಯಮಾನಗಳನ್ನು ಚರಿತ್ರೆ, ಪರಂಪರೆ, ಸಂಸ್ಕೃತಿ, ಸಾಮಾಜಿಕ ಸಂಬಂಧಗಳು, ಮೌಲ್ಯಗಳನ್ನು ಅರ್ಥಮಾಡಿಸಿರುವ, ನಂಜಿಸಿರುವ ಕ್ರಮವಾಗಿದೆ. ವಿಧಾನ ಮತ್ತು ನಂಜಿಕೆ ಸಾಹಿತ್ಯವನ್ನು ಹೇಗೆ ಅರ್ಥೈಸಿಕೊಳ್ಳಬೇಕು ಎಂಬ ಪ್ರಸ್ತಾಪವನ್ನು ರೂಪಿಸಿದೆ. ಸಂಶೋಧಕರು ಎದುರಿಸುವ ಸಮಸ್ಯೆಗಳಿಗೆ ವಿವಿಧ ವಿದ್ವಾಂಸರ ಲೇಖನಗಳು ಪುಷ್ಟಿ ತುಂಬುವ ಕಾರ್ಯ ಮಾಡಿದೆ.

ಡಾ.ಎಚ್. ತಿಪ್ಪೇರುದ್ರಸ್ವಾಮಿಯವರ **"ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ"**[೨೫] ಕೃತಿಯಲ್ಲಿ ಹತ್ತು ಲೇಖನಗಳಿದ್ದು, ಕಾದಂಬರಿಯ ಸಮಕಾಲೀನ ವಾಸ್ತವಿಕತೆ, ಸಾಮಾಜಿಕ ಸಮಸ್ಯೆಯ ಆಗರವಾಗಿವೆ. ಕಾದಂಬರಿ ಇಂದು ಸಾಮಾಜಿಕ ಪ್ರಜ್ಞೆಯನ್ನು ಸಾಹಿತಿಗಳು ಅರಗಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದು ಇದೆ. ಸಾಮಾಜಿಕ ಚಳುವಳಿಯಾಗಿ ಪ್ರಜ್ವಲಿಸುವುದು. ಸಮಕಾಲೀನತೆ, ಸಂಕೀರ್ಣತೆ ಸಂಗತಿಗಳು ಕಾಣುವವು. ಹಳ್ಳಿ ಮತ್ತು ನಗರ ಸಮಕಾಲೀನತೆಯನ್ನು ಗಮನಿಸಲಾಗಿರುವ ಸಂಗತಿಗಳನ್ನು ಕಟ್ಟಿಕೊಟ್ಟಿದ್ದು ಗಮನಾರ್ಹ.

ಜಿ.ಎಚ್.ನಾಯಕರ 'ನಿಜದನಿ'[೨೬] ಕೃತಿ ಮಹತ್ವದ ಲೇಖನಗಳ ಗುಚ್ಛ. ಎಂಟು ಲೇಖನಗಳಿರುವ ಕೃತಿಯಲ್ಲಿ "ಕನ್ನಡದ ಮೊಟ್ಟ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಇಂದಿರಾಬಾಯಿ" ಹಾಗೂ "ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು" ಕೆಲವು ವಿಚಾರಗಳು ಎರಡು ಲೇಖನಗಳು ಪ್ರಮುಖವಾದವು. 'ವ್ಯಕ್ತಿ ಪರನೆಲೆ' 'ಮೌಲ್ಯಪರ ನೆಲೆ'ಯಲ್ಲಿ ಸತ್ಯ ಮತ್ತು ನಿರ್ಮಲ ಚಿತ್ರಗಳ ಉದ್ದೇಶ ಚರ್ಚಿತ 'ಸುಧಾರಣಾಪರ' ನೆಲೆಯು ಚರ್ಚಿತ ಸಂಗತಿಯಾಗಿದೆ. ಗುಲ್ವಾಡಿಯವರ ಇಂದಿರಾಬಾಯಿ ಕಾದಂಬರಿಯ ಮೇಲೆ ಸಮಾಜ ಸುಧಾರಣಾ ಚಳುವಳಿ ಪ್ರಭಾವ, ಕಲಾತ್ಮಕತೆ, ಸಹಜತೆ, ಮತ ಪ್ರಚಾರಕಲೆ ಬದಲಾವಣೆಗಳಲ್ಲಿ ಸಮರ್ಥಿಸುವಂತೆ ಗೋಚರಿಸುವ ವಿಚಾರಲಹರಿಯನ್ನು ಸಮರ್ಥಿಕರಿಸಿರುವುದು ಕಾಣುವುದು.

'ವಿಮರ್ಶೆಯ ವಿನಯ ಕಾದಂಬರಿ'[೨೭] ಕೃತಿ ಕೀರ್ತಿನಾಥ ಕುರ್ತುಕೋಟಿಯವರ ಬಹುಮೂಲ್ಯ ಕೃತಿ. ವಿವಿಧ ಲೇಖಕರ ಕುರಿತು ಲೇಖನಗಳಿವೆ. 'ಕೆರೂರು ವಾಸುದೇವಾಚಾರ್ಯರ ಕಾದಂಬರಿಗಳು' ಲೇಖನವು 'ಇಂದಿರಾ' ಕಾದಂಬರಿಯ ಶಕ್ತಿ ದುರ್ಬಲತೆಗಳ ಚರ್ಚೆ ಇದೆ. ಗುಣ ದೋಷಗಳಿಗೆ ಸಮರ್ಥವಾದ ಚರ್ಚೆ ಇದೆ. ಕಾದಂಬರಿಯ ವಿಷಯ ವಸ್ತು ಸಮಾಜದ ಮೇಲುವರ್ಗಕ್ಕೆ ಶಿಷ್ಟತೆಯ

ಅಭಿವ್ಯಕ್ತಿ ಸಾಹಿತ್ಯ ರೂಪದಲ್ಲಿ ಕಂಡಿದೆ. ಕಾದಂಬರಿಯ ವೈವಿಧ್ಯಪೂರ್ಣತೆ ವಿಷಯ ಸಂಗತಿ ಇಲ್ಲಿ ಕಾಣುವುದು.

'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ'[೨೮] ಎಂಬ ಕೃತಿಯನ್ನು ಕೀರ್ತಿನಾಥ ಕುರ್ತುಕೋಟಿಯವರ ರಚನೆ. ಇಲ್ಲಿರುವ 'ಕಾದಂಬರಿ' ಕುರಿತು ಲೇಖನಗಳಿವೆ. ನವೋದಯ ಪೂರ್ವದಿಂದ ಬಂಡಾಯ ಸಾಹಿತ್ಯಪಂಥಗಳವರೆಗೆ ಕಾದಂಬರಿ ಕುರಿತು ವಿಶ್ಲೇಷಣೆ ಕಾಣುವುದು. ಎಂ.ಎಸ್.ಪುಟ್ಟಣವರ ಶೈಲಿ, ಬೋಳೂರು ಬಾಬುರಾವರ ಅಸಹಜತೆ, ಕೆರೂರು ವಾಸುದೇವಾಚಾರ್ಯರ ವಿನೋದಪ್ರಿಯತೆ ಈ ಮೂರು ಕಾದಂಬರಿಕಾರರಲ್ಲಿ ಕಾಣಬರುವ 'ವಾಸ್ತವ ಮಾರ್ಗ' ಸಾಮಾಜಿಕತೆ ಅರಿವು, ಆದರ್ಶತನ, ಕೌಟುಂಬಿಕತೆ, ಬುದ್ಧಿಯ ವಿಲಾಶ ಕಲ್ಪನಾ ಶಕ್ತಿ ಅನಾವರಣ, ಸಮಗ್ರತೆ, ವಿನೋದಪ್ರಿಯತೆ ಕಾಣುವುದು. ಭಾಷಾ ಸರಣಿ ಬಳಕೆ, ಉಪಯೋಗ, ಅದರ ವಾಚ್ಯಾರ್ಥ ದುರ್ಬಲವಾದ ಸಂಗತಿಯನ್ನು ಸರಳತೆ ಮತ್ತು ನಿರಸತೆಯನ್ನು ಗುರುತಿಸಿದ್ದು ಇಲ್ಲಿ ಕಾಣುವುದು.

ಪ್ರೊ.ಜಿ.ಎಚ್. ನಾಯಕರು ರಚಿಸಿದ 'ಕೃತಿ ಸಾಕ್ಷಿ'[೨೯] ಕೃತಿಯು ಹದಿನಾಲ್ಕು ಲೇಖನಗಳ ಸಂಗ್ರಹ, ಇಲ್ಲಿ ಧಾರ್ಮಿಕ ಅದಃಪತನ, ವಿಧವಾ ವಿವಾಹ, ಬಾಲ್ಯವಿವಾಹ, ಪುನರ್‌ವಿವಾಹ, ವೈಯಕ್ತಿಕ ಸಜ್ಜನಿಕೆ ಪ್ರತಿಷ್ಠೆಗಳಿಗಿಂತ ಸಾಹಿತ್ಯ ವಿಮರ್ಶೆ ಶೋಧಿಸುವ ಸತ್ಯ ಘನವಾದ ಸಂಗತಿಯನ್ನು ಈ ಕೃತಿ ಪ್ರತಿಪಾದಿಸುವುದು.

'ಸಾಹಿತ್ಯೋಪಾಸನೆ'[೩೦] ಕೃತಿಯು ರಂ.ಶ್ರೀ. ಮುಗಳಿಯವರ ಲೇಖನಗಳಿಂದ ಕೂಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬೆಳಕು ಕಂಡಿದೆ. ಒಟ್ಟಾರೆ ಕೃತಿಯಲ್ಲಿ ಹನ್ನೆರಡು ಲೇಖನಗಳಿವೆ. 'ಕನ್ನಡ ಕಾದಂಬರಿಗಳು' ಲೇಖನ ಮಹತ್ವದ್ದಾಗಿದೆ. ನವೋದಯ ಪೂರ್ವದಿಂದ ಇತ್ತೀಚಿನ ಕಾದಂಬರಿಗಳ ಕುರಿತು ಲೇಖನಗಳಿವೆ. ಕಾದಂಬರಿ ಗುರಿ, ಬಗ್ಗೆ, ವಿಧಗಳ ಕುರಿತು ಚರ್ಚಿತವಾಗಿದೆ. ಕಾದಂಬರಿ ಜೀವನದ, ವಿಸ್ತಾರ, ವೈವಿಧ್ಯಗಳ ಗಾಂಭೀರ್ಯ ಸಂಗತಿಗಳ ವಿಶ್ಲೇಷಣೆ ಇದೆ.

ಸಾಹಿತ್ಯ ಕಥನ[೩೧] ವಿಮರ್ಶಾ ಲೇಖನಗಳ ಸಂಕಲನ ಡಾ.ಡಿ.ಆರ್. ನಾಗರಾಜ ರಚಿಸಿದ್ದು. ಕೃತಿಯಲ್ಲಿ ಮೂವತ್ತೆಂಟು ಲೇಖನಗಳಿದ್ದು, ನಾಲ್ಕು ಭಾಗಗಳಲ್ಲಿ ರಚಿತಗೊಂಡಿದೆ. ಕನ್ನಡ ಸಾಹಿತ್ಯದ ವಿವಿಧ ಲೇಖಕರು ರಚಿಸಿದ ಕಾದಂಬರಿಗಳ ಕುರಿತು ವಿಮರ್ಶಾ ಲೇಖನಗಳಿವೆ. ಅದರಲ್ಲೂ ಕನ್ನಡದ ಮೊದಲ ಕಾದಂಬರಿಗಳಲ್ಲಿ 'ಆದರ್ಶ ಮತ್ತು ವಾಸ್ತವ' ಲೇಖನ ಪ್ರಮುಖವಾದದ್ದು.

ಸಾಂಪ್ರದಾಯಕ ಕಥನ ಶೈಲಿ, ಸಾಮಾನ್ಯ ತಂತ್ರಗಾರಿಕೆ, ಕಾದಂಬರಿಕಾರರ ಮೌಲ್ಯಗಳು, ಹೊಸ ಯುಗದ ಮನ್ವಂತರಗಳು, ಬಂಡವಾಳಶಾಹಿ ಟೀಕೆಗೆ ಗುರಿಯಾದ ರೀತಿಯನ್ನು ಅವಲೋಕಿಸಲಾಗಿದೆ. ಆದರ್ಶ ಮತ್ತು ವಾಸ್ತವಿಕ ಸಂಗತಿಗಳ ಅನಾವರಣವಿದೆ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದ 'ಕನ್ನಡ

ಕಾದಂಬರಿ ಸಮೀಕ್ಷೆ*, ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೊ ಮಹಾರಾಯ, ಪ್ರಜಾವಾಣಿ ಲೇಖನ ಶ್ರೀಧರಮೂರ್ತಿ. 'ಸಂಕ್ರಮಣ' ಪತ್ರಿಕೆಯ ಗುಲ್ವಾಡಿ ವೆಂಕಟರಾಯ ಜಾತಿ*, ಸಂಕ್ರಮಣ ಪತ್ರಿಕೆಯ ಸಂಪಾದಕೀಯ ಚಂದ್ರಶೇಖರ ಪಾಟೀಲ, ಟಿ.ಪಿ. ಅಶೋಕರವರ ಅಂತರ್ಯ, ಸಂಯುಕ್ತ ಕರ್ನಾಟಕದ 'ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಹಾಗೂ ಹೊಸ ಓದು, ಮರು ಓದುಗಳಿಗೆ ಆಹ್ವಾನವಾಗಿದೆ'*. ಶ್ರೀನಿವಾಸ ಹಾವನೂರರ 'ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯ ಹಿನ್ನೆಲೆ'ಯಲ್ಲಿ*, ಪ್ರಬುದ್ಧ ಕರ್ನಾಟಕ ಕೆ.ವ್ಹಿ. ನಾರಾಯಣ 'ಘಟನೆಗಳ ನಿಷ್ಠುರತೆ ಮತ್ತು ಮಾಡಿದ್ದುಣ್ಣೊ ಮಹಾರಾಯ'*, ಕೆ.ವಿ.ನಾರಾಯಣ 'ಮುಸುಕು ತೆಗೆಯೇ ಮಾಯಾಂಗನೆ'* ಪ್ರಜಾವಾಣಿ ಲೇಖನಗಳು ಅಧ್ಯಯನಕ್ಕೆ ಪೂರಕ ವಾತಾವರಣ ನಿರ್ಮಿಸುತ್ತವೆ.

೨.೪ ಕಿರು ಪ್ರಬಂಧಗಳು – (ಎಂ.ಫಿಲ್.):

ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಕೃತಿ ಮತ್ತು ಕೃತಿಯ ಪೂರಕ ಓದು, ವಸ್ತು, ಆಶಯ, ಅಭಿವ್ಯಕ್ತಿಗಳು ಬದಲಾದಂತೆ ಓದುವ, ಆಲೋಚಿಸುವ, ಅಭಿವ್ಯಕ್ತಿಸುವ ಕ್ರಮಗಳು ಬದಲಾಗುವವು. ಓದುವ ಆಲೋಚನೆ ಬದಲಾದಂತೆ ಮೇಲಿನ ಕ್ರಮಗಳು ವಸ್ತು, ಆಶಯ, ಅಭಿವ್ಯಕ್ತಿ ಬೇರೆ ಬೇರೆಯಾಗಿ ರೂಪುಗೊಳ್ಳುತ್ತಾ ಹೋಗುವವು. ಸಾಹಿತ್ಯ ರಚನೆಯ ಸಂದರ್ಭ ಹಾಗೂ ಕೃತಿಕಾರನ ಹೊಂದಿಸುವ ಉದ್ದೇಶದ ಪರಿಧಿ ಬಹಳ ತೆಳುವಾಗಿರುವುದು. ಅವುಗಳ ಸಂಗತಿ ಅರಿಯಲು ಕಿರು ಪ್ರಬಂಧಗಳು ಪೂರಕ.

ಸ್ವಾತಂತ್ರ್ಯ ಪೂರ್ವದ ಕನ್ನಡದ ಸಾಮಾಜಿಕ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಸಂಘರ್ಷ[೨೨] ಕಿರು ಪ್ರಬಂಧ ಕೆ.ಟಿ. ಲಕ್ಷ್ಮಣಗೌಡ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಕೃತಿಯು 'ಸಂಪ್ರದಾಯ' ಮತ್ತು 'ಸಂಘರ್ಷ' ಗಳನ್ನು ಗಮನದಲ್ಲಿರಿಸಿಕೊಂಡು ಅವುಗಳ ಸ್ವರೂಪ, ಪರಂಪರೆಯ ಸ್ಪಷ್ಟೀಕರಣ, ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿ ಹಾಗೂ ಕನ್ನಡ ಕಾದಂಬರಿಗಳು ಪೂರ್ವ ಪಶ್ಚಿಮದ ವಿಚಾರ ಧಾರೆಗಳು ಗಟ್ಟಿಗೊಳ್ಳಲು ಪ್ರಯತ್ನಿಸುತ್ತಿದ್ದ ಸಂದರ್ಭ ಪರಿಶೀಲನೆ ಇದೆ. ಧಾರ್ಮಿಕ ಸಂದರ್ಭಗಳು, ಸಮಾಜ ಪರಿವರ್ತನೆಯಲ್ಲಿ ವಿಜ್ಞಾನದ ಪರಿಚಯ ಇಂಗ್ಲಿಷ್ ವಾಙ್ಮಯದ ಪರಿಶೀಲನೆ ಇದೆ. ಮಿಷನರಿಗಳು ರಾಜಾರಾಮ ಮೋಹನರಾಯರ ಬ್ರಹ್ಮಸಮಾಜ, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿಯವರ ಸಾಮಾಜಿಕ, ಧಾರ್ಮಿಕ ಸುಧಾರಣಾ ಕಾರ್ಯವನ್ನು ವಿಶ್ಲೇಷಣೆ ಮಾಡಲಾಗಿದೆ. ಪಾಶ್ಚಿಮಾತ್ಯ ಸಾಹಿತ್ಯ, ಸಂಸ್ಕೃತಿಗಳ ಪ್ರಭಾವ, ವಿದ್ಯಾಭ್ಯಾಸ ಕ್ರಮ, ಹಿಂದೂ ಧರ್ಮ ಪುನರುತ್ಥಾನ ಪ್ರಯತ್ನಗಳು, ಜಾಗೃತ ಭಾವನೆ, ಬರವಣಿಗೆಯ ವಿಚಾರ ಸರಣಿಯ ಪ್ರಮುಖವಾದ ಚರ್ಚೆ ಇದೆ.

೨.೫ ಸಂಶೋಧನಾ ಪ್ರಬಂಧಗಳು (ಪಿಎಚ್.ಡಿ.):

ಸಂಶೋಧನೆಯ ಆಯಾಮವನ್ನು ಅರಿಯಬೇಕಾದರೆ ಆಶಯ ಮತ್ತು ಧೋರಣೆ ಮುಖ್ಯ. ಧೋರಣೆಯನ್ನು ಗುರುತಿಸಬೇಕಾದರೆ ಆಯಾ ಸಮುದಾಯ, ಜಾತಿ, ಧರ್ಮ ಲಿಂಗ ಮುಂತಾದವುಗಳ ಒಳ ಅಪೇಕ್ಷೆಗಳಾಗಿಯೂ ಸಾಹಿತ್ಯದಲ್ಲಿ ವ್ಯಕ್ತವಾಗಿರುತ್ತವೆ. ಆಯಾ ಸಮುದಾಯ, ಜಾತಿ ಮುಂತಾದವುಗಳನ್ನು ಪ್ರತಿನಿಧಿಸುವ ಬರಹಗಾರರು ಆ ಸಮುದಾಯಗಳ ವಸ್ತು ಸ್ಥಿತಿಯನ್ನು ಜೊತೆಗೆ ಸಾಮಾನ್ಯ ಆಶೋತ್ತರಗಳನ್ನು ತಮ್ಮ ಕೃತಿ, ಲೇಖನಗಳಲ್ಲಿ ದಾಖಲಿಸಿರುತ್ತಾರೆ. ಜಾತಿ ಸಮುದಾಯಗಳ ಆಶಯ ಆಕ್ಷೇಪಗಳನ್ನು ಈ ಪಾತ್ರಗಳ ಮೂಲಕ ದಾಖಲಿಸಿದ್ದಾರೆಂಬ ತೀರ್ಮಾನಕ್ಕೆ ಬರಲಾಗುತ್ತದೆ. ಇಂತಹ ಸರಳ ತೀರ್ಮಾನಗಳನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ.

ಕೆಲವರು ಕೃತಿಯನ್ನು ಒಂದು ಸಾರಿ ಓದಿದಾಗ ಅಲ್ಲಿ ಇರುವ ವಿವರಗಳನ್ನು ಗಮನಿಸಿ ವಿವರಗಳನ್ನು ಗ್ರಹಿಸಿ ಸಾಮಾಜಿಕ ಸಮಸ್ಯೆಗೆ ಪರಿಹಾರ ಕಾಣಲು ಪ್ರಯತ್ನಿಸಿದ್ದಾರೆ. ಆ ಪ್ರಯತ್ನ ಪೂರಕವಾದ ಕೃತಿಗಳನ್ನು ಒಂದೊಂದಾಗಿ ಗಮನಿಸಿದಾಗ ಆ ಸಂಗತಿ ಮತ್ತಷ್ಟು ಹೊಸ ಆಲೋಚನೆಗೆ ಮಾರ್ಗ ಸೂಚಿಸಬಹುದು.

'ಹೊಸಗನ್ನಡ ಸಾಹಿತ್ಯದ ಉದಯಕಾಲ'[೩೩] ಎಂಬ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ರಾ.ಯ. ಧಾರವಾಡಕರ ಉತ್ತರ ಕರ್ನಾಟಕ ಅನುಲಕ್ಷಿಸಿ ಸಂಶೋಧನ ಪ್ರಬಂಧ ಮಂಡಿಸಿದ್ದಾರೆ. ಕೃತಿಯು ಉತ್ತರ ಕರ್ನಾಟಕದ ಗ್ರಂಥಕರ್ತರ ಕುರಿತು ಮಾಹಿತಿ ಒದಗಿಸುವುದು ಮತ್ತು ಗ್ರಂಥಗಳ ಮಾಹಿತಿ ನೀಡುವುದು. ಕೇವಲ ಉತ್ತರ ಕರ್ನಾಟಕ ಅನುಲಕ್ಷಿಸಿದ್ದೆ ಅದರ ಕೊರತೆ. ತರಬೇತಿ ಕೇಂದ್ರದಲ್ಲಿ ಪಡೆದ ಸದುಪಯೋಗದ ಜೊತೆಗೆ ಕನ್ನಡ ಸಾಹಿತ್ಯ ಕಣಜ ತುಂಬಲು ಮರಾಠಿ, ಸಂಸ್ಕೃತ, ಬಂಗಾಲಿ, ಇಂಗ್ಲಿಷ್ ಹೀಗೆ ಅನ್ಯಭಾಷೆಯಿಂದ ಪಡೆದ ಸಂಗತಿಗಳ ಚರ್ಚೆ ಕಂಡುಬರುವುದು. ಕೃತಿಯಲ್ಲಿ ವಸ್ತುನಿಷ್ಠದಿಂದ ವ್ಯಕ್ತಿ ನಿಷ್ಠವಾದ ಸಂದರ್ಭ ಕಾಣುವುದು. ಸ್ವತಂತ್ರ ಕಾದಂಬರಿಗಳ ಆಗಮನ, ಗದ್ಯಕ್ಕೆ ಪ್ರಾಮುಖ್ಯತೆ ಬಂದಿದ್ದು, ಸಾಹಿತ್ಯ ಶೈಲಿ ರೂಪುಗೊಂಡಿದ್ದು, ಸ್ವತಂತ್ರ ಕಾದಂಬರಿ ಪ್ರಕಾರ ಪ್ರವೇಶ ಪಡೆದದ್ದು, ಧಾರ್ಮಿಕ ಪರಿಸರ, ಆಗಮನದ ಸ್ಥಿತಿಗತಿ ಅರಿಯಲು ಸಹಾಯಕವಾಗಿದೆ.

'ಗಳಗನಾಥರು ಮತ್ತು ಅವರ ಕಾದಂಬರಿಗಳು'[೩೪] ಡಾ.ಕೃಷ್ಣಮೂರ್ತಿ ಕಿತ್ತೂರರವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಾದರ ಪಡಿಸಿದ ಪ್ರಬಂಧ. ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಅದರಲ್ಲೂ ಅನುವಾದ ಕ್ಷೇತ್ರದ ತುಂಬಾ ಮಹತ್ವದ್ದು. ವೆಂಕಟೇಶ ತಿರಕೋ ಕುಲಕರ್ಣಿ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ತಮ್ಮ ಕಾದಂಬರಿಗಳ ಮೂಲಕ ಅಸಂಖ್ಯ ಓದುಗರನ್ನು ಸೃಷ್ಟಿಸಿದರು. ಶೈಕ್ಷಣಿಕ ಸಾಮಾಜಿಕ, ಬರಹಗಳಿಗೂ ಹೆಸರಾಗಿದ್ದ ಗಳಗನಾಥರು ಕನ್ನಡಕ್ಕೆ

ಮೊಟ್ಟ ಮೊದಲಬಾರಿಗೆ ಬಂಗಾಳಿ ಮರಾಠಿ ಕಾದಂಬರಿಗಳನ್ನು ಪರಿಚಯಿಸಿದರು. ಸ್ವಭಾಷೆಯ ಮೇಲಿನ ಅನಾಸ್ಥೆ-ಅನಾದರಗಳನ್ನು ತೊಡೆದು ಹಾಕಿ ಪರಭಾಷಾ ವ್ಯಾಮೋಹವನ್ನು ನೀಗಿಸುವ ಕಾರ್ಯಗಳಗನಾಥರಿಂದಾದುದು ಎಂಬ ಸಂಗತಿಯ ವಿವರವಿದೆ. ಮರಾಠಿ-ಕನ್ನಡ ಬಾಂಧವ್ಯದ ಸ್ನೇಹ ಸೇತುವೆಯಾಗಿ ಮೂಡಿ ಬಂದದ್ದು ಸ್ತುತ್ಯರ್ಹವಾದ ಕಾರ್ಯವಾಗಿದೆ.

'ಎಂ.ಎಸ್.ಪುಟ್ಟಣ್ಣ ಒಂದು ಅಧ್ಯಯನ'[೩೫] ಡಾ.ಎಚ್.ಎಸ್. ಸುಜಾತಾರವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ. ಈ ಕೃತಿಯನ್ನು ಅನುಲಕ್ಷಿಸಲಾಗಿ ಎಂ.ಎಸ್. ಪುಟ್ಟಣ್ಣ ತಮ್ಮ ಕಾಲದ ಸವಾಲುಗಳನ್ನು ಅದರ ಅಂತರ್ಯವನ್ನು ಸೀಳುನೋಟದಿಂದ ತಿಳಿದು ಅಗತ್ಯವಾಗಿ ಮಾಡಬೇಕಾದ ಕಾರ್ಯಗಳ ಬಗ್ಗೆ ನೀಲ ನಕ್ಷೆಯನ್ನು ತಯಾರಿಸಿಕೊಂಡು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದರು. ಪುನರುಜ್ಜೀವನಕ್ಕೆ ಶ್ರಮಿಸಿದ ಪರಿಯನ್ನು ಸಾಂಸ್ಕೃತಿಕವಾಗಿ ವಿಭಿನ್ನತೆಯ ಮೌಲ್ಯಗಳ ಬಗ್ಗೆ ಗಟ್ಟಿ ನಿಲುವನ್ನು ಚರ್ಚಿಸಿದ್ದಾರೆ. ಪತ್ರಿಕೋದ್ಯಮ, ಕಾದಂಬರಿ, ಜೀವನ ಚರಿತ್ರೆ, ಸಂಶೋಧನೆ, ಪತ್ರರಚನೆ, ಲೇಖನಗಳಲ್ಲಿ ಮೊದಲಾದ ಸಂಗತಿಗಳ ಬಗ್ಗೆ ತಮ್ಮ ಲೇಖನಗಳಲ್ಲಿ ಬೆಳಕು ಚೆಲ್ಲಿದ್ದಾರೆ. ಜೊತೆಗೆ ಆ ಕಾಲದ ಸಾಮಾಜಿಕ ಹಾಗೂ ಜಾನಪದ ವಿಚಾರಗಳ ಬೆಡಗು ಭಿನ್ನಾಣವನ್ನು ಕುರಿತು ಅಧ್ಯಯನವಿದೆ.

ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ[೩೬] ಕೃತಿ ಡಾ. ಹರಿಕೃಷ್ಣ ಭರಣ್ಯ ಅವರು ಮದರಾಸು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ

ಈ ಕೃತಿಯಲ್ಲಿ ಅನುವಾದಿತ ಕಾದಂಬರಿಗಳು ಬಂಗಾಲಿ, ತೆಲುಗು, ಮಲಯಾಳಂ, ಮರಾಠಿ, ಇಂಗ್ಲಿಷ್‌ದಿಂದ ಬಂದ ಮಾಹಿತಿ ವಿಶ್ಲೇಷಣೆ ಇದೆ. ಕ್ರಮವಾಗಿ ಐತಿಹಾಸಿಕ ಪೌರಾಣಿಕ, ಪತ್ತೇದಾರಿ ಹಾಗೂ ಇತರೆ ಎಂಬ ವಿಭಾಗ ಕ್ರಮದಲ್ಲಿ ಚರ್ಚೆ ಇದೆ. ಸ್ವತಂತ್ರ ಕಾದಂಬರಿ ವಿಭಾಗದಲ್ಲಿ ಪೌರಾಣಿಕ ಐತಿಹಾಸಿಕ, ಸ್ವತಂತ್ರ ಸಾಮಾಜಿಕ ಕಾದಂಬರಿ ವಿಶ್ಲೇಷಣೆ ಇದೆ. ಹೊಸಗನ್ನಡ ನಾಟಕ ಪರಂಪರೆಯಲ್ಲಿ ಪೌರಾಣಿಕ ನಾಟಕಗಳು, ಸಾಂಕೇತಿಕ ನಾಟಕಗಳು ಮರಾಠಿ, ಬೆಂಗಾಲಿ, ಇಂಗ್ಲಿಷ್‌ನಿಂದ ದೊರೆತ ವಿವರವಿದೆ. ಸ್ವತಂತ್ರನಾಟಕ ವಿಭಾಗದಲ್ಲಿ ಸಾಮಾಜಿಕ ಹಾಗೂ ದುರಂತ ನಾಟಕಗಳ ಸಮೀಕ್ಷೆ ಇಲ್ಲಿ ಕಾಣುವುದು. ಮರಾಠಿ, ಬಂಗಾಲಿ, ತೆಲುಗು ಮತ್ತು ಇಂಗ್ಲಿಷ್‌ದಿಂದ ಕನ್ನಡಕ್ಕೆ ಬಂದ ಜೀವನ ಚರಿತ್ರೆಗಳ ವಿಶ್ಲೇಷಣೆಯು ಕಾಣುವದು. ಭಾಷೆ, ಮುದ್ರಣ ವ್ಯಾಕರಣ ನಿಘಂಟು, ಪತ್ರಿಕೋದ್ಯಮ, ಧರ್ಮ-ತತ್ವಗಳ ಪಾತ್ರ ಚಿತ್ರಣದ ಚಿತ್ರಿತವಾಗಿವೆ. ಕೊನೆಯ ಭಾಗದಲ್ಲಿ ಭಾವಗೀತೆ, ದೇಶಭಕ್ತಿ ಮತ್ತು ಸಾಮಾಜಿಕ ಹಾಡುಗಳು, ಜೋಗುಳ, ನಡತೆಯ ಹಾಡುಗಳು, ಹಳೆಯ ಶೈಲಿಯ ಪದ್ಯಗಳು, ಮಕ್ಕಳ ಗೀತೆ, ಕಥನ ಕವನಗಳ ಚರ್ಚೆಯಿದೆ. ಇವೆಲ್ಲವುಗಳ ಜೊತೆ ಶಿಕ್ಷಣ ರಾಜನೀತಿ, ಧರ್ಮ-ತತ್ವ, ವೇದಾಂತ, ವ್ಯವಹಾರ, ಅಡುಗೆ, ಆರೋಗ್ಯ, ಕೃಷಿ, ಸಂಗೀತ ಕಲೆಗಳ ಶಕುನ-ಸಾಮುದ್ರಿಕ, ಜ್ಯೋತಿಷ್ಯ ಕುರಿತು ವಿಶ್ಲೇಷಣೆಯಿದೆ.

ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು[೩೭] ಕೃತಿಯು ಡಾ.ಮಹಾದೇವ ಕಣವಿಯವರು ಕರ್ನಾಟಕ ವಿಶ್ವವಿದ್ಯಾಯಕ್ಕೆ ಸಲ್ಲಿಸಿದ್ದಾರೆ. ಪ್ರಬಂಧವು ಕಾದಂಬರಿಯ ಬೆಳವಣಿಗೆ ಕನ್ನಡದಲ್ಲಿ ಬೆಳೆದು ಬಂದ ರೀತಿ. ಕಾದಂಬರಿಯ ವಿಭಾಗ ಕ್ರಮದ ರೀತಿಯ ವಾದಗಳು, ಪ್ರಾದೇಶಿಕ ಕಾದಂಬರಿ ಲಕ್ಷಣ, ಪ್ರಾತಿನಿಧಿಕ ಕಾದಂಬರಿಗಳ ವೈಲಕ್ಷಣಗಳ ಸಮಗ್ರ ವಿಮರ್ಶೆ ಇದೆ. ಭವಿಷ್ಯದ ಕಾದಂಬರಿಗಳ ರೂಪುರೇಷಗಳು ಕನ್ನಡ ಪ್ರಾದೇಶಿಕ ಕಾದಂಬರಿಗಳ ಭವಿಷ್ಯ ಕುರಿತು ವಿಶ್ಲೇಷಣೆ ಇದೆ. ಇತರ ಭಾಷೆಯ ಪ್ರಾದೇಶಿಕ ಕಾದಂಬರಿಗಳೊಂದಿಗೆ ಸಂವೇದನೆ ಮತ್ತು ಸಹ ಸ್ಪಂದನದ ಚರ್ಚೆ ಕಾಣುವದು. ರಾಷ್ಟ್ರೀಯವಾದ, ಆದರ್ಶವಾದದಿಂದ ಪ್ರೇರಿತವಾದ ಸಾಮಾಜಿಕ ಸಂಗತಿಗಳ ಚರ್ಚೆ ಕಾಣುವದು. ಕನ್ನಡ ಕಾದಂಬರಿಗಳ ಬೆಳವಣಿಗೆಯಲ್ಲಿ ಮಹಿಳೆಯರ ಪಾಲು ಇಲ್ಲಿ ಚರ್ಚಿತ. ಬರಹಗಾರ್ತಿಯರು ತೀರಾ ಸೀಮಿತ ವಲಯದಲ್ಲಿ ಬರೆದಿದ್ದಾರೆ. ಸ್ತ್ರೀ ಸ್ವಾತಂತ್ರ್ಯ, ವರದಕ್ಷಿಣೆ, ಹೆಣ್ಣಿನ ಶೋಷಣೆಗಳ ಬಗ್ಗೆ ವೇದಿಕೆಗಳ ಮೇಲೆ ಮಾತನಾಡುವ ಮತ್ತೆ ಅವರೆ ಅದಕ್ಕೆ ಹೊಂದಿಕೊಂಡಿರುವ ಸುಳಿವು ವಿವರವಿದೆ. ಪ್ರಾದೇಶಿಕ ಕಾದಂಬರಿಗಳ ಭಾಷೆ ಭಾಷಾ ಪ್ರಭೇದಗಳು. ಜೊತೆಗೆ ಪ್ರಾದೇಶಿಕ ಕಾದಂಬರಿಗಳ ಬದಲಾಗುವ ಭಾಷೆ ಸಂವೇದನೆ ಕುರಿತು ಚಿತ್ರಣವಿದೆ.

ಆ ಕಾಲಘಟ್ಟದ ಕಾದಂಬರಿಗಳಲ್ಲಿ ಪಾತ್ರಚಿತ್ರಣಗಳು, ರೀತಿ ರಿವಾಜುಗಳು ಹವ್ಯಾಸಗಳು ಜನ ಜೀವನದ ದರ್ಶನವಿದೆ. ಕೊನೆಯದಾಗಿ ತರಲೆಯ ಪ್ರಾರಂಭ, ದುರಂತದ ಸಂಗತಿಗಳ ಚರ್ಚೆಯು ಅಲ್ಲಲ್ಲಿ ಕಾಣುವುದು. ಕೊನೆಯಲ್ಲಿ ಭಾಷೆಯ ಶೈಲಿ, ವಿಷಯ ವಸ್ತುಗಳ ಕುರಿತು ವಿಶ್ಲೇಷಣೆ ಇದೆ.

'ಕನ್ನಡ ಕಥನ ಸಾಹಿತ್ಯ: ಕಾದಂಬರಿ[೩೮] ಎಂಬ ಸಂಶೋಧನಾ ಕೃತಿ ಜಿ.ಎಸ್.ಅಮೂರ ಅವರದು. ಕನ್ನಡ ಕಾದಂಬರಿಗಳ ಬಗ್ಗೆ ಸವಿಸ್ತಾರವಾದ ಚರ್ಚೆ ಈ ಕೃತಿಯಲ್ಲಿ ಮೂಡಿ ಬಂದಿದೆ. ವಿಶ್ಲೇಷಣೆ ಪಾಂಡಿತ್ಯ ವಿಸ್ತಾರವಾದದ್ದು. ಭಾರತೀಯ ಸಂದರ್ಭ ಮತ್ತು ಕಾದಂಬರಿ ಸ್ವರೂಪ, ಸಾರ್ವತ್ರಿಕತೆಯನ್ನು ಒಳಗೊಂಡಿದ್ದರೂ, ವಾಸ್ತವ ಮಾರ್ಗದ ಪ್ರಥಮ ಕಾದಂಬರಿಗಳ ಚರ್ಚೆ ಇದೆ. ಇಂದಿರಾಬಾಯಿ, ಇಂದಿರೆಯ ವಾಸ್ತವದ ಅಭಾವ. ಮಾಡಿದ್ದುಣ್ಣೋ ಮಹಾರಾಯ. ಆದರ್ಶ ವಾಸ್ತವಗಳು ಸಂಯೋಗದ ಚರ್ಚೆ ಇದೆ.

ನವೋದಯ. ಪ್ರಗತಿಶೀಲ ಪಂಥದಲ್ಲಿ ಬರುವ ಮಾಸ್ತಿ. ಕುವೆಂಪು. ಶಿವರಾಮ ಕಾರಂತರು, ಅ.ನ.ಕೃಷ್ಣರಾಯರು, ವಿ.ಕೃ ಗೋಕಾಕ, ಶ್ರೀರಂಗ, ಚದುರಂಗ, ನಿರಂಜನ, ವ್ಯಾಸರಾಯ ಬಲ್ಲಾಳ ಮುಂತಾದ ಮಹನೀಯರ ಚರ್ಚೆ ಇದೆ. ಮಹಿಳಾ ಸಾಹಿತ್ಯದ ಇಂದಿರಾ ತ್ರಿವೇಣಿ, ಅನುಪಮಾ ನಿರಂಜನರ ಕೃತಿಗಳನ್ನು ಇಟ್ಟುಕೊಂಡು ಚರ್ಚಿಸಿರುವುದು ಇಲ್ಲಿ ಕಾಣಬಹುದು.

ನವ್ಯ ನವ್ಯೋತ್ತರದಲ್ಲಿ ಶಂಕರ ಮೊಕಾಶಿ ಪುಣೇಕರ, ಯು.ಆರ್. ಅನಂತಮೂರ್ತಿ. ತೇಜಸ್ವಿ, ಲಂಕೇಶ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಭೈರಪ್ಪ, ದೇವನೂರ ಮಹಾದೇವರ ಕೃತಿಗಳ ವಿಶ್ಲೇಷಣೆ ಇದೆ. ಸ್ತ್ರೀ ಸಾಹಿತ್ಯದಲ್ಲಿ ವೀಣಾ ಶಾಂತೇಶ್ವರ, ಬಿ.ಟಿ.ಲಲಿತಾ ನಾಯಕ, ಸಾ.ರಾ. ಅಬೂಬಕರ, ಕೃತಿಗಳ ನವ್ಯತೆ, ಸಂಪ್ರದಾಯಕತೆಗಳ ಆದರ್ಶ, ವಾಸ್ತವಗಳ ಸಂಬಂಧದ ವಿವರವಿದೆ. ಬದುಕಿನ ಅನ್ವೇಷಣೆ, ತುಡಿತ, ವ್ಯಕ್ತಿತ್ವ ಸಮಾಜದ ಅಸ್ತಿತ್ವವಾದ ಸ್ಥಿತಿಗತಿಗಳ ವಿಶ್ಲೇಷಣೆಯೂ ಕಾಣುವುದು. ನವ್ಯ ಪ್ರಜ್ಞೆ, ಕಲೆಯ ತತ್ವದ ಜೊತೆ ಪ್ರತಿಭಟನೆಯ ನೆಲೆಗಳನ್ನು ಇಟ್ಟುಕೊಂಡು ಪಾಶ್ಚಿಮಾತ್ಯದ ಪ್ರಭಾವ, ಸಂದರ್ಭ ಸ್ವರೂಪವನ್ನು ವಿಸ್ತರಿಸುವುದು. ಸಾಮಾಜಿಕ ಘಟನೆಗಳ ವಿವರ ಮಾನವಿಯ ಸಂಬಂಧಗಳ ಪರಿಕಲ್ಪನೆ ವಿಶ್ಲೇಷಿಸಿದೆ. ಅದೃಶ್ಯವಾದ ರೀತಿಗಳು, ಸಾಮಾಜಿಕ, ಸಂಬಂಧಗಳು, ವಾಸ್ತವದ ಲಕ್ಷಣ, ಗೌಣವಾದ, ಸಂಗತಿಗಳ ಒಳನೋಟಗಳು ಬಿಚ್ಚಿಕೊಳ್ಳುವುದು. ಭಾಷೆಯ ಕಲಾತ್ಮಕತೆ, ಧಾರ್ಮಿಕ ಸಂಕೇತಗಳನ್ನು ಸೃಷ್ಟಿಸುತ್ತಿರುವ ಸಂವಾದ ಸಾಮಾನ್ಯವಾಗಿದೆ. ಕೊನೆಯಲ್ಲಿ ಕನ್ನಡ ಕಾದಂಬರಿಗಳ ವೈಶಿಷ್ಟ್ಯವನ್ನು ವಿಶ್ಲೇಷಿಸಲಾಗಿದೆ.

'ಹೊಸಗನ್ನಡದ ಅರುಣೋದಯ'[೩೯] ಕೃತಿ ಶ್ರೀನಿವಾಸ ಹಾವನೂರರ ಸಂಶೋಧನ ಪ್ರಬಂಧ ಪೂನಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪೂರ್ವಾರ್ಧದಲ್ಲಿ ಅರುಣೋದಯದ ಹಿನ್ನೆಲೆ, ಮುದ್ರಣ ಯಂತ್ರ ಆಗಮನ, ಗ್ರಂಥೋದ್ಯಮ, ಶಿಕ್ಷಣ ರಂಗ, ಸಾಹಿತ್ಯ ವಿಕಾಸದ ವಿಶ್ಲೇಷಣೆ ಇದೆ. ಮಿಷನರಿ ಜನರ ಸಾಹಿತ್ಯ ಕಾರ್ಯ, ಬ್ರಿಟಿಷ್ ಅಧಿಕಾರಿಗಳ ಕನ್ನಡ ಕಾರ್ಯ, ಮುಮ್ಮಡಿಕೃಷ್ಣರಾಜ ಒಡೆಯರ ಧಾರ್ಮಿಕತೆ, ವಾಙ್ಮಯಕಾರರು, ಯಕ್ಷಗಾನ ಕವಿಗಳು ಎಂಬ ಸಂಗತಿಯ ಹಿನ್ನೆಲೆಯಲ್ಲಿ ವಿವರಣೆಯ ಚರ್ಚೆ ಇಲ್ಲಿದೆ.

ಉತ್ತರಾರ್ಧ ಭಾಗದಲ್ಲಿ ಸಿದ್ಧತೆ, ಭಾಷಾಭ್ಯಾಸ, ಹೊಸ ಕವಿತೆ, ನಾಟಕಗಳು, ಕ್ರೈಸ್ತ ಸಾಹಿತ್ಯ, ವಿವಿಧ ಗದ್ಯ ಬರಹಗಾರರ ವಿವರವಾದ ಮಾಹಿತಿಯ ವಿಮರ್ಶೆ ಇದೆ. ಪತ್ರಿಕಾ ಪ್ರಪಂಚ, ಕಥಾ ಸಾಹಿತ್ಯ ಅನುವಾದಗಳು, ಸಂಗ್ರಹಗಳು, ಕಾದಂಬರಿಗಳ ವಿವರ ಅಲ್ಲದೆ ಅನ್ಯಭಾಷಾ ಅನುವಾದಗಳು, ಸ್ವತಂತ್ರ ರಚನೆ, ಕೊನೆಯಲ್ಲಿ ವಿಭಾಗ ಕ್ರಮಗಳ ಸಮಾರೋಪವಿದೆ.

ನಾಡುನುಡಿಯ ರೂಪಕ[೪೦] ಶಿವರಾಮ ಪಡಿಕಲರ ಸಂಶೋಧನಾ ಕೃತಿ. ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದು, ಇದು ಮೂಲ 'ಮೊದಲ ಘಟ್ಟದ ಕಾದಂಬರಿಗಳು' ವಿಷಯವನ್ನು ಬಹುಮುಖಿಯಾಗಿ ಚರ್ಚಿಸಿ, ವಿಶ್ಲೇಷಿಸಿರುವ ಕೃತಿ. ಕನ್ನಡ ಕಾದಂಬರಿಯ ಉಗಮದ ಸೈದ್ಧಾಂತಿಕ ಚರ್ಚೆ. ಕನ್ನಡದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳು, ಓದುಗರ ನಿರೀಕ್ಷೆಗಳು. ಆಕಾಂಕ್ಷೆ/ಉತ್ತರಗಳನ್ನು ಇಟ್ಟುಕೊಂಡು ಚರ್ಚಿಸಿದ್ದಾರೆ. ಕನ್ನಡ ಕಾದಂಬರಿಗಳಿಗೆ ಸಂಬಂಧಪಟ್ಟಂತೆ ನಡೆದಿರುವ ಚರ್ಚೆ ಇಲ್ಲಿದೆ.

ಚರ್ಚೆಯು ಸಮಾಜಶಾಸ್ತ್ರೀಯ ವಿವರಣೆಯೊಂದಿಗೆ ಆರಂಭವಾಗುವುದು. ಸಾವೆಲ್ಲನ ಸಿದ್ಧಾಂತದ ಹಿನ್ನೆಲೆಯಲ್ಲಿ ಗಮನಿಸಿದೆ. ರಾಷ್ಟ್ರ ಆಧುನಿಕತೆ ಮತ್ತು ಮೊದಲ ಕಾದಂಬರಿಗಳು ಎಂಬ ಪರಿಕಲ್ಪನೆ ಚರ್ಚೆಯೂ ಕಾಣುವುದು. ಪ್ರಮುಖ ಲೇಖಕರು ಮತ್ತು ವಾಸ್ತವಿಕ ನಿರೂಪಣೆಯ ರಾಜಮಾರ್ಗದ ವಿವರಣೆ ಇದೆ. ಮೊದಲ ಕಾದಂಬರಿಗಳು ಮತ್ತು ಮೆಲೋಡ್ರೇಮಾಟ್ರಿಕ್ ನಿರೂಪಣೆಯನ್ನು ಹೊಂದಿದೆ ಎಂಬುದನ್ನು ಶಿವರಾಮ ಪಡಿಕ್ಕಲ್ ಗುರುತಿಸಿದ್ದಾರೆ.

ಇಂದಿರಾಬಾಯಿ, ಮಾಡಿದುಣ್ಣೊ ಮಹಾರಾಯ, ಮಾಧವ ಕರುಣಾ ವಿಲಾಸ, ದುರ್ಗೇಶ ನಂದಿನಿ, ಚೋರ ಗ್ರಹಣ ತಂತ್ರ ಕಾದಂಬರಿಗಳ ವಿಶ್ಲೇಷಣೆ ಇದೆ. ಮೊದಲ ಹಂತದ ಕಾದಂಬರಿಗಳು ಹಾಗೂ 'ಗಣ್ಯ' ಓದು ವರ್ಗವನ್ನು ವಿವರಿಸಲಾಗಿದೆ. ವಸಾಹತುಕರಣ, ವಸಾಹತುಶಾಹಿ, ಕರ್ನಾಟಕದಲ್ಲಿ ತಲೆದೋರಿದ ರಾಷ್ಟ್ರೀಯತೆ ಮತ್ತು ಭಾಷಿಕ ಅಸ್ಮಿತೆಗಳು ರೂಪುಗೊಂಡ ಬಗ್ಗೆ ಚರ್ಚೆ ಇದೆ. ಒಟ್ಟಾರೆ ಪ್ರಬಂಧ ರಾಷ್ಟ್ರ ಎನ್ನುವ ಮಹಾಕಲ್ಪನೆಯಲ್ಲಿ, ಭಾಷಿಕ, ಜನಾಂಗಿಕ, ಲಿಂಗಭೇದ, ಜಾತೀಯ ವೈರುದ್ಯಗಳನ್ನು ಮೀರಿ ಐಕ್ಯ ಭಾರತವನ್ನು ಕಟ್ಟುವದು ರಾಷ್ಟ್ರೀಯವಾದಿಗಳ ಕನಸನ್ನು ಈ ಕೃತಿ ಕಟ್ಟಿಕೊಟ್ಟಿದೆ.

'ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತುವಿನ್ಯಾಸ'[61] ಡಾ.ಸುರೇಶ ಪಾಟೀಲರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಪ್ರಬಂಧ. ಸಂಶೋಧನಾ ಮಾಲಿಕೆಯಲ್ಲಿ ಕೃತಿ ಪ್ರಕಟಗೊಂಡಿದೆ.

ಕನ್ನಡ ಕಾದಂಬರಿಯ ಉಗಮ ಕಾಲದಿಂದ ಇಂದಿನವರೆಗೆ ಬೇರೆ ಬೇರೆ ಕಾದಂಬರಿಕಾರರ ನಿರ್ಧಿಷ್ಟವಾದ ಕೆಲವು ಕಾದಂಬರಿಗಳಲ್ಲಿರುವ ರಾಜಕೀಯ ವಸ್ತುಗಳನ್ನು ವಿಶ್ಲೇಷಿಸಿದೆ. ಕಾರ್ಯ, ಕಾರಣದ ಜೊತೆಗೆ 'ಆಧುನಿಕ ಪ್ರಜ್ಞೆ' ಯು ಪ್ರಮುಖ ಪ್ರಜ್ಞಾವಾಹಕವಾದ ಕಾದಂಬರಿಯಲ್ಲಿ ಮೂಡಿಬಂದ ರೀತಿಯ ವಿವರವಿದೆ.

ಸಾಮಾಜಿಕ ಸಂಬಂಧ (Social Concern)ಹೊಂದಿದ ಕಾಳಜಿಯ ವಿವರವಿದೆ. ಸಾಮಾಜಿಕ ಸ್ವರೂಪ, ಸಾಮಾಜಿಕ ವಸ್ತುವಿನ್ಯಾಸ, ಕ್ರಿಯೆ ಪ್ರತಿಕ್ರಿಯೆ ಪ್ರಚೋದಿಸಿದ ಸಾಹಿತ್ಯಕೃತಿ ವೈಚಾರಿಕತೆ. [illegible] ಮೂಡಿಬಂದಿದೆ. ಕಾದಂಬರಿ ಪರಂಪರೆ ಗಮನದಲ್ಲಿರಿಸಿಕೊಂಡು ರಾಜಕೀಯ ಮೀಮಾಂಸೆ [illegible]

ಕಾಲದಿಂದ ಕಾಲಕ್ಕೆ ಸಮಾಜದ ರಾಜಕೀಯ ವಿಚಾರಗಳಲ್ಲಿ ಬೆಳವಣಿಗೆ ಬದಲಾವಣೆಯನ್ನು ಗಮನಿಸಲಾಗಿದೆ. ರಾಜಕೀಯ ಕುರಿತು ಚಿಂತನೆಯು ಕಾದಂಬರಿಕಾರನಿಂದ ಕಾದಂಬರಿಕಾರರಿಗೆ ವಿಭಿನ್ನವಾಗಿರುವ ವಿಶ್ಲೇಷಣೆ ಇಲ್ಲಿದೆ. ಬದಲಾವಣೆ, ಸಾಂಸ್ಕೃತಿಕ ದೃಷ್ಟಿಯಿಂದ ವಕ್ರಿ ಅಧ್ಯಯನಕ್ಕೆ

ಸ್ಥಿತ್ಯಂತರವನ್ನು ದಾಖಲಿಸುವುದು. ಸಾಮಾಜಿಕ ಸ್ವರೂಪದ ವಸ್ತುವಿನ ಮಧ್ಯೆ ಉಪಕಥೆಗಳಂತೆ ವಿಶ್ಲೇಷಣೆ ಇದೆ. ಕಾದಂಬರಿಗಳ ಸಾಮಾಜಿಕ ವಸ್ತು ವಿನ್ಯಾಸದಲ್ಲಿ ಅಂತರ್ಗತವಾಗಿರುವ ರೀತಿಯನ್ನು ವಿವರಿಸಿದೆ. ರಾಜಕೀಯ ವಿಚಾರಧಾರೆಯನ್ನು ಪ್ರತಿಪಾದಿಸುವ ಬದ್ಧ ಕಾದಂಬರಿಗಳ ದಾಖಲೀಕರಣವಿದೆ. ಕಾದಂಬರಿಕಾರರು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ವಸ್ತು ಹೊಂದಿರುತ್ತಾರೆ. ಕೃತಿ ಅಥವಾ ಕೃತಿಕಾರನ ಉದ್ದೇಶಕ್ಕೆ ಅನುಗುಣವಾಗಿ ವಸ್ತು ನಿರ್ವಹಣೆ ವಿನ್ಯಾಸದಲ್ಲಿ ವ್ಯತ್ಯಾಸವನ್ನು ಗುರುತಿಸಿದ್ದಾರೆ.

ಕನ್ನಡ ಕಾದಂಬರಿಗಳಲ್ಲಿ ವೇಶ್ಯಾ ಜೀವನ[೪೨] ಕೃತಿಯನ್ನು ಡಾ. ಶ್ರೀಪತಿ ಹಳಗುಂದ ಅವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ.

ಕನ್ನಡ ಕಾದಂಬರಿಯ ಸ್ವರೂಪ, ಭಾರತೀಯ ಸಂದರ್ಭದಲ್ಲಿ ಕಾದಂಬರಿ, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಕನ್ನಡ ಕಾದಂಬರಿಯ ಮೊದಲ ಘಟ್ಟದ ಕಾದಂಬರಿಗಳಲ್ಲಿ ಬಂದಿರುವ ವೇಶ್ಯಾ ಜೀವನದ ನಿದರ್ಶನಗಳು ಕುರಿತು ವಿವರವಿದೆ. ವೇಶ್ಯಾ ವೃತ್ತಿಗೆ ಕಾರಣಗಳು, ಪರಿಹಾರಗಳು, ಮಾರ್ಗೋಪಾಯಗಳ ಸೂಚನೆಯನ್ನು ಇಲ್ಲಿ ಗುರುತಿಸಿದ್ದಾರೆ. ವೇಶ್ಯಾ ವೃತ್ತಿಗೆ ಕಾರಣವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಕಾರಣಗಳ ವಿಶ್ಲೇಷಣೆಯಿದೆ.

ವೇಶ್ಯಾ ವೃತ್ತಿಯನ್ನು ಗಮನದಲ್ಲಿಟ್ಟುಕೊಂಡು ಲೇಖಕರು ವಿಭಿನ್ನ ದೃಷ್ಟಿಕೋನಗಳನ್ನು ಮಾನವೀಯ, ಸಾಂಪ್ರದಾಯಿಕ ಪ್ರಗತಿಪರ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ವೇಶ್ಯಾ ಜೀವನವನ್ನು ವಸ್ತುವಾಗಿರಿಸಿಕೊಂಡ ಸ್ತ್ರೀಯರ ಕಾದಂಬರಿಗಳ ಒಟ್ಟು ನೋಟವಿದೆ. ವೇಶ್ಯಾ ವೃತ್ತಿ, ಮನೋಸ್ಥಿತಿ ಆಧಾರಿತವಾದ ವಿಶ್ಲೇಷಣೆಯ ವಿವರಣೆ ಕಾಣುವುದು.

ವೇಶ್ಯಾ ವೃತ್ತಿಗಿಳಿಯಲು ಕಾರಣರಾದ ತಾಯಿಯರ ಒತ್ತಾಯಕ್ಕೆ ಬಲಿಯಾದ, ಪ್ರಿಯಕರನಿಂದ ಮೋಸ ಹೋದವರು, ಪೋಷಕರಿಂದ ತಿರಸ್ಕರಿಸಲ್ಪಟ್ಟವರು, ವಿಲಾಸಿ ಜೀವನ 'ಆಕಾಂಕ್ಷೆ' ಹೊಂದಿರುವವರು, ತಾಯ್ತನದ ಬಯಕೆಯಿಂದ, ಗಂಡನ ಕ್ರೌರ್ಯಕ್ಕೆ ಬಲಿಯಾದ್ದರಿಂದ ಮುಂತಾದ ನಾನಾ ತಾಪತ್ರಯಗಳಿಂದ ಹೇಯ ಕೃತ್ಯಕ್ಕೆ ಇಳಿದ ಸ್ವರೂಪದ ವಿವರವಿದೆ.

ಬದಲಾವಣೆಯೊಂದಿಗೆ ಸ್ತ್ರೀಯರ ಮೇಲೆ ಇಲ್ಲ-ಸಲ್ಲದ ಆಚಾರ-ವಿಚಾರಗಳ ರೀತಿ ನೀತಿಗಳ, ನಡೆ-ನುಡಿಗಳ ಸಂಪ್ರದಾಯಬದ್ಧವಾದ ಸರಪಳಿಯಿಂದ ಬಿಡಿಸಿಕೊಳ್ಳಲು ಹವಣಿಸಿದ ಸ್ತ್ರೀ ಸಂವೇದನೆಯನ್ನು ವಿವರಿಸಲಾಗಿದೆ. ಬಡತನದ ನಾನಾ ಮುಖಗಳು, ಪುರುಷ ದೌರ್ಜನ್ಯ, ಪ್ರಮುಖವಾಗಿ ಚರ್ಚೆಗೆ ಬಂದಿದೆ.

ಕನ್ನಡ ಕಾದಂಬರಿಗಳಲ್ಲಿ ಸ್ತ್ರೀ[೨೩] ಸ್ವಾತಂತ್ರ್ಯ ಪೂರ್ವಕಾಲಘಟ್ಟದ ಕಾದಂಬರಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ. ಡಾ. ಎಸ್.ಆಯ್. ಭಂಡಾರಿಯವರು, ಡಾ. ದುರ್ಗಾದಾಸ ಅವರ ಮಾರ್ಗದರ್ಶನದಲ್ಲಿ ಬೆಳಕು ಕಂಡ ಕೃತಿಯಾಗಿದೆ.

ಕನ್ನಡ ಕಾದಂಬರಿಯ ಉಗಮ ಮತ್ತು ವಿಕಾಸ ಬೆಳವಣಿಗೆಯ ಸಂದರ್ಭದ ಕಾದಂಬರಿಗಳೇ ಅಧ್ಯಯನದ ವಿಷಯವಸ್ತುವಾಗಿದೆ. ಕೌಟುಂಬಿಕ ನೆಲೆಯಲ್ಲಿ ಹೆಂಡತಿ- ತಾಯಿ-ಮಗಳು-ಅತ್ತಿಗೆ, ನಾದಿನಿ, ಸವತಿ, ಅತ್ತೆ, ಸೊಸೆ, ಅಜ್ಜಿ ಕುರಿತಾದ ಪಾತ್ರ ವಿಷಯಗಳ ಅಧ್ಯಯನವಿದೆ. ಸಾಮಾಜಿಕ ನೆಲೆಯಲ್ಲಿ ಜಾತಿ ವ್ಯವಸ್ಥೆ, ವೃತ್ತಿ, ಲಿಂಗಭೇದ, ಅನೈತಿಕತೆಯ ವಿಶ್ಲೇಷಣೆ ಕಾಣುವುದು ಧಾರ್ಮಿಕ ನೆಲೆಯಲ್ಲಿ ಸ್ತ್ರೀಧರ್ಮ, ವೃತ್ತಿ ಆಚರಣೆ, ನಂಬಿಕೆ, ಹರಕೆ, ಬಲಿಯನ್ನು ಪೂಜೆ, ಶಾಪ, ಕುರಿತಾದ ವಿಶ್ಲೇಷಣೆಯಿಂದಾಗಿ ತಾರ್ಕಿಕ ಆಲೋಚನೆಗಳ ವಿವರಣೆ ಇಲ್ಲಿ ಚರ್ಚಿಸಿದೆ.

ಭಾರತೀಯ ಸಮಾಜದಲ್ಲಿ ಸ್ತ್ರೀಯರ ಬಗ್ಗೆ ವಿಭಿನ್ನ ಮಾನದಂಡಗಳನ್ನು ಅನುಸರಿಸಿಕೊಂಡು ಬರಲಾಗಿದೆ. ಮಹಿಳೆಯರ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ. ಈ ದೃಷ್ಟಿಯಿಂದ ಈ ಕೃತಿ ಮಹತ್ವದ್ದೆನಿಸಿದೆ. ಅಧ್ಯಯನದಲ್ಲಿ ಮೇಲ್ವರ್ಗದ ಹಾಗೂ ಮಧ್ಯಮ ವರ್ಗದವರ ಬದುಕಿಗೆ ಪ್ರಾಧಾನ್ಯತೆ ಬಂದಂತಾಗಿದೆ. ಮೇಲ್ವರ್ಗದವರ ಸ್ತ್ರೀ ಬದುಕು ಮುಖ್ಯವಾದದ್ದು. ಸಾಮಾಜಿಕ ಸಮಸ್ಯೆಗಳೆ ಪ್ರಾಧಾನ್ಯತೆ ಪಡೆದಿವೆ. ಸ್ತ್ರೀಯರು ಹಿಂದುಳಿಯಲು ಅವರ ಮೇಲೆ ಹೇರಲ್ಪಟ್ಟ ಕಟ್ಟುಪಾಡುಗಳೇ ಮುಖ್ಯ ಕಾರಣವೆಂಬ ಅಂಶ ಪ್ರಸ್ತುತ ಅಧ್ಯಯನದಲ್ಲಿದೆ. ಸ್ತ್ರೀ ಸಾಹಿತ್ಯ ಇಲ್ಲಿ ಮುಂಚೂಣಿಗೆ ಬಂದಿದೆ. ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮರಿಂದ ಹೊರಹೊಮ್ಮಿದ ಕೃತಿಗಳ ವಿಶ್ಲೇಷಣೆ ಇದೆ. ಮಹಿಳೆಯರ ಕುರಿತಾದ ಕಾದಂಬರಿಗಳಲ್ಲಿ ಸಾಂಪ್ರದಾಯಿಕ, ಸಾಂಸ್ಕೃತಿಕ, ಸಂಘರ್ಷ ಕಂಡುಕೊಂಡ ಸತ್ಯ ಇಲ್ಲಿದೆ. ಮಹಿಳಾ ಸಹಾನುಭೂತಿ ಕಾಳಜಿಯನ್ನು ಪ್ರಕಟಿಸಿರುವುದು ಇಲ್ಲಿ ಕಾಣುತ್ತದೆ. ಮಹಿಳಾ ಶಿಕ್ಷಣ ಅವಶ್ಯಕತೆಯನ್ನು ಫಲಿತದಲ್ಲಿ ಎತ್ತಿತೋರಿಸಲಾಗಿದೆ. ಮಹಿಳೆಯನ್ನು ಪುರುಷರ ನಂತರ ಸ್ಥಾನಕ್ಕೆ ತಳ್ಳಿರುವುದು. ಸಮಾನತೆಯ ಸ್ಥಾನಮಾನ ದೊರಕಿಸಿದರೆ ಸಾಮಾಜಿಕ ಪ್ರಗತಿಯು ಸಾಧ್ಯವೆಂಬ ಸ್ವರೂಪ ಪಡೆದುಕೊಂಡಿದೆ. ಸ್ತ್ರೀಪರ ಚಿಂತನೆಯ ಕನ್ನಡ ಕಾದಂಬರಿಕಾರರನ್ನು ಮಹಿಳಾ ಸಮಸ್ಯೆಗಳು ಕಾಡಿವೆ. ಆ ಲೇಖಕರು ಸ್ಪಂದಿಸಿರುವ ರೀತಿ ವ್ಯಕ್ತವಾದ ಸಹಾನುಭೂತಿ ಕಾಳಜಿಯನ್ನು ಇಲ್ಲಿ ಗುರುತಿಸಲಾಗಿದೆ.

೨.೬ ಅನುವಾದ ಲೇಖನಗಳು:

ಭಾರತೀಯ ಭಾಷೆಯ ಲೇಖಕರಿಗೆ ಕನ್ನಡದ ಒಬ್ಬ ಲೇಖಕ ಬರೆದಿದ್ದಾನೆ ಅಂತಾ ಗೊತ್ತಾಗಬೇಕು ಅಂದರೆ ಅದು ಅವರವರ ಭಾಷೆಗಳಲ್ಲೂ ಕೂಡಾ ಬರಬೇಕು ಎನ್ನುವ ಅಪೇಕ್ಷೆ ಪ್ರತಿಯೊಂದು ಭಾಷೆಯ ಲೇಖಕನಿಗೂ ಓದುಗನಿಗೂ ಇರುವುದು. ಇಂಗ್ಲಿಷ್ ಅಧಿಕಾರಸ್ಥ ಭಾಷೆಯಾಗಿರುವುದರಿಂದ ನಮ್ಮ

ಸ್ಥಳೀಯ ಭಾಷೆಯ ಮನ್ನಣೆಯ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು. ಸಾಂಸ್ಕೃತಿಕ ಅಪೇಕ್ಷೆ ಕೂಡಾ ಹೆಚ್ಚುತ್ತಾ ಬಂದಿದೆ. ಪ್ರತಿ ಲೇಖಕನಿಗೂ ತನ್ನ ಕೃತಿಯನ್ನು ಅನ್ಯ ಭಾಷೆಗೆ ಭಾಷಾಂತರ ಮಾಡಿಸಿಕೊಳ್ಳಬೇಕು ಎನ್ನುವ ತುಡಿತ ಇದ್ದೆ ಇರುವುದು. ಕೃತಿಗಳಲ್ಲಿ ವ್ಯಕ್ತವಾಗುವ ಜನಾಂಗಗಳ ನೋವು-ನಲಿವು, ಸುಖಃ-ದುಖಃ, ಕೋಪ-ಉದ್ವೇಗಗಳನ್ನು ವ್ಯಕ್ತಪಡಿಸುವುದು. ಅದೇ ಕೃತಿಗೆ ಬೆಲೆಯನ್ನು ತಂದುಕೊಡುವುದು. ಆದ್ದರಿಂದ ಕೃತಿಯ ಮೌಲ್ಯ ಹೆಚ್ಚಾಗುವುದು.

"ಒಂದು ಭಾಷೆಯಲ್ಲಿರುವ ಬರವಣಿಗೆಯನ್ನು ಮತ್ತೊಂದು ಭಾಷೆಗೆ ಅನುವಾದ ಮಾಡುವುದಕ್ಕೆ ಸಾಧ್ಯವಿಲ್ಲ. ಬರವಣಿಗೆ ಸಂಸ್ಕೃತಿನಿಷ್ಠವಾಗಿದ್ದಾಗ, ನೆನಪುಗಳಿಗೆ ಬದ್ಧತೆ ಪಡೆದುಕೊಂಡಾಗ ಅದು ಮಣ್ಣಿನಗುಣಕ್ಕಂಟಿಕೊಂಡಿದ್ದು, ಅದನ್ನೇ ಅನಾಮತ್ತಾಗಿ ಬೇರೆ ಭಾಷೆಗೆ ತೆಗೆದುಕೊಂಡು ಹೋಗಿ ಅದರಲ್ಲೂ ಇಂಗ್ಲಿಷ್ ಹಾಗೂ ಇತರ ಪರದೇಶಿ ಭಾಷೆಗೆ ಅನುವಾದಿಸುವುದು ಕಷ್ಟಸಾಧ್ಯವಾದದ್ದು."[೪೪] ಕೊನೆಗೆ ಅನುವಾದಕ್ಕೆ ಎರಡು ಕಾರಣ ಸೂಚಿಸಿದ್ದರು. ಕೃತಿ ಇಷ್ಟವಾದದ್ದಕ್ಕೆ, ಇನ್ನೊಂದು ಅನುವಾದಕ್ಕೆ ಒಂದು ಸಂಸ್ಕೃತಿ ಅಗತ್ಯ ಇರುತ್ತದೆ ಅಂತ ಅನುವಾದ ಮಾಡುತ್ತೇನೆ.[೪೫] ಬೇರೆ ಭಾಷೆಗಳಿಂದ ಕನ್ನಡಕ್ಕೆ-ಕನ್ನಡದಿಂದ ಬೇರೆ ಬೇರೆ ಭಾಷೆಗೆ ಅನುವಾದ ಹೆಸರು, ಜಂಭ, ಹಣವನ್ನು ಕೊಡುವುದಲ್ಲದೇ ಅಲ್ಲಿ ಸಾಂಸ್ಕೃತಿಕ ಮುಖಾಮುಖಿ ಅವಶ್ಯ. ಸಾಹಿತಿಯ ಬೌದ್ಧಿಕ ಮನ್ನಣೆ ದೇಶ ವಿದೇಶಗಳಲ್ಲಿ ಪ್ರಾಪ್ತವಾಗಬೇಕಾದದ್ದು ಅವಶ್ಯ.

ಸಾಹಿತ್ಯ ಪ್ರವೇಶ:[೪೬] ಕೃತಿಯ ಮೂಲ ಹಡ್ಸನ್‌ರದು, ಸಿ.ಪಿ.ಕೆ. ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಹಿತ್ಯಾಭ್ಯಾಸದ ವಿಧಾನಗಳನ್ನು, ಕಥೆಯ ವ್ಯಾಸಂಗ, ಕಾದಂಬರಿ ವ್ಯಾಸಂಗ ನಾಟಕ ವ್ಯಾಸಂಗ, ವಿಮರ್ಶೆಯ ವ್ಯಾಸಂಗ ಮತ್ತು ಸಾಹಿತ್ಯ ಮೌಲ್ಯ ನಿರ್ಣಯ ಎಂಬ ಲೇಖನಗಳ ಸಂಗ್ರಹವಾಗಿದೆ. ಭಾಗ ಎರಡರಲ್ಲಿ ಸಾಹಿತ್ಯದಲ್ಲಿ ವ್ಯಕ್ತಿತ್ವ, ಕಾವ್ಯದಲ್ಲಿ ಪ್ರಕೃತಿ, ನಿರೂಪಣೆ, ಪ್ರಬಂಧದ ವ್ಯಾಸಂಗ, ಸಣ್ಣಕಥೆ ವ್ಯಾಸಂಗ ಎಂಬ ಲೇಖನಗಳ ಸಾರ ಸಂಗ್ರಹವಿದೆ.

ಕಾದಂಬರಿ ವ್ಯಾಸಂಗ. ಕಾದಂಬರಿ ನಾಟಕಗಳ ವ್ಯತ್ಯಾಸ ಪ್ರಮುಖ ಅಂಶಗಳು. ಕಾದಂಬರಿಯ ಸಂವಿಧಾನ ಕಥಾವಸ್ತು ನಿರೂಪಣಾ ಶೈಲಿಯ ವಿವರವಿದೆ. ಕೌಶಲ್ಯ ಶಿಥಿಲ ಸಂವಿಧಾನ. ಸರಳ ಮತ್ತು ಸಂಯುಕ್ತ ನಿರೂಪಣಾ ವಿಧಾನಗಳನ್ನು ಕುರಿತು ವಿವರವಿದೆ. ಪಾತ್ರ ನಿರ್ಮಾಣದ ನಿಯಮಗಳು. ಸೃಷ್ಟಿಕ್ರಿಯೆಯ ರಹಸ್ಯ ವರ್ಣನೆ. ಸಾಮರ್ಥ್ಯ ಪ್ರತಿಕ್ರಿಯೆ ಪಾತ್ರಗಳ ಸಂಬಂಧ ಸಂಭಾಷಣೆಯ ನಿರೂಪಣೆ ಕಾಣುವುದು. ರಸಾವೇಶದ ಸನ್ನಿವೇಶಗಳು ಕಾದಂಬರಿಗೆ ಕಾರಣ. ಜೀವನ ವಿಮರ್ಶೆ ಪ್ರಕೃತಿಯ ಪ್ರತಿಕ್ರಿಯೆ ಅದರ ಉಪಯೋಗ, ಕಾದಂಬರಿಯ ಸತ್ಯ ವಾಸ್ತವಿಕತೆ, ನಿಜವಾದ ನೈತಿಕ ಹೊಣೆಗಾರಿಕೆ ಕುರಿತು ಚರ್ಚೆ ಇಲ್ಲಿದೆ.

ಕನ್ನಡದ ಆರಂಭ ಘಟ್ಟದ ಕಾದಂಬರಿಗಳಲ್ಲಿ ಮುಖ್ಯವಾಗಿ ಎದ್ದು ಕಾಣುವ ಅಂಶವೆಂದರೆ ಸಮಕಾಲೀನ ಪ್ರಜ್ಞೆ ಮತ್ತು ಕಾಳಜಿ. ಈ ಅಂಶಗಳ ಕುರಿತಾದ ಅಧ್ಯಯನಗಳಲ್ಲಿ ರಾಷ್ಟ್ರೀಯತೆ, ಆಧುನಿಕತೆ ಕುರಿತಾದ ಬೇರೆ ಬೇರೆ ಆಯಾಮಗಳಲ್ಲಿ ಸಂಶೋಧನೆಗಳು ಜರುಗಿದರೂ ಸಾಮಾಜಿಕ ಸಂಘರ್ಷಗಳ ಕುರಿತಾದ ಅಧ್ಯಯನ ಜರುಗಿಲ್ಲ. ಆದ ಕಾರಣ ಈ ವಿಷಯದತ್ತ ಗಮನ ಹರಿಸಲಾಗಿದೆ. ಮೊದಲ ಘಟ್ಟದ ಕಾದಂಬರಿಗಳಲ್ಲಿ ಪಾಶ್ಚಿಮಾತ್ಯ ಪ್ರಭಾವದ ಧೋರಣೆ, ಮತ್ತೊಂದೆಡೆ ಸಾಂಪ್ರದಾಯಿಕ ಮೌಲ್ಯಗಳ ಜೊತೆಗೆ ಸಾಮಾಜಿಕವಾಗಿ ಸ್ತ್ರೀಯರ ಮೇಲೆ ವಿಧಿಸಿರುವ ಧಾರ್ಮಿಕ, ಸಾಂಪ್ರದಾಯಿಕ ಕಟ್ಟುಪಾಡುಗಳು ಬಲಿಷ್ಠವಾಗಿದ್ದ ದಿನಗಳಲ್ಲಿ ಸುಧಾರಣವಾದಕ್ಕೆ ತಿರುಗಿದ ರೀತಿಯನ್ನು ಕುರಿತಾದ ಅಧ್ಯಯನ ಇಲ್ಲಿ ಗುರುತಿಸಲಾಗಿದೆ.

ಮೊದಲ ಕನ್ನಡ ಕಾದಂಬರಿಗಳನ್ನು ಚರ್ಚಿಸಲು ಉಪಯುಕ್ತವಾದ ತಾತ್ವಿಕ, ಸಾಮಾಜಿಕ ಚೌಕಟ್ಟನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಸೈದ್ಧಾಂತಿಕ ತಳಹದಿಯ ಮೇಲೆ ಚರ್ಚಿಸಲು ಪ್ರಯತ್ನಿಸಿದ ನಿದರ್ಶನಗಳು ಅಲ್ಲಲ್ಲಿ ಕಂಡುಬರುತ್ತವೆ. ಈ ಕಾದಂಬರಿಗಳು ಸಾಮಾಜಿಕ ಸಮಸ್ಯೆಗಳತ್ತ ಮುಖ ಮಾಡಿರುವ, ಆಧುನಿಕತೆಗೆ ಒತ್ತುಕೊಟ್ಟಿರುವ ಸಂದರ್ಭಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು:

೧. ತಿಪ್ಪೇರುದ್ರಸ್ವಾಮಿ ಎಚ್ - ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಚಿನ್ನದ ಗರಿ, ಪ್ರಕಟ-೧೯೭೪.

೨. ವಿಲಿಯಂ ಹೆನ್ರಿ ಹಡ್ಸನ್, ಅನುವಾದ: ಸಿ.ಪಿ.ಕೆ, ಸಾಹಿತ್ಯ ಪ್ರವೇಶ, ಪ್ರಕಟ-೨೦೦೯, ಪು.೯೬.

೩. ಗಳಗನಾಥರು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಪ್ರಕಟ-೧೯೪೬.

೪. ಬೆಳಗಲಿ. ದು.ನಿಂ - ಕನ್ನಡದಲ್ಲಿ ಕಾದಂಬರಿ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-ಪ್ರಕಟ-೧೯೭೫.

೫. ವಿವೇಕ ರೈ ಬಿ.ಎ-ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಸಂಪಾದಕರು; ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು ಪ್ರಕಟ-೧೯೮೭.

೬. ಮಂಗಳಾ ಚಿ.ನ. ತಿರುಮಲಾಂಬ ಪ್ರಕಟ-೧೯೯೧.

೭. ವಿಜಯದಬ್ಬೆ - ಹಿತೈಷಿಣಿಯ ಹೆಜ್ಜೆಗಳು, ಪ್ರಕಟ-೧೯೯೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೮. ಖಂಡೋಬಾ ಪಿ.ಕೆ. - ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೯೯.

೯. ಶ್ರೀನಿವಾಸ ಹಾವನೂರ-ಕಾದಂಬರಿಕಾರ ಗಳಗನಾಥರು, ಸಾಹಿತ್ಯ ಅಕಾಡೆಮಿ, ನವದೆಹಲಿ, ಪ್ರಕಟ-೨೦೦೦.

೧೦. ಮಹೇಶ್ವರಿ ಯು - ಇದು ಮಾನಷಿಯ ಓದು, ಪ್ರಕಟ-೨೦೦೧.

೧೧. ಸುಜಾತಾ ಎಚ್.ಎಸ್., ಎಂ.ಎಸ್.ಪುಟ್ಟಣ್ಣ, ಸಾಹಿತ್ಯ ಅಕಾಡೆಮಿ, ನವದೆಹಲಿ, ಪ್ರಕಟ-೨೦೦೧.

೧೨. ಸುಜಾತಾ ಎಚ್.ಎಸ್. ಎಂ.ಎಸ್.ಪುಟ್ಟಣ್ಣವರ ಕಾದಂಬರಿಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಕಟ-೨೦೦೬.

೧೩. ಶೇಷಗಿರಿರಾಯ ಎಲ್.ಎಸ್. - ಸಮಗ್ರ ವಿಮರ್ಶೆ ಸಾಹಿತ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೧೦.

೧೪ ಗಿರಡ್ಡಿ ಗೋವಿಂದರಾಜ - ಕಾದಂಬರಿ: ವಸ್ತು ಮತ್ತು ತಂತ್ರ, ಪ್ರಕಟ-೧೯೭೬.

೧೫. ಶಿವರುದ್ರಪ್ಪ ಜಿ.ಎಸ್. ಮಹಿಳೆ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಪ್ರಕಟ-೧೯೮೮.

೧೬. ಆಮೂರ ಜಿ.ಎಸ್ - ಸಮಕಾಲಿನ ಕಥೆ ಕಾದಂಬರಿ - ಹೊಸ ಪ್ರಯೋಗ, ಪ್ರಕಟ-೧೯೮೧.

೧೭. ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಪ್ರಕಟ-೧೯೮೧.

೧೮. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ – ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪ್ರಕಟ- ೧೯೯೪.

೧೯. ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಕರ್ನಾಟಕ ವಿ.ವಿ. ಧಾರವಾಡ, ಪ್ರಕಟ-೧೯೯೬.

೨೦. ಅರವಿಂದ ಮಾಲಗತ್ತಿ – ಕಾದಂಬರಿಗಳ ವಿಮರ್ಶೆ, ಪ್ರಕಟ-೨೦೦೦.

೨೧. ನಾಯಕ ಜಿ.ಎಚ್– ಶತಮಾನದ ಕನ್ನಡ ಸಾಹಿತ್ಯ, ಪ್ರಕಟ-೨೦೦೦.

೨೨. ಸಿದ್ದಲಿಂಗಯ್ಯ ಜಿ.ಎಸ್. ಹಾಗೂ ಎಚ್. ಕೃಷ್ಣಪ್ಪಯ್ಯ ಹೆಚ್ – ಸಾಲುದೀಪಗಳು – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪ್ರಕಟ-೨೦೦೧.

೨೩. ದಂಡಪ್ಪ ಎಚ್, ಸುಮಿತ್ರಾಬಾಯಿ ಬಿ. ಎನ್. – ಸುವರ್ಣಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಕಟ-೨೦೦೬.

೨೪. ಬಾಳಾಸಾಹೇಬ ಲೋಕಾಪೂರ – ಕೆರೂರ ವಾಸುದೇವಾಚಾರ್ಯ, ಪ್ರಕಟ-೨೦೧೧.

೨೫. ತಿಪ್ಪೇರುದ್ರಸ್ವಾಮಿ ಎಚ್ – ಸಾಹಿತ್ಯ ಮತ್ತು ಸಮಕಾಲಿನ ವಾಸ್ತವಿಕತೆ, ಪ್ರಕಟ-೧೯೭೯.

೨೬. ನಾಯಕ ಜಿ. ಎಚ್ – ನಿಜದನಿ, ಪ್ರಕಟ-೧೯೮೮.

೨೭. ಕೀರ್ತಿನಾಥ ಕುರ್ತಕೋಟಿ – ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥಮಾಲಾ, ಧಾರವಾಡ, ಪ್ರಕಟ-೧೯೯೬.

೨೮. ಕೀರ್ತಿನಾಥ ಕುರ್ತಕೋಟಿ – ಧರ್ಮಸಾಹಿತ್ಯ ದರ್ಶನ. ಮನೋಹರ ಗ್ರಂಥಮಾಲಾ, ಪ್ರಕಟ-೨೦೦೨.

೨೯. ನಾಯಿಕ ಜಿ.ಎಚ್ – ಕೃತಿ ಸಾಕ್ಷಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೦೬.

೩೦. ಮುಗಳಿ ರಂ.ಶ್ರೀ – ಸಾಹಿತ್ಯೋಪಾಸನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೦೬.

೩೧. ನಾಗರಾಜ ಡಿ.ಆರ್ – ಸಾಹಿತ್ಯ ಕಥನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಪ್ರಕಟ-೨೦೧೧.

೩೨. ಲಕ್ಷ್ಮಣಗೌಡ ಕೆ.ಟಿ. – ಸ್ವಾತಂತ್ರ್ಯ ಪೂರ್ವ ಕನ್ನಡ ಸಾಮಾಜಿಕ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಸಂಘರ್ಷ, ಪ್ರಕಟ-೧೯೯೧.

೩೩. ಧಾರವಾಡಕರ ರಾ. ಯ. – ಹೊಸಗನ್ನಡ ಸಾಹಿತ್ಯ ಉದಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪ್ರಕಟ-೧೯೭೫.

೩೪. ಕೃಷ್ಣಮೂರ್ತಿ ಕಿತ್ತೂರ – ಗಳಗನಾಥರು ಮತ್ತು ಅವರ ಕಾದಂಬರಿಗಳು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ–೧೯೭೮.

೩೫. ಸುಜಾತಾ ಎಚ್.ಎಸ್ – ಎಂ.ಎಸ್.ಪುಟ್ಟಣ್ಣ ಒಂದು ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಪ್ರಕಟ–೧೯೮೧.

೩೬. ಮಹದೇವ ಕಣವಿ – ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು, ಪ್ರಕಟ–೧೯೯೪.

೩೭. ಹರಿಕೃಷ್ಣ ಭರಣ್ಯ – ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಮದ್ರಾಸ, ವಿಶ್ವವಿದ್ಯಾಲಯ , ಪ್ರಕಟ–೧೯೯೦.

೩೮. ಆಮೂರ ಜಿ.ಎಸ್ – ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಪ್ರಕಟ–೧೯೯೪.

೩೯. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಪ್ರಕಟ–೨೦೦೦.

೪೦. ಶಿವರಾಮ ಪಡಿಕಲ್ – ನಾಡುನುಡಿಯ ರೂಪಕ, ಪ್ರಕಟ–೨೦೦೧.

೪೧. ಸುರೇಶ ಪಾಟೀಲ – ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತು ವಿನ್ಯಾಸ, ಪ್ರಕಟ–೨೦೦೮.

೪೨. ಹಳಗುಂದ ಶ್ರೀಪತಿ ಕೆ – ಕನ್ನಡ ಕಾದಂಬರಿಗಳಲ್ಲಿ ವೇಶ್ಯಾಜೀವನ, ಪ್ರಕಟ–೨೦೦೮.

೪೩. ಶಿವಲಿಂಗಪ್ಪ ಭಂಡಾರಿ – ಕನ್ನಡ ಕಾದಂಬರಿಗಳಲ್ಲಿ ಸ್ತ್ರೀ, ಪ್ರಕಟ–೨೦೧೧.

೪೪. ನಾಗಭೂಷಣ ಸ್ವಾಮಿ ಓ.ಎಲ್–ಕನ್ನಡ ಅಧ್ಯಯನ ಚಳಿ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಕಟ–೧೯೯೯.

೪೫. ನಾಗಭೂಷಣಸ್ವಾಮಿ–ಕನ್ನಡ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ(ಚಳಿಸಂಚಿಕೆ), ಪ್ರಕಟ–೧೯೯೯.

೪೬. ಸಿ.ಪಿ.ಕೆ ಅನುವಾದ – ವಿಲಿಯಂ ಹಡ್ಸನ್ ಮೂಲ, 'ಸಾಹಿತ್ಯ ಪ್ರವೇಶ', ಪ್ರಕಟ–೧೯೬೫.

* ಪ್ರಜಾವಾಣಿ ಪತ್ರಿಕೆಯಲಿ ಬಂದ 'ಕನ್ನಡ ಕಾದಂಬರಿ ಸಮೀಕ್ಷೆ*

* ಶ್ರೀಧರಮೂರ್ತಿ – ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ, ಪ್ರಜಾವಾಣಿ ಲೇಖನ. 'ಸಂಕ್ರಮಣ' ಪತ್ರಿಕೆಯ ಗುಲ್ವಾಡಿ ವೆಂಕಟರಾಯ ಜಾತಿ*.

* ಸಂಕ್ರಮಣ ಪತ್ರಿಕೆಯ ಸಂಪಾದಕೀಯ ಚಂದ್ರಶೇಖರ ಪಾಟೀಲ, ಟಿ.ಪಿ. ಅಶೋಕರವರ ಅಂತರ್ಯ. ಸಂಯುಕ್ತ ಕರ್ನಾಟಕದ 'ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಹಾಗೂ ಹೊಸ ಓದು. ಮರು ಓದುಗಳಿಗೆ ಆಹ್ವಾನವಾಗಿದೆ'*.

* ಶ್ರೀನಿವಾಸ ಹಾವನೂರರ 'ಕನ್ನಡ ಪ್ರಥಮ ಸಾಮಾಜಿಕ ಕಾದಂಬರಿಯ ಹಿನ್ನೆಲೆಯಲ್ಲಿ'*.

* ಪ್ರಬುದ್ಧ ಕರ್ನಾಟಕ ಕೆ.ವಿ. ನಾರಾಯಣ 'ಘಟನೆಗಳ ಸಿದ್ಧತೆ ಮತ್ತು ಮಾಡಿದ್ದುಣ್ಣೋ ಮಹಾರಾಯ'*.

ಅಧ್ಯಾಯ – ೩

ಸಾಮಾಜಿಕ ಸಂಘರ್ಷದ ನೆಲೆಗಳು

೩.೧ ಕೌಟುಂಬಿಕ ಸಂಘರ್ಷದ ನೆಲೆ

ಸ್ತ್ರೀಶೋಷಣೆ

ಲಿಂಗ ತಾರತಮ್ಯ

ವ್ಯಕ್ತಿ ಸಂಬಂಧಗಳು

ವಿವಾಹ ಸಂಬಂಧ

೩.೨ ಸಾಮಾಜಿಕ ಸಂಘರ್ಷದ ನೆಲೆ

ಬಾಲ್ಯವಿವಾಹ

ವಿಧವಾ ವಿವಾಹ

ಸಹಗಮನ

ವೇಶ್ಯಾ ಪದ್ಧತಿ

ಜಾತಿ ಪದ್ಧತಿ

ಅಧ್ಯಾಯ – ೩

ಸಾಮಾಜಿಕ ಸಂಘರ್ಷದ ನೆಲೆಗಳು

೩.೧ ಕೌಟುಂಬಿಕ ಸಂಘರ್ಷದ ನೆಲೆ

ಸ್ತ್ರೀಶೋಷಣೆ

ಲಿಂಗ ತಾರತಮ್ಯ

ವ್ಯಕ್ತಿ ಸಂಬಂಧಗಳು

ವಿವಾಹ ಸಂಬಂಧ

೩.೨ ಸಾಮಾಜಿಕ ಸಂಘರ್ಷದ ನೆಲೆ

ಬಾಲ್ಯವಿವಾಹ

ವಿಧವಾ ವಿವಾಹ

ಸಹಗಮನ

ವೇಶ್ಯಾ ಪದ್ಧತಿ

ಜಾತಿ ಪದ್ಧತಿ

೩.೧ ಕೌಟುಂಬಿಕ ಸಂಘರ್ಷದ ನೆಲೆಗಳು

ಸಾಮಾಜಿಕ ವ್ಯವಸ್ಥೆಯ ಚಿಕ್ಕ ಘಟಕವೇ ಕುಟುಂಬ. ಇಂತಹ ಘಟಕಗಳ ಸಮೂಹವೇ ಸಮಾಜ. ಗಂಡು ಹೆಣ್ಣಿನ ಸಮಾಗಮದ ಬಂಧದಿಂದ ಕೂಡಿ ಬದುಕುವ ಜೀವನ ಶೈಲಿ ಚಾಲ್ತಿಗೆ ಬಂದ ಮೇಲೆ ಕುಟುಂಬ ಜೀವನ ಅಸ್ತಿತ್ವಕ್ಕೆ ಬಂದಿತು. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಚಾಲ್ತಿಗೆ ಬರುವ ಇತಿಹಾಸ ಅವಲೋಕಿಸಲಾಗಿ ಮಾತೃಪ್ರಧಾನ ವ್ಯವಸ್ಥೆ ಸಮಾಜದಲ್ಲಿತ್ತು ಎಂಬುದು ಸಂಶೋಧನೆಯಿಂದ ಗುರುತಿಸಲ್ಪಟ್ಟಿದೆ. ಕುಟುಂಬದಲ್ಲಿ ಮಹಿಳೆಗೆ ಮಹತ್ವದ ಸ್ಥಾನವಿದೆ. ಸಾರ್ವಜನಿಕ ಜೀವನದಲ್ಲಿ ಪುರುಷನು ಹೆಚ್ಚಿನ ಸ್ವಾಮಿತ್ವಗಳಿಸಿದರೂ ಕುಟುಂಬದಲ್ಲಿ ಮಹಿಳೆ ಪರೋಕ್ಷವಾಗಿ ಮುಖ್ಯವಾಗುತ್ತಾಳೆ. ಮಹಿಳೆ ಇಲ್ಲದೆ ಕುಟುಂಬ ಅಸ್ತಿತ್ವಕ್ಕೆ ಬರಲು ಸಾಧ್ಯವೇ ಇಲ್ಲ. ಕೌಟುಂಬಿಕ ಜೀವನದಲ್ಲಿ ಮಹಿಳೆ ನಿರ್ವಹಿಸಬೇಕಾದ ಜವಾಬ್ದಾರಿಗಳು ಅನೇಕ. ತಾಯಿ, ಮಗಳು, ಹೆಂಡತಿ ಅತ್ತಿಗೆ, ನಾದಿನಿ, ಸವತಿ, ಅತ್ತೆ, ಸೊಸೆ, ಅಜ್ಜಿ ಹಿನ್ನೆಲೆಯಲ್ಲಿ ಅನೇಕ ರೀತಿಯ ಜವಾಬ್ದಾರಿಗಳಲ್ಲಿ ಸ್ತ್ರೀ ಪ್ರಮುಖ ಪಾತ್ರ ನಿರ್ವಹಿಸಿದ್ದಾಳೆ.

ಕೌಟುಂಬಿಕ ವ್ಯವಸ್ಥೆಯಲ್ಲಿ, ಜಮೀನ್ದಾರರು, ಶ್ರಮಿಕವರ್ಗದವರು, ಬಡತನದ ಬೇಗುದಿಯಲ್ಲಿ ಕುದಿದವರು, ರೈತಾಪಿ ವರ್ಗ, ಧನಿಕರ ಕರುಣೆ. ದರ್ಪ, ಸಂಕಷ್ಟ ಸಂದರ್ಭದಲ್ಲಿ ಅವರು ಸ್ಪಂದಿಸಿದ ರೀತಿ ಈ ಕೃತಿಗಳಲ್ಲಿ ಚರ್ಚಿತ ಸಂಗತಿ. ಸ್ವಾತಂತ್ರ್ಯ ಪೂರ್ವ ಘಟ್ಟದ ಕಾದಂಬರಿಗಳ ಕುಟುಂಬ ವ್ಯವಸ್ಥೆ ಚಿತ್ರಣ ಸೂಕ್ಷ್ಮವಾದದ್ದು. ಇಲ್ಲಿ ವರ್ಗಸಂಘರ್ಷ ಕಾಣುವದು. ಅಲ್ಲಿ ಮೂಡಿರುವ ವರ್ಗ ಸಂಘರ್ಷಗಳ ಸಂಕಟ ಅಷ್ಟಿಷ್ಟಲ್ಲ. ಕೌಟುಂಬಿಕ ಅಂತರಸಂಬಂಧಗಳು ಅಜ್ಜ, ತಂದೆ, ಮಗ, ಮೊಮ್ಮಗ, ಅಜ್ಜಿ, ತಾಯಿ, ಮಗಳು, ಮೊಮ್ಮಗಳು ಅತ್ತಿಗೆ ನಾದಿನಿ ತಾರತಮ್ಯ ಭಾವನೆಗಳು ಸ್ತ್ರೀ ಶೋಷಣೆ, ಗಂಡಿನ ಘರ್ಜನೆ ಕುರಿತಾದ ವಾದ, ತರ್ಕ, ಸಂಘರ್ಷಗಳು ಕಾದಂಬರಿಯಲ್ಲಿ ಚರ್ಚೆಗೆ ಬಂದಿವೆ. ಹೊಸ ಬದುಕಿನ ರೂಪ-ರೀತಿ ಹೇಳಿವೆ.

ಸಮಾಜಕ್ಕೆ ಒಂದು ನಿರ್ದಿಷ್ಟವಾದ ಚೌಕಟ್ಟು ಇರುತ್ತದೆ. ಅದರಲ್ಲಿ ಗುಣಾವಗುಣಗಳಿರುತ್ತವೆ. ಆ ಸಾಮಾಜಿಕ ವಿವೇಚನೆಗಳು, ಆದರ್ಶದ ಸ್ವರೂಪ ಲಕ್ಷಣಗಳು, ರೀತಿ ನೀತಿ ಸಂಬಂಧಗಳು ಒಳಸುಳಿವಿರುವವು. ವ್ಯಕ್ತಿ ಬದುಕಿನ ಸಂದರ್ಭದಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆ ಗೊತ್ತಿಲ್ಲದಂತೆ ತೆರೆದುಕೊಳ್ಳುವದು. ಮೊದಲ ಘಟ್ಟದ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಸಂದರ್ಭಗಳು ಆ ಕಾಲದ ಸಾಹಿತ್ಯವನ್ನು ಪ್ರಭಾವಿಸುತ್ತವೆ. "ಕಾದಂಬರಿ ಲೇಖಕನ ವೈಚಾರಿಕತೆಯ ಪ್ರಮುಖ ಮಾಧ್ಯಮವಾಗಿದೆ. ಸಾಮಾಜಿಕ ಸಮಸ್ಯೆಗಳು, ರಾಜಕೀಯ ಸಿದ್ಧಾಂತಗಳು, ನೈತಿಕತೆ ತಾತ್ವಿಕತೆಯ ಪ್ರತಿಪಾದನೆಗಳು, ವ್ಯಕ್ತಿ-ವ್ಯಕ್ತಿಗಳ, ವ್ಯಕ್ತಿ ಸಮಾಜ, ವ್ಯಕ್ತಿ-ದೈವ-ಸಂಬಂಧದ ಹೋರಾಟಗಳು ಕಾಣುವವು".[೧] ಹೀಗೆ ಕಾದಂಬರಿಗಳಲ್ಲಿ

ವಿಭಿನ್ನ ಮೌಲ್ಯಗಳ ಸಂಘರ್ಷ ಏರ್ಪಟ್ಟಿರುತ್ತದೆ. ಅಂತಹ ಸಂಘರ್ಷಗಳು ಕುಟುಂಬದ ಹೊರ ಹಾಗೂ ಒಳಮೈಯನ್ನು ರೂಪಿಸಿಕೊಳ್ಳುತ್ತಾ ಹೋಗುವವು.

ಈ ಸಂದರ್ಭದಲ್ಲಿ ಸಮಾಜದ ಜೀವನ ಚಿತ್ರಣ ಹಾಗೂ ಕೃತಿಕಾರನ ವೈಚಾರಿಕತೆ ಪ್ರಕಟವಾಗಿರುತ್ತದೆ. ಕಾದಂಬರಿ, ಕಾದಂಬರಿಕಾರರು ಬರೆದಂತಹ ವಿಷಯ ವಸ್ತುವಿನ ವಿಶ್ಲೇಷಿಸುವ ರೀತಿ, ಪ್ರತಿಕ್ರಿಯಿಸಿದ ಸಮಾಜದ ಸ್ವರೂಪ ಸಮಾಜದ ಬದಲಾವಣೆಯ ಸಂದರ್ಭಗಳಾಗಿರುವವು. ಒಬ್ಬ ಲೇಖಕನ ವೈಚಾರಿಕತೆಯೆನ್ನುವದು ಯಾವ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಸಾಧಿತವಾಗುವದೆಂಬುದು ಮುಖ್ಯ ವಿಚಾರವಾಗುವದು. ಕಾದಂಬರಿಕಾರನಿಗೆ ಒಮ್ಮೊಮ್ಮೆ ತಾನು ಬದುಕಿರುವ ಸಮಾಜದ ಬಿಂಬದಿಂದ ಹೊರಬರಲಾರದ ಸ್ಥಿತಿ ಇರುತ್ತದೆ. ಆ ಸಂದರ್ಭದಲ್ಲಿ ತನ್ನ ಸಂಪ್ರದಾಯಕ್ಕೆ ಶರಣಾಗುತ್ತಾನೆ. ಕೆಲವು ಸಂದರ್ಭದಲ್ಲಿ ಮಿಕ್ಕುವ ಸಾಧ್ಯತೆಯು ಇರುತ್ತದೆ. ಆದ್ದರಿಂದ ಇದನ್ನು ಸಂಪ್ರದಾಯದ ಸಾಮಾಜಿಕ ಚೌಕಟ್ಟಿನೊಳಗಿನ ಸಂಘರ್ಷವೆಂದು ಗುರುತಿಸಬಹುದು.

ಮತ್ತೊಂದೆಡೆ ಸಮಾಜದ, ಕುಟುಂಬದ ಬಂಧವನ್ನು ಮೀರುವ ಪ್ರಯತ್ನದಲ್ಲೆ ಲೇಖಕರು ಪ್ರತಿಕ್ರಿಯಿಸುತ್ತಾರೆ. ಆಗ ಎದುರಾಗುವ ಸಾಂಪ್ರದಾಯಿಕ, ಸಾಮಾಜಿಕ, ಕೌಟುಂಬಿಕ ಸಂಘರ್ಷಕ್ಕೆ ಮುಖಾಮುಖಿಯಾಗುವದು. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕಾದಂಬರಿಗಳಲ್ಲಿ ಈ ಸಂಗತಿ ಸಾಧ್ಯವಾಗಿರುವುದು ಕಾಣುವದು. ಹೀಗೆ ಕುಟುಂಬ ಹಾಗೂ ಸಮಾಜದ ಒಳಗೆ ನಡೆಯುವ ಸಂಘರ್ಷ ಸುಧಾರಣಾವಾದಿ ನಿಲುವು ಪಡೆದುಕೊಂಡಿರುವುದು. ಇಲ್ಲಿ ಬದಲಾವಣೆಯು ಪ್ರಧಾನ ಸಂಗತಿ. 'ಬದಲಾವಣೆ' ಎಂದರೆ ಆಮೂಲಾಗ್ರ ಪಲ್ಲಟಗೊಳಿಸುವದೆಂದಲ್ಲ. ಯಾವುದಾದರೂ ಒಂದು ಘಟಕ ಅಥವಾ ಅಂಶ ಮಾತ್ರ ಹೊಸದಾಗಿ ಸ್ವಾಗತಿಸುವ, ಇಲ್ಲವೆ ಸ್ವೀಕರಿಸುವ ಗುಣವಾಗಿರುವುದು.

ಸ್ತ್ರೀ ಶೋಷಣೆ:

"ಹೆಣ್ಣು ಮಗು ತಾಯಿಯ ಗರ್ಭದಲ್ಲಿರುವಾಗಲೆ ಲಿಂಗ ಭೇದ ತಾರತಮ್ಯಕ್ಕೆ ಒಳಗಾಗುತ್ತದೆ. ಸಾಮಾನ್ಯವಾಗಿ ಹೆಣ್ಣು ಗಂಡು ಎಂಬ ಭೇದಭಾವ ಸೃಷ್ಟಿಯಾಗುವದು ಕುಟುಂಬದ ಒಳಗಡೆಯೇ."[1] ಹುಟ್ಟುವಾಗಲೆ ತಾಯಿಯ ಎದೆ ಹಾಲಿನಿಂದಲೂ ವಂಚಿತಳಾಗುವ ಹೀನಾಯ ಸ್ಥಿತಿಗೆ ಸಿಲುಕಿ ಪರದಾಡುವಂತಾಗಿದೆ. ಭೂಮಿಯ ಮೇಲೆ ಜನಿಸಿದ ಪ್ರತಿಯೊಂದು ಮಗುವಿಗೂ ಜೀವಿಸುವ, ಬದುಕುವ ಹಕ್ಕಿದೆ. ಗಂಡು ಮಗುವಿಗಿಂತ ಯಾವುದೇ ವಿಷಯದಲ್ಲಿ ಅಂದರೆ ಬೌದ್ಧಿಕವಾಗಿ ಶಕ್ತವಾಗಿದ್ದಾಳೆ ಎಂಬ ಸಂಗತಿ ಎಲ್ಲರಿಗೂ ತಿಳಿದ ವಿಷಯ. ಇಂತಹ ಸಂಗತಿಯನ್ನು ಬಿ.ಎನ್. ಸುಮಿತ್ರಾಬಾಯಿಯವರು ಗ್ರಹಿಸಿರುವಂತೆ "ಸ್ತ್ರೀ ಪುರುಷರು ಕೆಲವು ವಿಷಯಗಳಲ್ಲಿ ಭಿನ್ನರಾದರೂ ಜ್ಞಾನ, ಬುದ್ಧಿ ಮುಂತಾದವು ಮಾತ್ರ ಇಬ್ಬರಿಗೂ ಸಮನಾಗಿಯೇ ಇರುವವು. ಆದ್ದರಿಂದ ಜ್ಞಾನಾಭಿವೃದ್ಧಿಯೂ ಪುರುಷರಿಗೆ ಹೇಗೋ

ಸ್ತ್ರೀಯರಿಗೂ ಹಾಗೆಯೇ ಪರಮ ಪ್ರಯೋಜನಕಾರಿಯೆನ್ನುವದರಲ್ಲಿ ಸಂದೇಹವೇ ಇಲ್ಲ."[೩] ಈ ಸಂಗತಿ ಅರಿತುಕೊಂಡರೆ ಲಿಂಗಭೇದ ಸಮಸ್ಯೆಯೇ ಕಾಣಿಸದು. ಆದರೆ ಇದಕ್ಕೆ ವಿರುದ್ಧವಾಗಿ ಹೆಣ್ಣನ್ನು ಮಗುವಾಗಿದ್ದಾಗಿನಿಂದಲೆ ಮಾನಸಿಕವಾಗಿ, ಬೌದ್ಧಿಕವಾಗಿ ಶಕ್ತಿಗುಂದಿಸುವ ತಂದೆ-ತಾಯಿಯರನ್ನೆ ಇದಕ್ಕೆ ಹೊಣೆ ಮಾಡಬೇಕು.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿ ಇಂದಿರಾಬಾಯಿಯ ಅಂಬಾಬಾಯಿ ಭೀಮರಾಯ ಸಂತಾನಕ್ಕಾಗಿ ಅಂಗಲಾಚಿದರೂ, ಎಷ್ಟೋ ವರ್ಷದ ತರುವಾಯ ಜನಿಸಿದ ಮಗು ಗಂಡು ಎಂದಾಗ ಖುಷಿಯಾದ, ಭೀಮರಾಯ ಹೆಣ್ಣು ಮಗು ಎನ್ನುತ್ತಲೆ ಅಂಸತುಷ್ಟನಾಗುವುದು ಲಿಂಗಭೇದ ನೀತಿಯೇ ಸರಿ. ಸ್ತ್ರೀ ಎಂಬ ಕಾರಣಕ್ಕೆ ಅಕ್ಷರ ಜ್ಞಾನದ ವಿಷಯದಲ್ಲಿ ಅವಳು ತಲೆಹಾಕಿದಂತಿಲ್ಲ. ಇಂದಿರಾಬಾಯಿ ಓದಿಗೆ ತಂದೆ-ತಾಯಿಯರೆ ಅಡ್ಡಿಯಾಗಿದ್ದಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಹೇಳಿಕೊಳ್ಳುವ ಸ್ಥಾನಮಾನಗಳಿರಲಿಲ್ಲ. ಪುರುಷ ಪ್ರಧಾನ ಮೌಲ್ಯಗಳಲ್ಲಿ ಸತ್ವಹೀನ ಬದುಕನ್ನು ಬಾಳಬೇಕಿತ್ತು. ಅವಳ ಆಶೆ ಆಕಾಂಕ್ಷೆ ಮತ್ತು ಅಭಿಲಾಷೆಗಳೆಲ್ಲವೂ ಪುರುಷರ ಅಕ್ರಮಣ ನೀತಿಯಿಂದ ಸ್ತ್ರೀ ಶೋಷಣೆ ಹೆಚ್ಚಾಯಿತು. ವಿವಾಹ ಮತ್ತು ಕುಟುಂಬವೆಂಬ ಎರಡು ಸಾಮಾಜಿಕ ಸಂಗತಿಗಳಿಂದ ಬಂದಿಸಲ್ಪಟ್ಟಿದ್ದವು. ಅಂದಿನ ವಿವಾಹ ಸ್ತ್ರೀಯನ್ನು ನಾಲ್ಕು ಗೋಡೆಗೆ ಸೀಮಿತಗೊಳಿಸಿತ್ತು.... "ಹಾಗೆ ನೋಡಿದರೆ ವೇದ ಕಾಲಿನ ಸಮಾಜದ ಸ್ತ್ರೀ ಉತ್ತಮ ಸ್ಥಾನಮಾನ ಪಡೆದಿದ್ದಳು. ಇದನ್ನು ಸಮಾಜ ಮತ್ತು ಮಾನವ ಶಾಸ್ತ್ರಜ್ಞರು ದೃಢಪಡಿಸಿದ್ದಾರೆ. ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲಿ ಭಾಗವಹಿಸುತ್ತಿರಲಿಲ್ಲ ಆದರೆ ದೇವರ ಬಗೆಗೆ ಎನ್ನುತ ಜ್ಞಾನ ಪಡೆಯುವ ಮತ್ತು ತಾತ್ವಿಕ ಜಿಜ್ಞಾಸೆಯಲ್ಲಿ ಭಾಗವಹಿಸುವ ಸ್ತ್ರೀಯರ ಮೇಲೆ ಯಾವುದೇ ತರಹದ ನಿರ್ಬಂಧನೆಗಳಿರಲಿಲ್ಲ. ಅಂತೆಯೇ ಋಗ್ವೇದದ ಹಲವು ಸ್ತೋತ್ರಗಳು ಮಹಿಳೆಯರಿಂದ ರಚಿಸಲ್ಪಟ್ಟಿದ್ದವು."[೪] (ವಿಶ್ವಾವರ, ಅಪಾಲ, ಲೋಪಮುದ್ರಾ, ಶಶಿಯಾಸಿ, ಘೋಷ, ಇಂದ್ರಾಣಿ, ಶಚೀ, ಇನ್ನು ಮುಂತಾದವರು ಋಕ್‌ಗಳನ್ನು ರಚಿಸಿದ್ದಾಗಿ ತಿಳಿದುಬರುತ್ತದೆ) ಗಂಡಿಗಾಗಿ ಪ್ರಾರ್ಥಿಸುವ ಜೀವಿಗಳು ಈಗಲೂ ಕಾಣುತ್ತಿರುವುದು ಖೇದಕರ.

ಹೆಣ್ಣು ಮಗಳನ್ನು ಕನಿಷ್ಠವಾಗಿ ಕಂಡ ಸಮಾಜ ಮುಂದೆ ಬಂದಂತೆ ಹೆಣ್ಣನ್ನು ಸಮಸ್ಯಾತ್ಮಕ ಜೀವಿಯಂತೆಯೇ ಕಂಡಿತು. ಬಿ.ಸಿ. ಮಂಗಳಾ ಗುರುತಿಸಿದಂತೆ "ಐತ್ತರೇಯ ಬ್ರಾಹ್ಮಣದ ಹೊತ್ತಿಗಾಗಲೆ ಗಂಡು ಮಗು ಮನೆಯ ಬೆಳಕೆಂದು ಹೆಣ್ಣು ಮನೆಯ ಸಮಸ್ಯೆಯೆಂದು ತೀರ್ಮಾನಿಸಲಾಗಿತ್ತು"[೫] ಹೀಗೆ ಶತಮಾನಗಳಿಂದ ಸಾಮಾಜಿಕ, ಸಾಂಪ್ರದಾಯಿಕ ಕಟ್ಟುಪಾಡುಗಳಲ್ಲಿ ಬೆಳೆದ ಮಹಿಳೆ ತ್ಯಾಗದ ಪ್ರತೀಕವಾಗಿದ್ದಾಳೆ. ಸ್ತ್ರೀಯನ್ನು ದೇವತೆಯೆಂದು ಹೇಳುತ್ತಾ ಶೋಷಣೆಗೆ ಈಡು ಮಾಡಿದ್ದಾರೆ. ಅಂತಹ

ಸಂಗತಿಗಳು ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳ ಲಿಂಗ ಸಂಘರ್ಷದ ಹಿನ್ನೆಲೆಯಲ್ಲಿ ಚಿತ್ರಿತವಾಗಿದ್ದಾಳೆ ಮತ್ತು ಪಾತ್ರಗಳ ಮುಖಾಂತರ ಪ್ರತಿಭಟನೆ ವ್ಯಕ್ತಗೊಂಡಿದೆ.

ಕೌಟುಂಬಿಕವಾಗಿ ಪುರುಷ ಪ್ರಧಾನವಾಗಿ ಸ್ತ್ರೀಯರ ವೃತ್ತಿ ಮನೆಯ ನಾಲ್ಕು ಗೋಡೆಗಳಿಗೆ ಸಂಬಂಧಿಸಿದ್ದು. ಪುರುಷರು ಮನೆಯ ಹೊರಗೆ ದುಡಿದರೆ ಸ್ತ್ರೀಯು ಮನೆಯ ಒಳಗೆ ಕೆಲಸದ ಜೊತೆ ಮನೆಯ ಹೊರಗಿನ ಹೊಲಗದ್ದೆಯಲ್ಲಿ ದುಡಿಮೆಗೆ ಹೋಗಿದ್ದು ಕಾಣುವುದು. ಸ್ತ್ರೀ ದುಡಿಮೆ ಪುರುಷನಿಗಿಂತ ಎರಡು ಪಟ್ಟು ಹೆಚ್ಚು, ಸ್ವಾತಂತ್ರ್ಯಪೂರ್ವ ಕಾದಂಬರಿಗಳಲ್ಲಿ ಸ್ತ್ರೀಪುರುಷ, ಕೌಟುಂಬಿಕ ಸಂಘರ್ಷಗಳಿವೆ. ಹೆಚ್ಚಾಗಿ ಸ್ತ್ರೀಯರ ಮುಖ್ಯವೃತ್ತಿ ಕೃಷಿಕಾರ್ಯಗಳು. ಸ್ವಾತಂತ್ರ್ಯ ಪೂರ್ವದ ಸಂದರ್ಭಗಳಲ್ಲಿ ಆರ್ಥಿಕವಾಗಿ ಬ್ರಾಹ್ಮಣ ಪುರುಷರು ಪೌರೋಹಿತ್ಯ, ಜ್ಯೋತಿಷ್ಯ ಶಾಸ್ತ್ರ ಮುಂತಾದ ವೃತ್ತಿಯಿಂದಾಗಿ ಆರ್ಥಿಕವಾಗಿ ಕೆಲ ಮಟ್ಟಿಗೆ ಸಂಪನ್ನರಾಗಿದ್ದರು. 'ಇಂದಿರಾಬಾಯಿ', ಕಾದಂಬರಿಯ 'ಸುಶೀಲೆ', 'ನಭಾ' ಕಾದಂಬರಿಯ 'ನಭೆ' ವಾಗ್ದೇವಿ ಕಾದಂಬರಿಯ 'ಭಾಗೀರಥಿ' ಮಗಳು ವಾಗ್ದೇವಿ ಬ್ರಾಹ್ಮಣ ಜಾತಿಯಾದರೂ ಹೊಲಗದ್ದೆಗಳಲ್ಲಿ ದುಡಿಮೆ ಮಾಡಿದ ಉದಾಹರಣೆಗಳನ್ನು ಕಾಣುತ್ತೇವೆ.

ಮಧ್ಯಮ ವರ್ಗದ ಜಮೀನ್ದಾರ ಕುಟುಂಬದ ಬಹುತೇಕ ಸ್ತ್ರೀಯರ ವೃತ್ತಿ ಕೃಷಿ ಮತ್ತು ಕೃಷಿ ಕಾರ್ಮಿಕತನ. ಕುಟುಂಬ ಜೀವನದಲ್ಲಿ ಗಂಡು ಹೆಣ್ಣು ಸಮಾನ ಹಕ್ಕು ಅಧಿಕಾರಗಳಿರಬೇಕೆಂಬುದು ತಾತ್ವಿಕವಾಗಿ ಒಪ್ಪಿದ ವಿಚಾರ. ಆದರೆ ಅನುಷ್ಠಾನದಲ್ಲಿ ಈ ಅಂಶ ಕಡೆಗಣಿಸಲ್ಪಟ್ಟಿದೆ. ಮಾನವ ಸಮಾಜದಲ್ಲಿ ಕೃಷಿಯ ಆವಿಷ್ಕಾರವಾದ ಮೇಲೆ ಗಂಡು ಹೆಣ್ಣುಗಳ ನಡುವೆ ಸ್ಥಾನಮಾನಗಳು ಭಿನ್ನವಾಗಿವೆ. ಭೂಮಿ ಒಂದು ಆಸ್ತಿಯಾಗಿ ಪರಿಗಣಿಸಲ್ಪಟ್ಟಂತೆ ಹೆಣ್ಣು ಕೂಡಾ ಒಂದು. ಸ್ತ್ರೀ ಕೂಡಾ ಒಂದು ವಸ್ತುವಾಗಿ ಗಂಡಿನ ಅಂಕಿತಕ್ಕೆ ಒಳಗಾದಳು. ಈ ದೃಷ್ಟಿಯಿಂದ ಗಂಡಿನ ಅವಲಂಬನೆಯಲ್ಲಿ ಬದುಕು ನೂಕಬೇಕಾಯಿತು. ಸ್ತ್ರೀಗೆ ಸಂಬಂಧಿಸಿದ ಹಕ್ಕುಬಾಧ್ಯತೆಗಳು ಪುರುಷನ ಅಂಕಿತಕ್ಕೊಳಪಟ್ಟು ಆಕೆಯ ಮೇಲೆ ನಿರ್ಬಂಧಗಳು ಹೇರಲ್ಪಟ್ಟವು.

ಸಂಚಿ ಹೊನ್ನಮ್ಮ ತನ್ನ 'ಹದಿಬದೆಯ ಧರ್ಮ'ದಲ್ಲಿ "ಪತಿ ಹೊರಗೆ ಹೋದಾಗ ಅವನನ್ನು ಹೇಗೆ ನೋಡಲಿ, ಯಾವ ಮಾತುಗಳಿಂದ ಸತ್ಕರಿಸಲಿ, ಯಾವ ರೀತಿ ಸೇರಲಿ, ಯಾವ ರೀತಿ ಗೌರವ ನೀಡಲಿ, ಹೇಗೆ ತೃಪ್ತಿ ಪಡಿಸಲೆಂದು ಮನಸ್ಸಿನಲ್ಲಿ ಸದಾ ಚಿಂತಿಸುತ್ತಲಿರಬೇಕು. ಗಂಡನ ಧ್ವನಿ ಕೇಳಿದರೆ ದೇಹದಲ್ಲಿ ಎಂತಹದೆ ಆಲಸಿಕೆ ಇದ್ದರೂ ದೂರೀಕರಿಸಿ ಮಕ್ಕಳೊಡನಾಡುತ್ತಿದ್ದರೂ ಬಿಟ್ಟು ಮುಖದ ತುಂಬ ರತಿ ಭಾವ ತುಂಬಿಕೊಂಡು ಇದಿರುಗೊಳ್ಳಬೇಕು. ಅವನ ಪಾದ ತೊಳೆದು ದುಕೂಲದಿಂದ ಒರೆಸಿ ದಣಿವಾರಿಸುವಂಥ ನಲ್ನುಡಿಗಳನ್ನು ಆಡಬೇಕು".[೬] ಹೀಗೆ ಬೋಧಿಸಿದ ಹೊನ್ನಮ್ಮನ ನುಡಿಗಳು ಸ್ವತಂತ್ರ

ಪೂರ್ವ ಕನ್ನಡ ಕಾದಂಬರಿಗಳ, ಸ್ತ್ರೀ ಪಾತ್ರಗಳು ಅನುಸರಿಸಿರುವುದು ಕಾಣುವದು. ಇಲ್ಲಿ ಬಂದಿರುವ ಭಾವ ಸಹಜವಾಗಿ ಬಂದವು ಅಲ್ಲ. ಕೌಟುಂಬಿಕ ಒತ್ತಡ, ಸಾಮಾಜಿಕ ಒತ್ತಡದಿಂದ ಬಂದವುಗಳು.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಹೇಳಿಕೊಳ್ಳುವಂತಹ ಸ್ಥಾನಮಾನಗಳಿರಲಿಲ್ಲ. ಪುರುಷ ಪ್ರಧಾನ ಕೌಟುಂಬಿಕ ಮೌಲ್ಯಗಳೊಳಗೆ ಸತ್ವಹೀನ ಬದುಕನ್ನು ಬಾಳಬೇಕಿತ್ತು. ಅವಳ ಆಶೆ ಮತ್ತು ಆಕಾಂಕ್ಷೆ, ಅಭಿಲಾಷೆಗಳು ಪುರುಷನ ದೌರ್ಜನ್ಯಕ್ಕೆ ಒಳಗಾಗಿ ದಮನಗೊಂಡಿದ್ದವು. ಸ್ತ್ರೀಗೆ ನೈಸರ್ಗಿಕ ಕೊಡುಗೆಯೊಂದು ಅಭಿಶಾಪವಾಗಿ ಪರಿಣಮಿಸಿದ್ದರಿಂದಲೋ ಇಲ್ಲವೇ ಪುರುಷನ ಅಕ್ರಮಣ ನೀತಿಯಿಂದಾಗೋ ಒಟ್ಟಾರೆಯಾಗಿ ಸ್ತ್ರೀ ಶೋಷಣೆಯ ಪ್ರಕೋಪಕ್ಕೆ ತಳ್ಳಲ್ಪಟ್ಟಳು. ವಿವಾಹ ಮತ್ತು ಕುಟುಂಬ ಎಂಬ ಎರಡು ಸಾಮಾಜಿಕ ಸಂಸ್ಥೆಗಳು ಅವಳನ್ನು ಮತ್ತಷ್ಟು ಬಂಧಿಸಿದವು. ವಿವಾಹವೆಂಬ ಸಂಸ್ಥೆ ಸ್ತ್ರೀಯನ್ನು ಕುಟುಂಬದ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಿ ಅವಳ ಶ್ರಮವನ್ನು ಅನುತ್ಪಾದಕವೆಂದು ಪರಿಗಣಿಸಿತು. ಸಮಾಜಶಾಸ್ತ್ರಜ್ಞ ಎಸ್. ರಾಜಶೇಖರ ಹೇಳುವಂತೆ "ಅಥರ್ವಣ ವೇದದಲ್ಲಿ ಧಾರ್ಮಿಕ ಭಾವನೆಗಳು ಗಟ್ಟಿಗೊಂಡು ಸ್ವರ್ಗ ನರಕದ ಪ್ರಜ್ಞೆಯ ಚೇತರಿಕೆಯಿಂದಾಗಿ ಸತ್ತವರ ಆತ್ಮಕ್ಕೆ ಶಾಂತಿಯನ್ನುಂಟು ಮಾಡಲು ತರ್ಪಣವನ್ನು ನೀಡುವ ಪದ್ಧತಿ ಆಚರಣೆಗೆ ಬಂದಿತು. ಇದರಿಂದ ಗಂಡು ಮಗು ಮಾತ್ರ ಆದರ ಹಕ್ಕನ್ನು ಪಡೆದು ಹೆಣ್ಣು ಮಗು ನಿಕೃಷ್ಟವಾಯಿತು"[2] ಹೀಗೆ ಸ್ತ್ರೀಯರನ್ನು ಹೇಯವಾಗಿ ಕಂಡ ಸಮಾಜ ಮುಂದೆ ಬಂದಂತೆ ಸ್ತ್ರೀಯನ್ನು ಸಮಸ್ಯಾತ್ಮಕ ಜೀವಿಯೆಂಬಂತೆಯೇ ಕಂಡಿತು.

ಕುಟುಂಬದ ಪ್ರಾರಂಭ ವಿವಾಹ ಬಂಧನದಿಂದ ಆರಂಭವಾಗುವುದು. ಈ ಕುರಿತು ಕಾದಂಬರಿಗಳಲ್ಲಿ ಸಾಕಷ್ಟು ಚರ್ಚೆ ವಾದಗಳು ನಡೆದಿವೆ. ಅಲ್ಲಿ ಮುಖ್ಯವಾಗಿ ಕೃತಿಕಾರ ಪ್ರತಿನಿಧಿಸುವ ಸಮಾಜ ಮತ್ತು ಆತನ ನಿಲುವುಗಳು ಮುಖ್ಯ. "ಕನ್ನಡದ ಆರಂಭದ ದೆಸೆಯ ಹೆಚ್ಚಿನ ಕಾದಂಬರಿಕಾರರಲ್ಲಿ ವೈದಿಕರು ಹಾಗಾಗಿ ಅವರ ಸಮಸ್ಯೆಗಳು ಅವರ ಸಮಾಜದವೇ ಆಗಿವೆ. ಇದೇ ಅಭಿಪ್ರಾಯವನ್ನು ಶಿವರಾಮ ಪಡಿಕಲ್ ಅವರು ವ್ಯಕ್ತಪಡಿಸಿರುವುದನ್ನು ಇಲ್ಲಿ ನೆನೆಯಬಹುದು."[8] ಇಲ್ಲಿ ಪರಿಶೀಲಿಸಲಾದ ಸಾಮಾಜಿಕ ಕಾದಂಬರಿಗಳಲ್ಲಿ ಸ್ತ್ರೀಗೆ ಸಂಬಂಧಿಸಿದ ಒಂದಲ್ಲ ಒಂದು ಬಗೆಯ ಸಾಮಾಜಿಕ ವಿಚಾರಗಳು ಪ್ರಸ್ತಾಪಗೊಳ್ಳುತ್ತವೆ.

ಮೊದಲ ಹಂತದ ಕಾದಂಬರಿಗಳಾದ ಸೂರ್ಯಕಾಂತ, ಚಂದ್ರಪ್ರಭಾಗಳಲ್ಲಿ ಚಿತ್ರಿತವಾಗಿರುವ ಸಮಾಜ ಉಳಿದ ಕಾದಂಬರಿಗಳ ರೀತಿಯದ್ದಲ್ಲವೆಂದು ಎನಿಸುವುದು. ಹಾಗೆಂದು ಅವು ಐತಿಹಾಸಿಕ ಕಾದಂಬರಿಗಳಲ್ಲ. ಆ ಕಾದಂಬರಿಗಳು ಚಿತ್ರಿಸುವ ಸಮಾಜ ಕಾದಂಬರಿ ರಚಿತವಾದ ಕಾಲಕ್ಕಿಂತ ಹಿಂದಿನದಾಗಿರಬಹುದು. ಸಮಕಾಲೀನ ಸಾಮಾಜಿಕ ವಿದ್ಯಮಾನಗಳ ಕುರಿತಾದ ಪ್ರಜ್ಞೆ ಇಲ್ಲವೆ ಪರೋಕ್ಷ

ಪ್ರತಿಕ್ರಿಯೆ ಅಲ್ಲಿ ಕಂಡುಬರುವುದು. ಅತ್ತೆ ಸೊಸೆ, ಅತ್ತಿಗೆ ನಾದಿನಿ, ಗಂಡ ಹೆಂಡತಿ, ಅಣ್ಣ ತಂಗಿ, ತಂದೆ ಮಗಳು, ತಾಯಿ ಮಗಳು ಮುಂತಾದ ಸಂಬಂಧಗಳಲ್ಲಿ ಸಾಕಾರಗೊಳ್ಳುವ ಸ್ತ್ರೀ ಪಾತ್ರದ ವಿನ್ಯಾಸಗಳನ್ನು ಈ ಕಾದಂಬರಿಗಳಲ್ಲಿ ದರ್ಶಿಸಬಹುದು. ಅವು ಒಟ್ಟಾಗಿ ಸಮಕಾಲಿನ ಸಮಾಜ ಬದುಕಿನಲ್ಲಿ ಸ್ತ್ರೀಯ ಪಾತ್ರ ಕೌಟುಂಬಿಕ ಚೌಕಟ್ಟಿನಲ್ಲಿ ಮೂಲಭೂತ ಕಲ್ಪನೆಗಿಂತ ಭಿನ್ನವಾದುದ್ದೇನೂ ಅಲ್ಲ.

ಭಾರತೀಯ ಅರ್ಥವ್ಯವಸ್ಥೆಯಲ್ಲಿ ಕಡೆಗಣಿಸಲ್ಪಟ್ಟ ಮಧ್ಯಮ ಮತ್ತು ಕೆಳವರ್ಗದ ಸ್ತ್ರೀಯರು ಗೃಹಕೃತ್ಯದ ಜೊತೆ ಹೊಲ-ಗದ್ದೆಗಳಲ್ಲಿ ದುಡಿದಿದ್ದಾರೆ. ಆದರೂ ಸ್ತ್ರೀಯ ಸ್ಥಾನಮಾನಗಳು ಹೇಳಿಕೊಳ್ಳುವಷ್ಟು ಸುಧಾರಿಸಿರಲಿಲ್ಲ. ಸ್ವಾವಲಂಬನೆಗೆ ಹಂಬಲಿಸಿದಂತೆ ಕಂಡಿದೆ. ಅದರಲ್ಲಿ ಆರ್ಥಿಕ ಸ್ವಾಲಂಬನೆಗೆ ಇನ್ನು ಕೊರಗಿದ ಸಂಗತಿಗಳು ಚರ್ಚಿತ. ಮಧ್ಯಮ ಮತ್ತು ಕೆಳವರ್ಗದ ಗೃಹಿಣಿಯರನ್ನು ಪರಿಶೀಲನೆ ಮಾಡುತ್ತಾ ಹೋಗುವದಾದರೆ, ಸಂಘರ್ಷ ಗಮನಿಸುವದಾದರೆ ಪುರುಷನಿಗೆ ಸಮಾನವಾಗಿ ದುಡಿದರೂ ಗೃಹ ಕೆಲಸಕ್ಕೆ ಮಾತ್ರ ಸೀಮಿತವಾಗಿದ್ದಾಳೆ.

ಇಂದಿರಾಬಾಯಿ, ಕಾದಂಬರಿಯ ಸುಶೀಲೆ ಬಡತನವನ್ನು ಬೆನ್ನಿಗಂಟಿಸಿಕೊಂಡು ಬೆಳೆದವಳು. ಮಗ ಭಾಸ್ಕರನನ್ನು ವಿದ್ಯಾವಂತನನ್ನಾಗಿಸುವ ಹಂಬಲದಿಂದ ಹೋರಾಟ ಬಹುತೇಕ ಭಾರತೀಯ ಸಮಾಜದ ಸ್ತ್ರೀಯರ ಹೋರಾಟದ ಮಾದರಿಯಾಗಿದೆ. ಅದಕ್ಕಿಂತ ಪೂರ್ವದಲ್ಲಿ ಬರುವ ಅಂಬಾಬಾಯಿ ಶ್ರೀಗಳಿಂದ ಪಡೆದ ಸಂತಾನ ವ್ರತವನ್ನಾಚರಿಸಿ ಹೆಣ್ಣನ್ನು ಹೆತ್ತಾಗ "ಗಂಡಾದರೇನು ? ಹೆಣ್ಣಾದರೇನು? ಮಗು ಧೀರ್ಘಾಯುವಾಗಿದ್ದರೆ ಸಾಕು ದೇವರ ದಯೆಯಿಂದ ನಮಗೇನು ಗತಿಗೇಡುವಿಲ್ಲವಷ್ಟೆ ಸಂತಾನ ಗೋಪಾಲನ ಕಟಾಕ್ಷದಿಂದ ನನ್ನ ಬಂಜೆ ಎಂಬ ಕೊರತೆಯೊಂದು ಹೋಯಿತಷ್ಟೆ? ಸಾಕು"[6] ಎಂಬ ಸಮಾದಾನ ತಾಯ್ತನದ ಹಂಬಲದ ಪ್ರವೃತ್ತಿ. ಪುರುಷರ ಮನೋಭಿಲಾಷೆ ಈಡೇರಿಸುವದು, ಪುರುಷ ಪ್ರಾಧಾನ್ಯತೆ ಸ್ಪಷ್ಟಪಡಿಸುವದು. ಇಲ್ಲಿ ಸ್ತ್ರೀಯರ ತಾಯ್ತನದ ಹಂಬಲವನ್ನು ಪುನಃ ಸ್ಮರಿಸುವ ಸಮಾಜ, ವಿಧವೆಯ ತಾಯ್ತನದ ಹಂಬಲದ ವಿಷಯದಲ್ಲಿ ಮಾತ್ರ ಮೌನ ತಾಳಿದ್ದು ವಿಪರ್ಯಾಸವೇ ಸರಿ. ವಿಧವೆಯ ಮನೋಸ್ಥಿತಿ ಅರಿಯದೆ ಬಳಸಿಕೊಳ್ಳಲು ಹಂಬಲಿಸುವಲ್ಲಿ ಯಾವ ನೈತಿಕತೆಯು ಅಡ್ಡಿಯಾಗದೆ ಪುರುಷ ಪ್ರಧಾನ ಸಮಾಜ ಸ್ತ್ರೀಯರ ಮೇಲೆ ಅಧಿಕಾರದ ಮನದಟ್ಟು ಪ್ರಸ್ತಾಪಿಸುವುದು.

ವಾಸ್ತವ ನೆಲೆಗಟ್ಟಿನಲ್ಲಿ ನಿಂತು ತಾತ್ವಿಕ ವಿಚಾರದಲ್ಲಿ ಮುಳುಗಿದಾಗ ತಾಯ್ತನವೆಂಬುದು ಹಂಬಲ ಪುಷ್ಟೀಕರಿಸಿ, ಸಂತಾನೋತ್ಪತ್ತಿಗೆ ಮಾತ್ರ ಸೀಮಿತ. ಸಂಸ್ಕೃತಿಯವಿಕಸಿತ ಸ್ಥಿತಿಯಲ್ಲಿ ಎಲ್ಲಾ ತಾಯಂದಿರೂ ಸಹ ಮಾತೃ ವಾತ್ಸಲ್ಯವುಳ್ಳವರೆ. ಇದಕ್ಕೆ ಉದಾಹರಣೆ ಇಂದಿರಾಬಾಯಿ ಕಾದಂಬರಿಯ ಜಲಜಾಕ್ಷಿ ತಮ್ಮ ಆಶ್ರಯಿತ ಬಾಲಕ ಬಾಸ್ಕರನನ್ನೇ ಮಗನೆಂದು ಭಾವಿಸಿ, ಅವನ ಸುಖ ಸಮೃದ್ಧಿಯಲ್ಲಿಯೇ ಸಂತೃಪ್ತಳಾಗುವುದು ಒಂದೆಡೆಯಾದರೆ, ಇಂದಿರಾ ಕಾದಂಬರಿಯ ವಿಧವೆ ದೇವಯಾನಿ ತನ್ನನ್ನು ಪ್ರೀತಿಸಿ

ಬೇರೊಬ್ಬಳನ್ನು ಮದುವೆಯಾದ ಪ್ರಿಯಕರ ಕಮಲಾಕಾಂತನ ಮಗ ರಮಾಕಾಂತನನ್ನು ನೋಡಿ "ನಾನೇ ಕಮಲಾಕಾಂತನ ಪತ್ನಿಯಾಗಿದ್ದರೆ ರಮಾಕಾಂತನು ನನ್ನ ಮಗನೆ ಆಗಿರುತ್ತಿದ್ದನಲ್ಲವೆ"?[೧೦] ಎಂಬ ಭಾವುಕತೆಯಲ್ಲಿ ಒಂದು ಕ್ಷಣ ಮೈಮರೆಯುವಳು. ಮುಂದುವರೆದು ಇಲ್ಲಿ ರಮಾಕಾಂತನನ್ನು ತನ್ನ ಸ್ವಂತ ಮಗನೆಂದು ಕಾಳಜಿಯನ್ನು ವಹಿಸಿದ್ದು, ಕಳಕಳಿಯಿಂದ ನೋಡಿಕೊಂಡಿದ್ದು, ಮಾತೃ ಹೃದಯವೆಂಬುದು ನಿಸ್ವಾರ್ಥದಿಂದ ಕೂಡಿದ್ದು ಎಂಬುದನ್ನು ಸಮರ್ಥಿಸುವದು.

'ನಭಾ' ಕಾದಂಬರಿಯಲ್ಲಿನ ರಮಾಮಣಿಯ ಭಾವನ ಮಗಳು, ಬಾಲವಿಧವೆ ನಭಾಳನ್ನು ತನ್ನ 'ಕಣ್ಣರೆಪ್ಪೆಯಲ್ಲಿಟ್ಟು ರಕ್ಷಿಸಿಕೊಂಡರೆ 'ಇಂದಿರಾಬಾಯಿ' ಕಾದಂಬರಿಯ ಸುಶೀಲೆ ಬಡತನವೆಂಬುದು ಬೆನ್ನಿಗಂಟಿ ಕಿತ್ತು ತಿನ್ನುತ್ತಿದ್ದರೂ ಮಗ ಭಾಸ್ಕರನನ್ನು ವಿದ್ಯಾವಂತನನ್ನಾಗಿಸುವ ಹಂಬಲದಿಂದ ದುಖಿಃಸುತ್ತಾಳೆ. ಒಂಬತ್ತು ತಿಂಗಳ ಕಾಲ ಹೊತ್ತು ಅನುಭವಿಸಿದ ನೋವಿಗಿಂತಲೂ ಹೆರಿಗೆಯಲ್ಲಿ ಉಂಟಾಗುವ ಆ ಯಾತನೆ ಸಾವು ಬದುಕಿನ ಮಧ್ಯದ ಹೋರಾಟವೇ ಸರಿ. ಇದು ಆ ತಾಯಿಯ ತ್ಯಾಗ ಮನೋಭಾವದ ಪ್ರತೀಕ. ಇಷ್ಟಲ್ಲದೆಯೇ ಮಗುವಿನ ಲಾಲನೆ ಪಾಲನೆಯಲ್ಲಿಯೇ ಜೀವನದ ಸಾರ್ಥಕತೆ ಕಾಣುವಳು. ಹೀಗಿರುವಾಗ ತಮ್ಮ ಮುಂದೆಯೇ ತಮ್ಮ ಮಕ್ಕಳು ಕಷ್ಟದಲ್ಲಿ ಬಳಲುವುದನ್ನು ನೋಡಿ ಯಾವ ಮಾತೃ ಹೃದಯವೂ ಸಹಿಸದು.

ಸ್ತ್ರೀಯರಿಗೆ ಉಂಡು ಉಟ್ಟುಕೊಳ್ಳುವದಕ್ಕೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳುವ ತಂದೆ ತಾಯಿಯರಲ್ಲೂ ಮಗಳು ಮುಕ್ತವಾಗಿ ಜೀವಿಸಲು ನಿರ್ಬಂಧವಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸುವಾಗಲಂತೂ ಲಿಂಗಭೇದ ಮಾಡಲಾಗುತ್ತದೆ. ಗಂಡು ಮಗು ಆಧುನಿಕ ಶಿಕ್ಷಣದಿಂದ ಪ್ರಗತಿಪರವಾದ ವಿಚಾರಗಳಿಂದ ಉನ್ನತ ಹುದ್ದೆಯನ್ನು ಪಡೆಯುವಂತೆ ಪ್ರೋತ್ಸಾಹಿಸಿದರೆ, ಅಡುಗೆ ಮನೆಗೆ ಸೀಮಿತವಾದ ವಿದ್ಯೆಯನ್ನು ಮಾತ್ರ ಹೆಣ್ಣು ಮಕ್ಕಳಿಗೆ ಕಲಿಸಲಾಗಿತ್ತು.

ಗೃಹ ಕೃತ್ಯವನ್ನು ನಿಭಾಯಿಸಲು ಬೇಕಾದ ಅಗತ್ಯವಾದ ಜ್ಞಾನವಷ್ಟೇ ಸಾಕೆಂದು ಪುರಸ್ಕರಿಸುವ ಸಾಂಪ್ರದಾಯಿಕ ಮನೋಭಾವದ ರಾಧಾರಾಣಿ ತನ್ನ ಲೇಖನವೊಂದರಲ್ಲಿ "ಸ್ತ್ರೀಯರು ಕಲಿಯಬಹುದಾದ ವಿಷಯಗಳಲ್ಲಿ ಮನೆ-ವಾರ್ತೆ ಬಹಳ ಮುಖ್ಯವಾದದ್ದು. ಮನೆಗೆಲಸದಲ್ಲಿ ನಿಪುಣಳಾಗದವಳು ಎಷ್ಟು ವಿದ್ಯೆ ಗಳಿಸಿದರು ಆದರಣೀಯಳಲ್ಲ" ಎಂದು ಬರೆಯುತ್ತಾರೆ."ಕೆಲ ವಿದ್ಯಾವಂತ ಸ್ತ್ರೀಯರ ಪಾತಿವ್ರತ್ಯ, ತ್ಯಾಗ, ವಿಧೇಯತೆ, ಅರ್ಪಣಾ ಮನೋಭಾವನೆ, ಶ್ರದ್ಧೆ, ಭಕ್ತಿ, ದಯೆ; ತಾಳ್ಮೆ, ಪ್ರೇಮ ಮೊದಲಾದ ಸ್ತ್ರೀ ಸಹಜ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಕುರಿತು ಮಾತಾಡಿದ್ದಾರೆ"[೧೧] ಎಂಬ ಮಾತು ಆದರಣೀಯವಾದ್ದು ಎನಿಸಿದರೂ ಸ್ವಾತಂತ್ರ್ಯ ಪೂರ್ವದಲ್ಲಿ ಅನಿವಾರ್ಯವೆಂದು ತೋರುತ್ತದೆ.

ಈ ಅನಿವಾರ್ಯತೆಯ ಹಿಂದೆ ಸಾಂಪ್ರದಾಯಿಕ, ಸಾಮಾಜಿಕ ಮನೋಭಾವ ಕೆಲಸ ಮಾಡುತ್ತಿದ್ದುದರಲ್ಲಿ ಸಂಶಯವಿರದು. ಸ್ತ್ರೀ ಶಕ್ತಿಹೀನಳು ಬುದ್ಧಿಮಾಂದ್ಯಳು, ಚಂಚಲ ಪ್ರವೃತ್ತಿಯವಳು ಎಂದು ಭಾವಿಸಿದ್ದು ಸಾಮಾಜಿಕ ಪ್ರಮಾದ. ಇದಕ್ಕಿಂತ ಇನ್ನೂ ವಿಪರ್ಯಾಸವೆಂದರೆ 'ಸ್ತ್ರೀ'ಗೆ ಶಿಕ್ಷಣವು ಅನಾವಶ್ಯಕವೆಂದು ಪರಿಗಣಿಸಿ ಗೃಹಕೃತ್ಯಕ್ಕೆ ಮಾತ್ರ ಸೀಮಿತಳನ್ನಾಗಿ ಮಾಡಿ, ಹಿರಿಯರಿಗೂ, ಪತಿಗೂ ಸೇವೆ ಸಲ್ಲಿಸುವದು, ಕುಟುಂಬ ಸದಸ್ಯರೆಲ್ಲರನ್ನು ಗೌರವದಿಂದ ಕಾಣುವದು ತಗ್ಗಿ ಬಗ್ಗಿ ನಡೆಯುವ ನಡೆ ನುಡಿಗಳನ್ನು ಹೇಳಿಕೊಡುವ ತಂದೆಯ ಮನೆ ಸ್ತ್ರೀಯರ ತರಬೇತಿ ಶಾಲೆಯಂತಾದ ಸಂದರ್ಭದಂತೆ ಈ ಕಾಲದ ಕಾದಂಬರಿಗಳಲ್ಲಿ ಚಿತ್ರಿತ.

ಸಾಮಾಜಿಕವಾಗಿ ಅಂದಿನ ಕಾಲದ ತಂದೆ ತಾಯಿಯರು ಮಗಳು ವಯಸ್ಸಿಗೆ ಬರುವ ಮುನ್ನ ಎಂಟು ಹತ್ತು ವರ್ಷಗಳು ತುಂಬುವದರೊಳಗೆ ಮದುವೆ ಮಾಡಿ ಮುಗಿಸುವದು ಕರ್ತವ್ಯವೆಂದು ಭಾವಿಸಿದ್ದರು. ಇದು ದುರಂತದ ಮುನ್ನುಡಿ. ಯೋಗ್ಯನೋ? ಅಯೋಗ್ಯನೋ? ಯಾವನಾದರೇನು? ಮದುವೆ ಮಾಡಿ ಭಾರ ಇಳಿಸಿಕೊಳ್ಳುವ ಹವಣಿಕೆಯೇ ಅವರ ಗುರಿಯಂತಾಗಿತ್ತು. ಒಂದು ಕಟು ಸತ್ಯ ಸಂಗತಿಯೆಂದರೆ ಹೆಣ್ಣು ಮಗಳನ್ನು ಕುಟುಂಬದ ಒಳಗೆ ಬಹಳ ಪ್ರೀತಿಯಿಂದ ಕಾಣುವಂತೆ ಹೊರಗೆ ಗುಲಾಮಳಂತೆ ಹೀನಾಯವಾಗಿ ಕಾಣುವ ಸಂದರ್ಭವಿತ್ತು.

ಅತ್ತೆ ಸೊಸೆಯರು, ಅತ್ತಿಗೆ ನಾದಿನಿಯರ ಬದುಕು ಕಂದಕದಿಂದಲೆ ಕೂಡಿದ್ದು ಎಂಬುದನ್ನು ಈ ಸಂದರ್ಭದಲ್ಲಿ ಕಾಣುತ್ತೇವೆ. ಈ ಎರಡು ವೈರುಧ್ಯಗಳು ಹುಟ್ಟಿ ಬೆಳೆದ ಮನೆ, ಊರನ್ನು ತ್ಯಜಿಸಿ ಬೇರೊಂದು ಅಪರಿಚಿತ ಕುಟುಂಬದಲ್ಲಿ ಜೀವನ ನಡೆಸಬೇಕಾಗುವದು. ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆ ಸಾಮಾನ್ಯವಾಗಿ ಕಂಡರೂ ಕಾಣದಂತೆ ಇರಬೇಕಾದ ಪ್ರಸಂಗಗಳು ಬರುವವು. ಸ್ತ್ರೀಗೆ ಗಂಡನ ಮನೆ ಪರಕೀಯದಾಗಿದ್ದರೂ ತಾನು ಬಾಳಿ ಬದುಕಿ ಜೀವನದ ಸಾರ್ಥಕತೆಯನ್ನು ಕಾಣಬೇಕಾದ ಮನೆ ಇದು ಎಂಬುದನ್ನು ಒಪ್ಪಿಕೊಂಡಿದ್ದಾಳೆ.

ತವರಿನ ಹಂಬಲ ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿಯರ ಮೇಲಿನ ಪ್ರೀತಿ ಪ್ರೇಮದ ಬೆಸುಗೆ ಅಷ್ಟು ಬೇಗ ಮಾಸಿ ಬಿಡುವಂತಹದಲ್ಲ. ಸ್ತ್ರೀ ತನ್ನ ಬೇಸರವನ್ನು ಕಳೆದುಕೊಳ್ಳಲು ತವರು ಮನೆಗೆ ಬಂದು ಅಣ್ಣ ಹೆಂಡತಿಯ ಅಧಿಕಾರಕ್ಕೆ ಒಳಗಾಗುವಳು. ಒಂದೊಂದು ಸಾರೆ ಸಣ್ಣ ಸಂಘರ್ಷದಿಂದ, ಸಂದರ್ಭಗಳಿಂದ ತಾನು ಹುಟ್ಟಿದ ಮನೆಯಲ್ಲಿ ಪರಕೀಯಳಾದೆನಲ್ಲ ಎಂಬ ಭಾವನೆ ಬರುವುದು ಸಾಮಾನ್ಯ. ಅತ್ತಿಗೆ ನಾದಿನಿಯರ ಪರಿಸ್ಥಿತಿಯೂ ಸಂಘರ್ಷದ ಮೂಲ ಬೇರು ವಸಾಹತುಶಾಹಿ ಕೈಗಾರಿಕೀಕರಣದ ಪ್ರತಿಫಲ. ಅವಿಭಕ್ತ ಕುಟುಂಬ ಮಾಯವಾಗಿ ವಿಭಕ್ತ ಕುಟುಂಬ ಪದ್ಧತಿ ಜಾರಿಗೆ ಬಂದುದು ಕೈಗಾರಿಕಾ ಕ್ರಾಂತಿಯ ಪ್ರತಿಫಲ !

"ಮಾಡಿದ್ದುಣ್ಣೋ ಮಹಾರಾಯ" ಕಾದಂಬರಿಯ ಅತ್ತಿಗೆ ಸೀತಮ್ಮ ಸೌಮ್ಯ ಗುಣವುಳ್ಳ ತ್ಯಾಗಮೂರ್ತಿಯಾಗಿದ್ದಾಳೆ. ಇವಳಿಗೆ ವಿರೋಧ ಗುಣವುಳ್ಳ ನಾದಿನಿಯ ಪಾತ್ರ ಒಂಬತ್ತು ವರ್ಷದ ಬಾಲೆ ಸಾತು(ಸಾವಿತ್ರಿ)ಯದು. ಅತ್ತಿಗೆ ಸೀತಮ್ಮಳನ್ನು ಬೈಯ್ಯಿಸುವದಕ್ಕಾಗಿಯೇ ಅಡುಗೆಗೆ ಹೆಚ್ಚಿನ ಉಪ್ಪು ಬೆರೆಸುವುದು, ಇಲ್ಲವೆ ಮರಳು ಬೆರೆಸುವುದು, ಸುಳ್ಳು ಚಾಡಿ ಹೇಳಿ ಅಪರಾಧಗಳನ್ನು ಹೊರಿಸುತ್ತಾಳೆ ಇಷ್ಟಕ್ಕೆ ತೃಪ್ತಳಾಗದೆ ಸೀತೆ ಉಡುವ ಸೀರೆಯನ್ನು ಸಹ ಉಟ್ಟುಕೊಳ್ಳದಂತೆ ತೂತು ಹಾಕುವಳು"[೧೨] ಯಾವ ಕಾರಣವು, ಉದ್ದೇಶಗಳಿಲ್ಲದೆ ಸಾತುವಿನ ಪಾತ್ರ ಚೇಷ್ಟೆಯಾಗಿ ಕಾಣುವದು. ಆದರೆ ಅತ್ತೆ ಸೊಸೆಯಂದಿರ ಪ್ರಸಂಗಗಳು ಇದಕ್ಕಿಂತ ವ್ಯತಿರಿಕ್ತ. ಮದುವೆಯ ನಂತರ ವಧುವಿನ ತಾಯಿ ತಂದೆ, ಅತ್ತೆ ಮಾವರಿಗೆ ಧಾರೆಯೆರೆದು ಕೊಡುವಾಗ ಇಂದಿನಿಂದ ಇವಳು ನಮ್ಮ ಮಗಳಲ್ಲ, ನಿಮ್ಮ ಮಗಳು ತಪ್ಪು ತೊಂದರೆ ಮಾಡಿದರೆ ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು. ಅತ್ತೆ ಮಾವಂದಿರಾದರೂ ಪ್ರಾರಂಭದ ದಿನಗಳಲ್ಲಿ ಸೊಸೆಯನ್ನು ಮಗಳಂತೆ ಕಾಣುವರು. ದಿನಗಳುರುಳಿದಂತೆ ಸೊಸೆಯನ್ನು ಅವಮಾನದ ದೃಷ್ಟಿಯಿಂದ ನೋಡುವುದು, ಹರಿಹಾಯುವದು, ಕಿಡಿಕಾರುವುದು ನಿತ್ಯ ಚಟುವಟಿಕೆಗಳಾಗುತ್ತವೆ. ಇಲ್ಲಿಯ ಅಚ್ಚರಿಯ ಸಂಗತಿಗಳೆಂದರೆ ಸೊಸೆಯಂದಿರನ್ನು ವೈರಿಯಂತೆ ಕಂಡವರಲ್ಲಿ ಅತ್ತೆಯರ ಪಾಲೇ ಅಧಿಕ. ಇದು ಮತ್ತೊಂದು ಮಗ್ಗಲಿನ ಪುರುಷ ಪ್ರಧಾನ ಧೋರಣೆ. ಪುರುಷನ ಮನೆಯ ಅಧಿಕಾರ ಬಾಧ್ಯತೆ ಹಕ್ಕುಗಳು ಅವಲಂಬಿಸಿ ಸ್ತ್ರೀಯ ಮೂಲಕ ಶೋಷಣೆಗೆ ಒಳಗಾಗುತ್ತಾಳೆ.

ಸಾಮಾನ್ಯವಾಗಿ ಪುರುಷ ಎಂದ ಕೂಡಲೆ 'ಯಜಮಾನ' ಎಂಬ ಕಲ್ಪನೆ ಮೂಡುವುದು ಸಾಮಾನ್ಯ. ಮನೆಯ ಎಲ್ಲಾ ಅಧಿಕಾರ ಹಕ್ಕು ಬಾಧ್ಯತೆಗಳಿಗೆ ಪುರುಷನೇ ಬಾಧ್ಯಸ್ಥನಾಗಿರುವಾಗ ಯಾವ ಅಧಿಕಾರ ಹಕ್ಕುಗಳನ್ನೂ ಅವಲಂಬಿಸಿರದ ಸ್ತ್ರೀ ಅಲ್ಲಿ ಸಹಜವಾಗಿಯೇ ಶೋಷಣೆಗೆ ಒಳಗಾಗುವಳು. ಈ ಹಕ್ಕು ಬಾಧ್ಯತೆಗಳು ಪುರುಷನಿಂದ ಪುರುಷನಿಗೆ ಸಾಗಿ ಸಾಗಿ ಬರುವಾಗ ಮಹಿಳೆ ಪುರುಷ ಯಜಮಾನಿಕೆಯಲ್ಲಿ ಕುಬ್ಜಳಾಗಿ ಕಾಣುವಳು. ಒಂದೊಂದು ಸಾರಿ ಮಗನ ಅಂಕಿತಕ್ಕೂ ಒಳಗಾಗುವ ಸಾಧ್ಯತೆ ಇದೆ.

ಸ್ತ್ರೀಯರು ಅನುಭವಿಸುವ ಯಾತನೆ ನೋವು ಅವಮಾನಗಳು ಮನದಾಳದಲ್ಲಿ ಗಟ್ಟಿಗೊಳ್ಳುತ್ತಾ ಹೋಗುತ್ತವೆ. ಪುರುಷನ ವಿರುದ್ಧ ಧ್ವನಿ ಎತ್ತಲಾರದವಳಾಗಿ ಅಸಹಾಯಕ ಸ್ಥಿತಿಯಲ್ಲಿ ಬದುಕು ಸಾಗಿಸುವಳು. ಈ ಹತಾಶೆಯ ಸೇಡನ್ನು ತೀರಿಸಿಕೊಳ್ಳಲು ಅವಕಾಶಗಳಿಗಾಗಿ ಕಾಯುತ್ತಾಳೆ. ಹೊಸದಾಗಿ ಮನೆ ಸೇರಿದ ಸೊಸೆಯನ್ನೆ ಬಲಿ ಪಶುವಾಗಿಸಿಕೊಂಡು ಅನಿವಾರ್ಯತೆಗೆ ಸಿಲುಕುತ್ತಾಳೆ. ಹೆಣ್ಣು ಹೆಣ್ಣನ್ನೆ ಶೋಷಿಸುವ ದುಸ್ಥಿತಿಗೆ ತಲುಪುವಳು. ಸೊಸೆ ಅತ್ತೆಯು ಶೋಷಣೆಗೆ ಒಳಗಾಗಿ ಪ್ರತಿಭಟಿಸಲಾಗದೆ 'ತಮ್ಮ ಪೂರ್ವಜನ್ಮದ ಕರ್ಮದ ಫಲವೆಂದು' ನಂಬಿ ತಮ್ಮ ನೋವು, ಯಾತನೆ, ಸಂಕಟ ಮತ್ತು ದುಃಖವನ್ನು

ಅದುಮಿಟ್ಟುಕೊಂಡವರು ಒಂದೆಡೆ ಕಂಡು ಬಂದರೆ, ಮತ್ತೊಂದೆಡೆ ಸೊಸೆಯರು ವಿನಾಕಾರಣ ಅಪವಾದಕ್ಕೆ ಗುರಿಯಾಗುವ ಸಂದರ್ಭ ಒದಗಿ ಬಂದಾಗ ಅನ್ಯಾಯವನ್ನು ಪ್ರತಿಭಟಿಸಿದರು. ತಂತ್ರಕುತಂತ್ರದಿಂದ ಸೋತ ಸೊಸೆಯಂದಿರೆ ಅಧಿಕ. ಆ ಸಮಯದಲ್ಲಿ ಪಶ್ಚಾತ್ತಾಪದ ಮಾರ್ಗವನ್ನು ಅನುಸರಿಸುತ್ತಾಳೆ. ಏನನ್ನೂ ಅರಿಯದ ಮುಗ್ಧತೆಯ ಪ್ರತೀಕವಾದ ಸೊಸೆಯಂದಿರಿಗೂ ಏನೂ ಕಡಿಮೆ ಇಲ್ಲ.

ಇಂತಹ ವಾಸ್ತವ ಚಿತ್ರಣದ ಜೀವನ ಕ್ರಮವನ್ನು 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ಬಿಚ್ಚಿಟ್ಟಿದೆ. ಅತ್ತೆ ತಿಮ್ಮಮ್ಮ ಸೊಸೆ ಸೀತೆಯನ್ನು ದ್ವೇಷಿಸಲು ಕಾರಣ ಮಾತ್ರ ಬೇರೆಯಾಗಿದೆ. ತನ್ನ ಸಂಬಂಧಿಕರ ಕನ್ಯೆಯನ್ನು ತಿರಸ್ಕರಿಸಿ ಸೀತೆಯನ್ನು ತಂದುಕೊಂಡದ್ದನ್ನು ಪ್ರತಿಭಟಿಸಲಾಗದೆ ತಿಮ್ಮಮ್ಮ ಬೇರೆ ಮನೆಯಿಂದ ಬಂದ ಸೊಸೆ ಸೀತೆಯ ಮೇಲೆ ಕೋಪ ತೀರಿಸಿಕೊಳ್ಳುತ್ತಾಳೆ. ಉದಾ: ವಿನಾಃಕಾರಣ ತಿಮ್ಮಮ್ಮ "ಇದೇನೆ ರಂಗವಲ್ಲಿಯನ್ನು ಸಂಣಗೆ ಕೊರೆಯುತ್ತಾ ಕುಕ್ಕರಿಸಿದ್ದಿಯೇ? ಈ ಕೆಲಸ ಮುಗಿದರೆ ಬೇರೆ ಕೆಲಸ ಮಾಡಬೇಕಾಗುತ್ತೆ ಎಂದು ಒಂದರಲ್ಲಿ ನೆಣಗಿಯಾಡುತ್ತಿದ್ದಿಯಾ, ಈ ನಯ ನಾಜೂಕನ್ನು ನಡವಳಿತನವನ್ನು ನಾವು ಅರಿಯೆವು ನಮ್ಮವ್ವ"[೧೩] ಎನ್ನುವ ತಿಮ್ಮಮ್ಮ ಬಾಯಿಗೆ ಬಂದಂತೆ ಬಯ್ಯುವದಲ್ಲದೆ ಸೀತೆಯನ್ನು ಚಿವುಟುತ್ತಾಳೆ. ಮತ್ತೊಂದು ಸಂದರ್ಭದಲ್ಲಿ "ಹೇಳದೆ ಕೇಳದೆ ಯಾವನೂರಿನಿಂದ ಟೆಂಗಿನ ಕಾಯನ್ನು ಬಾಗಿನಕ್ಕಲ್ಲ ಇರಿಸಿದ್ದೆಯೇ? ನಿನಗೆ ಯಾರೇ ಸ್ವಾತಂತ್ರ್ಯ ಕೊಟ್ಟವರು, ಹೊಟ್ಟೆಗೆ ಅನ್ನ ತಿನ್ನುತ್ತಿಯೋ ಮಣ್ಣು ತಿನ್ನುತ್ತಿಯೋ?"[೧೪] ಹೀಗೆ ತಿಮ್ಮಮ್ಮ ಕೊಟ್ಟ ಶಿಕ್ಷೆ ಒಲೆಯಲ್ಲಿ ಉರಿಯುವ ಕೊಳ್ಳಿಯಿಂದ ಬಲಗೈ ಮೇಲೆ ಬರೆ, ಸಾಲದ್ದಕ್ಕೆ ಅದೇ ಹಿಡಿ ಹಿಡಿಯಿಂದಲೆ ತಲೆಯ ಮೇಲೆ ಹೊಡೆತ. ಇಷ್ಟಾದರೂ ನಿಷ್ಠಾವಂತ ಬದುಕಿನ ಸಂಯಮಶೀಲ, ತ್ಯಾಗ ಪ್ರತೀಕಳಾದ ಪತಿವ್ರತಾ ಶಿರೋಮಣಿ ಸೀತೆ ಮೌನವಹಿಸುತ್ತಾಳೆ.

ತನ್ನ ನೋವು, ಕಷ್ಟ, ಯಾತನೆಯನ್ನು ಯಾರ ಮುಂದೆಯೂ ತೋಡಿಕೊಳ್ಳದೆ ಕರ್ಮದ ಫಲವೆಂದು ಅನುಭವಿಸುತ್ತಾಳೆ. ಸೊಸೆ ಪ್ರತಿಭಟಿಸದೆ, ಸತಿತ್ವ ಪಾಲಿಸುವ ಸೀತೆಯ ಪ್ರತಿಬಿಂಬಿಸುವ ತವಕ ಇಲ್ಲಿ ಕಾಣುವದು. ಸ್ತ್ರೀಧರ್ಮ ನೀತಿ ಪ್ರತಿಪಾದಿಸಿದ್ದಾಳೆ. ಅಂದಿನ ಸ್ತ್ರೀಯರು ಹಿರಿಯರು ಏನೇ ಹೇಳಿದರೂ ಅದನ್ನು ವಿರೋಧಿಸದೆ ಗೌರವಿಸಿದಂತೆ ಕಾಣುವದು ಲೇಖಕರ ಮೌಲ್ಯಯುತ ಬದುಕಿನ ರೀತಿಯ ಧೋರಣೆ ಇಲ್ಲಿ ಕಾಣುವದು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ದ್ವಿತೀಯ ದರ್ಜೆಯ ಪ್ರಜೆಯಾಗಿ ಕಂಡಿರುವುದಾದರೆ ಅದೇ ವ್ಯವಸ್ಥೆಯಲ್ಲಿ ಬಾಳಿದ ಅತ್ತೆಯೂ ಒಬ್ಬ ಸ್ತ್ರೀಯಾಗಿ ಸೊಸೆಯನ್ನು ತೃತಿಯ ದರ್ಜೆಯ ಪ್ರಜೆಯನ್ನಾಗಿ ಕಂಡಿರುವುದು ಸಮಂಜಸವಾದ ಸಂಗತಿ ಅಲ್ಲ.

ಸಮಾಜದ ಸುಧಾರಕರಿಂದ ಪ್ರೇರಿತರಾದಂತೆ ತೋರುವ ಮತ್ತೊಂದು ರೀತಿಯ ಅತ್ತೆಯರು ಅಪರೂಪಕ್ಕೆ ತಮ್ಮಂತೆ ಬಾಳುವ ಸೊಸೆಯರ ಸೇವೆಗೆ ಸ್ಪಂದಿಸಿದ್ದಾರೆ. ಸೊಸೆಯನ್ನು ಮಗಳಂತೆ

ಕಾಣುವಲ್ಲಿ 'ವಿರಾಗಿಣಿ' ಕಾದಂಬರಿ ಸಾಕ್ಷಿಯಾಗಿ ನಿಲ್ಲುವುದು. ಇಲ್ಲಿ ಅತ್ತೆ ನರಸಮ್ಮ ಸೊಸೆಯನ್ನು ಮಗಳೆಂದೆ ಆದರಿಸಿದ್ದಾಳೆ. ಸೊಸೆ ಚಂದ್ರಭಾಗೆಯ ಕುರಿತು ಹೇಳುವಂತೆ "ಅಳಕನಂದ ಎಂಬ ಎಂಟು ವರ್ಷದ ಹೆಣ್ಣಿಗೆ ತಾಯಿಯಾಗಿರುವ ಆ ಪೆಣ್ಮಣಿ, ತನ್ನ ಮೈಮೇಲಿದ್ದ ತೊಡಿಗೆಗಳನ್ನು ಸುಲಿದಿತ್ತೊ, ತನ್ನಲ್ಲಿ ಉದಾಸೀನವಾಗಿರುವ ಪತಿಯ ವಿಚಾರವಾಗಿ ಎಂದೂ ತಿರಸ್ಕರಿಸಲೊಲ್ಲಳು ! ತನ್ನ ಶೀಲ ವೃತ್ತಿಗಳಿಗೂ ತನ್ನ ಪತಿಯ ದುರ್ವೃತ್ತಿಗಳಿಗೂ ಅನುಕಂಪಿಸುತ್ತಿರುವ ನರಸಮ್ಮನನ್ನು ತಾನೆ ಸಂತವಿಡುವಳು. ಅವಳಾದರೂ ಸೊಸೆಯೇ ತನಗೆ ಮಗಳೆಂದು ಮಗನೆ ತನಗೆ ಮನೆಯ ಅಳಿಯನೆಂದೂ ಭಾವಿಸಿ ಚಂದ್ರಭಾಗೆಯನ್ನು ಅಳಕನಂದೆಯನ್ನು ಪ್ರೀತಿಸುತ್ತಾ ಅವರ ಆದರ ಸಮ್ಮಾನಗಳಿಂದ ಸಮಾಧಾನವನ್ನು ಹೊಂದುತ್ತಿದ್ದಳು."[೧೫] ಸೊಸೆ ಅಸ್ವಸ್ಥಳಾಗಿ ವೈರಾಗ್ಯ ದೇವತೆಯಾದ ವಿರಾಗಿಣಿಯ ಹೆಸರನ್ನು ಬಡಬಡಿಸುತ್ತಿರುವಾಗ ವಿರಾಗಿಣಿ ಮಾಟ ಮಾಡಿಸಿದಳೆಂದು ಜರೆಯುತ್ತಾಳೆ. ಮೃತ್ಯುಮುಖವಾದ ಸೊಸೆಗಾಗಿ ಕಣ್ಣೀರಿಡುತ್ತಾಳೆ. ವಿರಾಗಿಣಿಯಿಂದಲೆ ಪರಿಹಾರವೆಂದು ತಿಳಿದಾಗ ಸೊಸೆಯನ್ನು ಉಳಿಸಿಕೊಳ್ಳುವದಕ್ಕಾಗಿ ವಿರಾಗಿಣಿ ಕ್ಷಮೆ ಕೇಳುತ್ತಾಳೆ. ಈ ಸಂಗತಿಗಳು ತಾಯಿ ಮಗಳಂತಿರುವ ಅತ್ತೆ ಸೊಸೆಯ ಸಂಬಂಧ ಸೂಚಿಸುವವು.

ಇದೆ ನೆಲೆಯಲ್ಲಿ ಈ ಸಂದರ್ಭದ ಕಾದಂಬರಿಗಳಲ್ಲಿ ಚಿತ್ರಿತಗೊಂಡ ಅತ್ತೆ ಸೊಸೆ ಪಾತ್ರಗಳು ಒಂದಿಷ್ಟು ಸಂಪ್ರದಾಯಶೀಲ ಎಂಬಂತೆ ಇದ್ದರೆ 'ತಿರುಮಲಾಂಬ' ಅವರ ಕಾದಂಬರಿಯಲ್ಲಿ ಪ್ರಗತಿಪರ ಧೋರಣೆಗಳು ಕಾಣುವದು. ವಿವಾಹವೆಂಬುದು ಕೌಟುಂಬಿಕ ಸಮಾಜದಲ್ಲಿ ಬಂಧಿಸುವ ಒಂದು ಸಾಧನ. ಇಲ್ಲಿ ಮದುವೆಯಾಗುವ ಸ್ತ್ರೀಯು ಸ್ವತಂತ್ರಳಲ್ಲ. ಹಿರಿಯರು ತೋರಿಸಿದ ವರನಿಗೆ ಕೊರಳೊಡ್ಡಿ ಮಾಲೆ ಹಾಕಿಸಿಕೊಳ್ಳಬೇಕಿತ್ತು. ಇಲ್ಲಿಯ ಬಹುತೇಕ ವಿವಾಹಗಳು ಪುರುಷನ ಸಮ್ಮತಿಯ ಮೇಲೆ ನೆರವೇರಿವೆ. ಸ್ತ್ರೀಯರನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಸ್ತ್ರೀಗೆ ವಿವಾಹವೇ ಪರಮಗುರಿ ಎಂಬ ತತ್ವಕ್ಕೆ ಅಂಟಿಕೊಂಡ ಎಷ್ಟೋ ಕುಟುಂಬಗಳು ಬೇಡವಾದ ವರನಿಗೆ ಗಂಟು ಹಾಕಿ ಮಕ್ಕಳ ಭವಿಷ್ಯವನ್ನು ಛಿದ್ರ ಛಿದ್ರಗೊಳಿಸಿವೆ. ಡಾ. ಆರ್. ಇಂದಿರಾ ಗುರುತಿಸುವಂತೆ "ಹೆಣ್ಣಾಗಿ ಹುಟ್ಟಿದ ಮೇಲೆ ಅವಮಾನ ಅವಹೇಳನಗಳನ್ನು ಅನುಭವಿಸುವದು ಇವರಿಗೆ ಸಹಜವೆನಿಸುತ್ತದೆ. ಬಹುತೇಕ ಸ್ತ್ರೀಯರು ತಮ್ಮ ಅಭಿರುಚಿಗಳು, ಆಕಾಂಕ್ಷೆಗಳು, ಆಸಕ್ತಿಗಳು ಎಲ್ಲಕ್ಕಿಂತ ಹೆಚ್ಚಾಗಿ ಆಯ್ಕೆಯ ಸ್ವಾತಂತ್ರ್ಯವನ್ನೆ ವಿವಾಹ ನಂತರ ತ್ಯಜಿಸಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ."[೧೬] ಇಲ್ಲಿ ಸ್ತ್ರೀ ಶೋಷಣೆಯ ಮುಖಗಳು ಕಾಣುವವು.

'ಇಂದಿರಾಬಾಯಿ' ಕಾದಂಬರಿ ಭಾರತೀಯ ಸಮಾಜ ಸ್ತ್ರೀ ಮೇಲೆ ವಿಧಿಸಿರುವ ಧಾರ್ಮಿಕ ಸಾಂಪ್ರದಾಯಿಕ ಕಟ್ಟುಪಾಡುಗಳು ಬಲಿಷ್ಠವಾಗಿದ್ದ ದಿನಗಳಲ್ಲಿ ಪಾಶ್ಚಾತ್ಯ ಶಿಕ್ಷಣದ ಫಲವಾಗಿ ಸುಧಾರಣೆಯತ್ತ ಸಾಗುವುದು. ಸುಂದರಾಯಿ ಬಡತನವನ್ನು ಬೆನ್ನಿಗಂಟಿಸಿಕೊಂಡು ಬಂದವಳು.

ಅಂಬಾಬಾಯಿ, ಭೀಮರಾಯ, ಸುಂದರರಾಯನ ಬದುಕಿಗೆ ಅಂತ್ಯ ಹಾಡುವ. ಪತಿಯ ಮರಣದಿಂದ ದುಃಖಿತಳಾದ ಸುಶೀಲೆ "ಜಡೆಕಟ್ಟದ ತನ್ನ ಕೂದಲುಗಳನ್ನು ಬಿಡಿಸಿ ತಲೆಯಲ್ಲಿದ್ದ ಹೂವನ್ನು, ಕೊರಳಲ್ಲಿದ್ದ ಮಂಗಳಸೂತ್ರವನ್ನು ಕಿತ್ತೊಗೆದು ಹಣೆಯಲ್ಲಿದ್ದ ಕುಂಕುಮ ತಿಲಕವನ್ನು ಅಳಿಸಿ. ಕುಂಕುವನ್ನು ತಾಳಿಗೂ, ಹೂವಿಗೂ ಮುಟ್ಟಿಸಿ ಅವಯವಗಳನ್ನೆಲ್ಲಾ ಪತಿಯ ಪಾದಗಳ ಮೇಲಿಟ್ಟ, ಪತಿಯನ್ನು ಏಕಾಗ್ರ ದೃಷ್ಟಿಯಿಂದ ನೋಡಿ, ಫಕ್ಕನೆ ಮೂರ್ಛಿತಳಾಗಿ ಕಾಲಡಿಯಲ್ಲಿ ಬಿದ್ದಳು."[೧೭] ಇಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಲ್ಲಿನ ಹಲವಾರು ಕಟ್ಟುಪಾಡನ್ನು ಮೀರುವ ಪ್ರಯತ್ನವಿದೆ. ಪುರುಷ ಸಂಕುಲದ ಸ್ವಹಿತಾಸಕ್ತಿ, ಮಹಿಳೆ ಮಹಿಳೆಯ ವಿಚಾರಕ್ಕೆ ಪೂರಕವಾಗಿರದೆ ನಂಬಿಕೆ ಹೇರಿದ್ದು ಸಂದಿಗ್ಧತೆಯ ವಿಚಾರವಾಗಿದೆ. ಅದಕ್ಕೆ ಜಿ.ಎಸ್. ಅಮೂರವರು ಅದನ್ನು ಸಮರ್ಥಿಸಿದ್ದು ಕಾಣುವುದು. "ಕಳೆದ ಶತಮಾನದ ಕೊನೆಯಲ್ಲಿ ಗುಲ್ವಾಡಿ ವೆಂಕಟರಾಯರು ಬರೆದ ಇಂದಿರಾಬಾಯಿ ಎಂಬ ಕಾದಂಬರಿ ನನಗೆ ಬಹಳ ಮುಖ್ಯ ಎನಿಸುತ್ತದೆ. ಸಮಾಜದಲ್ಲಿ ಕ್ರಾಂತಿ ಮೂಡಿಸಬೇಕು ಎಂಬ ಉದ್ದೇಶ ಅವರದ್ದಲ್ಲ. ಸಾಮಾಜಿಕ ತಳಮಳವನ್ನು ಬಿಂಬಿಸಬೇಕು ಅನ್ನುವದು ಅವರ ಮನೋಭಾವ ಹೀಗಾಗಿ ಅವರ ಇಂದಿರಾಬಾಯಿ ಆಗಿನ ಕಾಲಕ್ಕೆ ಒಂದು ಪ್ರಬುದ್ಧ ಕಾದಂಬರಿಯೆಂದೇ ಹೇಳಬೇಕಾಗುತ್ತದೆ."[೧೮] ಸ್ತ್ರೀ ಸುಧಾರಣಾ ಚಟುವಟಿಕೆಗಳು ಸಾಗುತ್ತಿದ್ದ ಪರಿ ಸಮಾಜದ ಮೇಲೆ ಅವುಗಳ ಪರಿಣಾಮ, ನಿರ್ದಿಷ್ಟವಾದ ಉದ್ದೇಶ, ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗಾಗುತ್ತಿದ್ದ ಅನ್ಯಾಯಗಳ ಕುರಿತು ಬಾಳಿನ ಗೋಳುಗಳ ಕುರಿತಾಗಿ ಪ್ರತಿಸ್ಪಂದಿಸಿ ಆ ನಿಟ್ಟಿನಲ್ಲಿ ಸಾಮಾಜಿಕ ಜಾಗೃತಿಗಾಗಿ ಮೂಡಿ ಬಂದ ಕೃತಿಗಳಾಗಿವೆ.

ವಾಗ್ದೇವಿ ಕಾದಂಬರಿಯಲ್ಲಿ ಸ್ತ್ರೀ ಸಮಸ್ಯೆಯ ಚರ್ಚೆ ಇದೆ. ಇದು ಬೋಳಾರು ಬಾಬುರಾಯರ ಮಹತ್ವದ ಕೃತಿ. ಮುಗ್ಧ ಪ್ರೇಮದಿಂದ ತೊಡಗಿ, ಹಾದರ, ಮಠಗಳಲ್ಲಿನ ಅತ್ಯಾಚಾರ, ಭ್ರಷ್ಟತನ, ಹೆಣ್ಣಿನ ಅಧಿಕಾರದ ಲಾಲಸೆ ಅವೆಲ್ಲವುಗಳನ್ನು ಅನುಭವಿಸಿ ಪಶ್ಚಾತ್ತಾಪದ ನೆರಳಿಗೆ ಹೊರಳಿರುವದೆ ಕಾದಂಬರಿಯ ವಸ್ತು.

ಬ್ರಾಹ್ಮಣ ಬಡ ಕುಟುಂಬದ ತಮ್ಮಣ್ಣ ಭಟ್ಟ, ಭಾಗೀರಥಿ ದಂಪತಿಗಳು ಬಡತನದಲ್ಲೆ ವಾಗ್ದೇವಿ ಅರಳಿದ್ದು. ಅಬಾಚಾರ್ಯನನ್ನು ವರಿಸಿ ವಿಲಾಸಿ ಜೀವನಕ್ಕೆ ಸೋತಿದ್ದೆ ಅವಳ ಬದುಕಿನ ವೈಫಲ್ಯ. ಚಿಕ್ಕಂದಿನ ಗೆಳೆಯ ತಿಪ್ಪಾಶಾಸ್ತ್ರಿ ಜ್ಯೋತಿಷ್ಯದಂತೆ ವಾಗ್ದೇವಿಗೆ ಸಂಪತ್ತು ಅನುಭವಿಸುವ ಅವಕಾಶ ಚಂಚಲನೇತ್ರರಿಂದ ಮನೆ ಬಾಗಿಲಿಗೆ ಬಂದಿತ್ತು. ಚಂಚಲನೇತ್ರರ ಹಾಗೂ ವಾಗ್ದೇವಿಯರ ನಡುವೆ ಜರುಗಿದ ಒಪ್ಪಂದ ಕೊಂಡುಕೊಳ್ಳುವ ವ್ಯಾಪಾರದಂತಾಗಿದ್ದು ಇದೆ. ವಾಗ್ದೇವಿ ಹೇಳಿದ "ನನ್ನಲ್ಲಿ ಗಂಡು ಸಂತತಿ ದೇವರು ಅನುಗ್ರಹಿಸಿದರೆ ಚೊಚ್ಚಲ ಮಗನು ಮುಂದಿನ ಯತಿ ಪಟ್ಟಕ್ಕೆ ಬರುವಂತೆ ಅವನಿಗೆ ಶ್ರೀಪಾದಂಗಳವರು ಆಶ್ರಯ ಕೊಟ್ಟು ಶಿಷ್ಯನನ್ನಾಗಿ ಮಾಡಬೇಕು. ಈ ವಾಗ್ದಾನವನ್ನು ಪಟ್ಟದೇವರು

ಮುಂದೆ ಮಾಡಿದನಕ ಮುಂದಿನ ಪ್ರಸಂಗಕ್ಕೆ ಒಡಂಬಡುವವಳಲ್ಲ".[17] ಹೀಗೆಂದು ಇಡಿ ಕುಟುಂಬ ಮಠ ಸೇರಿ ನೈತಿಕವಾಗಿ ಸೋಲುವದೇ ಒಂದು ದುರಂತ. ಸ್ವಾಮೀಜಿ ಸೋಲು ಒಪ್ಪಿಕೊಳ್ಳದೆ ಸಾಮಾಜಿಕ ಒತ್ತಡಕ್ಕೆ ಒಳಗಾದದ್ದು ವಿಪರ್ಯಾಸವೇ ಸರಿ.

ತಿಪ್ಪಾಶಾಸ್ತ್ರೀ, ಚಂಚಲನೇತ್ರ ಬಾಲ ಮುಕುಂದ. ಶೋಷಿತ ಪ್ರಸಂಗಗಳು ಒಂದೆಡೆಯಾದರೆ. ವೇದವ್ಯಾಸ ಉಪಾಧ್ಯನ ಹೆಂಡತಿ ಸುಶೀಲಾಬಾಯಿಯೊಡನೆ ವಿನಾಃಕಾರಣ ಕಾದಾಡಿ ಅಪಮಾನಿತವಾದದ್ದು ಮತ್ತೊಂದೆಡೆ. ತಂದೆ ತಾಯಿ ಈ ಸಮಯದಲ್ಲಿ ಮರಣ ಹೊಂದಿದ್ದು ಎಲ್ಲರು ಹಂತಹಂತವಾಗಿ ವಾಗ್ದೇವಿಗೆ ಕೈಕೊಟ್ಟಿದ್ದು ವಾಗ್ದೇವಿಯ ದುರಂತ ಬದುಕಿನಲ್ಲಿ ಮಗ ಮಿಂಚಿದ್ದು ಕಣ್ಣು ತೆರೆಸಿದ್ದು 'ಸೊಕ್ಕಿದ ಹೆಣ್ಣಿಗೆ ತಕ್ಕ ಶಾಸ್ತಿ'. ವಾಗ್ದೇವಿ ಕಾದಂಬರಿಯಲ್ಲಿ ಕೆಡುಕಿನ ಪಾತ್ರದ ಪ್ರತೀಕವಾಗಿದ್ದಾಳೆ. ಅದರ ಜೊತೆ ಪುರುಷ ಸಮಾಜದ ದೌರ್ಬಲ್ಯಗಳನ್ನು ಬಯಲಿಗೆಳೆಯುವ ಪ್ರಯತ್ನ ಕಾಣುವದು. ಬಾಲ ಸನ್ಯಾಸದ ಅವಮಾನವೇ ಅಮಾನವೀಯವಾದದ್ದು. ಈ ಕಾದಂಬರಿಯ ಗುರಿ ಜೈವಿಕವಾದ ಲಿಂಗಭೇದವನ್ನನುಸರಿಸಿ ಸ್ತ್ರೀಯನ್ನೊ ಅಥವಾ ಪುರುಷನನ್ನೊ ಅವಕಾಶ ವಂಚಿತನನ್ನಾಗಿ ಮಾಡದೆ ಆರೋಗ್ಯಕರ ಸಹಬಾಳ್ವೆಯ ವ್ಯವಸ್ಥೆ ಮಾಡಬೇಕೆಂಬುದೆ ಸ್ತ್ರೀವಾದ ಚಿಂತನೆಯ ಅಂತಿಮ ಗುರಿ. ಭ್ರಷ್ಟ ವ್ಯವಸ್ಥೆ ಸ್ತ್ರೀ ಪರವಾಗಿಯೂ ಇಲ್ಲ, ಪುರುಷನ ಪರವಾಗಿಯೂ ಇಲ್ಲ. ಅದು ಮಾನವೀಯ ಪರವಾಗಿಯೂ ಇಲ್ಲ ಅದು ಕೆಡುಕಿನ ಪರವಾಗಿದೆ ಎಂಬ ಕಟು ಸತ್ಯವನ್ನು ಲೇಖಕರು ಪ್ರಸ್ತುತಪಡಿಸಿದ್ದು ಚಿಂತನೀಯ ವಿಷಯ.

ಈ ಕಾಲದ 'ಸತಿ ರೋಹಿಣಿ' ಶ್ರೀಕಂಠಶಾಸ್ತ್ರಿ ಕುತೂಹಲಕರವಾದ ಕಾದಂಬರಿ. ರೋಹಿಣಿ ತನ್ನ ಪತಿ ಬೈದರೂ ಹೊಡೆದರೂ ಏನೆ ಮಾಡಿದರೂ ಆತನ ಪಾದವೇ ಗತಿಯೆಂದು ಬದುಕಿದವಳು. ಆತನ ಚರಣದಾಸಿಯೆಂದು ಬಾಳಿದವಳು. ಇಂಗ್ಲಿಷ್ ಕಲಿಯದ ಪತ್ನಿ ರೋಹಿಣಿಯನ್ನು ನವೀನಚಂದ್ರ ತಿರಸ್ಕಾರದಿಂದ ಕಾಣುತ್ತಾನೆ. ಹಿಂಸೆ ಅನುಭವಿಸಿದರೂ ಪತಿಗೆ ವಿಧೇಯಳಾಗಿರುವ ರೋಹಿಣಿ ಸತೀತ್ವವನ್ನೆ ಉಸಿರಾಗಿಸಿಕೊಂಡವಳು.

ಇಂಗ್ಲಿಷ್ ಅರಿಯದ ಹೆಂಡತಿ. ಇಂಗ್ಲೀಷ ವಿದ್ಯಾಭ್ಯಾಸ ಪಡೆದು ಸುಶಿಕ್ಷತ ಗಂಡ ನವೀನಚಂದ್ರ ಬದುಕಿನ ಸಂವಾದವೇ ಕಾದಂಬರಿಯ ವಿಷಯ ವಸ್ತು. ಹೊಂದಿಕೆಯಾಗದ ದಾಂಪತ್ಯ ಜೀವನ ಚಿತ್ರಣ ಮುಖ್ಯವಾಗುವುದು. ಆದು ಮಾತಿನ ಇಂಗ್ಲಿಷ್ ಶಬ್ದ ಬಳಸಿದ ಪತಿಯ ಮಾತುಗಳಲ್ಲಿ ವಿಪರೀತಾರ್ಥ ಕಾಣುವದು ಪತಿಯ ವಿಪರೀತ ಪದ ಅಪಾರ್ಥ ಮಾಡಿಕೊಳ್ಳುವಳು. 'ass', ಎಂದರೆ 'ಆಶಾ'. ಎಂದು. 'you stupid' ಎಂದರೆ 'ಇಷ್ಟೆ ಪೀಡೆ' ಒಂದು ರೀತಿಯಾಗಿ ಅರ್ಥೈಸಿಕೊಂಡಿದ್ದರೆ. ಸಂಸ್ಕೃತ ತಿಳಿದ ಈಕೆ ಪತಿಯನ್ನು 'ಉದ್ಧಾಮ' ಕರೆದರೆ ಆತ ಅದನ್ನು 'ಯೂ ಡಾಮ್' ಎಂದು ಬೈದದ್ದು ಇದೆ. ಇದಕ್ಕೆ ರೇಗಿದ್ದು ಇದೆ. ರೋಹಿಣಿಯು ಗಂಡನ ಜಿಗುಪ್ಸೆಗೆ ಕಾರಣಳಾಗುವಳು. ಲೇಖಕರು ಕಾದಂಬರಿಯಲ್ಲಿ

"ಇನ್ನು ಮುಂದೆ ನಿಮ್ಮ ಪುತ್ರಿಯರಿಗೆ ಇಂಗ್ಲಿಷನ್ನು ಕಲಿಸದೆ ಮದುವೆ ಮಾಡಬೇಡಿ. ಒಂದು ವೇಳೆ ಕಲಿಸದಿದ್ದರೆ ಇಂಗ್ಲೀಷನ್ನರಿಯದ ಶುದ್ಧ ವೈಧಿಕನಿಗೆ ಕೊಟ್ಟು ಮದುವೆ ಮಾಡಿರಿ, ಹಾಗಿಲ್ಲದ ಪಕ್ಷದಲ್ಲಿ ನಿರ್ಮಾನುಷ ಪ್ರದೇಶದಲ್ಲಿ ತಲೆಗಡೆದುಬಿಡಿ"[೨೦] ಇಂಗ್ಲಿಷ್ ಕಲಿಯದಿದ್ದರೆ ಬದುಕೆ ಇಲ್ಲ ಎಂಬಂತೆ ಬಿಂಬಿಸಿದ್ದು ಅವಶ್ಯಕತೆ ಜೊತೆ ಕಲಿಯದವಳನ್ನು ಪುರುಷ ತನ್ನ ಇತಿಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಹಿಳೆಯನ್ನು ತನ್ನ ಪರಿಧಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದ್ದಾನೆ. ಹೀಗಿದ್ದಾಗೂ ಸತಿ ರೋಹಿಣಿ ಪತಿಯನ್ನು ಎಲ್ಲ ವಿಷಯದಲ್ಲೂ ಬೆಂಬಲಿಸಿದಾಗ ಸಾಮಾನ್ಯ ನಡತೆ ಎನಿಸಿದರು ಅವಳ ಮುಗ್ಧತೆ ಇಲ್ಲಿ ಕಾಣುವದು. ನೊಂದ ಸೊಸೆಗೆ ಅನುಕಂಪ ತೋರಲಾರದ ಅತ್ತೆಯು ಸ್ತ್ರೀ ವಿರೋಧಿಯಾಗಿ ಬಿಂಬಿತಳಾಗಿದ್ದಾಳೆ. ಹೀಗಾಗಿ ಈ ಕಾದಂಬರಿಯಲ್ಲಿ ಸತಿತ್ವದ ವೈಭವೀಕರಣದೊಂದಿಗೆ ಸ್ತ್ರೀಯನ್ನು ಶೋಷಣೆ ಮಾಡಿದ್ದು, ಜೊತೆಗೆ ವ್ಯಂಗ್ಯವನ್ನು ಕೂಡಾ ಪ್ರತಿಫಲಿಸಿದೆ.

ಈ ಕಾಲದ ಕೆರೂರು ವಾಸುದೇವಾಚಾರ್ಯರ 'ಇಂದಿರಾ' ಪ್ರೇಮ ಕಥನವೆನಿಸಿದರೂ ಸಾಮಾಜಿಕ ಸಮಸ್ಯೆಯ ಇತಿಮಿತಿ ವಿಶ್ಲೇಷಿಸುವದು. ಪಾಶ್ಚಿಮಾತ್ಯ ಶಿಕ್ಷಣದ ಪರಿಣಾಮವಾಗಿ ಏಳತೊಡಗಿದ್ದ ನವೀನ ವಿಚಾರಗಳನ್ನು ಸ್ತ್ರೀ ಸುಧಾರಣೆಯನ್ನು ಅನುಮಾನ ಆತಂಕಗಳಿಂದ ನೋಡುತ್ತಾ ಅದನ್ನು ವಿರೋಧಿಸಿದ್ದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ವಿಧವೆಯರ ಪುನರ್‌ವಿವಾಹಕ್ಕೆ ಶಾಸ್ತ್ರಗಳೊಪ್ಪುತ್ತವೆಂತು ಕೆಲವು ಸ್ಥಿತಿಯಲ್ಲಿದ್ದ ವಿಧವೆಯರ ಪುನರ್‌ವಿವಾಹವನ್ನು ಮಾಡಲೆಬೇಕೆಂತಲೂ ಸಾಮಾಜಿಕ ಸುಧಾರಣೆಗಳನ್ನು ಪ್ರತಿಪಾದಿಸಿದ್ದಾರೆ. ಮದ್ರಾಸು, ಪುಣೆ, ಕಲ್ಕತ್ತಾ ಮುಂತಾದ ಸ್ಥಳಗಳಲ್ಲಿ ಈ ವಿಷಯದ ಮೇಲೆ ಪ್ರಚಂಡ ವಾಗ್ವಾದ ನಡೆದು ಕಡೆಗೆನೂ ನಿರ್ಣಯವಾಗದಿದ್ದರೂ ಸಾವಿರಾರು ವಿಧವೆಯರು ಹೊಸ ಗಂಡಂದಿರನ್ನು ಸಂಪಾದಿಸಿಕೊಂಡಿರುವರು. ಪಂಡಿತ ರಾಧಾಬಾಯಿ, ಹಾಗೂ ಕಮಲಾ ಪಾತ್ರಗಳಿಗೆ ದೇವಯಾನಿ ಮತ್ತು ಇಂದಿರಾ ಪಾತ್ರಗಳನ್ನು ಎದುರುಬದುರಾಗಿಸಿ ಕಾದಂಬರಿಕಾರರು ತಮ್ಮ ಆಶಯವನ್ನು ಪ್ರತಿಪಾದಿಸಿದ್ದಾರೆ. ಕಮಲಾ ಶಿಕ್ಷಿತ ಯುವತಿ, ವಿಧವೆ, ಪಂಡಿತೆ ರಾಧಾಬಾಯಿ ಶಿಷ್ಯ ಕರ್ವೆಯವರ 'ವಿಧವಾ ಮಹೋದಧಿ' ಎಂಬ ಶಾಲೆಯಲ್ಲಿ ಕಲಿತು ಬಂದವಳು. ಪುನರ್ವಿವಾಹ ಪ್ರಚಾರಗೊಳಿಸಲು. ಸುಧಾರಣೆಗೊಳಿಸಲು ಕಟಿಬದ್ಧಳಾದಳು ಎಂಬಂತೆ ಅವಳ ಪರಿಚಯವಿದೆ.

ಮೂರು ಬಾರಿ ಮದುವೆಯಾಗಿ ಮತ್ತೆ ವಿಧವೆಯಾದ ಪಂಡಿತ ರಾಧಾಬಾಯಿ ಮೂರನೆ ಬಾರಿ ಮದುವೆಯಾದದ್ದು ಒಬ್ಬ ಕ್ರೈಸ್ತನನ್ನು "ಹೀಗೆ ಬ್ರಹ್ಮ ಸಮಾಜ. ಉಪಾಸನಾ ಸಮಾಜ ಮುಂತಾದ ಸಂಘಗಳೊಂದಿಗೆ ಸೇರಿಕೊಂಡು ಪುನರ್‌ವಿವಾಹ ಇತ್ಯಾದಿ. ಸುಧಾರಣಾ ಚಟುವಟಿಕೆಗಳಲ್ಲಿ ನಿರತರಾಗುವ ಪಾತ್ರಗಳೆಲ್ಲ ವ್ಯಂಗಚಿತ್ರಗಳ ಮಾದರಿಯಲ್ಲಿ ಚಿತ್ರಿತವಾಗಿರುವುದೂ ಲೇಖಕರ ಉದ್ದೇಶವನ್ನು ಸೂಚಿಸುತ್ತದೆ.

ಸುಧಾರಣೆ ಅಥವಾ ಬದಲಾವಣೆ ಆದರಷ್ಟಕ್ಕೇ ಆಗಬೇಕಾದುದು. ಅದು ಕಾನೂನು ಅಥವಾ ಪ್ರಚಾರ ಭಾಷಣಗಳಿಂದ ಅಲ್ಲ ಎಂಬ ನಂಬಿಕೆ ಕೆರೂರರಿಗೆ."[೨೧] ರಾಧಾಬಾಯಿ, ಕಮಲೆ, ನಟೇಶರು ಸತ್ವವಿಲ್ಲದ ಟೊಳ್ಳು ಪಾತ್ರಗಳಾಗಿ ಸುಧಾರಕ ಚಟುವಟಿಕೆಗಳನ್ನು ವಿಮರ್ಶಿಸುವ ರಮಾಕಾಂತ ಇಂದಿರೆಯರು ಗಟ್ಟಿ ಪಾತ್ರಗಳಾಗಿ ಕಾಣಿಸಿಕೊಳ್ಳುವರು.

ಮೂರು ಬಾರಿ ಮದುವೆಯಾಗಿಯೂ ಬೆಡಗು ಬಿನ್ನಾಣಗಳನ್ನು ಬಿಡದಿರುವ ಮಧ್ಯವಯಸ್ಸಿನ ವಿಧವೆಯಾಗಿ ಪಂಡಿತ ರಾಧಾಬಾಯಿ ಪಾತ್ರ ಒಂದು ಸಾಂಕೇತಿಕ ಪಾತ್ರ, ವ್ಯಂಗ್ಯದ ಮಾದರಿ ಪಾತ್ರವೇ ಸರಿ. ಇದಕ್ಕೆ ವಿರುದ್ಧವಾಗಿ ಮೂಡಿಬಂದ ದೇವಯಾನಿ ಬಗೆ ಹೇಳುವಾಗ "ಬಾಲ್ಯದಲ್ಲಿಯೇ ತನ್ನ ಸೌಖ್ಯಲತೆಗೆ ಬೆಂಕಿ ಹತ್ತಿ ಸುಟ್ಟು ಹೋಗಿದ್ದರೂ ತನ್ನ ಮನೋನಿಗ್ರಹದಿಂದ ಆಶೆಯಲ್ಲಿಯೇ ಕೊಳೆಯದೆ ಧೈರ್ಯ ತೊಟ್ಟು ಇದ್ದುದ್ದರಲ್ಲಿ ಸುಖ ಹಚ್ಚಿಕೊಂಡ ಇವಳನ್ನು ನೋಡದಿದ್ದರೆ ರಮಾಕಾಂತನಿಗೆ ವ್ರತಸ್ಥರಾದ ಬಾಲವಿಧವೆಯರು ಹೇಗಿರುವರೆಂಬುದು ತಿಳಿಯುವದೇ ಕಷ್ಟವಾಗುತ್ತಿತ್ತು".[೨೨] ಇಲ್ಲಿ ದೇವಯಾನಿ ಪ್ರೀತಿಸಿ ಮದುವೆಯಾಗ ಬಯಸುವರು. ಜಯರಾಯ ಹಾಗೂ ರಮಾಕಾಂತನ ತಂದೆ ಕಮಲಾಕಾಂತ, ದೇವಯಾನಿಯ ಪ್ರೀತಿ ಕಮಲಾಕಾಂತನ ಕಡೆಗೆ ಇರುವುದನ್ನರಿತ ಜಯರಾಯ ಕುತಂತ್ರದಿಂದ ಅದನ್ನು ಹಾಳುಗೆಡವಿದರೆ, ದೇವಯಾನಿ ಜೀವನದುದ್ದಕ್ಕೂ ವಿಧವಾ ವ್ರತಸ್ಥಳಾಗಿಯೇ ಇರುತ್ತಾಳೆ. ಇಲ್ಲಿ ತ್ಯಾಗ, ಸಂಯಮಗಳ ದೇವಯಾನಿಯು ಮೂರು ಮದುವೆಯಾದರೂ ಸಂತೃಪ್ತಿ ಇರದ ಪಂಡಿತ ರಾಧಾಬಾಯಿಗೆ ವೈದೃಶ್ಯಳಾಗಿ ನಿಲ್ಲುತ್ತಾಳೆ. ದೇವಯಾನಿಯ ಪಾತ್ರದ ಬಗ್ಗೆ ಒಂದು ಗೌರವಪೂರ್ಣ ನಿಲುವು, ರಾಧಾಬಾಯಿಯ ಕುರಿತಂತೆ ಗೌರವವಲ್ಲದ ನಿಲುವು ಇದೆ. ಕೌಟುಂಬಿಕ ಸ್ತ್ರೀ ಶೋಷಣೆಯ ಮುಖಾಮುಖಿ ಈ ಪಾತ್ರಗಳಲ್ಲಿ ಕಾಣುವುದು.

ಸಮಾಜ ಸುಧಾರಣೆಯ ನಿರ್ಧಿಷ್ಟವಾದ ಉದ್ದೇಶ ಈ ಕಾದಂಬರಿಗಿಲ್ಲವಾದ್ದರಿಂದ ರಮಾಕಾಂತ ಇಂದಿರೆಯರ ಪ್ರಣಯದ ಭಾವ ಸಂಚಾರವನ್ನು ದಾಖಲಿಸುವ ವ್ಯವಧಾನವಿದೆ. ಕಾದಂಬರಿ ಕುರಿತಾದ ಪಾಶ್ಚಾತ್ಯ ಕಲ್ಪನೆಯನ್ನು ನಮ್ಮ ದೇಶಿಯವಾದ ಪ್ರಣಯ ಕಥೆಗಳ ಮಾದರಿಯನ್ನು ಸಮನ್ವಯಗೊಳಿಸಿದ ಒಂದು ರೀತಿ ಕೆರೂರರ 'ಇಂದಿರಾ'ದಲ್ಲಿ ಕಾಣುವುದು. ಸ್ತ್ರೀ ಸುಧಾರಣಾ ಚಟುವಟಿಕೆಗಳು ಸಾಗುತ್ತಿದ್ದ ಪರಿ ಸಮಾಜದ ಮೇಲೆ ಅವುಗಳ ಪರಿಣಾಮಗಳನ್ನು ಗಮನಿಸಿದರೆ ಕೆರೂರು ವಾಸುದೇವಾಚಾರ್ಯರಿಗೆ 'ಹಾಗಲ್ಲ ಹೀಗೆ' ಎಂದು ಹೇಳುವದಕ್ಕೆ ಸ್ತ್ರೀ ಪಾತ್ರ ಪ್ರಧಾನವಾದ ತಮ್ಮದೆ ದೃಷ್ಟಿಕೋನದಲ್ಲಿ ಪುನರ ವ್ಯಾಖ್ಯಾನಿಸಬೇಕಾಯಿತು ಅವರು ಕಂಡ ಸ್ತ್ರೀಯರ ಪುನರ್ವ್ಯಾಖ್ಯಾನದ ರೂಪ 'ಇಂದಿರೆ'ಯಲ್ಲಿದೆ ದೇವಯಾನಿಯಲ್ಲಿದೆ.

'ಮಾಡಿದ್ದುಣ್ಣೋ ಮಹಾರಾಯ' ಹೊಸಗನ್ನಡ ಕಾದಂಬರಿಕಾರರಲ್ಲಿ ಸಾಂಪ್ರದಾಯಿಕ ಧೋರಣೆಯುಳ್ಳ ಕಾದಂಬರಿ. ರಾಮಾಯಣದ ಸೀತಾಮಾತೆಯ ಆದರ್ಶವನ್ನು ಸ್ಪಷ್ಟವಾಗಿ ಎತ್ತಿ ಹಿಡಿಯುವ ಒಂದು ಕೃತಿ. ಈ ಕಾದಂಬರಿಯ ಮುಖ್ಯ ಪಾತ್ರದ ಹೆಸರು ಸೀತೆಯೇ ಆಗಿರುವುದು. 'ಕೂತರೆ ತಪ್ಪು ನಿಂತರೆ ತಪ್ಪು' ಎಂಬಂತೆ ಕಾಡುವ, ಹೊಡೆಯುವ ಬಡೆಯುವ ಅತ್ತೆಯ ಕಾಟವನ್ನು ಅನುಭವಿಸುವ ಆಕೆ ತ್ಯಾಗ ಸಹನೆಯ ಪಾತಿವ್ರತ್ಯದ ವಿಧೇಯತೆಯ ಪಾತ್ರ. ಶೋಷಣೆಯ ಪಾತ್ರ. ದುಷ್ಟರು ಅವರವರ ಕರ್ಮಫಲವನ್ನು ಪಾಪಕೃತವೆಂದು ಕಾಣುವದು. ಶಿಷ್ಟರ ತಾಳ್ಮೆಗೆ, ಸಾತ್ವಿಕತೆಗೆ ಕೊನೆಗೆ ಜಯವಾಗುತ್ತದೆ ಎಂಬ ಸಾಮಾನ್ಯವಾದ ನೀತಿಬೋಧೆಯನ್ನು ಸಾರುತ್ತದೆ. ಇದರ ಹೊರತಾಗಿ ಸ್ತ್ರೀ ವಿಷಯವಾಗಿ ಚರ್ಚೆಯಾಗಲಿ ಸುಧಾರಣಾಪರ ಆಶಯವಾಗಲಿ ಕಾದಂಬರಿಯೊಳಗೆ ಸುಳಿಯುವುದಿಲ್ಲ. ಸತಿಸಹಗಮನವನ್ನು ಅದಾಗಲೆ ಕಾನೂನಿನ ಮೂಲಕ ನಿಲ್ಲಿಸದಿದ್ದರೂ ಆ ವಿಷಯವಾಗಿ ಆರಾಧನಾಭಾವದ ವರ್ಣನೆ ಬಂದಿರುವುದು ಅಚ್ಚರಿಯೆನಿಸುವದು.

ಕಾದಂಬರಿಯುದ್ದಕ್ಕೂ ಸೀತೆ ಶೋಷಣೆಗೆ ಒಳಗಾಗುವಳು. ತಿಮ್ಮಮ್ಮ ಹಾಗೂ ಮಗಳು ಸಾತಿ ಕೂಡಿ ಎಷ್ಟು ಸಾಧ್ಯವೊ ಅಷ್ಟು ಶೋಷಣೆಗೆ ಒಳಪಡಿಸಿದ್ದಾರೆ. ಅತ್ತೆಯಿಂದ ಬೈಗುಳ, ಹೊಡೆತ ಅಲ್ಲದೆ ಅರೆಹೊಟ್ಟೆಯಿಂದ ದುಡಿಯುವ ಸೀತೆ ಒಮ್ಮೆಯೂ ಅತ್ತೆಯೊಂದಿಗೆ ವಾದಿಸದೆ ತನ್ನ ನೋವನ್ನು ತಾನೆ ನುಂಗಿಕೊಳ್ಳುತ್ತಾಳೆ. ಅಷ್ಟೆ ಅಲ್ಲದೆ ಕಾಮಾಭಿಲಾಷೆಯುಳ್ಳ ಪೂಜಾರಿ ಸೀತೆಯ ಸೆರಗಿಡಿದು ಅಪ್ಪಿಕೊಳ್ಳಲು ಹೋದಾಗ ಕಿಡಿಯಾದ ಸೀತೆ "ಎಲಾ ಖೂಳ, ನೀಚ, ಚಾಂಡಾಲ, ನನ್ನ ಮೈಯನ್ನು ಮುಟ್ಟಿಯೇ ಇಲ್ಲಿಯೇ ನಿನ್ನನ್ನು ಕೊಂದು ಹೆಣವನ್ನು ನಾಯಿಗೆ ಹಾಕಿ ಮನೆಗೆ ಹೋಗುವ ಶಕ್ತಿ ನನಗೆ ಇದೆ. ಜೋಕೆ ದೂರದಲ್ಲಿರುವ ಇಂದಿಗೆ ನಿನ್ನ ಹಣೆ ಬರಹ ತೊಡೆದು ಹೋಯಿತು. ನಿನ್ನ ಭಾಗಕ್ಕೆ ನಾನೇ ಮೃತ್ಯು ದೇವತೆ ಎಂದು ತಿಳಿ"[೨೩] ಎನ್ನುತ್ತಲೆ ತೆಂಗಿನ ಕಾಯಿ ಹಾಗೂ ಕಲ್ಲಿನಿಂದ ಹೊಡೆದು ತಪ್ಪಿಸಿಕೊಂಡು ಮನೆ ಸೇರುತ್ತಾಳೆ. ಇದು ಸ್ತ್ರೀಯು ಕೌಟುಂಬಿಕ ಶೋಷಣೆಯೊಂದಿಗೆ ಸಾಮಾಜಿಕ ಶೋಷಣೆಗೆ ಚಾಚಿಕೊಂಡ ಪ್ರಸಂಗ. ಮನೆಯಲ್ಲಿ ಈ ಪ್ರತಿಭಟನೆ ಮೂಡಿಬಂದಿಲ್ಲ. ಅಲ್ಲಿ ಕೌಟುಂಬಿಕ ಗೊಡ್ಡು ನಂಬಿಕೆ, ಸಹನೆ ವ್ಯಾಪಕವಾಗಿ ಲೇಖಕರು ಚಿತ್ರಿಸಿದ್ದು ಅಪ್ಪಟ ಗೃಹಿಣಿಯಾಗಿಸಿದ್ದಾರೆ.

ಲಕ್ಷ್ಮಣ ಭೀಮರಾವ ಗದಗಕರ ಸೂರ್ಯಕಾಂತ(೧೮೯೨) ಕಾದಂಬರಿ ಒಂದು. ಮೊದಲ ಕಾದಂಬರಿಗಳು ಸ್ತ್ರೀ ಪ್ರಧಾನವಾದವುಗಳು. ನಾಯಕಿಯರ ಹೆಸರನ್ನು ಶೀರ್ಷಿಕೆಯಾಗಿ ಹೊತ್ತವು ಎಂಬ ಮಾತಿಗೆ ಅಪವಾದವಾಗಿರುವ ಕೃತಿಗಳಲ್ಲಿ ಇದೂ ಒಂದು. ನಾಯಕ ಪ್ರಧಾನವಾದ ಕೃತಿಯಾದರೂ ಸ್ತ್ರೀಯರ ವಿಚಾರಗಳು ಹೇರಳ. ಕಾದಂಬರಿಯ ನಾಯಕ ಸೂರ್ಯಕಾಂತನ ತಾಯಿಯನ್ನು ಕುರಿತಾಗಿದುದ್ದು. ಆರಂಭದಲ್ಲಿ ಸಾಕಷ್ಟು ಮಾತುಗಳು ಬರುವವು. "ಮುಖ್ಯವಾಗಿ ಸ್ತ್ರೀಯರಿಗೆ ಉಡುಗೆ ತೊಡುಗೆಗಳ ಬಗ್ಗೆ

ಬಹು ಅಭಿಲಾಷೆ ಇರುವುದು. ಅದು ಅವರ ಅಲ್ಪಮತಿಗೆ ಅನುರೂಪವಾಗಿರುತ್ತದೆ."[೨೪] ಸೂರ್ಯಕಾಂತ ತಂದೆಗೆ ತನ್ನ ಮಗನನ್ನು ನಿಜವಾದ ವಿದ್ಯಾಲಂಕಾರಗಳಿಂದ ಭೂಷಿತನಾಗಿ ಮಾಡಬೇಕೆಂಬ ಅಪೇಕ್ಷೆ, ಆದರೆ ಬಡತನ ಸೂರ್ಯಕಾಂತನ ತಂಗಿ ಪ್ರೇಮಮತಿ ಅವರೀರ್ವರೂ ಅನ್ಯೋನ್ಯವಾಗಿರುವಾಗ ಶಿಕ್ಷಣದ ಕಾರಣದಿಂದ ಸೂರ್ಯಕಾಂತನ ಅಗಲಿಕೆಯ ಸಂದರ್ಭ ತಾಯಿ ಕಳವಳಿಸುವಳು. ಇದು ತಾಯಿ ಮಕ್ಕಳ ಕರುಳ ಸಂಬಂಧಿ ವಿಶ್ಲೇಷಣೆ. ಈ ಸಂದರ್ಭಕ್ಕೆ ಲೇಖಕರು "ಹೀಗಾಗುವದು ಸ್ತ್ರೀ ಜಾತಿಗೆ ಸಾಧಾರಣೆ. ಅವರ ದೃಷ್ಟಿಯು ಪ್ರಸ್ತುತದ ಸೌಖ್ಯದ ಕಡೆಗಿದ್ದು ಮುಂದಿನ ಪರಿಣಾಮದ ಕಡೆಗೆ ಇರುವದಿಲ್ಲ"[೨೫] ಎಂದಿದೆ. ಇಲ್ಲಿ ಪ್ರೇಮಮತಿ ಸೂರ್ಯಕಾಂತ(ಅಣ್ಣ) ಊಟೋಪಚಾರಗಳ ಬಗ್ಗೆ ಯೋಗಕ್ಷೇಮದ ಬಗ್ಗೆ ಬಹು ಪ್ರೇಮದಿಂದ ವಿಚಾರಿಸಿಕೊಳ್ಳುವ ಸಂದರ್ಭ ಸ್ತ್ರೀ ಪುರುಷ ಸಮಾಜದ ಕಾಳಜಿ ಕಾಣುವದು. ಅದೇ ಪುರುಷ ಸಮಾಜ ಸ್ತ್ರೀಯ ವಿಚಾರದಲ್ಲಿ ಚಿಂತಿಸದಿರುವುದು ಶೋಚನೀಯವೆನಿಸುವುದು. ಸಹೋದರನಾದ ಸೂರ್ಯಕಾಂತ ಕೊನೆಗೆ ಆಗಮಿಸುವಾಗ 'ಪ್ರೀತಿ ಪಾತ್ರವಾದ ವಸ್ತುಗಳನ್ನು ತರುತ್ತೇನೆ. ಅಪ್ಪನ ಕಡೆಯಿಂದ ಹೇಳಿಸಿಕೊಂಡು ಓದು ಬರಹ ಕಲಿತು ಬುದ್ಧಿವಂತಳಾಗಬೇಕೆಂಬ ಉಪದೇಶ ಒಬ್ಬ ಸಹೋದರ ತನ್ನ ಸಹೋದರಿಯ ಕಲಿಕೆಯ ಮಹತ್ವ ತಿಳಿಸುವನು.

ಸೂರ್ಯಕಾಂತನ ತಂದೆಗೆ ಮಗಳ ಶಿಕ್ಷಣದ ಬಗ್ಗೆ ಆಸಕ್ತಿ ಇಲ್ಲದಿದ್ದರೂ ಅಣ್ಣನಿಗೆ ತಂಗಿ ಕೂಡ ಶಿಕ್ಷಿತಳಾಗಬೇಕು ಮನೆಯಲ್ಲಿಯೇ ಇದ್ದು ಕಲಿತರೂ ಅಡ್ಡಿಯಿಲ್ಲ ಎಂಬ ಬಯಕೆ ತಂದೆ ಮಗ-ಮಗಳ ಮನೋ ಸಂಘರ್ಷ ಗಮನಿಸುವಂತಹದ್ದು. ವಿದ್ಯಾವಂತನಾಗಿ ಉದ್ಯೋಗವನ್ನು ಹಿಡಿದು ಬಡತನ ತೊಲಗಿಸುವ ಭರವಸೆಯ ನುಡಿಗಳನ್ನು ತಾಯಿಗೆ ಆಡಿದ ಸೂರ್ಯಕಾಂತನ ಶೌರ್ಯ, ಔದಾರ್ಯ, ಧೀಮಂತಿಕೆಗಳಿಂದ ಮೂಡಿಬಂದಿದೆ. ಕಾದಂಬರಿಯ ಮುಂದಿನ ಬೆಳವಣಿಗೆ. ಸ್ತ್ರೀ ಪಾತ್ರಗಳು ಇಲ್ಲಿ ಮಹತ್ವದ್ದಲ್ಲದಿದ್ದರೂ ಸಾಮಾಜಿಕವಾಗಿ ಕೌಟುಂಬಿಕವಾಗಿ, ಸ್ತ್ರೀ ಶಿಕ್ಷಣದ ತರ್ಕಗಳು ಕಾಣುವುದು.

ಗದಗಕರವರ ಮತ್ತೊಂದು ಕೃತಿ ಚಂದ್ರಪಭಾ(೧೮೯೬) ಸ್ತ್ರೀ ಪಾತ್ರ ಪ್ರಧಾನವಾದದ್ದು. ತನ್ನದೆಯಾದ ಮಹತ್ವ ಪಡೆದ ಕೃತಿ. ಕೃಪಾಶೀಲ ಭಾಗ್ಯಶೀಲೆಯರ ಮಗಳು ಚಂದ್ರಪ್ರಭಾ ಕಾದಂಬರಿಯ ನಾಯಕಿ ಪಾತ್ರ. ಬಹುಕಾಲ ಮಕ್ಕಳಿಲ್ಲದೆ ಕೃಪಾಶೀಲ ಸಹೋದರನಾದ 'ಕುಬುದ್ಧಿಯನ್ನು ಪೋಷಿಸಿದ್ದರೂ ಆ ಬಳಿಕ ಚಂದ್ರಪ್ರಭೆ ಜನಿಸಿದ್ದು ಕುಬುದ್ಧಿಯ ಮತ್ಸರಕ್ಕೆ ಕಾರಣವಾಗುವದು. ಕಾದಂಬರಿಯುದ್ದಕ್ಕೂ ಖಳ ಪಾತ್ರವಾಗಿ ಕಾಣಿಸಿದ್ದು ದುರಂತ. ಚಂದ್ರಪ್ರಭೆ ಜಾಣೆ, ಗೃಹಿಣಿ ಶಿಕ್ಷಣ ಕೊಡುವದು ಆಕೆ ಜಾಣತನದಿಂದ ಎಲ್ಲರ ಗಮನ ಸೆಳೆದಿದ್ದು ಮನಮೋಹನನೊಡನೆ ವಿವಾಹವಾಗುವದು. ಚಂದ್ರಪ್ರಭಾ ಗಂಡನ ಮನೆಗೆ ಹೋದರು ಅವಳಿಗೆ ಕೇಡುಂಟು ಮಾಡುವ ನಾನಾ ತಂತ್ರಗಳನ್ನು ಹೆಣೆಯುವನು. ರಾಜನನ್ನು ಚಾಡಿ

ಮಾತಿನಿಂದ ಎತ್ತಿಕಟ್ಟಿದ್ದು, ಆಗ ಚಂದ್ರಪ್ರಭೆ ರಾಜಭಟರೊಡನೆ ಕತ್ತಿ ಹಿಡಿದು ಹೋರಾಟ ಮಾಡಿದ್ದು ವ್ಯರ್ಥ ಪ್ರಯತ್ನ, ಕೌಟುಂಬಿಕ ಸಂಘರ್ಷಕ್ಕೆ ಉದಾಹರಣೆ.

ಪತಿಗಾಗಿ ಪತಿವ್ರತೆಯಾಗಿ ನಡೆದುಕೊಳ್ಳುತ್ತಾಳೆ. ಅನ್ಯಾಯವಾಗಿ ಆತ ಸೆರೆಯಾಗಿ ಹೋದಾಗ ತವರಿಗೆ ಬಂದ, ಚಂದ್ರಪ್ರಭೆ ಗೋಳಿಡದೆ ಗಾಂಭಿರ್ಯದಿಂದ ಇರುವದು ಹಾಗೂ ತವರಿನಲ್ಲಿ ಸುಮ್ಮನಿರದೆ ಆಡಳಿತದ ಹಾಗೂ ನ್ಯಾಯ ತಿರ್ಮಾನ ವಿಷಯದಲ್ಲಿ ಎಲ್ಲರ ಪ್ರಶಂಸೆಗೆ ಪಾತ್ರಳಾಗುವಳು. ಅವಳ ತಂದೆ "ಶಾಬಾಸು ಮಗಳೆ, ಗಂಡಸು ಮಕ್ಕಳಿಲ್ಲವೆಂಬ ಖೇದವನ್ನು ನೀನು ಹೋಗಲಾಡಿಸಿದೆ"[೨೬] ದುಡಿಯುವ ಯಜಮಾನ ರೋಗಗ್ರಸ್ಥನಾಗಿ ಬಡತನದಿಂದ ತೊಂದರೆ ಪಡುವ ಒಂದು ಕುಟುಂಬಕ್ಕೆ ಸಹಾಯ ಮಾಡುವ ಆಕೆಯ ಮಾನವೀಯತೆಯ ಉದಾಹರಣೆ. ಮನುಷ್ಯತ್ವದ ಮೂರ್ತಿ ಚಂದ್ರಪ್ರಭಾ.

ರೂಪವತಿ, ಲಾವಣ್ಯವತಿ ಚಂದ್ರಪ್ರಭೆಯ ಬಗ್ಗೆ ಕುಬುದ್ಧಿ ರಾಜನಿಗೆ ದುರ್ಬುದ್ಧಿಯ ಪರಿಣಾಮ ಅವಳನ್ನು ಮೊಸಗೊಳಿಸಲು ಹಾಕಿದ ಸಂಚು ವಿಫಲವಾಗುವದು. ರಾಜನು ಹೂಡುವ ತಂತ್ರಕ್ಕೆ, ಪ್ರತಿ ತಂತ್ರ ಹೂಡುವ ಚಂದ್ರಪ್ರಭೆಯ ಹೋರಾಟದ ಕಿಚ್ಚು ದೃಢಚಿತ್ತತೆ ಯಾವ ಪುರುಷನಿಗೂ ಕಡಿಮೆ ಇರಲಿಲ್ಲ. 'ವಿದ್ಯೆ ಸಂಸ್ಕಾರವಿಲ್ಲದ ಸ್ತ್ರೀಯರನ್ನು ಮೋಸಗೊಳಿಸುವ ಜನರು ಅಧಿಕವಿರುತ್ತಾರೆ ಎಂದು ತಿಳಿದ ಚಂದ್ರಪ್ರಭಾ ಒಮ್ಮೆ ವೇಷಗಾರನ ಮಾತು ನಂಬಿ ಮೋಸ ಹೋದಾಗ ಯಾವ ಪುರುಷನಿಗೂ ಕಡಿಮೆಯಿಲ್ಲದಂತೆ ನಿಷ್ಠಾವಂತ ಸೇವಕರಿಂದ ಬಚಾವಾದ ರೀತಿ ಗಮನಿಸಬೇಕು.

ಪುರುಷ ಪ್ರಧಾನ ಸಮಾಜದ ಜೊತೆ ಹೋರಾಡುವಲ್ಲಿ ಸ್ತ್ರೀ ಕಡಿಮೆ ಅನ್ನಿಸುವದೇ ಇಲ್ಲ. ಕುಬುದ್ಧಿ ಹೆಂಡತಿ ವಿಲಾಸಿನಿಯ ಕೆಟ್ಟ ಚಾರಿತ್ರ್ಯದ ಬಗ್ಗೆ ಹೇಳುವಾಗ ಲೇಖಕರು "ಬಹುತರ ಸ್ತ್ರೀಯರ ನೀತಿ ಅನೀತಿಗಳಿಗೆ ಪುರುಷರ ಆಚಾರವೇ ಪ್ರಬಲವಾದ ಕಾರಣವಾಗಿರುವುದು."[೨೭] ಸಾಮಾಜಿಕ ಸ್ವಾಸ್ಥ್ಯಕ್ಕೆ ಪುರುಷನ ಹೊಣೆಗಾರಿಕೆಯು ಇದೆ ಎಂದು ಗುರುತಿಸಿದ ಲೇಖಕರ ಮನೋಧರ್ಮ ಇಲ್ಲಿ ಗಮನಿಸುವಂತಹದ್ದು. ಚಂದ್ರಪ್ರಭಾ ಮತ್ತು ಮನಮೋಹನರಾಯ ಇವರೊಳಗೆ ಸ್ತ್ರೀ ಶಿಕ್ಷಣದ ಕುರಿತು ಚರ್ಚೆ ಒಂದೆಡೆಯಾದರೆ, ಐತಿಹಾಸಿಕ ಕಾದಂಬರಿಯಂತೆ ಭ್ರಮೆ ಮೇಲಾಡಿಸಿದರೂ ಐತಿಹಾಸಿಕವಲ್ಲ.

ಕಾದಂಬರಿಯಲ್ಲಿ ಪ್ರಸ್ತಾಪವಾಗುವ ಸ್ತ್ರೀ ಶಿಕ್ಷಣ ಕುರಿತಾದ ವಿಚಾರಗಳಲ್ಲಿ ಆ ಕಾಲಕ್ಕೆ ಬಹುಶಃ ಮಹಾರಾಷ್ಟ್ರದಲ್ಲಿ ಜಾಗೃತಿಗೊಳ್ಳುತ್ತಿದ್ದ ಸ್ತ್ರೀ ಶಿಕ್ಷಣದ ಕುರಿತಾದ ಚಿಂತನೆ ಪ್ರತಿಧ್ವನಿಸಿದೆ. ಕಾದಂಬರಿಯಲ್ಲಿ ಸ್ತ್ರೀ ಪುರುಷ ಸಮಾನತೆಯ ಚರ್ಚೆ ಕಾಣುವದು. ಸೂರ್ಯಕಾಂತ ಪಾತ್ರ ಗಂಡಿನ ಉಜ್ವಲತೆಯ ಪ್ರತೀಕವಾದರೆ ಚಂದ್ರಪ್ರಭಾ ಹೆಣ್ಣಿನ ಉಜ್ವಲತೆಯ ಪ್ರತೀಕವಾಗುತ್ತಾಳೆ. ಒಬ್ಬರೆ ಲೇಖಕರಿಂದ ಮಾಡಿದ ಈ ಎರಡು ಪಾತ್ರಗಳು ಲಿಂಗತಾರತಮ್ಯವಿಲ್ಲದೆ ಮನುಷ್ಯ ಸಾಮರ್ಥ್ಯದ ಸಾಧ್ಯತೆಯ ಬಗ್ಗೆ ಅವರಿಗೆ ಇರುವ ನಂಬಿಕೆಯನ್ನು ಪ್ರಕಟಪಡಿಸುತ್ತವೆ. ಲೇಖಕರ ನಿಷ್ಪಕ್ಷಪಾತದ ವಸ್ತುನಿಷ್ಠ ಧೋರಣೆಯನ್ನು ಹೇಳುತ್ತವೆ.

ಬಡತನದ ಪರಿಸರದಿಂದ ಮೇಲಕ್ಕೇರುವ ಸೂರ್ಯಕಾಂತನು ಒಂದು ಉದಾಹರಣೆಯಾದರೆ ಹೆಣ್ಣಾದ ಚಂದ್ರಪ್ರಭಾ ರೂಢಿಗತ ಮಿತಿಗಳನ್ನು ಮೀರುವುದು ಇನ್ನೊಂದು ಉದಾಹರಣೆ. ಈ ದೃಷ್ಟಿಯಿಂದ ಕಾದಂಬರಿಯು ಮಹತ್ವದ್ದಾಗುತ್ತದೆ. ಹಾಗೆಯೇ ಚಂದ್ರಪ್ರಭೆಯ ಸತಿತ್ವಕ್ಕೆ ಮಹತ್ವ ನೀಡಿ ಆದರ್ಶ ಬದುಕಿನ ಕುಡಿಯಾಗಿದ್ದು ಅಂದಿನ ಮೌಲ್ಯದ ಪ್ರತಿಪಾದನೆ ಮುಖ್ಯವಾದದ್ದು.

ಇಲ್ಲಿ ಗಮನಿಸಲಾದ ಸಾಮಾಜಿಕ ಕಾದಂಬರಿಗಳಲ್ಲಿ ಸ್ತ್ರೀಗೆ ಸಂಬಂಧಿಸಿದ ಒಂದಲ್ಲ ಒಂದು ಬಗೆಯ ಸಾಮಾಜಿಕ ವಿಚಾರ ಪ್ರಸ್ತಾಪಗೊಳ್ಳುತ್ತದೆ. ಈ ಸೂರ್ಯಕಾಂತ, ಚಂದ್ರಪ್ರಭಾ ಕಾದಂಬರಿಗಳಲ್ಲಿ ಚಿತ್ರಿತವಾದ ಸಮಾಜ ಉಳಿದ ಕಾದಂಬರಿಗಳು ಚಿತ್ರಿಸಿದ ಸಮಾಜ ರೀತಿಯದ್ದಲ್ಲವೆಂದೆನಿಸಬಹುದು. ಕಾದಂಬರಿ ಚಿತ್ರಿಸುವ ಸಮಾಜ ಕಾದಂಬರಿ ರಚಿತವಾದ ಕಾಲಕ್ಕಿಂತ ಹಿಂದಿನದಾಗಿರಬಹುದು. ಆದರೆ ಸಮಕಾಲೀನ ಸಾಮಾಜಿಕ ವಿದ್ಯಮಾನಗಳ ಕುರಿತಾದ ಪ್ರತ್ಯಕ್ಷ ಇಲ್ಲವೇ ಪರೋಕ್ಷ ಪ್ರತಿಕ್ರಿಯೆ ಅವುಗಳಲ್ಲಿ ಕಂಡುಬರುತ್ತದೆ.

ನಂಜನಗೂಡು ತಿರುಮಲಾಂಬ ಅವರ ಸುಶೀಲೆ ಕಾದಂಬರಿ ಒಂದು ಮಹತ್ವದ ಕೃತಿ. ಈ ಕಾದಂಬರಿಯಲ್ಲಿ ಸುಶೀಲೆಯನ್ನು ನೈತಿಕ ನೆಲೆಗಟ್ಟಿನ ಮೇಲೆ ಚಿತ್ರಿಸಲಾಗಿದೆ. ಗಂಡನಿಂದ ದೈಹಿಕ, ಮಾನಸಿಕ ಹಿಂಸೆಯನ್ನು ಅನುಭವಿಸಿಯೂ ಪತಿಯನ್ನು ಒಳ್ಳೆಯ ದಾರಿಗೆ ತಂದು ಸಫಲವಾಗುತ್ತಾಳೆ. ಇದು ಕಾದಂಬರಿಯ ಕಥಾವಸ್ತು. ಸ್ತ್ರೀ ಜನಾಂಗದ ಪುರೋಭಿವೃದ್ಧಿಗೆ ಅವಶ್ಯವಾದ ರೀತಿನೀತಿಗಳನ್ನು ವಿಶ್ಲೇಷಿಸುವದು ಅವರ ಬರವಣಿಗೆಯ ಉದ್ದೇಶ. 'ಸತಿ ಹಿತೈಷಿಣಿ', 'ಮಾತೃನಂದಿನಿ' ಕೃತಿಗಳನ್ನು ಗಮನಿಸಲಾಗಿ ಅದು ಫಲಪ್ರದ ಬದುಕು ಸ್ತ್ರೀಪರ ಬದುಕು ಎಂಬುದೆ ಚರ್ಚಿತ ಸಂಗತಿ. ಆರ್ಯಮಹಿಳೆ, ಭಾರತೀಯ ಮಹಿಳೆ ಎಂಬ ಗೀಳು ಆ ಕಾಲದಲ್ಲಿ ಸಾರ್ವತ್ರಿಕವಾಗಿ ಹಬ್ಬಿದ ಭಾವುಕ ಸಂಗತಿ. ಲೇಖಕರು ಅವರ ಕೃತಿಗಳಲ್ಲಿ ಶೀಲವು ಅತ್ಯಂತ ಮುಖ್ಯ ಸತ್ವವಾಗಿ ಒಂದು ತೇಜಸ್ಸಾಗಿ ಶೋಭಿಸುವದು. ಆರ್ಯ ಮಹಿಳೆಯ ಲಕ್ಷಣ ಇಂತಹ ಆದರ್ಶ ಕೌಟುಂಬಿಕ ಆದರ್ಶಗಳು ತಿರುಮಲಾಂಬ ಅವರಿಗೆ ವಿಧವಾ ವಿವಾಹ ಸಮರ್ಥನೀಯ ವಿಷಯವಾಗಿಲ್ಲ. ಅದು ಸ್ತ್ರೀ ಶೋಷಣೆ ಆ ಕಾಲದ ಬೇರುಮಟ್ಟದ ಸಮಸ್ಯೆ. ವಿಧವೆಯರ ಕೇಶಮುಂಡನ ಸಾಮಾಜಿಕವಾಗಿ ಅವರು ಅನಾದಾರ ಅವಹೇಳನ. ಅವಗಣನೆಗಳಿಗೆ ಗುರಿಯಾಗುವುದು. ಅದು ಅವರ ಸ್ವಾನುಭಾವದ ನೊಂದ ಬೆಂದ ನುಡಿಗಳನ್ನು ಕುರಿತು ಎಷ್ಟೊ ಬಾರಿ ಸಾಮಾಜಿಕ ಜಾಗೃತಿಗಾಗಿ ಪ್ರಯತ್ನಿಸಿದ್ದಾರೆ. ಹಿತೈಷಿಣಿ ಹೆಜ್ಜೆಯ 'ಅಬಲಾ ದೌರ್ಜನ್ಯ' ಎಂಬ ಉಪನ್ಯಾಸದ ಸ್ತ್ರೀ ಲೋಪದೋಷಗಳನ್ನು ತರ್ಕಿಸಿ ಸಾಮಾಜಿಕ ಕಳಕಳಿ ವ್ಯಕ್ತಪಡಿಸಿದ್ದಾಳೆ.

ತಿರುಮಲಾಂಬರವರು ಪ್ರತಿಪಾದಿಸುವ ಸ್ತ್ರೀಶಿಕ್ಷಣ ಕೌಟುಂಬಿಕ ನೆಮ್ಮದಿ ಕೆಡಲು ಕಾರಣವಾಗದಿರಲೆಂಬುದಾಗಿತ್ತು. ಸ್ತ್ರೀ ಮನೆಗೆಲಸ ಮಾಡಿಕೊಂಡು ಇರಬೇಕು ಆದರೆ 'ಹೊರಗೆ

ಮಡಿಯುವ ಮಹಿಳೆ. ಮನೆಗೆಲಸದಲ್ಲಿ ಸಹಕರಿಸುವ ಪತಿ ಈ ಕಲ್ಪನೆ ಅವರಿಗೆ ರುಚಿಸುವದಿಲ್ಲ. ಸ್ತ್ರೀಗೆ ಬೇಕಾದ ವಿದ್ಯೆ "ಸ್ತ್ರೀಗೆ ಭಗವದ್ಗುಣ ಸ್ವರೂಪ ಸಂಬಂಧಗಳ ಅನುಭವವನ್ನುಂಟು ಮಾಡಿಕೊಡಬಲ್ಲ ದಿವ್ಯಜ್ಞಾನವು". ಸ್ತ್ರೀ ಜಾತಿಗೆ ಉಚಿತವಾಗಿ ನೇಮಿಸಲ್ಪಡುವ ಕಾರ್ಯಗಳನ್ನು ಕ್ಲುಪ್ತಕಾಲಗಳಲ್ಲಿ ನೆರವೇರಿಸಿದ ಮೇಲೆ ಮಾತ್ರ."[೨೮] ಎಂದು ಪ್ರತಿಪಾದಿಸುವರು. ಬ್ರಹ್ಮಚರ್ಯಪಾಲನೆ ವಿಧವೆಯ ಆದ್ಯಕರ್ತವ್ಯ ಎಂದು ದೃಢವಾಗಿ ಹೇಳುತ್ತಾರೆ. ಸುಶೀಲೆ ಕಾದಂಬರಿಯ ಗಿರಿಯಮ್ಮನ ಮಾತುಗಳು ಸುಶೀಲೆ ಹಾಗೂ ಕೌಟುಂಬಿಕ ಸಂಘರ್ಷ ಹುಟ್ಟು ಹಾಕುವದು. "ಹಾಳು ಸುಶೀಲೆ ಯಾವಾಗ ನೋಡಿದರೂ ಪುಸ್ತಕ ಹಿಡಿದೇ ಇರುವಳು. ಹೆಂಗಸುಗೆ ಓದೆಂದರೇನು। ಎಂದು ವಿರೋಧಿಸುತ್ತಾ ಹಾಳು ಓದು ಬರಹ ಬಲ್ಲ ಹೆಂಗಸರು ಮಾಡುವದೆಲ್ಲ ಕೆಟ್ಟ ಕೆಲಸ । ಹೊರಗೆ ಮಾತ್ರ ಬಹು ಸಜ್ಜನರಂತೆ ಕಾಣುತ್ತಿರುವರು" ಎಂದು ಜರೆಯುತ್ತಾಳೆ. ನೀನಿಲ್ಲದ ಮೇಲೆ ನಿಮ್ಮ ಮನೆಗೆ ಯಾರ್‍ಯಾರೋ ಬಂದು ಹೋಗುತ್ತಾರೆ ಎಂಬ ಸಂಶಯದ ವಿರೋಧದ ಕಿಡಿಯನ್ನು ವಿನೋದನ ತಲೆಯಲ್ಲಿ ತುಂಬುತ್ತಾಳೆ.[೨೯] ಈ ಒಂದು ಸಂಶಯ ಇಡಿ ಕೌಟುಂಬಿಕ ತಿಕ್ಕಾಟ ಘರ್ಷಣೆಗೆ ಕಾರಣವಾಗಿ ಕೌಟುಂಬಿಕ ಕಲಹ ಬಿರುಕುಗಳಿಗೆ ಕಾರಣವಾಗಿ ಬದುಕು ಸೋತು ಹೋಗುವುದು.

ವಿನೋದನಲ್ಲಿರುವ ಸಂಶಯ ಕುಟುಂಬದ ನೆಮ್ಮದಿಯನ್ನೆ ಕಾಡುವುದು. ಚಂಚಲೆಯಿಂದ ಹೆಸರಿಗೆ ತಕ್ಕ ನಡೆ. ಚಂಚಲೆಯಿಂದ ರೋಷಿಹೋದ ವಿನೋದ ಹೆಂಡತಿಯನ್ನು ಸಂಶಯದಿಂದ ಕತ್ತಿಯಿಂದ ಇರಿಯಲು ಬಂದಾಗಲಂತೂ 'ನಿಮ್ಮ ಕೈಯಿಂದಲೆ ಸಾವು ಬರುವದಾದರೆ ಅದು ನನ್ನ ಭಾಗ್ಯವೆಂದು' ಪ್ರಾರ್ಥಿಸಿದರೂ ಕನಿಕರವಿಲ್ಲದೆ ಗಾಯಗೊಳಿಸುತ್ತಾನೆ. ರಕ್ತ ಸುರಿಯುವದನ್ನು ಕಂಡು ಹೆದರಿ ಪಲಾಯನ ಮಾಡಿದ. ಈ ಸಮಯದಲ್ಲಿ ಮನೆಗೆಲಸದ ಮಯೂರಿ ಪೊಲೀಸರಿಗೆ ದೂರು ನೀಡಿ ಅವಳ ಜೀವಕ್ಕೆ ಅಪಾಯವಾಗದಂತೆ ಚಿಕಿತ್ಸೆ ನೀಡಿದ್ದು ಮಾನವೀಯತೆ.

ಈ ಕೃತಿಯ ಬಗ್ಗೆ ಗಮನಿಸಿದಂತೆ 'ಸಭಾ' ಕಾದಂಬರಿಯ ಮಹತ್ವದ ಕೃತಿ. ಈ ಕಾದಂಬರಿಯು 'ಆದರ್ಶರಮಣಿ ಸಭೆಯ ಚರಿತ್ರೆ' 'ಸಭಾ' ಕಾದಂಬರಿ ಅವರ ಜೀವನದ ಅನುಭವದ ಗೀತೆಯಂತಿದೆ. 'ಸಭಾಳ ತಾಯಿ ರೋಗಿಯೊಂದಿಗಿನ ಸಂಭಾಷಣೆಯೊಂದಿಗೆ ಪ್ರಾರಂಭವಾಗುವುದು. ಬಾಲ್ಯ ವಿವಾಹ ಆಗುವುದು ತಾಯಿ ಸೇವೆಗೆ ನಿಂತಿರುವುದು, ತನ್ನ ಜೀವನದ ಬಗ್ಗೆ ಎಳ್ಳಷ್ಟೂ ಚಿಂತಿಸಿದವಳಲ್ಲ. ಹರೆಯದ ಮಗಳನ್ನು ತವರಿನಲ್ಲಿಟ್ಟುಕೊಂಡೆನೆಂಬ ಕೊರಗು ರೋಗಿಯಾದ ತಾಯಿಯದು. ಮಗಳ ಸೌಖ್ಯವನ್ನು ಬಯಸುವ ತಾಯಿ ಸಭಾಳನ್ನು ಗಂಡನ ಮನೆಗೆ ಹೋಗಲು ಒತ್ತಾಯ ಮಾಡುವಳು. ತಾಯಿಯನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು ಅವಳ ಮನಸೊಪ್ಪದು. ಆಗ ತಾಯಿ "ಮಗು ನನ್ನ ರೋಗವು ನಿಜವಾಗಿಯೂ ಗುಣವಾಗುವದೆಂದಿರುವೆಯಾ ಇಲ್ಲ. ಇಲ್ಲ. ನಾನಿನ್ನು ಬದುಕುವದಿಲ್ಲ ಸಾಯುವದಕ್ಕಾಗಿ

ಅಳುವೆನೆಂದು ತಿಳಿಯಬೇಡ ನಾನು ಸಾಯುವದಕ್ಕೆ ಮೊದಲು ನಿನ್ನ ಗಂಡನೊಡನೆ ನೀನು ಸುಖಿಯಾಗಿ ಸಂಸಾರ ಮಾಡುವುದನ್ನು ನೋಡದೆ ಹೋಗುವೆನೆಂಬ ಕೊರತೆ"[೨೦] ನಭಾಳ ಕಷ್ಟ ಕಾರ್ಪಣ್ಯದಿಂದ ತಾಯಿ ಮಗಳು ಚಿಂತಿತರಾಗಿದ್ದಾರೆ. 'ನಭಾ' ಹದಿನೆಂಟರ ಹರೆಯದಲ್ಲಿ ವಿಧವೆಯಾದ ಕಥೆ ಹೊಂದಿದೆ. ವೈದವ್ಯ ಎನ್ನುವದು ಪೂರ್ವಾರ್ಜಿತ ಕರ್ಮಫಲವೆಂಬ ಪ್ರಾಚೀನ ನಂಬಿಕೆಯೇ ಇಲ್ಲಿನದಾದ ಮೇಲೆ ಅದನ್ನು ಒಪ್ಪಿಕೊಂಡು ಅದಕ್ಕನುಗುಣವಾಗಿ ಬಾಳುವದೆ ಪರಧರ್ಮ ಎಂಬುದು ಇಲ್ಲಿನ ತತ್ವ. ವಿಧವಾ ವಿವಾಹದ ವಿಷಯ ಕಾದಂಬರಿಯೊಳಗೆ ಚರ್ಚಿತವಾಗಿದ್ದು ಸಂಪ್ರದಾಯವಾದಿ ನಿಲುವು ಇಲ್ಲಿನದು. ವೈದವ್ಯ ಎನ್ನುವುದು ಪೂರ್ವಾರ್ಜಿತವೆಂಬಂತೆ ಚರ್ಚಿಸಿದಂತೆ ಸಂಪ್ರದಾಯವಾದಿ ನಿಲುವು ಸ್ಥಾಪಿತವಾಗುತ್ತದೆ. ಆದರೆ ಅಂದು ಕೇಶಮುಂಡನದಂತಹ ಸಮಸ್ಯೆಗಳನ್ನು ವಿಧವೆಯರು ಹೇಗೆ ಎದುರಿಸಬೇಕಾಗುತ್ತಿತ್ತು ಎಂಬುದರ ವಾಸ್ತವ ಚಿತ್ರಣವಿದೆ. ಮುಂದುವರೆದು ಮುಖ್ಯವಾಗಿ ಆಕೆಯ ಸ್ಥಿರ ಚರ ಆಸ್ತಿಯನ್ನು ಕಬಳಿಸಲು ಬಂಧುಗಳು ಹೊಂಚು ಹೇಗೆ ಹಾಕುವರು ಎಂಬ ಮಾರ್ಮಿಕ ಸನ್ನಿವೇಶವಿದೆ. ಇದು ನಭೆಯ ಬದುಕಿನ ಸ್ಥಿತ್ಯಂತರ.

'ನಭಾ'ಳ ಪತಿ ಶ್ರೀನಿವಾಸ ಸಾಂಕ್ರಾಮಿಕ ರೋಗದಿಂದ ಮರಣ ಹೊಂದಿದ. ಈ ಸಾವಿನಿಂದ ದುಃಖಿಸದೆ ಕೂಡಲಿಲ್ಲ. ನಭಾಳಿಗಿಂತ ದುಃಖಿತಳಾದವಳು ತಾಯಿ ರೋಗಿ ಮಾತ್ರ. ಈ ದುಃಖದಲ್ಲೂ ನಭೆಯು ರಾಜಶೇಖರನಿಗೆ ಹೇಳುವ ಮಾತೊಂದು ಹೀಗಿದೆ "ನಿನ್ನಂತವರ ಪಾಂಡಿತ್ಯ ಪ್ರಭೆಗೆ ಧಿಕ್ಕಾರವಿರಲಿ. ಹೋಗು ಹುಚ್ಚ ! ನಿನಗಷ್ಟು ಉನ್ಮಾದವಿದ್ದರೆ ವಿಧವಾಶ್ರಮದ ಸ್ವಯಂ ಪ್ರಭುತ್ವದ ಮೊರೆ ಹೋಗು".[೨೦] ಇಲ್ಲಿ ನಭೆಯು ರಾಜಶೇಖರನೊಡನೆ 'ವೇಶ್ಯಾಗೃಹಕ್ಕೆ ಹೋಗು' ಎಂದು ಹೇಳಿದ್ದಿಲ್ಲ. ವಿದ್ಯಾಶ್ರಮದ ಸ್ವಯಂ ಪ್ರಭುತ್ವದವರ ಮೊರೆಹೋಗಿಲ್ಲ' ಎಂದದ್ದನ್ನು ಗಮನಿಸಬೇಕಾಗಿದೆ. ಲೇಖಕಿ ನಭಾಳ ಮೂಲಕವಾಗಿ ಸಮಕಾಲೀನವಾದ ವಾಸ್ತವ ವಿದ್ಯಮಾನದ ಬಗ್ಗೆ ಪ್ರತಿಕ್ರಿಯೆಯನ್ನು ನೀಡುತ್ತಿರುವಂತೆ ಅನುಮಾನ ಮೂಡುತ್ತದೆ. ಕೆಲವು ವಿಧವಾಶ್ರಮಗಳು ಅನೈತಿಕವಾಗಿ ನಡೆಯುತ್ತಿದ್ದಿರಬಹುದು. ಅದಕ್ಕೆ ಅಪವಾದವಾದರೂ ಹುಟ್ಟಬಹುದು. ಕಥಾನಾಯಕಿ ನಭಾ ಯಾವುದೇ ಬಗೆಯ ಆಮಿಷ, ಚಾಪಲ್ಯಕ್ಕೊಳಗಾಗದೆ ತನ್ನ ಸ್ವಾಮಿಯನ್ನೆ ಅನವರತ ಸ್ಮರಿಸುತ್ತಾ ವಿದ್ಯಾವ್ಯಾಸಂಗದಲ್ಲಿ ಸಮಯವನ್ನು ಕಳೆಯುತ್ತಾ ತನ್ನ ಶೀಲವನ್ನು ರಕ್ಷಿಸಿದಳು ಇದು ಒಂದು ಜೀವದ ಒಂಟಿ ಪಯಣ ಪ್ರಸ್ತುತಪಡಿಸಿದೆ.

ನಭಾ ಕಾದಂಬರಿಯ ಮುಂದಿನ ಭಾಗವೆ ವಿರಾಗಿಣಿ. 'ವಿರಾಗಿಣಿ'ಯಲ್ಲಿ 'ನಭಾಳೆ ವಿರಾಗಿಣಿ' ಹೆಸರಿನಲ್ಲಿ ಕಾಣಿಸುತ್ತಾಳೆ. ಇದು ವಿಧವೆಯರ ಸಂಕಷ್ಟಗಳ ಸರಮಾಲೆ ಹೆಣೆದಿದೆ. ಕೌಟುಂಬಿಕವಾದ ಸಂಘರ್ಷ ಈ ಕಾದಂಬರಿಯಲ್ಲಿ 'ಈ ಕಾಲದ ವಿಧವೆಯರಂತೆ ಪುನರ್ವಿವಾಹವೋ, ಪ್ರಾಣಸಂಕಟವೋ, ಭ್ರಮಾಚಾರವೋ, ಇಲ್ಲವೇ ಸ್ವೇಚ್ಛಾವಿಹಾರವೋ ಇವುಗಳು ಒಂದನ್ನು ಹಿಡಿದಿದ್ದರೂ

ನಮಗವರಿಂದಾಗುತ್ತಿದ್ದ ಸುಖಸಂತೋಷಗಳಾವುವು ? ಶಾಶ್ವತ ನರಕಾನುಭವವಾಗುವದರಲ್ಲಿದೆ ಅಂತಹ ಮಾಯಾಜಾಲಗಳನ್ನೆಲ್ಲವನ್ನು ಪ್ರಚಂಡವಾದ ಬುದ್ಧಿಶಸ್ತ್ರಬಲದಿಂದಲೇ ಭೇಧಿಸಿ ನಿರ್ಮಲೆಯಾಗಿ ಪ್ರಕಾಶಿಸುವ ನಿನ್ನಿಂದ ಈಗ ನಾವು ಹೊಂದಲಿರುವ ಯಶಸ್ಸಿಲ್ಲಿ ಸುಖಸಂಪದವು ಎಂತಹದೆಂಬುದನ್ನು ಒಂದೇ ಮಾತಿನಿಂದ ಹೇಳಲಾಗದು." ಈ ನುಡಿಗಳನ್ನು ಈ ಕಾಲದಲ್ಲಿ ವಿಧವೆ ಪುನರ್‌ವಿವಾಹವಾಗುವುದು. ಬಾಳಿನ ವಿಷಮತೆಗೆ ಆತ್ಮಹತ್ಯೆ ಮಾಡದಿರುವುದು, ಇನ್ನೊಂದು ಮತಸೇರುವುದು, ಧರ್ಮ ವಿಧಿಸುವ ಕ್ರೂರ ಕಟ್ಟುಪಾಡುಗಳಿಂದ ಪಾರಾಗುವುದು, 'ಕಾಮ ಭಾದೆಯನ್ನು ತಣಿಸಲು ಸ್ವೇಚ್ಚಾಚಾರಿಗಳಾಗುವುದು. ಸಹಜವಾದ ಸಂದರ್ಭಗಳ ಎನಿಸುತ್ತವೆ. ಆದರೆ ನಭೆ ಈ ಧರ್ಮ ವಿರುದ್ಧವಾದ ಕಾರ್ಯ ಮಾಡದೆ ತಪಸ್ವಿನಿಯಾಗಿ ಬಾಳಿದಳು. ವಿಧವೆಯರಿಗಾಗಿ ಇರಬೇಕಾದ ಏಕೈಕ ಆಯ್ಕೆ ಎಂದರೆ ವಿರಾಗಿಣಿಯ ಪಾತ್ರದ ಮೂಲಕ ಉತ್ತರಿಸಿದ್ದಾರೆ. ಬದುಕಿನ ಸ್ತ್ರೀ ಚಿತ್ರಣ ಚಿತ್ರಿತವಾಗಿದೆ.

ಸ್ವತಂತ್ರ ಪೂರ್ವದ ಕನ್ನಡ ಕಾದಂಬರಿಗಳನ್ನು ಗಮನದಲ್ಲಿಟ್ಟುಕೊಂಡು ಅಭ್ಯಸಿಸಿದಾಗ ಸ್ತ್ರೀ ಸಾಮಾಜಿಕ ಸಂಕ್ರಮಣಾವಸ್ಥೆಯಲ್ಲಿದ್ದಂತೆ ಕಾಣುತ್ತಾಳೆ. ಪತಿಯನ್ನು ದೇವರೆಂದು ನಂಬಿದವಳೇ ಪತ್ನಿಯಾಗಿ, ಪತಿಯ ನೆರಳಿನಲ್ಲೆ ಜೀವನದ ಸವಿಯನ್ನು ಉಂಡವಳೆ. ಈ ಕಾದಂಬರಿಗಳಲ್ಲಿಯ ಕೌಟುಂಬಿಕ ಪಾತ್ರಗಳು ಪರಂಪರಾಗತ ಪ್ರವಾಹದಲ್ಲಿ ತೇಲಿಕೊಂಡು ಬಂದಿವೆ. ಆದರ್ಶ ಗೃಹಿಣಿಯಾಗಿ ಬಾಳುವದರಲ್ಲೆ ಹೆಚ್ಚಿನ ನಂಬಿಕೆಯುಳ್ಳವಳಾಗಿ ಕೌಟುಂಬಿಕ ಸಂಘರ್ಷದ ಸರಕಾಗಿದ್ದಾಳೆ. ಹಿಂದೂ ಸಂಪ್ರದಾಯದ ಮೌಲ್ಯದಲ್ಲೇ ಬದುಕಿದ್ದಾಳೆ. ಮಧ್ಯಮ ಮತ್ತು ಕೆಳವರ್ಗದ ಮಹಿಳೆಯರು ಪುರುಷ ಸಮಾನವಾಗಿ ದುಡಿದರೂ, ಅವರ ಅಧಿಕಾರವೇನಿದ್ದರೂ ಗೃಹಕೃತ್ಯಕ್ಕೆ ಮಾತ್ರ ಸೀಮಿತ. ಹೆಂಡತಿಯ ಸ್ಥಾನ ಅಲಂಕರಿಸಿದ ಸ್ತ್ರೀಯರು ವೈವಿಧ್ಯಮಯವಾಗಿ ಕಾಣಿಸಿಕೊಂಡಿದ್ದಾರೆ. ಒಟ್ಟಾರೆ ಸ್ತ್ರೀಯರು ಕುಟುಂಬದ ಕಷ್ಟ ಸಹಿಷ್ಣುಗಳಾಗಿ, ಸತಿತ್ವವುಳ್ಳವರಾಗಿ ಸದಾ ಪತಿಯ ಸುಖವನ್ನೆ ಬಯಸಿದಂತೆ ಚಿತ್ರಣಗೊಂಡಿದ್ದಾರೆ.

ಬ್ರಿಟಿಷರು ಭಾರತಕ್ಕೆ ಆಗಮಿಸಿದ ತರುವಾಯ ಸ್ತ್ರೀ ಸುಧಾರಣಾ ಫಲವಾಗಿ ಶಿಕ್ಷಣವಲ್ಲದೇ ಸ್ತ್ರೀಯರ ಬದುಕಿನಲ್ಲೂ ಗಮನಾರ್ಹ ಬದಲಾವಣೆಗಳಾಗಿವೆ. ಗ್ರಾಮೀಣ ಪ್ರದೇಶದ ಮಧ್ಯಮ ವರ್ಗ ಮತ್ತು ಕೆಳ ವರ್ಗದ ಸ್ತ್ರೀಯರು ಅಶಿಕ್ಷಿತರು. ಸಂಪ್ರದಾಯವಾದಿಗಳಾಗಿದ್ದರೂ ಶಿಕ್ಷಣದ ಗಂಧ ತಿಳಿಯದವರಾಗಿದ್ದರು. ಅಂದಿನ ಸ್ತ್ರೀಯರು ಶೋಷಣೆ, ಅನ್ಯಾಯ, ದೌರ್ಜನ್ಯಗಳಿಗೆ ಪ್ರತಿಕ್ರಿಯಿಸಿದ ರೀತಿ ಗಮನಾರ್ಹವಾಗಿದ್ದು, ಸಾಮಾಜಿಕ ಸುಧಾರಣೆ ಅಡಿಯಲ್ಲಿ ಇದು ನಾಂದಿಹಾಡಿತು.

ಅಂತಿಮವಾಗಿ ಕುಟುಂಬದಲ್ಲಿ ಎಲ್ಲ ಸ್ತ್ರೀಯರೂ ಓದು ಬರಹ ಕಲಿಯಬೇಕು. ಸ್ವಾತಂತ್ರ್ಯ ಸಮಾನತೆ ಪಡೆಯಬೇಕು. ಬಾಲ್ಯವಿವಾಹ ತಿರಸ್ಕರಿಸಿ ವಿಧವಾ ವಿವಾಹ, ಪುನರ್‌ವಿವಾಹ ಆಗಬೇಕು. ಸಂತಾನಕ್ಕಾಗಿ ಬಹುಪತ್ನಿತ್ವ ಸಲ್ಲದು. ಸ್ವಗೋತ್ರ, ಸ್ವಜಾತಿ ವಿವಾಹ ತಿರಸ್ಕರಿಸಬೇಕು. ಚಾರಿತ್ರ್ಯ

ಶೀಲವೆಂಬುದು ಹೆಣ್ಣಿಗೆ ಮಾತ್ರ ಸೀಮಿತವಾಗಬಾರದೆಂಬ ಸಂಗತಿಗಳು ಕೌಟುಂಬಿಕ ಘಟಕದಲ್ಲಿ ಗಮನಿಸಿಕೊಳ್ಳಲಾಗಿದೆ.

ಲಿಂಗ ತಾರತಮ್ಯ ಮತ್ತು ವ್ಯಕ್ತಿ ಸಂಬಂಧಗಳು:

ಲಿಂಗ ತಾರತಮ್ಯ ಮೊದಲ ಘಟ್ಟದ ಬಹುತೇಕ ಸ್ವತಂತ್ರ ಕಾದಂಬರಿಗಳ ವಿಷಯ ವಸ್ತುವಾಗಿದೆ. ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು ಕಡೆಗಣಿಸುತ್ತಾ ಬಂದುದರಿಂದಾಗಿ ಮಹಿಳೆ ಪ್ರಗತಿಯ ಪಥದಲ್ಲಿ ಮುನ್ನಡೆಯುವುದು ಅಸಾಧ್ಯವಾಯಿತು. ಪುರುಷಪ್ರಧಾನ ಸಮಾಜ ಅನೇಕ ಕಟ್ಟುಪಾಡುಗಳನ್ನು ವಿಧಿಸಿದ್ದರಿಂದಾಗಿ ಎಲ್ಲ ರಂಗಗಳಲ್ಲೂ ಸ್ತ್ರೀಗೆ ಪ್ರವೇಶ ದುಸ್ತರವಾಯಿತು. ಪ್ರಾಚೀನ ಕಾಲದಿಂದಲೂ ಸಾಗಿಬಂದ ಸಾಂಪ್ರದಾಯಿಕ ಮೌಲ್ಯಗಳು ಅರ್ಥ ಕಳೆದುಕೊಂಡವು. ಈ ಹಿನ್ನೆಲೆಯಲ್ಲಿ ಸ್ತ್ರೀ ಜೀವನ ಕುರಿತಂತೆ ಕನ್ನಡ ಕಾದಂಬರಿಕಾರರು ಸ್ಪಂದಿಸಿದ ರೀತಿ ಅನನ್ಯವಾದದ್ದು. ವ್ಯಕ್ತಿ ಸಂಬಂಧಗಳಲ್ಲಿ ಅತ್ತೆ ಸೊಸೆ, ಗಂಡ ಹೆಂಡತಿ, ಅತ್ತಿಗೆ ನಾದಿನಿ, ಸವತಿ ಸಹೋದರ ಸಂಬಂಧಗಳನ್ನು ಲಿಂಗಭೇದ ಹಿನ್ನೆಲೆಯಲ್ಲಿ ಗಮನಿಸುವ ತಾರ್ಕಿಕ ವಿಶ್ಲೇಷಣೆಯಿಲ್ಲಿ ಕಾಣುವುದು. ಸಾಮಾಜಿಕ ಸಾಂಪ್ರದಾಯಿಕ ನಿಲುವುಗಳನ್ನು ಮೌಢ್ಯತೆಗಳನ್ನು ವಿರೋಧಿಸಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಸಂದರ್ಭಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಆರಂಭಕಾಲದ ಸೂರ್ಯಕಾಂತ ಕಾದಂಬರಿ ನಾಯಕ ಪ್ರಧಾನ ಕೃತಿ. ಇದರಲ್ಲಿ ಸ್ತ್ರೀಯರು ಸಾಮಾಜಿಕವಾಗಿ ಗಣನೀಯರಲ್ಲವೆಂಬ ಅಭಿಪ್ರಾಯವಿದೆ. ಚಾರಿತ್ರಿಕ ವಿಷಯ ವಸ್ತುವಿದೆ. ಕಾದಂಬರಿಯ ನಾಯಕ ಸೂರ್ಯಕಾಂತನ ತಾಯಿಯನ್ನು ಕುರಿತಾಗಿ ಕಾದಂಬರಿಯಲ್ಲಿ ಬರುವ ಮಾತುಗಳು ಮುಖ್ಯವಾಗಿ “ಸ್ತ್ರೀಯರ ಉಡಿಗೆ ತೊಡಿಗೆಯ ಬಗ್ಗೆ ಬಹು ಅಭಿಲಾಷೆ ಇರುವುದು. ಅದು ಅವರ ಅಲ್ಪಮತಿಗೆ ಅನುರೂಪವಾಗುತ್ತದೆ”(ಪು.೯) ಸೂರ್ಯಕಾಂತನ ತಂದೆಗೆ ತನ್ನ ಮಗನನ್ನು ನಿಜವಾದ ವಿದ್ಯಾಲಂಕಾರಗಳಿಂದ ಭೂಷಿತನಾಗಿ ಮಾಡಬೇಕೆಂಬ ಅಪೇಕ್ಷೆ ಕಾಣುವುದು. ಆದರೆ ಬಡತನ ಸೂರ್ಯಕಾಂತ ಹಾಗೂ ಅವನ ತಂಗಿ ಪ್ರೇಮಮತಿ ಅವರಿಬ್ಬರು ಅನ್ಯೋನ್ಯವಾಗಿರುವಾಗ ಶಿಕ್ಷಣದ ಕಾರಣದಿಂದ ಸೂರ್ಯಕಾಂತನ ಅಗಲಿಕೆಯ ಸಂದರ್ಭ ಬಂದರೆ ತಾಯಿ ಕಳವಳಿಸವಳು ಅದಕ್ಕೆ ಪ್ರತಿಯಾಗಿ “ಹೀಗಾಗುವುದು ಸ್ತ್ರೀ ಜಾತಿಗೆ ಸಾಧಾರಣ. ಅವರ ದೃಷ್ಟಿಯು ಪ್ರಸ್ತುತದ ಸೌಖ್ಯದ ಕಡೆಗಿದ್ದು, ಮುಂದಿನ ಪರಿಣಾಮದ ಕಡೆಗೆ ಇರುವುದಿಲ್ಲ”[೩೧] ಎಂದಿದೆ. ಪ್ರೇಮಮತಿ ಸಹೋದರನ ಊಟೋಪಚಾರದ ಕಾಳಜಿ ವ್ಯಕ್ತಪಡಿಸಿದ್ದಾರೆ. ಅವನ ಬಗ್ಗೆ ಬಲು ಪ್ರೀತಿಯಿಂದ ವಿಚಾರಿಸುವಳು. ಸಹೋದರ ತಂದೆಯ ಕಡೆಯಿಂದ ಓದು ಬರಹ ಕಲಿತು ಬುದ್ಧಿವಂತಳಾಗಬೇಕೆಂಬ ಉಪದೇಶ ನೀಡುವನು. ಸೂರ್ಯಕಾಂತನ ತಂದೆಗೆ ಮಗಳ ಶಿಕ್ಷಣದ ಬಗ್ಗೆ, ಅವಳು ಹೆಣ್ಣಾದ್ದರಿಂದ

ಆಸಕ್ತಿಯಿಲ್ಲದಿದ್ದರೂ, ಅಣ್ಣನಿಗೆ ತಂಗಿ ಕೂಡಾ ಸಾಕ್ಷರಳಾಗಬೇಕು ಮನೆಯಲ್ಲೇ ಇದ್ದು ಕಲಿತರೂ ಅಡ್ಡಿಯಿಲ್ಲ ಎಂಬ ಬಯಕೆ ಇರುವುದು ಗಮನಾರ್ಹವಾದ ಸಂಗತಿಯಾಗಿದೆ. ವಿದ್ಯಾವಂತನಾಗಿ ಉದ್ಯೋಗವನ್ನು ಹಿಡಿದು ಬಡತನ ತೊಲಗಿಸುವ ಭರವಸೆಯ ಮಾತುಗಳನ್ನು ನುಡಿಯುವನು. ತಾಯಿಗೆ ಹೇಳಿದ ಸೂರ್ಯಕಾಂತನು ಮುಂದೆ ಶೌರ್ಯ, ಔದಾರ್ಯ, ಧೀಮಂತಿಕೆಗಳಿಂದ ಮೆರೆಯುವುದು ಕಾದಂಬರಿಯ ಬೆಳವಣಿಗೆಯಲ್ಲಿದೆ. ಹಾಗಾಗಿ ಇಲ್ಲಿ ಸ್ತ್ರೀ ಪಾತ್ರಗಳು ಮುಖ್ಯವಾಗಿಲ್ಲ.

ಇಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿ ತಾಯಿ ತಂದೆಯರಿಗೆ ಮಗನ ಬಗ್ಗೆ ಇರುವ ಮನೋಧರ್ಮ, ಸಹೋದರ, ಸಹೋದರಿಯ ನಡುವಿನ ಅಂತರ್ ಸಂಬಂಧ, ತಾಯಿ ಮಗಳ ಸಂಬಂಧ, ತಂದೆ ಮಗಳ ತಾತ್ಸಾರ ಮನೋಭಾವದ ಭಾವನೆಗಳು, ತಂಗಿಯ ಬಗ್ಗೆ ಸೂರ್ಯಕಾಂತನ ಕಾಳಜಿ, ತಾಯಿ ಮಗನ ಮೇಲೆ ಹೊಂದಿದ ವ್ಯಾಮೋಹ, ಪುತ್ರ ಬಂಧಿತನಗಳನ್ನು ಗಮನಿಸಲಾಗಿ ಸ್ತ್ರೀ ಪಾತ್ರಗಳು ಇಲ್ಲಿ ಮುಖ್ಯವಲ್ಲ ಎಂದು ತೀರ್ಮಾನಿಸಬಹುದು. ಆದರೆ ಇವರದೇ ಮತ್ತೊಂದು ಕಾದಂಬರಿಯಾದ 'ಚಂದ್ರಪ್ರಭಾ'ದಲ್ಲಿ ಸ್ತ್ರೀಪಾತ್ರ ಪ್ರಧಾನವಾದದ್ದು.

ಕೃಪಾಶೀಲ ಹಾಗೂ ಭಾಗ್ಯಶೀಲೆ ದಂಪತಿಗಳ ಮಗಳು 'ಚಂದ್ರಪ್ರಭಾ' ಕಾದಂಬರಿಯ ನಾಯಕಿ. ಶಿಥಿಲ ಕೌಟುಂಬಿಕ ಸ್ಥಿತಿಯಲ್ಲಿ ಲಿಂಗ ತಾರತಮ್ಯ ಸಂಗತಿಗಳು ಇಲ್ಲಿ ಚರ್ಚಿತವಾಗಿದೆ. ಮನಮೋಹನನೊಡನೆ ಚಂದ್ರಪ್ರಭೆ ಮದುವೆಯಾಗಿ ಸುಸೂತ್ರ ಬದುಕಿನಲ್ಲಿರುವಳು. ಕುಬುದ್ಧಿಯು ಕುತಂತ್ರಗಳ ನೆಲೆಯಲ್ಲಿ ಬಲೆ ಹೆಣೆಯುವನು. ಕುಬುದ್ಧಿ ನಾನಾರೀತಿಯ ಕೇಡುಂಟುಮಾಡುವ ಸಂದರ್ಭಗಳನ್ನು ಸೃಷ್ಟಿಸುವನು. ಚಂದ್ರಪ್ರಭಾ ಮನಮೋಹನ ಪಾತ್ರಗಳಿಗೆ ಪ್ರತಿರೂಪದಂತಿರುವ ಕುಬುದ್ಧಿಯ ಮಡದಿ ವಿಲಾಸಿನಿ ಕೆಟ್ಟಪಾತ್ರದ ಪ್ರತಿರೂಪವಾಗಿದ್ದಾಳೆ. "ಇಲ್ಲಿ ಬಹುತರವಾದ ಸ್ತ್ರೀಯರ ನೀತಿಗೆ, ಅನೀತಿಗೆ ಪುರುಷರ ಆಚಾರವೇ ಪ್ರಬಲವಾದ ಕಾರಣವಾಗಿರುವುದು."[೨೧] ಸಾಮಾಜಿಕ ಸ್ವಾಸ್ಥ್ಯಕ್ಕೆ ಪುರುಷನ ಹೊಣೆಗಾರಿಕೆಯು ಇದೆ ಎಂದು ಲೇಖಕರು ಗುರುತಿಸಿರುವುದು ಗಮನಿಸಬೇಕಾಗಿರುವುದು. ಈ ಎರಡು ಕೌಟುಂಬಿಕ ಬಿಕ್ಕಟ್ಟು ಲಿಂಗ ಸಂಘರ್ಷದಿಂದ ಗಮನಿಸಿದರೆ ಚಂದ್ರಪ್ರಭೆಯ ಹೋರಾಟ ಮನನೀಯವಾದದ್ದು. ಯುದ್ಧ ಸನ್ನಿವೇಶಕ್ಕೆ ತಯಾರಿಯಾದ ಅವಳ ವರ್ಣನೆಯೊಂದು ಶೌರ್ಯ ಸಾಹಸದೊಂದಿಗೆ ಲಿಂಗ ಹಾಗೂ ವ್ಯಕ್ತಿ ಸಂಬಂಧಗಳ ಸಂಘರ್ಷಕ್ಕೆ ನಿಲುಕುವುದು. "ಅವಳು ಬಿಚ್ಚಿನಾಗರಹಾವಿನಂತೊಪ್ಪುತ್ತಿದ್ದ ಜಡೆಯನ್ನು ಬಿಚ್ಚಿ ಶೂರ ಪುರುಷನಂತೆ ರಣಗೂದಲನ್ನು ಬಿಟ್ಟಿದ್ದಳು. ತನ್ನ ಉತ್ಕಟ ಯೌವ್ವನವನ್ನು ವ್ಯಕ್ತಪಡಿಸುವದಕ್ಕಾಗಿ ಟರ್ಕಿ ಕುಪ್ಪಸ ತೊಡುವುದರ ಬದಲು ಉಕ್ಕಿನ ಜಿರಲಿಬತ್ತ್ರವನ್ನು ಹಾಕಿಕೊಂಡಿದ್ದಳು. ಬಳೆಯುಳಿಗಳನ್ನು ಮಡಚಿ ತನ್ನ ಪತಿಯು ಬಾಯಲ್ಲಿ ಹಾಕುವ ಕೋಮಲ ಕೈಗಳಲ್ಲಿ ತೀಕ್ಷ್ಣವಾದ ಕತ್ತಿಯನ್ನು ಧರಿಸಿದ್ದಳು."[೨೨] ಎಂದು ಸಾಗುವುದು ಸ್ತ್ರೀಗೆ ಸಹಜವೆಂದು ಭಾವಿಸಲಾದ

ಅಲಂಕಾರ ನಿಷ್ಠೆಯಿಂದ ಅಸಾಧಾರಣವಾದ ವೀರನಿಷ್ಠೆಗೆ ಚಂದ್ರಪ್ರಭೆಯನ್ನು ಚಿತ್ರಿಸಿದ ಚಿತ್ರಣವಿಲ್ಲಿದೆ. ಉಜ್ವಲತೆಯ ವರ್ಣನೆಯನ್ನು ಬಿಂಬಿಸುವ ಪುರುಷವೇಷ ಒಪ್ಪುವ ಆಕೆಯ ರಣೋತ್ಸಾಹ ಮುಂದುವರೆಯುವುದು. ಕೊನೆಗೆ ಎಷ್ಟೇ ಕಷ್ಟ ಬಂದರೂ ಪರಿಹಾರ ಕಂಡುಕೊಳ್ಳುವಳು. ಕಾದಂಬರಿಯು ಪುರುಷ ಸ್ತ್ರೀ ಎಂದು ಭೇದ ಭಾವ ಎಣಿಸದೇ ಸಮಾನತೆಯನ್ನು ಬಿಂಬಿಸಿದೆ" ಹೆಣ್ಣುಮಗಳೆ ಆಗಲಿ ಗಂಡುಮಗನೇ ಆಗಲಿ ತಮ್ಮ ಸುಕೃತ್ಯಗಳಿಂದ ಶ್ಲಾಘ್ಯರೆನಿಸಿಕೊಂಡರೆ ತಂದೆ ತಾಯಿಗಳು ಕೃತಾರ್ಥರಾದಂತಾಯಿತು(ಪು.೧೮೩). ಪುರುಷ ಸ್ತ್ರೀಯರನ್ನು ಸಮಾನವಾಗಿ ಲಿಂಗ ತಾರತಮ್ಯವಿಲ್ಲದೇ ಸಮಾನವಾಗಿ ಕಂಡ ಹಲವಾರು ನಿದರ್ಶನಗಳನ್ನು ಇಲ್ಲಿ ಕಾಣುತ್ತೇವೆ.

'ಸ್ತ್ರೀಯರಿಗೆ ವಿಚಾರ ಕಡಿಮೆಯೆಂದು ಹೇಳುತ್ತಾರಲ್ಲ ಇದು ನಿಜವೆ' 'ಪುರುಷರೆ ಆಗಲಿ ಸ್ತ್ರೀಯರೆ ಆಗಲಿ ಎಲ್ಲರೂ ವಿಚಾರವಂತರು ಮೂರ್ಖರೂ ಇರುವುದಿಲ್ಲ' 'ಕೆಲವರು ಹಾಗೆ ಕೆಲವರು ಹೀಗೆ ಇರುವುದರಿಂದ ಸ್ತ್ರೀಯರನ್ನು ದೂಷಿಸುವುದು ಸರಿಯಲ್ಲ' 'ಆದರೂ ಸ್ತ್ರೀಯರ ಅಜ್ಞಾನವು ಹೆಚ್ಚಾಗುತ್ತದೆ' ಎಂದು ಹೇಳುವನು. ಚಂದ್ರಪ್ರಭೆಯ ಅಜ್ಞಾನ ಅವಳ ನೈಸರ್ಗಿಕ ಗುಣವೊ ಅಥವಾ ತಂದೆ ತಾಯಿಗಳು ಅವಳಿಗೆ ಯೋಗ್ಯ ಶಿಕ್ಷಣ ಕೊಡಿಸದೇ ಇರುವುದರಿಂದಲೋ ಎಂದು ಕೇಳಿದರೆ, ಮನಮೋಹನ "ಅದು ನೈಸರ್ಗಿಕ ಗುಣವಲ್ಲ" ಎಂದು ನೀಡಿದ ಉತ್ತರ ಮಹತ್ವದ್ದಾಗುವುದು. ತನ್ನದೊಂದು ಮಾತಿನಲ್ಲಿ ಸ್ತ್ರೀ ಶಿಕ್ಷಣ ಪರವಾಗಿ ನುಡಿಯುತ್ತಾ "ಸುಮ್ಮನೆ ಓದುಬರಹ ಬಂತೆಂದರೆ ಅದನ್ನು ಶಿಕ್ಷಣವೆನ್ನಲಾಗದು" (ಪು.೪೦) ಶಿಕ್ಷಣವೆಂದರೆ ಪುರುಷ ಶಿಕ್ಷಣ, ಸ್ತ್ರೀ ಶಿಕ್ಷಣವೆಂದು ಬೇರೆಯಿಲ್ಲ ಎಂಬ ವಾದವು ತೀಕ್ಷ್ಣತೆಯನ್ನು ಒರೆಗಲ್ಲಿಗೆ ಹಚ್ಚುವುದು. ಸೂರ್ಯಕಾಂತ ಗಂಡಿನ ಪಾತ್ರ ಚಂದ್ರಪ್ರಭಾ ಉಜ್ವಲ ಸ್ತ್ರೀ ಪಾತ್ರಗಳಾಗಿ ಕಾಣುವುದು. ಈ ಕಾದಂಬರಿಯು ಲಿಂಗ ತಾರತಮ್ಯತೆಯಿಲ್ಲದೇ ಮನುಷ್ಯ ಸಾಮರ್ಥ್ಯದ ಸಾಧ್ಯತೆಯನ್ನು ನಂಬಿಕೆಗಳನ್ನು ಪ್ರಕಟ ಪಡಿಸುತ್ತದೆ.

ಬೋಳಾರು ಬಾಬುರಾಯರ 'ವಾಗ್ದೇವಿ' ಕಾದಂಬರಿಯಲ್ಲಿ ಬರುವ ಪುರುಷ – ಸ್ತ್ರೀ ಪಾತ್ರ ಮಾದರಿ ಭಿನ್ನವಾದದ್ದು. ಸ್ತ್ರೀ ಲಾಲಸೆ, ಗಂಡಿನ ಕಲ್ಮಷ ಮನಸ್ಸಿನ, ಭ್ರಷ್ಟತನ, ಅಧಿಕಾರ ಲಾಲಸೆಯಲ್ಲಿ ಹೊರಳಾಡುವ ಪಾತ್ರಗಳೆ ಇಲ್ಲಿ ಅಧಿಕವಾಗಿವೆ. ಅರಿಷಡ್ವರ್ಗಗಳಿಗೆ ಸೋಲುವ ಪುರುಷನ ದೌರ್ಬಲ್ಯವಿದೆ. ಚಂಚಲನೇತ್ರ ಶ್ರೀಪಾದಂಗಳವರ ಮನೋತೊಳಲಾಟ. ವಾಗ್ದೇವಿಯ ಸೌಂದರ್ಯ. ಚಾಂಚಲ್ಯ. ವೆಂಕಟಪತಿಯ ಮಧ್ಯಸ್ಥಿಕೆಯಲ್ಲಿ ಮಠ ಸೇರುವ ಪ್ರಮೇಯ. ಮನೋದೌರ್ಬಲ್ಯಗಳನ್ನು ದಮನಿಸಲಾಗದ ಸ್ಥಿತಿಯಲ್ಲಿದೆ. ಮೋಹಪಾಶಕ್ಕೆ ಸಿಲುಕಿ ವೇದವ್ಯಾಸ ಉಪಾಧ್ಯಾಯನು ಉಪೇಕ್ಷೆಗೆ ಒಳಗಾಗಿದ್ದು ಇದೆ. ಸ್ವಾಭಿಮಾನದಬ್ಬರದಲ್ಲಿ ಹುದ್ದೆಯನ್ನು ಕಳೆದುಕೊಂಡು ಕೊರಗಿದೆ. ಶ್ರೀಪಾದಂಗಳವರು ಕಾಮ, ಭೋಗ, ಲಾಲಸೆಯಿಂದ ಹುಚ್ಚರಂತೆ ವರ್ತಿಸಿ ಭಕ್ತರ ಅಪಹಾಸ್ಯಕ್ಕೆ ಬಲಿಯಾಗುವುದು. ದೊಡ್ಡವರ ದಡ್ಡತನ

ಪ್ರದರ್ಶಿಸುವದು. ವಾಗ್ದೇವಿಯು ಚಂಚಲನೇತ್ರ ಶ್ರೀಪಾದಂಗಳಿಗೆ ವಿಧಿಸುವ ನಿರ್ಬಂಧನೆ ಕಾದಂಬರಿಯ ಕೇಂದ್ರವಸ್ತು. ಚಂಚಲನೇತ್ರನ ಪ್ರಸ್ತಾಪಕ್ಕೆ ವಾಗ್ದೇವಿಯ ಸಮ್ಮತಿಗಿಂತ ಮೊದಲು ಮೆಚ್ಚುಗೆಯಾದದ್ದು ತಾಯಿ ಭಾಗೀರಥಿಗೆ. ವಾಗ್ದೇವಿಗೆ ಇದು ಸಮ್ಮತವಾಗಿದ್ದರೂ ಶರತ್ತನ್ನು ವಿಧಿಸುವ ವಾಗ್ದೇವಿ "ನಿನ್ನಲ್ಲಿ ಗಂಡು ಸಂತತಿ ದೇವರು ಅನುಗ್ರಹಿಸಿದರೆ ಚೊಚ್ಚಲ ಮಗನ ಮುಂದಿನ ಯತಿ ಪಟ್ಟಕ್ಕೆ ಬರುವಂತೆ ಅವನಿಗೆ ಶ್ರೀಪಾದಂಗಳವರು ಆಶ್ರಯಕೊಟ್ಟು ಶಿಷ್ಯನಾಗಿ ಮಾಡಬೇಕು. ಈ ವಾಗ್ದಾನವನ್ನು ಪಟ್ಟದೇವರ ಮಾಡದತನಕ ಮುಂದಿನ ಪ್ರಸಂಗಕ್ಕೆ ಒಡಂಬಡುವವಳಲ್ಲ" (ಪು.೧೮) ವಾಗ್ದೇವಿಯ ಗಂಡು ಮಗನ ಅಭಿಲಾಷೆ ಒಬ್ಬ ಸ್ತ್ರೀ ಗಂಡು ಹೆಣ್ಣಿನ ಭೇದ ಅವಳಲ್ಲಿಯೇ ಕಾಣುವದು. ಸ್ತ್ರೀ ಪುರುಷ ಭೇದವೇ ಅವಳ ಬದುಕಿನ ದುರಂತಕ್ಕೆ ಮುನ್ನುಡಿಯಾಗಿದೆ.

ಸ್ತ್ರೀ ಸ್ತ್ರೀಯನ್ನು ಪುರುಷ ಪುರುಷನನ್ನು ದ್ವೇಷಿಸುವದು ಸಾಮಾನ್ಯ ನಿಯಮ. ಸ್ತ್ರೀ ಪುರುಷ ಆಕರ್ಷಣೆಯು ಎಂತಹ ಹೇಯ ಕೃತ್ಯಕ್ಕಾದರೂ ಪ್ರಚೋದನೆಯಾಗಬಹುದು. ಇದಕ್ಕೆ ಮಠದಲ್ಲಿ ನಡೆಯುವ ಕೊಲೆ, ಕೊಲೆ ಮುಚ್ಚಿ ಹಾಕಲು ನಡೆಯುವ ತಂತ್ರಗಳು ಕಾಣದ ಗಂಡು ಹೆಣ್ಣಿನ ಅಂತರ ಸಂಬಂಧಗಳು ಇಲ್ಲಿ ಕಂಡುಬರುತ್ತದೆ. ಪುರುಷ ದ್ವೇಷಿ ಸ್ತ್ರೀಯ ಆಲೋಚನಾ ಕ್ರಮಗಳು ಇಲ್ಲಿ ಕಾಣುವವು ಸ್ತ್ರೀಯು ಹಲವು ದುಷ್ಕೃತ್ಯದ ಕೇಂದ್ರಬಿಂದುವಾಗಿದ್ದಾಳೆ. ಸ್ತ್ರೀ ಸುಧಾರಣಾ ನೀತಿ ಒಳಗೊಂಡ ಕೃತಿಗಳಲ್ಲಿ ಸ್ತ್ರೀಯ ವಿವಿಧ ಮುಖವಾಡ ವಿಸ್ತರಿಸುವ ಪ್ರಯತ್ನವನ್ನು ಬೋಳಾರು ಬಾಬುರಾಯರು ಮಾಡಿದ್ದಾರೆ.

ಇಂದಿರಾಬಾಯಿ ಅಥವಾ ಸದ್ಧರ್ಮವಿಜಯ ಎಂಬ ಹೆಸರಿನಿಂದ ಕೃತಿ ರಚಿಸಿರುವ ಗುಲ್ವಾಡಿ ವೆಂಕಟರಾಯರಿಗೆ ನೈತಿಕ ಉದ್ದೇಶವಿತ್ತೆಂಬುದು ಸ್ಪಷ್ಟವಿದೆ. ಸತ್ಯತೆ, ಹೃದಯ ನಿರ್ಮಲತೆಯನ್ನು ಬಿಟ್ಟು ಸರ್ವಪ್ರಯತ್ನಗಳು ನಿರರ್ಥಕವೇ ಸಾದೃಶ್ಯಗೊಳಿಸುವದು ಈ ಪುಸ್ತಕದ ಉದ್ದೇಶವಾಗಿದೆ. ಲಿಂಗ ತಾರತಮ್ಯಗಳು ಹಾಗೂ ವ್ಯಕ್ತಿ ಸಂಬಂಧ ನೆಲೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ದುಷ್ಟಳಾದ ಅಂಬಾಬಾಯಿ ಭೀಮರಾಯನ ಸುರಕ್ಷತೆಯಲ್ಲೆ ಉಳಿಯುತ್ತಾಳೆ. ಅಮೃತರಾಯರೊಡನೆ ಅವರು ಮಾಡಿಕೊಳ್ಳುವ ಒಪ್ಪಂದ ವ್ಯಾವಹಾರಿಕವಾದುದ್ದೆ ವಿನಹ ಹೃದಯ ಪರಿವರ್ತನೆಯ ಚಿತ್ರಣವಲ್ಲ. "ನಾವೆಷ್ಟು ಹಣ ವೆಚ್ಚಮಾಡಿದರೂ ಏನು ಮಾಡಿದರೂ ಇಡೀ ಊರೆ ಒಂದಾದ ಮೇಲೆ ಅವರೆಲ್ಲರೂ ಕೂಡಿ ಶ್ರೀಗುರುಗಳಿಗೆ ಅನೇಕ ನ್ಯಾಯಮಾರ್ಗಗಳನ್ನು ಸೂಚಿಸಿ. ಅವರ ಮನಸ್ಸನ್ನು ತಿರುಗಿಸುವುದು ಯಾವ ದೊಡ್ಡ ಮಾತು? ಇನ್ನು ನಾವು ಸಹ ಅವರ ಸಂಗಡ ಸೇರುವುದೇ ಉತ್ತಮ"(ಪು.೨೫೯) ಎಂಬ ಅಂಬಾಬಾಯಿಯ ವ್ಯವಹಾರಿಕ ಸೂಚನೆ ಅಮೃತರಾಯರೊಡನೆ ಭೀಮರಾಯ ವಿನಯಾತಿಶಯದೊಡನೆ ದೋಷಾನುಸಂಧಾನವನ್ನು ಮಾಡಿಕೊಳ್ಳುವುದರ ಹಿಂದಿನ ಪ್ರೇರಣೆಯಾಗಿದೆ. ಕಾದಂಬರಿಯ ವಿಶೇಷ ಗಮನಸೆಳೆಯುವುದು ಭೀಮರಾಯ ಅಂಬಾಬಾಯಿ ಅವರ ಪಾತ್ರಗಳ ಮೂಲಕ ಸಮಾಜವನ್ನು

ವಿಡಂಬಿಸುವದೇ ಆಗಿದೆ. ಸ್ತ್ರೀ ಪುರುಷ ಮನಃಸ್ಥಿತಿಗಳ ಗೊಂದಲವಿಲ್ಲಿದೆ. ಕಮಲಾಪುರದ ಕತೆಯು ಇಲ್ಲಿದೆ. ಅದೊಂದು ರೇವು ಪಟ್ಟಣ, ಜಿಲ್ಲಾ ಸ್ಥಳ. ದಕ್ಷಿಣ ಕನ್ನಡದ ಮಂಗಳೂರಿಗೆ ಕಲ್ಪಿತ ಹೆಸರಿರಬೇಕೆನ್ನುವ ಸಂಶಯ ಬಲವಾಗುತ್ತದೆ. ಈ ಕಮಲಾಪುರದಲ್ಲಿ ನರಸಿಂಹಶಾಸ್ತ್ರಿ ಆಶ್ರಿತ ಅಂಬಾಬಾಯಿ ಸತಿಪತಿಗಳು, ಅಂಬಾಬಾಯಿಯದೇ ಕಾರುಬಾರು ಮನೆಯಲ್ಲಿ. ಭೀಮರಾಯನಿಗೆ ಯಕ್ಷಗಾನವೆಂದರೆ ಪ್ರೀತಿ. ಅವನ ಖಾಸಗಿ ಸಂಭಾಷಣೆಗಳು ಯಕ್ಷಗಾನ ಮಾದರಿಯೇ. ಅಂಬಾಬಾಯಿ ಸ್ವಾರ್ಥತೆಯ ಸರ್ವಸ್ವ. ಸುಂದರರಾಯ ಭೀಮರಾಯನ ಆಶ್ರಯ ಬಯಸಿದಾಗ ಅಂಬಾಬಾಯಿ ವಿರೋಧಿಸುತ್ತಾಳೆ. ಮನದ ಸೇಡು ಅವಳನ್ನು ಕ್ರೋಧಿಷ್ಟಳನ್ನಾಗಿ ಮಾಡುವುದು. ನನ್ನ ಬಗ್ಗೆ ಅಪಪ್ರಚಾರ ಮಾಡಿದನೆಂದು "ಸುಂದರರಾಯ ಜೀವಂತನಾಗಿರುವವರೆಗೆ ನನಗೆ ಸುಖವಿರದು. ಅಲ್ಲದೇ ಅವನು ಬದುಕಿರುವುದು ನಮ್ಮ ಮನೆತನದ ಮುಂದಿನ ವೃದ್ಧಿಗೆ ಅಪಾಯವೇ ಸರಿ" ಎಂದು ಹೇಳಿದಾಗ ಭೀಮರಾಯನಿಗೂ ಆಶ್ಚರ್ಯ. ಸುಂದರರಾಯನ ಅಪರಾಧವೆಂದರೆ ನರಸಿಂಹಶಾಸ್ತ್ರಿ ಭೀಮರಾಯನ ಮನೆತನದೊಡನೆ ಅಪಪ್ರಚಾರ ಮಾಡಿದನೆಂಬುದು. ಅಂಬಾಬಾಯಿಯ ತೀವ್ರ ಪ್ರಚಾರತೆ ಗಮನಿಸಿದರೆ ಸತ್ಯವೆಂದೆನಿಸುವುದು. ಹಾರಿಕೆ ಅಪವಾದಕ್ಕೆ ಹೆದರಿ ಅಂಬಾಬಾಯಿ ಸುಂದರರಾಯನ ವಧೆಯನ್ನೇ ಬಯಸುತ್ತಿರಲಿಲ್ಲ. ನರಸಿಂಹಶಾಸ್ತ್ರಿ "ಭೀಮರಾಯನ ಮನೆತನವೂ ತನ್ನ ಮನೆತನವು ಒಂದು ಎಂಬಂತೆ ನಡೆಯಿಸಿದನು" ಎಂಬ ಸಂದಿಗ್ಧ ಹೇಳಿಕೆಗಳಲ್ಲಿವೆ.

ದೇವಕಿ ವಾಮಾಚಾರದಲ್ಲಿ ಪರಿಣಿತಳಾದವಳು. ಇವಳ ಸಹಾಯದಿಂದ ಭೀಮರಾಯ ಸುಂದರರಾಯನ ಕೊಲೆ ಮಾಡುವನು. ಅಪರಾಧದ ತನಿಖೆ ನಡೆದು ಭೀಮರಾಯ ಹೊಂದಾಣಿಕೆ ಮಾಡಿಕೊಳ್ಳುವುದರ ಮೂಲಕ ನಿರಪರಾಧಿಯಾಗುವ ವಾತಾವರಣ ನಿರ್ಮಿಸಿಕೊಳ್ಳುವನು. ಶೇಷಗಿರಿರಾಯನೆಂಬ ವಕೀಲನ ಸಹಾಯದಿಂದ ಭೀಮರಾಯನ ಬಿಡುಗಡೆಯಾಗುತ್ತದೆ. ಭೀಮರಾಯನನ್ನು ಕೊಲೆಗೆ ಪ್ರೇರೇಪಿಸುವಲ್ಲಿ ಅಂಬಾಬಾಯಿ ಯಶಸ್ವಿಯಾಗುವಳು. ಸ್ತ್ರೀಯರ ಕುತಂತ್ರ, ಸೇಡು, ದ್ವೇಷದ ಕಿಚ್ಚು ಅಂಬಾಬಾಯಿಯವರ ಮುಖಾಂತರ ಹಿನ್ನೆಲೆಯಲ್ಲಿ ಕೆಲಸ ಮಾಡಿದೆ. ಭೀಮರಾಯನು ಈ ಗೆಲುವನ್ನು 'ಸತ್ಯಕ್ಕೆ ಜಯ' ಎಂಬಂತೆ ಜನರು ಕೊಂಡಾಡುವ ವಾತಾವರಣವನ್ನು ಕೃತಕವಾಗಿ ಸೃಷ್ಟಿಸುವನು. ಇದಕ್ಕಾಗಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸಹಸ್ರ ಭೋಜನ ಏರ್ಪಡಿಸುತ್ತಾನೆ. ಇದರ ಫಲವಾಗಿ ಮುಂದೆ 'ಧರ್ಮಪ್ರಚಾರಕ' ಸ್ಥಾನ ದೊರೆಯುವುದು. ನರಸಿಂಹಶಾಸ್ತ್ರಿ ಸಾವಿನ ತರುವಾಯ ಭೀಮರಾಯ ಧರ್ಮಪ್ರಚಾರಕನಾಗಿ ನೇಮಕವಾಗುವನು. ಕೊಲೆಗಡುಕನೊಬ್ಬ ಉನ್ನತ ಸ್ಥಾನಕ್ಕೇರುವುದು ದುರಂತದ ಪರಮಾವಧಿ. ಗುರುಗಳ ಆಶೀರ್ವಾದದಿಂದ ಇಂದಿರೆ ಎಂಬ ಮಗಳನ್ನು ಆತ ಪಡೆಯುವನು. ಇಲ್ಲಿ ದೇವಕಿ ಹಾಗೂ ಅಂಬಾಬಾಯಿಯ ಪಾತ್ರಗಳು ಸ್ತ್ರೀ ಪುರುಷ ಲಿಂಗ ಮತ್ತು ವ್ಯಕ್ತಿ ಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಿರುವುದು ಕಾಣುತ್ತದೆ. ಪಾಶ್ಚಿಮಾತ್ಯ ನಾಟಕಗಳ

ತಂತ್ರವನ್ನು ಗುಲ್ವಾಡಿ ವೆಂಕಟರಾಯರು ಬಳಸಿ ಯಶಸ್ಸನ್ನು ಸಾಧಿಸಿದ್ದಾರೆ. ತ್ರಿಯಂಬಕನ ಮಗ ವಿಠಲರಾಯನ ಲಂಪಟತನ, ಸಾವು, ಇಂದಿರೆಯ ದುರಂತ ಬದುಕಿನ ಚಿತ್ರಣ. ವೈಧವ್ಯ ಅದರಲ್ಲೂ ಬಾಲ್ಯ ವೈಧವ್ಯ, ಪುಸ್ತಕಗಳ ಓದು ಅವಳನ್ನು ಮತ್ತಷ್ಟು ಜಾಗೃತಗೊಳಿಸಿವೆ. ಪುರುಷರ ಓದಿಗೆ ಪ್ರೋತ್ಸಾಹಿಸಿದಷ್ಟು ಸ್ತ್ರೀ ಓದಿಗೆ ಗಮನಹರಿಸಿಲ್ಲವೆಂಬ ಕೊರಗು ಇಂದಿರಾಬಾಯಿ ಕಾದಂಬರಿಯ ಜೀವಾಳ. ಸ್ವಂತ ಮಗಳನ್ನೇ ವೈರಾಗ್ಯದ ಮಾರ್ಗಕ್ಕೆ ಹಚ್ಚಲು ಭೀಮಾಬಾಯಿ, ಇಂದಿರಾಬಾಯಿ ಸಂತಮಂಡಲಿ ಮನೆಗೆ ಕರೆದಾಗ ನಡೆಯುವ ಕುಹಕತನವಿದೆ. ಸಂತಮಂಡಲಿ ಅಧ್ಯಕ್ಷನ ಭೋಗಾಪೇಕ್ಷೆಗೆ ಒಳಗಾಗಿ ಅಮೃತರಾಯನಲ್ಲಿ ಆಶ್ರಯ ಪಡೆದು ಭಾಸ್ಕರರಾಯನನ್ನು ಮದುವೆಯಾಗುವಳು. ಇದರಿಂದ ಅವಮಾನಿತರಾದರೂ ಅನಿವಾರ್ಯವಾಗಿ ಭೀಮರಾಯ, ಅಂಬಾಬಾಯಿ ನಡುವೆ ಒಪ್ಪಂದ ಏರ್ಪಡುವುದು. ಅಂಬಾಬಾಯಿ ಭೀಮರಾಯ ಭ್ರಷ್ಟತೆಯಲ್ಲಿ ಕೇಂದ್ರೀಕೃತರಾಗಿದ್ದಾರೆ. ಮಗಳ ಬದುಕಿನೊಂದಿಗೆ ಚೆಲ್ಲಾಟ ವಾಡುವರು. ಭೀಮರಾಯ ಅಂಬಾಬಾಯಿ ಜೀವನದ ಆಗುಹೋಗುಗಳು ಕಾದಂಬರಿಯಲ್ಲಿ ಗಟ್ಟಿ ವಾಸ್ತವ ನೆಲೆಯನ್ನು ನಿರ್ಮಿಸಿದರೆ, ಭಾಸ್ಕರ ಇಂದಿರೆಯ ಪ್ರಗತಿ ಆದರ್ಶದ ಹಾದಿಯಲ್ಲಿ ನಡೆಯುವುದು. ಲಿಂಗ ತಾರತಮ್ಯಕ್ಕೆ ಈ ಇಂದಿರಾಬಾಯಿ ಕಾದಂಬರಿಯಲ್ಲಿ ಹಲವಾರು ನಿದರ್ಶನಗಳಿವೆ. "ಹೆಣ್ಣು ಜನ್ಮವು ಯಾವ ಪ್ರಾಣಿಗೂ ಜನ್ಮಾಂತರಕ್ಕೂ ಬೇಡ"(ಪು.೧೩). ವಿಧವಾ ವಿವಾಹ ವಿಚಾರದಲ್ಲೂ ಭಾಸ್ಕರನ ಅಭಿಪ್ರಾಯ, ಪುಸ್ತಕ ಓದುವಲ್ಲಿ ವ್ಯತ್ಯಾಸಗಳು, ಆಗದ ಸಂಶಯ ಮಾಡುವ ತಂದೆಯಂದಿರು ತಾಳುವ ಭಾವನೆಯ ಮೇಲೆ ನಿರ್ಣಯವಾಗುತ್ತಾ ಹೋಗುವವು. ಪುರುಷನ ಪುನರ್‌ವಿವಾಹ ಪ್ರೋತ್ಸಾಹಿಸುವವರು ಸ್ತ್ರೀಯರ ಮರು ವಿವಾಹದ ವಿಚಾರಗಳೇಕೆ ಮುನ್ನಲೆಗೆ ಬಂದಿಲ್ಲ ಎಂಬುದಕ್ಕೆ ಕಾದಂಬರಿಯ ಚರ್ಚೆಯ ತರ್ಕಕ್ಕೆ ವಾದದ ಲೇಪನವಿದೆ. ಅದನ್ನು ಹೀಗೆ ಪ್ರಶ್ನಿಸುವರು. "ಒಬ್ಬ ಪುರುಷ ಎಷ್ಟು ಸಾರಿಯಾದರೂ ಮದುವೆಯಾಗಬಹುದಂತೆ ಸ್ತ್ರೀಗೇಕಾಗಕೂಡದು?" ಒಬ್ಬ ಸ್ತ್ರೀಯು ಪತಿಯ ಮರಣಾನಂತರ ತಲೆ ಬೋಳಿಸಿ ರೂಪವಿರೂಪ ಮಾಡಿ ಸನ್ಯಾಸದಲ್ಲಿರಬೇಕಂತೆ, ಪುರುಷನು ಪತ್ನಿಯ ಮರಣಾನಂತರ ತಲೆ, ಗಡ್ಡ, ಮೀಸೆ ಬೋಳಿಸಿ ಏಕೆ ಸನ್ಯಾಸಿಯಾಗಬಾರದು" (ಪು.೨೨೬) ಲಿಂಗ ತಾರತಮ್ಯ ವಾದಕ್ಕೆ ವ್ಯಕ್ತಿ ಸಂಬಂಧಕ್ಕೆ ಉತ್ತರ ನೀಡುವ ಪ್ರಯತ್ನವಿಲ್ಲಿದೆ. ಲಿಂಗ ತಾರತಮ್ಯ ವಿರೋಧಿಸುವ ವಾಸ್ತವ ನೆಲೆಯ ಸಮಾನತೆಯನ್ನು 'ಇಂದಿರಾಬಾಯಿ' ಕಾದಂಬರಿ ಪ್ರತಿಫಲಿಸಿದೆ.

ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯದಲ್ಲಿ ವ್ಯಕ್ತವಾಗುವ ಸಂದರ್ಭ ಮತ್ತು ಇವರ ಕಾದಂಬರಿ ರಚನೆಯ ಸನ್ನಿವೇಶಗಳು ಪರಸ್ಪರ ಭಿನ್ನವಾದವುಗಳು. ಸಮಕಾಲೀನ ವಾಸ್ತವ ವಿವರಗಳಿಂದ ಭಿನ್ನವಾದ ಆಯ್ಕೆಯನ್ನು ಮಾಡುವುದೇ ಪುಟ್ಟಣ್ಣನವರ ಕಾದಂಬರಿಯ ವಿಶೇಷತೆ. ಲಿಂಗ ತಾರತಮ್ಯ ವಿಚಾರಕ್ಕೆ ಹಾಗೂ ವ್ಯಕ್ತಿ ಸಂಬಂಧಗಳ ಹಿನ್ನೆಲೆಯಲ್ಲಿ ಗಮನಿಸಲಾಗಿ ವ್ಯತ್ಯಾಸಗಳು ಕಾಣುವವು.

ಕಾದಂಬರಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಪಾತ್ರಗಳೆಲ್ಲ ಆದರ್ಶಮಯವಾದವು. ಅವುಗಳಲ್ಲಿ... "ಕೆಳಕ್ಕೆ ಇಳಿದರೆ ಬುದ್ಧಿಯ ಜೋಮು ಬಿಟ್ಟಂತಾಗುವುದು. ಅಂತಹ ನಿರ್ಮಲ ಮೂರ್ತಿಗಳಾದ ಶ್ರೀರಾಮ, ಸೀತಾದೇವಿ, ಯುದಿಷ್ಠಿರ, ದ್ರೌಪದಿ ಇವರುಗಳ ಗುಣದಲ್ಲಿ ಕೆಲವು ಭಾಗವನ್ನು ಹೊಂದಿ ಲೋಕದ ರೂಢಿಗೆ ಸಿಕ್ಕಿ ಕಷ್ಟಕ್ಕೆ ಗುರಿಯಾದರೂ ತಮ್ಮ ಧೀರೋದಾತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೆ ಊಹಿಸಿಕೊಂಡು ವರ್ಣಿಸುವುದು. ಮನಸನ್ನು ಚೆನ್ನಾಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ. ಪುರಾಣ ಪ್ರಸಿದ್ಧರು ವ್ಯಾಕರಣ ಸೂತ್ರಗಳಾಗಿದ್ದಾರೆ."[೩೪] ಈ ಪಾತ್ರಗಳು ಮನುಷ್ಯ ಸಾಮಾನ್ಯರಲ್ಲಿ ಸಿಕ್ಕ ಧೀರೋದಾತ್ತ ಪಾತ್ರಗಳಾಗಿದ್ದಾವೆ. ಈ ಅಂಶಗಳನ್ನು ಗಮನಿಸಿದರೆ ದೊರೆಯುವುದು ಲಿಂಗ ತಾರತಮ್ಯ, ವ್ಯಕ್ತಿ ಸಂಬಂಧಗಳ ಸ್ವರೂಪ. ಆದರ್ಶ ಮತ್ತು ವಾಸ್ತವಗಳ ಸಂವಾದ ಅರ್ಥಪೂರ್ಣವಾದುದು. ನಾಯಕಿಯ ಪಾತ್ರದಲ್ಲಿ ಪೌರಾಣಿಕ ಆದರ್ಶ, ಖಳನಾಯಕನ ಪಾತ್ರದಲ್ಲಿ 'ನವರಾವಣ'ನ ಸೃಷ್ಟಿ ರಾಮಾಯಣದ ಆಧುನಿಕ ಪ್ರತಿರೂಪವನ್ನು ಇಲ್ಲಿ ಸೂಚಿಸಿದ್ದಾರೆ. ಸ್ತ್ರೀ ಸ್ತ್ರೀಯನ್ನು, ಪುರುಷ ಸ್ತ್ರೀಯನ್ನು, ಸ್ತ್ರೀ ಪುರುಷನನ್ನು ಕಂಡ ವಿಭಿನ್ನ ಆಯಾಮಗಳಲ್ಲಿ ಲಿಂಗ ತಾರತಮ್ಯವನ್ನು ಗುರುತಿಸಲಾಗಿದೆ. ಪುರುಷ ಪುರುಷ ನಡುವೆ ತಾರತಮ್ಯವು ಉಪಾಧ್ಯಾಯರವರು ಮಹಾದೇವನಿಗೆ ನೀಡುವ ಶಿಕ್ಷೆ, ತಂದೆಯ ದ್ವೇಷ ಮುಂತಾದ ಕಡೆ ಕಾಣುವುದು. ಮಹಾದೇವ ಹಾಗೂ ಸದಾಶಿವನ ನಡುವಿನ ಸಂವಾದವೆ ಇದಕ್ಕೆ ಉದಾಹರಣೆ. "ಪಾಠಕೊಟ್ಟರು ಹೊಡೆಯುತ್ತಾರೆ ಇಲ್ಲದಿದ್ದರೂ ಹೊಡೆಯುತ್ತಾರೆ. ತುಂಟತನ ಮಾಡಿದರೂ ಹೊಡೆಯುತ್ತಾರೆ"(ಪು.೨೭) ತಪ್ಪು ಮಾಡಿದ ವಿದ್ಯಾರ್ಥಿಗೆ ಶಿಕ್ಷೆ ನೀಡುವುದು ಗುರುಗಳ ವಾಡಿಕೆ. ಹುಡುಗರು ತಿಳಿಯದಿದ್ದರೆ ಕೇಳಿದರೂ ಹೊಡೆಯುವದು ದಡ್ಡ ಗುರುಗಳ ಲಕ್ಷಣ. ಗಲಾಟೆಯ ಸಂದರ್ಭದಲ್ಲಿ ಗಲಾಟೆ ಮಾಡಿದವರನ್ನು ಹೊಡೆಯುವುದು ವಾಡಿಕೆ, ಅದನ್ನು ಬಿಟ್ಟು ಯಾರು ಸಿಕ್ಕುವರೋ ಅವರನ್ನೇ ಹೊಡೆಯುವರು(ಪು.೨೭) ತಪ್ಪಿಲ್ಲದಿದ್ದರೂ ಹೊಡೆಯುವುದು ಇಲ್ಲಿ ಮಹಾದೇವನಿಗೆ ಆಗದ ವಿಷಯ. ಚಿತ್ರಹಿಂಸೆ ನೀಡುವ ಮನಸ್ಥಿತಿ ಗುರುಗಳಲ್ಲಿದೆ. "ಬೆತ್ತ ಮುರಿಯುವ ಹಾಗೆ ಹೊಡೆಯುವರು. ಅದೂ ಸಾಲದೇ ಮುಷ್ಠಿಯಿಂದ ತಲೆಯ ಮೇಲೆ ಮುಟ್ಟಿ ಮುಟ್ಟಿ ತಲೆಯನ್ನೆಲ್ಲ ಹರಳುಕಾಯಿ ಮಾಡುತ್ತಾರೆ. ಹೆಚ್ಚಾಗಿ ರೋಷದಿಂದ ಹಿಂತಿರುಗಿ ಬಂದು ಮೊಳಕೈಯಿಂದ ತಲೆಯ ಮೇಲೂ ಬೆನ್ನ ಮೇಲೂ ಕುಕ್ಕುತ್ತಾರೆ. ಕಿವಿ ಹಿಡಿದು ಮೇಲಕ್ಕೆ ಎತ್ತುತ್ತಾರೆ. ಒಳಸುಂಟಿಗಳಂತೂ ಗೊತ್ತೇ ಇಲ್ಲ."[೩೫] ಅಜ್ಜಿಯು ಇದನ್ನು ಗಮನಿಸಿ ಹೊಡೆದ ವಿಷಯ ಅರಿತು "ನಿತ್ಯವೂ ಹೊಡೆಯುತ್ತಾರೆ ಬೆಳಗ್ಗೆ ಎದ್ದು ಬೆಕ್ಕಿನ ಮುಖ ನೋಡಬೇಡ"(ಪು.೨೮) ಎನ್ನುವ ಅಜ್ಜಿಯ ನಂಬಿಕೆ ಕಾಣುತ್ತೇವೆ.

ನಂಜನಗೂಡು ತಿರುಮಲಾಂಬರವರ ಕಾದಂಬರಿಗಳಲ್ಲಿ ಲಿಂಗ ಹಾಗೂ ವ್ಯಕ್ತಿ ಬಂಧಕ್ಕೆ ಅನುಗುಣವಾಗಿ ಹಲವಾರು ವಿಚಾರಗಳಿವೆ. ಕ್ರಿ.ಶ.೧೯೧೩ರಲ್ಲಿ ಹೊರಬಂದ ಸುಶೀಲೆ ಕಾದಂಬರಿಯಿಂದ ಮಾಣಿಮಾಲಿವರೆಗಿನ ಕೃತಿಗಳಲ್ಲಿ ಇಂತಹ ಚರ್ಚೆಗಳು ಬಂದಿವೆ. ಸುಶೀಲೆ ಕಾದಂಬರಿಯು ಪುರುಷನ

ವರ್ಣನೆಯಿಂದ ಆರಂಭವಾಗುವುದು. 'ಪತಿದೇವಾ ಪರಂದೈವ' 'ಆರಾಧ್ಯದೇವ' 'ಅಂತರಂಗವಾಸಿ' 'ಸ್ವಾಮಿ ಚರಣಾರವಿಂದ' ಪುರುಷ ವ್ಯವಸ್ಥೆಯನ್ನೆ ಅವರು ಬೆಂಬಲಿಸಿದ್ದಾರೆ. ವಿದ್ಯಾವತಿಯಾದ ಸುಶೀಲೆಯು ಇಲ್ಲಿನ ಕಥಾ ನಾಯಕಿ ದಾರಿ ತಪ್ಪಿದ ಗಂಡ, ಕುತಂತ್ರಿಗಳ ಕಷ್ಟ ಕೋಟಲೆಯಿಂದ ತತ್ತರಿಸಿದರೂ ಸೋತ ಮೇಲೆ ಜಯವೆಂಬಂತೆ ಆಕೆಯ ಪತಿ ಕೊನೆಗೆ ಸರಿದಾರಿಗೆ ಬರುವನು. ಆ ಕಾಲದಲ್ಲಿ ವಿದ್ಯಾವಂತ ಮಹಿಳೆಯರನ್ನು ನೀಲಿ ಕಣ್ಣು, ಹಳದಿ ಕಣ್ಣಿನಿಂದ ನೋಡುತ್ತಿದ್ದದ್ದು ಹೊಸದೇನಲ್ಲ. ಹಾಗೆ ಕಂಡ ವ್ಯವಸ್ಥೆಗೆ ತಿರುವಲಾಂಬರವರು ಬರವಣಿಗೆಯಲ್ಲಿ ಉತ್ತರ ನೀಡಿದ್ದಾರೆ. ಸ್ತ್ರೀಯರು ಸ್ತ್ರೀಯರನ್ನು ವಕ್ರದೃಷ್ಟಿಯಿಂದ ಕಂಡ ಪ್ರಸಂಗಕ್ಕೆ ಉದಾಹರಣೆಯಾಗಿ ವಿದ್ಯಾಭ್ಯಾಸ ಸ್ತ್ರೀಯರಿಗೆ ನೀಡುವ ವಿಚಾರ ತಿಮ್ಮಮ್ಮನಂತವರಿಗೆ ಅರಗಿಸಿಕೊಳ್ಳದ ವಿಷಯವಾಗಿರುವುದು. ಓದುವ ಸ್ತ್ರೀಯನ್ನು ಕಂಡರೆ ಅವಳು ಕೆಂಡ ಕಾರುವಳು. ಹೆಂಗಸಿಗೆ ಓದೆಂದರೇನು (ಪು.೩೦) ಓದು ಬರಹಬಲ್ಲ ಹೆಂಗಸು ಅವರು ಮಾಡುವದೆಲ್ಲ ಕೆಟ್ಟ ಕೆಲಸವೆ(ಪು.೩೧). ಇಂತಹ ನುಡಿಗಳು ಅಂದಿನ ಸ್ತ್ರೀಯರು ಸಮಾಜ ಸುಧಾರಣೆಯೆಂದು ಭಾವಿಸಿರಲಿಲ್ಲ. ಬದಲಿಗೆ ಅವರನ್ನು ಒಂದು ಸಾಮಾಜಿಕ ಸಮಸ್ಯೆ ಎಂದು ಬಿಂಬಿಸಲಾಗಿದೆ. ಪ್ರಾರಂಭದಲ್ಲಿ ಬರುವ ಗಿರಿಯಮ್ಮ ಸುಶೀಲೆಯವರ ನಡುವಿನ ಸಂಭಾಷಣೆಯು ಮುಂದಿನ ಅನಾಹುತಕ್ಕೆ ಮೂಲವಾಗಿದೆ. ದುಷ್ಟವ್ಯಕ್ತಿ ತಂತ್ರನಾಥನ ಪಾತ್ರ ಪ್ರವೇಶ ತಿಮ್ಮಮ್ಮನ ಸಹಾಯಕ್ಕೆ ಪ್ರತ್ಯೇಕ, ಪರೋಕ್ಷವಾಗಿ ಸ್ಪಂದಿಸಿದ ರೀತಿಯಿಲ್ಲಿ ಮೂಡಿಬಂದಿದೆ. ನಾಯಕ ವಿನೋದನನ್ನು ಹಣಿಯುವ ಹಾಗೂ ಸುಶೀಲೆಯನ್ನು ಸೋಲಿಸುವದಕ್ಕಾಗಿ ದುಷ್ಟ ಶಕ್ತಿಗಳಾದ ಗಿರಿಯಮ್ಮ, ತಂತ್ರನಾಥ ಒಟ್ಟಾದ ಪ್ರಸಂಗವನ್ನು ನಾಲ್ಕನೆಯ ಅಧ್ಯಾಯದಲ್ಲಿ ಕಾಣುತ್ತದೆ. ಮುಂದಿನ ಕುತಂತ್ರ ಕುರಿತು ಅವರಿಬ್ಬರೂ ಯೋಚಿಸುವರು. ದುಷ್ಟ ಆಲೋಚನೆ ನಂತರ ಕಾರ್ಯಗತಗೊಳಿಸಲು ತಂತ್ರ ಹೆಣೆಯುವದು ಲಿಂಗ ತಾರತಮ್ಯ ಹಾಗೂ ವ್ಯಕ್ತಿ ಬಂಧ ಕುರಿತಾದ ಪ್ರಶ್ನೆಗಳನ್ನು ಹುಟ್ಟುಹಾಕುವುದು. ಸುಶೀಲೆಯ ಬದುಕನ್ನು ಹೇಗಾದರೂ ಮಾಡಿ ಕೆಡಿಸುವ ಒಂದೇ ಉದ್ದೇಶವುಳ್ಳ ಹಲವು ಸಂಗತಿಗಳು ಜರುಗುವವು. ಕುತಂತ್ರಗಳ ಕೈವಾಡ, ದುಷ್ಟತನ ಇದರಿಂದ ಸಜ್ಜನವೇದನೆ ಕಾದಂಬರಿಯಲ್ಲಿ ಪರಾಕಾಷ್ಠೆಯ ಸ್ಥಿತಿ ತಲುಪಿದೆ. ಈ ಸಂದರ್ಭದಲ್ಲಿ ಪುರುಷ ಪುರುಷ ದ್ವೇಷಿಯಾಗಿದ್ದನ್ನು ವಿಶ್ಲೇಷಿಸುವುದು. ಅದೇ ರೀತಿಯಾಗಿ ನಾರಪ್ಪಯ್ಯ ದೀಕ್ಷಿತರ ಸಂವಾದ ವೈಷಮ್ಯದ ಚರ್ಚೆಯಿದೆ. ನಾರಪ್ಪಯ್ಯ, ದೀಕ್ಷಿತರ ನಡುವಿನ ಮಾತುಕತೆ ಮಾರಪ್ಪ "ಮಹಾದೇವ ಪೂರ್ವಕ್ಕೂ ಈಗ್ಗೂ ಎಷ್ಟೋ ಬುದ್ಧಿಶಾಲಿಯಾಗಿದ್ದಾನೆ. ಮಠದಲ್ಲಿ ಓದುವಾಗ ಮಾತ್ರ ಅವನಿಗೆ ಮಡ್ಡತನ ಬಂದಿತ್ತು."(ಪು.೪೭) ಎಂಬುದು ದ್ವೇಷ ಹಾಗೂ ಪುರುಷ-ಪುರುಷರನ್ನು ದ್ವೇಷಿಸಿದ ಸಂದರ್ಭವಿಲ್ಲಿ ಉಪಾಧ್ಯಾಯನನ್ನು ಕುರಿತದ್ದು ಎಂದು ಮನನವಾಗಿದೆ.

ಸ್ತ್ರೀ ಸ್ತ್ರೀ ದ್ವೇಷಿಯಾದ ಪ್ರಸಂಗಗಳು ಹಲವು. ಅದರಲ್ಲೂ ಅತ್ತೆ ತಿಮ್ಮಮ್ಮ ಸೊಸೆ ಸೀತಮ್ಮನ ಜಡೆಯ ಶೀಕಲು ಸಮರದಿಂದ ಆರಂಭವಾಗಿ ಸರಣಿ ಸಂಕಟಗಳು ಜರುಗಿಬಿಡುವುವು. ಸೊಸೆಯನ್ನು

ಕಂಡರೆ ತಿಮ್ಮಮ್ಮನಿಗೆ ಆಗುತ್ತಿರಲಿಲ್ಲ. "ಆ ಹೆಣ್ಣು ಕಂಡರೆ ವಿಷದಂತೆ ಕಾಣುತ್ತಿದ್ದಳು. ಮಹದೇವನಿಗೆ ಮೊದಲು ಬೇರೆ ಒಂದು ಕನ್ಯವನ್ನು ನೋಡಲು ಮಾತು ನಡೆದಿತ್ತು" (ಪು೬೬) ಇಲ್ಲಿ ಸ್ತ್ರೀ ಸ್ತ್ರೀ ದ್ವೇಷಿಯಾಗಿರುವುದು ದುರಂತ. ಹಾಗೆಯೇ ಸೀತೆಯ ಮೇಲೆ ಅಪವಾದಗಳು ಬರುವವು. ಯಾರಿಗೇನು ಅನ್ನದಿದ್ದರೂ ಅಂತಹ ಅಪವಾದಗಳು ಜರುಗಹತ್ತಿದವು. ಸಾತಿ ಅಂತಹ ಒಂದು ಸನ್ನಿವೇಶವನ್ನು ಹುಟ್ಟು ಹಾಕುವಳು. ಅದಕ್ಕೆ ಸೀತೆ "ನಾನು ಯಾರನ್ನು ಬಯ್ಯಲಿಲ್ಲ. ಹಾಗೆ ಆಡಿದ್ದರೆ ನನ್ನ ಬಾಯಲ್ಲಿ ಹುಳು ಸುರಿಯಲಿ"(ಪು.೭೯) ಸೀತೆ ನೊಂದು ಹೇಳುವಲ್ಲಿ ಆಕೆಯ ಒಳ ಮನಸ್ಸಿನ ನೋವಿದೆ. ಇದರಲ್ಲೂ ಸೀತೆಯ ಹಾಗೆ ಮತ್ತೊಂದು ಮನೆ ಸೇರುವ ಸಾತಿ ಹೀಗೆ ಆಪಾದನೆ ಹೊರಿಸಿದ್ದು ಅಪರಾದವೆ ಸರಿ. ಅಸಂಬದ್ಧತೆ ತೋರುವ ಸಂದರ್ಭಗಳೆಲ್ಲ ಮುಖ್ಯವಾದ ಕಥೆಯ ಅಂಗ, ಉಪ ಅಂಗಗಳಾಗಿವೆ. ಅವಕ್ಕೆ ಉದಾಹರಣೆಗಾಗಿ ನಾಲ್ಕನೆಯ, ಆರನೆಯ ಅಧ್ಯಾಯದ ನಾರಪ್ಪಯ್ಯನ ಪ್ರಸಂಗ (ಪು.೨೫-೪೬) ದೀಕ್ಷಿತರು ಅತ್ತೆ ವೆಂಕಮ್ಮ ಹೇಳುವ ಹತ್ತನೆ ಅಧ್ಯಾಯದಲ್ಲಿ ಬರುವ ಅರುಂದಮ್ಮಳ ಕಥೆ(ಪು.೯೧) ಅಮವಾಸ್ಯೆಯ ಪೂರ್ವ ವೃತ್ತಾಂತ ವರ್ಣಿತವಾದ ಹದಿನೈದನೇ ಅಧ್ಯಾಯಗಳಲ್ಲಿ ಕಥಾ ಸಂವಿಧಾನಕ್ಕೆ ಪೂರಕವಾದ ಲಿಂಗ ಸಂಘರ್ಷ ಹಾಗೂ ವ್ಯಕ್ತಿ ಸಂಬಂಧಗಳ ಗಟ್ಟಿತನ ಪ್ರದರ್ಶಿಸುವುದು. ನೋವು ಪ್ರತಿಭಟನೆಯಾಗಿ ಹೊರಬಂದಿಲ್ಲ. ತಾಯಿ ಮಗಳು ಸೊಸೆಯರ ನಡುವಿನ ಸಂವಾದದ ನೆಲೆಯನ್ನು ಕುರಿತು ಸ್ತ್ರೀ-ಪುರುಷ, ಪುರುಷ-ಸ್ತ್ರೀ, ಪುರುಷ-ಪುರುಷ, ಸ್ತ್ರೀ-ಸ್ತ್ರೀ ನಡುವಿನ ತಿಕ್ಕಾಟ ಸಾಮಾಜಿಕ ಓರೆಕೋರೆಯನ್ನು ತಿದ್ದುವ ಪ್ರಯತ್ನಗಳು ಬರದಿದ್ದರೂ ಜನರ ಮೇಲೆ ಪ್ರಭಾವನ್ನು ಬೀರಿದಂತಿವೆ.

ನಭಾ ತಿರುಮಲಾಂಬರವರ ಮತ್ತೊಂದು ಮಹತ್ವದ ಕೃತಿ. ನಭಾ ಮತ್ತು ರೋಗಿಯಾದ ತಾಯಿಯ ಸಂಭಾಷಣೆಯೊಂದಿಗೆ ಕಾದಂಬರಿ ಆರಂಭವಾಗುವುದು. ಬಾಲ್ಯ ವಿವಾಹವಾಗಿ ತಾಯಿಯ ಸೇವೆಗೆ ನಿಂತಿರುವ 'ನಭಾ' ತನ್ನ ಜೀವನದ ಬಗ್ಗೆ ಎಳ್ಳಷ್ಟೂ ಚಿಂತಿಸಿದವಳಲ್ಲ. ಅತ್ತ ತಾಯಿಗೆ ಹರೆಯದ ಮಗಳನ್ನು ತವರಿನಲ್ಲಿಟ್ಟುಕೊಂಡೆನೆಂಬ ತೊಳಲಾಟ. ಈ ಚಿಂತೆಯಲ್ಲಿಯೇ ಆರೋಗ್ಯ ಮತ್ತಷ್ಟು ಹದಗೆಟ್ಟು ಕ್ಷೀಣಿಸುವುದು. ಮಗಳ ಸೌಖ್ಯವನ್ನೇ ಬಯಸುವ ತಾಯಿ, ತಾಯಿಯ ಆರೋಗ್ಯವನ್ನೇ ಜಪ್ಪಿಸುವ ಮಗಳು. ಮಗಳನ್ನು ಗಂಡನ ಮನೆಗೆ ಹೋಗಲು ಒತ್ತಾಯಿಸಿ 'ನಾನು ಹೇಗಾದರೂ ಸಾಯುವೆನು' ನನ್ನ ಮಗಳಾದರೂ ಗಂಡನ ಮನೆ ಸೇರಿ ಸುಖವಾಗಿರಲೆಂಬ ಮಹಾದಾಸೆ ತಾಯಿಯದು. ನಭಾಳ ಪತಿ ಶ್ರೀನಿವಾಸ ಇದೆ ಸಮಯಕ್ಕೆ ತೀರಿಕೊಳ್ಳುವನು. ನಭಾ ಇದನ್ನು ದಿಟ್ಟವಾಗಿ ಎದುರಿಸಲು ಅಣಿಯಾದರೆ, ನಭಾಳಿಗಿಂತ ಹೆಚ್ಚು ಅಧೈರ್ಯಗೊಂಡಿದ್ದು ರೋಗಿ ತಾಯಿ ಮಾತ್ರ. ಅದಕ್ಕಿಂತ ಹೆಚ್ಚಾಗಿ "ನಿರ್ಭಾಗ್ಯೆ ! ಹೊರದು ಇನ್ನು ನೀನು ಈ ಭೂಮಿಯಲ್ಲಿದ್ದು ಫಲವಿಲ್ಲ" ಎಂದರಚಿದಾಗ ನಭೆ ಅದನ್ನು ಸಲೀಸಾಗಿ ತೆಗೆದುಕೊಂಡಳು. ತಾಯಿಗೆ ಧೈರ್ಯ ಹೇಳುವ ಸ್ಥಿತಿ ಇಲ್ಲದೆ ಈ ವಿಚಾರಗಳಲ್ಲಿ ಸಂಕಟ. ವೇದನೆ

ಹಾಗೂ ಅವುಗಳ ಬಗ್ಗೆ ನೈತಿಕ ಬೆಂಬಲ ವ್ಯಕ್ತಪಡಿಸಿದ್ದಾಳೆ. ಇದು ಸ್ತ್ರೀ ಸಂಬಂಧ ನಿದರ್ಶನವೇ ಕಾಣುವುದು.

ಏಕಾಂಗಿ 'ನಭಾ' ಚಿಕ್ಕಪ್ಪ ಶಂಕರನಾಥನ ಆಸರೆಯಲ್ಲಿ ಉಳಿಯುವಳು. ತಾಯಿಯ ಮಣ್ಣುಗಾಣಿಸಿ ಒಂಬತ್ತೇ ಒಂಬತ್ತು ದಿನ ಕಳೆಯುವದರೊಳಗೆ ನಭಾಳ ಆಸ್ತಿ ವಿಕ್ರಯ ಪತ್ರ ಚಿಕ್ಕಮ್ಮ ಶರಾವತಿ ಕೈ ಸೇರುತ್ತದೆ. ನಭಾಳ ಕಷ್ಟ ಇಮ್ಮಡಿಯಾಗುವವು. 'ನಭೆ'ಯ ವಿಷಯಕ್ಕೆ ಶಂಕರನಾಥ, ಶರಾವತಿಯ ನಡುವೆ ಜರುಗುವ ಮನಃಸ್ತಾಪ ತಂತ್ರಗಳ ಪ್ರತೀಕ. ಪುರುಷ ಸ್ತ್ರೀಯನ್ನು ನೋಡಿದ ಹೀನ ದೃಷ್ಟಿಕೋನವಿಲ್ಲಿ ಕಾಣುವುದು. ಇಲ್ಲಿಂದ ಮತ್ತೋರ್ವ ಚಿಕ್ಕಪ್ಪ ಚಿದಾನಂದ ರಮಾಮಣಿ ಬಹಳ ಪ್ರೀತಿಯಿಂದ ನಭಾಳನ್ನು ನೋಡಿಕೊಂಡರು. ನಭೆಯನ್ನು ಶಂಕರನಾಥ ಶರಾವತಿ ನೋಡಿಕೊಂಡ ರೀತಿಗೂ ಚಿದಾನಂದ ರಮಾಮಣಿಯರು ನೋಡಿಕೊಂಡ ರೀತಿಗೂ ಅಜಗಜಾಂತರ ವ್ಯತ್ಯಾಸವಿದೆ. ಇದು ವ್ಯಕ್ತಿ ಸಂಬಂಧಗಳ ಅಂತರ ಸಂಬಂಧವನ್ನು ಕುರಿತು ನಿದರ್ಶಿಸಬಲ್ಲದು. ಅಭದ್ರತೆಯ ಬದುಕು ಅನಿಶ್ಚಿತ ವಾತಾವರಣಕ್ಕೆ ನಭಾ ಕಾದಂಬರಿಯಲ್ಲಿ ನಭೆಯ ಪಾತ್ರ ಪೋಷಕ ಪಾತ್ರಗಳೊಂದಿಗೆ ಶೋಷಿತಗೊಂಡಿರುವುದೆ ಆಗಿದೆ.

ಮೊದಲ ಘಟ್ಟದ ಕಾದಂಬರಿಗಳಲ್ಲಿ ಕೌಟಂಬಿಕ ಸಂಬಂಧಗಳು ಕೆಲವು ಕಡೆ ಸಡಿಲಗೊಂಡಿದ್ದರೆ ಕೆಲವು ಕಡೆ ಬಿಗು ಬಂಧವಿದೆ. ಹತ್ತೊಂಬತ್ತನೆ ಶತಮಾನದಲ್ಲಿ ಬ್ರಿಟಿಷರ ಪ್ರಭಾವದಿಂದ ಅಲ್ಪ ಸ್ವಲ್ಪ ಬದಲಾವಣೆ ಕಂಡರೂ ಪರಿಣಾಮಕಾರಿಯೆನಿಸಲಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿ ಹೊಸತಾದ ಗಾಳಿಗೆ ಹೊಂದಿಕೊಳ್ಳುವ, ಹಳೆಯದನ್ನು ತ್ಯಜಿಸದ ಸಾಂಪ್ರದಾಯಿಕ ನಿಲುವು ಭಾರತೀಯರನ್ನು ಗಟ್ಟಿಯಾಗಿಯೇ ಅಪ್ಪಿಕೊಂಡಿತ್ತು. ಈ ಹಳೆಯ ಮತ್ತು ಹೊಸತುಗಳ ಸಂಘರ್ಷದಲ್ಲಿ ಸ್ತ್ರೀ ಚಿತ್ರಣ ವಿಶಿಷ್ಟ ರೀತಿಯಲ್ಲಿ ಮೂಡಿಬಂದಿದೆ. ಸ್ವಾತಂತ್ರ್ಯಪೂರ್ವ ಕನ್ನಡ ಕಾದಂಬರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಸ್ತ್ರೀ ಸಾಮಾಜಿಕ ಬದಲಾವಣೆಯ ಸುಳಿ ಗಾಳಿ ಬೀಸಿದೆ. ಕುಟುಂಬದಲ್ಲಿ ಹೆಂಡತಿಯ ಸ್ಥಾನ ಅಲಂಕರಿಸಿದ ಸ್ತ್ರೀ ಪತಿಯನ್ನೆ ದೇವರೆಂದು ನಂಬಿದವಳು. ಹೆಂಡತಿಯ ಸ್ಥಾನ ಅಲಂಕರಿಸಿದ ಸ್ತ್ರೀಯರು ಗಂಡನ ನೆರಳಿನಲ್ಲಿಯೇ ಜೀವನದ ಸವಿ ಉಂಡವರು. 'ಪ್ರಬುದ್ಧ' ಪದ್ಮನಯನೆ' ಕಾದಂಬರಿಯ ಮನಮೋಹಿನಿಯ ಮಗಳು ಪದ್ಮನೆಯ ಮತ್ತು ಜೀವನ ಕಲೆ 'ಇಂದಿರಾಬಾಯಿ' ಕಾದಂಬರಿಯ ಜಲಜಾಕ್ಷಿ, ಸುಶೀಲೆ ಅಂಬಾಬಾಯಿ, 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ತಿಮ್ಮಮ್ಮ, ಸೀತೆ, 'ಮಾತೃನಂದಿನಿ' ಕಾದಂಬರಿಯ ಚಿತ್ರ, 'ಸುಶೀಲಾ' ಕಾದಂಬರಿಯ ಸುಶೀಲಾ 'ನಭಾ' ಕಾದಂಬರಿಯ ರಮಾಮಣಿ ಮೊದಲಾದ ಗೃಹಣಿಯರು ಗ್ರಾಮೀಣ ಪರಿಸರದಿಂದ ಬಂದ ನಿರಕ್ಷರಿಗಳು, ಅಪವಾದಕ್ಕೆಂಬಂತೆ 'ಪ್ರಬುದ್ಧ ಪದ್ಮನಯನೆ' ಕಾದಂಬರಿಯ ಪದ್ಮನಯನೆ, ಜೀವನ ಕಲೆ, ಸುಶೀಲೆ ಕಾದಂಬರಿಯ ಸುಶೀಲೆ ವಿದ್ಯಾವಂತೆಯರಾದರೂ ಪತಿಯನ್ನೆ ದೇವರೆಂದು ಭಾವಿಸಿದವರು. ಮೇಲಿನ ಸ್ತ್ರೀ ಪಾತ್ರಗಳು ಸನಾತನ

ಸಂಪ್ರದಾಯದ ಮೌಲ್ಯಗಳಿಗೆ ತಲೆಬಾಗಿವೆ. ಸ್ತ್ರೀಯರು ಪುರುಷನ ಸುಖ ಮತ್ತು ಶ್ರೇಯಸ್ಸನ್ನು ಬಯಸುವ ಪರತಂತ್ರ ಜೀವಿಗಳು. ಇಲ್ಲಿಯ ಎಲ್ಲಾ ಗೃಹಣಿಯರು ಪುರುಷನ ಅಡಿಯಾಳಾಗಿ ಜೀವಿಸುವದರಲ್ಲಿ ಸುಖ ನೆಮ್ಮದಿ ಕಂಡಿದ್ದಾರೆ.

ಸ್ವಾತಂತ್ರ್ಯಪೂರ್ವ ಕನ್ನಡ ಕಾದಂಬರಿಗಳನ್ನು ಪರಿಶೀಲಿಸಿದಾಗ ಆ ಕಾಲಾವಧಿಯ ಸ್ತ್ರೀ ಪಾತ್ರಗಳು ತಾಯ್ತನದ ಹಂಬಲವುಳ್ಳವುಗಳಾಗಿದ್ದವು. ಇಲ್ಲಿ ಎಲ್ಲಾ ತಾಯಂದಿರ ಆದರ್ಶ ಮುಖವಾಡಗಳನ್ನು ನೋಡಬಹುದು. ಸ್ತ್ರೀಗೆ ತಾಯ್ತನವೇ ಶ್ರೇಷ್ಠವೆಂದು ಪರಿಭಾವಿಸಿರುವ ಪ್ರಬುದ್ಧ ಪದ್ಮನಯನೆ ಕಾದಂಬರಿಯ ಮನಮೋಹಿನಿ, 'ಇಂದಿರಾಬಾಯಿ' ಕಾದಂಬರಿಯ ಅಂಬಾಬಾಯಿ, ಜಲಾಜಾಕ್ಷಿ, 'ಇಂದಿರಾ' ಕಾದಂಬರಿಯ ದೇವಯಾನಿ ಇದೇ ನೆಲೆಯಲ್ಲಿ ಚಿತ್ರಣಗೊಂಡಿದ್ದಾರೆ. ಇಂದಿರಾ ಕಾದಂಬರಿಯ ವಿಧವೆ ದೇವಯಾನಿ ತನ್ನನ್ನು ಪ್ರೀತಿಸಿ ಬೇರೊಬ್ಬಳನ್ನು ಮದುವೆಯಾದ ಕಮಲಾಕಾಂತನ ಮಗ ರಮಾಕಾಂತನನ್ನು ಕಣ್ತುಂಬ ನೋಡಿ "ನಾನು ಕಮಲಾಕಾಂತನ ಪತ್ನಿಯಾಗಿದ್ದರೆ ರಮಾಕಾಂತನು ತನ್ನ ಮಗನೆ ಆಗಿರುತ್ತಿದ್ದನಲ್ಲವೆ?(ಪು.೨೨) ನಭಾ ಕಾದಂಬರಿಯಲ್ಲಿನ ರಮಾಮಣಿಯ ಭಾವನ ಮಗಳು ಬಾಲವಿಧವೆ ನಭಾಳನ್ನು ಕಣ್ಣರೆಪ್ಪೆಯಲ್ಲಿಟ್ಟು ರಕ್ಷಿಸಿದರೆ, ಇಂದಿರಾಬಾಯಿ ಕಾದಂಬರಿಯ ಸುಶೀಲೆ ಬಡತನವನ್ನು ಹಾಸಿ ಹೊದ್ದವಳು. ಅಷ್ಟು ಇದ್ದಾಗೂ ಮಗ ಭಾಸ್ಕರನನ್ನು ವಿದ್ಯಾವಂತನನ್ನಾಗಿಸುವ ಹಂಬಲದಿಂದ ದುಃಖ ಪಟ್ಟಿದ್ದಾಳೆ.

ಅತ್ತಿಗೆ ನಾದಿನಿಯರಾಗಿ ಬಾಳುವ ಈ ಎರಡು ಪಾತ್ರಗಳು ತಾವು ಹುಟ್ಟಿ ಬೆಳೆದ ಮನೆ ಇಲ್ಲವೆ ಊರನ್ನು ತ್ಯಜಿಸಿ ಬೇರೊಂದು ಅಪರಿಚಿತ ಮನೆಯಲ್ಲಿ ಜೀವನ ಸಾಗಿಸಬೇಕಾಗುವುದು. ಅತ್ತಿಗೆ-ನಾದಿನಿ ಪಾತ್ರಗಳು ಮೊದಲು ಮಹಿಳೆಯಾಗಿ, ಅಣ್ಣನ ಹೆಂಡತಿಯಾಗಿ ಅತ್ತಿಗೆಯೆಂದು ಕರೆಯಿಸಿಕೊಳ್ಳುತ್ತಾಳೆ. ಬೇರೊಂದು ಮನೆಯಲ್ಲಿ ಜೀವನ ನಡೆಸಬೇಕಾದ ಸ್ತ್ರೀಗೆ ಗಂಡನ ಮನೆಯು ಪರಕೀಯವಾಗಿ ನಡೆಸಬೇಕಾದ ಪರಿಸ್ಥಿತಿಗೆ ಹೊಂದಿಕೊಂಡು ಜೀವನ ಸಾಗಿಸಿದ್ದಾರೆ. ಪರಸ್ಪರ ಪ್ರೀತಿ, ಪ್ರೇಮದಿಂದ ನಡೆದುಕೊಂಡವರು ಇದ್ದಾರೆ. ತನ್ನ ಗಂಡನ ಅಕ್ಕಂದಿರನ್ನು ತನಗಿಂತ ಹಿರಿಯರು ಎಂಬ ಕಾರಣಕ್ಕಾಗಿಯೇ ಅವರನ್ನು ತಾಯಿಯ ಸ್ವರೂಪದಲ್ಲಿ ಗೌರವಾದರಗಳಿಂದ ಕಾಣುತ್ತಾರೆ. ಅತ್ತಿಗೆ ನಾದಿನಿಯರಲ್ಲಿ ಮತ್ಸರ ಸಾಧಿಸುವ ಇಲ್ಲವೆ ವಿರೋಧಿಸುವ ಪ್ರಸಂಗಳು ಅಧಿಕ. ಮದುವೆಯಾಗಿರುವ ನಾದಿನಿಯರು ಅತ್ತೆಯರ ಮೇಲೆ ಅಧಿಕಾರ ಚಲಾಯಿಸಿದ್ದಾರೆ. ಮೊದಲ ಘಟ್ಟದ ಸ್ವತಂತ್ರ್ಯಪೂರ್ವ ಕನ್ನಡ ಕಾದಂಬರಿಗಳಲ್ಲಿ ಇದನ್ನು ಗಮನಿಸಲಾಗಿ, 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅತ್ತಿಗೆ ಸೀತಮ್ಮ ಸೌಮ್ಯಗುಣವುಳ್ಳ ತ್ಯಾಗಮೂರ್ತಿಯಾಗಿದ್ದಾಳೆ. ಪತಿಯಾಗಿ ಬಂದ ನಾದಿನಿ [illegible] ಅತ್ತಿಗೆ ಸೀತಮ್ಮಳನ್ನು ಬೈಯಿಸುವದಕ್ಕಾಗಿಯೇ ಅಡಿಗೆಗೆ ಹೆಚ್ಚಿನ ಉಪ್ಪು ಹಾಕುವುದು, ಇಲ್ಲವೆ ಮರಳು

ಬೆರೆಸುವುದು, ಸುಳ್ಳು ಚಾಡಿ ಹೇಳುವ ಮೊದಲಾದ ಅಪವಾದಗಳನ್ನು ಹೊರಿಸುತ್ತಾಳೆ. ಇಷ್ಟಕ್ಕೆ ತೃಪ್ತಳಾಗದೆ ಸೀತೆ ಉಡುವ ಸೀರೆಯನ್ನು ಸಹ ಉಟ್ಟುಕೊಳ್ಳದಂತೆ ತೂತು ಹಾಕುವುದು ಮುಂತಾದ ಉಪಟಳ ನೀಡುತ್ತಾಳೆ. ಇಲ್ಲಿ ಯಾವುದೇ ಕಾರಣವಿಲ್ಲದೆ ಸೀತೆಗೆ ತೊಂದರೆ ಕೊಡುವ ಸಾತುವಿನ ಪಾತ್ರ ಚೇಷ್ಟೆಯ ಸ್ವಭಾವದ್ದಾಗಿ ತೋರಿದೆ.(ಪು.೮೩-೮೯)

ಹೀಗೆ ಅತ್ತೆಗೆ ನಾದಿನಿಯರು ಒಂದೆಡೆ ಹೊಟ್ಟೆಕಿಚ್ಚಿನಿಂದ ವೈರ, ದ್ವೇಷ, ಮತ್ಸರದಿಂದ ಕಂಡಿದ್ದರೆ, ಇನ್ನೊಂದೆಡೆ ಸಖಿ ಸ್ನೇಹಿತೆಯರಾಗಿ ಅಕ್ಕ ತಂಗಿಯರಂತೆ ಸುಖ ದುಃಖದಲ್ಲಿ ಭಾಗಿಯಾದಂತೆ ಚಿತ್ರಣಗೊಂಡಿದ್ದಾರೆ. ಅತ್ತಿಗೆ ನಾದಿನಿಯರ ಪಾತ್ರಗಳು ಬಹು ವಿಶಿಷ್ಟ ನೆಲೆಯುಳ್ಳ ಪಾತ್ರಗಳಾಗಿ ಕಂಡಿವೆ.

ಸವತಿಯ ಪಾತ್ರಗಳು ಬಹುಪತ್ನಿತ್ವಕ್ಕೆ ಸ್ಥಾನವಿದ್ದಲ್ಲಿ ಕಾಣಸಿಗುವವು. ಒಬ್ಬ ಪುರುಷನನ್ನು ಇಬ್ಬರು ಹೆಣ್ಣುಮಕ್ಕಳು ಮದುವೆಯಾಗಿದ್ದು ಅವರು ಒಬ್ಬರಿಗೊಬ್ಬರು ಸವತಿಯರಾಗುವರು. ಸವತಿಯರೆಂದ ಇಬ್ಬರು ಸಮಾನವಾದ ಹಕ್ಕು ಬಾಧ್ಯತೆಗಳನ್ನು ಹೊಂದಿರುವರು. ಈ ರೀತಿಯಾದ ಹಕ್ಕು ಬಾಧ್ಯತೆಯನ್ನು ಪಡೆದವರೆ ಸವತಿಯರು. ಪತಿಯಾದವನು ಎರಡನೆಯ ಮದುವೆಯಾಗುವನೆಂದು ತಿಳಿದಾಗಲೂ ಸತಿಯ ಮನಸ್ಸು ಒಪ್ಪದಿದ್ದರೂ ಅದಕ್ಕೆ ಮೌನವಾಗಿಯೇ ಸಮ್ಮತಿಸಬೇಕಾಗಿತ್ತು. ಸ್ತ್ರೀಯ ಒಡಲಾಳದ ನೋವು ಗಂಭೀರ ದೃಷ್ಟಿಯದಾಗಿದ್ದರೂ ಆಕೆ ಅದನ್ನು ಗಂಡನೆದಿರು ಹೇಳಿಕೊಳ್ಳುವಂತಿರಲಿಲ್ಲ ಅಂತಹ ವ್ಯವಸ್ಥೆಯನ್ನು ಪ್ರತಿಭಟಿಸಿ ನಿಲ್ಲುವ ಶಕ್ತಿಯನ್ನು ಅವಳು ಆಗ ಪಡೆದುಕೊಂಡಿರಲಿಲ್ಲ. ಪುರುಷನಾದರೂ ತಾನು ಎರಡನೆಯ ಮದುವೆಯಾಗುವ ವಿಚಾರವನ್ನು ಪತ್ನಿಯ ಮುಂದಿಟ್ಟು ಅವಳ ಒಪ್ಪಿಗೆಗಾಗಿ ಕಾಯುವುದು ಅಂದಿನ ವ್ಯವಸ್ಥೆಗೆ ಸಲ್ಲದ ಮಾತಾಗಿತ್ತು.

ಪುರುಷ ಪ್ರಧಾನ ಸಮಾಜದಲ್ಲಿ ಈ ವ್ಯವಸ್ಥೆಯನ್ನು ವಿರೋಧಿಸಿ ಬಾಳಲಾಗದ ಸ್ತ್ರೀಯ ಸಿಟ್ಟನ್ನು ಹೊಸದಾಗಿ ಬರುವ ಸ್ತ್ರೀಯರ ಮೇಲೆ ತೀರಿಸಿಕೊಳ್ಳುತ್ತಾಳೆ. ಈ ಬಗೆಯ ಸವತಿ ಮತ್ಸರ ಸಹಜವಾದುದೆ. ಪುರುಷನ ಪರವಾಗಿರುವ ಸಮಾಜದಲ್ಲಿ ಎಂಥದೋ ಕಾರಣಗಳನ್ನು ಮುಂದೊಡ್ಡಿ ಇನ್ನೊ ಪತ್ನಿಯಿರುವಾಗಲೆ ಎರಡನೆಯ ಮದುವೆಯಾಗುವುದನ್ನು ಹಲವು ಕಾದಂಬರಿಗಳು ಸ್ಪಷ್ಟಪಡಿಸುತ್ತವೆ. 'ಪ್ರಬುದ್ಧ ಪದ್ಮನಯನೆ' ಕಾದಂಬರಿಯ ಪದ್ಮನಯನೆ ಮತ್ತು ಜೀವನ ಕಲೆ ಸವತಿಯರಾದರೂ ಬಹು ಅಕ್ಕರೆಯುಳ್ಳವರು. ಚಿಕ್ಕಂದಿನಿಂದಲೂ ಸ್ನೇಹಿತೆಯರಾಗಿ ತಮಗೆ ತಿಳಿಯದಂತೆ ಯುವರಾಜ ಕಮಲಾಕ್ಷನನ್ನು ಮದುವೆಯಾದರು. ತಾವು ಒಬ್ಬನೆ ಗಂಡನನ್ನು ಪಡೆದುದು ಪುಣ್ಯವೆಂದೆ ಭಾವಿಸುತ್ತಾರೆ. ಬಹುತೇಕ ಸವತಿಯರ ಕುರಿತು ಮತ್ಸರವಿದ್ದರೂ ಅದು ಕೋಪದ ಭರದಲ್ಲಿ ಉದ್ದೀಪನಗೊಂಡಿದ್ದು. ಅದಕ್ಕಾಗಿಯೇ ಅವರು ಸವತಿಯರನ್ನು ಸವತಿಯರನ್ನಾಗಿ ಕಾಣದೆ ತಂಗಿಯರೆಂದೆ ಭಾವಿಸುವ ಹಿಂದೆ ಪುರುಷಪ್ರಧಾನ ವ್ಯವಸ್ಥೆಯ ವ್ಯವಸ್ಥಿತ ಸಂಚೂ ಅಡಗಿರಬಹುದು.

ಕೌಟುಂಬಿಕ ವ್ಯವಸ್ಥೆಯಲ್ಲಿ ಅತ್ತೆ ಸೊಸೆಯರ ಸಂಬಂಧ ತುಂಬಾ ಹಳೆಯದು. ಕುಟುಂಬದ ಮಧ್ಯದಿಂದಲೆ ಅತ್ತೆ ಸೊಸೆಯರ ಸ್ಥಾನಮಾನಗಳು ತಲೆಯೆತ್ತಿದ್ದವು. ತಂದೆ ತಾಯಿ ಮಕ್ಕಳು ಅವರ ಹೆಂಡತಿಯರು ಒಂದೇ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದಾಗ ಅತ್ತೆ ಸೊಸೆಯ ಸಂಬಂಧಗಳು ಬೆಳಕಿಗೆ ಬರಹತ್ತಿದ್ದವು. ಭಾರತೀಯ ಅವಿಭಕ್ತ ಕುಟುಂಬ ಪದ್ಧತಿಯಲ್ಲಿ ಇದು ಅನಿವಾರ್ಯವೂ ಆಗಿದೆ. ಮದುವೆಯ ನಂತರ ವಧುವಿನ ತಾಯಿ ತಂದೆ ಅತ್ತೆ ಮಾವರಿಗೆ ಧಾರೆಯರೆದು ಕೊಡುವಾಗ 'ಇವಳು ಇಂದಿನಿಂದ ನಮ್ಮ ಮಗಳಲ್ಲ ಇವಳು ನಿಮ್ಮ ಮಗಳು. ಏನಾದರೂ ತಪ್ಪು ಮಾಡಿದರೆ ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು' ಎಂದು ಹೇಳುವ ವಾಡಿಕೆ. ಪ್ರಾರಂಭದಲ್ಲಿ ಸೊಸೆಯನ್ನು ಅತ್ತೆ ಮಾವಂದಿರು ಮಗಳಂತೆ ಕಾಣುತ್ತಾರೆ. ದಿನಕಳೆದಂತೆ ಸಂಶಯ ದೃಷ್ಟಿಯಿಂದ ನೋಡುವರು, ಹರಿ ಹಾಯುವದು, ಕಿಡಿಕಾರುವುದು ನಿತ್ಯ ಚಟುವಟಿಕೆಗಳಾಗುವವು. ಈ ಸಮಸ್ಯೆಯಲ್ಲಿ ಅತ್ತೆಯರ ಪಾಲೆ ಅಧಿಕ. ಸರಸ ವಿರಸಗಳಿಂದ ಅತ್ತೆ ಸೊಸೆಯರ ಸಂಬಂಧಗಳನ್ನು ಸ್ವಾತಂತ್ರ್ಯಪೂರ್ವ ಕಾದಂಬರಿಕಾರರು ಚಿತ್ರಿಸಿದ್ದಾರೆ. ಯಾವುದೇ ಪ್ರಮುಖ ಕಾರಣಗಳಿಲ್ಲದೆ ಅತ್ತೆಯಾದವಳು ಸೊಸೆಯನ್ನು ಮಾತ್ಸರ್ಯದಿಂದ ಕಂಡಿದ್ದಾಳೆ. ಇಲ್ಲಿ ಸೊಸೆ ಯಾವ ತಪ್ಪು ಮಾಡದಿದ್ದರೂ ತಪ್ಪಿತಸ್ಥಳಾಗಿ ಅತ್ತೆಯಿಂದಾಗುವ ಶೋಷಣೆಯನ್ನು ಮೌನವಾಗಿಯೆ ಅನುಭವಿಸಿದ್ದಾಳೆ. ಇದಕ್ಕೆ ಸಾಕ್ಷಿಯಾಗಿ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅತ್ತೆ ತಿಮ್ಮಮ್ಮ ಸೊಸೆ ಸೀತೆಯನ್ನು ಕಾರಣವಿಲ್ಲದೆ ಜರೆಯುವಳು ಅನವಶ್ಯಕವಾಗಿ ಕಿರುಕುಳ ಕೊಡುವಳು.

ಈ ರೀತಿಯಾದ ವಾಸ್ತವ ಜೀವನದ ಚಿತ್ರಣವನ್ನು 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ಬಿಚ್ಚಿಟ್ಟಿದೆ. ಆದರೆ ತಿಮ್ಮಮ್ಮ ಸೇಡು ಪ್ರತಿಭಟಿಸಲಾಗದ ಮನಸ್ಥಿಯಿಂದ ಕೋಪಿತಳಾಗಿದ್ದಾಳೆ. ರಂಗವಲ್ಲಿ ಹಾಕುವ ಪ್ರಮೇಯವಿರಬಹುದು, ತೆಂಗಿನಕಾಯಿ ಪ್ರಸಂಗಗಳಿರಬಹುದು(ಮಾ.ಮ.ಪು.೭೨-೭೫), ಇದನ್ನು ಪ್ರತಿಭಟಿಸದಿದ್ದಾಗ್ಲೂ ತಿಮ್ಮಮ್ಮ ಕೂಗುತ್ತಿಯೇನೆ, ತೊಣ್ಣೂರ ರಾಕ್ಷಸಿ, ನಿನಗೇನು ರೋಗ, ಗಯ್ಯಾಳಿ ಗೌಡಿ ಮುಂತಾದ ಅವಾಚ್ಯ ಶಬ್ದಗಳಿಂದ ಬಯ್ಯುವದಲ್ಲದೆ ಕೆನ್ನೆಯ ಮೇಲೆ ಹೊಡೆದು ಮೂಗಿನಿಂದ ರಕ್ತ ಸುರಿಯುವಂತೆ ಮಾಡುತ್ತಾಳೆ. ಒಂದು ದಿನ ಅನ್ನಕ್ಕೆ ಉಪ್ಪು ಹೆಚ್ಚಾಗಿ ಊಟ ಮಾಡಲಾಗದೆ ಇರುವಾಗ ಅತ್ತೆ ತಿಮ್ಮಮ್ಮಳಿಂದ ಬೈಗುಳವಾಗಿ ತಾನು ತಪ್ಪು ಮಾಡಿಲ್ಲವೆಂದು ಸಮರ್ಥಿಸಿಕೊಂಡರೂ ಸೀತೆಗೆ ತಿಮ್ಮಮ್ಮ ಕೊಟ್ಟ ಶಿಕ್ಷೆ, ಒಲೆಯಲ್ಲಿ ಉರಿಯುವ ಕೊಳ್ಳಿಯಿಂದ ಬರೆ ಎಳೆದ ಪ್ರಸಂಗ ಎಂತಹವರನ್ನಾದರೂ ಘಾಸಿಗೊಳಿಸುವುದು. ನಿಷ್ಠಾವಂತಳಾದ ಸೀತೆ, ಕಷ್ಟ ಯಾತನೆ, ದುಃಖವನ್ನು ಯಾರ ಮುಂದೆಯೂ ಹೇಳಿಕೊಳ್ಳದೆ ಅನುಭವಿಸಿದ್ದು ದುರಂತವೆ ಸರಿ.

ಸಮಾಜ ಸುಧಾರಕರಿಂದ ಪ್ರೇರಿತವಾದಂತೆ ತೋರುವ ಇನ್ನುಳಿದ ಅತ್ತೆಯರು ತಮ್ಮಂತೆ ಬಾಳುವ ಸೊಸೆಯರ ನೋವಿಗೆ ಪ್ರತಿಸ್ಪಂದಿಸಿದ್ದಾರೆ. ಸೊಸೆಯನ್ನು ಮಗಳಂತೆ ಕಾಣುವಲ್ಲಿ 'ವಿರಾಗಿಣಿ' ಕಾದಂಬರಿ

ಸಾಕ್ಷಿಯಾಗಿ ನಿಲ್ಲುತ್ತದೆ. ಇಲ್ಲಿ ಸೊಸೆ ಚಂದ್ರಬಾಗೆ ಅತ್ತೆಯನ್ನು ತಾಯಿಯ ಸ್ವರೂಪದಲ್ಲಿ ಕಂಡಿದ್ದರೆ, ಅತ್ತೆ ನರಸಮ್ಮ ಸೊಸೆಯನ್ನು ಮಗಳೆಂದೆ ಆದರಿಸಿದ್ದಿದೆ. ನರಸಮ್ಮ ಚಂದ್ರಭಾಗೆ ನಡುವಿನ ಸಂಶಯ ಪ್ರಸಂಗಗಳು, ಮಾಟ ಮಾಡಿದ ಪ್ರಮೇಯ ಸನ್ಮಾನಗಳಿಂದ ಸಮಾಧಾನ ಮಾಡಿದ ಪ್ರಸಂಗ ವಿರಾಗಿಣಿ ಕ್ಷಮೆ ಕೇಳುವ ಪ್ರಸಂಗ(ಹಿ.ಹೆ,ಪು.೧೧೧) ಕಾದಂಬರಿಯಲ್ಲುಂಟಾಗುವ ಸಮಸ್ಯೆಗಳಿಗೆ ವಿರಾಗಿಣಿಯಿಂದಲೆ ಪರಿಹಾರವೆಂದು ತಿಳಿದಾಗ ಸೊಸೆಯನ್ನು ಉಳಿಸಿಕೊಳ್ಳುವದಕ್ಕಾಗಿ ವಿರಾಗಿಣಿಯ ಕ್ಷಮೆ ಕೇಳುವಳು. ಇದೆ ನೆಲೆಯಲ್ಲಿ ಚಿತ್ರಿತಗೊಂಡ ಅತ್ತೆ ಲಕ್ಷ್ಮೀದೇವಿ, ಸೊಸೆ ಕೃಷ್ಣವೇಣಿ ಅತ್ತೆ ಸೊಸೆ ಸಂಬಂಧಕ್ಕೆ ಉತ್ತಮ ಉದಾಹರಣೆ.

ಸ್ವಾತಂತ್ರ್ಯಾನಂತರದ ಕನ್ನಡದ ಮೊದಲ ಕಾದಂಬರಿಗಳು ಅತ್ತೆ ಸೊಸೆಯರ ಸಂಬಂಧವನ್ನು ಆಯಾ ಪಾತ್ರಗಳ ವೈಯಕ್ತಿಕ ಆಸೆ, ಆಕಾಂಕ್ಷೆಗಳು ಅವರು ಜೀವಿಸುವ ಪರಿಸರ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮಯ ಸಂದರ್ಭಕ್ಕನುಗುಣವಾಗಿ ಚಿತ್ರಿಸಿವೆ. ಅತ್ತೆ-ಸೊಸೆ ಸಮಸ್ಯೆ ಬಗೆಹರಿಯಲು ಈ ಜಗತ್ತಿನಲ್ಲಿರುವ ಸೊಸೆಯಂದಿರು ಅತ್ತೆಯನ್ನು ತಾಯಿಯೆಂದು ಅತ್ತೆಯಂದಿರು ಸೊಸೆಯಂದಿರನ್ನು ಮಗಳೆಂದು ಎಲ್ಲಿಯವರೆಗೆ ತಿಳಿಯುವದಿಲ್ಲವೊ ಅಲ್ಲಿಯವರೆಗೆ ಈ ಅತ್ತೆ ಸೊಸೆ ಸಮಸ್ಯೆ ಬಗೆಹರಿಯದು.

ವಿವಾಹ ಬಂಧನ:

ವಿವಾಹ ಬಂಧನ ಪವಿತ್ರವಾದುದೆಂಬ ಸಂಗತಿ ಸ್ವತಂತ್ರ ಕಾದಂಬರಿಗಳಲ್ಲಿ ಮೂಡಿಬಂದಿದೆ. ಶಾರೀರಿಕ ಸುಖದಿಂದ ಪತಿ-ಪತ್ನಿಯರು ಸಾಮರಸ್ಯದಿಂದ ಬಾಳುತ್ತಾರೆಂಬುದನ್ನು ಹೇಳಲಾಗದು. ಸ್ತ್ರೀ ಪುರುಷನಲ್ಲಿ ಪುರುಷ ಸ್ತ್ರೀಯಲ್ಲಿ ಅರಿತು ನಡೆದರೆ ನಿಜವಾದ ದಾಂಪತ್ಯ. ಆದರೆ ಪುರುಷಪ್ರಧಾನ ಸಮಾಜ ಸ್ತ್ರೀಯನ್ನು ಕೇವಲ ಬೋಗದ ವಸ್ತು ಎನ್ನುವ ದೃಷ್ಟಿಯಲ್ಲಿ ನೋಡಿದ್ದೆ ಹೆಚ್ಚು. ಜನಸಾಮನ್ಯರು ಸ್ತ್ರೀಯರನ್ನು ಕೀಳಾಗಿ ಕಂಡದ್ದು ಅಸಹಜವೇನಲ್ಲ. ಸಿಗ್ಮಂಡ್ ಪ್ರಾಯ್ಡ್ ಹಾಗೂ ಶಿಕ್ಷಣ ತಜ್ಞ ರೂಸೋ "ಪುರುಷರ ಕಾಮವನ್ನು ಜಾಗೃತಗೊಳಿಸುವದು ಮತ್ತು ಅವರ ಕಾಮಪಿಪಾಸೆಯ ಪ್ರವೃತ್ತಿಯನ್ನು ನಿರ್ಬಂಧಿಸುವುದು ಸ್ತ್ರೀಯ ಮುಖ್ಯ ಕೆಲಸವಾಗಿದ್ದು ಆಕೆಯು ಪುರುಷನ ಅನ್ಯಾಯವನ್ನು ಸಹಿಸಿ ಜೀವನ ಮುಂದುವರೆಸಬೇಕು" ಎನ್ನುತ್ತಾರೆ. ವಿದ್ವಂಸ ಪ್ರವೃತ್ತಿಯ ಪುರುಷರು ಸ್ತ್ರೀಯರನ್ನು ಉದಾರತೆಯಿಂದ ಕಂಡಿಲ್ಲ. ಸ್ವಾತಂತ್ರ್ಯಪೂರ್ವದ ಸ್ವತಂತ್ರ ಕಾದಂಬರಿಗಳಲ್ಲಿ ಪುರುಷ ಸಮಾಜದ ನಿರ್ಬಂಧಗಳಲ್ಲಿ ಬಂಧಿಯಾಗಿದ್ದು ಇಂತಹ ವ್ಯವಸ್ಥೆಯ ಆಶಯಗಳಿಗೆ ತನ್ನನ್ನು ತಾನು ಹೊಂದಿಸಿಕೊಳ್ಳುವದರಲ್ಲಿಯೆ ಸುಖವನ್ನು ಕಂಡುಕೊಂಡಿದ್ದಾಳೆ. ಅಶಿಕ್ಷಿತ ಸ್ತ್ರೀಯರ ವಿಷಮ ಮತ್ತು ಸುಶಿಕ್ಷಿತ ಸ್ತ್ರೀಯರ ವಿಷಮ ದಾಂಪತ್ಯವನ್ನು ವೈಚಾರಿಕ ನೆಲೆಯಲ್ಲಿ ಗುರುತಿಸಿದೆ.

ಬ್ರಾಹ್ಮಣ ಜನಾಂಗದ ಕೆಲವು ಸ್ತ್ರೀಯರು ವಿದ್ಯಾವಂತೆಯರಾದರೆ ಇನ್ನೂ ಕೆಲವರು ಅವಿದ್ಯಾವಂತೆಯರು. ಇವರು ಬದುಕುವ ಪರಿಸರವೇ ಸಂಪ್ರದಾಯಸ್ಥ ವಾತಾವರಣವಾಗಿದ್ದರಿಂದ ಆ ಚೌಕಟ್ಟಿನಲ್ಲಿಯೇ ಸುಖ ಸಂತೋಷ ಕಂಡಿದ್ದಾರೆ. ಇಲ್ಲಿಯ ಸ್ತ್ರೀಯರು ಕೇವಲ ಸುಖಕ್ಕಾಗಿ ಹಂಬಲಿಸುತ್ತಿಲ್ಲ. ಎಲ್ಲವೂ ತಮ್ಮ ಪಾಪದ ಫಲವೆಂದು ಬಾವಿಸಿದ್ದೇ ಹೆಚ್ಚು. ಅದಕ್ಕೆ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಸೀತೆ, ಸುಶೀಲೆ ಕಾದಂಬರಿಯ ಸುಶೀಲೆ, ವಿರಾಗಿಣಿ ಕಾದಂಬರಿಯ ಚಂದ್ರಭಾಗೆ ಈ ಎಲ್ಲಾ ಸ್ತ್ರೀಯರು ವಿವಾಹ ಬಂಧನದ ವಿಷಮ ದಾಂಪತ್ಯಕ್ಕೆ ಉದಾಹರಣೆಯಾಗಿದ್ದಾರೆ. ಕುಟುಂಬ ಜೀವನದಲ್ಲಿ ಗಂಡು ಹೆಣ್ಣಿಗೆ ಸಮಾನ ಹಕ್ಕು ಮತ್ತು ಅಧಿಕಾರಗಳಿರಬೇಕೆಂಬುದು ತಾತ್ವಿಕವಾಗಿ ಒಪ್ಪಿತ ವಿಚಾರ. ಅನುಷ್ಠಾನದಲ್ಲಿ ಈ ಅಂಶ ಕಡೆಗಣಿಸಲ್ಪಟ್ಟದೆ ಕೃಷಿಯ ಅವಿಷ್ಕಾರವಾದ ಮೇಲೆ ಸ್ತ್ರೀ ಪುರುಷರ ನಡುವಿನ ಸ್ಥಾನಮಾನ ಭಿನ್ನವಾಗಿದೆ. ಹೊಸಗನ್ನಡದ ಆರಂಭಕಾಲಕ್ಕಾಗಲೆ ಸಮಾಜವು ಭಾರತೀಯ ಸ್ತ್ರೀಯನ್ನು ಆದರ್ಶನಾರಿಯನ್ನಾಗಿ ಕಾಣಲು ಇಚ್ಚಿಸಿತು. ಈ ಆದರ್ಶ ಕಲ್ಪನೆಯಿಂದಾಗಿಯೆ ಸ್ತ್ರೀಯರ ಮೇಲೆ ನಿರ್ಬಂಧನೆಗಳನ್ನು ಹೇರಿತು. ಇಂತಹ ಶೋಚನಿಯ ಸ್ಥಿತಿ ಸ್ತ್ರೀಯರ ಈ ಸಮಸ್ಯೆಗಳಿಗೆ ಕಾದಂಬರಿಕಾರರು ಸ್ಪಂದಿಸಿದರು. ಸ್ತ್ರೀ ಸುಧಾರಣೆಯ ಆಶಯಕ್ಕೆ ಹಾತೊರೆದರು. ಅಲ್ಲಿಯ ವಾಸ್ತವ ಚಿತ್ರಣವನ್ನು ತೆರೆದಿಡಲು ಪ್ರಯತ್ನಿಸಿದ್ದಾರೆ. ಆದರೆ ಪರಿಹಾರವನ್ನು ಸೂಚಿಸುವ ಪ್ರಯತ್ನ ಮಾಡಿದಂತೆ ಕಾಣಿಸುವುದಿಲ್ಲ.

ಕನ್ನಡ ಕಾದಂಬರಿಯ ಚರಿತ್ರೆಯಲ್ಲಿ 'ಸೂರ್ಯಕಾಂತ' ಮೊದಲ ಕಾದಂಬರಿಗಳಲ್ಲೊಂದು. ಐತಿಹಾಸಿಕವೆಂದು ಕಂಡರೂ ಇದು ಸಾಮಾಜಿಕ ಕಾದಂಬರಿ. ಕೌಟುಂಬಿಕ ಸಂಬಂಧದ ಹಿನ್ನೆಲೆಯನ್ನು ವಿಸ್ತರಿಸುವುದು. ಸೂರ್ಯಕಾಂತನ ತಾಯಿಯ ಕುರಿತಾಗಿ ಕಾದಂಬರಿಯಲ್ಲಿ ಬರುವ ಮಾತುಗಳು ಮುಖ್ಯವಾಗಿ ಉಡುಗೆ ತೊಡುಗೆ ಬಗ್ಗೆ ಅಭಿಲಾಷೆಯ ಅಭಿಪ್ರಾಯವಿರುವುದು. ಸೂರ್ಯಕಾಂತನ ತಂದೆಗೆ ತನ್ನ ಮಗನನ್ನು ನಿಜವಾದ ವಿದ್ಯಾಭೂಷಿತ ಮಾಡಬೇಕೆಂಬ ಆಪೇಕ್ಷೆ. ಆದರೆ ಬಡತನದ ಕಾರಣದಿಂದ ಅದು ಸಾಧ್ಯವಾಗುವದಿಲ್ಲ. ಸೂರ್ಯಕಾಂತ ಮತ್ತು ಅವನ ತಂಗಿ ಪ್ರೇಮಾವತಿ ಅವರಿಬ್ಬರು ಅನ್ಯೋನ್ಯವಾಗಿರುವಾಗ ಶಿಕ್ಷಣದ ಕಾರಣದಿಂದ ಸೂರ್ಯಕಾಂತನ ಅಗಲಿಕೆಯ ಸಂದರ್ಭಕ್ಕೆ ತಾಯಿ ಸಂಕಟಪಡುತ್ತಾ ಕಳವಳಿಸುವಳು. ಪ್ರೇಮಾವತಿ ಸಹೋದರನ ಯೋಗಕ್ಷೇಮದ ಬಗ್ಗೆ ಬಹುಪ್ರೇಮದಿಂದ ಹಾರೈಸಿಕೊಳ್ಳುತ್ತಾಳೆ. ಸೂರ್ಯಕಾಂತನು ನಿನಗೆ ಪ್ರೀತಿಪಾತ್ರವಾದ ವಸ್ತುಗಳನ್ನು ತರುತ್ತೇನೆ. ಅಪ್ಪನ ಕಡೆಯಿಂದ ಹೇಳಿಸಿಕೊಂಡು ಓದು ಬರಹ ಕಲಿತು ಬುದ್ಧಿವಂತಳಾಗಬೇಕೆಂದು ಹೇಳಿರುವ ಮಾತು ಕೌಟುಂಬಿಕ ಬದ್ಧತೆಯನ್ನು ಸೂಚಿಸುವುದು.

ಸೂರ್ಯಕಾಂತ ಕಾದಂಬರಿಯಂತೆ 'ಚಂದ್ರಪ್ರಭಾ' ಲಕ್ಷಣ ಭೀಮರಾವ ಗದಗಕರರ ಪ್ರಮುಖ ಕೃತಿ. ಕೌಟುಂಬಿಕ ಚೌಕಟ್ಟಿನ ಉಜ್ವಲತೆಯನ್ನು ಸ್ತ್ರೀ ಪಾತ್ರದ ಹಿರಿಮೆ ಗರಿಮೆಯನ್ನು ಪಡೆದ ಕಾದಂಬರಿ. ಚಂದ್ರಪ್ರಭಾ, ಕೃಪಾಶೀಲ ಮತ್ತು ಭಾಗ್ಯಶೀಲೆ ದಂಪತಿಗಳ ಮಗಳು. ಕೃಪಾಪೋಷಿತ ಮಗನಾದ ಕುಬುದ್ಧಿಯು ಚಂದ್ರಪಭೆ ಜನಿಸಿದ ತರುವಾಯ ಮತ್ಸರ ಭಾವನೆಯ ಪರಾಕಾಷ್ಠೆ ಮೆರೆಯುವ ವಿಷಯವನ್ನು ಒಳಗೊಂಡಿದೆ. ಚಂದ್ರಪ್ರಭೆ ಸುಶೀಕ್ಷಿತಳಾಗಿ ಮನಮೋಹನರಾಯನೊಡನೆ ವಿವಾಹ ಬಂಧನದಲ್ಲಿ ಬದುಕುಸಾಗಿಸಲು ಕುಬುದ್ಧಿ ಅವರಿಗೆ ಕೇಡು ಬಯಸಿದಷ್ಟೂ ವಿವಾಹದ ಸಂಬಂಧ ಗಟ್ಟಿಯಾಗುತ್ತಾ ಹೋಗಿರುವುದು ಕಂಡುಬರುತ್ತದೆ. ಬಂಡಾಯದಲ್ಲಿ ಮನಮೋಹನ ಭಾಗವಹಿಸಿದಂತೆ ಬಿಂಬಿಸುವನು ಅದನ್ನು ಚಂದ್ರಸಭೆ ಪತಿಪರವಾಗಿ ವಕಾಲತ್ತು ವಹಿಸಿ ಪತಿಯನ್ನು ನಿರಪರಾಧಿಯೆಂದು ಸಾಬೀತುಪಡಿಸುವ ಪ್ರಸಂಗ ಮನನೀಯವಾದದ್ದು. ಅಪರಾಧಿ ಸ್ಥಾನಕ್ಕೆ ಹೋಗಿ ಬಂಧನದಿಂದ ಹೊರಬಂದು ತಂದೆಯಿಂದಲೆ "ಶಬಾಸು ಮಗಳೆ ಗಂಡಸು ಮಕ್ಕಳಿಲ್ಲವೆಂಬ ಭೇದವನ್ನು ನೀನು ಹೊಗಲಾಡಿಸಿದೆ" (ಚಂದ್ರಪ್ರಭಾ ಪುಟ.೯೪) ಕೌಟುಂಬಿಕ ಬಂಧನ ಮತ್ತಷ್ಟು ಬೆಸೆಯುವಂತೆ ಚಂದ್ರಪ್ರಭೆ, ಮನಮೋಹನ, ಚಂದ್ರಪ್ರಭೆಯ ತಂದೆ ಇವರ ನಡುವಿನ ಕೌಟುಂಬಿಕ ಬಂಧ ಮತ್ತಷ್ಟು ಗಟ್ಟಿಗೊಂಡಿದೆ. ಈ ರೀತಿಯ ಕೌಟುಂಬಿಕ ಬಂಧನ ವಿಶೇಷವಾಗಿದ್ದವು. ಅದೇ ರೀತಿಯಾಗಿ ಕುಬುದ್ಧಿಯ ಹೆಂಡತಿ ವಿಲಾಸಿನಿಯ ಕೆಟ್ಟ ಚಾರಿತ್ರ್ಯದ ಬಗ್ಗೆ ಹೇಳುವಾಗ ಲೇಖಕರು "ಬಹುತರ ನೀತಿ ಅನೀತಿಗಳಿಗೆ ಪುರುಷರ ಆಚಾರವೇ ಪ್ರಬಲವಾದ ಕಾರಣವಾಗಿರುವುದು"(ಪುಟ.೧೪೯). ಪುರುಷನ ಹೊಣೆಗಾರಿಕೆ ಸಮಾಜ ಮತ್ತು ಕುಟುಂಬದ ಬಂಧನಕ್ಕೆ ಕಾರಣೀಭೂತವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವಾಗ್ದೇವಿ ಕಾದಂಬರಿಯಲ್ಲಿ ಒಂದು ಭ್ರಷ್ಟ ಸಮಾಜದ ವಾಸ್ತವ ಚಿತ್ರವನ್ನು ನೀಡುವ ಸಾಮಾಜಿಕ ಕಾಳಜಿ ಇದೆ. ಅದನ್ನು ಬೋಳಾರು ಬಾಬುರಾಯರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಬಡ ಬ್ರಾಹ್ಮಣ ಕುಟುಂಬದ ತಮ್ಮಣ್ಣಭಟ್ಟ ಹಾಗೂ ಭಾಗೀರಥಿ ದಂಪತಿಗಳ ವಿವಾಹ ಬಂಧ ಆದರ್ಶಪ್ರಾಯವಾದಂತಿದ್ದರೂ ಹಾಗೆ ಕಾಣುವುದಿಲ್ಲ. ಮಗಳ ವಿಚಾರದಲ್ಲಿ ಕೌಟಂಬಿಕ ಹಾಗೂ ವೈವಾಹಿಕ ಸಂಬಂಧದಲ್ಲಿ ಸಂಪೂರ್ಣ ಸೋತುಹೋಗಿದೆ. ಅಭಾಚಾರ್ಯ ವಾಗ್ದೇವಿಯ ವೈವಾಹಿಕ ಬಂಧನ ಮೇಲುನೋಟಕ್ಕೆ ಒಂದು ರೀತಿಯಾಗಿದ್ದರೆ. ಒಳನೋಟ ಬೇರೆಯೇ ಇದೆ. ವೈವಾಹಿಕ ಬಂಧನ ಸಂಪೂರ್ಣವಾಗಿ ವಿಫಲವಾಗಿದೆ. ವಾಗ್ದೇವಿಗೆ ಶಾಸ್ತ್ರೋಕ್ತವಾಗಿ ತಾಳಿ ಕಟ್ಟಿದವನು ಅಬಾಚಾರ್ಯನಾದರೂ ಮೈಮನಸನ್ನು ನೀಡಿ ಪತಿಯೆಂದು ಒಪ್ಪಿಕೊಂಡಿದ್ದು ಚಂಚಲನೇತ್ರರನ್ನು ಸಮಾಜದ ದೃಷ್ಟಿಗಾಗಿ ಗಂಡನಿಗೆ ತಗ್ಗಿ ಬಗ್ಗಿ ನಡೆಯುವಂತೆ ವಾಗ್ದೇವಿ ನಟಿಸುತ್ತಾಳೆ. ಈ ವಿಷಯ ತನ್ನ ಊರಿಗೆ ಅಷ್ಟೆ ಅಲ್ಲ ಸುತ್ತಲಿನ ಊರುಗಳಿಗೂ ತಿಳಿದ ವಿಷಯ. ಗ್ರಹಣದ ನಿಮಿತ್ತ ನದಿಗೆ ಸ್ನಾನ ಮಾಡಲು ಹೋದಾಗ ಆದ ಮುಖಭಂಗಕ್ಕೆ ಪ್ರತಿಕಾರ ನೀಡಲು ಹಾಗೂ ಎಲ್ಲಾ ಆಪಾಧನೆಗಳ ನಿವಾರಣೆಗೆ ತಿಪ್ಪಾಶಾಸ್ತ್ರಿಯ ಸ್ನೇಹ

ಗಟ್ಟಿಗೊಳ್ಳುವದು. ಭೀಮಾಚಾರ್ಯನೊಂದಿಗೆ ಹಣಕಾಸಿನ ಹೊಂದಾಣಿಕೆ. ಬಾಲಮುಕುಂದನಿಗೆ ರೂಪಲಾವಣ್ಯದ ಆಶೆ, ಹೀಗೆ ಕಾದಂಬರಿಯುದ್ಧಕ್ಕೂ ನಡೆಯುವ ಅನಾಚಾರವೇ ದೊಡ್ಡಮಟ್ಟಿನ ಚರ್ಚೆ ಕಾಣುವುದು. ತನ್ನ ವಿವಾಹ ಬಂಧನದಿಂದ ಸೋಲನ್ನು ಅವಳು ಕಠಿಣವಾಗಿ ತೆಗೆದುಕೊಳ್ಳಲಿಲ್ಲ. ಚಿಕ್ಕಮ್ಮನ ಮಗಳು ಶೃಂಗಾರಿಯ ಬದುಕಿನ ಬಂಧನ ಹದಗೆಡಿಸುವವಳೇ ವಾಗ್ದೇವಿ. ಕಾದಂಬರಿಯಲ್ಲಿ ವಿವಾಹ ಬಂಧನ ಸಂಪೂರ್ಣವಾಗಿ ವಿಫಲವಾಗಿದೆ. ಆದರೂ ನೇಮಿರಾಜ ಶೆಟ್ಟಿಯ ಹೆಂಡತಿ ಪತಿವ್ರತಾ ಸ್ತ್ರೀ ಬದುಕಿನಲ್ಲಿ ಬದುಕಿನ ಬಂಧನ ಶೃಂಗಾರಿಯಿಂದ ಸೋಲಾಯಿತು. ವಿವಾಹದ ಜೀವನ ಸಂಪೂರ್ಣ ವಿಫಲವಾಗಿದೆ. ಒಟ್ಟಾರೆ ವಾಗ್ದೇವಿ ಕಾದಂಬರಿಯ ನಾಯಕಿ ಪಾತ್ರ ಕೆಡುಕಿನ ಪ್ರತೀಕವಾಗಿ ಚಿತ್ರಿತವಾಗಿದ್ದರೂ ಅದರಲ್ಲಿ ಸಮೂಹದ ದೌರ್ಬಲ್ಯಗಳನ್ನು ಬಯಲಿಗೆಳೆಯಲಾಗಿದೆ. ಇಲ್ಲಿ ಲೇಖಕರ ಕಾಳಜಿ ಸ್ತ್ರೀಪರವಾಗದೆ ಒಟ್ಟು ಸಮಾಜದ ಪರವಾಗಿರುವ ಹಿನ್ನೆಲೆಯನ್ನು ಗಮನಿಸಲಾಗಿದೆ.

ಇಲ್ಲಿ ಸ್ತ್ರೀವಾದಿ ಅಧ್ಯಯನಕ್ಕಿಂತ ಮಿಗಿಲಾಗಿ ಪುರುಷಪರ ಅಧ್ಯಯನವಾಗಬಹುದೆಂಬ ಅನುಮಾನದ ಅಗತ್ಯವಿಲ್ಲ. ಜೈವಿಕವಾದ ಲಿಂಗಭೇದವನ್ನನುಸರಿಸಿ ಸ್ತ್ರೀಯರನ್ನು ಅವಕಾಶವಂಚಿತರನ್ನಾಗಿಸಿದೆ. ಆರೋಗ್ಯಕರ ಸಹಬಾಳ್ವೆಯ ವ್ಯವಸ್ಥೆ ಮಾಡಬೇಕೆಂಬುದೇ ಸ್ತ್ರೀವಾದಿ ಚಿಂತನೆಯ ಅಂತಿಮ ಗುರಿಯಾಗಿದೆ. ಭ್ರಷ್ಟ ವ್ಯವಸ್ಥೆ ಸ್ತ್ರೀ ಪರವಾಗಿಯೂ ಇಲ್ಲ. ಈ ವ್ಯವಸ್ಥೆಯ ಪರವೂ ಇಲ್ಲ. ಅದು ಕೇವಲ ಮನುಷ್ಯತ್ವದ ಪರವಾಗಿಲ್ಲವೆಂಬುದು ಇಲ್ಲಿ ಕಾಣುವುದು. ಅದು ಕೇವಲ ಕೆಡುಕಿನ ಪರವಾಗಿದೆ. ಸತ್ಯ ಬೇರೆ ಸ್ವರೂಪದಲ್ಲಿ ಚರ್ಚಿತಗೊಂಡಿದೆ. ಕೌಟಂಬಿಕ, ವೈವಾಹಿಕ ಬಂಧನ ಕೆಡಲು ಕಾರಣ ಕೇವಲ ಸ್ತ್ರೀ ಅಥವಾ ಪುರುಷನೆಂದು ಹೇಳಲಾಗದು. ಎರಡೂ ಕಡೆಯಿಂದಾದರೆ ಮಾತ್ರ ಚಪ್ಪಾಳೆ ಸಾಧ್ಯ.

'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ರಾಮಾಯಣದ ಆದರ್ಶ ಮಾದರಿಯಾಗಿದ್ದು ಕಾದಂಬರಿಯ ಶೀರ್ಷಿಕೆಯಂತೆ ದುಷ್ಟರು ಅವರವರ ಕರ್ಮಫಲವನ್ನುಣ್ಣುತ್ತಾರೆ. ಶಿಷ್ಟರ ತಾಳ್ಮೆಗೆ, ಸಾತ್ವಿಕ ಬದುಕಿಗೆ ಜಯವಾಗುತ್ತದೆ ಎಂಬ ಸಾಮಾನ್ಯ ನೀತಿ ಭೋದೆ ಈ ಕಾದಂಬರಿಯಲ್ಲಿದೆ. ಇಂತಹ ಕಾದಂಬರಿಯಲ್ಲಿ ಕೌಟುಂಬಿಕ ಸಂಬಂಧ ವಿವಾಹ ಬಂಧನಗಳ ಕೀಕಲಾಟವಿದೆ. ಈ ಎರಡು ಬಂಧನಗಳಲ್ಲಿ ಹಳೆ ಮೈಸೂರು ಪ್ರದೇಶದ ಜನರ ಜೀವನ, ಆಚಾರ, ವಿಚಾರ ನಂಬಿಕೆ ಶ್ರದ್ಧೆಗಳನ್ನು ದಾಖಲೀಕರಿಸಿದ ದಾಖಲುಕಾರನ ರೀತಿಯಲ್ಲಿ ಪುಟ್ಟಣನವರು ಚಿತ್ರಿಸಿದ್ದಾರೆ. ಸದಾಶಿವ ದೀಕ್ಷಿತರು ಮೈಸೂರು ಒಡೆಯರ ಕೃಪೆಗೆ ಪಾತ್ರರಾಗಿದ್ದವರು ಕೌಟುಂಬಿಕ ಸ್ಥಿತಿಯಲ್ಲಿ ಕೊರಗಿದವರಾಗಿದ್ದಾರೆ. ವಯಸ್ಸಾದ ದೀಕ್ಷಿತರು ತಾಯಿ ಪಾರ್ವತಿಯೊಂದಿಗೆ ಮಗ ಮಹಾದೇವನನ್ನು ಬೆಳೆಸಿದರು. ದೀಕ್ಷಿತರು ಸಂಜಯವಾಡಿಯ ನೀಲಕಂಠ ಜ್ಯೋತಿಸರ ಮಗಳು ತಿಮ್ಮಮ್ಮಳನ್ನು ಎರಡನೆಯದಾಗಿ

ಮದುವೆಯಾದರು. ವಿವಾಹ ಬಂಧನ ಕಷ್ಟ ಸುಖವನ್ನರಿತವನು. ಮಲಮಗನಾದರೂ ಮಹಾದೇವನನ್ನು ತಿಮ್ಮಮ್ಮಬಹು ಪ್ರೀತಿಯಿಂದಲೇ ಕಂಡಳು. ಕೌಂಟುಂಬಿಕವಾಗಿ ಹಲವಾರು ಬಂಧಕ್ಕೆ ಬಲಿಯಾಗುವರು. ಕಷ್ಟ ಸುಖಕ್ಕೆ ಬಲಿಯೆಂದರೆ ಮಲಮಗ ಮಹಾದೇವ ಸೋದರ ಮಾವ ಸಾಂಭಾಶಾಸ್ತ್ರಿಯ ಮೊಮ್ಮಗಳು ಸೀತೆಯನ್ನು ವಿವಾಹವಾಗುವನು. ಸೀತೆ ಸತಿ ಸಾಧ್ವಿ, ಸೀತೆ ನಡೆ ನುಡಿಗಳಲ್ಲಿ ಸುಶೀಲೆಯೂ ಸುಂದರಿಯೂ ಆಗಿದ್ದವಳು. ಮಹಾದೇವನೊಂದಿಗೆ ವಿವಾಹ ಬಂಧನಕ್ಕೊಳಗಾಗಿ ಕಷ್ಟ ಕೋಟಲೆಗಳನ್ನು ಎದುರಿಸುವಳು. ಮಹಾದೇವನ ವಿದ್ಯಾವಂತಿಕೆಯ ಪಂತ ನಾರಪ್ಪಯ್ಯನ ಬಳಿ ಸಾಗಿತು. 'ಏಟು ಮುಂಚು ಓದು ಹಿಂಚು' ಎಂಬ ಸಿದ್ಧಾಂತವುಳ್ಳ ನಾರಪ್ಪರ ಕುಟಲ ಶಿಷ್ಯರ ದೆಸೆಯಿಂದಾಗಿ ನಾಲ್ಕು ತಿಂಗಳು ಆರೈಕೆಯಾಗುವಷ್ಟೆ ಮಟ್ಟಿನ ದ್ವೇಷ ಸಾಧಿಸಿದ್ದನು. ಇದು ಕುಟುಂಬದ ಹಾಗೂ ಗುರುವಿನ ನಡುವಣ ವೈಷಮ್ಯಕ್ಕೆ ಕಾರಣ ತಿಳಿಯದಂತಿದ್ದರು. ಸ್ತ್ರೀ ಪಾತ್ರಗಳಾದ ಸೀತೆ, ಅತ್ತೆಯನ್ನು ತಿಮ್ಮಮ್ಮ ಸೊಸೆಯನ್ನು ದ್ವೇಷಿಸುತ್ತಾಳೆ. ತಾಯಿಯ ಮಾತಿಗೆ ಪುಟುಕೊಡುವ ಮಗಳು ಒಂಬತ್ತು ವರ್ಷದ ಸಾತಿಯು ಅತ್ತಿಗೆ ಸೀತೆಯ ಮೇಲೆ ಅಪವಾದ ಹೊರಿಸಿ ಅಪರಾಧಿಯಾಗಿಸುವದೇ ತೃಪ್ತಿ ನೀಡುವ ಕೆಲಸವೆಂದುಕೊಂಡವಳು. "ಕೂತರೆ ತಪ್ಪು, ನಿಂತರೇ ತಪ್ಪು" ಎಂಬಂತೆ ಕಾಡುವ ಹೊಡೆಯುವ ಬಡೆಯುವ ಅತ್ತೆಯ ಕಾಟವನ್ನು ಅನುಭವಿಸುವ "ಸೀತೆ ತ್ಯಾಗ, ಸಹನೆ, ಪಾತಿವ್ರತ್ಯ ವಿಧೇಯತೆಗಳ ಮೊತ್ತ. ಏನೇ ಆದರೂ ಈಕೆ ಸತಿ ಧರ್ಮವನ್ನು ಬಿಟ್ಟಿರದವಳು." ಈ ಸೊಸೆಯನ್ನು ಕಂಡರೆ ತಿಮ್ಮಮ್ಮನಿಗೆ ಆಗುತ್ತಿರಲಿಲ್ಲ. ಮಹಾದೇವನಿಗೆ ಮೊದಲು ಬೇರೆ ಒಂದು ಕನ್ಯೆಯನ್ನು ಕೊಡಲು ಮಾತು ನಡೆದಿತ್ತು. ತಿಮ್ಮಮ್ಮನ ಸೋದರ ಮಾವನ ಮೊಮ್ಮಗಳು(ಪು.೬೬) ಈ ಕಾರಣದಿಂದಲೇ ವಿನಾಕಾರಣ ದ್ವೇಷ ಸಾಧಿಸುವಳು. ಸ್ತ್ರೀಯರು ಈ ರೀತಿಯಾದ ದ್ವೇಷ ಅಸೂಯೆ ಮನದಲ್ಲಿಟ್ಟುಕೊಂಡು ಹಟ ಸಾಧಿಸುವುದರಿಂದ ಬದುಕು ಸೋಲುವವು. ಸ್ತ್ರೀಯೇ ಸ್ತ್ರೀಗೆ ವಿರೋಧಿಯಾದ ನಿಲುವು ಇಲ್ಲಿದೆ. ವಿವಾಹದ ಬಂಧನ ನಿಜವಾದ ಬದುಕಿನ ಬಂಧನವಾಯಿತು. ಸಣ್ಣ ಸಣ್ಣ ಸಂಗತಿಗಳು ಕೂಡಾ ಕಲಹಕ್ಕೆ ಕಾರಣವಾದಂತೆ ಕಾಣುವದು. ಸಣ್ಣ ರಂಗವಲ್ಲಿ ಹಾಕಿದಾಗ ತಿಮ್ಮಮ್ಮ "ಇದೇದೇದನಕ್ಕೆ ಬರೆ ಹಾಕಿದೆ".(ಪ್ರ.೭೦) ಅಲ್ಲಕಣೆ ಗಯ್ಯಾಳಿ ಗೌಡಿ ತೆಂಗಿನಕಾಯಿ ಇರಿಸು ಬಾಗಿನಕ್ಕೆ ಎಂದು ನಿನಗೆ ಯಾರು ಹೇಳಿದರು? ನಿನ್ನ ಎಡೆಯಲ್ಲಿ ಬೈಯುವವರು ಯಾರು ನಮ್ಮಪ್ಪ ಹೇಳದೆ ಕೇಳದೇ ಯಾವ ನಿಸೂರಿನಿಂದ ತೆಂಗಿನ ಕಾಯಿಯನ್ನು ಬಾಗಿನಕ್ಕಿಲ್ಲಿ ಇರಿಸಿವೆಯೇ? ನಿನಗೆ ಯಾರೆ ಸ್ವಾತಂತ್ರ್ಯ ಕೊಟ್ಟವರು? ಹೊಟ್ಟೆಗೆ ಅನ್ನ ತಿನ್ನುತ್ತೀಯೋ ಮಣ್ಣು ತಿನ್ನುತ್ತೀಯೋ"(ಪ್ರ.೭೨). ಹೀಗೆ ಸಣ್ಣ ಸಂಗತಿಗೆ ಕಾಡುವಳು. ಅವರ ವೈವಾಹಿಕ ಬದುಕಿನ ಬಂಧನ ಶಾಂತಿ ನೆಮ್ಮದಿಯಿಂದ ಕೂಡಿರಲಿಲ್ಲ.

ಇಲ್ಲಿ ಸಾಮಾಜಿಕ ವಾಸ್ತವದ ಚಲನೆಗಿಂತ ಭಿನ್ನವಾದ ಸಂಪ್ರದಾಯದ ನಿಲುವಿದೆ. ಜಾನಪದೀಯತೆಯ ಜೊತೆಗೆ ನೈತಿಕತೆಗಿಂತ ಭಿನ್ನವಾದ ಪ್ರಾಚೀನವಾದ ಜೀವನದ ಬಗೆಗಿನ ಗೌರವ. ಶ್ರದ್ಧೆ

ಮತ್ತು ಪ್ರೀತಿ ಹಾಗೂ ಹಳೆಯ ಮೌಲ್ಯಗಳು ಹೊಸ ಪರಿವರ್ತನೆಗಳ ಕಾರಣದಿಂದ ನಾಶವಾಗುತ್ತಿವೆ. ಸಾಂಪ್ರದಾಯಿಕ ನೈತಿಕತೆಯನ್ನು ಸಂವಹನಗೊಳಿಸಲು ಕತೆಗಳಾಗಿ ಪರಿವರ್ತನೆ ಹೊಂದುತ್ತವೆ. ಆ ಕತೆಗಳೆಲ್ಲವೂ ವ್ಯಕ್ತಿಯ ನೈತಿಕ ಪರಿಶುದ್ಧತೆಯನ್ನು ಮತ್ತು ಶ್ರದ್ಧೆಯನ್ನು ಬಿಂಬಿಸುತ್ತವೆ. ಪುಟ್ಟಣ್ಣನವರು ಕಾದಂಬರಿಯಲ್ಲಿ ವ್ಯಕ್ತವಾಗುವ ಸಂದರ್ಭ ಮತ್ತು ಅವರ ಕಾದಂಬರಿ ರಚನೆಯ ಸನ್ನಿವೇಶಗಳು ಪರಸ್ಪರ ವಿಭಿನ್ನವಾದವು. ಸಮಕಾಲೀನ ವಾಸ್ತವದ ವಿವರಗಳಿಂದ ಭಿನ್ನವಾದ ಆಯ್ಕೆಯನ್ನು ಮಾಡುವದೇ ಪುಟ್ಟಣ್ಣನವರ ಕಾದಂಬರಿಯ ವಿಶೇಷತೆ.

ಗುಲ್ವಾಡಿ ವೆಂಕಟರಾಯರು 'ಇಂದಿರಾಬಾಯಿ', 'ಭಾಗೀರಥಿ' 'ಸೀಮಂತಿನಿ' ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಕೌಟುಂಬಿಕ, ಸಾಮಾಜಿಕ ಕಾರಣದಿಂದಲೇ ವೈವಾಹಿಕ ಬಂಧನ ರೂಢಿಸಿಕೊಂಡು ಚರ್ಚಿಸಿದ ವಿಷಯ ವಸ್ತುವಿದೆ. ಭಾರತೀಯ ಸಮಾಜ ಸ್ತ್ರೀಯರ ಮೇಲೆ ವಿಧಿಸಿರುವ ಸಾಮಾಜಿಕ ಕಟ್ಟುಪಾಡುಗಳು ಬಲಿಷ್ಠವಾಗಿದ್ದ ದಿನಗಳಲ್ಲಿ ಪಾಶ್ಚಾತ್ಯ ಶಿಕ್ಷಣದ ಫಲವಾಗಿ ಸುಧಾರಣೆಯತ್ತ ಸಾಗುವ ವಿಷಯ ವಸ್ತುವಿನೊಂದಿಗೆ ಕೌಟುಂಬಿಕ ವಿಚಾರಗಳು ಬಿಕ್ಕಟ್ಟು ಹಾಗೂ ವೈವಾಹಿಕ ಬದುಕಿನ ಬಂಧನದ ಪ್ರತಿಫಲವನ್ನು ಚಿತ್ರಿಸುವ ಪ್ರಯತ್ನ ಮಾಡಲಾಗಿದೆ. ಸಾರಸ್ವತ ಬ್ರಾಹ್ಮಣ ಸಮಾಜದ ಭೀಮರಾಯ ಕಮಲಾಪುರದ ಗ್ರಹಸ್ಥ ವರ್ತಕ ನರಸಿಂಹಶಾಸ್ತ್ರಿಗಳಲ್ಲಿ ಶಾನುಭೋಗ ವೃತ್ತಿಯಲ್ಲಿ ತೊಡಗಿಕೊಂಡನು. ಕಾಲಾಂತರದಲ್ಲಿ ಗಜಕೇಸರಿ ಜಾತಕದವಳಾದ ಅಂಬಾಬಾಯಿ ಎಂಬ ಕನ್ಯೆಯನ್ನು ವಿವಾಹವಾದನು. ಈ ವಿವಾಹ ಶ್ರದ್ಧೆಯುಳ್ಳವರಾಗಿ ಪುತ್ರ ಸಂತಾನವಿಲ್ಲದ ಕೊರಗು ಕೌಟುಂಬಿಕ ವಿವಾಹ ಬಂಧನದ ಬದುಕಿದೆ. ಸತ್ಯವತಿ ಚರಿತೆಯಲ್ಲಿ ಸತ್ಯವತಿ ಮತ್ತು ಅವಳ ಅಜ್ಜಿಯ ಮಾತುಕತೆಯಾಡುವ ಒಂದು ಸನ್ನಿವೇಶವಿದೆ. ಬಾಲವಿಧವೆಯಾದ ಅಜ್ಜಿ ತಾನು ಬಾಲ್ಯದಲ್ಲಿ ನೋಡಿದ ಸಹಗಮನವನ್ನು ವರ್ಣಿಸುವಳು(ಪು.೪೬,೪೭). ಆ ಭಯಂಕರ ದೃಶ್ಯವನ್ನು ಪೂರ್ತಿ ನೋಡುವುದು ತನ್ನಿಂದಾಗಲಿಲ್ಲ ಎಂದು ಹೇಳುತ್ತಲೇ ಆ ಆಚಾರವನ್ನು ಸಮರ್ಥಿಸುತ್ತಾಳೆ. "ಅಷ್ಟು ಹಿಂಸಾತ್ಮಕವಾದ ಆಚರಣೆಯನ್ನು ನಿಲ್ಲಿಸಿದ ದೊರೆಗಳನ್ನು ನೀವು ಬಯ್ಯುತ್ತೀರಲ್ಲ" ಎಂದು ಸತ್ಯವತಿ ಕೇಳಿದರೆ, ಅಜ್ಜಿಯು "ಅದು ಶಾಸ್ತ್ರಸಮ್ಮತವಾದದ್ದು ಅದನ್ನು ದೂಷಿಸಿದರೆ ಕಣ್ಣು ಹೋದೀತು" ಎಂದು ಹೇಳುತ್ತಾಳೆ. ಇಲ್ಲಿ ಸತ್ಯವತಿ ಆಧುನಿಕ ಮನೋಧರ್ಮದ ಪ್ರತಿನಿಧಿಯಾದರೆ, ಅಜ್ಜಿ ಕುರುಡು ನಂಬಿಕೆಯ ಪ್ರತೀಕಳಾಗುವಳು. ಈ ಮಾದರಿಯನ್ನು ಗುಲ್ವಾಡಿಯವರು 'ಭಾಗೀರಥಿ' ಕಾದಂಬರಿಗೆ ಇಡಿಯಾಗಿ ಅನ್ವಯಿಸಿದ್ದು ಕಾಣುತ್ತೇವೆ.

ಇಂದಿರಾಬಾಯಿ ಕಾದಂಬರಿ ರೋಗಗ್ರಸ್ಥ ಸಮಾಜದ ಬೀಭತ್ಸ ಮುಖಗಳನ್ನು ಬಿಚ್ಚಿಡುವುದರೊಂದಿಗೆ ಅವುಗಳ ಚಿಕಿತ್ಸಕ ಸಾಧ್ಯತೆಯನ್ನು ಸೂಚಿಸುವುದು. ಮೇಲಿನ ಸದ್ಧರ್ಮ ವಿಜಯದ ಪ್ರಭಾವವನ್ನು ಇಲ್ಲಿ ಗುರುತಿಸಬಹುದು. ವಿಫಲ ಕುಟುಂಬ ಬಂಧಗಳು, ವಿವಾಹ ಬಂಧಗಳ

ವೈಫಲ್ಯತೆಯನ್ನು ಅನಾವರಣಗೊಳಿಸುವವು. ಭೀಮರಾಯ, ಅಂಬಾಬಾಯಿ ದಂಪತಿಗಳ ಏಕಮಾತ್ರ ಪುತ್ರಿ ಇಂದಿರೆಯ ಬಾಲ್ಯವಿವಾಹವು ಶ್ರೀಮಂತ ಪುತ್ರ ವಿಠ್ಠಲರಾಯನೊಂದಿಗೆ ಆಗುವುದು. ವೈವಾಹಿಕ ಬಂಧನದಿಂದ ವಿಫಲವಾದ ಇಂದಿರೆ ಎದುರಿಸುವ ಕಷ್ಟ ಪರಂಪರೆಗಳು ಹಲವಾರು ತಲೆಬಾಚಬಾರದು, ಪುಸ್ತಕ ಓದಬಾರದು ಎಂಬ ಗೊಡ್ಡು ನಿಬಂಧನೆಗಳ ಅವಳಿಗಿದ್ದವು. ಸಂತಮಂಡಲಿಯ ಪ್ರಸಂಗದಲ್ಲಿ ಅನುಭವಿಸುವ ಮಾನಸಿಕ ಯಾತನೆ ಪರಾಕಾಷ್ಠೆಯಾಗಿದೆ. ಅಲ್ಲಿ ತನ್ನ ಪ್ರಸಂಗಾವಧಾನತೆಯನ್ನು ಪೂರೈಸಲು ಅಮೃತರಾಯನ ಆಶ್ರಯ ಪಡೆಯುವುದು, ಸುಶಿಕ್ಷಿತಳಾಗುವುದು. ಭೀಮರಾಯನಿಂದಲೇ ಕೊಲೆಯಾದ ಸುಂದರರಾಯನ ಮಗ ವಿದ್ಯಾವಂತ ಭಾಸ್ಕರರಾಯನನ್ನು ಮದುವೆಯಾಗುವುದು ಹೀಗೆ ಇಂದಿರೆಯ ಬಾಳಿನ ಕಥೆ ಸಾಗುತ್ತದೆ. ಭ್ರಷ್ಟರಾದವರ ಮಗಳಾಗಿ ಜನಿಸಿದ್ದ ಇಂದಿರಾ ಬಾಲ್ಯವಿವಾಹವೆಂಬ ಸಾಮಾಜಿಕ ವ್ಯವಸ್ಥೆಯಲ್ಲಿ ತುಂಬಾ ಕಷ್ಟಪಡುತ್ತಾಳೆ. ಕೊನೆಗೆ ಅಮೃತರಾಯನ ಕೃಪೆಯಿಂದ ತನ್ನ ಬದುಕನ್ನು ಕಂಡುಕೊಂಡವಳಾಗಿದ್ದಾಳೆ. ಈ ರೀತಿ ಸಂಬಂಧ ಸಂದರ್ಭಗಳು ಅಂದಿನ ನೀತಿ ಮೌಲ್ಯಗಳನ್ನು ಮೀರಿ ನಡೆಯಲಾಗದ ಸಂದರ್ಭಗಳನ್ನು ಕೌಟುಂಬಿಕ ಚೌಕಟ್ಟಿನ ಪರಿಧಿಯ ಹೊರ ನಿಂತು ನೋಡಿದಾಗ ಅದರ ಮೌಲ್ಯ ತಿಳಿಯುವುದು.

ಕಾದಂಬರಿಕಾರರಿಗಿದ್ದ ಸ್ತ್ರೀಪರವಾದ ಚಿಂತನೆ, ಕಾಳಜಿಗಳಿಗೆ ಗುರಿಯಾಗುವ ಅರ್ಹ ಪಾತ್ರವಾಗಿ ಆಕೆ ಇಂದಿರಾಬಾಯಿ ನಿಲ್ಲುತ್ತಾಳೆ. ಅದಕ್ಕನುಗುಣವಾಗಿ ಕಪಟಕ್ಕಿಳಿಯದ ಋಜತ್ವ, ವಿವೇಕ, ಸಂಯಮ, ಜಾಣ್ಮೆ, ವಿದ್ಯಾಪೇಕ್ಷೆ, ಸೌಜನ್ಯ ಹಾಗು ಧೈರ್ಯ ಇತ್ಯಾದಿ ಗುಣಗಳ ಸಾಕಾರಮೂರ್ತಿಯಾಗುತ್ತಾಳೆ. ಸುಶಿಕ್ಷಿತ ಗೃಹಿಣಿಯಾಗಿ ಆಕೆ ಬಾಳುವಲ್ಲಿ ಕಾದಂಬರಿಯ ಆದರ್ಶ ಕೊನೆಗೊಳ್ಳುತ್ತದೆ.

ಜಲಜಾಕ್ಷಿ ಅಮೃತರಾಯರ ಸಾಕುಮಗಳಾಗಿ ಮೆಟ್ರಿಕ್ ಪಾಸುಮಾಡುವ ಇಂದಿರಾಬಾಯಿ ಇವರನ್ನು ಖುಷಿ ಪಡಿಸುವಳು. ಇವರ ಆಶ್ರಯದಲ್ಲಿದ್ದು, ವಿದ್ಯಾಭ್ಯಾಸ ಪಡೆದ ಭಾಸ್ಕರ ವಿಲಾಯಿತಿಗೆ ಹೋಗಿ ಸಿ.ಎಸ್.ಪಾಸು ಮಾಡುತ್ತಾನೆ. ಜಲಜಾಕ್ಷಿ ಅಮೃತರಾಯರ ವೈವಾಹಿಕಬಂಧ, ಕೌಟುಂಬಿಕ ಸಂಬಂಧ ಯಶಸ್ವಿಯಾಗುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಳು. ನಂತರ ಇಂದಿರಾಬಾಯಿ ಮನಸ್ಸು ಅರಿತು ಆಶ್ರಿತ ದಂಪತಿಗಳ ಪರಸ್ಪರ ಒಪ್ಪಿತ ವಿವಾಹದಿಂದ ಕಮಲಾಪುರದಲ್ಲಿ ವಿಧವಾ ವಿವಾಹದ ಬಿರುಗಾಳಿ ಏಳುವುದು. ಬ್ರಾಹ್ಮಣರಿಗೆ ಮಠ ಬಹಿಷ್ಕಾರ ಹಾಕುತ್ತದೆ. ಧರ್ಮ ವಿಚಾರಕ ಭೀಮರಾಯನ ದೂರು ವಿಫಲವಾಗುವುದು. ಸೋತು ಗೆಲ್ಲುವ ಮನೋಧರ್ಮವಿಲ್ಲಿ ಕಾಣುವುದು. ಅದೇ ಭೀಮರಾಯ ಕೊನೆಗೆ ಅಂಬಾಬಾಯಿ ಅನಿವಾರ್ಯವಾಗಿ ಅಮೃತರಾಯನೊಂದಿಗೆ ಮಗಳು ಇಂದಿರಾ ಹಾಗೂ ಅಳಿಯನೊಂದಿಗೆ ರಾಜಿ ಸಂಧಾನದಿಂದ ಸುಖ ಜೀವನ ನಡೆಸುವರು. ಕೌಟುಂಬಿಕವಾಗಿ,

ಸಾಮಾಜಿಕವಾಗಿ ಹಾಗೂ ವೈವಾಹಿಕ ಬಂಧದಿಂದ ಸೋತು ಗೆಲ್ಲುವ ಮನೋಧರ್ಮದಿಂದ ಕಾದಂಬರಿ ಸುಧಾರಣಾಪರವೆನಿಸಿದೆ.

ಇಂದಿರಾಬಾಯಿ ಕಾದಂಬರಿ ಬಂದ ಆರು ವರ್ಷಗಳ ತರುವಾಯ ಹೊರ ಬಂದ ಕೆರೂರು ವಾಸುದೇವಾಚಾರ್ಯರ 'ಇಂದಿರಾ' ಕಾದಂಬರಿ ಸಾಮಾಜಿಕ ಸಮಸ್ಯೆಗಳನ್ನು ಹೊತ್ತುಕೊಂಡು ಬಂದಿದೆ. ಕಾದಂಬರಿಯಲ್ಲಿ ಗಂಡು ಹೆಣ್ಣಿನಲ್ಲುಂಟಾದ ಪರಸ್ಪರ ಪ್ರೇಮ ಕಥನವನ್ನು ವಸ್ತುವಾಗಿಸಿಕೊಂಡಿದೆ. ಬೆಂಗಳೂರು ಜೀವನ ಶೈಲಿ ಇದೆ. ಭಾಷೆ ಉತ್ತರ ಕರ್ನಾಟಕದ್ದು. ಕೌಟುಂಬಿಕ ಬಿಗಿ ಬಂದಂತೆ, ವಿವಾಹ ಬಂಧನ ದುರಂತ ಹಾಗೂ ಯಶಸ್ಸು ಎರಡೂ ಇಲ್ಲಿದೆ, ಬೆಂಗಳೂರಿನಲ್ಲಿ ನೆಲೆಸಿದ್ದ ಸುಬ್ಬರಾಯ ವಿಧವೆ ದೇವಯಾನಿಗೆ ಉಪಯುಕ್ತ ಶಿಕ್ಷಣ ಕೊಡಿಸಿದನು. ನವರಸಪುರದ ಶ್ರೀಕಾಂತ ದೇಸಾಯಿಯವರ ತಮ್ಮ ಕಮಲಾಕಾಂತ ಇಂಜನೀಯರಿಂಗ್ ಪದವೀಧರನಾಗಿ ಬೆಂಗಳೂರಿನಲ್ಲಿಯೇ ಸ್ವತಂತ್ರ ಉದ್ಯೋಗ ಕೈಕೊಂಡನು. ಇವನ ಸ್ನೇಹಿತ ಜಯರಾಯ ವ್ಯಾಪಾರ ಉದ್ದಿಮೆಯಲ್ಲಿ ನಿರತನಾಗಿದ್ದನು ಇವರಿಬ್ಬರೂ ಬಹು ಆತ್ಮೀಯರಾಗಿದ್ದರು.

ದೇವಯಾನಿ ಮತ್ತು ಕಮಲಾಕಾಂತನ ಮನಸು ಒಂದಾಗುವ ಸಮಯಕ್ಕೆ ಜಯರಾಜ ಇವರಿಬ್ಬರಲ್ಲಿ ಭೇದ ಭಾವ ಹುಟ್ಟುಹಾಕಿದ. ಕಮಲಾಕಾಂತ ಬೇರೆ ಸ್ತ್ರೀ ಮದುವೆಯಾಗುವನೆಂದು ಜಯರಾಜ ಸುಳ್ಳು ಹೇಳಿದನು. ದೇವಯಾನಿ ಅವನನ್ನು ದ್ವೇಷಿಸತೊಡಗಿದಳು. ಜಯರಾಯನಿಗೆ ಮುಖಭಂಗವಾಗಿ ಬೇರೊಬ್ಬ ಸ್ತ್ರೀಯನ್ನು ಮದುವೆಯಾದ. ಅವಳು 'ಇಂದಿರಾ' ಎಂಬ ಮಗುವನ್ನು ಹೆತ್ತು ತೀರಿಹೋದಳು. ಇದೊಂದು ಮುರಿದ ಮದುವೆ ಸಂಬಂಧದ ಪ್ರತಿ ಛಾಯೆ. ರಮಾಕಾಂತ ಇಂಜನೀಯರಿಂಗ್ ಪದವಿ ಓದುವಾಗಲೇ ತಂದೆ ಕಮಲಾಕಾಂತ ತೀರಿಹೋದನು. ತಂದೆ ಸಾಯುವ ಮುನ್ನ ಕನವರಿಸುತ್ತಿದ್ದ ದೇವಯಾನಿಯ ಕರೆಗೆ ಓಗೊಟ್ಟು ಶ್ರೀರಂಗಪಟ್ಟಣ ತಲುಪಿದನು. ದೇವಯಾನಿ ರಮಾಕಾಂತನನ್ನು ಸ್ವಂತ ಮಗನೆಂದು ಭಾವಿಸಿದಳು. ಜಯರಾಯ ಮಗಳು ಇಂದಿರೆಯನ್ನು ವಿವಾಹ ಮಾಡಲು ಬಯಸಿದನು. ಇಂದಿರೆಯ ಇಚ್ಛೆ ವಿರುದ್ಧವಾಗಿ ಜಯರಾಯ ಹೊರಟಿರುವುದನ್ನು ದೇವಯಾನಿ ಅರಿತಳು. ತನ್ನ ಬದುಕಿನ ವಿವಾಹಬಂಧದಲ್ಲಿ ಸೋತಂತ್ತಿದೆ. ಇಂದಿರೆಯ ಬದುಕಿನ ವಿವಾಹ ಬಂಧನ ಸೋಲಬಾರದೆಂದು ದೇವಯಾನಿ ಮುಂದಾಲೋಚಿಸುವಳು. ದೇವಯಾನಿ ತನ್ನ ಬದುಕಿನಲ್ಲಾದ ಪ್ರಮಾದಕ್ಕೆ ಉತ್ತರಿಸುವ ರೀತಿಯಲ್ಲಿ ಇಂದಿರೆ ಹಾಗೂ ರಮಾಕಾಂತ ಒಂದಾಗಲೆಂದು ಆಶಿಸಿದಳು. ದೇವಯಾನಿಗಾಗದ ವಿವಾಹಬಂಧನ ಇಂದಿರೆಯ ಮುಖಾಂತರ ಸಾಧಿಸುವಲ್ಲಿ ದೇವಯಾನಿ ಯಶಸ್ವಿಯಾದಳು. ವಿವಾಹಕ್ಕೆ ಕೌಟುಂಬಿಕವಾಗಿ ಸ್ತ್ರೀಯರು ಉಚ್ಚಮಟ್ಟದ ಶಿಕ್ಷಣ ಪಡೆಯುವದರಿಂದ ಸ್ವಾತಂತ್ರ್ಯ ಶಿಕ್ಷಣವು ಕಲಿಸದು ಎಂಬ ಅಭಿಪ್ರಾಯಕ್ಕೆ ರಮಾಕಾಂತನ ವಿಚಾರಧಾರೆಗೆ ಇಂದಿರೆ

ಬೆಂಬಲಿಸುತ್ತಾ 'ನಾವು ಯಾರಿಂದ ಸ್ವತಂತ್ರರಾಗಿರಬೇಕು' ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಸಂರಕ್ಷಿಸುವ ಪ್ರಾಣೇಶ್ವರರ ಕೂಡ ಹುರ್‍ರೆಂದು ಜಗಳವಾಡುವುದು ಸ್ವತಂತ್ರ್ಯವೇನು?[೩೧] ಮುಂದುವರೆದು ಅವಳು ಪತಿಯನ್ನು ಅನುಸರಿಸಿ ನಡಿಯುವುದೇ ನಾರಿಗೆ ಸುಖವೆಂದು ಪ್ರತಿಪಾದಿಸುವಳು.

ಪ್ರಧಾನ ಕಥನದಲ್ಲಿ ಬರುವ ಪಾತ್ರಗಳು ವ್ಯಕ್ತಿ ಬಂಧನ ವ್ಯವಹಾರ ನಿತ್ಯದ ಬದುಕಿನಲ್ಲಿ ಸಕ್ರಿಯವಾಗಿದೆ. ವಿದ್ಯಾಭ್ಯಾಸ, ಪ್ರಗತಿ, ಅಭಿವೃದ್ಧಿಯ ಕಲ್ಪನೆ ಆ ಪಾತ್ರಗಳಿಗಿದೆ. ಆದರೆ ಸಂಪ್ರದಾಯ ಬದುಕಿನ ಜಡ ವಿಚಾರಗಳಿಂದ ಅವು ಪೂರ್ತಿ ಪಾರಾಗಲು ಸಾಧ್ಯವಾಗಿಲ್ಲ. ಕುಲೀನ, ಸಚ್ಚಾರಿತ್ರ್ಯದ ತರುಣ ತರುಣಿಯರಾದ ರಮಾಕಾಂತ, ಇಂದಿರೆ ತಮ್ಮ ಪರಿಸರದಲ್ಲಿ ಸುಶಿಕ್ಷಿತರೂ, ವಿವೇಕಿಗಳು, ಸ್ವತಂತ್ರ ಆಲೋಚನೆ ಹೊಂದಿದವರಾಗಿಯೇ ಕಾಣಿಸುವರು. "ಸುಧಾರಣೆಯೆಂದರೆ ಇದ್ದದ್ದನ್ನು ಸುಧಾರಿಸಿ ಚೆನ್ನಾಗಿ ಕಾಣುವಂತೆ ಮಾಡುವುದಲ್ಲವೆ? ಇದ್ದುದು ನಿರ್ಮೂಲ ಮಾಡಿ ಅದರ ಸ್ಥಳದಲ್ಲಿ ವಿಜಾತಿಯದೊಂದು ತಂದಿಟ್ಟರೆ ಅದಕ್ಕೆ ಸುಧಾರಣೆಯೆನ್ನಕೂಡದು"(ಪು.೭೦) ಕೆರೂರರು ಆಧುನಿಕತೆಯನ್ನು ಅಳವಡಿಸಿಕೊಂಡ ಸುಧಾರಣಾವಾದಿಗಳನ್ನು ತೀವ್ರವಾಗಿ ವಿಡಂಬಿಸುತ್ತಾ ಉನ್ನತ ಸಂಸ್ಕೃತಿಯ ವೈಭವೀಕರಣಕ್ಕೆ ತೊಡಗುತ್ತಾರೆ. ಇದಕ್ಕೆ ಇಂದಿರಾ ಕಾದಂಬರಿಯ ಸಂಭಾಷಣೆಗಳನ್ನು ಗಮನಿಸಬಹದು.

'ರಮಾಕಾಂತರೇ ಪುನರ್‌ವಿವಾಹ, ಪ್ರಬುದ್ಧ ಕನ್ಯಾ ವಿವಾಹ, ಸ್ತ್ರೀ ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನಿರುವುವು? ಸ್ತ್ರೀಯರ ಸ್ವಾತಂತ್ರ್ಯಕ್ಕೆ ನೀವು ಅನುಕೂಲವಿರುವಿರೇನು? ಎಂದು ರಾಧಾಬಾಯಿಯು ಕೇಳಿದಾಗ, ಇವುಗಳ ಬಗ್ಗೆ ನಾನು ಕೇಳಿರುವೆನು. ಓದಿರುವೆನು ಆದರೆ ನನ್ನ ಮತವು ಈ ಕಾಲಕ್ಕೆ ಹೀಗೆ ಇರುವದೆಂದು ಹೇಳಲಾರೆನು. ಸ್ತ್ರೀಯರು ಉಚ್ಚ ಪ್ರತಿಯ ಶಿಕ್ಷಣ ಹೊಂದುವುದು ಅವಶ್ಯ. ಅವರ ಸ್ವಾತಂತ್ರ್ಯಾತಿಶಯ ಮಾತ್ರ ಸಹಿಸದು ಎಂದಾಗ ಸ್ತ್ರೀಯರಿಗೆ ಸ್ವಾತಂತ್ರ್ಯವಿರಬಾರದೆಂಬುದು ನಿಮ್ಮ ಮತವೋ ? ಇಂಗ್ಲೀಷ ಸ್ತ್ರೀಯರನ್ನು ನೋಡಿರಿ ಎಷ್ಟು ಸ್ವತಂತ್ರರಾಗಿರುವರು ! ಅದಕ್ಕಾಗಿಯೇ ಇಷ್ಟು ಘನತೆಗೇರಿರುವದು ಎಂದು ಹೇಳಿದ ಮಾತುಗಳಲ್ಲಿ ಕೌಂಟುಂಬಿಕ ಸಂಬಂಧದ ವಿಮರ್ಶೆಯಿದೆ. ಕೆರೂರವರ ಇಂದಿರಾ ಕಾದಂಬರಿ ವಾಸ್ತವದ ಅಭಾಸವೆಂದು ಗಮನಿಸಿಕೊಂಡರೆ ಅಲ್ಲಿ ಆದರ್ಶ ಸಮಾಜದ ನೋಟವಿದೆ. ಅದಕ್ಕೆ "ಗುಲ್ವಾಡಿಯವರು ವಾಸ್ತವ ಪ್ರಜ್ಞೆಗೆ ಭಿನ್ನವಾದುದಷ್ಟೆ ಅಲ್ಲ ಸಾಮಾಜಿಕ ಸಂಚಲನವನ್ನು ಸ್ಥಗಿತ ಚಿತ್ತದಿಂದ ಸಂಗ್ರಹಿಸುವ ಮಿತಿಯುಳ್ಳದ್ದಾಗಿದೆ"[೩೨] ಎಂದಿದ್ದಾರೆ. ಕೆರೂರರು ಸನಾತನ ಕೌಟುಂಬಿಕ ವ್ಯವಸ್ಥೆ, ವಿವಾಹ ಬಂಧನ ಮಿಕ್ಕಿ ನಡೆಯುವ ಮೌಲ್ಯಗಳ ರಕ್ಷಣೆಗಾಗಿ ಹೋರಾಡಿದ್ದು, ಸೃಜನಶೀಲತೆಯ ಆಸರೆ ಪಡೆದು ಸೋಲು ಕಾಣುವುದು ದುರಂತ. ಸಮಾಜ ಸುಧಾರಣೆಯ ನಿರ್ದಿಷ್ಟವಾದ ಉದ್ದೇಶ ಈ ಕಾದಂಬರಿಗಿಲ್ಲವಾದ್ದರಿಂದ ರಮಾಕಾಂತ ಇಂದಿರೆಯರ ಭಾವಸಂಚಾರವನ್ನು ದಾಖಲಿಸುವ ವ್ಯವಧಾನವಿದೆ. ಸುಧಾರಣೆಯ ಆಶಯವೇ ಪ್ರಬಲವಾಗಿರುವಾಗ

ಕಾದಂಬರಿಯ ಸ್ವರೂಪ ಸಮಾಜಶಾಸ್ತ್ರದ ಪಾಠಗಳಂತಿರುತ್ತವೆ. ಪಾಶ್ಚಿಮಾತ್ಯತೆಯ ಜೊತೆ ದೇಶೀಯತೆಯ ಸಮನ್ವಯತೆ ಈ ಕಾದಂಬರಿಯಲ್ಲಿ ಕಾಣುವುದು.

ಸ್ತ್ರೀಪರ ಕಾದಂಬರಿಗಳನ್ನು ರಚಿಸಿದ ಸ್ತ್ರೀಯರಲ್ಲಿ ನಂಜನಗೂಡು ತಿರುಮಲಾಂಬರವರು ಒಬ್ಬರು. ಸುಶೀಲೆ, ನಭಾ, ವಿರಾಗಿಣಿ, ಮಾತೃನಂದಿನಿ, ಮಣಿಮಾಲಾ ಕಾದಂಬರಿಗಳು ಪ್ರಮುಖವಾದವು. ಸುಶೀಲ ಕಾದಂಬರಿಯ ಸುಶೀಲೆ ಸುಶಿಕ್ಷಿತ ಗೃಹಿಣಿಯ ನೈತಿಕ ನೆಲೆಗಟ್ಟಿನ ಮೇಲೆ ಬದುಕು ಸಾಗಿಸಿದವಳು. ಪತಿಯಿಂದ ಹಿಂಸೆಗೆ ಒಳಗಾಗಿ ಪತಿಯನ್ನು ಸರಿದಾರಿಗೆ ತಂದು ಸಫಲಳಾಗುವ ವೈವಾಹಿಕ ಬಂಧನದ ಪರಾಕಾಷ್ಠೆ ಈ ಕಾದಂಬರಿಯಲ್ಲಿದೆ. "ಪತಿದೇವಾ ಪರಂದೈವಂ ಪತಿಸಾವಾ ಕುಲವಧೂಶ್ಯರಣಮ್", "ಪ್ರತ್ಯುರ್ನಾನ್ಯತ್ ಪರಮಿಹಪತಿಪದಮೇಕ ಸ್ಮರೇನಿತ್ಯಂ" ಎಂಬ ಶ್ಲೋಕವನ್ನು ಉಧೃತಗೊಳಿಸುತ್ತಾ 'ಆರಾಧ್ಯದೇವ', 'ಅಂತರಂಗವಾಸಿ' 'ಸ್ವಾಮಿಯ ಚರಣಾರವಿಂದ" ಪದಗಳು ಪತಿಯೇ ದೈವವೆಂಬ ಕೌಟುಂಬಿಕ ಹಾಗೂ ವೈವಾಹಿಕ ಬಂಧದ ಹಿತಾಸಕ್ತಿಯನ್ನು ಈ ಪದಗಳಲ್ಲಿ ಕಾಣಬಹುದಾಗಿದೆ. ವಿದ್ಯಾವತಿಯೂ ಸುಶೀಲೆಯೂ ಆದ ಕಥಾನಾಯಕಿ ದಾರಿತಪ್ಪಿದ ಗಂಡ ಮತ್ತು ಇತರ ಕುತಂತ್ರಿಗಳಿಂದ ಕಷ್ಟಗಳನ್ನು ಅನುಭವಿಸುತ್ತಾಳೆ. ಕಾರಣ ಕುಟುಂಬದ ಗೌರವ ಹಾಗೂ ವಿವಾಹಬಂಧನ ಹದಗೆಡದಿರಬಹುದು. ಕೊನೆಗೆ ದುಷ್ಟರಿಗೆ ಶಿಕ್ಷೆಯಾಗುತ್ತದೆ. ಪತಿ ಸರಿದಾರಿಗೆ ಬರುತ್ತಾನೆ. ಸುಶೀಲೆಯ ಭಾಗ್ಯದ ಬಾಗಿಲು ತೆರೆಸುವುದು. ಸಮಾಜದ ತಪ್ಪು ಗ್ರಹಿಕೆ ಅಪ್ರಯೋಜಕ. ಕಾಲ ಕಳೆಯುವ ಅವರಿವರನ್ನು ಕುರಿತು ಮಾತನಾಡುವವರನ್ನು ಚುಚ್ಚುವ ಕುಹಕಿ ಸ್ತ್ರೀಯರು ಅವರ ಮೇಲೆ ಗಾಢ ಪರಿಣಾಮ ಬೀರಿದ್ದಕ್ಕೆ ಅವಳು ಕೌಟುಂಬಿಕ ಸಂಬಂಧ ಹಾಗೂ ವೈವಾಹಿಕ ಸಂಬಂಧ ಗೆದ್ದುಕೊಂಡಿದೆ.

ತಿರುಮಲಾಂಬರ ಜೀವನ ಸೋತ ಬದುಕು. ಪುಸ್ತಕಗಳನ್ನು ಓದುತ್ತಾ ಬರೆಯುತ್ತಾ ಕಾಲಕಳೆಯುವ ಅಂದಿನ ಪರಿಸರದಲ್ಲಿ ತಿರುಮಲಾಂಬಾರವರ ಕಾದಂಬರಿಗಳು ಹೊಸ ಆಲೋಚನೆಗಳನ್ನು ಹುಟ್ಟು ಹಾಕಿದರು. ಕೆಲವರಿಗೆ ಅಂದು ಇದು ವಿಚಿತ್ರವೆನಿಸಿತು. ಇಂತಹ ಸಂದರ್ಭಗಳೇ ವಿದ್ಯಾಭ್ಯಾಸವನ್ನು ಸಮರ್ಥಿಸಿವೆ. ಸುಶೀಲೆಯ ಪತಿ ಹಾಗೂ ನಾಯಕನಾದ ವಿನೋದನ ಜೀವನದ ಮೊದಲ ಹಂತದ ವೈಫಲ್ಯವನ್ನು ಜೀವನ ತೆರೆದು ತೋರಿದೆ. ಸುಶೀಲೆಯ ಬದುಕು ಕೆಡಿಸುವ ಉದ್ದೇಶ ಕಾದಂಬರಿಯ ದುಷ್ಟ ಪಾತ್ರಗಳಾದ ಗಿರಿಯಮ್ಮ ಮತ್ತು ತಂತ್ರನಾಥ ಇವರಿಗಿದೆ. ಇವರಿಬ್ಬರೂ ಒಟ್ಟಾಗಿ ಸುಶೀಲೆಯನ್ನು ಸೋಲಿಸುವಲ್ಲಿ ವಿಫಲರಾಗಿದ್ದಾರೆ. ವಿನೋದನು ಪತ್ನಿಯ ಮೇಲೆ ಕಠಾರಿಯನ್ನು ಪ್ರಯೋಗ ಮಾಡಿದ್ದು ಕುತಂತ್ರ ದುಷ್ಟತನ ಹಾಗೂ ಸಜ್ಜನ ವೇದನೆ ಕಾದಂಬರಿಯಲ್ಲಿ ಮುಖಾಮುಖಿಯಾಗಿವೆ. ದುಷ್ಟಶಿಕ್ಷೆ ಪ್ರಾಪ್ತಿ ಕಾದಂಬರಿಯಲ್ಲಿ ಸೋತುಗೆದ್ದಿವೆ. ಪಾತ್ರವರ್ಗ ವಿಸ್ತಾರವಾದುದಲ್ಲ. ಬರುವ ಪಾತ್ರಗಳು ಮಿತ್ರಪಾತ್ರಗಳಲ್ಲಿ ಒಳ್ಳೆಯ ಕೆಟ್ಟ ಗುಂಪಿಗೆ ಸೇರಿದ ಸ್ವರೂಪ ಕಾಣುವುದು. ಪಾತ್ರಗಳ ಬೆಳವಣಿಗೆ, ಸ್ಥಿತ್ಯಂತರಗಳು.

ಒಳನೋಟಗಳು ಇಲ್ಲಿ ಮುಖ್ಯವಾಗಿಲ್ಲ. ಸುಶೀಲೆ ಸತಿತ್ವದ ಸಾಕಾರ ಮೂರ್ತಿ. ದುಷ್ಟ ತಂತ್ರನಾಥ ಅತಿ ಸರಳ ಪಾತ್ರವಾಗಿದೆ ನಭಾ ಕಾದಂಬರಿಯು ಇದೆ ಮಾದರಿಯನ್ನು ಅನುಸರಿಸಿಕೊಂಡು ಬಂದ ಕೃತಿ.

'ನಭಾ' ಕಾದಂಬರಿ ಸುಶೀಲೆಯ ಮತ್ತೊಂದು ಮುಖವಾಡದಂತಿದೆ. ಅಲ್ಲಿಯ ನೀತಿ ಮೌಲ್ಯಗಳು ಬೇರೆ ರೀತಿಯಲ್ಲಿ ಬಳಕೆಗೊಂಡಿವೆ. ನಭೆಯ ವೈಧವ್ಯದಿಂದ ಆರಂಭವಾಗುವ ಸತಿತ್ವವನ್ನು ಉಳಿಸಿಕೊಂಡ ಕಥೆ. ತಂದೆಯಿಲ್ಲದ ನಭೆ ಪತಿಯನ್ನು ಕಳೆದುಕೊಂಡು. ವೈವಾಹಿಕ ಸಂಬಂಧದಿಂದ ಸೋತವಳು. ಚಿಕ್ಕಪ್ಪ, ಚಿಕ್ಕಮ್ಮರ ಹಾಗೂ ಚಿದಾನಂದರಲ್ಲಿ ಸೋತು ಸಾಕುತನದಿಂದ ಹೊರಬರುವಳು. ರಮಾಮಣಿ ಚಿದಾನಂದನಿಗೆ ತಕ್ಕ ಪತ್ನಿ. ಸೌಜನ್ಯ ಸಂಸ್ಕಾರದಲ್ಲಿ ನಭೆ ಅರಳುವಳು. ರಾಜಶೇಖರನ ಉಪಟಳ ಅವಳ ಮನಸ್ಸನ್ನು ಘಾಸಿಗೊಳಿಸಿತು. ವೈಧವ್ಯವೆಂಬುದು ಪೂರ್ವಾರ್ಜಿತ ಕರ್ಮಫಲ ಅಲ್ಲ. ನಂಬಿಕೆಯಿಂದ ಒಪ್ಪಿಕೊಂಡಿರುವದು. ಅದಕ್ಕನುಗುಣವಾಗಿ ಬಾಳುವದೇ ಪರಮಧರ್ಮ. ವಿಧವಾ ವಿವಾಹ ವಿಷಯವು ಇಲ್ಲಿ ಚರ್ಚಿತವಾಗಿದೆ. ಸಂಪ್ರದಾಯವಾದಿ ಕೇಶಮುಂಡನ ತಾಪತ್ರಯವಿದೆ. ಆಕೆಯ ಸ್ಥಿರ ಚರ ಆಸ್ತಿಗಾಗಿ ಬಂಧುಬಳಗ ಹೊಂಚುಹಾಕಿದ ಪ್ರಮೇಯಗಳಿವೆ. ಕಾಮಾತುರತೆ ಪ್ರದರ್ಶಿಸುವ ರಾಜಶೇಖರನಿಗೆ ಹೀಗೆ ಹೇಳುವಳು "ನಿನ್ನಂತವರ ಪಾಂಡಿತ್ಯ ಪ್ರಭೆಗೆ ಧಿಕ್ಕಾರವಿರಲಿ. ಹೋಗು ಹುಚ್ಚ ! ನಿಮಗಷ್ಟು ಉನ್ಮಾದವಿದ್ದರೆ ವಿಧವಾಶ್ರಮದ ಸ್ವಯಂಪ್ರಭುತ್ವ ಮೊರೆಹೋಗು"[೩೮] ಇಲ್ಲಿ ನಭೆಯು ರಾಜಶೇಖರನಿಗೆ 'ವೇಶ್ಯಾಗೃಹಕ್ಕೆ ಹೋಗು' ಎಂದು ಹೇಳಿದ್ದಿದೆ. ವಿಧವಾಶ್ರಮದ 'ಸ್ವಯಂಪ್ರಭುತ್ವದವರ ಮರೆಹೋಗು' ಎಂಬುದು ಗಮನೀಯವಾದದ್ದು.

ವಿರಾಗಿಣಿ ಕಾದಂಬರಿ ನಭಾ ಕಾದಂಬರಿಯಲ್ಲಿ ವಿರಾಗಿಣಿಯೆಂಬ ಹೆಸರಿನಿಂದ ಕಾಣಿಸಿಕೊಂಡಿದ್ದಾಳೆ. "ನಭಾ ಕಾದಂಬರಿಯಂತೆಯೇ ಇದರಲ್ಲೂ ಆತ್ಮಕಥನದ ಅಂಶಗಳು ವಿಶೇಷವಾಗಿವೆ"[೩೯] ಈ ಕಾದಂಬರಿಯು ಆ ಕಾಲದ ವಿಧವೆಯರಂತೆ ಪುನರ್‌ವಿವಾಹವೋ, ಪ್ರಾಣ ಸಂಕಟವೋ ಪರಮತಾಚಾರವೋ, ಇಲ್ಲವೇ ಸ್ವೇಚ್ಛಾವಿವಾಹವೋ, ಆವುದೋ ಒಂದನ್ನು ಹಿಡಿದಿದ್ದರೂ ನಿಮಗದರಿಂದಾಗುತ್ತಿದ್ದ ಸುಖ ಸಂತೋಷಗಳಾವವು? ಶಾಶ್ವತ ನರಕಾನುಭವವೊಂದಿಲ್ಲವೆ? ಆದರೆ ನೀನೆಂತೆಸಗದೆ ಅಂತಹ ಮಾಯಾ ಜಾಲಗಳನ್ನೆಲ್ಲವನ್ನು ಪ್ರಚಂಡವಾದ ಬುದ್ಧಿ ಶಕ್ತಿಯಿಂದ ಭೇದಿಸಿ. ನಿರ್ಮಲೆಯಾಗಿ ಪ್ರಕಾಶಿಸುತ್ತಿರುವ ನಿನ್ನಿಂದ ಈಗ ನಾವು ಹೊಂದಲಿರುವ ಯಶಸ್ಸು ಸುಖ ಸಂಪದಭ್ಯುದಯವು ಎಂತಹದೆಂಬುದನ್ನು ಒಂದೇ ಮಾತಿನಿಂದ ಹೇಳಲಾದೀತೆ"[೪೦] ಹೀಗೆ ಅಂದಿನ ಸ್ತ್ರೀಯು ಆಯ್ಕೆಯ ಮಾರ್ಗಗಳು ಸೀಮಿತವಾಗಿದ್ದವು ಮತ್ತು ಸಾಂಪ್ರದಾಯಿಕವಾಗಿದ್ದವು. ಆ ಕಾಲದ ವಿಧವೆಯರಿಗೆ ಇರುವ ಆಯ್ಕೆ ತಿಳಿಸುವುದು. ಪುನರ್‌ವಿವಾಹವಾಗುವುದು ಆತ್ಮಹತ್ಯೆ ಮಾಡಿಕೊಳ್ಳುವುದು. ಕಾಮಬಾಧೆಯನ್ನು ತಾಳಲಾಗದೇ ಸ್ವೇಚ್ಛಾಚಾರಿಗಳಾಗುವುದು; ಯಾವುದೇ ಧರ್ಮದ ವಿರುದ್ಧ

ಕಾರ್ಯವನ್ನು ಕೈಕೊಳ್ಳದೇ ತಪಸ್ವಿನಿಯಾಗಿ ಬಾಳಿದಳು. ವಿಷಮ ದಾಂಪತ್ಯ ಸೋತರೂ, ಕೌಟುಂಬಿಕ ಬಂಧದಿಂದ ಸದ್ಗುಣಿಯಾದಳು. ವೈವಾಹಿಕ ಬಂಧ ಸೋತರೂ ವಿಧವೆಯರಿಗೆ ಇರಬೇಕಾದ ಏಕೈಕ ಆಯ್ಕೆ ಎಂದರೆ ಇದೇ ಎಂದು ವಿರಾಗಿಣಿಯ ಪಾತ್ರದ ಮುಖಾಂತರ ಸಾರಿದಳು. ಆಂತರಿಕ ತೊಳಲಾಟ, ಬಾಹ್ಯ ಸಂಕಷ್ಟಗಳ ಸನ್ನಿವೇಶದಲ್ಲಿ ಹೆಚ್ಚು ಕಡಿಮೆ ವಿರಾಗಿಣಿಯ ರೀತಿಯ ಬಾಳಿಗೆ ತಮ್ಮನ್ನು ತಾವು ಒಪ್ಪಿಸಿಕೊಳ್ಳುವ, ನಂಬಿಸುವ, ಸಮರ್ಥಿಸುವ ಪ್ರಕ್ರಿಯೆಯಲ್ಲಿಯೇ ಈ ಕಾದಂಬರಿ ರಚನೆಯಾಗಿರಬೇಕೆನಿಸುತ್ತದೆ.

ಈ ಕಾಲಘಟದ ಕಾದಂಬರಿಗಳನ್ನು ಗಮನಿಸಲಾಗಿ ಇಲ್ಲಿಯ ಪ್ರಧಾನ ವಸ್ತು ಸ್ತ್ರೀಗೆ ಸಂಬಂಧಿಸಿದ್ದಾಗಿದೆ. ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ ಎಷ್ಟೊಂದು ಸಮಸ್ಯೆಗಳಿದ್ದರೂ ಅವೆಲ್ಲವುಗಳಲ್ಲಿ ಸ್ತ್ರಿ ಜೀವನ ಪ್ರಧಾನ ಸಮಸ್ಯೆಯಾಗಿ ಕಂಡಿದೆ. ಅದರಲ್ಲೂ ಕೌಟುಂಬಿಕ ಬಂಧದ ಹಾಗೂ ವೈವಾಹಿಕ ಬಂಧದ ಚೌಕಟ್ಟುಗಳಾಚೆ ವಿಸ್ತರಿಸಿಕೊಂಡಿದೆ. ಅಂತೆಯೇ ಸಮಾಜ ಸುಧಾರಕರು ಹಾಗೂ ಸಾಹಿತಿಗಳ ದೃಷ್ಟಿ ಸ್ತ್ರೀಪರ ಎಂಬುದಕ್ಕಿಂತ ಕೌಟುಂಬಿಕಪರ ಅದರಲ್ಲೂ ಒಳಸುಳಿಯ ಬಂಧನಗಳ ವಿಸ್ತೀರ್ಣತೆ ವಿಸ್ತರಿಸಿಕೊಳ್ಳುವುದು. ಪುರುಷ ಹಾಗೂ ಸ್ತ್ರೀಯರಿಂದ ರಚನೆಯಾದ ಸ್ತ್ರಿ ಪ್ರಧಾನ ವಸ್ತುವುಳ್ಳ ಕಾದಂಬರಿಗಳ ದೃಷ್ಟಿಕೋನ ಮುಖ್ಯವಾಗಿ ಸ್ತ್ರೀ ಸುಧಾರಣೆಯನ್ನು ಉದ್ದೇಶವಾಗಿರಿಸಿಕೊಂಡಿವೆ. ಈ ಕಾಲದಲ್ಲಿ ಕಾದಂಬರಿ ರಚನೆಯಲ್ಲಿ ಪಾಲ್ಗೊಂಡಿದ್ದವರು ಸಾಮಾನ್ಯವಾಗಿ ಮೇಲ್ವರ್ಗದ ಲೇಖಕರಾಗಿದ್ದರಿಂದ ಮೇಲ್ವರ್ಗ ಹಾಗೂ ಮಧ್ಯಮವರ್ಗದ ಸ್ತ್ರೀಯರ ಸಮಸ್ಯೆಗಳತ್ತ ಗಮನಹರಿಸಿರುವುದು ಗಮನಾರ್ಹವಾಗಿದೆ. ಕೌಟುಂಬಿಕ ಬಂಧ ಹಾಗೂ ವೈವಾಹಿಕ ಬಂಧದ ಸಂಘರ್ಷಗಳು ಸಾಂಪ್ರದಾಯಿಕ ವ್ಯವಸ್ಥೆಗೆ ಸಡಿಲತೆಯನ್ನುಂಟುಮಾಡಿವೆ. ಈ ದೃಷ್ಟಿಯಿಂದ ಸ್ವಾತಂತ್ರ್ಯಪೂರ್ವ ಕನ್ನಡ ಸ್ವತಂತ್ರ ಕಾದಂಬರಿಗಳಲ್ಲಿನ ಜೀವನ ಕ್ರಮ ವೈಶಿಷ್ಟ್ಯಪೂರ್ಣವಾದುದ್ದಾಗಿದೆ.

ಕಾದಂಬರಿಕಾರರ ದೃಷ್ಟಿಯಲ್ಲಿ ವಿವಾಹವೆಂಬುದು ಸಾಮಾಜಿಕ ಸಮ್ಮತಿಯನ್ನು ಪಡೆದ ಪರಸ್ಪರ ಪ್ರೇಮ ಸಂಬಂಧ. ಅದಕ್ಕೆ ಕಾದಂಬರಿಕಾರರು ವಿವಾಹವನ್ನು ವಿರೋಧಿಸಿ, ಅದರಲ್ಲಿನ ದೋಷಗಳನ್ನು ಬಿಚ್ಚಿಡಲು ಪ್ರಯತ್ನಿಸಿದರು. ದೋಷಗಳಿಗೆ ಅಕ್ಷರ ಅರಿಯದ ಮೂಢ ಸಮಾಜವೆ ಕಾರಣವೆಂದು ತೋರಿಸಿದರು. ಆದರೆ ಇಡೀ ಸಮಾಜವನ್ನು ಎದುರು ಹಾಕಿಕೊಂಡು ಬಾಳುವಂತಿರಲಿಲ್ಲ. ಹೀಗಾಗಿ ಸಾಂಪ್ರದಾಯಿಕ, ವೈಚಾರಿಕ, ಸಾಮಾಜಿಕ ಮಿತಿಯೊಳಗೆ ಸುಧಾರಣೆಗೆ ಪ್ರಯತ್ನಿಸಿದರು.

೩.೨ ಸಾಮಾಜಿಕ ಸಂಘರ್ಷದ ನೆಲೆಗಳು

ಸಾಹಿತ್ಯ ಕೃತಿಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಗಮನಿಸಿದಾಗ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಒಂದು ಅಧ್ಯಯನವಾಗುವದು. ಸಾಮಾಜಿಕ ಜವಾಬ್ದಾರಿಯೆಂಬುದು ಸಾಹಿತಿಗೆ ತುಂಬಾನೆ ಮಹತ್ವದ್ದು. ತನ್ನ ಸಮಕಾಲೀನ ಜನರ ಜೀವನ, ಪ್ರದೇಶ, ಭಾಷೆಗಳ ವಿಚಾರದಲ್ಲಿ ಜರುಗುವ ಆಗು ಹೋಗುಗಳನ್ನು ಗಮನಿಸಿ ಸಾಕ್ಷೀಕರಿಸುವದು, ಉಚಿತಾನುಚಿತವಾಗಿ ಸಮರ್ಥವಾಗಿ ಅಭಿವ್ಯಕ್ತಿಸುವದು ಇಲ್ಲಿ ಮುಖ್ಯವಾದದ್ದು. ಇಲ್ಲದಿದ್ದರೆ ಮೌಲಿಕ ಕೃತಿ ರಚನೆ ಸಾಧ್ಯವಾಗಲಾರದು. ಬದುಕು, ಕುಟುಂಬ, ಪರಿಸರ, ಅದರ ಸ್ಪಂದನೆಯ ರೀತಿಯನ್ನು ಯಥಾವತ್ತಾಗಿ ಚಿತ್ರಿಸಬೇಕಾಗುತ್ತದೆ. ವಿಷಯ ವಸ್ತು ಪರಿಣಾಮಕಾರಿಯಾಗಬೇಕಾದರೆ ಕಥೆಯಷ್ಟೆ, ಕಥೆಯ ಇಡೀ ಆವರಣವು ಮುಖ್ಯವಾಗುವದು. ಖ್ಯಾತ ವಿಮರ್ಶಕರಾದ ಡಿ.ಆರ್. ನಾಗರಾಜ ಕಾದಂಬರಿಗಳ ಆರಂಭಿಕ ಹಂತದ ಉಗಮದ ಬಗ್ಗೆ ಹೀಗೆ ಹೇಳುವರು. “ಕನ್ನಡದಲ್ಲಿ ಸಾಮಾಜಿಕ ಕಾದಂಬರಿಗಳು ಹುಟ್ಟಿದ್ದು ಒಂದು ನಿರ್ದಿಷ್ಟ ಸಾಮಾಜಿಕ ಗುಂಪಿನ ಸ್ವ-ವಿಮರ್ಶೆಯಿಂದ, ಬ್ರಾಹ್ಮಣರ ಸ್ವ ವಿಮರ್ಶೆಯಿಂದ”[೪೧] ಈ ಸಂಗತಿಯಿಂದ ಆರಂಭದ ಸ್ವತಂತ್ರ ಸಾಮಾಜಿಕ ಕಾದಂಬರಿಗಳಿಂದ ಇದನ್ನು ಅರಿಯಬಹುದಾಗಿದೆ. ಈ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳ ವಿಷಯ ಮಹಿಳಾ ಸಮಸ್ಯೆಯ ಚರ್ಚೆ ಪ್ರಮುಖವಾಗಿರುವದು, ಅಚ್ಚರಿಯಾದರೂ ಬ್ರಾಹ್ಮಣತ್ವದ ಸ್ವವಿಮರ್ಶೆಯ ಗುರುತುಗಳು ಇಲ್ಲಿ ಕಾಣುವವು.

ಆ ಕಾಲದಲ್ಲಿ ಕೃತಿ ರಚನೆಯ ಸಂದರ್ಭದಲ್ಲಿ ಸಾಮಾಜಿಕ ಸ್ಥಿತಿಗಳು ಮುಖ್ಯಪಾತ್ರ ನಿರ್ವಹಿಸುವವು. ಪ್ರತಿಯೊಂದು ಕೃತಿಯಲ್ಲಿ ಸುತ್ತಲಿನ ಪರಿಸರ, ತಾತ್ವಿಕ ಧೋರಣೆ ಅಭಿವ್ಯಕ್ತಗೊಂಡಿರುತ್ತದೆ. ಕೆಲವು ಲೇಖಕರು ತಾತ್ಕಾಲಿನ ಸಮಸ್ಯೆ ಗಮನಿಸಿದ್ದರೆ, ಕೆಲವು ಲೇಖಕರು ಸಾರ್ವತ್ರಿಕ ಅಂಶಗಳಿಗೆ ಮಹತ್ವ ನೀಡಿರುತ್ತಾರೆ. ಅದಕ್ಕೆ ಮಾರಕವೆಂಬಂತೆ ಅಂದಿನ ಕಾಲದ ಮತ ಪ್ರಚಾರ, ವಿದ್ಯಾಭ್ಯಾಸ ಕ್ರಮಗಳು, ಸಾಮಾಜಿಕವಾಗಿ ಬಾಲ್ಯವಿವಾಹ, ವಿಧವಾ ವಿವಾಹ, ಸತಿ ಪದ್ಧತಿ, ದೇವದಾಸಿ ಪದ್ಧತಿ, ತಲೆಮಾರುಗಳು, ಸಣ್ಣ ಪುಟ್ಟ ಜಾತಿಗಳು. ವೇಷಭೂಷಣ, ಕಲೆ, ಬಹುಪತ್ನಿತ್ವದ ವಿಷಯಗಳ ವಿಷಯ ವಸ್ತು ಒಳಗೊಂಡ ಕಾದಂಬರಿಗಳೇ ಅಧಿಕ. ಅಂತೆಯೇ ಡಿ.ಆರ್.ನಾಗರಾಜ ಅವರು ಹೇಳುತ್ತಿರುವಂತೆ “ಕಳೆದು ಹೋಗುತ್ತಿರುವ ಹಳೆಯ ಜಗತ್ತು, ಹುಟ್ಟುತ್ತಿರುವ ಹೊಸ ಜಗತ್ತು ನಡುವಿನ ಗೊಂದಲ, ಶೂನ್ಯತೆ, ವಿಕಾರ ಇವೆಲ್ಲವನ್ನು ತನ್ನ ಕೃತಿಗಳಲ್ಲ ಹೇಳಲು ಯತ್ನಿಸುತ್ತಾನೆ. ಚರಿತ್ರೆಕಾರರು ಶಾಸ್ತ್ರಜ್ಞರು, ಇಲ್ಲದ ಕಡೆಗಳಲ್ಲೆ ಇವರೆ ಎಲ್ಲವೂ ಆಗಿರುತ್ತಾರೆ.”[೪೨] ಡಿ.ಆರ್. ನಾಗರಾಜರ ಮಾತುಗಳು ಈ ಸಂದರ್ಭದಲ್ಲಿ ಈ ಅಧ್ಯಯನದ ಆಯ್ಕೆಗೆ ಪರಿಗಣಿಸಿರುವ ಕಾದಂಬರಿಕಾರರು ಚಿತ್ರಿಸಿದ್ದಾರೆ. ಮೊದಲ ಘಟ್ಟದ ಕಾದಂಬರಿಗಳ ಸಾಮಾಜಿಕ ನೆಲೆಯನ್ನಿಟ್ಟುಕೊಂಡು ಜೀವನದ ವಿವಿಧ ಮುಖಗಳನ್ನು ಚರ್ಚಿಸುವದು ಮುಖ್ಯವಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಸಮಸ್ಯೆಗಳಿಗೆ ಎಷ್ಟರ ಮಟ್ಟಿಗೆ ಮಹತ್ವ ಕೊಡಲಾಗಿದೆ ಎಂಬ ಸಂಗತಿ ಇಲ್ಲಿ ಚರ್ಚಿಸಲಾಗಿದೆ.

ಮೊದಲ ಘಟ್ಟದ ಕಾದಂಬರಿಕಾರರ ದೃಷ್ಟಿಯಲ್ಲಿ ವಿವಾಹ ಎನ್ನುವದು ಸಾಮಾಜಿಕ ಸಮ್ಮತಿಯನ್ನು ಪಡೆದ ಪರಸ್ಪರ ಪ್ರೇಮ ಸಂಬಂಧದ ಕುರುಹು ಆಗಿದೆ. ಅಂತೆಯೆ ಆ ಕಾಲದ ಕಾದಂಬರಿಕಾರರು ವಿವಾಹ ಸಂಸ್ಥೆಯನ್ನು ವಿರೋಧಿಸದೆ ಅದರ ದೋಷಗಳನ್ನು ಬಿಚ್ಚಿಡಲು ಪ್ರಯತ್ನಿಸಿದರು. ಈ ಎಲ್ಲಾ ದೋಷಗಳಿಗೆ ಅಕ್ಷರ ಅರಿಯದ ಈ ಮೂಢ ಸಮಾಜವೇ ಕಾರಣವಾಗಿದ್ದರಿಂದ ಇಡೀ ಸಮಾಜವನ್ನು ಎದುರು ಹಾಕಿಕೊಂಡು ಬಾಳುವಂತಿರಲಿಲ್ಲ. ಹೀಗಾಗಿ ಸಾಂಪ್ರದಾಯಿಕ, ವೈಚಾರಿಕ ಮಿತಿಯ ಒಳಗೆ ಸುಧಾರಣೆಗೆ ಪ್ರಯತ್ನಿಸಿದ್ದು ಶ್ಲಾಘನೀಯ. ಈ ಸುಧಾರಣೆ ಸಂಪೂರ್ಣ ಬದಲಾಗದಿದ್ದರೂ ಅಲ್ಲಲ್ಲಿ ಅದು ಗಾಢವಾದ ಪ್ರಭಾವ ಬೀರಿದ್ದು ಕಾಣುತ್ತದೆ. ಕೌಟುಂಬಿಕ ಚೌಕಟ್ಟಿನೊಳಗೆ ಸ್ತ್ರೀ ಅನುಭವಿಸಿದ ದುಃಖ ಹೇಳುವಂತಹದಲ್ಲ. ಪತಿಯು ಪತ್ನಿಯ ಇಚ್ಛೆಯನ್ನರಿತು ಎಂದೂ ನಡೆದುದ್ದಿಲ್ಲ. ಪತಿಯ ಎದುರು ವಾದಿಸುವದಿರಲಿ ನಿಲ್ಲುವಂತೆಯೂ ಇರಲಿಲ್ಲ. ಸತಿ ಎಂಬುವವಳು ಪತಿಯ ಸ್ವತ್ತಾಗಿದ್ದಳು. ಭಾರತೀಯ ಸಮಾಜ ಇಂತಹ ಗೊಡ್ಡು ಆಚರಣೆಗಳಿಂದಾಗಿ ಪತಿ-ಪತ್ನಿಯರಲ್ಲಿ ವಿರಸ ಕಾಣಿಸಿಕೊಂಡಿರಬಹುದು. ಇಲ್ಲಿ ಮುಖ್ಯವಾಗಿ ಒಂದು ಅಂಶವನ್ನು ಗುರುತಿಸಲು ಸಾಧ್ಯವಿದೆ.

ಹತ್ತೊಂಬತ್ತನೆ ಶತಮಾನದ ಬಹುತೇಕ ಲೇಖಕರು ಮೇಲ್ವರ್ಗದವರಾಗಿದ್ದ ಕಾರಣ ತಮ್ಮ ಜಾತಿಯ, ಜನಾಂಗದ ಸ್ತ್ರೀಯರ ಸಮಸ್ಯೆಗಳನ್ನು ಚಿತ್ರಿಸಿದಂತೆ ಇನ್ನುಳಿದ ವರ್ಗಗಳ ಸ್ತ್ರೀಯರ ಬಗ್ಗೆ ಚಿತ್ರಿಸಲಿಲ್ಲ. ಬದಲಾಗಿ ಅವರಿಗೆ ಸಮಸ್ಯೆಗಳೇ ಇಲ್ಲಾ ಎನ್ನುವಷ್ಟರ ಮಟ್ಟಿಗೆ ಸ್ವತಂತ್ರಳೆ, ಇಲ್ಲಾ ಎನ್ನುವಷ್ಟರ ಮಟ್ಟಿಗೆ ಸ್ವತಂತ್ರಳು, ಸ್ವಾವಲಂಬಿ ಆಗಿದ್ದಳೆಂದು ವೈಭವೀಕರಿಸಿದಂತಿದೆ. ಆಶ್ಚರ್ಯದ ಸಂಗತಿ ಎಂದರೆ ಸ್ತ್ರೀಯನ್ನು ಸಮಸ್ಯೆಗಳಿಂದ ಬಿಡುಗಡೆ ಮಾಡುವದಕ್ಕಾಗಿಯೇ ಜನ್ಮ ತಳೆದ ಸ್ತ್ರೀವಾದಿ ಸಂಘಟನೆಗಳ ಹೋರಾಟವು ಸಹ ಮೇಲ್ವರ್ಗದವರ ಸಮಸ್ಯೆಗೆ ಸೀಮಿತವಾದಂತೆ ಕಾಣುವದು. ಇದನ್ನು ಗಮನಿಸಿದ ವಿಮರ್ಶಕ ರಹಮತ್ ತರೀಕೆರೆಯವರು. "೧೯ನೇ ಶತಮಾನದ ಸ್ತ್ರೀ ಸುಧಾರಣಾವಾದಿಗಳು ಭಾರತೀಯ ಸಂಸ್ಕೃತಿಯ ಕಾಯಿದೆಗಳೆಂದು ಭಾವಿಸಿ ಯಾವ ಸಮಸ್ಯೆಗಳ ವಿರುದ್ಧ ಹೋರಾಡಿದರೋ ಅವು ಇಂಡಿಯಾದ ಅನೇಕ ಸಮುದಾಯಗಳ ಪಾಲಿಗೆ ನಿಜವಾದ ಸಮಸ್ಯೆಗಳಾಗಿರಲಿಲ್ಲ."[೪೩] ಎಂದಿದ್ದು ವಾಸ್ತವವಾದರೂ. ಮೇಲ್ವರ್ಗದ ಸ್ತ್ರೀಯರು ಅನೇಕ ಸಮಸ್ಯೆಗಳಿಂದಾಗಿ ಮಾನಸಿಕವಾಗಿ ನೊಂದಿದ್ದರು ಎಂಬುದನ್ನು ಸಂಪೂರ್ಣವಾಗಿ ಕಡೆಗಣಿಸಲಾಗುವದಿಲ್ಲ.

ಮೊದಲ ಘಟ್ಟದ ಕಾದಂಬರಿಗಳಲ್ಲಿ ವಿವಾಹ ಕುರಿತು ಸಾಕಷ್ಟು ವಾದ, ಚರ್ಚೆಗಳು ನಡೆದಿವೆ. ಇಲ್ಲಿ ಮುಖ್ಯವಾಗಿ ಕೃತಿಕಾರ ಪ್ರತಿನಿಧಿಸುವ ಸಮಾಜ ಮತ್ತು ಆತನ ನಿಲುವುಗಳು ವಿಶಿಷ್ಟವಾಗಿರುವುದು

ಕಂಡುಬರುವುದು. ಕನ್ನಡದ ಆರಂಭದ ದೆಸೆಯ ಕಾದಂಬರಿಕಾರರೆಲ್ಲ ವೈದಿಕ ಸಮಾಜದಿಂದ ಬಂದವರು. ಹೀಗಾಗಿ ಸಮಸ್ಯೆಗಳು ಕೂಡಾ ಸಹಜವಾಗಿ ಅವರ ಸಮಾಜದವೇ ಆಗಿವೆ.

ಬಾಲ್ಯವಿವಾಹ:

ಸ್ತ್ರೀಯನ್ನು ಶೋಷಿಸುವ ಅಂಶಗಳಲ್ಲಿ ಬಾಲ್ಯ ವಿವಾಹವೂ ಒಂದು. ಇದು ಪ್ರಾಚೀನ ಕಾಲದಲ್ಲಿ ಪ್ರಚಲಿತವಿರದಿದ್ದರೂ ಕಾಲಾನುಕ್ರಮದಲ್ಲಿ ಜನಪ್ರಿಯವಾಯಿತು. ವೈದಿಕರ ಹಿತ ಚಿಂತನೆಯ ಫಲವಾಗಿ ಶಾಸ್ತ್ರ ಪುರಾಣಗಳ ಸಮ್ಮತಿ ದೊರೆತು ಬಹುಬೇಗ ಸಮಾಜವನ್ನು ವ್ಯಾಪಿಸಿತು. ಹೆಣ್ಣು ಮಕ್ಕಳು ಪ್ರಾಪ್ತ ವಯಸ್ಕರಾಗುವ ಮೊದಲೆ ಮದುವೆ ಮಾಡಬೇಕು. ಇಲ್ಲವಾದರೆ ಆಕೆ ಪ್ರತಿಬಾರಿ ಋತುಮತಿಯಾದಾಗ ಒಂದೊಂದು ಭ್ರೂಣವನ್ನು ಕೊಂದ ಪಾಪ ಆಕೆಗೆ, ಪೋಷಕರಿಗೆ ತಟ್ಟದೆ ಬಿಡದು ಎಂಬ ಯಜ್ಞವಲ್ಕ ಮುನಿಯ ಹೇಳಿಕೆ ಸಮಾಜದ ಪ್ರತಿಯೊಬ್ಬರಲ್ಲಿ ಪಾಪಪ್ರಜ್ಞೆಯನ್ನು ಬಿತ್ತಿ ಬೆಳೆಸಿದುವು. ಹೀಗಾಗಿ ಏನೂ ಅರಿಯದ ಮುಗ್ಧ ಮಕ್ಕಳನ್ನು ಹಸೆಮಣೆಯ ಮೇಲೆ ಕೂರಿಸಿ ಸಂಸಾರವೆಂಬ ಉರುಳಿಗೆ ಬಲಿಯಾಗಿಸುವ ಪ್ರವೃತ್ತಿ ಜನಮನದಲ್ಲಿ ಬೇರು ಬಿಟ್ಟವು.

ವೈದಿಕ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿಯೇ ವಿವಾಹ ಕಾರ್ಯವನ್ನು ನೆರವೇರಿಸುತ್ತಿದ್ದರು. ಹದಿನಾಲ್ಕು ವರ್ಷಗಳ ಒಳಗಾಗಿ ಮದುವೆಯಾಗಬೇಕಿತ್ತು. ಮದುವೆ ಮಾಡದಿದ್ದರೆ ತಮಗೆ ನರಕ ಎಂಬ ನಂಬುಗೆಯ ಚಲಾವಣೆಯು ಹಿರಿಯ ಜೀವಿಗಳಲ್ಲಿತ್ತು. ಹದಿನಾಲ್ಕು ವರ್ಷ ದಾಟಿದ ಹುಡುಗಿಯ ವಿಚಾರದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಅವಳೊಬ್ಬ ಪಾಪಿ ಎಂಬ ಭಾವನೆ ಇತ್ತು. ಇದರಿಂದ ಸ್ತ್ರೀಯರ ಜೀವನ ಶೋಚನೀಯವಾಗಿತ್ತು, ಆದ್ದರಿಂದ ಚಿಕ್ಕ ವಯಸ್ಸಿನಲ್ಲಿ ವಿಧವೆಯರಾಗುತ್ತಿದ್ದರು. ಬಹು ಪತ್ನಿತ್ವಕ್ಕೆ ಅವಕಾಶವಿದ್ದುದ್ದರಿಂದ ಇದು ಇನ್ನಷ್ಟು ಪ್ರಬಲವಾಗಿತ್ತು. ಸಮಾಜದಲ್ಲಿನ ಇಂತಹ ಪದ್ಧತಿಯನ್ನು ದೂರ ಸರಿಸಲು ಸುಧಾರಣಾವಾದಿಗಳು ಶ್ರಮಿಸಿದರು. ಪಾಶ್ಚಿಮಾತ್ಯ ಶಿಕ್ಷಣ ಕಲಿತ ಮಧ್ಯಮವರ್ಗದವರು ಈ ಕುರಿತು ವಿಶೇಷ ಕಳಕಳಿ ವಹಿಸಿದರು. ಒಟ್ಟಾರೆ, 'ಇಂದಿರಾಬಾಯಿ', 'ಇಂದಿರಾ', 'ಮಾಡಿದ್ದುಣ್ಣೋ ಮಹಾರಾಯ,' 'ನಭಾ', ಮತ್ತು 'ಮಾತೃ ನಂದಿನಿ' ಕಾದಂಬರಿಗಳಲ್ಲಿ ಬಾಲ್ಯವಿವಾಹದ ವಿಶ್ಲೇಷಣೆ ಇದೆ.

ಇಂದಿರಾಬಾಯಿ ಕಾದಂಬರಿಯ ಅಂಬಾಬಾಯಿಯು ಭೀಮರಾಯನೊಟ್ಟಿಗೆ "ಸದ್ಯ ನಮ್ಮ ಇಂದಿರೆಗೆ ಏಳುವರ್ಷಗಳು ತುಂಬಿ ಎಂಟನೆಯದು ನಡೆಯುತ್ತಿದೆ. ಅವಳ ಕಲ್ಯಾಣದ ವಿಷಯವೇನಾದರೂ ಆಲೋಚಿಸಿದ್ದೀರಾ"[೪೪] ಒತ್ತಾಸೆಯನ್ನು ವ್ಯಕ್ತಪಡಿಸುತ್ತಾರೆ. ಅದಕ್ಕೆ ಪೂರಕವಾಗಿ ವಿಠ್ಠಲರಾಯನೊಂದಿಗೆ ಇಂದಿರಾಬಾಯಿಯ ವಿವಾಹವನ್ನು ನೆರವೇರಿಸಿದರು. ಸಾಂಪ್ರದಾಯಿಕ ಚೌಕಟ್ಟಿನೊಳಗೆ ಮದುವೆ ಕಾರ್ಯ ಜರುಗುವುದು. ಇಲ್ಲಿ ಲೇಖಕರು ಸಂಪ್ರದಾಯ ಉಳಿವಿನ ನಿಟ್ಟಿನಲ್ಲಿ ಮೊದಲ ವಿವಾಹ ವರ್ಣನೆಯನ್ನು ಈ ರೀತಿ ಚಿತ್ರಿಸಿದರೂ ವಿಠ್ಠಲರಾಯ ಇಂದಿರಾಬಾಯಿಯರು

ವೈವಾಹಿಕ ಬದುಕಿನ ವೈಫಲ್ಯಕ್ಕೆ ಬಾಲ್ಯ ವಿವಾಹ ಸಮಸ್ಯೆ ಕಾರಣವೆನಿಸಿದೆ. ಕಾದಂಬರಿಕಾರರಾದ ಗುಲ್ವಾಡಿ ವೆಂಕಟರಾಯರು ಸಮಾಜವನ್ನು ಎಚ್ಚರಿಸಿದಂತಿದೆ. ಸೂಚಿಸಿದ ಪರಿಹಾರದಂತಾಗಿದೆ. ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿಯೂ ಈ ರೀತಿಯ ಚಿತ್ರಣವಿದೆ. ನೀಲಕಂಠ ಜೋಯಿಸರು ತನ್ನ ಮಗಳಿಗೆ ಬಾಲ್ಯದಲ್ಲೆ ವಿವಾಹ ಪ್ರಸ್ತಾಪ ಮಾಡುತ್ತಾ" ಯೋಗ್ಯರಾಗಿದ್ದರೆ ಎರಡನೆಯ ವರವಾದಾಗ್ಯೂ ಚಿಂತೆಯಿಲ್ಲ ತೊಳೆದ ಕಾಲನ್ನು ತೊಳೆಯುವದಿಲ್ಲವೆಂದು ಮೂಲಪ್ರತಿಷ್ಠೆಯನ್ನು ಬಿಟ್ಟು ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆಂದು ನಿಶ್ಚೈಸಿಕೊಂಡಿದ್ದನು."[೪೫] ಈ ನಿದರ್ಶನಗಳು ವಿವಾಹ ಸಂಬಂಧಗಳ ಸಾಂಪ್ರದಾಯಿಕತೆಯನ್ನು ವ್ಯಕ್ತಪಡಿಸುವವು. ಮಕ್ಕಳ ವಿವಾಹ ಸಂದರ್ಭಗಳಲ್ಲಿ ಹಿರಿಯರೆ ಈ ಸಂಬಂಧಗಳ ನಿರ್ಣಾಯಕ ವ್ಯಕ್ತಿಗಳಾಗಿದ್ದುದ್ದು ಸಂಪ್ರದಾಯಸ್ಥ ಮನೋಸ್ಥಿತಿಗಳ ಒಳನೋಟ ಕಾಣುವದು.

ಮದುವೆ ಎಂಬುದರ ಅರ್ಥವನ್ನೆ ಅರಿಯದ ಮಕ್ಕಳನ್ನು ಮದುವೆಗೆ ದೂಕುವದು 'ಇಂದಿರಾಬಾಯಿ' ಕಾದಂಬರಿಯಲ್ಲಿನ ಭೀಮರಾಯ ಮತ್ತು ಅಂಬಾಬಾಯಿ. 'ಇಂದಿರಾ' ಕಾದಂಬರಿಯಲ್ಲಿನ ಜಯರಾಯ, 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿನ ಶ್ರೋತ್ರಿ ನೀಲಕಂಠ ಜೋಯಿಸರು, 'ಸಭಾ' ಕಾದಂಬರಿಯ ನಾಗೇಶರಾಯ ಮುಂತಾದವರು ತಮ್ಮ ಮಕ್ಕಳ ಮದುವೆಯ ಸಂದರ್ಭಗಳಲ್ಲಿ ನಡೆದುಕೊಂಡಿರುವ ರೀತಿಯನ್ನು ಅವಲೋಕಿಸಿದರೆ ಸ್ತ್ರೀ ಬದುಕಿನಲ್ಲಿ ಬಾಲ್ಯ ವಿವಾಹವು ಸಮಸ್ಯೆಯಾಗಿ, ದುರಂತವಾಗಿ ಚಿತ್ರಿತವಾಗಿದೆ.

ಬಾಲ್ಯ ವಿವಾಹಕ್ಕೆ ಧರ್ಮಶಾಸ್ತ್ರಗಳ ಪ್ರಭಾವ, ಇನ್ನೊಂದೆಡೆ ೧೦ನೇ ಶತಮಾನದಲ್ಲಿಯ ವಿದೇಶಿ ಪರ್ಶಿಯನ್, ಮುಸ್ಲಿಂ ಅಕ್ರಮಣ ಇವೆರಡರ ದುಷ್ಪರಿಣಾಮಗಳ ಮದ್ಯ ಭಾರತೀಯ ಸಮಾಜದಲ್ಲಿ, ತಮ್ಮ ಮಕ್ಕಳ ಶೀಲ ಪಾವಿತ್ರ್ಯವನ್ನು, ಕಾಪಾಡುವ ಮತ್ತು ಅವರ ಪುರೋಭಿವೃದ್ಧಿಯ ಅನಿವಾರ್ಯತೆಯಿಂದಾಗಿ ಬಾಲ್ಯ ವಿವಾಹವು ಪ್ರಚುರಗೊಂಡಿತು. ಇದು ಎಂತಹ ಕೀಳುಮಟ್ಟಕ್ಕಿಳಿಯಿತೆಂದರೆ, ತೊಟ್ಟಿಲಲ್ಲಿ ಹಾಲುಣ್ಣುವ ಎಳೆಯ ಕೂಸುಗಳನ್ನು ಮದುವೆ ಬಂಧನಕ್ಕೆ ಕಟ್ಟಿ ಬಲಿ ನೀಡಲಾಯಿತು..

ಬಾಲ್ಯ ವಿವಾಹ ಸ್ತ್ರೀಯನ್ನು ಮಾನವನ ಮೂಲಭೂತ ಬೇಡಿಕೆಯಾದ ಆರೋಗ್ಯ, ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿತು. ಸಾಂಪ್ರದಾಯಿಕ ಸಮಾಜ ಹೆಣ್ಣಿನ ಬೇಕು ಬೇಡಿಕೆಗಳೆಲ್ಲವನ್ನು ಚಿಗುರುವ ಹಂತದಲ್ಲೇ ಚಿವುಟಿ ಹಾಕಿತು. ಈ ಸಂಗತಿಗಳನ್ನು ಹೆಚ್ಚಾಗಿ ನವೋದಯಪೂರ್ವ ಕಾದಂಬರಿಗಳನ್ನು ಅವಲೋಕಿಸಿದಾಗ ಪ್ರಮುಖವಾಗಿ ಕಾಣಬಹುದು. "ಹೆಣ್ಣು ಮಕ್ಕಳನ್ನು ಪಡೆದ ತಾಯಂದಿರು ತಂದೆಯಂದಿರ ಅನ್ವೇಷಣೆಯಲ್ಲಿ ತೊಡಗಿರುವುದನ್ನು, ಮದುವೆಯೇ ಮಹಿಳೆಗೆ ಸರ್ವಸ್ವ ಮದುವೆಯಾಗದ ಮಹಿಳೆ ಸಮಾಜದ ದೃಷ್ಟಿಯಲ್ಲಿ ಕೀಳು"[೪೬] ಎಂಬ ದೃಷ್ಟಿಕೋನದಲ್ಲಿಯೇ ರಚಿತವಾದವುಗಳು

ಎಂಬುದನ್ನು ಸರೋಜನಿ ಶಿಂತ್ರಿಯವರು ಗುರುತಿಸಿದ್ದು ಕಾಣುವದು. ಅವರ ಹೇಳಿಕೆಯನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಹೆಣ್ಣು ಮಕ್ಕಳ ಮದುವೆಯನ್ನು ಇನ್ನೂ ಬಾಲೆಯರಾಗಿರುವಾಗಲೆ ನೆರವೇರಿಸಲು ಹಾತೊರೆದವರಲ್ಲಿ ಹೆಚ್ಚಿನ ಸಂಖ್ಯೆ ತಾಯಂದಿರದು. ಪಾತಿವ್ರತ್ಯ ಎಂಬ ಕಲ್ಪನೆಯ ಕವಚವನ್ನು ಭೇದಿಸಲಾಗದ ತಾಯಿ 'ಶೀಲ' ಸರಂಕ್ಷಣೆಗಾಗಿಯೇ ಪರದಾಡಿದಂತೆ ಕಾಣುತ್ತದೆ. ಇಲ್ಲಿ ಸ್ತ್ರೀ ಸುಧಾರಣೆಯ ಧ್ವನಿ ಎಲ್ಲೆಲ್ಲೂ ಕೇಳಿ ಬರುತ್ತಿದ್ದರೂ ಮುಗ್ಧಬಾಲೆಯರ ಮೇಲಿನ ಶೋಷಣೆ ಮತ್ತಷ್ಟು ಹೆಚ್ಚಾದಂತೆ ಕಾಣುವದು.

ಬಾಲ್ಯ ವಿವಾಹ ಸಮಸ್ಯೆ ಹೆಚ್ಚಾಗಿ ಮೇಲ್ವರ್ಗದ ಬ್ರಾಹ್ಮಣ ಸ್ತ್ರೀಯರನ್ನು ಕಾಡಿದೆ. ಅವರನ್ನು ಕಾಡಿದಷ್ಟು ಬ್ರಾಹ್ಮಣೇತರರಾದ ಮಧ್ಯಮ ಮತ್ತು ಹಿಂದುಳಿದ ವರ್ಗಗಳನ್ನು ಕಾಡಿರಲಿಲ್ಲ. ಕಾರಣ ಇಷ್ಟೆ ಸುಸಂಸ್ಕೃತರೆನಿಸಿಕೊಂಡ ಬ್ರಾಹ್ಮಣ ಪುರೋಹಿತ ವರ್ಗ ಮನುವಿನ ವಿಚಾರವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವಲ್ಲಿ ಹಿಂದೆ ಮುಂದೆ ನೋಡಿರಲಿಲ್ಲ. ಈ ಸಮಸ್ಯೆ ಬಹುವಾಗಿ ಕಾಡುತ್ತಿರುವಾಗ ೧೯ನೇ ಶತಮಾನದ ಸುಧಾರಣಾವಾದಿಗಳು ಸ್ತ್ರೀಸಮಸ್ಯೆಗಳನ್ನು ಎತ್ತಿಕೊಂಡರು. "ಬಾಲ್ಯ ವಿವಾಹ, ಸತಿ ಪದ್ಧತಿ ಮೊದಲಾದ ಸಂಪ್ರದಾಯಗಳನ್ನು ತೆಗೆದು ಹಾಕಿ, 'ವೇದಕಾಲೀನ ಆದರ್ಶದ ಆಧಾರದ ಮೇಲೆ ಭಾರತೀಯ ಮಹಿಳೆಯನ್ನು ಹೊಸದಾಗಿ ರೂಪಿಸಿಕೊಂಡಿರುವುದು."[೪೭] ಅವರ ಮುಖ್ಯ ಉದ್ದೇಶವಾಗಿತ್ತು. ಇಂತಹ ದಿಟ್ಟ ಹೆಜ್ಜೆ ಇಟ್ಟಿರುವಾಗಲೂ ಬಾಲ್ಯ ವಿವಾಹ, ವಿಧವೆಯಂತ ಸಮಸ್ಯೆಗಳನ್ನು ಹೊತ್ತು ತಂದ ಕಾದಂಬರಿಗಳು ಕಡಿಮೆ ಇದ್ದರೂ ತೂಕಬದ್ಧವಾದವೆ ಆಗಿವೆ.

ಮೊದಲ ಘಟ್ಟದ ಕಾದಂಬರಿಗಳಲ್ಲಿ 'ವರ'ನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಧುವಿಗಿರಲಿಲ್ಲ. ಈಗಲೂ ಗ್ರಾಮೀಣ ಪ್ರದೇಶಗಳಲ್ಲಿ ತಂದೆ ತಾಯಿಗಳು ಬೆರಳು ಮಾಡಿ ತೋರಿಸಿದವನನ್ನೆ ವರಿಸುವದು ವಾಡಿಕೆಯಾಗಿ ಮುಂದುವರಿದಿರುವದು ವಿಪರ್ಯಾಸವೆ ಸರಿ.

ಕನ್ನಡ ಮೊಟ್ಟ ಮೊದಲ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ'ಯ ಇಂದಿರಾ, 'ನಭಾ' ಕಾದಂಬರಿಯ ನಭಾ ದುರಾದೃಷ್ಟ ಪಾತ್ರಗಳೆ. ಏಳು, ಎಂಟರ ಎಳೆಯ ವಯಸ್ಸಿನಲ್ಲಿ ಗಂಡ ಎಂದರೇನು? ಎಂಬ ಕಲ್ಪನೆಯನ್ನು ಕಲ್ಪಿಸುವ ಮುನ್ನವೆ ತಂದೆ, ತಾಯಿ ತೋರಿಸಿದ ವರವನ್ನು ವರಿಸಿದ್ದು, ಬಾಲ್ಯ ವಿವಾಹವು ಬಳುವಳಿಯಾಗಿದ್ದು ಚರ್ಚಿತ ಸಂಗತಿ. ಇಲ್ಲಿ ಇನ್ನೊಂದು ಮುಖ್ಯ ಅಂಶವೆಂದರೆ, ಇಲ್ಲಿಯ ಸ್ತ್ರೀಯರೆಲ್ಲರೂ ಮೊದಲ ಬಾರಿಗೆ ಮದುವೆಯ ಮಂಟಪದಲ್ಲಿ ಪತಿಯಂದಿರ ಮುಖದರ್ಶನ ಪಡೆದವರು. ದುರಂತವೆಂದರೆ ಅವರ ಸಂಸ್ಕಾರದಗಳಿಗೆಯಲ್ಲಿಯೇ ಕೊನೆಯ ದರ್ಶನ ಪಡೆದು ವೈಧವ್ಯದಲ್ಲಿ ಬಾಳಿದ್ದು ವಿಪರ್ಯಾಸದ ಸಂಗತಿ.

ಆ ಕಾಲದಲ್ಲಿ ಮಗಳ ಅಭಿಪ್ರಾಯಗಳನ್ನು ಕೇಳುವ ಸ್ಥಿತಿಯಲ್ಲಿ ತಂದೆ ತಾಯಿಗಳಿರಲಿಲ್ಲ. ಹೇಳುವ ಸ್ಥಿತಿಯಲ್ಲಿ ಮಕ್ಕಳಿರಲಿಲ್ಲ. ಹೀಗಾಗಿ ಹಿರಿಯರ ನಿರ್ಣಯಗಳಿಂದಲೇ ಬಾಲ್ಯವಿವಾಹ ನೆರವೇರುತ್ತಿದ್ದವು. ಈ ದುಷ್ಟ ಪದ್ಧತಿಗೆ ಬಲಿಯಾದ ಹೆಣ್ಣು ಮಕ್ಕಳು ಋತುಮತಿಯಾಗುವ ಮೊದಲ ವಿಧವೆಯ ಪಟ್ಟವನ್ನು ಕಟ್ಟಿಕೊಂಡ ನಿದರ್ಶನಗಳಿವೆ. ಇಂದಿರಾಬಾಯಿ ಕಾದಂಬರಿಯ 'ಇಂದಿರೆ', 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ತಿಮ್ಮಮ್ಮ, ವೆಂಕಮ್ಮ, ಕಾವೇರಿ, 'ನಭಾ' ಕಾದಂಬರಿಯ ನಭಾ, 'ನಿರ್ಭಾಗ್ಯವನಿತೆಯ', ಇಂದಿರೆ, 'ವಿರಾಗಿಣಿ' ಕಾದಂಬರಿಯ ತುಂಗೆ, 'ಇಂದಿರಾ' ಕಾದಂಬರಿಯ ದೇವಯಾನಿ, ಎಲ್ಲಾ ಪಾತ್ರಗಳು ಗಂಡನ ಮುಖದರ್ಶನ ಮಾಡಿದ್ದು ಎರಡೆ ಎರಡು ಬಾರಿ, ಒಂದು ಹಸೆಮಣೆಯಲ್ಲಿ, ಇನ್ನೊಂದು ಶವಸಂಸ್ಕಾರದ ಸಮಯದಲ್ಲಿ. ತಮ್ಮ ಚಿಕ್ಕವಯಸ್ಸಿನಲ್ಲಿ ಮದುವೆಯಾಗಿ ಇಡೀ ಜೀವನವನ್ನು ವೈದವ್ಯದ ಪಟ್ಟದಲ್ಲಿಯೇ ಬಾಲ್ಯ ಕಳೆದು ಜೀವಿಸಿದ್ದು ಸಾಮಾಜಿಕ ಹೊಣೆಗಾರಿಕೆಯ ಸಮಸ್ಯೆ ದುರಂತದ ಬದುಕು ಸವೆಸಿದ್ದಾರೆ. ತಿಮ್ಮಮ್ಮ, ವೆಂಕಮ್ಮ, ಕಾವೇರಿ, ನಭಾ, ಇಂದಿರಾ, ತುಂಗೆ, ದೇವಯಾನಿ ಪಾತ್ರಗಳು ಇಡೀ ಜೀವನವನ್ನು ವೈದವ್ಯದ ಪಟ್ಟದಲ್ಲಿಯೇ ತೃಪ್ತಿಕಂಡಿವೆ. ಇದಕ್ಕೆ ಕಾರಣ ಬಾಲ್ಯ ವಿವಾಹ ಎಂಬುದು ವಿಪರ್ಯಾಸ ಮತ್ತು ಖೇದಕರ ಸಂಗತಿ. ಇಂತಹ ತಮ್ಮ ದುಸ್ಥಿತಿಗಾಗಿ ಯಾರನ್ನೂ ಹಳಿಯದೆ ತಮ್ಮ ಕರ್ಮದ ಫಲವೆಂದು ಭಾವಿಸಿದ ದುರಂತ ಪಾತ್ರಗಳಾಗಿವೆ.

ಎಂ. ಅಣ್ಣಾಜಿರಾಯರು ಬಾಲ್ಯ ವಿವಾಹ ಕಷ್ಟಗಳನ್ನು ಮತ್ತೊಂದು ರೀತಿಯಲ್ಲಿ ಮಂಡಿಸುವರು. ಅಣ್ಣಾಜಿರಾಯ 'ಗೌರಿ' ಕಾದಂಬರಿಯಲ್ಲಿ ವೇದಪಾರಂಗತನಾದ ತ್ರಿವಿಕ್ರಮಾಚಾರ್ಯನ ದುರ್ಬಲತೆಯು ಚಿತ್ರಿತಗೊಂಡಿದೆ. ಮಡದಿಯನ್ನು ಕಳೆದುಕೊಂಡ ತ್ರಿವಿಕ್ರಮಾಚಾರ್ಯನು 'ಗೌರಿ' ಎಂಬ ಬಾಲಿಕೆಯನ್ನು ವಿವಾಹವಾಗುವ ವಿಷಯ ವಸ್ತು ಒಳಗೊಂಡಿದೆ. ಈ ವಿವಾಹವನ್ನು ಚಿತ್ರಿಸುತ್ತಾ ಕಾದಂಬರಿಕಾರರು ಗೌರಿಯ ತವರಿನ ತಂದೆ, ತಾಯಿಗಳ ಆಚಾರಬದ್ಧ ಜೀವನ ಕ್ರಮವನ್ನೆ ಚಿತ್ರಿಸುವರು. ಗೌರಿ ಓದಿದಾಕೆ, ಆದರೆ ಪರಿಸ್ಥಿತಿಯ ಅನಿವಾರ್ಯತೆಯಿಂದ ತ್ರಿವಿಕ್ರಮಾಚಾರ್ಯನನ್ನು ವಿವಾಹವಾಗಲೇಬೇಕಾಗುವದು. ಕಾದಂಬರಿಯ ಕೊನೆಗೆ ತನ್ನ ಪತಿಯನ್ನು ಕುರಿತು ಕಠಿಣವಾದ ಮಾತುಗಳನ್ನು ನುಡಿಯುವಳು(ಪು.೬೩-೬೬). ಇದಕ್ಕುತ್ತರವೆಂಬಂತೆ ಕಾದಂಬರಿಯು ಕೊನೆಯಾಗುವದು ಹೀಗೆ...... ಎಂದು ಗೌರಿಯು ಅಂತಸ್ಥವನ್ನು ಕಠಿಣವಾಗಿ ಹೇಳಿಬಿಡಲು ತ್ರಿವಿಕ್ರಮಾಚಾರ್ಯರು ಅವಳ ಮನೋದಾರ್ಢ್ಯಕ್ಕೆ ಮೆಚ್ಚಿ ತಮಗುಂಟಾದ ಚಿತ್ತವಿಕಾರಕ್ಕೆ ಪಶ್ಚಾತ್ತಾಪ ಪಟ್ಟರು. "ಈಗ ವಾನಪ್ರಸ್ಥವೆ ತಮಗೆ ಕರ್ತವ್ಯವೆಂದು ನಿರ್ಧರಿಸಿ ಕಾಂತೆಯ ಕಿವಿಗೆ ಹಾಕಿದರು. ಗೌರಿಯು ಸಿದ್ಧಳಾಗಿ ಬಂದು ನಿಂತಳು ಆಚಾರ್ಯರು ಆಸ್ತಿಯನ್ನೆಲ್ಲಾ ಸಾಮಾಜಿಕ ಸ್ಥಿತಿಯುದ್ಧರಣಕ್ಕೆ ಬಿಟ್ಟು ವಯಸ್ಸು ಮೀರಿದ ಗಂಡಸರ ದ್ವಿತೀಯ ವಿವಾಹವನ್ನು ಖಂಡಿಸಿ ಶಾಕಶಾಸ್ತ್ರ ಪಂಕ್ತಿಯ ಗ್ರಂಥವನ್ನು ರಚಿಸಿ ಕೊಟ್ಟು ಕಾಂತೆಯೊಡನೆ ವನಕ್ಕೆ ಹೊರಟು ಹೋದರು."[೪೮]

ವಿವಾಹವು ಗೌರಿ ಬಾಲಿಕೆಯ ಇಡೀ ಜೀವನವನ್ನೆ ನಾಶಮಾಡುವದು. ಆದರ್ಶದ ಬೆನ್ನು ಹತ್ತಿದ, ವಿದ್ಯಾವಂತ ಮಧ್ಯಮ ವರ್ಗದ ಬಾಲ್ಯ ವಿವಾಹದ ಚಿತ್ರಣದ ಹಂದರವೆ ಇಲ್ಲಿ ಹರಡಿಕೊಂಡಿದೆ.

ಸ್ತ್ರೀಯರು ಕಥೆ ಕಾದಂಬರಿಗಳನ್ನು ಬರೆದಾಗ ಅದನ್ನು ಆಕೆಯು ತನ್ನದೆ ಕಥೆಯೆಂಬಂತೆ ನೋಡುವ ಪ್ರವೃತ್ತಿ ಮಹಿಳಾ ಬರವಣಿಗೆಗೆ ಎದುರಾಗುವ ಸಾಧ್ಯತೆಯು ಇನ್ನೊಂದು ತೊಡಕಾಗಿ ಕಾಣುವುದು. ಈ ಅಳುಕನ್ನು ಸಾಮಾಜಿಕವಾಗಿ ಮೀರಿ ಮುಕ್ತವಾಗಿ ಬರೆಯುವ ಧೈರ್ಯ ಹೆಚ್ಚಿನ ಸ್ತ್ರೀಯರಿಗೆ ಇರುವದಿಲ್ಲ. ಹೀಗೆ ಗಮನಿಸಿದಾಗ ಅವಳನ್ನು ಹೇಗೆ ಬರೆಯಲು ಬಿಟ್ಟರು ಎಂಬುದನ್ನು ಅವಲಂಬಿಸಿದಂತೆ ಇರುವುದು. ಸ್ಥಿತ್ಯಂತರ ಯುಗದ ಮಹಿಳೆಯರ ಅಭಿವ್ಯಕ್ತಿಗೆ ಕಾದಂಬರಿ ಸೂಕ್ತ ಮಾಧ್ಯಮವಾಗಿತ್ತು. ಇಲ್ಲಿ ನಂಜನಗೂಡು ತಿರುಮಲಾಂಬರವರ ಕಾದಂಬರಿಗಳಲ್ಲೂ ಬಾಲ್ಯ ವಿವಾಹ ಕುರಿತಾದ ಚರ್ಚೆಯಿದೆ. 'ನಭಾ' ಕಾದಂಬರಿಯಲ್ಲಿ ತಮ್ಮ ಜೀವನ ಅನುಭವದ ಬಟ್ಟಿ ಇಳಿಸಿದ್ದಾರೆ. ನಭಾ ಕಾದಂಬರಿಯ ಆರಂಭ ರೋಗ ಮತ್ತು ಬಾಲ್ಯ ವಿವಾಹ ಸನ್ನಿವೇಶದೊಂದಿಗೆ ಆರಂಭವಾಗುವುದು.

ಸ್ವತಃ ಬಾಲವಿಧವೆಯಾಗಿ ಅನುಭವಿಸಿದ್ದನ್ನು ತಿರುಮಲಾಂಬ ಕಾದಂಬರಿಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದಂತೆ ಕಾಣುವದು. ಮಾತೃ ನಂದಿನಿ ಕಾದಂಬರಿಯಲ್ಲಿ ಅಕ್ಷರ ಜ್ಞಾನವನ್ನು ಪಡೆದು ವಿದ್ಯಾವಂತಳಾಗಿರುವ ಯುವತಿ ನಂದಿನಿ ಮತಾಂಧರಾದ ವಿಶ್ವನಾಥ ಹಾಗೂ ಗಣೇಶರಾಯರ ವಾದಗಳಿಗೆ ಪ್ರತಿವಿರೋಧಿಸುತ್ತಾಳೆ. "ಮಹಾಶಯ ನೀವು ನಿಮ್ಮ ಮಕ್ಕಳನ್ನು ಬಾಲ್ಯ ವಿವಾಹವೆಂಬ ಕಟ್ಟಳೆಯಲ್ಲಿ ಕೆಡಹುವ ಪ್ರಯತ್ನಕ್ಕೆ ನಿಂತು ವಯೋವಿದ್ಯಾ, ಗುಣಶೀಲಗಳಲ್ಲಿ ಪರಸ್ಪರ ಹೊಂದಿಸಲಾಗದ ಸಂಬಂಧವೆಂಬ ಆಳವಾದ ಬಾವಿಗೆ ತಳ್ಳಿ ಅವರನ್ನು ನೀವಾಗಿ ಕೆಡಿಸುತ್ತಿರುವಿರಿ"[೨೯] ಎಂದು ನೇರವಾಗಿ ಪುರುಷ ಸಮಾಜವನ್ನು, ಸಮಾಜದ ನೀತಿಯ ನಿಯಮಗಳನ್ನು ಖಂಡಿಸುವಳು. ಮುಂದುವರೆದು "ಆ ನಿಮ್ಮ ಬುದ್ಧಿ ತಿಳಿಯದ ಹುಡುಗಿಯರು, ತಾವಾಗಿ ಬಂದು ತಮ್ಮನ್ನು ಸಂಸಾರ ಚಕ್ರಗತಿಗೆ ಈಗಾಗಲೇ ಬಲಿಯಾಗಿ ಒಪ್ಪಿಸಿಬಿಡಬೇಕೆಂದು ನಿಮ್ಮನ್ನು ಕಾಡಲಿಲ್ಲವಷ್ಟೆ. ಹಾಗಾದರೆ ಅವರನ್ನೇಕೆ ಹಾಗೆ ಮೂರ್ಖರಾಗುವಂತೆ ಮಾಡಬೇಕು"[೩೦] ಎಂದು ಪ್ರಶ್ನಿಸುವ ನಂದಿನಿ ಪ್ರೌಢ ವಿವಾಹವನ್ನು ಸಮ್ಮತಿಸಿದಳಲ್ಲದೆ ಆ ನಿಟ್ಟಿನಲ್ಲಿ ನಡೆದು ತೋರಿದ್ದಾಳೆ. ಮೂಢನಂಬಿಕೆ, ಮೌಢ್ಯ ಆಚರಣೆಗಳ ಗಣಿಯಾಗಿ ತೋರುವ ಸಂತ ಮಠಾಧೀಶರುಗಳಿಂದ ಬಹಿಷ್ಕಾರದಂತಹ ನಿರೂಪಗಳು ಬಂದರೂ ಹೆದರದೆ ಬಾಳಿದಳು. ಈ ನೈತಿಕ ಪ್ರತಿಭಟನೆಯ ಹಿಂದೆ ಸ್ವತಃ ತಿರುಮಲಾಂಭಾರವರ ಬದುಕಿನ ಧ್ವನಿ ಪ್ರತಿಧ್ವನಿಸಿದೆ.

ನಂಜನಗೂಡು ತಿರುಮಲಾಂಬರವರು, ಗುಲ್ವಾಡಿ ವೆಂಕಟರಾಯರು, ಕೆರೂರು ವಾಸುದೇವಾಚಾರ್ಯರ ಬಾಲ್ಯ ವಿವಾಹದ ಸಂದರ್ಭಕ್ಕಿಂತ ವಿಭಿನ್ನ ರೀತಿಯಲ್ಲಿ ನಭಾ, ಮಾತೃ ನಂದಿನಿ ಕಾದಂಬರಿಯಲ್ಲಿ ಬಾಲ್ಯವಿವಾಹವನ್ನು ಪ್ರಶ್ನಿಸಿದ್ದಾರೆ. ಇಂತಹ ಪ್ರಗತಿಶೀಲ ವಿಚಾರ ಧೋರಣೆಗಳನ್ನು

ಕಾದಂಬರಿಕಾರರು ಬಾಲ್ಯ ವಿವಾಹದಿಂದಾಗುವ ದೋಷಗಳನ್ನು ಎತ್ತಿ ತೋರಿಸಿದಾಗ್ಯೂ ಸಹ. ಸ್ವಾತಂತ್ರ್ಯ ಪೂರ್ವದ ಬಹುತೇಕ ಕಾದಂಬರಿಗಳ ಸ್ತ್ರೀ ಪಾತ್ರಗಳು ಬಾಲವಿಧವೆಯರಾಗಿದ್ದುದನ್ನು ಎತ್ತಿ ತೋರಿಸುತ್ತವೆ. ಇದು ಇಂದಿನ ಪ್ರತಿಭಾವಂತ ಸಮಾಜದ ನಡುವೆಯೂ ಬಾಲ್ಯ ವಿವಾಹಗಳು ಘಟಿಸುತ್ತಿರುವುದು ವಿಷಾದನೀಯ. ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳು ಸ್ತ್ರೀಯರನ್ನಷ್ಟೆ ಅಲ್ಲ ಇಡೀ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಿವೆ.

ವಿಧವಾ ವಿವಾಹ:

ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ವೈಧವ್ಯ ಎಂಬುದು ಬಹುದೊಡ್ಡ ಸಮಸ್ಯೆಯಾಗಿತ್ತು. ಈ ಸಮಸ್ಯೆಯಿಂದ ಸ್ತ್ರೀಯರನ್ನು ಪಾರಾಗಿಸುವಲ್ಲಿ ಸಮಾಜ ಸುಧಾರಕರು ಕಂಡುಕೊಂಡ ಮಾರ್ಗ ವಿಧವಾ ವಿವಾಹ ಇಲ್ಲವೆ ಪುನರ್ವಿವಾಹ. ಆದರೆ ಅದು ಸರಳವಾದ ಕೆಲಸ ಆಗಿರಲಿಲ್ಲ. ಅಂದಿನ ದಿನಗಳಲ್ಲಿ ವಿಧುರರು ಮಾತ್ರ ಮದುವೆಯಾಗುವ ಅವಕಾಶ ಪಡೆದದ್ದು, ಪ್ರಜ್ಞಾವಂತ ಸ್ತ್ರೀಪುರುಷರನ್ನು ಬಲವಾಗಿ ಕಾಡುತ್ತಿತ್ತು. ವಿಧವೆಯನ್ನು ನಿರ್ಬಂಧಿಸಿರುವ ಸಮಾಜ ವಿಧುರರನ್ನೇಕೆ ನಿರ್ಬಂಧಿಸಲಿಲ್ಲ ಎಂಬ ವಿಚಾರ ನಿಗೂಢವಾಗಿಯೇ ಉಳಿದಿದ್ದರಿಂದ, ವಿಧುರರು ನಾಲ್ಕೈದು ಬಾರಿ ಮದುವೆಯಾಗುವದು, ಸರ್ವಸಾಮಾನ್ಯವಾಗಿತ್ತು. ವೃದ್ಧ ವಿಧುರರು ಕಿಶೋರಾವಸ್ಥೆಯ ಕನ್ನೆಯನ್ನು ಮದುವೆಯಾಗಲು ನಿರ್ಬಂಧಗಳಿರಲಿಲ್ಲ. ಇಂತಹ ಸಂಪ್ರದಾಯ ವಿಧಿ ನಿಯಮ ಹಾಗೂ ಕಟ್ಟಳೆಗಳ ನಡುವೆ ರಾಜಾರಾಮ ಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ ಹಾಗೂ ವಿರೇಶ ಲಿಂಗಂಪಂತಲು(೧೮೮೧) ವಿಧವಾ ವಿವಾಹ ಮಾಡಿಸಿ ಜನರಲ್ಲಿ ಜಾಗೃತಿ ಮೂಡಿಸಿದರು. ಸುಧಾರಕ, ಡಿ.ಕೆ. ಕರ್ವೆಯವರು ಸ್ವತಃ ತಾವೇ ವಿಧವೆಯನ್ನು ಮದುವೆಯಾಗಿ ವಿಧವಾ ವಿವಾಹಕ್ಕೆ ಮಾದರಿಯಾದರು. ಇಂತಹ ಸಂಗತಿಗಳು ಪ್ರಾರಂಭಿಕ ಕಾದಂಬರಿಗಳ ರಚನಾಕಾರರ ಮೇಲೆ ಪ್ರಭಾವ ಬೀರಿರುವದರಿಂದ ಬಾಲ್ಯ ವಿವಾಹಕ್ಕೆ ಪ್ರಬಲವಾದ ವಿರೋಧವನ್ನು ಲೇಖಕರು ಪ್ರಕಟಪಡಿಸಿದ್ದು ವಿಧವಾ ವಿವಾಹಕ್ಕೆ ಪ್ರೋತ್ಸಾಹಿಸಿದ್ದು ಕಾಣುವದು. ಇದಕ್ಕೆ ಸ್ಪಂದಿಸಿದ ಗುಲ್ವಾಡಿ ವೆಂಕಟರಾಯರು ಕಾದಂಬರಿಯಲ್ಲಿ ವಿಧವಾ ವಿವಾಹ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಇಂದಿರಾಬಾಯಿ' ಕಾದಂಬರಿಯ ಇಂದಿರಾಬಾಯಿ ಬಾಲವಿಧವೆಯಾಗಿ ಸ್ವ-ಇಚ್ಚೆಯಿಂದ ಭಾಸ್ಕರನೊಂದಿಗೆ ವಿವಾಹವಾಗಲು ನಿರ್ಧರಿಸಿದಾಗ ಸ್ವತಃ ತಂದೆ ತಾಯಿಗಳೇ ವಿರೋಧಿಸುತ್ತಾರೆ. ಧರ್ಮ ಪಂಡಿತರು ಮತ್ತು ಮಠಮಾನ್ಯಗಳಿಂದ ಬಹಿಷ್ಕಾರದ ಪತ್ರಗಳು ಬಂದವಾದರೂ ಅದಕ್ಕೆ ತಲೆ ಕೆಡಿಸಿಕೊಳ್ಳದೆ ವಿಧವಾ ವಿವಾಹ ಯಶಸ್ವಿಯಾಗುತ್ತದೆ. ತಮ್ಮ ವೈವಾಹಿಕ [illegible] ಒಳಗೆ ಎಲ್ಲಾ

ಧರ್ಮಶಾಸ್ತ್ರಗಳ ಸಾಕ್ಷ್ಯಾಧಾರಗಳನ್ನು ನೀಡುವುದರ ಮೂಲಕ ಬಾಲ ವಿಧವೆ ಇಂದಿರೆ ಹಾಗೂ ಸುಂದರೇಶನ ಮದುವೆ ನೆರವೇರುವಂತೆ ಮಾಡಿದ್ದಾರೆ.

ಸಮಾಜ ಸೃಷ್ಟಿಸಿದ ಯಾವುದೇ ವಿಧಿ ನಿಯಮಗಳು ಪುರುಷನಿಗೆ ಅನುಕೂಲಕರವಾಗಿ ತೋರಿದರೆ, ಸ್ತ್ರೀ ಬದುಕಿಗೆ ಮಾರಕವಾಗಿದ್ದವು. ಇಲ್ಲಿ ವೈಧವ್ಯ ಎಂಬುದು ಸ್ತ್ರೀಯನ್ನು ಅಮಂಗಲೆಯನ್ನಾಗಿ ಮಾಡಿ ನಾನಾ ವಿಧದಲ್ಲಿ ಶೋಷಣೆ ಮಾಡಿದೆ. ಇದಕ್ಕೆ ಬಾಲ ವಿಧವೆಯರು ಹೊರತಾಗಿಲ್ಲ. 'ಇಂದಿರಾಬಾಯಿ' ನಭಾ, ನಿರ್ಭಾಗ್ಯವನಿತೆ, ಇಂದಿರಾ ಕಾದಂಬರಿಗಳು ವಿಧವೆಯರ ಪರವಾದ ಚಿಂತನೆ ಕಾಣುವುದು. ಇಂದಿರಾಬಾಯಿ ಕಾದಂಬರಿಯ 'ಇಂದಿರಾಬಾಯಿ' ನಭಾ ಕಾದಂಬರಿಯ ನಭಾ ಬುದ್ಧಿ ಬೆಳೆದು ಪತಿಯೆಂದು ಗುರುತಿಸುವ ಮೊದಲೆ ವಿಧವೆಯರಾಗಿ ಆ ಕ್ಷಣದಿಂದಲೆ ಶೋಷಣೆಗೆ ಒಳಗಾಗಿದ್ದಾರೆ. ಇಂದಿರಾಬಾಯಿಯಂತು ಪತಿಯು ಸ್ವರ್ಗಸ್ಥನಾದ ಸುದ್ಧಿಯಿಂದಲೆ 'ಒಂದು ವರ್ಷಪರ್ಯಂತ ಪುರುಷರಿಗೆ ಮುಖ ತೋರಲಾಗದೆಂಬ' ತಾಯಿಯ ಕಟ್ಟಳೆಗೆ ಒಳಗಾದಳು. ತನಗೆ ತಿಳಿಯದ ಹಾಗೆ ಹಣೆಯ ಕುಂಕುಮ ಅಳಿಸಿ ತೆಗೆದದ್ದು ಅಚ್ಚರಿಯನ್ನುಂಟು ಮಾಡುತ್ತದೆ. ದಿನಕಳೆದಂತೆ ತಲೆಗೆ ಎಣ್ಣೆ ಎರೆದುಕೊಳ್ಳಲಾಗದ, ಕುಪ್ಪಸ ತೊಡಲಾಗದ, ಆಭರಣಗಳನ್ನು ಧರಿಸಲಾಗದ, ಒಳ್ಳೆಯ ಸೀರೆ ಉಡಲಾಗದ ವೈದಿಕ ಸಮಾಜದ ಆಚರಣೆಗಳ ಒತ್ತಾಯಕ್ಕೆ ಮಣಿದು ಅನುಭವಿಸಿದ ಮನೋಯಾತನೆ ಹೇಳತೀರದು. ಇದನ್ನು ಇಂದಿರಾಬಾಯಿ ಪ್ರಜ್ಞಾಪೂರ್ವಕವಾಗಿ ಅಲ್ಲಗಳೆದಿದ್ದಾಳೆ. ಇಲ್ಲಿ ಪುರುಷ ಪ್ರಧಾನ ಧೋರಣೆಯನ್ನು ಒತ್ತಾಯಪೂರ್ವಕವಾಗಿ ಹೇರಿದಂತಿದೆ. ಇಂದಿರಾಬಾಯಿ ಪುರುಷನನ್ನೆ ಸಮಸ್ಯೆಗೆ ಮೂಲವೆಂದು ಪ್ರತಿಭಟಿಸಿದ್ದನ್ನು ಕಾಣಬಹುದು. ವಿಧವೆಯರ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಗುಲ್ವಾಡಿ ವೆಂಕಟರಾಯರು ಇಂದಿರಾಬಾಯಿ ಪಾತ್ರದ ಮೂಲಕ ಈ ವ್ಯವಸ್ಥೆಯನ್ನು ಪ್ರತಿಭಟಿಸಿದ್ದಾರೆ. ಇಂದಿರಾಬಾಯಿ ಪಾತ್ರದ ಮೂಲಕ..... "ಒಬ್ಬ ಪುರುಷನಿಗೆ ಎಷ್ಟು ಸಾರಿಯಾದರೂ ಮದುವೆಯಾಗಬಹುದಂತೆ, ಸ್ತ್ರೀಗೇಕಾಗಕೂಡದು ? ಒಬ್ಬ ಸ್ತ್ರೀಯು ಪತಿಯ ಮರಣ ನಂತರ ತಲೆ ಬೋಳಿಸಿ ರೂಪವಿರೂಪ ಮಾಡಿ ಸನ್ಯಾಸದಲ್ಲಿರಬೇಕಂತೆ. ಪುರುಷನು ಪತ್ನಿಯ ಮರಣಾ ನಂತರ ತಲೆ, ಗಡ್ಡ, ಮೀಸೆ, ಬೋಳಿಸಿ ಏಕೆ ಸನ್ಯಾಸಿಯಾಗಬಾರದು."[೫೧] ಎಂದು ವೈದಿಕ ವ್ಯವಸ್ಥೆಯನ್ನು ಪ್ರಶ್ನಿಸಿ ಖಂಡಿಸಿದ್ದಾಳೆ.

ಮೊದಲ ಘಟ್ಟದ ಕಾದಂಬರಿಯಿಂದ ಪ್ರಭಾವಿತರಾಗಿ ೧೦-೧೫ ವರ್ಷಗಳ ನಂತರ ಹೊರಬಂದ ಶಿವರಾಮ ಕಾರಂತರ ವಿಚಾರ ಇನ್ನಷ್ಟು ತೀಕ್ಷ್ಣವಾಗಿದೆ. ಕಾರಂತರ 'ಕನ್ಯಾಬಲಿ' 'ಮಾಲತಿ' ತನ್ನ ಮೇಲೆ ಹೇರಲಾದ ಕಟ್ಟಳೆಗಳನ್ನು ಪ್ರಜ್ಞಾಪೂರಕವಾಗಿಯೇ ವಿರೋಧಿಸುತ್ತಾಳೆ. ತಲೆ ಬೋಳಿಸಲು ಕ್ಷೌರಿಕನಿಗೂ ಹಾಗೂ ಕರೆ ತಂದಿರುವ ತಂದೆಗೂ ಜೀವ ತೆಗೆಯುವುದಾಗಿ ಹೆದರಿಸುತ್ತಾಳೆ." ವಿಧವೆಯರೆಂದರೆ

ಪುರುಷನ ಗುಲಾಮರೆ ? ಪಶುಗಳೆ ? ಅವರ ಆಸೆಯ ಅನುರಾಗಗಳು ಅವರ ಪತಿಯ ಮರಣದೊಡನೆ ಒಮ್ಮೆಗೆ ಸುಟ್ಟು ಧ್ವಂಸವಾಗುತ್ತವೆಯೇ ? ಅದರಲ್ಲಿ ಕಾಮಾತುರತೆಯು ಇದ್ದರೆ ಬಲವಂತದಿಂದ ಮುರಿಯಲು ಬರುತ್ತದೆಯೇ"[೨೨] ಎನ್ನುವ ಮಾಲತಿಯದು ಪ್ರತಿಭಟನಾತ್ಮಕ ನೆಲೆಯದು. ಅಂತೆಯೇ ಮಾಲತಿ ಸ್ವಾವಲಂಬಿಯಾಗಿ ಬದುಕಲಿಚ್ಚಿಸಿ ಸಮಾಜವನ್ನೆ ವಿರೋಧಿಸುತ್ತಾಳೆ. ಆದರೆ ಸಮಾಜ ಅವಳನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿ ಅವಳ ಬಾಳನ್ನೆ ದುರಂತವಾಗಿಸುತ್ತದೆ. ಒಟ್ಟಾರೆ ಗಮನಿಸಲಾಗಿ ಅಂದಿನ ವಿಧವೆಯರ ಸ್ಥಿತಿ ಅಗ್ನಿಕುಂಡದಲ್ಲಿ ಬಿದ್ದು ಸಾಯುವ ಹುಳುವಿನಂತಹದ್ದು. ಇದನ್ನು ಮನಗಂಡ ಮೊದಲ ಘಟ್ಟದ ಕಾದಂಬರಿಕಾರರು ಸಾಂಪ್ರದಾಯಿಕ ವೈಚಾರಿಕ ಮಿತಿಯಲ್ಲಿಯೇ ಈ ಸಮಸ್ಯೆಯನ್ನು ಮುರಿದು ಹೊಸದಾರಿ ರೂಢಿಸಲು ಪ್ರಯತ್ನಿಸಿದ್ದಾರೆ.

ಸುಧಾರಣಾವಾದದ ಹಿನ್ನೆಲೆಯಲ್ಲಿ ಸ್ತ್ರೀಯರ ಬದುಕನ್ನು ಉತ್ತಮ ಪಡಿಸುವ ಪ್ರಯತ್ನಗಳು ಪ್ರಸ್ತುತ ಕಾದಂಬರಿಗಳಲ್ಲಿ ನಡೆದಿದೆ. ದೇವಯಾನಿ ವಿಧವೆಯಾದ ನಂತರ ಆಕೆಯ ತಂದೆ "ಸುಬ್ಬರಾಯರು ಇವಳಿಗೆ ಉಚ್ಚ ಪ್ರತಿಯ ಶಿಕ್ಷಣ ಕೊಟ್ಟು, ಚಿತ್ರಕಲೆ ಉಪಯುಕ್ತವಾದ ಶಿಕ್ಷಣವನ್ನಾದರೂ ಕೊಡಿಸಿದ್ದನು. ಸುಬ್ಬರಾಯ ಸುಧಾರಕ ಪಂತದವನಾಗಿದ್ದರಿಂದ ದೇವಯಾನಿಯ ಪುನರ್ವಿವಾಹ ಮಾಡಬೇಕೆಂದು ವಿಚಾರದಲ್ಲಿದ್ದವನು."[೨೩] ಇಲ್ಲಿ ಮುಖ್ಯವಾಗಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಕುರಿತು ಕಾದಂಬರಿಕಾರರಿಗಿರುವ ಕಾಳಜಿ ವ್ಯಕ್ತವಾಗುತ್ತದೆ. ಹಿಂದೂ ಸಂಸ್ಕೃತಿಯ ವೈಭವೀಕರಣ ಮಾಡುತ್ತಾ ಉನ್ನತ ಸಂಸ್ಕೃತಿಯನ್ನು ಅಂದರೆ ವೈದಿಕ ಸಂಸ್ಕೃತಿಯನ್ನು ಪ್ರತಿಪಾದಿಸಿದರು. ಪ್ರಜ್ಞಾ ಪೂರ್ವಕ ನೆಲೆಯಲ್ಲಿ ಈ ಪ್ರಕ್ರಿಯೆ ನಡೆದಿರುವದು ಗಮನೀಯ ವಿಚಾರ.

ಮತ್ತೊಂದೆಡೆ ಕೆರೂರು ವಾಸುದೇವಾಚಾರ್ಯರು "ಪುನರ್ವಿವಾಹವು ಕರ್ತವ್ಯವಿರಲಿ ಇರದೆ ಇರಲಿ ವಿಧವೆಯರ ವಧನವು ಅನಾಚಾರವೆಂದು ಕೆಲ ಪಂಡಿತರ ಮತವಿರುತ್ತದೆ. ವಿಧವೆಯಾದ ಎಳೆ ಮಕ್ಕಳ ಕ್ಷೌರವನ್ನು 'ಅಸುಭಸ್ಯ ಕಾಲಹರಣಂ' ಎಂಬ ನ್ಯಾಯಕ್ಕನುಸರಿಸಿ ಬಹುಶಃ ಮುಂದೆ ಮುಂದಕ್ಕೆ ಹಾಕುವ ಪರಿಪಾಠ ಬಿದ್ದು ಹೋಗಿದೆ. ಪ್ರೌಢವಿಧವೆಯರ ಮುಂಡನವನ್ನು ಕೂಡ ಕೆಲವು ಮನೆತನದವರು ನಿಲ್ಲಿಸಿಬಿಟ್ಟಿರುವರು."[೨೪] ಎಂಬ ಸಂಗತಿ ಅನಿಷ್ಠ ನಿಯಮಗಳ ಜೊತೆಗೆ ಆಧುನಿಕತೆ, ಮತ್ತು ಸಾಂಪ್ರದಾಯಕತೆ ಎರಡರ ಸಂಘರ್ಷವನ್ನು ಪಾತ್ರಚಿತ್ರಣಗಳ ಮೂಲಕವೇ ನಿರ್ವಹಿಸಿದ್ದು ವೈಶಿಷ್ಟ ಪೂರ್ಣವಾಗಿದೆ. ರಾಧಾಬಾಯಿ, ಬಾಷ್ಕಳಪಂತ, ರಮಾಕಾಂತ, ಇಂದಿರೆ ಇವರುಗಳ ಸಂಭಾಷಣೆಯ ಮೂಲಕ ಕೆರೂರರು ಆಧುನಿಕತೆಯನ್ನು ಅಳವಡಿಸಿಕೊಂಡ ಸುಧಾರಣಾವಾದಿಗಳನ್ನು ತೀವ್ರವಾಗಿ ವಿಡಂಬಿಸುತ್ತಾ ಉನ್ನತ ಸಾಮಾಜಿಕ ಸಂಸ್ಕೃತಿಯ ಕಡೆ ವೈಭವೀಕರಣಕ್ಕೆ ಮುಖ ಮಾಡಿದಂತಿದೆ. ಮುಂದುವರೆದು ಕಾದಂಬರಿಯಲ್ಲಿ ರಾಧಾಬಾಯಿಯು 'ರಮಾಕಾಂತರೇ ಪುನರ್‌ವಿವಾಹ. ಪ್ರಬುದ್ಧ ಕನ್ಯಾ

ವಿವಾಹ, ಸ್ತ್ರೀ ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಸ್ತ್ರೀಯರ ಸ್ವಾತಂತ್ರ್ಯಕ್ಕೆ ನೀವು ಅನೂಕೂಲರಿರುವಿರೇನು ? ಎಂದು ರಾಧಾಬಾಯಿಯು ಕೇಳಿದಾಗ, ರಮಾಕಾಂತ 'ಇವುಗಳ ಬಗ್ಗೆ ನಾನು ಓದಿರುವೆನು. ಆದರೆ ನನ್ನ ಮತವು ಈ ಕಾಲಕ್ಕೆ ಹೀಗೆ ಇರುವದೆಂದು ಹೇಳಲಾರೆನು. ಸ್ತ್ರೀಯರು ಉಚ್ಚಪ್ರವೃತ್ತಿಯ ಶಿಕ್ಷಣ ಹೊಂದುವದು ಅವಶ್ಯ. ಅವರ ಅಭಿಪ್ರಾಯ ಪೂರ್ಣವಾಗಿ ಬೆಂಬಲವೂ ಇಲ್ಲದೆ ಕೊಟ್ಟಂತೆಯೂ ಅಲ್ಲದೆ ದ್ವಂದ್ವಪೂರ್ಣವಾಗಿದೆ.

ಇದು ಅಲ್ಲದೆ ಇದೇ ಇಂದಿರಾ ಕಾದಂಬರಿಯಲ್ಲಿ ಪಂಡಿತೆ ರಾಧಾಬಾಯಿ ಮೂರು ಬಾರಿ ಪುನರ್‌ವಿವಾಹವಾಗುತ್ತಾಳೆ. ಮೂರು ಪತಿಯರು ತೀರಿಕೊಳ್ಳುವರು. ನಂತರ 'ಸಾರಸ್ವತ ಸದನ' 'ಉಪಾಸನಾ ಸಮಾಜ' ಮುಂತಾದ ಸಮಾಜ ಸುಧಾರಕ ಸಂಸ್ಥೆಗಳನ್ನು ಸ್ಥಾಪಿಸಿ ಸ್ತ್ರೀಯರ ಉದ್ಧಾರಕ್ಕಾಗಿ ಪ್ರಯತ್ನಿಸುವದು ಕಂಡುಬರುತ್ತದೆ. ಇಲ್ಲಿ ಚಿತ್ರಿತ ಸಮಾಜವನ್ನು ಪ್ರಾದೇಶಿಕ ಅಂತರದಿಂದ ಕಂಡಿದ್ದಾರೆ. ಕಥೆ ನಡೆಯುವದು ಮೈಸೂರು ಬೆಂಗಳೂರು ಕಡೆಯಾದರೆ ಅವರು ಉತ್ತರ ಕರ್ನಾಟಕದವರು. ಅದರಂತೆ ಓದುವ ವರ್ಗದ ಮೇಲಾಗುವ ಪರಿಣಾಮವನ್ನು ತಪ್ಪಿಸಲು ಸಾಧ್ಯವಾಗುವದೆಂಬ ವಿಶ್ವಾಸವಿದ್ದಂತೆ ಕಾಣುವದು. "ಸಾಮಾಜಿಕ ವಿಚಾರದಲ್ಲಿ ಅವರ ದೃಷ್ಟಿ ಪ್ರಗತಿಪರವಾಗಿದ್ದರೂ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಹೊಸಬಾಳು ರೂಪುಗೊಳ್ಳಬೇಕೆಂದು ವಾದಿಸುತ್ತಿದ್ದರು."[೨೨] ಎಂಬ ಪ್ರಿ.ಎಂ. ಇನಾಂದಾರವರ ಮಾತು ಆರಂಭದ ಬಹುತೇಕ ಕಾದಂಬರಿಗಳಿಗೆ ಒಪ್ಪುತ್ತದೆ. ಅದಕ್ಕೆ ಆಗಿನ ಸಾಂಸ್ಕೃತಿಕ ಸಂದರ್ಭ ಕಾರಣವಿದ್ದರೂ ಲೇಖಕರ ವೈಯಕ್ತಿಕ ದೋರಣೆ ಸಂಪ್ರದಾಯದ ಪರ ಮತ್ತು ವಿರೋಧವಾಗಿ ಪ್ರತಿಕ್ರಿಯಿಸಿರುವುದು ಮುಖ್ಯವೆನಿಸುತ್ತದೆ.

ವಿಧವಾ ಸಮಸ್ಯೆಯು 'ಇಂದಿರಾಬಾಯಿ' ಕಾದಂಬರಿಯಲ್ಲಿ ಮುಖ್ಯ ಸಮಸ್ಯೆಯಾಗಿದ್ದರೆ, 'ಇಂದಿರಾ' ಕಾದಂಬರಿಯಲ್ಲಿ ಅನುಷಂಗಿಕವಾಗಿ ಬಂದಿದೆ. ಎರಡು ಪುನರ್‌ವಿವಾಹಗಳು ಆದರ್ಶ ಮದುವೆಯಾಗಿದ್ದರೂ ಸಂಪ್ರದಾಯದ ಚೌಕಟ್ಟಿನಿಂದ ಸಂಪೂರ್ಣವಾಗಿ ಹೊರಗುಳಿಯುವದರಿಂದ ಆಯಾ ವಿವಾಹ ವರ್ಣನೆಗಳಿಂದ ತಿಳಿದು ಬರುವದು. 'ಇಂದಿರಾಬಾಯಿ'ಯಲ್ಲಿ ಯಥಾಪ್ರಕಾರ ವಧುವರರ ಶೃಂಗಾರದ ಜೊತೆಗೆ ದೇಶಿಯ ಮತ್ತು ವಿದೇಶಿಯ ವಾದ್ಯಗಳು, ವೇದಶಾಸ್ತ್ರ ವಿಧಿ ವಿಧಾನಗಳಿಂದ ಶಾಸ್ತ್ರೋಕ್ತ ಕ್ರಮಗಳೊಂದಿಗೆ ಇಂದಿರಾಬಾಯಿಯನ್ನು ಭಾಸ್ಕರರಾಯನಿಗೆ ಅಮೃತರಾಯ ಜಲಜಾಕ್ಷಿಯರು ಧಾರೆಯೆರೆದು ಕೊಟ್ಟರೆ, ಕೆರೂರರ 'ಇಂದಿರಾ'ದಲ್ಲಿ "ಉಚ್ಚಕುಲದ ಬ್ರಾಹ್ಮಣರಲ್ಲಿ ಮತ್ತೊಂದು ಮಹತ್ವವಾದ ಪುನರವಿವಾಹವು" ಎಂಬ ಶಿರೋಲೇಖನದ ಕೆಳಗೆ ಬಾಷ್ಕಳಪಂತ, ಕಮಲೆಯರ ಪುನರ್‌ವಿವಾಹದ ಸಾದ್ಯಂತವಾಗಿ ವಿವರಿಸಿದರು. ವಧು-ವರರ ವಸ್ತ್ರ ಭೂಷಣಗಳ ವರ್ಣನೆ ವಿವಾಹಮಂತ್ರೋಪದೇಶಕನಾದ ಬ್ರಹ್ಮ ತಪೋನಿಧಿಯ ಚರಿತೆ ವಿವಾಹಕ್ಕೆ ಬಂದಿದೆ. ೞ

ಪರಿಷ್ಕಾರ ನಾಮಾವಳಿ ಮುಂತಾದ ಲೇಖನಗಳಿಂದ ತುಂಬಿದ ಸುಧಾರಕ ಪತ್ರವನ್ನು ಕೆಂಪು ಮಸಿಯಿಂದ ಮುದ್ರಿಸಿದ್ದರು."[೫೬] ಎಂಬ ವಿಚಾರ ಸಂಪ್ರದಾಯ ಒಲವು ಇಲ್ಲಿ ಎದ್ದು ಕಾಣುವದು. ಪರಿಷ್ಕರಣೆಯ ಅಡಿಯಲ್ಲಿ ಒಳ ಬಂದಿರುವದು ಇಲ್ಲಿ ಗಮನಾರ್ಹವಾಗಿದೆ.

'ಇಂದಿರಾಬಾಯಿ', 'ಇಂದಿರಾ' ಕಾದಂಬರಿಗಳಿಗೆ ವಿರುದ್ಧ ವಿಚಾರಗಳು ನಂಜನಗೂಡು ತಿರುಮಲಾಂಬರವರ 'ನಭಾ', 'ಸುಶೀಲೆ', 'ವಿರಾಗಿಣಿ' ಕಾದಂಬರಿಗಳಲ್ಲಿ ಚರ್ಚೆಯಾಗಿದೆ. ವಿಧವೆಯ ಮೇಲೆ ಅನಾವಶ್ಯವಾಗಿ ಒತ್ತಾಯದಿಂದ ಹೇರುವ ಗೊಡ್ಡು ಆಚರಣೆಗಳನ್ನು ತಿರುಮಲಾಂಬ ಅವರು 'ನಭಾ' ಕಾದಂಬರಿಯಲ್ಲಿ ವಿರೋಧಿಸಿದ್ದು ಕಾಣುವದು. ಚಿಕ್ಕಪ್ಪ ಚಿಕ್ಕಮ್ಮಳ ಆಶ್ರಯದಲ್ಲಿರುವ ವಿಧವೆ ನಭಾಳದ್ದು, ಅಸ್ಪೃಶ್ಯ ಬದುಕು, ಅದನ್ನು ಎದುರಿಸಿ ಬಾಳುವ ಶಕ್ತಿಯಿಲ್ಲ 'ನಭಾ'ಳ ಕೂದಲು ದೊಡ್ಡ ರಾದ್ಧಾಂತವೆ ಆಗುವದು. ಇಲ್ಲಿ ಪುನರ್ವಿವಾಹ ಚರ್ಚೆಯಾಗಿದೆ. ಮಹಿಳೆಯ ಮರು ವಿವಾಹದ ಸಾಧಕ ಬಾಧಕಗಳನ್ನು ಚರ್ಚಿಸಲಾಗಿದೆ. ಪುನರ್ವಿವಾಹವನ್ನು ವಿರೋಧಿಸುವಷ್ಟು ಅಲ್ಲ, ದೈಹಿಕ ಸುಖವನ್ನು ತ್ಯಜಸಿದ ನಭ ಸುಖಕ್ಕೆ ಹಂಬಲಿಸದೆ ದೇಶ ಕ್ಷೇಮಕ್ಕಾಗಿ ಏಕಪತ್ನಿತ್ವ ವಿವಾಹವೇ ಉತ್ತಮವೆಂದು ನಿರ್ಧಾರ ತೆಗೆದುಕೊಂಡುಬಿಡುತ್ತಾಳೆ. ಅಕ್ಕ ಮಾವಂದಿರ ಆಶ್ರಯ ಪಡೆದ ವಿದ್ಯಾವಂತ ರಾಜಶೇಖರ ನಭಾಳ ಸೌಂದರ್ಯಕ್ಕೆ ಮಾರು ಹೋಗಿ ಮರುವಿವಾಹಕ್ಕೆ ಒಪ್ಪಿಸುವ ತಂತ್ರವನ್ನು ನಭಾಳಿಂದಲೆ ಲೇಖಕರು ತಿರಸ್ಕರಿಸುವ ಸಂಗತಿಯನ್ನು ಹುಟ್ಟುಹಾಕಿದ್ದಾರೆ. ಈ ಸಂಗತಿ ಗಮನಿಸಲಾಗಿ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ನೆಲೆ ಇಲ್ಲದ ಸ್ತ್ರೀ, ವಿಧವೆಯಾದಾಗ ಅಭದ್ರತೆಯು ಮಗ್ಗಲು ಮುಳ್ಳಾಗುವದು. ವಿಧವೆಯರು ಎದುರಿಸಬೇಕಾದ ಕ್ರೌರ್ಯ, ಸಂಶಯದ ಭೀತಿ, ಕಷ್ಟ ಸಂಗತಿಗಳ ಚಿತ್ರಣವು ಇಲ್ಲ ಸ್ಪಷ್ಟವಾಗಿ ಬಂದಿದೆ.

ವಿಧವೆಯರ ಸಮಸ್ಯೆಗಳು ಒಂದೆರಡಲ್ಲ ಕುಟುಂಬ, ಸಮಾಜ, ನೆರೆಹೊರೆಯ ಆಪಾದನೆಗಳ ಆಗರವೆ ಆಗಿರುವದು. ವಿಧವೆಯಾದ ನಭಾ ರಘುನಾಥನಲ್ಲಿ ಆಶ್ರಯ ಪಡೆಯುವಳು. ಸುತ್ತಮುತ್ತಲಿನವರಿಂದ ಸಾಕಷ್ಟು ಸಾರಿ ಸಂಕಷ್ಟಕ್ಕೀಡಾಗುವಳು. ಧೈರ್ಯಗೆಡದೆ ತನ್ನ ವಿದ್ಯಾಭ್ಯಾಸ ಮುಂದುವರೆಸುವಳು. ಬ್ರಹ್ಮವಿದ್ಯಾ ಸಮಾಜದವರಿಂದ ಪ್ರಭಾವಿತಳಾಗಿ ಸಕ್ರಿಯ ಸದಸ್ಯಳಾದದ್ದು ಕಾಣುವದು. ಈ ಕುರಿತು "ಇಲ್ಲಿಯ ಪ್ರತಿಯೊಂದು ಸಮಾಜಕ್ಕು ಸಹಾಯಕರು, ಬ್ರಹ್ಮವಿದ್ಯಾ ಸಮಾಜದ ವಿಚಾರಸಾ ಕರ್ತಾರಕರು. ಅದರ ಮತ್ತೊಂದು ಶಾಖೆ 'ಸ್ತ್ರೀ ಸಂಘ ಪರಿಷ್ಕರಣಕ್ಕೂ' ಪ್ರಯತ್ನ ಪಟ್ಟರು."[೫೭] ಮನದಾಳದಲ್ಲಿ ಅವಳಿಗೆ ಅಭದ್ರತೆ ಕಾಡಿದ್ದು ಸುಳ್ಳಲ್ಲ. ಜೊತೆಗೆ ವಿಧವೆಯರ ಮನೋಸ್ಥಿತಿಯ ಕೈಗನ್ನಡಿಯಾಗಿದೆ. ತುಂಗೆಯ ಪಾತ್ರವು ಇದನ್ನು ಮತ್ತಷ್ಟು ಪುಷ್ಟಿಕರಿಸುವದು. ತುಂಗೆಯು ವಿರಾಗಿಣಿಗೆ ಸಂಪೂರ್ಣ ವಿಧೇಯಳಾಗಿಬಿಡುವಳು. ಇದು ಅವರಿಬ್ಬರ ಸಂಭಾಷಣೆಯಲ್ಲಿ ಕಾಣುವದು. "ವಿರಾಗಿಣಿ ! ನನ್ನ ಪ್ರಾಣ ದೇಹ ಸಮಸ್ತವೂ ನಿನ್ನದು. ನೀನು ಮಾಡಿದಂತೆ ಮಾಡು. ನನ್ನನ್ನೇನಾದರೂ ಮಾಡು ಈ

ಸ್ಥಿತಿಯಲ್ಲಿ ಮಾತ್ರ ಬಿಡಬೇಡ ! ಉಪೇಕ್ಷಿಸಬೇಡ !! ಮತ್ತೆ ಮತ್ತೆ ಬೇಡುವೆನು. ಅಪರಾಧವನ್ನು ಮರೆತು ಶಾಂತಗೊಳಿಸು ![೨೮] ಎಂಬಲ್ಲಿ ತುಂಗೆಗೆ ಘೋರಕರ್ಮದ ಫಲದ ಪ್ರತಿಫಲ, ದುರ್ಜೀವನದ ಸಂಗತಿಗಳು ಮನುಷ್ಯನನ್ನು ಬಿಟ್ಟು ಹೋಗಲಾರವು. ಸಾವು ಸ್ತ್ರೀಯರ ಮನೋದೌರ್ಬಲ್ಯ ಕುಂದಿಸುವದು ಎಂಬ ಸಂಗತಿ ಪುಷ್ಟಿಕರಿಸುವದು.

ಬಾಲವಿಧವೆಯಾಗಿ ಬ್ರಹ್ಮಚರ್ಯವನ್ನು ನಂಜನಗೂಡು ತಿರುಮಲಾಂಬ ಪಾಲಿಸಿಕೊಂಡು ಬರಬೇಕಾಯಿತು. ಈ ಮನೋಸ್ಥಿತಿಯ ತುಮುಲುಗಳು ತಮ್ಮ ಕಾದಂಬರಿಗಳ ಪಾತ್ರಗಳಲ್ಲಿ ಜೀವನ ಕ್ರಮದ ಕೆರೆ, ಕಟ್ಟೆ, ಕೊಳ ದೇವಾಲಯಗಳಲ್ಲಿ ನಡೆಯುವ ವ್ಯಭಿಚಾರಗಳ ಚಿತ್ರಣ ವೈಫಲ್ಯ ಜೀವನ ಕ್ರಮಗಳು. ಬಾಲವಿಧವೆತನ, ಪುನರ್‌ವಿವಾಹ, ಶೈಕ್ಷಣಿಕ ಮಹತ್ವ ಸ್ತ್ರೀಧರ್ಮ ಸುಧಾರಣಾ ಪ್ರಯತ್ನಗಳಲ್ಲಿ ಜರುಗಿವೆ. ಈ ಸಂಗತಿಗಳ ತರ್ಕ ಆಲೋಚನೆಯನ್ನು ವಿಜಯಾ ದಬ್ಬೆಯವರ 'ತಿರುಮಲಾಂಬರವರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳ ಇತಿಹಾಸ ನೆನೆಯುವಂತಹದ್ದು"[೨೯] ಎಂಬ ಅಭಿಪ್ರಾಯ ಸೂಕ್ತವಾಗಿದೆ.

ಬ್ರಾಹ್ಮಣ ವರ್ಗದ ವಿಧವೆಯರಿಗೆ ಹೊರತಾಗಿ ಬಾಳಿದವರು ಮದ್ಯಮವರ್ಗ, ಕೆಳವರ್ಗದ ವಿಧವೆಯ ವಿಚಾರದಲ್ಲೂ ವರ್ಗಭೇದ ಕಾಣುವದು. ನಿಸರ್ಗದತ್ತವಾದ ದೈಹಿಕಮಾನಸಿಕ ಕಾಮನೆಗಳನ್ನು ತೀರಿಸಿಕೊಳ್ಳಲು ಪುನರ್ವಿವಾಹವಾದ ಅಂಶ ಮೇಲ್ನೋಟಕ್ಕೆ ಕಂಡರೂ, ಇದರ ಹಿಂದೆ ಬಡತನದ ಭೂತವಿದೆ. ಅಧಿಕಾರಸ್ಥರ ಲೈಂಗಿಕ ಶೋಷಣೆಯಿದೆ. ವಿಧವಾ ವಿವಾಹ ಭಾರತೀಯ ಸಂಸ್ಕೃತಿಯ ಸಮಸ್ಯೆಯಾಗಿದ್ದು, ಬದಲಾವಣೆಯ ತರ್ಕ ಹುಟ್ಟಿಕೊಂಡಿದ್ದು ಗಮನಾರ್ಹವಾದದ್ದು. ಮೇಲ್ವರ್ಗದ ಸ್ತ್ರೀಪಾತ್ರಗಳು ತಮಗಿಂತಲೂ ಮೂರು ಪಟ್ಟು ವಯಸ್ಸುಳ್ಳ ಪತಿಯಂದಿರಿಂದ ಶೋಷಣೆಗೆ ಒಳಗಾದವರೆ. ಮಧ್ಯಮವರ್ಗ ಮತ್ತು ಕೆಳವರ್ಗದವರಲ್ಲಿ ಬಹುಪತ್ನಿತ್ವ ಪದ್ಧತಿ ಸಾಮಾನ್ಯವಾಗಿ ಪ್ರಚಲಿತವಿತ್ತು. ಬ್ರಾಹ್ಮಣ ವರ್ಗದ ಪ್ರೌಢ ವಿಧವೆಯರು ಸಮಸ್ಯೆಗಳನ್ನು ಮೈಗೂಡಿಸಿಕೊಂಡು ಬದುಕಿದವರು. ಈ ವಿಧವೆಯರು ಮಕ್ಕಳ ಲಾಲನೆ ಪಾಲನೆಯಲ್ಲಿ ನಿರತರಾಗಿರುವದರಿಂದ ಸ್ವಲ್ಪ ಮಟ್ಟಿನ ಸಮಸ್ಯೆ ದೂರವಾದಂತೆ ಕಾಣುವದು.

ಮೇಲ್ವರ್ಗದವರನ್ನು ಕಾಡಿದ ವಿಧವಾ ಸಮಸ್ಯೆ ಮಧ್ಯೆಮ ಮತ್ತು ಕೆಳವರ್ಗದವರ ಬಗ್ಗೆ ಇಲ್ಲಿ ಉದಾರತೆ ಕಾಣುವದು. ಪತಿ ತೀರಿದ ಮೇಲೆ ಕೇಶಮುಂಡನವು ವರ್ಗಕ್ಕನುಸಾರವಾಗಿ ಬಳಕೆಯಲ್ಲಿತ್ತು. 'ಇಂದಿರಾಬಾಯಿ', 'ಸಭಾ' ಕಾದಂಬರಿಯ ಪಾತ್ರಗಳಲ್ಲಿ ಈ ಚಿತ್ರಣ ಕಂಡಿವೆ. ಕೆಳವರ್ಗದ ತಿಕ್ಕಾಟ ವಿಧವಾ ವಿವಾಹದಲ್ಲೂ ಕಂಡಿವೆ. ಒಟ್ಟಾರೆಯಾಗಿ ಯಾವುದೇ ಜಾತಿ, ಜನಾಂಗದ ವಿಧವೆಯಾಗಿದ್ದರೂ ಅವಳ ಜೀವನ ಸಮಸ್ಯೆಗಳ ಸಂತೆಯಂತಿತ್ತು. ಮೇಲ್ವರ್ಗದ ವಿಧವೆಯರು ಮಾನಸಿಕ ಹಿಂಸೆಯಿಂದ

ಬೆಂದಿದ್ದರೆ. ಕೆಳವರ್ಗದ ವಿಧವೆಯರು ಮಾನಸಿಕ ಮತ್ತು ದೈಹಿಕವಾಗಿ ಜೀವನವಿಡಿ ಬೆಂದಿದ್ದಾರೆ. ನಭಾ ಕಾದಂಬರಿಯ 'ನಭಾ', ವಿರಾಗಿಣಿ ಕಾದಂಬರಿಯ 'ವಿರಾಗಿಣಿ' ಪಾತ್ರ ಇದನ್ನು ಚಿತ್ರಿಸುವವು. ಇಂದಿರಾಬಾಯಿ ಕಾದಂಬರಿಯ ಇಂದಿರೆಯ ವಿಷಯದಲ್ಲಿ ಎಣ್ಣೆ ಹಚ್ಚಿ ತಲೆಬಾಚಿಕೊಂಡ ಮಾತ್ರಕ್ಕೆ ಶೋಷಣೆಗೆ ಒಳಗಾದದ್ದಿದೆ. "ತಲೆಗೆ ಎಣ್ಣೆ ಇಲ್ಲದಿದ್ದರೆ ಕಣ್ಣಿಗೆ ಕೇಡಲ್ಲವೇ"(ಪು.೧೪೬) ವೈಚಾರಿಕತೆಯ ತರ್ಕದೊಂದಿಗೆ ಇಲ್ಲಿ ಅಮ್ಮನನ್ನು ಎದುರಿಸಲಾಗದ ಸ್ಥಿತಿ ಬರುವುದು. ಧರ್ಮಶಾಸ್ತ್ರ ಹೇಳುವಂತೆ ಮೇಲ್ವರ್ಗದ ಪುರುಷರು ಶೂದ್ರ ಸ್ತ್ರೀಯರನ್ನು ಮದುವೆಯಾಗಬಹುದಿತ್ತು. ಆದರೆ ಶೂದ್ರ ಪುರುಷ ಮೇಲ್ವರ್ಗದ ಸ್ತ್ರೀಯರನ್ನು ಮದುವೆಯಾಗುವಂತಿರಲಿಲ್ಲವೆಂಬುದೇ ದೊಡ್ಡ ವಿಷಮ ದೃಷ್ಟಿಕೋನವಾಗಿತ್ತು.

ವಿಧವಾ ಸಮಸ್ಯೆಯು ಮೊದಲಘಟ್ಟದ ಸ್ವತಂತ್ರ ಕಾದಂಬರಿಗಳಾದ 'ಇಂದಿರಾಬಾಯಿ' ಕಾದಂಬರಿಯಲ್ಲಿ ಮುಖ್ಯ ಸಮಸ್ಯೆಯಾಗಿದ್ದರೆ, 'ಇಂದಿರಾ' ಕಾದಂಬರಿಯಲ್ಲಿ ಅನುಷಂಗಿಕವಾಗಿ ಮೂಡಿಬಂದಿದೆ. ಎರಡು ವಿಧವಾ ಪುನರ್ವಿವಾಹಗಳು ಆದರ್ಶ ಮದುವೆಗಳಾಗಿದ್ದರೂ ಸಾಂಪ್ರದಾಯಿಕ ಚೌಕಟ್ಟಿನಿಂದ ಸಂಪೂರ್ಣವಾಗಿ ಹೊರಗುಳಿದಿರುವುದು ಅಯಾ ವಿವಾಹ ವರ್ಣನೆಗಳಿಂದ ತಿಳಿದುಬರುವುದು. 'ಇಂದಿರಾಬಾಯಿ'ಯಲ್ಲಿ ಯಥಾಪ್ರಕಾರ ವಧುವರರ ಶೃಂಗಾರದ ಜೊತೆಗೆ ದೇಶೀಯ ಮತ್ತು ವಿದೇಶೀಯ ವಾದ್ಯಗಳು ವೇದಶಾಸ್ತ್ರ ವಿಧಿವಿಧಾನಗಳಿಂದ ಶಾಸ್ತ್ರೋಕ್ತವಾಗಿ ಕ್ರಮಬದ್ಧತೆಯಿಂದ ಇಂದಿರಾಬಾಯಿಯನ್ನು ಭಾಸ್ಕರನಿಗೆ ಅಮೃತರಾಯ, ಜಲಜಾಕ್ಷಿ ಧಾರೆ ಎರೆದು ಕೊಟ್ಟರೆ, ಕೆರೂರು ವಾಸುದೇವಾಚಾರ್ಯರ 'ಇಂದಿರಾ'ದಲ್ಲಿ "ಉಚ್ಚಕುಲದ ಬ್ರಾಹ್ಮಣರಲ್ಲಿ ಮತ್ತೊಂದು ಮಹತ್ವವಾದ ಪುನರ್ವಿವಾಹವು" ಎಂಬ ಶಿರೋಲೇಖನದ ಕೆಳಗೆ ಬಾಷ್ಕಳಪಂತ ಕಮಲೆಯರ ಪುನರವಿವಾಹದ ಸಾದ್ಯಂತವಾಗಿ ವಿವರಿಸಿದ್ದಿದೆ. ವಧುವರರ ವಸ್ತ್ರಭೂಷಣಗಳ ವರ್ಣನೆ, ವಿವಾಹ, ಮಂತ್ರೋಪದೇಶಕನಾದ ಬ್ರಹ್ಮೋತಪೋನಿಧಿಯ ಚರಿತ್ರೆ, ವಿವಾಹಕ್ಕೆ ಬಂದಿದ್ದ ಆಪ್ತರಿಷ್ಟರ ನಾಮಾವಳಿ ಮುಂತಾದ ಲೇಖನಗಳಿಂದ ತುಂಬಿದ ಸುಧಾರಕ ಪತ್ರವನ್ನು ಕೆಂಪು ಮಸಿಯಿಂದ ಮುದ್ರಿಸಿದ್ದರು[೬೦](ಪು.೩೪೪) ಎಂಬ ವಿಚಾರ ಬರುತ್ತದೆ. ಇಲ್ಲಿ ಲೇಖಕರ ಸಾಂಪ್ರದಾಯಿಕ ಒಲವು ಪರಿಷ್ಕರಣೆ ಅಡಿಯಲ್ಲಿ ನುಸುಳಿದ್ದು ಗಮನಾರ್ಹವಾಗಿದೆ. ಇದು ಆ ಕಾಲಕ್ಕಿದ್ದ ಚಾರಿತ್ರಿಕ ಅನಿವಾರ್ಯತೆ ಎಂದು ಒಂದು ಕಡೆ ಹೇಳಿದರೆ, ಸಾಂಪ್ರದಾಯಿಕ ವಿರೋಧಿ ದೋರಣೆ ಲೇಖಕರ ಪ್ರಗತಿಶೀಲತೆ ಹೇಳುವುದು. ಸಿ.ಎನ್.ರಾಮಚಂದ್ರನ್ ರವರು "ತದ್ವಿರುದ್ಧವಾಗಿ ಎರಡನೆ ಮದುವೆಯಲ್ಲಾದರೂ ಹಿಲಾಲಗಳು ತೌಪಿಯಿಂದ ಕೂಡಿದ ದಿಬ್ಬಣವಿಲ್ಲ. ಮದುವೆಗೆ ಸಿದ್ಧವಾದವನನ್ನು ಕಾಶಿಯಾತ್ರೆಗೆ ಕಳುಹಿಸುವ ನಾಟಕವಿಲ್ಲ. ಸಂಭ್ರಮವಿದೆ. ವಾದ್ಯಘೋಷವಿದೆ ಮತ್ತು ವೇದೋಕ್ತ ಕ್ರಿಯೆಗಳೆಲ್ಲವೂ ಅಗ್ನಿ ಸಮ್ಮುಖದಲ್ಲಿ ನಡೆಯುತ್ತದೆ."[೬೧] ಎಂಬ ಸಂಗತಿ ಸಾಮಾಜಿಕ ಮುಖಾಮುಖಿ ಸಂಘರ್ಷ ಕಾಲವದು. ಮದುವೆ, ಎರಡನೆ ಮದುವೆ, ಮೂರನೆ ಮದುವೆಯಲ್ಲಿ ಬದಲಾವಣೆ ಕಾಣುವುದು.

ಸಹಗಮನ:

ಸತಿ ಸಹಗಮನ ಪದ್ಧತಿ ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿತ್ತು ಎಂಬುದಕ್ಕೆ ಸರಿಯಾದ ಆಧಾರಗಳಿಲ್ಲ. ಸಹಗಮನ ಜಾರಿಯಲ್ಲಿತ್ತು ಎಂದು ತಿಳಿಯಬಹುದಾದರೂ ಅದು ಇಂತಹ ಸ್ಥಳದಲ್ಲಿತ್ತು. ಇಂತಹ ಸ್ಥಳದಲ್ಲಿ ಉಗಮವಾಯಿತೆಂದು ಹೇಳಲು ಖಚಿತವಾದ ಸಾಕ್ಷ್ಯಾಧಾರಗಳು ಇಲ್ಲ. ಆದರೆ ವೇದ ಕಾಲಿಕ ಸಮಯದಲ್ಲಿ ನೋಡಲಾಗಿ "ವೇದಗಳ ಆರಂಭಿಕ ಕಾಲದಲ್ಲಿ ಗಂಡನ ಶವದೊಂದಿಗೆ ಹೆಂಡತಿಯನ್ನು ಸುಡುವ ವಿಚಾರವಿಲ್ಲ."[೬೨] "ವಿಚಿತ್ರವೆಂದರೆ ೪ನೇ ಶತಮಾನದವರೆಗೂ ಈ ಪದ್ಧತಿಯ ಸುಳಿವು ಸಿಗದು. ಮಗಸ್ಥನಿಸ್ ಕೌಟಿಲ್ಯರಲ್ಲದೆ ಪ್ರಾಚೀನ ಸ್ಮೃತಿಕಾರರಾದ ಮನು ಮತ್ತು ಯೂಜ್ಞವಲ್ಕರಲ್ಲಿಯೂ ಸತಿಯ ಪ್ರಸ್ತಾವನೆಗಳಿಲ್ಲ."[೬೩] ರಾಮಾಯಣ, ಮಹಾಭಾರತ ಕಾಲಕ್ಕೆ ಈ ಸತಿಪದ್ಧತಿ ಬೆಳಕು ಕಂಡಂತಿದೆ. ಪಾಂಡುರಾಜನ ಪತ್ನಿ ಮಾದ್ರಿ, ಕೃಷ್ಣನ ಹೆಂಡಂದಿರಾದ ದೇವಕಿ, ಭದ್ರಾ, ರೋಹಿಣಿ, ಮದಿರೆ, ಅಗ್ನಿಪ್ರವೇಶ ಮಾಡಿದರೆ, ರುಕ್ಮಿಣಿ, ಗಾಂಧಾರಿ, ಹೇಮಾವತಿ, ಶೈಭಾ, ಜಾಂಬವತಿ, ಸಹಗಮನ ಮಾಡಿದ್ದಾಗಿ ತಿಳಿದು ಬರುತ್ತದೆ."[೬೪] ಇದನ್ನು ಕರ್ನಾಟಕದ ಮಟ್ಟಿಗೆ ಹೇಳುವದಾದರೆ ಸತಿ ಹೋಗುವ ಪದ್ಧತಿ ಕ್ರಿ.ಶ.೪೫೦ರಲ್ಲಿ ಪ್ರಚಲಿತದಲ್ಲಿತ್ತು.

ಕರ್ನಾಟಕದ ಕೆಲವು ಶಾಸನಗಳು ಸತಿಯ ಮೇಲೆ ಬೆಳಕು ಚೆಲ್ಲುವುದನ್ನು ಡಾ. ಚನ್ನಕ್ಕ ಪಾವಟೆ ಗುರುತಿಸಿದ್ದಾರೆ. "ಕರ್ನಾಟಕದ ರಾಜವಂಶಗಳ ಹೆಚ್ಚಿನ ರಾಣಿಯರು ಗಂಡ ಯುದ್ಧದಲ್ಲಿ ಮಡಿದ ಸುದ್ದಿ ಕೇಳಿಯೇ ಸಹಗಮನ ಮಾಡಿದ್ದಾಗಿ ಇತಿಹಾಸದ ಮೂಲಗಳಿಂದ ತಿಳಿದುಬರುತ್ತಿದೆ. ಈ ಸತಿಪದ್ಧತಿ ಮೂಲತಃ ಬ್ರಾಹ್ಮಣ ಸಮಾಜದಿಂದಲೆ ಪ್ರಾರಂಭವಾಗಿರಬೇಕು. ಕಾರಣ ಹಾಲುಗಲ್ಲದ ಹಸುಳೆಗಳನ್ನ ಹಸೆಮಣೆಯ ಮೇಲೆ ಕೂರಿಸಿ ಪತಿ ಪತ್ನಿಯರನ್ನಾಗಿ ಮಾಡುವದು ಬ್ರಾಹ್ಮಣ ಸಮಾಜದಲ್ಲಿ ರೂಢಿಯಾಗಿತ್ತು. ಇಂತಹ ವಿವಾಹಕ್ಕೆ ಬಲಿಯಾದ ಎಷ್ಟು ಬಾಲೆಯರು ವಿಧವೆಯರಾದಾಗ ಪಾತಿವ್ರತ್ಯದ ಕಲ್ಪನೆ ಮೂಡಿಸಿ, ಧರ್ಮದ ಹೆಸರಿನಲ್ಲಿ ಸತಿ ಹೋಗುವ ಪದ್ಧತಿ ಹುಟ್ಟು ಹಾಕಿರಬಹುದು."[೬೫] ಎಂಬ ಸಂಗತಿಯನ್ನು ಧರ್ಮದ ಬಣ್ಣ ಲೇಪನ ಮಾಡಿಕೊಂಡು ಬಹು ವ್ಯಾಪಕವಾಗಿ ಬೆಳೆದಿದೆ. ಹತ್ತನೆಯ ಶತಮಾನದಿಂದ ಮಧ್ಯಯುಗದವರೆಗೂ ಈ ಪದ್ಧತಿ ಗಟ್ಟಿಯಾಗಿ ಬೇರೂರಲ್ಪಟ್ಟಿತು.

ಸ್ತ್ರೀಯರ ಹಲವು ಸಮಸ್ಯೆಗಳಲ್ಲಿ ಸತಿಪದ್ಧತಿ ಅತ್ಯಂತ ಭೀಕರ ಸಮಸ್ಯೆ. ಈ ದುಷ್ಟ ಪದ್ಧತಿ ಕಂಡ ಸಮಾಜ ಸುಧಾರಕ ರಾಜಾರಾಮ ಮೋಹನರಾಯರು ಸತಿ ಪದ್ಧತಿಯ ವಿರುದ್ಧ ಸಿಡಿದೆದ್ದರು. ಧಾರ್ಮಿಕ ಮೂಲಭೂತವಾದಿಗಳು ಹಾಗೂ ಸಂಪ್ರದಾಯ ಶರಣರ ವಿರೋಧ ದೋರಣೆಗಳ ನಡುವೆ ರಾಜಾರಾಮ ಮೋಹನರಾಯರು ಸತಿ ಪದ್ಧತಿಯ ಭೀಕರ ಪರಿಣಾಮದ ಬಗ್ಗೆ ಬ್ರಿಟಿಷ್ ಸರಕಾರಕ್ಕೆ ವರದಿ ಸಲ್ಲಿಸಿದರು. ಅಂದು ಭಾರತದ ಗೌವರ್ನರ ಆಗಿದ್ದ ಲಾರ್ಡ್ ವಿಲಿಯಂ ಬೆಂಟಂಕ್ ೧೮೨೯ರಲ್ಲಿ ಡಿಸೆಂಬರ್ ೪

ರಂದು ಸತಿ ಪದ್ಧತಿ ನಿಷೇಧ ಕಾಯ್ದೆ ಜಾರಿಗೆ ತಂದನು. ಇದರ ಪರಿಣಾಮ ಸಮಾಜದ ನಾನಾ ಸ್ತರದಲ್ಲಿ ಪ್ರಭಾವ ಬೀರಿತು. ಈ ಅಂಶ ಸಾಹಿತ್ಯಕ ರೂಪ ಪಡೆದು ಸುಧಾರಣೆಗೆ ವಾಲಿದಂತೆ ಕಾಣುವದು. ಸತಿ ಪದ್ಧತಿ ಕುರಿತಾಗಿ ನಿಷೇಧವಿದ್ದರು ಅದು ಇನ್ನುವರೆಗೂ ನಿಂತಂತಿಲ್ಲ. ಸ್ವಾತಂತ್ರ್ಯಪೂರ್ವ ಮೊದಲ ಘಟ್ಟದ ಕಾದಂಬರಿಗಳಲ್ಲಿ ಈ ಪದ್ಧತಿ ಅಲ್ಲಲ್ಲಿ ಕಾಣುವದು ಗಳಗನಾಥರ 'ಪ್ರಭುದ್ಧ ಪದ್ಮನಯನೆ', ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಗಳಲ್ಲಿ ಸತಿ ಪದ್ಧತಿಯ ಜೀವಂತ ನಿದರ್ಶನಗಳಿವೆ.

"ಪ್ರಬುದ್ಧ ಪದ್ಮನಯನೆ" ಕಾದಂಬರಿಯ ಪದ್ಮನಯನೆ ಗಂಡು ಮಗುವಿಗೆ ತಾಯಿಯಾಗಿ ಸಿಂಹ ಕೇತುವಿನ ಆಶ್ರಯದಲ್ಲಿರುವಾಗ ಅವಳಿಗೆ ಪತಿಯದೆ ಚಿಂತೆ. ಪದ್ಮನಯನೆಯನ್ನು ಕರೆದೊಯ್ಯಲು ಬಂದ ಮಾರುವೇಷದ ಜೀವನ ಕಲೆ, ಸಣ್ಣ ಪರೀಕ್ಷೆಯನ್ನೊಡ್ಡಿ ನಿನ್ನ ಗಂಡ ತೀರಿಕೊಂಡನೆಂಬ ಸುಳ್ಳು ಸುದ್ಧಿಯನ್ನು ಹರಡುತ್ತಾಳೆ. ಈ ಸುದ್ಧಿ ಮುಟ್ಟುತ್ತಲೆ ಪದ್ಮನಯನೆ ಸಹಗಮನಕ್ಕೆ ಸಿದ್ಧಳಾಗುವಳು. ಇನ್ನೇನು ಚಿತೆಗೆ ಹಾರಬೇಕು ಎನ್ನುವಷ್ಟರಲ್ಲಿ ನಿಜ ವೃತ್ತಾಂತವನ್ನು ಅರುಹಲು ಪದ್ಮನಯನೆ ಸಹಗಮನದಿಂದ ಪಾರಾದ ಪ್ರಸಂಗವಿದೆ. ಈ ಸಂಗತಿ ಸ್ತ್ರೀ ಭಾವನಾತ್ಮಕತೆ, ಮನೋದೌರ್ಬಲ್ಯ, ಪ್ರತಿಬಿಂಬಿಸುವದು.

ಎಂ.ಎಸ್.ಪುಟ್ಟಣ್ಣವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ ಸತಿಪದ್ಧತಿಯ ವಾಸ್ತವ ಚಿತ್ರಣವಿದೆ. ಅರುಂಧಮ್ಮಳ 'ಮಗಳು ವಿಧವೆ ವೆಂಕಮ್ಮ ತಾನು ಇನ್ನು ಬಾಲೆಯಾಗಿರುವಾಗಲೆ ತಾಯಿ ಸತಿ ಹೋದದ್ದನ್ನು ಕಣ್ಣಾರೆ ಕಂಡಳು ಅವಳೆ ಹೇಳುವಂತೆ ಅರುಂಧಮ್ಮ ಪತಿಯ ಪ್ರಾಣ ಹೋಗುತ್ತಲೆ ಪುರೋಹಿತರನ್ನು ಕರೆದು "ಸ್ವಾಮಿ ನಾನು ನನ್ನ ಪತಿಯ ಬಿಟ್ಟಿರಲಾರೆ ನನ್ನ ಪತಿಯ ಸಂಗಡವೇ ನಾನು ಅಗ್ನಿ ಪ್ರವೇಶ ಮಾಡಬೇಕೆಂದು ನಿಶ್ಚೈಸಿದ್ದೇನೆ. ಆ ಕರ್ಮಕ್ಕೆ ಬೇಕಾದ ಗ್ರಂಥಗಳನ್ನೆಲ್ಲ ಸಿದ್ಧಮಾಡಿ ಸಿದ್ಧಮಾಡಿಕೊಳ್ಳಬೇಕಾದ ಸಾಮಾನುಗಳನ್ನು ಜಾಗ್ರತೆಯಾಗಿ ತರಿಸಿ ಇರಿಸಿಕೊಳ್ಳಿ ಕಾಲ ಮೀರಿ ಹೋಗುವಂತೆ ಮಾಡಬೇಡಿ"[೬೬] ಈ ನುಡಿಗಳು ಸಾಮಾಜಿಕ, ಸಾಂಸಾರಿಕ ಬದುಕಿನಲ್ಲಿ ಧರ್ಮ ಅಂದಿನ ಕಾಲದ ಪತಿಗಾಗಿ ಸತಿಯರ ನಂಬಿಗೆಯು ಮನೋಸ್ಥಿತಿಯಲ್ಲಿ ವ್ಯಕ್ತವಾಗಿದೆ. ಸತಿಪದ್ಧತಿ ಅಂದಿನ ದಿನ ಮಾನದಲ್ಲಿ ಸಂಪ್ರದಾಯದಲ್ಲಿರುವಂತೆ ಚಾಲ್ತಿಯಲ್ಲಿದ್ದಂತೆ ಕಾಣುವದು. ಅದಕ್ಕೆ ಶಿಕ್ಷಣವೇ ಪರಿಹಾರವಾಗಿದ್ದರು ಶಿಕ್ಷಣ ಪೂರೈಸಿದರು ಅದನ್ನು ಪ್ರತಿಭಟಿಸುವ ಸ್ಥಿತಿ ಕಾಣದು. ಅದು ಇಲ್ಲಿ ಸಾಮಾಜಿಕ ವಿಪರ್ಯಾಸವಾಗಿ ಕಂಡುಬರುವುದು.

ಸತಿ ಹೋಗುವ ಕ್ರಿಯೆಯನ್ನು ಬಹಳ ಹಿಂದೆ ಬಾಣ ಕವಿ ವಿರೋಧಿಸಿದ್ದಾನೆ. ಬಾಣನೆ ಹೇಳುವಂತೆ "ಪತಿಯೊಂದಿಗೆ ಮರಣವನ್ನಪ್ಪುವುದು ನಿರರ್ಥಕ. ಮೂರ್ಖರಿಂದ ಆಚರಿಸಲ್ಪಡುವ ಪದ್ಧತಿ. ಸಾರಾಸಾರ ವಿಚಾರವಿಲ್ಲದವರು ಕೈಗೊಳ್ಳುವ ಕೃತಿಯಿದು....... ಸತ್ತವರಿಗೂ ಈ ಕೃತಿಯಿಂದ ಯಾವ

ಪ್ರಯೋಜನವು ಇಲ್ಲ. ಆತನಿಗೆ ಸ್ವರ್ಗವನ್ನು ಹೊಂದಲು ಅದು ಸಹಾಯ ಮಾಡುವದಿಲ್ಲ. ಅಥವಾ ನರಕಕ್ಕೆ ಹೋಗುವದನ್ನು ಪ್ರತಿಬಂಧಿಸುವದಿಲ್ಲ. ತನ್ನ ಕಾರ್ಯಾನುಸಾರವಾಗಿ ಆತನು ಸ್ವರ್ಗವನ್ನು ನರಕವನ್ನು ಹೊಂದುತ್ತಾನೆ. ಆತನೊಂದಿಗೆ ಸುಟ್ಟುಕೊಂಡ ಸಾಯುವವಳು. ನರಕಕ್ಕೆ ಹೋಗುವದು ಖಂಡಿತ. ಏಕೆಂದರೆ ಆಕೆಗೆ ಪ್ರಾಣ ತ್ಯಾಗಮಾಡಿದ ಪಾಪ ತಟ್ಟದೆ ಬಿಡದು. ಬದಲಾಗಿ ಆಕೆ ಸತ್ತವನ ಮರಣ ನಂತರದ ಕಾರ್ಯಗಳನ್ನು ಮಾಡಿ ಆತ್ಮಕ್ಕೆ ಶಾಂತಿಯನ್ನು ಕೊಡಬಹುದು. ಆತನೊಡನೆ ಪ್ರಾಣ ತ್ಯಾಗ ಮಾಡಿದರೆ ಏನನ್ನೂ ಸಾಧಿಸಿದಂತಾಗುವದಿಲ್ಲ."[೬೭] ಈ ಮಾತು ಸತಿ ಹೋಗುವ ಕಾಲ್ಪನಿಕ ಪತಿ ನಿಷ್ಠೆಯನ್ನು ಪ್ರಶ್ನಿಸಿದ್ದಾರೆ. ಹೀಗಿದ್ದಾಗ್ಯೂ ಆಶ್ಚರ್ಯದ ಸಂಗತಿಯೇನೆಂದರೆ ಸರಕಾರದ ಪ್ರತಿನಿಧಿಯಂತಿರುವವರು ಸತಿ ಹೋಗುವ ಸ್ತ್ರೀಯರಿಗೆ ಸರಕಾರದಿಂದ ಅರಿಶಿಣ ಕುಂಕುಮ, ಕುಬಸ, ಕಾಣಿಕೆಯ ಜೊತೆಗೆ ಚಿತೆಗೆ ಸುರಿಯಲು ಎಣ್ಣೆ ತುಪ್ಪದ ಗಡಿಗೆಗಳು ಬರುತ್ತಿದ್ದುದರ ಬಗ್ಗೆ 'ಮಾಡಿದುಣ್ಣೋ ಮಹಾರಾಯ' ಕಾದಂಬರಿಯ ಒಡಲಲ್ಲಿ ವಿಶ್ಲೇಷಣೆ ಸಾಂದರ್ಭಿಕವಾದುದು. ಒಂದು ಹೆಣ್ಣಿನ ಜೀವನವನ್ನು ನಿರ್ಜೀವ ಪತಿಯ ಶವದೊಂದಿಗೆ ದಹಿಸುವ ಈ ಭೀಕರ ದೃಶ್ಯ ಕೇಳಿದವರು ಮೂರ್ಛೆ ಹೋಗುವಂತೆ ಇರುವಾಗ ಜೀವಂತವಾಗಿ ಚಿತೆಯೇರಿದವರ ಗೋಳನ್ನು ಹೇಳುವಂತಿಲ್ಲ. ಇಂತಹ ಪದ್ಧತಿಯಿಂದ ಹೆಣ್ಣಿನ ಶೋಷಣೆಯಾಗಿದೆಯೇ. ವಿನಃ ಗಂಡನದಲ್ಲ. ಹೀಗೆ ಪ್ರತಿ ಕ್ಷಣಕ್ಷಣಕ್ಕೂ ಸ್ತ್ರೀ ಸಮಸ್ಯೆಗಳ ಸಾಗರದಲ್ಲಿ ಈಜುತ್ತಲೆ ಸಾಗಿದಂತಿದೆ.

ಇಲ್ಲಿ ಚರ್ಚಿತವಾಗಿರುವ ವಸ್ತು, ವಿಷಯ ಸ್ತ್ರೀ ಜೀವನದಲ್ಲಿ ಬಹುದೊಡ್ಡ ಸಮಸ್ಯೆಯನ್ನು ಸೃಷ್ಟಿಸಿದೆ. ಈ ಸಮಸ್ಯೆಗಳಿಂದ ಅವಳು ಮುಕ್ತವಾಗಿ ಜೀವಿಸಲಾಗದೆ ಕೊರಗಿದ್ದಾಳೆ. ಅವಳ ಶೋಷಣೆ ಮೂಲಭೂತ, ಕೌಟುಂಬಿಕ, ವೈವಾಹಿಕ ಸಾಮಾಜಿಕ, ಆರ್ಥಿಕ, ಮತ್ತು ಧಾರ್ಮಿಕ ಕಾರಣಗಳಿಂದಾಗಿ ಪಾರಂಪರಿಕ ಬೇರುಗಳು ಮತ್ತಷ್ಟು ಗಟ್ಟಿಗೊಂಡಂತಿವೆ. ಈ ಎಲ್ಲಾ ಪ್ರಧಾನ ಕಾರಣಗಳನ್ನು ಮನೋವೈಜ್ಞಾನಿಕ, ಸಮಾಜಶಾಸ್ತ್ರೀಯ ಹಾಗೂ ಸ್ತ್ರೀ ಸಂವೇದನೆಯ ವಿಚಾರದ ಮಿತಿಯಲ್ಲಿ ವಾಸ್ತವ ಜೀವನವನ್ನು ತೆರೆದಿಟ್ಟಿವೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಒಳಗೆ ಸ್ತ್ರೀ ಗುಲಾಮಳಾಗಿದ್ದಳು. ಸ್ವತಃ ಕಾದಂಬರಿಕಾರ್ತಿಯರು ಕೆಲವೇ ಕೆಲವು ಸೀಮಿತ ಕ್ಷೇತ್ರಗಳಿಗೆ ಮಿಸಲಿರಿಸಿ ಸ್ತ್ರೀ ಸುಧಾರಣೆಗೆ ಬಯಸಿದ್ದನ್ನು ಕಾಣುತ್ತೇವೆ. 'ಒಂದು ಕುಟುಂಬಕ್ಕೆ ಒಬ್ಬನೆ ಯಜಮಾನ ಎಂಬ ಸಾಂಪ್ರದಾಯಿಕ ಪುರುಷ ಧೋರಣೆ ಎತ್ತಿ ತೋರಿಸುವದು. ನಂಬಿಕೆ. ಧರ್ಮ ವ್ರತಾಚರಣೆಗಳಲ್ಲಿ ಬಲವಾದ ನಂಬಿಕೆಯುಳ್ಳ ಸ್ತ್ರೀಯರಿಗೆ ಗಂಡ ಕಣ್ಣಿಗೆ ಕಾಣುವ ದೇವರು' ಸ್ತ್ರೀ ಪುರುಷನನ್ನು ಅವಲಂಬಿಸಿಯೇ ಬದುಕಬೇಕಾಗಿರುವದರಿಂದ ಇಲ್ಲವೇ ಪುರುಷನ ಹಿಡಿತದಲ್ಲಿಯೇ ಬದುಕನ್ನು ನಡೆಸಬೇಕಾಗಿರುವದರಿಂದ ಅವನ ಕೃಪೆಗೆ ಪಾತ್ರಳಾಗುವದರಲ್ಲಿ ಜೀವನದ ಸಾರ್ಥಕತೆಯನ್ನು ಕಂಡಿದ್ದಾಳೆ.

ಇಲ್ಲಿ ಕೆಲವು ವಿದ್ಯಾವಂತ, ವಿಚಾರವಂತ ಪುರುಷ ಧೋರಣೆಯನ್ನು ವಿರೋಧಿಸಿ ಪುರುಷ ಪ್ರಧಾನ ಮೌಲ್ಯಗಳಲ್ಲಿನ ದೋಷಗಳನ್ನು ಬಹು ನಯವಾಗಿ ಹೊರಗೆಳೆದಾಗಲೂ ಕೂಡಾ ಆತನಿಂದ ಸ್ವತಂತ್ರವಾಗಿ ಬಾಳಲಾಗಲಿಲ್ಲ. ಸ್ತ್ರೀ ಸಮಾಜ ಪುರುಷನ ಆದೇಶ ಪಾಲನೆಯ ಅನಿವಾರ್ಯತೆಯಲ್ಲಿ ಬದುಕು ಸಾಗಿಸಿದೆ. ಈ ನೆಲೆಯಲ್ಲಿ ಸ್ವಾತಂತ್ರಪೂರ್ವದ ಸ್ತ್ರೀಯರು ಧರ್ಮ, ಆಚರಣೆ ಜೀವನ, ಶ್ರದ್ಧೆಯಿಂದಾಗಿ ನೈಜ ಬದುಕನ್ನು ಅಪ್ಪಿಕೊಂಡಿದ್ದರೆ. ಇಲ್ಲಿಯ ಹೆಚ್ಚಿನ ಕಾದಂಬರಿಕಾರರು ಸ್ತ್ರೀಯರನ್ನು ನೋಡುವ ದೃಷ್ಟಿಕೋನ ಬೇರೆಯಾದರೂ ಅವರೆಲ್ಲರ ಗುರಿ ಮಾತ್ರ ಒಂದೇ. ಅವಳಿಗೆ ಸಮಸ್ಯೆಯಾಗಿ ಪರಿಣಮಿಸಿರುವ ಸಂಪ್ರದಾಯ ಆಚರಣೆಗಳ ಬೇರುಗಳನ್ನು ಕತ್ತರಿಸಿದರು. ಸ್ತ್ರೀಯರು ತಮ್ಮಂತೆ ಒಂದು ಜೀವ ಎಂದು ಪರಿಗಣಿಸಿದರಾದರೂ ಒಂದು ಸೀಮಿತ ನೆಲೆಯಲ್ಲಿ ಆದರ್ಶ ಸ್ತ್ರೀಯಾಗಿ ಬಾಳಬೇಕೆಂಬ ಪುರುಷ ಧೋರಣೆಯುಳ್ಳವರಾಗಿಯೇ ತೋರಿದ್ದಾರೆ.

ವೇಶ್ಯಾ ಪದ್ಧತಿ:

ವೇಶ್ಯಾ ಪದ್ಧತಿ ಎಂಬುವುದು ಮೇಲುನೋಟಕ್ಕೆ ತೋರುವಂತೆ ಹಣಕ್ಕಾಗಿ ಮಹಿಳೆಯೋರ್ವಳು ಪುರುಷನ ಲೈಂಗಿಕ ದಾಹವನ್ನು ಈಡೇರಿಸುವುದಾಗಿದೆ. ಆದರೆ ಇದು ದೇವರ ಹೆಸರಿನಲ್ಲಿ ನಡೆಯುತ್ತದೆ. ಈ ಪದ್ಧತಿ ವಿಶ್ವದೆಲ್ಲೆಡೆ ಇರುವಂತೆ ಭಾರತೀಯ ಸಮಾಜದಲ್ಲೂ ಬಹು ಪುರಾತನ ಕಾಲದಿಂದಲೂ ಬಳಕೆಯಲ್ಲಿರುವುದು. ವೇಶ್ಯಾವಾಟಿಕೆಯ ಮೂಲವೇ ಧಾರ್ಮಿಕ ಮುಖವಾಡ. ಮಾನವ ತನ್ನ ಜೀವನದ ಆಗು ಹೋಗುಗಳಿಗೆ ಧರ್ಮವನ್ನೆ ಅವಲಂಬಿಸಿದ್ದು ಇಂದಿನ ತಾಂತ್ರಿಕ ಯುಗದಲ್ಲಿ ಕೂಡಾ, ಬಹುಪಾಲು ಜನ ದೇವರು ಧರ್ಮವನ್ನು ಅವಲಂಬಿಸಿಯೇ ಜೀವನ ಸಾಗಿಸುತ್ತಿದ್ದಾರೆ. ಬಹುದಿನಗಳಿಂದ ಮಕ್ಕಳಾಗದ ದಂಪತಿಗಳು ದೇವರಿಗೆ ಹರಕೆ ಹೊತ್ತು ಪಡೆದ ಮೊದಲ ಮಗಳನ್ನು ದೇವಾಯಕ್ಕೆ ದಾನವಾಗಿ ಅರ್ಪಿಸುತ್ತಿದ್ದರು. ಇದು ಮೂಲದಲ್ಲಿ ಅಂತಃಕರಣ ಶುದ್ಧಿಯುಳ್ಳವರಾಗಿ ದೇವರ ಆರಾಧನೆಯಲ್ಲಿ ಮೋಕ್ಷ ಪಡೆಯುವ ಸಾಧನವಾಗಿತ್ತು. ಮೊದಮೊದಲು ದೇವರಿಗೆ ಮೀಸಲಾಗಿರುವ ಸೇವೆ ದೇವಾಲಯದ ಪೂಜಾರಿಯಿಂದ ಮೊದಲುಗೊಂಡು ಊರ ಗೌಡ ಇನ್ನಿತರ ಪ್ರಬಲ ವ್ಯಕ್ತಿಗಳ ಕಾಮಕ್ಕೆ ದಾಸಿಯಾಗಬೇಕಿತ್ತು, ಹೀಗೆಯೇ ಮುಂದುವರೆದ ಈ ಸೇವೆ ವೇಶ್ಯಾವಾಟಿಕೆ ಹೆಚ್ಚಳಕ್ಕೆ ಮೂಲ ಬೀಜವಾಯಿತು. ಇಂತಹ ಪದ್ಧತಿಯನ್ನು ಮುಂದುವರೆಸಿದ್ದರಿಂದಲೇ ಜನರಲ್ಲಿ ಧರ್ಮದ ಕಲ್ಪನೆ ಬೆಳೆಯಿತು. ಈ ಕಲ್ಪನೆಯಿಂದಾಗಿಯೇ ವೇಶ್ಯಾವಾಟಿಕೆ ಮುಂದುವರೆಯಲು ಕಾರಣವಾಯಿತು.

ಕೌಟಿಲ್ಯ ತನ್ನ ಅರ್ಥಶಾಸ್ತ್ರ ಕೃತಿಯಲ್ಲಿ ವೇಶ್ಯೆಯರ ವಿಚಾರ ಪ್ರಸ್ತಾಪಿಸಿದ್ದಾರೆ. ಇವರು ರಾಜ್ಯದ ಆದಾಯದ ಒಂದು ಅಂಗವಾಗಿದ್ದರು. ಆದಕ್ಕೆ ಕೌಟಿಲ್ಯ "ಪ್ರತಿಯೊಬ್ಬ ವೇಶ್ಯೆಯು ಪ್ರತಿ ತಿಂಗಳು ತನ್ನ ಎರಡು ದಿನದ ಸಂಪಾದನೆಯನ್ನು ಸರಕಾರಕ್ಕೆ ಕೊಡಬೇಕು"[೬೮] ಎಂಬ ಸಂಗತಿಯನ್ನು ಗಮನಿಸಲಾಗಿ

ಇದು ಮೊದಲಿನಿಂದಲೂ ಜಾರಿ ಇದ್ದ ಕುರುಹಿನಂತಿದೆ. ಇದನ್ನು ಗಮನಿಸಿದರೆ ರಾಜವಂಶಗಳು ಕೂಡಾ ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸಿವೆ. ಈ ವೇಶ್ಯಾ ಪದ್ಧತಿ ೧೯ನೇ ಶತಮಾನದ ಕಾದಂಬರಿಯ ಸಂದರ್ಭದಲ್ಲಿ ಭಾರತೀಯರಿಗೆ ದುಷ್ಟ ಪದ್ಧತಿಯಂತೆ ಪರಿಣಮಿಸಿತು. ಪ್ರಾಚೀನ ಕಾಲದಲ್ಲಿ ರಾಜರಿಗೆ ಆಧೀನರಾಗಿ ಬದುಕುತ್ತಿದ್ದ ವೇಶ್ಯೆಯರು ಬೆರಳೆಣಿಕೆಯ ಶ್ರೀಮಂತ ವ್ಯಕ್ತಿಗಳಿಗೆ ಮಾತ್ರ ಸೀಮಿತರಾಗಿದ್ದರು. ಆಧುನಿಕತೆ ಕಾಲಿಡುತ್ತಲೆ ಸಂಸ್ಥಾನಗಳ ಅಳಿವಿನಿಂದಾಗಿ ಬೀದಿಗಿಳಿಯಬೇಕಾಯಿತು. ಜನಸಾಮಾನ್ಯರನ್ನು ಆಶ್ರಯಿಸಬೇಕಾಯಿತು.

ವೇಶ್ಯಾ ಪದ್ಧತಿಯನ್ನು ಪರಂಪರಾಗತವಾಗಿ ರೂಢಿಸಿಕೊಂಡು ಬರಲಾಗಿತ್ತು. ಇವರು ಮೂಲದಲ್ಲಿ ದೇವದಾಸಿಯಾಗಿ ದೇವಾಲಯದ ಸೂಳೆ ರಾಜಾಶ್ರಯದಲ್ಲಿ ರಾಜಸೂಳೆ ಎಂಬ ಹೆಸರಿನಿಂದ ಪ್ರತಿಷ್ಠೆಗಳಿಂದ ಮೆರೆದವರಾಗಿದ್ದರೂ. ಕಾಲಾಂತರದಲ್ಲಿ ಜನಸಾಮಾನ್ಯರನ್ನು ಅವಲಂಬಿಸಿದಾಗ ಸಮಾಜದಿಂದ ತಿರಸ್ಕೃತರಾದರು. ನಾವು ಇವರನ್ನು ಹಸಿವಿಗಾಗಿ ಮೈ ಮಾರಿಕೊಂಡವರೆ ವಿನಹ ಮನಸ್ಸು ಮಾರಿಕೊಂಡವರಲ್ಲ ಎಂದು ಗುರುತಿಸಬಹುದು. ವೇಶ್ಯೆಯರು ಸಾಮಾನ್ಯವಾಗಿ ಹಿಂದುಳಿದವರು. ದೀನರು ತುಳಿತಕ್ಕೊಳಗಾದವರು, ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ನೋಡಿದಾಗ ದೈಹಿಕ ಮಾನಸಿಕ, ಸಾಮಾಜಿಕ, ಆರ್ಥಿಕತೆಯಿಂದ ವೇಶ್ಯಾವೃತ್ತಿಗೆ ಇಳಿದದ್ದು ಕಾಣುವದು. ಅವರನ್ನು ಹೀಗೆ ಗುರುತಿಸಬಹುದು.

- ವಂಶಪರಂಪರೆಯಿಂದ ಬಂದ ವೇಶ್ಯೆಯರು.
- ಬಂಧು ಬಳಗವಿಲ್ಲದೆ ಅನಾಥತೆಯಿಂದ ಬಂದ ವೇಶ್ಯೆಯರು.
- ಬಡತನದಿಂದ ಬಂದ ವೇಶ್ಯೆಯರು.
- ಹಿಂಸೆ ತಾಳದೆ (ಬಂಧು ಬಳಗ, ಗಂಡ) ಬಂದ ವೇಶ್ಯೆಯರು.
- ಮನೋಕಾಮನೆಗಳನ್ನು ನೀಗಿಸಿಕೊಳ್ಳಲು ಬಂದ ವೇಶ್ಯೆಯರು.
- ಬಲತ್ಕಾರಕ್ಕೆ ಒಳಗಾಗಿ ಶೀಲಕಳೆದುಕೊಂಡ ವೇಶ್ಯೆಯರು.

೧೯ನೆಯ ಶತಮಾನದಲ್ಲಿ ಹೆಚ್ಚಿನ ವೇಶ್ಯಾಗೃಹಗಳಿದ್ದು ವೇಶ್ಯೆಯರನ್ನು ಇಟ್ಟುಕೊಳ್ಳುವದು ಪುರುಷ ವರ್ಗದ ಪ್ರತಿಷ್ಠೆಯಾಗಿರುವಂತೆ ಕಾಣುವದು. ಈ ಎಲ್ಲಾ ಸಂಗತಿಗಳು ಸಮಾಜ ಸುಧಾರಕರಿಗೆ, ಮಹಿಳಾ ಹಿತಚಿಂತಕರಿಗೆ ಸಾಹಿತ್ಯ ವಿದ್ವಾಂಸರಿಗೆ ಇದು ಸಮಸ್ಯೆಯ ಬೀಜವಾದಂತೆ ಕಂಡಿತು. ಈ ಕಾಲದ ಕಾದಂಬರಿಕಾರರು ವಾಸ್ತವದ ನೆಲೆಯಲ್ಲಿ ಗುರುತಿಸಿದರೂ ಬಿಡುಗಡೆಗೆ ಪ್ರಯತ್ನಿಸಿದಂತಿಲ್ಲ.

ವೇಶ್ಯಾವೃತ್ತಿ ನಂಬಿಕೊಂಡವರು ಹಾಗೂ ಆರ್ಥಿಕ ಅಭದ್ರತೆಯ ಮೇಲೆ ಸ್ತ್ರೀಯರಿಗೆ ಸಮಸ್ಯೆಯಾಗಿ ಇವರು ವೇಶ್ಯಾವೃತ್ತಿಯಲ್ಲಿ ಮುಂದುವರೆಯುವದಕ್ಕೆ ಇದೇ ಮೂಲ ಕಾರಣವಾಗಿರುವುದು.

ಅನಿವಾರ್ಯತೆಯಿಂದಾಗಿ ವೇಶ್ಯಾವೃತ್ತಿಗಿಳಿದ ಸ್ತ್ರೀಯರು ಯೌವನ, ಸೌಂದರ್ಯ, ಮೈಮಾಟಗಳಿಂದ ಹಣ ಸಂಪಾದನೆ ಮಾಡುವದೆ ಅವರ ಮುಖ್ಯ ಉದ್ದೇಶವಾಗಿತ್ತು. ಹಣ ಕೊಟ್ಟವರಿಗೆ ಮೈ ಒಪ್ಪಿಸುವ ಚಿತ್ರಣವನ್ನು "ಮುಸುಕು ತೆಗೆಯೇ ಮಾಯಾಂಗನೆ" ಕಾದಂಬರಿಯಲ್ಲಿ ಕಾಣುವದು. ಇಲ್ಲಿ ಬರುವ ವೇಶ್ಯೆ ನಾಗರತ್ನ ಹಾಗೂ ಅವಳ ತಾಯಿಗೆ ಹಣ ಮುಖ್ಯವೆನಿಸಿದ್ದರಿಂದ ದೇವಪ್ಪನನ್ನು ಕಡೆಗಣಿಸಿ ಬಸಪ್ಪನನ್ನು ಒಪ್ಪಿಕೊಳ್ಳುತ್ತಾಳೆ. ಇಲ್ಲಿ ವೇಶ್ಯಾವೃತ್ತಿ ಹಣಕಾಸಿನ ರೂಪ ಪಡೆದುಕೊಂಡಿದ್ದು ಕಾಣುವದು. ಇದರಂತೆ ಗುಲ್ವಾಡಿಯವರ 'ಇಂದಿರಾಬಾಯಿ' ಕಾದಂಬರಿಯ ಗುಲಾಬಿ ಗೋಕುಳಿ ಸಂಗೀತ ನೃತ್ಯಗಳಿಗಿಂತಲೂ ಹೆಚ್ಚಾಗಿ ಮೈ ಮಾಟಗಳಿಂದ ಒಲಿಸಿಕೊಂಡರು. ಇವರಿಬ್ಬರು ವಿಠ್ಠಲರಾಯನ ಉಪಪತ್ನಿಯರಾಗಿ ತೃಪ್ತಿಪಡಿಸಿ ತೃಪ್ತರಾದವರು. ಆದರೆ ವಿಠ್ಠಲರಾಯ ಜ್ವರದಿಂದ ನರಳುವಾಗ ಅಪರಾಧಿಗಳಂತೆ ಪರಿತಪಿಸುತ್ತಾರೆ. "ಅಮ್ಮಾ ನಮ್ಮ ಜನ್ಮವೇ ನಿಮ್ಮಂಥವರಿಂದ ಶಪಿಸಿಕೊಳ್ಳುವದಕ್ಕಿದ್ದುದ್ದು. ಪರರ ಶಾಪಗಳಲ್ಲಿ ತಾನೇ ನಮ್ಮ ಜೀವವಿರುವುದು"[೧೯] ಎಂದು ಅಸಹಾಯಕತೆಯನ್ನು ವ್ಯಕ್ತಪಡಿಸುವ ಇವರು ಅಪರಾಧಿಗಳಂತೆ ಕ್ಷಮೆಯಾಚಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಆರ್ಥಿಕತೆ. ಮುಂದುವರೆದು ದೀಪಾವಳಿ ಹಬ್ಬದ ನರ್ತನದಲ್ಲಿ ಪಾಲ್ಗೊಂಡಿದ್ದ ಗುಲಾಬಿಯ ಅಂಗ ಸೌಂದರ್ಯಕ್ಕೆ ವಿಠ್ಠಲರಾಯ ಮನಸೋಲುತ್ತಾನೆ. ಸೇವಕ ಗುಲಾಬಿಯನ್ನು ಉಪಪತ್ನಿಯಾಗಲು ಕೇಳಲು ಹೋದಾಗ ನಡೆಯುವ ಸಂಭಾಷಣೆ ಆರ್ಥಿಕ ಸ್ಥಿತಿಯ ಕನ್ನಡಿ ಹಿಡಿದಂತಿದೆ.

ಸೇವಕ – "ನಿನ್ನನ್ನು ಒಬ್ಬ ದೊಡ್ಡ ಯೌವನಸ್ಥನು ತಿಂಗಳಿಗೆ ೫೦ ರೂಪಾಯಿಯಂತೆ ಮುಂಗಡ ಸಂಬಳ ವರ್ಷಕ್ಕೆ ಐದುನೂರು ರೂಪಾಯಿ ಆಭರಣ ಇನ್ನೂರಾ ಐವತ್ತು ರೂಪಾಯಿ ಸೀರೆ, ಕಂಚುಗಳನ್ನು ಸಹ ಕೊಡುವ ನಿರ್ಣಯದ ಮೇಲೆ ಉಪಪತ್ನಿಯಾಗಿಟ್ಟುಕೊಂಡರೆ ನನಗೇನು ಕೊಡುತಿ?

ಗುಲಾಬಿ – ಈ ಹೊತ್ತು ಸಿಕ್ಕುವ ಐವತ್ತು ರೂಪಾಯಿ ಕೊಡುವುದಲ್ಲದೆ ಅವರ ಪರೋಕ್ಷದಲ್ಲಿ ನಿನ್ನ ದಲಾಲಿಯ ಮೇಲೆ ನಾನು ಸಂಪಾದಿಸುವ ಹಣದಲ್ಲಿ ಶೇಕಡಾ ಹತ್ತರಂತೆ ಕೊಡುತ್ತಾ ಬರುವೆನು."[೨೦]

ಈ ಸಂಭಾಷಣೆ ಆರ್ಥಿಕ ದೌರ್ಬಲ್ಯದ. ಪ್ರಧಾನ ಕಾರಣ. ಪ್ರತಿಯೊಬ್ಬ ವ್ಯಕ್ತಿ ಆರ್ಥಿಕತೆಯನ್ನು ಅವಲಂಬಿಸಿಯೇ ಬದುಕು ನೂಕುವನು. ಹುಟ್ಟಿನಿಂದ ಸಾವಿನವರೆಗೆ ಹಣ ಪ್ರಮುಖ ಪಾತ್ರ ನಿರ್ವಹಿಸಿದ್ದು ಇಲ್ಲಿ ಪ್ರಮುಖ ಕಾರಣ. ಹಸಿವು, ಬಡತನ, ಬದುಕಿನ ಬವಣೆಗಳೆ ಇಲ್ಲಿ ಮುಖ್ಯ ಪಾತ್ರ ನಿರ್ವಹಿಸಿವೆ.

ದೇವದಾಸಿಯಂತಹ ಪದ್ಧತಿ ಪುರುಷಪ್ರಧಾನ ಸಮಾಜದಲ್ಲಿ ಮುಂದುವರೆಯುತ್ತಲೇ ಇದೆ. ಭಾರತೀಯ ಸಮಾಜದಲ್ಲಿ ಜೇಡರ ಬಲೆಯ ಹಾಗೆ ಹೆಣೆದುಕೊಂಡಿದೆ. ಸಮಾಜದ ಕೆಟ್ಟ ಪದ್ಧತಿಯಾಗಿ.

ನೆಲೆಕಂಡ ವೇಶ್ಯಾವೃತ್ತಿ ನಿಯಂತ್ರಣಕ್ಕೆ ಕಾನೂನು ರಚನೆಯಾದರು ಕೂಡಾ ಇಂದಿನ ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಉದ್ದಿಮೆಯಾಗಿ, ಉದ್ದುದ್ದ ಬೆಳೆದದ್ದು ವಿಪರ್ಯಾಸದ ಸಂಗತಿ. ದೈಹಿಕವಾಗಿ ಮೃಧುತನ ಹೊಂದಿದ ಸ್ತ್ರೀ ಪ್ರತಿ ಹೆರಿಗೆ ಹಾಗೂ ಮಕ್ಕಳ ಪಾಲನೆ ಪೋಷಣೆಗೆ ಅಂಟಿಕೊಂಡು ಆಸ್ತಿಯಿಂದ ವಂಚಿತಳಾಗಿದ್ದಾಳೆ. ಬಿ.ಎನ್. ಸುಮಿತ್ರಾಬಾಯಿ ಹೇಳುವಂತೆ "ಖಾಸಗಿ ಆಸ್ತಿಯ ಹುಟ್ಟು ಮಹಿಳೆಯ ಅದಃ ಪತನಕ್ಕೆ ಮೂಲ"[೨೧] ಎನ್ನುವ ಎಂಗೆಲ್ಸ್‌ನ ವಿಚಾರವನ್ನು ಸಿಮೋನ್‌ದ ಬೋವಾ ಒಪ್ಪಿಕೊಂಡಿದ್ದಾಳೆ. ಶಿಕ್ಷಣತಜ್ಞ ಸಮಾಜಶಾಸ್ತ್ರಜ್ಞ ಹಾಗೂ ಸ್ತ್ರೀವಾದಿ ಲೇಖಕಿ ಮೆಡಂ ಸ್ಟೆಲ್‌ಳೂ ಕೂಡಾ "ನಿಸರ್ಗದತ್ತವಾದ ಸ್ತ್ರೀ ಸ್ವಭಾವವೇ ಅವಳ ಗೌಣತೆಗೆ ಕಾರಣೀಭೂತ ವಿಚಾರವಾಗಿದೆ ಎಂದು ಭಾವಿಸುತ್ತಾಳೆ."[೨೨] ಎಂಬಲ್ಲಿ ಸ್ತ್ರೀ ಸ್ವಭಾವದ ಅಂತರ್ಗತ ಮನೋವ್ಯಾಪಾರದ ವಾಂಛೆಗಳು ಕಾಣುವವು. ಇವುಗಳೊಂದಿಗೆ ದಬ್ಬಾಳಿಕೆ, ದರ್ಪ, ದೌರ್ಜನ್ಯ, ಶೋಷಣೆಗಳನ್ನು ಮೌನವಾಗಿ ಅನುಭವಿಸುವ ಅನಿವಾರ್ಯತೆಗೆ ಸಿಲುಕಿದಂತೆ ಭಾಸವಾಗುವದು. ಪುರುಷನ ಹಿಡಿತಕ್ಕೆ ಬಲಿಯಾಗಿ ಸ್ತ್ರೀ ಶೀಲ ಪಾವಿತ್ರ್ಯದಂತಹ ಕಾಲ್ಪನಿಕ ತತ್ವಕ್ಕೆ ಬಲಿಯಾಗಿ ಖಾಸಗಿ ಆಸ್ತಿಯಾದ ಸ್ವರೂಪ ಇಲ್ಲಿ ಕಾಣುವದು.

ಪುರುಷಪ್ರಧಾನ ಸಮಾಜ ಇರುವವರೆಗೂ ಈ ರೀತಿಯ ಚಿಂತನೆ ಆ ಮೂಲಕ ಜಾಗೃತಿ ಅವಶ್ಯಕವಾಗಿರುತ್ತದೆ. ಅಂದರೆ ಮಹಿಳಾ ಪ್ರಧಾನ ವ್ಯವಸ್ಥೆಯ ಮೂಲಕ ಮಾತೃಪ್ರಧಾನ ವ್ಯವಸ್ಥೆಯನ್ನು ಜಾರಿಗೆ ತರುವ ಬದಲು, ಪುರುಷ ಪ್ರಧಾನ ಸಮಾಜವನ್ನು ನಿರ್ಮೂಲನಗೊಳಿಸಿ ಸಮಾನತಾ ತತ್ವದ ಮಾನವತಾವಾದದ ಮೇಲೆ ಸಮಾಜ ಕಟ್ಟಬೇಕು. "ಮಹಿಳೆಯರು ಮಹಿಳೆಯರಿಗಾಗಿ ಎಂಬಂತೆ ಪತ್ರಿಕೆಗಳನ್ನು ನಡೆಸುತ್ತಿದ್ದ ನಂಜನಗೂಡು ತಿರುಮಲಾಂಬ ಕಲ್ಯಾಣಮ್ಮನವರು ಸ್ತ್ರೀ ಶಿಕ್ಷಣದ ಬಗ್ಗೆ ಕೇಳಿಬರುತ್ತಿರುವ ಸಮಕಾಲೀನ ವಿಚಾರಗಳು ಹಂಚಿಕೊಂಡವರಾಗಿದ್ದರು. ಅವರ ಚಿಂತನೆಗೆ ಆ ಕಾಲದ ಮಿತಿಯೂ ಇತ್ತು. ಪತ್ರಿಕೆಗಳಲ್ಲಿ ನಡೆದ ಈ ಬಗೆಯ ಚಿಂತನೆಯು ಪ್ರತಿಧ್ವನಿಯನ್ನು ಕನ್ನಡದ ಮೊದಲ ಕಾದಂಬರಿಗಳಲ್ಲಿ ನೋಡಬಹುದು."[೨೩] ಯಾವ ಮಹಿಳೆ ತಾನಾಗಿಯೇ ವೇಶ್ಯೆಯಾಗಬಯಸುವದಿಲ್ಲ. ಆಕೆಯು ಈ ಪರಿಸ್ಥಿತಿಗೆ ಬರುವ ಮುನ್ನ ಹಲವು ವಿಧದಲ್ಲಿ ಸಮಾಜದ ಸಮಸ್ಯೆಗಳು ಅಂತಹವರನ್ನು ಪ್ರೇರೇಪಿಸುತ್ತವೆ. ಈ ನಿಟ್ಟಿನಲ್ಲಿ ಬಡತನ, ದಾರಿದ್ರ್ಯ, ಹಸಿವು, ಕೆಟ್ಟ ವಾತಾವರಣ ಇವುಗಳ ನಡುವೆ ಸಾಮಾಜಿಕ ಮತ್ತು ಪಾರಂಪರಿಕ ವೃತ್ತಿ. ಈ ವೃತ್ತಿ ಹೇಯವಾದದ್ದು ಎಂದೂ ಗಮನಿಸಿದರೂ ಇದೊಂದು ಕುಲಕಸುಬು ಎಂದು ತಿಳಿಯುವ, ತಿಳಿದಿರುವ ಅದೆಷ್ಟೊ ಕಾದಂಬರಿಗಳಲ್ಲಿ ಇಂತಹ ಸನ್ನಿವೇಶಗಳನ್ನು ನಾವು ಕಾಣುತ್ತೇವೆ.

ಇಂದಿರಾಬಾಯಿ ಕಾದಂಬರಿಯ ಗುಲಾಬಿಯ ಮಾತು ಇಲ್ಲಿ ಪ್ರಸ್ತುತ. "ಅಮ್ಮ ನಮ್ಮ ಜನ್ಮವೇ ನಿಮ್ಮಂತಹವರಿಂದ ಶಪಿಸಿಕೊಳ್ಳುವದಕ್ಕಿದ್ದುದಲ್ಲ"[೨೪] ಎಂದು ಅಂಬಾಬಾಯಿಗೆ ಹೇಳಿದ್ದ ಮಾತು

ಸಂದರ್ಭೋಚಿತವಾದಂತೆ ಕಂಡರೂ ಅದರಲ್ಲಿ ನೋವಿದೆ ಮನದ ಸಂಕಟಗಳಿವೆ. ಈ ಮಾತನ್ನು ಗಮನಿಸಲಾಗಿ ಈ ವೃತ್ತಿಯವರು ಸಮಾಜದ ಶಾಪಕ್ಕೆ ಒಳಗಾದವರು, ನೊಂದು ನುಡಿಯುವ ಒಬ್ಬ ಸ್ತ್ರೀಯು ಮನಸ್ಥಿತಿಯ ಹಿಂದೆ ಒಂದು ವರ್ಗದ ಮೇಲೆ ಆಕ್ರೋಶ ಕಾಣುವದು. ಮೌನವಾಗಿಯೇ ಅದರ ವಿರುದ್ಧ ಸಿಡಿದೇಳುವದನ್ನು ಕಾಣುತ್ತೇವೆ. ಶ್ರೇಣಿಕೃತ ಸಮಾಜ ವ್ಯವಸ್ಥೆಯ ತಳಪಾಯ ಅನೇಕ ಅಸಮಾನತೆಯ ಮೇಲೆ ನಿಂತಂತಿದೆ. ವರ್ಣಾಧಾರಿತ, ವರ್ಗಾಧಾರಿತ, ಅರ್ಥಾಧಾರಿತ, ಲಿಂಗಾಧಾರಿತ ಭೇದಗಳ ಮೇಲೆ ಚರ್ಚೆ ನಿಂತಿದೆ. ದೇವರಿದ್ದಾನೋ ? ಇಲ್ಲವೋ ? ಒಳ್ಳೆಯವನೋ ? ಕೆಟ್ಟವನೋ ? ಗೊತ್ತಿಲ್ಲ. ಆದರೆ ದೇವರಿದ್ದಾನೆಂಬ ನಂಬಿಕೆಯಿಂದ ಮಾನವ ನೆಮ್ಮದಿಯನ್ನು ಸಮಾಧಾನವನ್ನು ಪಡೆಯುತ್ತಿದ್ದಾನೆ. ಭಾರತೀಯರಿಗೆ ದೇವರ ಬಗ್ಗೆ ಭಯವಿದೆ. ಅದೆ ಭಯವನ್ನು ಬಳಸಿಕೊಂಡು ಒಂದು ವರ್ಗ ಇನ್ನೊಂದು ವರ್ಗದ ಪಾಲಿಗೆ ಮುಳುವಾದದ್ದು ವಿಪರ್ಯಾಸ. ಸ್ತ್ರೀ ಶೋಷಣೆ ಪ್ರತೀಕಳಾದ ಮಹಿಳೆ ದೇವರ ಹೆಸರಿನಲ್ಲಿ ಆಕೆಗಾದ ಅವಮಾನ ಅತ್ಯಾಚಾರ ಹೇಳತೀರದು. ಎಲ್ಲವೂ ದೇವರಿಗಾಗಿ, ಧರ್ಮಕ್ಕಾಗಿ, ಪುರುಷಪ್ರಧಾನ ವ್ಯವಸ್ಥೆಯ ಸಮಾಜಕ್ಕಾಗಿ.

ದೇವರಿಗೂ ಸ್ತ್ರೀಗೂ ದೇವಾಲಯಕ್ಕೂ ಸ್ತ್ರೀಗೂ ನಂಟುಹಾಕಿ ಆಕೆಯನ್ನು ಅರೆಬೆತ್ತಲೆಯಾಗಿ, ಬೆತ್ತಲಾಗಿ ಪಾತ್ರದವರು, ದೇವದಾಸಿ, ಸೂಳೆ, ವೇಶ್ಯೆ ಎಂದು ಕರೆದಿದ್ದು ಇತಿಹಾಸದಲ್ಲಿ ಕಾಣುತ್ತೇವೆ. ವೈದಿಕ ಸಂಸ್ಕೃತಿಯಲ್ಲಿ ಜನ್ಮ ಪಡೆದ ಪಾತರದ ಪರಂಪರೆಯನ್ನು ರೂಢಿಸಿಕೊಂಡು ಬರಲಾಗಿದೆ. ಮೊದಲು ಸೇವೆಯಂತಿದದ್ದು ವಿಚಿತ್ರ ಪದ್ಧತಿಗಳು ಸೋಗಲಾಡಿತನ ಪಡೆದುಕೊಂಡವು. ಮೊದ ಮೊದಲು "ಸಂಗೀತಗಾರ್ತಿಯರನ್ನು ನೃತ್ಯಗಾರ್ತಿಯರನ್ನು ದೇವಾಲಯಕ್ಕೆ ದಾನ ನೀಡಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂದು ನಂಬಿಸಿದ್ದರೆಂಬಂತೆ ಕಾಣುವದು. ಜನಸಾಮಾನ್ಯರನ್ನು ಪ್ರಚೋದಿಸಿ ಕೂಪಕ್ಕೆ ತಳ್ಳಿದ ಕಾರಣ ಅದನ್ನು ನಂಬಿದ ಇತರರು ತಮ್ಮ ಸ್ವರ್ಗ ಪ್ರಾಪ್ತಿಗೋಸ್ಕರ ಪಾತರದಂತಹ ಸ್ತ್ರೀ ವರ್ಗವನ್ನು ನಿರ್ಮಿಸಿ ಅವರನ್ನು ನರಕಕ್ಕೆ ತಳ್ಳಿದ್ದ ಐತಿಹಾಸಿಕ ಉದಾಹರಣೆಗಳಿವೆ."[೨೮] ನಮ್ಮ ಭಾರತೀಯ ಸಮಾಜದ ನೀತಿ-ನಿಯಮ ಆಚಾರ ವಿಚಾರಗಳ ಸಂಪ್ರದಾಯ ಇವೆಲ್ಲವೂ ಹೆಣ್ಣಿಗೆ ಮುಳುವಾದದ್ದು ಆಕೆಯ ದುರ್ದೈವ. ಸಾಮಾಜಿಕ ವ್ಯವಸ್ಥೆಗೆ ಮತ್ತು ಶೋಷಣೆಗೆ ಸಾಕ್ಷಿಯಾಗುತ್ತದೆ. ಎಲ್ಲವೂ ಹೊಟ್ಟೆಗಾಗಿ ಬದುಕಿನ ಬೇಕು ಬೇಡಿಕೆಗಳ ನಡುವೆ ಸ್ವಾತಂತ್ರ್ಯವೆ ಇಲ್ಲವೆಂಬ ಮನೋಸ್ಥಿತಿ ಮತ್ತಷ್ಟು ಅಸಂತುಷ್ಟಳಾದಳು. ಮುಂದುವರೆದು ಹೇಳುವದಾದರೆ ಧರ್ಮಗಳು ಹೇಳುವಂತೆ "ಹೆಚ್ಚಿನ ಮಹಿಳೆಯರ ಹೀನಾಯ ಸ್ಥಿತಿಗೆ ಅವರ ಶರೀರವೇ ಮೂಲ ಕಾರಣ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ದಲಿತರಿಗಿಂತ ಕೆಳಮಟ್ಟದಲ್ಲಿದ್ದಾಳೆ."[೨೯]

ಪತ್ರಿಕೆಗಳನ್ನು ನಡೆಸುತ್ತಿದ್ದ ನಂಜನಗೂಡು ತಿರುಮಲಾಂಬ ಶಿಕ್ಷಣದ ಬಗ್ಗೆ, ಕೇಳಿಬರುತ್ತಿದ್ದ ಸಮಕಾಲೀನ ವಿಚಾರಗಳನ್ನು ಹಂಚಿಕೊಂಡವರಾಗಿದ್ದರು. ಅವರ ಚಿಂತನೆಗೆ ಆ ಕಾಲದ ಮಿತಿಯೂ

ಇತ್ತು. ಕನ್ನಡ ಕಾದಂಬರಿಯ ಯುಗವು ಅನುವಾದದೊಂದಿಗೆ ಬೆಳೆದುಬಂದಿದೆ. ನಂತರ ಬಂದ ಸ್ವತಂತ್ರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳಾದ ವೇಶ್ಯಾ ಪದ್ಧತಿ ಕುರಿತು ಪ್ರತಿಕ್ರಿಯೆ ನೀಡಿದ್ದಾರೆ. ಸ್ತ್ರೀಯ ಇಂತಹ ಸ್ಥಿತಿಗೆ ಅನುಕಂಪಿಸಿದ್ದಾರೆ. ಕಳಕಳಿಯೊಂದಿಗೆ ಸುಧಾರಣಾ ಪರವಾದ ಕಳಕಳಿಯ ಮನೋಧರ್ಮವನ್ನು ಕಾಣುತ್ತೇವೆ. ಭಾರತೀಯ ಸಾಹಿತ್ಯ ಇತಿಹಾಸವನ್ನು ಗಮನಿಸುತ್ತಾ ಹೋದರೆ ಸ್ತ್ರೀ ಶೋಷಣೆ ಕುರಿತಾದ ಆಳವಾದ ಚಿಂತನೆ ಕೃತಿಯಲ್ಲಿ ಮೂಡಿಬಂದಿವೆ ಆದರೂ ಇಲ್ಲಿಗೆ ಕೊನೆಗೊಂಡಿಲ್ಲ.

ಜಾತಿ ವಿಷಯ ಮೊದಲ ಘಟ್ಟದ ಈ ಕಾದಂಬರಿಗಳಲ್ಲಿ ಬೇರು ಮಟ್ಟದಲ್ಲಿ ಪ್ರಭಾವ ಕಾಣುವದು. ಇಂದಿರಾಬಾಯಿಯ ಮುಂದಿಡುವ ಆಧುನಿಕತೆಯ ಆದರ್ಶದ ಸ್ವರೂಪ ಯಾವುದು ಅದು ಎಷ್ಟರ ಮಟ್ಟಿಗೆ ಸಾಧಿತವಾಯಿತು ಎನ್ನುವುದು ಇಲ್ಲಿ ಮುಖ್ಯ ಪ್ರಶ್ನೆ. ಮೇಲ್ಜಾತಿಯ ವಿದ್ಯಾವಂತರಿಂದ ಅದು ನಿರೂಪಿತವಾಗಿದೆ. ಈ ಆಧುನಿಕತೆ ಸಮಾಜದಲ್ಲಿ ಕ್ರಾಂತಿಕಾರಕವಾದ ಪರಿವರ್ತನೆಯ ಬದಲಾವಣೆಯನ್ನು ತರಲಿಲ್ಲ. ಹಳೆಯದರ ಸಂಗತಿಗಳು ಮುಂದುವರೆದು ವಾರಸುದಾರಿಕೆ, ಶ್ರೇಣೀಕರಣಗಳನ್ನು ಹೊಸ ಮಾದರಿಯಲ್ಲಿ ಕಾಣಲು ಪ್ರಾರಂಭಿಸಿತು. ಇದಕ್ಕೆ ಆಧುನಿಕತೆಯು ವಸಾಹತು ಮೂಲಕ ಯಶಸ್ವಿಯಾದಿತು. ಭಾಸ್ಕರ ಮತ್ತು ಇಂದಿರೆಯರ ವಿವಾಹ ಹಳೆಯ ಕೌಟುಂಬಿಕ ಮೌಲ್ಯಗಳನ್ನು ಒರೆಗಲ್ಲಿಗೆ ಹಚ್ಚಿತು. ಇಂದಿರೆ ಓದುವ 'ಸ್ತ್ರೀಧರ್ಮನೀತಿ' ಯಂತಹ ಪುಸ್ತಕಗಳು ಅದನ್ನು ಸಮರ್ಥಿಸುವವು. ಶಾಸ್ತ್ರವನ್ನು ಹಾಗೂ ದೇಶ ಪದ್ಧತಿಗಳ ಮುಖಾಮುಖಿಯಾಗಿಸಿ ಇಂದಿರಾಬಾಯಿ ಕೊನೆಗೆ ದೇಶಿ ಪದ್ಧತಿಯನ್ನು ನಿರಾಕರಿಸಿ ಶಾಸ್ತ್ರವನ್ನು ಹಿಂಬಾಲಿಸಿದಂತೆ ಎಲ್ಲ ವಿಷಯಗಳನ್ನು ಚರ್ಚಿಸಿದ್ದಿಲ್ಲಿ ಕಾಣುವದು.

ಇಂದಿರಾಬಾಯಿಯಲ್ಲಿ ಬರುವ ಪರಿವರ್ತನೆಯು ಅದೇ ಸಮಾಜದ ಕೆಳ ಜಾತಿಯ ಜನರನ್ನು ಹೇಗೆ ತಟ್ಟಿತು ? ಎಂಬುದನ್ನು ಅವರ ಬದುಕನ್ನು ಅದು ಎಷ್ಟರ ಮಟ್ಟಿಗೆ ಪರಿವರ್ತಿಸಿತು ? ಶಾಸ್ತ್ರಗಳ ಬಳಕೆ, ಸರಳತೆ ರೂಢಿಸಿಕೊಂಡು, ಮಂತ್ರಘೋಷಣೆ, ಸೋಬಾನ ಪದಗಳ ಮಂಡಿಸಿದ ಸರಳ ಸಜ್ಜನರ ಶುಭ ಆಶೀರ್ವಾದದೊಡನೆ ನಡೆಯು ಇಂದಿರಾ ಭಾಸ್ಕರರ ವಿವಾಹದ ಮರುದಿನದ ಭೋಜನ ವ್ಯವಸ್ಥೆ ಸುಧಾರಣೆಯ ಸ್ವರೂಪ ಇಂದಿರಾಬಾಯಿ ಕಾದಂಬರಿ ಸ್ಪಷ್ಟತೆಯನ್ನು ಗುರುತಿಸಿದೆ. "ಮರುದಿವಸ ಅಮೃತರಾಯನಲ್ಲಿ ಸ್ವಜಾತಿಬಾಂಧವರೆಲ್ಲರಿಗೂ ಬೇರೆ ಜಾತಿಯವರಿಗೆ ಅವರವರ ದೇವಾಲಯಗಳಲ್ಲಿಯೂ ಪಂಚಭಕ್ಷ್ಯ ಪರಮಾನ್ನಗಳಿಂದ ಊಟಗಳಾದವು. ಅನಂತರ ಅಮೃತರಾಯನು ಐನೂರು ರೂಪಾಯಿಯ ವಿಧವಿಧವಾದ ವಸ್ತುಗಳನ್ನು ತರಿಸಿ ತನ್ನ ಮನೆಯ ಎಲ್ಲ ಸೇವಕರಿಗೂ ಹಂಚಿಕೊಡಲು ಅವರೆಲ್ಲರೂ ಸಂತೋಷಪಟ್ಟು ವಧೂವರರಿಗಾಶೀರ್ವದಿಸಿದರು."[22] ಈ ಸಮಯದಲ್ಲಿ ಅವರವರ ಜಾತಿ ವ್ಯವಸ್ಥೆಗೆ ಅನುಗುಣವಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿದರು. ಇದು ಗಮನಾರ್ಹ ಸಂಗತಿಯಾಗಿದೆ.

ಇಂದಿರಾಬಾಯಿ ಕಾದಂಬರಿಯು ವಾಸ್ತವಿಕತೆಯನ್ನು ವಿಶ್ಲೇಷಣೆ ಮಾಡಿದ್ದೆ ಅವರ ಗಟ್ಟಿತನ. ಸುಧಾರಣಾವಾದಿ ಕಳಕಳಿಯ ಕಾದಂಬರಿಗಳನ್ನು ಬರೆದಲ್ಲಿ ಸುಧಾರಣೆಗೆ ಪರವಾಗಿರದೆ ವಿರುದ್ಧವಾಗಿರುವ ಗುರುಮತ ಅನಿವಾರ್ಯವಾಗಿ ಬದಲಾವಣೆಗೆ ಮಣಿಯುವದು ಸಂಪ್ರದಾಯ ಪಕ್ಷವು ಸುಧಾರಣೆಯ ಪಕ್ಷಕ್ಕೆ ಮಣಿಯುವುದು ಇಂದಿರಾಬಾಯಿಯ ಆಶೆಯಾಗಿದೆ. ಇದನ್ನು ಈಗಾಗಲೇ ಉದಾಹರಿಸಲಾಗಿದೆ. ಇಲ್ಲಿ ಧರ್ಮ ಎಂದರೆ ಬದುಕುವ ಧರ್ಮ ಎಂಬ ಅರ್ಥವೆ ಮುಖ್ಯವಾಗಿ ಕಂಡಿದೆ. ಜಿ.ಎಚ್.ನಾಯಕರು ಗುರುತಿಸುವಂತೆ "ಸಮಾಜಜೀವನ ಹೆಚ್ಚು ಸುಖಮಯವಾಗುವುದಕ್ಕೆ ಅಗತ್ಯವಾದ ಪ್ರಯೋಜನ ಮೂಲವಾದ ವ್ಯವಹಾರ ವಿವೇಕವನ್ನು ಪ್ರತಿಪಾದಿಸುವ ಕಾದಂಬರಿ."[೨೮] ಗುಲ್ವಾಡಿ ವೆಂಕಟರಾಯರು ಮಡಿಕೇರಿಯಲ್ಲಿ 'ಜಾತಿ' ಎಂಬ ವಿಷಯವಾಗಿ ೧೯೦೨ ಉಪನ್ಯಾಸ ನೀಡಿದ್ದರು."[೨೯] ಸಾಮಾಜಿಕ ಸುಧಾರಣೆಗೆ ಕೇಡು ಎಂಬ ಉಪ ಶೀರ್ಷಿಕೆಯಲ್ಲಿ ಈಗ ಭಾರತದಾದ್ಯಂತ ಮುಖ್ಯವಾದ ಸಾಮಾಜಿಕ ಅರಿಷ್ಟಗಳೆಂಬಂತೆ ಜಾತಿಯನ್ನು ವಿಶ್ಲೇಷಿಸಿದ್ದಾರೆ. ಸ್ತ್ರೀಯರು ನಮಗೆ ಸರಿಸಮಾನಳಾದ ಮನುಷ್ಯ ಪ್ರಾಣಿ ಎಂದು ತಿಳಿದುಕೊಳ್ಳುವವರು ಹಿಂದೂಗಳಲ್ಲಿ ಮುಖ್ಯವಾಗಿ ಬ್ರಾಹ್ಮಣರಲ್ಲಿ ಬಹಳ ಕಡಿಮೆ. ಸ್ತ್ರೀಯೂ ಜನ್ಮ ಜನ್ಮಾಂತರಗಳಲ್ಲಿ ಪುರುಷನ ದಾಸಿಯಾಗಿದ್ದು ಅಜ್ಞಾನಂದಾಕಾರಗಳಲ್ಲಿ ಬಿದ್ದು ಸಾಯಬೇಕೆಂಬ ಮನುಕೃತ ನಿಯಮಗಳು ತಾತ್ಪರ್ಯ ಕಾಣುವುದು. ಆರಂಭ ಕಾಲದ ಕಾದಂಬರಿಗಳಲ್ಲಿ ಇದನ್ನು ಗುರುತಿಸಬಹುದು.

ಆರಂಭದ ಕಾದಂಬರಿಗಳಲ್ಲಿ ಸಾಮಾಜಿಕ ವಾಸ್ತವಗಳನ್ನು ಕಠೋರವಾಗಿ ಚಿತ್ರಿಸಿದ್ದಾರೆ. ಪುನರ್ವಿವಾಹ, ಬಾಲ್ಯವಿವಾಹದ ಖಂಡನೆ. ವಿಧವಾ ವಿವಾಹಕ್ಕೆ ಪುರಸ್ಕಾರ ನೀಡಲಾಗಿದೆ. ಧಾರ್ಮಿಕ ಕಾರಣಗಳನ್ನು, ಶಾಸ್ತ್ರ ವಿಚಾರಣಗಳನ್ನು ಒತ್ತಾಯದಿಂದ ಹೇರಿ ನಡೆಯುತ್ತಿದ್ದ ಸ್ತ್ರೀಯರ ಶೋಷಣೆಯನ್ನು ಒಂದು ಹಂತದಲ್ಲಿ ಈ ಕಾಲದ ಕೃತಿಗಳು ಗಟ್ಟಿಯಾಗಿ ಪ್ರತಿಭಟಿಸುತ್ತವೆ. ಸಾಮಾಜಿಕ ಸುಧಾರಣೆಯನ್ನು ಬಿಂಬಿಸುವಂತೆ ಶಿಕ್ಷಣ ಗುಣದೋಷಗಳನ್ನು ಅರಿಯಲು ಸಹಾಯಕಾರಿಯಾಗಿದೆ. ಪ್ರಾಯವಾಗದ ಚಿಕ್ಕ ಬಾಲಕಿಯರಿಗೆ ಪ್ರಥಮ ವಿವಾಹವೇ ಯೋಗ್ಯವಲ್ಲ. ಅಂಥವರಿಗೆ ವಿವಾಹವಾಗಿ ವೈದವ್ಯ ಪ್ರಾಪ್ತಿಯಾದರೆ ಪುನರ್ವಿವಾಹವೇ ಉತ್ತಮವಾದ ಸಾಧನ. ಸಾಮಾಜಿಕ ನ್ಯಾಯ ಎಲ್ಲರಿಗೂ ಏಕಪ್ರಕಾರವಾಗಿರಬೇಕೆಂಬುದೆ ಈ ಕಾದಂಬರಿಗಳ ಒಳನೋಟ.

ಜಾತಿ ಸಂಘರ್ಷ:

ಜಾತಿಯ ಸಂಘರ್ಷದ ಹಿನ್ನೆಲೆಯಲ್ಲಿ ಗಮನಿಸಿದಾಗ ಇಂದಿರಾಬಾಯಿ ಕಾದಂಬರಿ ಮುಂದಿಡುವ ಪ್ರಶ್ನೆಗಳು ಸ್ವರೂಪ ಎಂತಹದು ? ಅದು ಎಷ್ಟರ ಮಟ್ಟಿಗೆ ಸಾಧಿತವಾಗಿದೆ. ಮೇಲ್ವರ್ಗದಿಂದ ಬಂದ ಈ ಕಾದಂಬರಿಕಾರರು ಅದಕ್ಕೆ ಸೂಕ್ತವಾದ ಪರಿಣಾಮ ಸೂಚಿಸಿಲ್ಲ. ಇತರ ಕೆಳವರ್ಗದ ಸಮುದಾಯಗಳಿಗೆ ಇದರಿಂದ ಪ್ರಯೋಜನವಾದಂತಿಲ್ಲ. ಹಳೆಯ ವಾರಸುದಾರಿಕೆ, ಶ್ರೇಣೀಕರಣಗಳು ಹೊಸ ಆಯಾಮದಲ್ಲಿ

ವಸಾಹತುಶಾಹಿಯ ಹಿನ್ನೆಲೆಯಲ್ಲಿ ಯಶಸ್ವಾದಂತಿದೆ. ಒಂದರ್ಥದಲ್ಲಿ ಭಾಸ್ಕರ, ಇಂದಿರೆಯರ ವಿವಾಹದಲ್ಲಿ ಹಳೆಯ ಕೌಟುಂಬಿಕ ಮೌಲ್ಯಗಳ ಪ್ರತಿಪಾದನೆ ಇದೆ. ಇಂದಿರಾಬಾಯಿಯಲ್ಲಿ ಸಾಕ್ಷಾತ್ಕಾರವಾದ ಸಮಾಜ ಪರಿವರ್ತನೆ ಅದೇ ಸಮಾಜದ ಕೆಳಜಾತಿಯ ಜನರನ್ನು ಹೇಗೆ ತಟ್ಟಿತು? ಅವರ ಬದುಕನ್ನು ಅದು ಎಷ್ಟರ ಮಟ್ಟಿಗೆ ಪರಿವರ್ತಿಸಿತು ? ಶಾಸ್ತ್ರೋಕ್ತವಾಗಿ, ಸರಳವಾಗಿ, ಮಂತ್ರಘೋಷದೊಡನೆ ಸೋಬಾನೆ ಹಾಡಿನೊಂದಿಗೆ ಪಂಡಿತ ಸಜ್ಜನರ ಶುಭಾಶೀರ್ವಾದದೊಡನೆ ನಡೆದ ಇಂದಿರಾ-ಬಾಸ್ಕರರ ವಿವಾಹದ ಮರುದಿನ ಬೋಜನ ವ್ಯವಸ್ಥೆ ಈ ಸುಧಾರಣೆಯ ಸ್ವರೂಪದ ಪರಿಯನ್ನು ಬಯಲು ಮಾಡಿದೆ. "ಮರುದಿವಸ ಅಮೃತರಾಯನಲ್ಲಿ ಸ್ವಜಾತಿ ಬಾಂಧವರೆಲ್ಲರಿಗೂ ಹಾಗೂ ಬೇರೆ ಜಾತಿಯವರಿಗೆ ಅವರವರ ದೇವಾಲಯಗಳಲ್ಲಿಯೂ ಪಂಚಭಕ್ಷ್ಯ ಪರಮಾನ್ನಗಳಿಂದ ಊಟಗಳಾದವು. ಆನಂತರ ಅಮೃತರಾಯನು ಐನೂರು ರೂಪಾಯಿಯ ವಿಧ ವಿಧವಾದ ವಸ್ತ್ರಗಳನ್ನು ತರಿಸಿ ತನ್ನ ಮನೆಯಲ್ಲಿ ಎಲ್ಲ ಸೇವಕರಿಗೂ ಹಂಚಿಕೊಡಲು ಅವರೆಲ್ಲರೂ ಸಂತೋಷಪಟ್ಟು ವಧು-ವರರಿಗೆ ಆಶೀರ್ವದಿಸಿದರು." ಈ ಕಾಲದಲ್ಲಿ ಅಡಿಯಿಟ್ಟ ಆಧುನಿಕತೆಯು ಜಾತಿ, ಲಿಂಗ, ಪ್ರಭೇದಗಳನ್ನು ಹೊಸ ರೀತಿಯಲ್ಲಿ ರೂಪಿಸಿತು. ಇಂದಿರಾಬಾಯಿ ಆ ರೀತಿ ವಾಸ್ತವವನ್ನು ಸೂಚಿಸುವುದು. ಜಾತಿ ನಿಲುವನ್ನು ಪ್ರಕಟಪಡಿಸುವದು.

ಇಂದಿರೆ ನೆರೆಮನೆಯ ರಾಮರಾಯನ ಮಗಳು ಶಾರದೆಯ ಬಳಿ ಹೋಗಿ ಪುಸ್ತಕಗಳನ್ನು. ಓದುವ ವಿಚಾರ ಭೀಮರಾಯನಿಗೆ, ಅಂಬಾಬಾಯಿಗೆ ಗೊತ್ತಾಗಿ "ಓಹೋ ಜಾತಿ ಕೆಡಿಸುವದಕ್ಕೋಸ್ಕರ ಮ್ಲೇಂಛರಾದ ಪಾದ್ರಿಗಳು ಛಾಪಿಸಿದ ಪುಸ್ತಕಗಳನ್ನು ಓದುತ್ತಾಳಷ್ಟೆ. ಇನ್ನು ಇದರಿಂದ ಕೇಡಿದೆ (ಪುಟ.೧೧೩) ಜಾತಿ ಕೆಡುವ ಪ್ರಸಂಗ, ತಾರ್ಕಿಕತೆಯನ್ನು ಜಾತಿ ವಿಷಯದ ಬಗ್ಗೆ ಜನರಲ್ಲಿ ಮೂಡಿಸುವದು. ಹೊಸ ಪೀಳಿಗೆ ಈ ಬಗ್ಗೆ ನಿಜವಾದ ಕಳಕಳಿಯನ್ನು ಹೊಂದಿದೆ. ಯಾಕೆಂದರೆ ಈ ಪೀಳಿಗೆಗೆ ಹೃದಯ ನಿರ್ಮಲತೆ ಎಲ್ಲಕ್ಕಿಂತ ದೊಡ್ಡ ಮೌಲ್ಯವಾಗಿ ಮೂಡಿದ್ದು ಈ ಕಾದಂಬರಿಯಲ್ಲಿ ಬಂದಿದೆ. ಇದೇ ಇಂದಿರಾಬಾಯಿ ಕಾದಂಬರಿಯಲ್ಲಿ ಕಮಲಪುರದ ಮೊದಲ ವಿಧವಾ ವಿವಾಹ ಗಮನಿಸಲು ಆಗಮಿಸಿದ ವಿವಿಧ ಜಾತಿಯ ಸಮಾಗಮ ನೆರವೇರುವುದು. "ಸರದಾರ ಸಾಹೇಬರೂ, ದೊರೆಸಾನಿಗಳೂ, ಮಿಷನರಿಗಳೂ, ಪಾರ್ಸಿಯರೂ, ಗೂರ್ಜರೂ ಬೇರೆ ಜಾತಿಗಳ ಲೆಕ್ಕವಿಲ್ಲದಷ್ಟು ಜನರೂ ಲಗ್ನ ಮುಹೂರ್ತಕ್ಕೆ ಬಂಧುಗಳಿಗೆ ಮುಂಚಿತವಾಗಿಯೇ ಬಂದು ಮುಟ್ಟಲು ಅಮೃತರಾಯನು ಅವರೆಲ್ಲರನ್ನು ಸನ್ಮಾನಿಸಿ ತಾರತಮ್ಯಾನುಸಾರವಾಗಿ ಕುಳ್ಳಿರಿಸಿದನು"(ಪುಟ-೨೨೮) ಇದನ್ನು ಹೇಳಿದಂತೆ ಸುಧಾರಣಾ ಮನೋಭಾವದ ಕಾದಂಬರಿ ಎಂದು ಮೊದಲೇ ಹೇಳಿದ್ದು ಇಲ್ಲಿ ಕಾರ್ಯಪ್ರವೃತ್ತವಾದಂತೆ ಕಾಣುವದು. ಪತನಮುಖಿಯಾದ ಚಿತ್ರಣ ಇಲ್ಲಿ ವಿವರವಾಗಿ ಚರ್ಚಿತವಾಗಿದೆ. ಆಮೇಲೆ ಹೊಸ ಬದುಕಿನ ಸಾಧ್ಯತೆಯನ್ನು ಸೂಚಿಸುವಲ್ಲಿ ಸಮತೋಲನ ಮುಖಿಯಾದ ಸುಧಾರಣಾವಾದದ ನೆಲೆ ಇಲ್ಲಿ ಕಂಡಿದೆ. ಇದು ಲೇಖಕರ ಮನೋಧರ್ಮವು ಇರಬಹುದು. ಸುಧಾರಣಾಪರ ನಿಲುವು ಆಗಿರಬಹುದು. ಅಂತೆಯೇ

ಮತ್ತೊಂದೆಡೆ "ಜಾತಿ ಹೋದ ಮೇಲೆ ಜೀವನವನ್ನುಳಿಸಿಕೊಂಡು ಸಾರ್ಥಕವೇನಿದೆ? ಇಂಗ್ರೇಜಿ ಜನರು ಮಾಡಿದ ಕುಯುಕ್ತಿಯನ್ನು ಕೇಳಿದ್ದರೆ? (ಪುಟ.೨೧) ಎಂಬ ಪ್ರಶ್ನೆ ಜಾತಿ ಬದ್ಧತೆಯ ಶಂಕರರಾಯರನ್ನು ಕಾಡಿದ್ದು ವೈಚಾರಿಕತೆಯ ವೈಧಾನಿಕತೆಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಎಮ್.ಎಸ್. ಪುಟ್ಟಣ್ಣನವರ ಮಾಡಿದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಹಳೆಯ ಹಳ್ಳಿಯ ಜೀವನ ಚಿತ್ರಣವಿದೆ. ಉಪ್ಪಲಿಗರು ಅಥವಾ ಮೇಲು ಸಕ್ಕರೆಯವರು, ಪರಿವಾರದವರು ಅಥವಾ ತೊರೆಯರು ಎಂಬ ಎರಡು ಜಾತಿಯ ಒಕ್ಕಲಿಗರು ಇದ್ದಾರೆ (ಪು.೧೯ ಮಾ.ಮ.) ಈ ಜಾತಿಯರ ಮದುವೆ ಮುಂತಾದ ಕಾಲಗಳಲ್ಲಿ ಮಾಡುವ ಜೀದಿ ಮೆರವಣಿಗೆ ಪದ್ಧತಿಗಳ ಕುರಿತು ಇವರಿವರಿಗೆ ಬಹುದಿವಸದಿಂದಲೂ ವಿವಾದ ನಡೆಯುತ್ತಲೇ ಇದೆ. 'ಅಮೀಲರೂ', 'ಕಿಲ್ಲೇದಾರರೂ', 'ಶಿರಸ್ತೆದಾರರು' ಜಾತಿ ಸಂಘರ್ಷ ವಿಚಾರಗಳ ಚರ್ಚೆ ಇಲ್ಲಿ ಕಾಣುವದು. ಸುಬೇದಾರರು ಮನೆಯಲ್ಲಿಯೇ ಇದ್ದರೂ, ಕಿಲ್ಲೇದಾರರು ತಮ್ಮ ಕಂದಾಚಾರಗಳನ್ನು ನಡೆಸಲು ಕುದುರೆ ಹತ್ತಿಕೊಂಡು ಹೋಗುವರು. ಸುತ್ತಮುತ್ತಲಿನ ತೊರೆಯರ ಮಂಡಲಿಯೆಲ್ಲಾ ಆ ದಿವಸ ಚಾಮರಾಜನಗರದಲ್ಲಿ ನೆರೆಯುವರು. ಮುಂದೆ ಕೊಂಜ, ತಮಟೆ, ಹಿಂದೆ ರಣಬೇರಿ, ಅದರ ಹಿಂದೆ ಉತ್ತಮ ಓಲಗವನ್ನು ಮಾಡುವ ಎರಡು ಗುಂಪಿನ ಓಲಗದವರು ಹೋಗುವದು.(ಇಂದಿರಾಬಾಯಿ, ಪು-೨೧) ಸಾಮಾಜಿಕವಾದ ಪಂಗಡಗಳ ತಾಳಮೇಳತೆ ಸಾಮಾಜಿಕ ಸಾಮರಸ್ಯತೆಯ ನೋಟವಿದೆ. ಚಾಮರಾಜನಗರದ ಉಪ್ಪಲಿಗರಿಗೂ, ಪರಿವಾರದವರಿಗೂ ವಿಪರೀತವಾದ ಕಲಹ, ದ್ವೇಷದ ದಳ್ಳುರಿ, ವೈಷಮ್ಯವನ್ನು ಇಲ್ಲಿ ಕಾಣುವೆವು. ಉಪ್ಪಲಿಗರ ಪರಿವಾರದವರ ಜೊತೆ ಸೇರಿಕೊಳ್ಳುತ್ತಿದ್ದ ಹೊಲೆಯರು ಸುಖಲೋಲುಪರಾಗಿದ್ದವರು (ಪು.೩೮) ಈ ಗ್ರಾಮದಲ್ಲಿ ಸಾಮಾಜಿಕ ಕಲಾಕಾರರು ಕಾಣುವರು. ಈ ಊರಿನ ಯಕ್ಷಗಾನ ಆಟದವರು, ಸಂಗೀತಗಾರರು, ನಾಟ್ಯ ಕಟ್ಟುವ ನಾಯಕಸಾನಿಯರು, ಹಾಸ್ಯಗಾರರು, ಯಕ್ಷಿಣಿ ಆಟದವರು, ಕುಸ್ತಿ ಮಾಡುವ ಪೈಲವಾನರು, ವಿನೋದ ಗೋಷ್ಠಿಯವರು, ಆಗಾಗ್ಗೆ ಬರುತ್ತಾ ಇದ್ದರು" (ಪು.೩೯) ಮಾಡಿದ್ದುಣ್ಣೋ ಮಾಹಾರಾಯ ಕಾದಂಬರಿಯಲ್ಲಿ ಮೂಡಿಬಂದಿದೆ. ಹಲವಾರು ಸಮುದಾಯಗಳ ಸಂಕೀರ್ಣ ಬದುಕು ಇಲ್ಲಿದೆ. ಸಮುದಾಯಗಳ ವೇಷ ಹಾಕಿ ಗ್ರಾಮಕ್ಕೆ ಬರುವ 'ಜೋಗಿ', 'ಜಂಗಮ', 'ದಾಸ', 'ಗೊರವ', 'ಪಂಡಾರ', 'ಬುಡಬುಡುಕೆ', 'ಕೊರವಂಜಿ' ಮೊದಲಾದವರು ಬರುತ್ತಿದ್ದರು(ಪು.೪೪) ಹಾಗೂ ಕೆಲವರು ಪಾರೀ ವರ್ತಕರ ವೇಷವನ್ನು, ಕೆಲವರು ಬ್ರಾಹ್ಮಣ ವೇಷ ಹಾಕಿಕೊಂಡು ಬದುಕುವ ಕಷ್ಟಕರ ಬದುಕಿನ ಮಗ್ಗಲು ತೆರೆದಿಟ್ಟಿದೆ.

ಮದುವೆ ಪ್ರಸ್ತದ ಮೆರವಣಿಗೆಗೆ ಆನೆ, ಅಂಬಾರಿ, ಮುವ್ವತ್ತು ಬೆಳ್ಳಿಕಟ್ಟಿಗೆ, ಕೊಂಬು, ತಮಟೆ, ತಾಸು ಮರಫಾ, ಖಾಸಾ ಓಲಗದವರು, ಒಂದು ಜೋಡಿ ತಾಫೆದವರು, ಇಲಾಲುಗಳು, ಫರಿಮೀನುಗಳು, ಜವಕ್ಕೆ

ಬತ್ತಿ ಎಣ್ಣೆ ಸಹಾ. ಇಬ್ಬರು ಅವರಸರದ ಹೊಬಳಿ ಕಟ್ಟಿಗೆಯವರು ಇರುತ್ತಿದ್ದರು(ಪು.೫೮) ಹಲವಾರು ಜಾತಿಯವರು ಹೊಟ್ಟೆಪಾಡಿಗಾಗಿ ಇಂತಹ ವೃತ್ತಿ ರೂಢಿಸಿಕೊಂಡು ಹೊಟ್ಟೆ ಹೊರೆಯುವ ಪ್ರಮೇಯದ ವಿಶ್ಲೇಷಣೆ ಕಾಣುವುದು. ಇವಲ್ಲದೆ ಸೂಳೆಯರ ಮೇಳ, ಸಂಗೀತಗಾರರ ಗಾನ, ಮಧ್ಯೆ ಮಧ್ಯೆ ನಕಲಿ ನಾರಾಯಣಪ್ಪನ ಹಾಸ್ಯದ ಜೊತೆಗೆ ವೇದಘೋಷ ಶಾಸ್ತ್ರಾರ್ಥ ವಿಚಾರ ಗಮನಕ್ಕೆ ಬಂದೂ ಬಾರದಂತೆ ಜರುಗುವವು. ಜಾತಿ ಕೀಳಾದರೂ ಹೊಟ್ಟೆ ಹೊರೆಯುವ ಉದ್ದೇಶಕ್ಕೆ ಇಲ್ಲಿ ಈ ರೀತಿಯಾದ ಪ್ರಮೇಯ ಜರುಗಿವೆ. ಸಾಮುದಾಯಿಕ ಸಂಘದ ವಿಚಾರ ಸಭಾಪತಿ ಕಿಟ್ಟನ ನಡುವೆ ನಡೆಯುವ ಸಂಭಾಷಣೆ ಸ್ವಾರಸ್ಯಪೂರ್ಣವಾದುದು. ಕಿಟ್ಟ–ಆಚಾರ್ಯರ ವೇಷ ಹಾಕಿಕೊಂಡು ಬಂದವರೆಲ್ಲಾ ದೊಡ್ಡಾಚಾರ್ಯ, ಪೂರಿ ರಾಮಾಚಾರ್ಯ, ವಗ್ಗರಣೆ ಭೀಮಾಚಾರ್ಯ, ಎಂಟುಮಣಾಚಾರ್ಯ ಗೋಮಟ್ಟಚಾರ್ಯ, ಅಪ್ಪ, ಟೊಪ್ಪ, ಟೊಣ್ಯ, ಟೂಶ್ಯ ಎಂತ ಇವರ ಶಿಷ್ಯರು. ಇವರಿಗೆ ಒರಳಗಲ ಮುದ್ರೆ ವನಕೆ ಗಾತ್ರ ಅಂಗಾರ, ಇವರೆಲ್ಲರನ್ನು ಬಲ್ಲೆಕಣೋ ಇವರಲ್ಲೀಗ ಮಡಿ ಹೆಚ್ಚು, ನಾನು ಒಪ್ಪಿದೆ. ಕೂತರೆ ಮಡಿ, ನಿಂತರೆ ಮಡಿ, ಕಾಲುಮಡಿ, ಕೈಮಡಿ, ಸ್ನಾನಕ್ಕೆ ಮಡಿ, ಉಳ್ಳಕ್ಕೆ ಮಡಿ, ತಿಲ್ಲಕ್ಕೆ ಮಡಿ, ಹೆಂಡತಿಗೆ ಮಡಿ, ಗಂಡನಿಗೆ ಮಡಿ ಎಲ್ಲಾ ಕೆಲಸಕ್ಕೂ ಮಡಿಯಪ್ಪ ಮಡಿ (ಮಾಡಿದ್ದುಣ್ಣೊ ಮಹಾರಾಯ ಪು.೧೩೪). ಇಲ್ಲಿ ಅತಿ ಮಡಿವಂತಿಕೆಯ ಅವತಾರ, ಮಡಿ ಹುಡಿಯ ಬೆನ್ನು ಹತ್ತಿದ ಜನರ ಸಂಕಟದ ಸರಮಾಲೆಯನ್ನೇ ಹೆಣೆದಂತೆ ಕಂಡಿದೆ. ಇದೇ ರೀತಿಯಾಗಿ ಉಪ್ಪಲಿಗರ ಜಾತಿಯಲ್ಲಿ ಇರುವ ಅನಿಷ್ಠ ಪದ್ಧತಿಯನ್ನು ಪರಿಚಯಿಸಿದೆ. ಮಕ್ಕಳಿಲ್ಲದ ಹಣಗಾರನಾದ ಉಪ್ಪಲಿಗನಿಗೆ ಮೂರು ಹೆಂಡರಿದ್ದರೂ ಮಕ್ಕಳಾಗಲಿಲ್ಲ. ಸಮಯಕ್ಕೆ ಗಂಡ, ಮಕ್ಕಳಿದ್ದ ಹೆಣ್ಣುಮಗಳು. "ಇದ್ದರೆ ಒಬ್ಬ ಗಂಡ ಇರಬೇಕು, ಇಲ್ಲದಿದ್ದರೆ ಪ್ರಾಣ ಹೋಗಬೇಕು. ಈ ಹಾಳ ಉಪ್ಪಲಿಗರ ಜಾತಿ ಪದ್ಧತಿ ಸುಡಬೇಕು. ಒಬ್ಬರ ಹೆಂಡತಿಯನ್ನು ಇನ್ನೊಬ್ಬನಿಗೆ ಕೊಡುವುದು ಜಾತಿ ಪದ್ಧತಿಯೇ? ಒಂದು ಕಾಲಕ್ಕೂ ನಡೆಯದು." (ಮಾ.ಮ. ಪುಟ೧೬೧) ಇಂತಹ ಅನಿಷ್ಟ ಜಾತಿ ಪದ್ಧತಿಯಿಂದ ಸಿಡಿದು ನಿಲ್ಲುವ ಸ್ತ್ರೀ ಸಮಾಜಕ್ಕೆ ಸವಾಲು ಹಾಕಿದ್ದು ಸ್ತ್ರೀಧರ್ಮ ಮೌಲ್ಯಪರತೆಯನ್ನು ಪ್ರತಿಬಿಂಬಿಸಿದೆ.

ಇಂದಿರಾ ಕಾದಂಬರಿಯಲ್ಲಿ ಸುಧಾರಣೆಗೆ ಒತ್ತು ನೀಡುವ ಸಾಮಾಜಿಕ ಗತಿಶೀಲತೆ ಎಷ್ಟು ಸುಸಂಬಂಧವಾಗಿದೆ ಎಂಬ ಪ್ರಶ್ನೆ ಎದುರಾಗುವುದು. "ಆಧುನಿಕ ಶಿಕ್ಷಣದ ದುಷ್ಪರಿಣಾಮಗಳಿಂದ ಸನಾತನ ಸಮಾಜದ ಮೌಲ್ಯಗಳನ್ನು ಸಂರಕ್ಷಿಸುವುದು ಆಚಾರ್ಯರ ಕಾಳಜಿಯಾಗಿತ್ತು"[೮೦] ಸ್ತ್ರೀಯರು ಓದು ಬರಹ ಕಲಿಯಬೇಕಾದ ಪ್ರಮೇಯ, ಸ್ತ್ರೀಯರು ಸ್ವಾತಂತ್ರ್ಯ ಸಮಾನತೆ ಪಡೆಯಬೇಕು. ಬಾಲ್ಯ ವಿವಾಹ ತಿರಸ್ಕರಿಸಬೇಕು, ವಿಧವಾ ವಿವಾಹ, ಪುನರ್‌ವಿವಾಹ ಆಗಬೇಕು, ಸ್ವಗೋತ್ರ, ಸ್ವಜಾತಿ ವಿವಾಹದಿಂದ ಸಂತತಿ ರೋಗಗ್ರಸ್ಥವಾಗುವುದರಿಂದ ವಿವಾಹವು ಸಲ್ಲದು. ಅಲ್ಲಿ ಅಂತಹ ಸಂತಾನಕ್ಕಾಗಿ ಬಹುಪತ್ನಿತ್ವ ಸ್ವಾಮಿ, ಧರ್ಮ, ನೀತಿಗಳು ಕೇವಲ ಸ್ತ್ರೀಗೆ ಮಾತ್ರವಲ್ಲ ಎಂಬ ಅಂಶಗಳನ್ನು ಪ್ರತಿಪಾದಿಸಿದೆ. ಈ

ಮೇಲಿನ ವಿಚಾರಗಳಿಗೆ ಅನುಗುಣವಾಗಿ ಪಾತ್ರಗಳು ಲೇವಡಿ ಅಪಹಾಸ್ಯಕ್ಕೆ ಒಳಗಾಗುವದು ಅಧಿಕ. ಹಾಗೆ ನೋಡಿದರೆ ರಾಧಾಬಾಯಿ, ಕಮಲಾಬಾಯಿ ಸ್ಪಷ್ಟವಾಗಿ ಸುಧಾರಣಾವಾದ ಪ್ರತಿಪಾದಕರಾಗಿದ್ದರೆ ಬಾಷ್ಕಳ ಪಂತನು ಆ ಬಗ್ಗೆ ದ್ವಂದ್ವ ಭಾವ ಹೊಂದಿದ್ದಾನೆ. ಜಿ.ಎಸ್. ಅಮೂರ ಅವರು ವಾಸ್ತವದ ಅಭಾಸ ಎಂದು ಕರೆಯುವವಲ್ಲದೆ “ಗುಲ್ವಾಡಿಯವರು ವಾಸ್ತವ ಪ್ರಜ್ಞೆಗೆ ಭಿನ್ನವಾದುದಷ್ಟೇ ಅಲ್ಲ, ಸಾಮಾಜಿಕ ಸಂಚಲನವನ್ನು ಸ್ಥಗಿತ ಚಿತ್ತದಿಂದ ಗ್ರಹಿಸುವ ಮಿತಿಯುಳ್ಳದ್ದಾಗಿದೆ”[೮೧] ಎಂದಿದ್ದಾರೆ. ಇಲ್ಲಿ ಭಾರತೀಯ ಸಮಾಜ ಹೊಸ ಅರಿವು, ಪ್ರಜ್ಞೆ ಪಡೆದು ಭಿನ್ನ ಭಿನ್ನ ಆಯಾಮಕ್ಕೆ ಸಿದ್ಧಗೊಳ್ಳುತ್ತಿರುವ ಸಮಯದಲ್ಲಿ ಕೆರೂರು ವಾಸುದೇವಾಚಾರ್ಯರು ಸನಾತನ ವ್ಯವಸ್ಥೆ, ಮೌಲ್ಯಗಳ ರಕ್ಷಣೆಗಾಗಿ ಹೋರಾಡಿದ್ದು, ಸೃಜನಶೀಲತೆಯ ಆಸರೆ ಪಡೆದುಕೊಂಡಿದೆ. ಸಮಕಾಲೀನತೆಯನ್ನು ಗ್ರಹಿಸುವಲ್ಲಿ, ಚಿತ್ರಿಸುವಲ್ಲಿ ಸೋಲು ಅನುಭವಿಸಿರುವುದು ಕನ್ನಡ ಸಾಹಿತ್ಯದ ಮಟ್ಟಿಗೆ ಅಪಾರ ಹಾನಿಯಾಗಿದೆ.

ಶೃಂಗಾರಚಾತುರ್ಯೋಲ್ಲಾಸಿನಿ ಕಾದಂಬರಿಯಲ್ಲಿ ಜಾತಿಯ ಜಾಡು ಕಾಣುವುದು. ಶತ್ರುಗಳನ್ನು ಕೊಲ್ಲುವುದು ಕ್ಷತ್ರಿಯ ಧರ್ಮವೇ ಆಗಿದೆ(ಪು.೨೮). ಪೂರ್ಣಶತ್ರುವೇ ತನ್ನವಶಕ್ಕೆ ಸಿಕ್ಕಿದರೂ ಆತನನ್ನು ತಕ್ಷಣದಲ್ಲಿ ಕೊಲ್ಲುವುದು “ಶೂರ ಧರ್ಮವಲ್ಲ” ಎಂಬ ಅಂಶಕ್ಕೆ ಮುನ್ನಣೆ ನೀಡಿದ್ದು, ಆತನಿಗೆ ಅವಶ್ಯವಾದವುಗಳನ್ನು ಒದಗಿಸಿಕೊಟ್ಟು ಒಳ್ಳೆಯ ಸಮಯವೆಂದು ಆತನಿಗೆ ತೋರಿದ ಮೇಲೆ ಆತನ ಬಲಕ್ಕೆ ಸರಿಯಾಗಿ ತಕ್ಕಬಲವನ್ನು ತೆಗೆದುಕೊಂಡು ಶತ್ರುವನ್ನು ಹಿಡಿಯುವ ಪ್ರಯತ್ನ ಮಾಡಬೇಕು. ಇದು ಮನೋನೈತಿಕತೆಯ ಪ್ರತಿಕೂಲತೆಯನ್ನು ಬಿಂಬಿಸಿದೆ. ಕ್ಷತ್ರಿಯಧರ್ಮ ನಿಯತ್ತಿನ ನೀತಿಯೆಂದು ಹೇಳಿದಂತಿದೆ.

ಬೋಳಾರು ಬಾಬುರಾಯರು ವಾಗ್ದೇವಿ ಕಾದಂಬರಿಯಲ್ಲಿ ಪಾಶ್ಚಿಮಾತ್ಯ ವೈಚಾರಿಕ ನೆಲೆಯನ್ನು ಆಧರಿಸುವರು. ಆಗ ದೇಶೀಯ ವಿಡಂಬನೆ ಕಟುಟೀಕೆಯ ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಹೊಸ ಕಾಲದ ಅನಿವಾರ್ಯತೆಯ ಅರಿವು ಅವರಿಗೆ ಬಂದುಬಿಟ್ಟಿದೆ. ಜೀವನಕ್ರಮದ ಪಲ್ಲಟದ ತಲ್ಲಣಗೊಳಿಸುವ ವಿವರಗಳನ್ನು ಜಾತಿ ಜಾಡಿನ ಹಿನ್ನೆಯಲ್ಲಿ ಗಮನಿಸಲಾಗಿದೆ. ನರಸಿಂಹಪುರ, ಉಪ ಪಟ್ಟಣಗಳೂ, ಹಳ್ಳಿಪಳ್ಳಿಗೂ, ಕಾಡುಪ್ರದೇಶಗಳಿಗೂ ಪ್ರಖ್ಯಾತವಾಗಿರುವ ಆ ದೊಡ್ಡ ರಾಜ್ಯಕ್ಕೆ ‘ಷಟ್ಪುರ ನಗರವೆಂಬ’ ಪುರಾತನ ಹೆಸರು ಇರುವುದು. ಆ ಆರು ಪಟ್ಟಣಗಳಲ್ಲಿ ಕೋಮಲಪುರ ಬಿಟ್ಟು ಬೇರೆ ಪುರಗಳಲ್ಲಿ ಬಹುಮಂದಿ ಬ್ರಾಹ್ಮಣರು ವೇದಜ್ಞ ಮಾಡಿಕೊಂಡಿದ್ದರು(ಪು.೬೩) ಹಾಗೆ ಕುಮುದಪುರ ಮಠದ ಸಭೆಯಲ್ಲಿ ಗೊಂದಲ ಉಂಟಾದ ಸಮಯಕ್ಕೆ ಗುಡಾಚಾರ್ಯನು ಕುದುರೆ ಹೊಡೆಯುವ ಚಾಬುಕವನ್ನು ಪ್ರಯೋಗಿಸಿ ಹೊಡೆದು ಬಿಟ್ಟಾಗ ಕುದುರೆಯು ನೆರೆದವರ ಮೇಲೆರಗಿದಾಗ ಸಭಿಕನೊಬ್ಬ

ಹಾರಯ ಗರುಡ ಹಾರಯ

ಬಾರಯ ಕುರುಬ ಬಾರಯ

ತೋರಯಾ ಮೋರೆಯ ತೋರಯ

ಸೇರೆಯ ಬಾನವ ಸೇರಯ[೮೨]

ಎಂದು ಜಾತಿ ಓಡಿದು ಹೀಯಾಳಿಸಿದ ಪ್ರಸಂಗವೊಂದು ಜರುಗುವದು. ಆ ಕಾಲದ ಜಾತಿಯ ಜನರನ್ನು ಹೀಯಾಳಿಸಲು ಜಾತಿ ಓಡಿದು ಹೀಯಾಳಿಸುವ ಪ್ರಮೇಯಗಳು ಕಾದಂಬರಿಯಲ್ಲಿ ಕಾಣುವವು. ಜಾತಿ ಸಾಮಾಜಿಕವಾಗಿ ಅಂತಸ್ತುಗಳ ಮೇಲು-ಕೀಳಿನ ಭಾವನೆಗೆ ಧಕ್ಕೆ ತರುವ ಜಾಯಮಾನವಾಗಿತ್ತು ಕೆಟ್ಟ ಪರಿಣಾಮ ಬೀರುವ ಪ್ರತೀಕವೇ ಆಗಿದೆ. ಅದಕ್ಕೆ ದ್ವೇಷದ ಮನೋಸ್ಥಿತಿಯು ಆರಂಭವಾಗುವ ಪ್ರತಿಕೂಲ ವಾತಾವರಣ ಅಲ್ಲಿ ಕಾಣುವುದು.

ವಾಗ್ದೇವಿಯ ನಲವತ್ತೇಳನೆಯ ಭಾಗದಲ್ಲಿ ನಡೆಯುವ ಪ್ರಸಂಗ ಜಾತಿಯ ಜಾಡನ್ನು ವಿಮರ್ಶಿಸುವುದು. ಮುದುಕಿಗೂ ವಿಮರ್ಶಾಧಿಕಾರಿ ನಡೆಯುವ ಸಂವಾದ, ಶೆಟ್ಟರ, ಶೆಟ್ಟರ ಮೂಲಕ ಹೊಲೆಯರ ವಿಚಾರ, ವಿಮರ್ಶಾಧಿಕಾರಿಗೂ ಮುದಿ ಮಡಿವಾಳನ ನಡುವಿನ ಸಂವಾದ, ತಟ್ಟಾಲೆ ಮೂಲತಾಯೇ(ಶೆಟ್ಟರ ಮೂಲದವ) ನಡುವಿನ ಸಂವಾದ, ಮುಂಬ್ಯಾರಿ ನಡುವಿನ ಸಂವಾದ, ಕೊತ್ವಾಲರೂ, ಕಾರ್ಬಾರಿಗಳೂ ಪೇಚಾಟದ ಸಮಯದಲ್ಲಿ ಹಲವಾರು ಉಪಜಾತಿಯ ವ್ಯಕ್ತಿಗಳನ್ನು ವಿಮರ್ಶಾಧಿಕಾರಿ ಶೋಧಿಸುವಲ್ಲಿ ಪ್ರಮುಖ ಸಾಧನಗಳಾಗಿ ಗೊತ್ತಿಲ್ಲದಂತೆ ಬಳಸಿಕೊಂಡರು (ವಾ.ಮ.ಪುಟ ೨೩೫, ೨೩೬, ೨೩೭, ೨೩೮) ಕೆಳಜಾತಿಯ ಮುದುಕಿ, ಮಡಿವಾಳ, ಶೆಟ್ಟರ ಮೂಲ ಹೊಲೆಯ ಮುಂಬ್ಯಾರಿಗಳ ಹೇಳಿಕೆಗಳ ವ್ಯತ್ಯಾಸವನ್ನಿಲ್ಲಿ ಕಂಡದ್ದು, ಕೇಳಿದ್ದು, ಮುಕ್ತವಾಗಿ ಚರ್ಚಿಸಿದ ಪ್ರಮೇಯ ಕೆಳಜಾತಿಯ ಮುಗ್ಧ ಸ್ವಭಾವದ ಭಾವನೆಯನ್ನು ಕಾಣುವದು. ಕೊಲೆ ಮಾಡಿ ಹೆಣವನ್ನು ಗುಪ್ತವಾಗಿ ಸಾಗಿಸಿದ ಸ್ತ್ರೀಯರ ಕಪಟ ಮನೋಸ್ಥಿತಿಯೊಂದು ಅನಾವರಣಗೊಳ್ಳಲು ಕಾರಣವಾದ ಪುರುಷನ ಹಿನ್ನೆಲೆಯ ಬೆಂಬಲ ಅರಿಯಲು ಪ್ರಯತ್ನಿಸಿದ ಅಧಿಕಾರಿಯ ಚಾತುರ್ಯ ಮನನೀಯ.

ವಾಗ್ದೇವಿ ಕಾದಂಬರಿಯಲ್ಲಿ ಜಾತಿ ವಿಷಯ ಮುಖ್ಯವಲ್ಲದಿದ್ದರೆ ಅವರ ಪಾತ್ರಗಳು ಅಲ್ಲಲ್ಲಿ ಪ್ರಾಮುಖ್ಯ ಗೊತ್ತಿಲ್ಲದೆ ತಪ್ಪು ದಾರಿಗೆ ಹೋದ ಪ್ರಮೇಯಗಳಿವೆ. ವಾಗ್ದೇವಿ ಅದೋಗತಿಗೆ ಹೋದ ಕೊನೆಯ ಭಾಗದ ಮಠದ ಸಂಪತ್ತು ಅಂತ್ಯ ಕಂಡು ಸಾಲಕ್ಕೆ ತಿರುಗಿದಾಗ ಸಾಲ ಪಡೆದ ಜಾತಿಯ ವ್ಯಕ್ತಿ ಪಟ್ಟಿಯೊಂದು ದೊರೆಯುವುದು. ಸಾಹುಕಾರ ಘುತುಮುಲ್ಲಾಖಾನ್. ದಿಗಂಬರ ಶೆಟ್ಟಿ, ಗಲ್ಲ ಮೀಸೆಯ ಸುಬ್ಬಯ್ಯ ಶೆಟ್ಟಿ, ವಾಂತಸೀನಭಟ್ಟರಿಂದ ಹಣ ಸಾಲ ಪಡೆದದ್ದು ಕಾಣುವುದು (ಪುಟ-೨೭೧) ನಂದಗಾಂವಿಯನ ಬದುಕು ನಾಯಿ ತಿಂದು ಹೋಯಿತು ಎಂಬ ಗಾದೆ ಮಾತಂತೆ ಗಂಟು ಕರಗಿತು. ಮಠದ

ಸುಳಿಯಲ್ಲಿ ವಾಗ್ದೇವಿ ಕುಗ್ಗಿ ಹೋದಳು. ಸಾಮಾಜಿಕ ವರ್ಗದ ಕಾಳಜಿಯ ಸೀಮಿತತೆ ಮತ್ತು ಕ್ಷಣಿಕತೆಯ ಪ್ರತಿಫಲವನ್ನು ವಾಗ್ದೇವಿ ಕಾದಂಬರಿಯಲ್ಲಿ ಕಾಣುತ್ತೇವೆ. ವರ್ಗ ಜಾತಿಯನ್ನು ಪ್ರಮುಖ ಚರ್ಚೆಯ ವಿಷಯವಾಗಿ ತೆಗೆದುಕೊಳ್ಳದಿದ್ದರೂ ಮಠ, ಚಂಚಲನೇತ್ರ ವಾಗ್ದೇವಿಯ ಸಾಮಾಜಿಕ ಮತ್ತು ವೈಯಕ್ತಿಕ ಸಂಗತಿಯಲ್ಲಿ ಪ್ರವೇಶ ಪಡೆದು ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಸ್ವಾತಂತ್ರ್ಯಪೂರ್ವ ಕನ್ನಡ ಮಹಿಳಾ ಕಾದಂಬರಿಗಾರ್ತಿ ನಂಜನಗೂಡು ತಿರುಮಲಾಂಬರವರನ್ನು ಜಾತಿ ವಿಷಯ ಅಷ್ಟಾಗಿ ಕಾಡಿಲ್ಲ. ಸುಶೀಲೆ, ನಭಾ, ವಿದ್ಯುಲ್ಲತಾ, ವಿರಾಗಿಣಿ ಕಾದಂಬರಿಗಳು ಸಾಮಾಜಿಕ ಜಾತಿ ವ್ಯವಸ್ಥೆಗಿಂತ ಗಂಡು ಜಾತಿ ಅವಳನ್ನು ಹೆಚ್ಚಾಗಿ ಕಾಡಿದೆ. ಸ್ತ್ರೀ ಸಹಜವಾದ ಭಯ, ಚಾಪಲ್ಯ, ಅಭಿಮಾನ, ಅಸೂಯೆ, ದುಃಖಾದಿಗಳು, ನಿಃಶೇಷವಾಗಿ ಧೈರ್ಯ, ಸ್ಥೈರ್ಯ, ಸ್ವಾರ್ಥ, ತ್ಯಾಗ, ದೃಢಸಂಕಲ್ಪ, ಮನಶಾಂತಿ, ಸಂತೋಷಾದಿಗಳು ಮನದಲ್ಲಿ ಬೇರೂರಿ ಬಹುತೇಕ ಸ್ತ್ರೀ ಸಮಸ್ಯೆಯ ಸೃಷ್ಟಿಕರ್ತನಾದ ಮನುಷ್ಯ ಜಾತಿಯ ಪುರುಷನನ್ನು ಪ್ರತಿಸ್ಪರ್ಧಿಯಂತೆ ಬಿಂಬಿಸಿದ್ದರೂ ವಿರೋಧಿಸುವ ಮನಸ್ಸು ಮಾಡಿಲ್ಲ.

ಮಾನವ ನಿರ್ಮಿತ ಜಾತಿ ವ್ಯವಸ್ಥೆಗೆ ದೇವರ ಹೆಸರಿನಲ್ಲಿ ಅನ್ಯಾಯ, ವಂಚನೆ, ಮೋಸ ನಡೆದಿವೆ. ಮಾನವ ಬೌದ್ಧಿಕವಾಗಿ ಪ್ರೌಢನಾಗುತ್ತಾ ಹೋದಂತೆ ತನ್ನನ್ನು ತಾನು ಒಂದು ಜಾತಿ ಎಂಬ ವ್ಯವಸ್ಥೆಗೆ ನಿರ್ಬಂಧಿಸಲ್ಪಟ್ಟನು. ದಿನ ಕಳೆದಂತೆ ವರ್ಣ ವರ್ಗಗಳು ಸೃಷ್ಟಿಯಾಗಿ ಗಟ್ಟಿಗೊಳ್ಳುತ್ತಾ ಕ್ರಿಯೆಯ ಆಧಾರದ ಮೇಲೆ ಜಾತಿಗಳಾಗಿ ವಿಂಗಡಿಸಲ್ಪಟ್ಟವು. ಈ ಜಾತಿ ವ್ಯವಸ್ಥೆಯಿಂದ ಆಯಾ ಜಾತಿಯ ಸ್ತ್ರೀಯರ ಬದುಕು ಮತ್ತಷ್ಟು ದುಸ್ತರವಾಯಿತು. ಈ ಜಾತಿ ಭೇದ ಮೇಲ್ವರ್ಗದ ಸ್ತ್ರೀಯರಿಗೆ ಸಮಸ್ಯೆಯಾಗಲಿಲ್ಲ. ಕೆಳವರ್ಗದವರಿಗೆ ಆರ್ಥಿಕವಾಗಿ ಜರ್ಜರಿತರಾದ ಸ್ತ್ರೀಯರ ಬದುಕಿಗೆ ಜಾತಿ ಸಮಸ್ಯೆಯ ಕಾಟ ಆರಂಭವಾಯಿತು. ಕಟ್ಟುನಿಟ್ಟಿನ ಜಾತಿ ವ್ಯವಸ್ಥೆಯಲ್ಲಿ ದುಡಿಮೆಯನ್ನೇ ನಂಬಿದ್ದ ಸ್ತ್ರೀ ಮತ್ತೋರ್ವ ಸ್ತ್ರೀಯನ್ನು ಕಂಡ ರೀತಿ ಮೆಚ್ಚುವಂತಹದ್ದು. ಸ್ವಾತಂತ್ರ್ಯ ಪೂರ್ವದ ಸಮಾಜ ಜಾತಿಯತೆಯಿಂದ ಅವು ಅಲ್ಲಾಡಿಸಿದ ಬೇರುಗಳಿಂದ ಗಟ್ಟಿಗೊಂಡಂತಿದ್ದರೂ ಸ್ತ್ರೀಯ ಸಂಬಂಧಗಳ ವಿಷಯದಲ್ಲಿ ಸ್ವಲ್ಪ ಮಟ್ಟಿನ ಸಡಿಲತೆ ಕಾಣುವದು. ಇದೇ ಕಾರಣಕ್ಕೆ ಒಟ್ಟಾಗಿ ದುಡಿಮೆಗೆ ಹೋಗುವ ಸಮಯದಲ್ಲಿ ಜಾತಿ ಎಂಬದು ಅಷ್ಟಾಗಿ ಕಾಡಿದಂತಿಲ್ಲ. ಇದು ಆ ಸಮಯದ ಸಮಾಧಾನದ ಸಂಗತಿಯೂ ಹೌದು. ಸ್ವಾತಂತ್ರ್ಯಪೂರ್ವ ಸ್ವತಂತ್ರ ಕಾದಂಬರಿಗಳಲ್ಲಿ ಗುರುತಿಸಿರುವ ಸ್ತ್ರೀಯರ ವೃತ್ತಿ ಕೃಷಿ ಕಾರ್ಮಿಕತೆ.

ಮೊದಲ ಘಟ್ಟದ ಸಂದರ್ಭದಲ್ಲಿ ಆರ್ಥಿಕವಾಗಿ ಬ್ರಾಹ್ಮಣ ಪುರುಷರು ಪೌರೋಹಿತ್ಯ, ಜ್ಯೋತಿಷ್ಯಶಾಸ್ತ್ರ ಮುಂತಾದ ವೃತ್ತಿಯಿಂದಾಗಿ ಆರ್ಥಿಕವಾಗಿ ಕೆಲಮಟ್ಟಿಗೆ ಸಂಪನ್ನರಾಗಿದ್ದರು. ಇವರನ್ನವಲಂಬಿಸಿದ ಸ್ತ್ರೀಯರು ಗೃಹ ಕಾರ್ಯಕ್ಕೆ ಸೀಮಿತರಾಗಿದ್ದರು. ಅಪರೂಪಕ್ಕೆಂಬಂತೆ ಬ್ರಾಹ್ಮಣ

ಸ್ತ್ರೀಯರು ಬಡತನದಿಂದಾಗಿ ಗೃಹಕೃತ್ಯದ ಜೊತೆಗೆ ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದರೆಂಬುದಕ್ಕೆ ಕೆಲವು ಕಾದಂಬರಿಗಳ ಪಾತ್ರಗಳು ಸಾಕ್ಷಿಯಾಗುತ್ತವೆ 'ಇಂದಿರಾಬಾಯಿ' ಕಾದಂಬರಿಯ ಸುಶೀಲೆ 'ವಾಗ್ದೇವಿ' ಕಾದಂಬರಿಯ ಭಾಗೀರಥಿ. ಮಗಳು ವಾಗ್ದೇವಿ, ಬ್ರಾಹ್ಮಣ ಜಾತಿಯವರಾದರೂ ಹೊಲ ಗದ್ದೆಗಳಲ್ಲಿ ದುಡಿದಿದ್ದಾರೆ. ಹೊಟ್ಟೆಯ ಪಾಡಿಗಾಗಿ ಯಾರ ಹೊಲವಾದರೇನು? ಹೊಲೆಯನಾದರೂ ಅಷ್ಟೇ, ಬ್ರಾಹ್ಮಣನಾದರೂ ಅಷ್ಟೇ ಸಹಾಯಕ್ಕೆ ಪ್ರತಿಯಾಗಿ ಸಹಾಯ ಮಾಡುವುದು ಮಾನವೀಯ ಗುಣವೆಂದು ನಂಬಿದ್ದರು.

ಒಟ್ಟಾರೆ ಆ ಕಾಲದಲ್ಲಿ ಜರುಗಿದ ಸಾಮಾಜಿಕ ಬದಲಾವಣೆಗಳು ಹಲವು ನೆಲೆಗಳಲ್ಲಿ ಚರ್ಚೆ, ವಾದವಿವಾದ ಹುಟ್ಟು ಹಾಕಿದವು. ಬಂಕಿಮಚಂದ್ರ, ರವೀಂದ್ರನಾಥರಂತಹ ಲೇಖಕರು ಸೃಜನಶೀಲರಾಗಿ ಪ್ರತಿಕ್ರಿಯೆ ನೀಡಿದ್ದಾರೆ. ರಾಜಾರಾಮ ಮೋಹನರಾಯರಂತಹ ಆಧುನಿಕ ವಿಚಾರಧಾರೆಯವರು ಸಕ್ರಿಯ ಹೋರಾಟಕ್ಕೆ ತೊಡಗಿದ್ದರು. ಎಲ್ಲರಿಗೂ ಶಿಕ್ಷಣ, ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹ ರೂಢಿಸುವಿಕೆ, ಸಹಗಮನ ನಿಷೇಧಗಳು ಸಾಮಾಜಿಕ ಪರಿವರ್ತನೆಗೆ ಕಾರಣವಾದವು. ಈ ಸಂಗತಿಗಳಿಗೆ ಧರ್ಮ ಶಾಸ್ತ್ರಗಳ ಆಧಾರವೇ ಇಲ್ಲವೆಂಬುದನ್ನು ಬಲವಾಗಿ ಪ್ರತಿಪಾದಿಸುತ್ತವೆ.

ಅಡಿ ಟಿಪ್ಪಣಿಗಳು:

೧. ಗಿರಡ್ಡಿ ಗೋವಿಂದರಾಜ – ಕಾದಂಬರಿ ವಸ್ತು ಮತ್ತು ತಂತ್ರ, ಪು.೨೬.

೨. ಇಂದಿರಾ ಎಂ.ಆರ್ – ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪು.೪೮.

೩. ಸುಮಿತ್ರಾಬಾಯಿ ಬಿ.ಎನ್ – ಕನ್ನಡ ಮಹಿಳಾ ಸಾಹಿತ್ಯ ಮತ್ತು ಸ್ತ್ರೀತ್ವಬೋಧ ಸ್ತ್ರೀವಾದ ಸಾಹಿತ್ಯ ವಿಮರ್ಶೆ, ಪ.೧೮೯.

೪. ರಾಜಶೇಖರ ಎಸ್ – ಭಾರತೀಯ ಸಮಾಜ, ಪು.೪೨೧.

೫. ಮಂಗಳಾ ಚಿ.ನ. – ಎಚ್ಚೆತ್ತ ಹಾದಿಯಲ್ಲಿ ಮಹಿಳೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಪು.೧೧–೧೨.

೬. ಚಂಪಾಬಾಯಿ ಡಿ., ಹದಿಬದೆಯ ಧರ್ಮ(ಸಂ) ಪು.೨೭.

೭. ರಾಜಶೇಖರ ಎಸ್., ಭಾರತೀಯ ಸಮಾಜ, ಪು.೪೨೩.

೮. ಶಿವರಾಮ ಪಡಿಕ್ಕಲ್, ಕನ್ನಡ ಕಾದಂಬರಿಯ ಮೊದಲ ಘಟ್ಟ, ಪು.೩೧.

೯. ಗುಲ್ವಾಡಿ ವೆಂಕಟರಾಯ ಇಂದಿರಾಬಾಯಿ, ಪು.೮೧.

೧೦. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೨೨.

೧೧. ಶಿವರಾಮ ಪಡಿಕ್ಕಲ್, ಕನ್ನಡ ಅನುವಾದ: ಪಾರ್ಥಾ ಚಟರ್ಜಿ, ಮೂಲ; ಮಹಿಳಾ ಪ್ರಶ್ನೆ ಒಂದು ರಾಷ್ಟ್ರೀಯವಾದಿ ಪರಿಹಾರ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪೂರ್ವೋಕ್ತ ಕನ್ನಡ ಕಾದಂಬರಿಗಳಲ್ಲಿ ಸ್ತ್ರೀ.

೧೨. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೊ ಮಹಾರಾಯ. ಪು.೮೩, ೮೪, ೮೭, ೮೮, ೮೯.

೧೩. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೊ ಮಹಾರಾಯ, ಪು.೭೨.

೧೪. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೊ ಮಹಾರಾಯ, ಪು.೭೫.

೧೫. ನಂಜನಗೂಡು ತಿರುಮಲಾಂಬ, ವಿರಾಗಿಣಿ ಓತ್ಯೈಷಿಣಿ ಹೆಜ್ಜೆ, ಪು.೧೧.

೧೬. ಇಂದಿರಾ ಆರ್ – ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪು.೩೧.

೧೭. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೩೬.

೧೮. ಆಮೂರು ಜಿ.ಎಸ್ – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪು.೩೫.

೧೯. ಬೋಳಾರು ಬಾಬುರಾಯ, ವಾಗ್ದೇವಿ, ಪು.೧೮.

೨೦. ನಂಜನಗೂಡು ಶ್ರೀಕಂಠಶಾಸ್ತ್ರಿ ಸತಿ ರೋಹಿಣಿ. ಪು.೨೭ ಪೂರ್ವೋಕ್ತ, ಇದು ನಾಟಕೀಯ ಓದು.

೨೧. ಬಾಣಂದೂರ ಓ.ಎಂ – ಇಂದಿರಾ ಮುನ್ನುಡಿ. ಪು.೩೬.

೨೨. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೨೪.

೨೩. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೋ ಮಹಾರಾಯ, ಪು.೩೬.

೨೪. ಗದಗಕರ ಲಕ್ಷ್ಮಣ ಭೀ – ಸೂರ್ಯಕಾಂತ, ಪು.೯.

೨೫. ಗದಗಕರ ಲಕ್ಷ್ಮಣ ಭೀ – ಸೂರ್ಯಕಾಂತ, ಪು.೧೧.

೨೬. ಗದಗಕರ ಲಕ್ಷ್ಮಣ ಭೀ – ಚಂದ್ರಪ್ರಭಾ, ಪು.೯೪.

೨೭. ಗದಗಕರ ಲಕ್ಷ್ಮಣ ಭೀ – ಚಂದ್ರಪ್ರಭಾ, ಪು.೧೪೯.

೨೮. ವಿಜಯಾದ ದಬ್ಬೆ, ಹಿತೈಷಿಣಿಯ ಹೆಜ್ಜೆಗಳು, ಪು.೯೨, ೯೪, ೯೬, ೯೮.

೨೯. ನಂಜನಗೂಡು ತಿರುಮಲಾಂಬ, ಸುಶೀಲೆ, ಪು.೩೦, ೩೨.

೩೦. ನಂಜನಗೂಡು ತಿರುಮಲಾಂಬ, 'ನಭಾ', ಪು.೩೦, ೩೨.

೩೧. ಗದಗಕರ ಲಕ್ಷ್ಮಣ ಭೀಮರಾವ್ ಸೂರ್ಯಕಾಂತ, ಪು.೧೧.

೩೨. ಗದಗಕರ ಲಕ್ಷ್ಮಣ ಭೀಮರಾವ್ ಸೂರ್ಯಕಾಂತ, ಪು.೧೪೯.

೩೩. ಗದಗಕರ ಲಕ್ಷ್ಮಣ ಭೀಮರಾವ್ ಸೂರ್ಯಕಾಂತ ಚಂದ್ರಪಭಾ, ಪು.೧೭೦, ಪೂರ್ವೋಕ್ತ ಇದು ಮಾನುಷಿಯ ಓದು, ಪು.೮೧.

೩೪. ಪುಟ್ಟಣ್ಣ ಎಮ್.ಎಸ್, ಮಾಡಿದ್ದುಣ್ಣೋ ಮಹಾರಾಯ, ಪೀಠಿಕಾ ಭಾಗ, ಪು.೧೧.

೩೫. ಪುಟ್ಟಣ್ಣ ಎಮ್.ಎಸ್, ಮಾಡಿದ್ದುಣ್ಣೋ ಮಹಾರಾಯ, ಪು.೨೮.

೩೬. ಕೆರೂರು ವಾಸುದೇವಾಚಾರ್ಯ ಸಮಗ್ರ ಕಾದಂಬರಿ ಸಂಪುಟ ಸಂ.೨, ಪು.೭೫, ೭೬.

೩೭. ಕೆರೂರು ವಾಸುದೇವಾಚಾರ್ಯ ಸಮಗ್ರ ಕಾದಂಬರಿ ಸಂಪುಟ ಸಂ.೨, ಪು.೯೫.

೩೮. ವಿಜಯಾದಬ್ಬೆ ಹಿತೈಷಿಣಿಯ ಹೆಜ್ಜೆಗಳು ಪು.೭೪.

೩೯. ಮಹೇಶ್ವರಿ 'ಯು' ಇದು ಮಾನುಷಿಯ ಓದು ಪು.೧೩೬.

೪೦. ವಿಜಯಾದಬ್ಬೆ ಹಿತೈಷಿಣಿಯ ಹೆಜ್ಜೆಗಳು ಪು.೨೪೫.

೪೧. ವಿವೇಕ ರೈ ಬಿ. ಎ – ಸಂಗ್ರಹ ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಪು.೪.

೪೨. ನಾಗರಾಜ ಡಿ.ಆರ್ – ಅಮೃತ ಮತ್ತು ಗರುಡ, ಪು.೮೪.

೪೩. ರಹಮತ ತರೀಕೆರೆ – ಮರದೊಳಗಣ ಕಿಚ್ಚು, ಪು.೨೦೭–೨೦೮.

೪೪. ಗುಲ್ವಾಡಿ ವೆಂಕಟರಾಯ ಇಂದಿರಾಬಾಯಿ, ಪು.೭೯.

೪೫. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೋ ಮಹಾರಾಯ, ಪು.೮.

೪೬. ಸರೋಜಿನಿ ಶಿಂತ್ರಿ, ಸ್ತ್ರೀ ವಿಮೋಚನಾ ಹಾದಿ, ಮಹಿಳಾ ಅಧ್ಯಯನ ಪು.೬೩–೬೪.

೪೭. ನಿರಂಜನ ತೇಜಸ್ವಿನಿ, ನಿರಂಜನ ಸೀಮಂತಿನಿ ಸ್ತ್ರೀವಾದಿ ಸಾಹಿತ್ಯ ಪ್ರಸ್ತಾವನೆ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪು.೭.

೪೮. ಅಣ್ಣಾಜಿರಾಯರು ಎಂ – ಗೌರಿ, ಪು.೬೩–೬೬.

೪೯. ನಂಜನಗೂಡು ತಿರುಮಲಾಂಬ, ಮಾತೃನಂದಿನಿ, ಪು.೩೨.

೫೦. ನಂಜನಗೂಡು ತಿರುಮಲಾಂಬ, ಮಾತೃನಂದಿನಿ, ಪು.೩೩.

೫೧. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೨೫೦.

೫೨. ಶಿವರಾಮ ಕಾರಂತ, ಕನ್ಯಾಬಲಿ, ಪು.೧೯.

೫೩. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೬೬.

೫೪. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೪.

೫೫. ಇನಾಂದಾರ ವಿ.ಎಂ – ಮುನ್ನುಡಿ ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೩೭.

೫೬. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೩೩೪.

೫೭. ನಂಜನಗೂಡು ತಿರುಮಲಾಂಬ, ವಿರಾಗಿಣಿ, ಪು.೮೯.

೫೮. ನಂಜನಗೂಡು ತಿರುಮಲಾಂಬ, ವಿರಾಗಿಣಿ, ಪು.೨೩೭.

೫೯. ವಿಜಯಾದಬ್ಬೆ ಚಿತ್ರೈಷಿಣಿಯ ಹೆಜ್ಜೆಗಳು, ಪು.೪೦.

೬೦. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪು.೩೪೪.

೬೧. ರಾಮಚಂದ್ರನ್ ಸಿ.ಎನ್ – ಶಿಲ್ಪವಿನ್ಯಾಸ, ಪು.೮.

೬೨. ವೀರಣ್ಣ ಸಿ – ಕನ್ನಡ ಕಾವ್ಯ ಕಂಡ ಹೆಣ್ಣು, ಪು.೧೯.

೬೩. ಅಲ್ತೇಕರ ವಿ.ಎಸ್.

೬೪. ಶ್ರೀಕಂಠಶಾಸ್ತ್ರಿ ಎಸ್. ಭಾರತೀಯ ಸಂಸ್ಕೃತಿ, ಪು.೧೩೦.

೬೫. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪು.೨೫೨.

೬೬. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೋ ಮಹಾರಾಯ, ಪು.೧೦೨.

೬೭. ಸಿಂತ್ರಿ ಸರೋಜನಿ, ಸ್ತ್ರೀವಿಮೋಚನಾ ಹಾದಿ, ಮೇರಿ ಉಲ್‌ಸ್ಟನ್ ಕ್ರಾಫ್ಟಳ ಕೆಲವು ವಿಚಾರಗಳು ಮಹಿಳಾ ಅಧ್ಯಯನ ಪು.೭೧.

೬೮. ವೀರಣ್ಣ ಸಿ – ಕನ್ನಡ ಕಾವ್ಯ ಕಂಡ ಹೆಣ್ಣು, ಪು. –

೬೯. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೪೨.

೭೦. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೨೮.

೭೧. ಸುಮಿತ್ರಾಬಾಯಿ ಬಿ.ಎನ್ - ಸ್ತ್ರೀವಾದ, ಪು.೨೨-೨೩.

೭೨. ವಿಠ್ಠಲರಾಯ್ ಗಾಯಕವಾಡ, ಅನುವಾದ, ಸ್ತ್ರೀ ಸ್ವಾತಂತ್ರ್ಯ ಸಮಾಜ ಮತ್ತು ಮಾನವಶಾಸ್ತ್ರ ವಿಚಾರ ಸಾಹಿತ್ಯ, ಪು.೨೪೨.

೭೩. ಮಹೇಶ್ವರಿ ಯು. ಇದು ಮಾನುಷಿಯ ಓದು, ಪು.೨೧.

೭೪. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೩೦.

೭೫. ಶೈಲಜಾ ಹಿರೇಮಠ ಪಾತರದವರು, ಪು.೭೦-೭೧.

೭೬. ಶೈಲಜಾ ಹಿರೇಮಠ ಪಾತರದವರು, ಪು.೭೨.

೭೭. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೩೪೫,

೭೮. ವಿವೇಕ ರೈ ಬಿ.ಎ - ಕಾದಂಬರಿಯ ಮೊದಲ ಹೆಜ್ಜೆಗಳು, ಪು.೪೫,

೭೯. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೩,

೮೦. ಗುಲ್ವಾಡಿ ವೆಂಕಟರಾಯ ಇಂದಿರಾಬಾಯಿ, ಪು.೨೪೪.

೮೧. ಅಮೂರ ಜಿ.ಎಸ್. ಕನ್ನಡ ಕಥ ಸಾಹಿತ್ಯ ಕಾದಂಬರಿ, ಪು.೪೦.

೮೨. ಬೋಳೂರು ಬಾಬುರಾವ್ ವಾಗ್ದೇವಿ, ಪು.೧೮೦.

ಅಧ್ಯಾಯ - ೪

ಧಾರ್ಮಿಕ ಸಂಘರ್ಷದ ಮತ್ತು ಇತರ ನೆಲೆಗಳು

೪.೧ ಧಾರ್ಮಿಕ ನೆಲೆ

ಸಮಾಜ ಮತ್ತು ಧರ್ಮ

ಮಿಶನರಿಗಳ ಪಾತ್ರ

೪.೨ ವಿದ್ಯಾಭ್ಯಾಸದ ನೆಲೆ

ಮುದ್ರಣ ಯಂತ್ರಗಳ ಆಗಮನ

ಇಂಗ್ಲಿಷ್ ಶಿಕ್ಷಣ

ಪತ್ರಿಕೆಗಳ ಪಾತ್ರ

೪.೩. ರಾಜಕೀಯ ನೆಲೆ

ವಸಾಹತು ಹಾಗೂ ರಾಜಕೀಯ ಎಚ್ಚರದ ನೆಲೆಗಳು

ಅಧ್ಯಾಯ - ೪

ಧಾರ್ಮಿಕ ಸಂಘರ್ಷದ ಮತ್ತು ಇತರ ನೆಲೆಗಳು

೪.೧ ಧಾರ್ಮಿಕ ಸಂಘರ್ಷದ ನೆಲೆ

ಸಮಾಜ ಮತ್ತು ಧರ್ಮ

ಮಿಶನರಿಗಳ ಪಾತ್ರ

೪.೨ ವಿದ್ಯಾಭ್ಯಾಸದ ಸಂಘರ್ಷದ ನೆಲೆ

ಮುದ್ರಣ ಯಂತ್ರಗಳ ಆಗಮನ

ಇಂಗ್ಲಿಷ್ ಶಿಕ್ಷಣ

ಪತ್ರಿಕೆಗಳ ಪಾತ್ರ

೪.೩ ರಾಜಕೀಯ ಸಂಘರ್ಷದ ನೆಲೆ

ವಸಾಹತು ಹಾಗೂ ರಾಜಕೀಯ ಎಚ್ಚರದ ನೆಲೆಗಳು

೪.೧ ಧಾರ್ಮಿಕ ಸಂಘರ್ಷದ ನೆಲೆಗಳು:

ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಮತಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಪ್ರಾಬಲ್ಯವನ್ನು ಮೆರೆದಿವೆ. ಪ್ರಾಚೀನ ಕನ್ನಡ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಮತ ಧರ್ಮಗಳ ಪ್ರಭಾವ ಕಂಡುಬರುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲೂ ಮತ ಧರ್ಮಗಳ ಹಾವಳಿ ತಪ್ಪಿದ್ದಲ್ಲ. ಭಾರತದಲ್ಲಿ ಹಿಂದೂ ಧರ್ಮವು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಅಚಲವಾಗಿ ಉಳಿದುಕೊಂಡು ಬಂದಿದೆ. ಅದರ ಪ್ರಭಾವ ೧೯-೨೦ನೇ ಶತಮಾನಗಳಲ್ಲಿ ತೀವ್ರತರವಾದ ಪರಿಣಾಮವನ್ನು ಬೀರಿರುವದರಿಂದ ವಿವಿಧ ಸ್ತರದಲ್ಲಿ ಕವಲೊಡೆದು ಚರ್ಚೆಗೆ ಗುರಿಯಾಗಿರುವುದು. ಹೊಸಗನ್ನಡ ಸಾಹಿತ್ಯ ಸೃಷ್ಟಿಯ ಸಂದರ್ಭಕ್ಕೆ ಈ ಪ್ರಜ್ಞೆ ಕೆಲವು ದಾರ್ಶನಿಕರ ಸಾಧು ಸಂತರ ಮೂಲಕ ವ್ಯಕ್ತವಾಗಿರುವುದು. ಆ ಕಾಲ ಸಂಧಿಕಾಲ. ಪೂರ್ವ ಮತ್ತು ಪಶ್ಚಿಮ ವಿಚಾರಗಳು ಗಟ್ಟಿಗೊಳ್ಳಲು ಪ್ರಯತ್ನಿಸುತ್ತಿದ್ದ ಸಂದರ್ಭ. ಈ ಸಮಯದಲ್ಲಿ ಹಿಂದೂ ಧರ್ಮದ ಉಳಿವಿನ ಪ್ರಶ್ನೆ ಎದುರಾದುದು.

ಪಾಶ್ಚಿಮಾತ್ಯ ಸಂಪರ್ಕದಿಂದಾಗಿ ಶಿಕ್ಷಣದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಮಿಶನರಿ ಜನರು ಶಿಕ್ಷಣದಲ್ಲಿ ಇಂಗ್ಲಿಷ್ ಶಾಲೆಗಳನ್ನು ಪ್ರಾರಂಭಿಸಿದರು. ಭಾರತೀಯರು ಆ ಶಾಲೆಗಳಲ್ಲಿ ಶಿಕ್ಷಣಾರ್ಥಿಗಳಾದರು. ಇದನ್ನು ಶ್ರೀನಿವಾಸ ಹಾವನೂರವರು "ಅಧ್ಯಯನಕ್ಕಾಗಿ ಕಾದಿದ್ದ ಆಧುನಿಕ ವಿಜ್ಞಾನ ಪ್ರಪಂಚ ಪರಿಚಯ ಇಂಗ್ಲಿಷ್ ವಾಙ್ಮಯ ಎಲ್ಲವನ್ನು ಅವರಿಗೆ ಹೊಸತೊಂದು ಜಗತ್ತನ್ನು ತೆರೆದು ತೋರಿಸಿದವು"[೧] ಇಂಗ್ಲಿಷ್ ಶಿಕ್ಷಣದ ಪರಿಣಾಮ ಭಾರತೀಯ ವಿಚಾರವಂತರ ಜೀವನದ ನೀತಿ ಮೌಲ್ಯಗಳು ಬದಲಾದವು. ದೇಶಾಭಿಮಾನದ ಸ್ವತಂತ್ರ ವಿಚಾರ ಪ್ರಜ್ಞೆ ಉಂಟಾಯಿತು. ಇದು ಧಾರ್ಮಿಕ ವಿಷಯಕ್ಕೂ ಚಾಚಿಕೊಂಡಿತು.

ಹಿಂದೂ ಧರ್ಮದಲ್ಲಿದ್ದಂತಹ ನ್ಯೂನ್ಯತೆಗಳನ್ನು ಈ ಸುಧಾರಣಾವಾದಿಗಳು ದೂರ ಸರಿಸುವ ಪ್ರಯತ್ನ ಮಾಡಿದರು. ಇಂತಹ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯದಲ್ಲಿ ಆ ತೆರನಾದ ವಿಚಾರಗಳನ್ನು ಕಾಣುತ್ತೇವೆ. "ಮಿಶನರಿಗಳು ಹಿಂದೂ ಧರ್ಮದಿಂದ ವಿಮುಖರನ್ನಾಗಿ ಮಾಡಬಯಸಿದಷ್ಟು ಜನತೆಯಲ್ಲಿ ತಮ್ಮ ಪುರಾತನ ಮತದತ್ತ ಪರಂಪರೆಗಳಲ್ಲಿ ಅಭಿಮಾನ ಹೆಚ್ಚುತ್ತಾ ನಡೆಯಿತು. ಅಲ್ಲದೇ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ ಮುಂತಾದವರಿಂದ ಆರ್ಯ ಸಮಾಜ, ಬ್ರಹ್ಮಸಮಾಜ, ರಾಮಕೃಷ್ಣ ಮಿಷನ್‌ದಂತಹ ಸಂಸ್ಥೆಗಳಿಂದಲೂ ನಡೆದ ಧಾರ್ಮಿಕ ಜಾಗೃತಿ ಮತ್ತು ಸುಧಾರಣಾ ಕಾರ್ಯವು ಅಭೂತಪೂರ್ವವೆನಿಸಿತು.[೨] ಒಂದು ಕಡೆ ಸಂಪ್ರದಾಯವಾದಿಗಳು ಹಿಂದೂ ಧರ್ಮವು ಬಾಹ್ಯ ಪ್ರಭಾವದಿಂದ ಬದಲಾಗದಂತೆ ಎಚ್ಚರ ವಹಿಸಿದರು. ಇಂಗ್ಲಿಷ್ ಶಿಕ್ಷಣ ಪಡೆದ ಮಧ್ಯಮವರ್ಗೀಯ ಜನರು ಮೌಲ್ಯಗಳ ರಕ್ಷಣೆಗೆ ಹಾಗೂ ಕೆಲವು ಪರಿವರ್ತನೆಗಳನ್ನು ಮಾಡಿಕೊಂಡರು.

ಮಿಶನರಿ ಜನರು ಕ್ರೈಸ್ತ ಧರ್ಮ ಪ್ರಚಾರದಲ್ಲಿ ತೊಡಗಿದ್ದರು. ಈ ಬಗ್ಗೆ ಭಾರತೀಯ ಧಾರ್ಮಿಕ ವಿಚಾರವಂತರು ಎಚ್ಚರ ವಹಿಸಿ ಮತಾಂತರವಾಗುವುದನ್ನು ತಡೆದರು. ಬಾಹ್ಯ ಧಾರ್ಮಿಕ ಪ್ರಭಾವಗಳ ಹಾವಳಿ ತೀವ್ರವಾದಾಗ, ತಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಎತ್ತಿಕಟ್ಟುವುದು ಅನಿವಾರ್ಯವಾಯಿತು. ಹೀಗಾಗಿ ಆ ಕಾಲದಲ್ಲಿ ರಚಿತವಾದ ಸಾಹಿತ್ಯದಲ್ಲಿ ವಿಶೇಷವಾಗಿ ಕಾದಂಬರಿ ಆ ಸಂದರ್ಭದ ಸಂಸ್ಕೃತಿಯ ದೀರ್ಘವಾದ ಪರಿಚಯ ಮಾಡಿಕೊಟ್ಟಿರುವುದು ಕಂಡು ಬರುತ್ತದೆ.

ಸಮಾಜ ಪರಿವರ್ತನೆಯ ನಿಟ್ಟಿನಲ್ಲಿ ಬ್ರಿಟಿಷರು ವಿದ್ಯಾಭ್ಯಾಸ ಕ್ರಮವನ್ನು ಜಾತ್ಯಾತೀತಗೊಳಿಸಿದರು. ಕೇವಲ ಮಧ್ಯಮ ವರ್ಗಕ್ಕೆ ಸೀಮಿತವಾಗಿದ್ದನ್ನು ಅವರಿಗೆ ಹೊರತಾಗಿಯೂ ದೊರೆಯುವಂತೆ ಮಾಡಿದರು. ಗ್ರಾಮ ಕೇಂದ್ರಗಳಲ್ಲಿ ಶಾಲೆಗಳನ್ನು ತೆರೆದರು. ಈ ಶಿಕ್ಷಣಕ್ರಮದ ಪ್ರಭಾವ ಕರ್ನಾಟದಲ್ಲಿ ಬುದ್ಧಿ ಜೀವಿಗಳ ಮೇಲೂ ಸಹಜವಾಗಿ ಆಯಿತು. "ಹಿಂದೂ ಧರ್ಮದ ಪುನರುತ್ಥಾನ ಸಂದರ್ಭದಲ್ಲಿ ಮುಖ್ಯವಾಗಿ ದಯಾನಂದರು ತಮ್ಮ ಹಿಂದೂ ಧರ್ಮ ಪಾಶ್ಚಿಮಾತ್ಯ ತಾತ್ವಿಕತೆಯ, ಸೈದ್ಧಾಂತಿಕ ಆಕ್ರಮಣದಿಂದ ಬಿರುಕು ಬಿಡದಂತೆ ಅವುಗಳಿಂದ ತಮಗೆ ಅಗತ್ಯವಾದುದನ್ನು ಪ್ರತಿಪಾಧಿಸಿರುವುದು ಸೂಕ್ತವಾಗಿದೆ."[೩] ವೇದ, ಉಪನಿಷತ್‌ಗಳನ್ನು ಆಧರಿಸಿ ಭಾರತೀಯ ಹಿಂದೂಧರ್ಮದ ತಿರುಳು ಕನ್ನಡ ಕೃತಿಗಳಲ್ಲಿ ಅಲ್ಲಲ್ಲಿ ಮೂಡಿ ಬಂದಿದೆ. ಇದರಿಂದ ಸುಧಾರಣಾವಾದಿ ಮತ್ತು ಪುನರುತ್ಥಾನ ನಿಲುವು ಸ್ಪಷ್ಟವಾಗಿತ್ತೆಂಬ ಸಂಗತಿ ತಿಳಿದು ಬರುತ್ತದೆ. ಸುಧಾರಣೆ ಎಂಬುದು ಯಾವುದನ್ನೂ ಬಿಟ್ಟಿಲ್ಲ. ಧರ್ಮವು ಇದಕ್ಕೆ ಹೊರತಲ್ಲ.

ಲೌಕಿಕತೆಯನ್ನು ಮೀರಿ ನಿಂತ ಅಲೌಕಿಕ ಶಕ್ತಿಯುಳ್ಳ ಪವಿತ್ರ ಭಾವನೆಯ ನಿಗೂಢ ಶಕ್ತಿಯೇ ಧರ್ಮ. ಇದು ಮಾನವರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಒಂದು ವ್ಯವಸ್ಥೆ ಎಂದರೂ ಸರಿ. ಇಂತಹ ಧರ್ಮವನ್ನು ಪ್ರತಿಯೊಬ್ಬ ವ್ಯಕ್ತಿಯು ಸಾಮಾಜಿಕ ಜವಾಬ್ದಾರಿ ಎಂದು ಭಾವಿಸಿ ಅನುಸರಿಸುತ್ತಾನೆ, ಆನಂದ ಪಡುತ್ತಾನೆ. ಇದಕ್ಕೆ ಸ್ತ್ರೀಯರೂ ಹೊರತಾಗಿಲ್ಲ. ಭಾರತೀಯ ಧರ್ಮ ಸಂಸ್ಕೃತಿ ಹಲವು ಧರ್ಮಗಳು, ದೇವತೆಗಳಿಂದ ಸಮ್ಮಿಳಿತವಾಗಿದೆ. ಎಲ್ಲಾ ಧರ್ಮಗಳ ತತ್ವ ಸಂದೇಶಗಳು ಒಳ್ಳೆಯವಾಗಿದ್ದರೂ ಧರ್ಮದ ಉತ್ತರಾಧಿಕಾರಿಯಂತಿರುವ ಪುರೋಹಿತಶಾಹಿಗಳಿಂದ, ದುರ್ಬಲರು ಸ್ತ್ರೀಯರು ಶೋಷಣೆಗೆ ಒಳಗಾಗಿದ್ದಾರೆ. "ಧರ್ಮ ಎನ್ನುವ ವ್ಯವಸ್ಥೆ ಹೆಚ್ಚು ಕಡಿಮೆ ಸಂಪೂರ್ಣವಾಗಿ ಪುರುಷ ಪ್ರಧಾನವಾದದ್ದು. ಪುರುಷರ ನಿಯಂತ್ರಣದಲ್ಲಿಯೇ ಬೆಳಕು ಬೀರುವಂತಹ ಧಾರ್ಮಿಕ ವ್ಯವಸ್ಥೆ"[೪] ಎಂಬ ಮಾತುಗಳಲ್ಲಿ ವಾಸ್ತವಿಕ ಚಿತ್ರಣ ಕಾಣುವುದು. ಇದು ಇಲ್ಲಿ ಸರ್ವರ ಒಳಿತನ್ನು ಬಯಸಲು ಬಿಟ್ಟಿಲ್ಲ. ದೈಹಿಕ ದೌರ್ಬಲ್ಯತೆಯುಳ್ಳ ಸ್ತ್ರೀಯರನ್ನಂತೂ ಎರಡನೆ ದರ್ಜೆಯ ಪ್ರಜೆಯಂತೆ ನಡೆಸಿಕೊಂಡಿದೆ. "ಸ್ತ್ರೀಯನ್ನು ಕುರಿತು ಧರ್ಮಧೋರಣೆಗಳು ದ್ವಿಮುಖ ಮೌಲ್ಯವನ್ನು ಪ್ರತಿಪಾದಿಸುತ್ತವೆ. ಒಂದೆಡೆ ಆಕೆಯನ್ನು ದೇವತೆ ಎಂದು ಘೋಷಿಸುವುದು. ಮತ್ತೊಂದೆಡೆ ಆಕೆಯ ಮೇಲಿನ ದೌರ್ಜನ್ಯಕ್ಕೆ

ಮಾನ್ಯತೆ ನೀಡುವುದು. ಇದು ಧರ್ಮದಲ್ಲಿ ಅಡಗಿರುವ ವೈರುದ್ಯಗಳಿಗೆ ಒಂದು ಉದಾಹರಣೆ”[೫] ಈ ರೀತಿಯಾಗಿ ವ್ಯವಸ್ಥಿತವಾದ ಬಲೆ ಹೆಣೆದಿರುವ ಸಮಾಜ(ಪುರುಷ) ಧರ್ಮದ ಕಟ್ಟಳೆಗೆ ಸಿಕ್ಕು ಸ್ತ್ರೀ ಸಂಪ್ರದಾಯ, ನಂಬಿಕೆ ಆರಾಧನೆ, ಆಚರಣೆಗಳಲ್ಲಿಯೇ ವಿಶ್ವಾಸವಿರಿಸಿ ತನ್ನ ಮೇಲಾಗುವ ಶೋಷಣೆ ದೌರ್ಜನ್ಯಗಳನ್ನು ಅರಿಯದೆ ಮೌನವಾಗಿ ಅನುಭವಿಸಿದ್ದಾಳೆ. ಇದು ಧರ್ಮದುರಂತದ ಜೀವಂತ ಉದಾಹರಣೆ.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಗ್ರಾಮೀಣ ಪ್ರದೇಶದ ಸ್ತ್ರೀಯರು ಧರ್ಮದಲ್ಲಿಯೇ ನಂಬಿಕೆ ಇರಿಸಿದ್ದು, ಕಾಣುತ್ತೇವೆ. ಪ್ರತಿಯೊಂದು ಕೆಲಸ ಕಾರ್ಯವನ್ನು ಧರ್ಮ, ದೇವತೆಯರನ್ನು ಸ್ಮರಿಸಿಯೇ ಪ್ರಾರಂಭಿಸುತ್ತಾರೆ. ಯಾವುದೇ ಒಳಿತು ಕೆಡಕುಗಳಿಗೆ ಎಲ್ಲವು ಆ ದೇವನ ಲೀಲೆ ಎನ್ನುವ ಭಾವನಾಜೀವಿ ಮಾನವ. ತಮ್ಮ ಮೇಲೆ ನಡೆಯುವ ಶೋಷಣೆಯನ್ನು 'ಕರ್ಮವೆಂದು' ತಿಳಿದವರು. ಧಾರ್ಮಿಕ ಕಟ್ಟಳೆಗಳಿಂದ ಹೊರಬರುವ ಪ್ರಯತ್ನವನ್ನು ಮಾಡುವುದೆ ಇಲ್ಲ. ಹೀಗಾಗಿ ಸಾಂಪ್ರದಾಯಿಕ ವೈದಿಕ ಪುರುಷ ಸಮಾಜ ಧಾರ್ಮಿಕ ಕಲ್ಪನೆಯನ್ನು ಗಟ್ಟಿಗೊಳಿಸುವುದರ ಮೂಲಕ ಸ್ತ್ರೀಯನ್ನು ಶೋಷಿಸುತ್ತಲೇ ಬಂದಿದ್ದಾನೆ. ಈ ಕಾಲದ ಕಾದಂಬರಿಗಳಲ್ಲಿ ಸ್ತ್ರೀಯರು ಅರ್ಥವಿಲ್ಲದ ಆಚರಣೆ, ಆರಾಧನೆ, ಸಂಪ್ರದಾಯ, ನಂಬಿಕೆಗಳನ್ನು ನೆಚ್ಚಿಯೇ ಜೀವನ ಸಾಗಿಸಿದ್ದಾರೆ. ಧರ್ಮ ಮತ್ತು ಸ್ತ್ರೀ ಎರಡನ್ನು ಕೃತಿಗಳಲ್ಲಿ ವಸ್ತುವಾಗಿ ಚರ್ಚಿಸಲಾಗಿದೆ. ಒಳ್ಳೆಯದನ್ನು ಬಯಸುವವರು ಯಾರೆ ಆಗಿರಲಿ ಅವರು ಮಾನವ ಧರ್ಮಿಗಳು. ಸ್ತ್ರೀಯನ್ನು ಕುರಿತಂತೆ ಹೇಳುವುದಾದರೆ ಪ್ರತಿಷ್ಠೆಯಾಗಿ ಪಾತಿವ್ರತ್ಯವನ್ನು ಪಾಲಿಸುವುದು ಸ್ತ್ರೀಧರ್ಮವೆಂದು ಪರಿಗಣಿಸಿಕೊಂಡು ಬರಲಾಗಿದೆ. ಪ್ರಾರಂಭದ ವೇದ, ಉಪನಿಷತ್ತುಗಳ ಕಾಲದಲ್ಲಿ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಸ್ತ್ರೀಯರ ಸ್ಥಾನಮಾನಗಳು ಉತ್ತಮವಾಗಿದ್ದವೆಂದು ತಿಳಿಯುವುದು. ಭಾರತೀಯ ಸಂಸ್ಕೃತಿಯು ಸ್ತ್ರೀಯನ್ನು ದೇವತೆಯ ರೂಪದಲ್ಲಿ ಕಂಡಿದೆ. ಮುಂದೆ ಬಂದ ಮನುಸ್ಮೃತಿಯು

ಉಪುದ್ಧ್ಯಾಯಾನ್ ದಶಾಚಾರ್ಯ, ಆಚಾರ್ಯಣಾಂ ಶತಂಪಿತಾ।

ಸಹಸ್ರಂ ತು ಪಿತೃನ್ಮಾತಾ ಗೌರವೇಣಾತಿರಿಚ್ಯಂತೆ ॥

ಗುರುವಾದವನು ಶಿಕ್ಷಕನಿಗಿಂತ ಹತ್ತುಪಟ್ಟು ಅಧಿಕವಾಗಿಯೂ, ತಂದೆಯೂ ಗುರುವಿಗಿಂತ ನೂರುಪಟ್ಟು ಅಧಿಕವಾಗಿಯೂ, ತಾಯಿಯೂ ತಂದೆಗಿಂತ ಸಾವಿರ ಪಟ್ಟು ಅಧಿಕವಾಗಿದ್ದುರಿಂದ ಆವಳನ್ನು ಗೌರವಾಧಾರಗಳಿಂದ ಕಾಣಬೇಕೆಂದು ಇದೆ.[೬] ಈ ಕಾರಣಕ್ಕೆ ಸರಳತೆ, ಮುಗ್ದತೆ, ಸಹನೆ, ಸೌಜನ್ಯ ಮತ್ತು ತ್ಯಾಗದಂತಹ ಆದರ್ಶಗಳು ಸ್ತ್ರೀಯರಲ್ಲಿ ಹಾಸುಹೊಕ್ಕಾಗಿವೆ. ಕ್ರಮೇಣ ಸ್ತ್ರೀಯರ ಸ್ಥಾನಮಾನಗಳು ಪ್ರಾಚೀನಕಾಲದಿಂದ ವಿನಾಶದತ್ತ ಸಾಗಿದವು. ಸ್ತ್ರೀಯರನ್ನು ದ್ವಿತೀಯ ದರ್ಜೆಯ ಪ್ರಜೆ ಇಲ್ಲವೆ

ಗುಲಾಮರಂತೆ ನಡೆಸಿಕೊಳ್ಳಲಾಯಿತು. ಪುರುಷರ ಸೇವೆ ಮಾಡುವಲ್ಲಿ ಸ್ತ್ರೀಯರಿಗೆ ಸುಖವಿದೆ ಎಂದು ಹೇಳುವುದಷ್ಟೇ ಅಲ್ಲದೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸ್ತ್ರೀಧರ್ಮದ ಆದರ್ಶಗಳನ್ನು ಹೇರಲಾಯಿತು. ಧರ್ಮ ಪಂಡಿತರು, ಪುರೋಹಿತರು ಹೇಳಿದ ಹೇಳಿಕೆಗಳು ಶಾಸನಗಳಾದವು. ಪುರುಷನ ಬಲಿಷ್ಠತೆಯ ಮುಂದೆ ನಿಸರ್ಗದತ್ತವಾದ ಸ್ತ್ರೀ ದುರ್ಬಲಳಾದಳು. ಪುರುಷನನ್ನು ಅವಲಂಬಿಸಿ ಬದುಕಬೇಕಾಯಿತು. ಇದು ಸ್ತ್ರೀಯರ ದುರಂತ.

ಸ್ತ್ರೀ ಧರ್ಮವು ಉಗಮವಾಗಿ ಮಾತೃ ಧರ್ಮ, ಸತಿಧರ್ಮ, ಸೊಸೆಧರ್ಮ, ವಿಧವಾ ಧರ್ಮ ಎಂಬ ಅಂಗಗಳಾಗಿ ಸೇವಾಧರ್ಮಗಳಂತೆ ಬಿಂಬಿಸಲಾಯಿತು. ಭಾರತೀಯ ಕುಟುಂಬ ಜೀವನದಲ್ಲಿ ಬೇರು ಬಿಟ್ಟು ಗಟ್ಟಿಗೊಂಡಿರುವ ವಿವಿಧ ಬಗೆಯ ಸ್ತ್ರೀ ಧರ್ಮಗಳು ಇಂದಿಗೂ ಪ್ರಚಲಿತದಲ್ಲಿವೆ. ೧೯ನೇ ಶತಮಾನದ ಅಂತ್ಯ ೨೦ನೇ ಶತಮಾನದ ಆರಂಭದಲ್ಲೂ ಇಂತಹ ಸಂಗತಿಗಳನ್ನು ಗುರುತಿಸಬಹುದು.

ಈ ಕಾಲಘಟ್ಟದಲ್ಲಿ ಬಂದ ಸ್ವತಂತ್ರ ಕಾದಂಬರಿಗಳಲ್ಲಿ ಮೂಡಿಬಂದ 'ಪ್ರಬುದ್ಧ ಪದ್ಮನಯನೆಯ', ಪದ್ಮನಯನೆ, ಜೀವನಕಲೆ, 'ಇಂದಿರಾಬಾಯಿ' ಕಾದಂಬರಿಯ ಸುಶಿಲಾ ಜಲಜಾಕ್ಷಿ 'ವಾಗ್ದೇವಿ' ಕಾದಂಬರಿಯ ಸುಶೀಲಬಾಯಿ, 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅರುಂದಮ್ಮ, ಅವಳ ಮಗಳು ವೆಂಕಮ್ಮ, ಪಾರ್ವತೆಮ್ಮ, ತಿಮ್ಮಮ್ಮ, ಸೀತೆ, ಸುಬ್ಬಮ್ಮ, 'ಸುಶಿಲಾ' ಕಾದಂಬರಿಯ ಸುಶೀಲಾ, 'ನಭಾ' ಕಾದಂಬರಿಯ ಚಿತ್ರಕಲೆ, ನಂದಿನಿ, ಸುವರ್ಣ ಇವರೆಲ್ಲರೂ ಪರಂಪರಾಗತವಾದ ಸ್ತ್ರೀಧರ್ಮವನ್ನು ಅವಲಂಬಿಸಿದವರು. ಸ್ತ್ರೀಗೆ ಮೀಸಲಾದ ಧರ್ಮವನ್ನು ತ್ಯಜಿಸಿ ಬದುಕಲು ಸಾಧ್ಯವಿಲ್ಲ ಎಂಬಂತೆ ಚಿತ್ರಣಗೊಂಡಿದ್ದಾರೆ. ತಾಯ್ತನಕ್ಕೆ ಶ್ರೇಷ್ಠತೆಯ ಮೌಲ್ಯಗಳನ್ನು ಒತ್ತಾಯಮಾಡಿ ಹೇರಲಾಗಿದೆ. ಮಗು ಗರ್ಭದಲ್ಲಿರುವಾಗಿನಿಂದ ಒಂಭತ್ತು ತಿಂಗಳು ಹೊತ್ತು ಹೆತ್ತು ಲಾಲಿಸಿ-ಪಾಲಿಸಿ, ದೊಡ್ಡವನನ್ನಾಗಿ ಮಾಡುವುದಷ್ಟೇ ಅಲ್ಲ, ತನ್ನ ಜೀವವಿರುವವರೆಗೂ ಮಕ್ಕಳ ಸುಖವನ್ನೆ ಆಶಿಸುವ ಮಾತೃಧರ್ಮ ಶ್ರೇಷ್ಠ ಎಂಬುದರಲ್ಲಿ ಸಂದೇಹವಿಲ್ಲ. ಸ್ತ್ರೀಯನ್ನು ಕೀಳಾಗಿ ಕಂಡಿರುವ ಮನು ಇನ್ನೊಂದೆಡೆಗೆ 'ಮಾತೃದೇವೋಭವ' ಎಂದು ವೈಭವಿಕರಿಸಿದ್ದಾನೆ. ಅವಳ ಬುದ್ಧಿಯನ್ನು ಚಿಕಿತ್ಸಕ ಬುದ್ಧಿಗೆ ಹೋಲಿಸಲಾಗಿದೆ.

ಪತಿಯನ್ನೆ ಪರದೈವವೆಂದು ತಿಳಿದಿರುವ ಸತಿಯ ನಡೆಯೆ ಸತಿಧರ್ಮ ಪತ್ನಿಯು ಪತಿಯನ್ನು ಪೂಜಿಸಿ, ಆರಾಧಿಸಿ ಅವನ ಸೇವೆಯಲ್ಲೇ ಸುಖವನ್ನರಿಸಬೇಕು. ಇದನ್ನು ಸ್ತ್ರೀಧರ್ಮವೆಂದು, ಸತಿ. ದರ್ಮವೆಂದು ಕರೆಯಲಾಗಿದೆ. ಮನು ಹೇಳುವಂತೆ

ನಾ ಸ್ತ್ರೀಣಾಂ ಪೃಥಗ್ಯಜ್ಞೋನ ವ್ರತಂ ನ್ಯಾಪು ಪೋಷಿತಂ ।

ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹಿಯತೆ ॥

ಪರಮ ಪತಿವ್ರತೆಯಾದ ಪತ್ನಿಗೆ ಪತಿಯೇ ವಿನಃ ಬೇರೆ ಯಜ್ಞವಿಲ್ಲ. ಪತಿ ಸೇವೆಯೇ ಅವಳ ವ್ರತವು ಉಪವಾಸವು ಪತಿವ್ರತಾ ಮನೋಭಾವದಿಂದ ಪತಿಸೇವೆ ಮಾಡಿದಾಗ ಮಾತ್ರ ಸ್ತ್ರೀಯೂ ಸ್ವರ್ಗಲೋಕದಲ್ಲಿ ಗೌರವವನ್ನು ಪಡೆಯುತ್ತಾಳೆ[೭] ಆದ್ದರಿಂದ ಪತಿ ಸೇವೆಯನ್ನು ಯಜ್ಞ ಯೋಗಗಳಿಗೆ ಸಮವೆಂದು ಭಾವಿಸಿ ಪತಿಯನ್ನು ದೇವರೆಂದು ಆರಾಧಿಸಬೇಕಿತ್ತು. ಅವನ ಪಾದ ತೊಳೆದು ಪಾದೋದಕವೆಂದು ಸೇವಿಸಬೇಕಿತ್ತು. ಇಂತಹ ಚಿತ್ರಣ "ಮಾಡಿದ್ದುಣ್ಣೋ ಮಹಾರಾಯ" ಕಾದಂಬರಿಯ ಅರುಂದಮ್ಮ ಏಳುವರ್ಷದ ಕನ್ಯೆ ಇರುವಾಗಲೇ ಗಂಡ ಒಳ್ಳೆಯವನು ಸಿಗಲೆಂದು ಗೌರಿ ಪೂಜೆ ಮಾಡಿದಳು. ಅರುಂದಮ್ಮಳ ಸತಿತ್ವ ನಡೆಯನ್ನು ಕುರಿತು ಕಾದಂಬರಿಕಾರ ಹೇಳಿವಂತೆ "ಬೆಳಿಗ್ಗೆ ಉಷಃ ಕಾಲಕ್ಕೆ ಎದ್ದು ಮನೆಯ ಕೆಲಸವನ್ನೆಲ್ಲ ಮುಗಿಸಿಕೊಂಡು ಮಡಿಯುಟ್ಟುಕೊಂಡು ಅಡುಗೆ ಮಾಡುತ್ತಲೇ ನಿತ್ಯ ಗೌರಿ ಪೂಜೆ, ಬೃಂದಾವನ ಪೂಜೆಯನ್ನು ಮುಗಿಸಿ ಅತ್ತೆ ಮಾವಂದಿರಿಗೂ ಇದೇ ರೀತಿಯಾಗಿ ನಮಸ್ಕಾರ ಮಾಡುತ್ತಿದ್ದಳು. ಸಾಯಂಕಾಲದ ಮೇಲೆಯೂ ಇದೇ ರೀತಿಯಲ್ಲಿ ನಮಸ್ಕರಿಸುತ್ತಿದ್ದಳು. ಇದೂ ಅಲ್ಲದೆ ನಿತ್ಯವೂ ಗಂಡನ ಕಾಲನ್ನು ತೊಳೆದು ಆ ತೀರ್ಥವನ್ನು ತಾನು ತೆಗೆದುಕೊಂಡ ಹೊರತು ಊಟ ಮಾಡುತ್ತಿರಲಿಲ್ಲ. ಆ ತೀರ್ಥವನ್ನು ಬೇರೆ ಒಂದು ಲೋಟದಲ್ಲಿ ಇರಿಸಿಕೊಂಡಿದ್ದು, ಗಂಡ ಊರಿಗೆ ಹೋದಾಗ ಅದನ್ನು ತೆಗೆದುಕೊಳ್ಳುತ್ತಿದ್ದಳು"[೮] ಈ ರೀತಿಯಾದ ಆಚರಣೆಗಳು ಸ್ತ್ರೀ ಧರ್ಮ ಎಂಬ ರೀತಿಗೆ ಲೇಪಿಸಲಾಗಿತ್ತು. ಇದನ್ನು ಯುವ ಜನಾಂಗಕ್ಕಾಗಿ ಲೇಖಕರು ಹೇಳಿರಬಹುದು. ಲೇಖಕರ ಈ ಪ್ರಸಂಗಗಳು ಓದುಗರ ಮತ್ತು ಸ್ತ್ರೀಯರ ಸುಧಾರಣಾ ಕ್ರಮದ ಮುನ್ನುಡಿಯಂತೆ ಗಮನಿಸಬಹುದು.

ಆರಂಭ ಕಾಲದ ಇಂದಿರಾ ಕಾದಂಬರಿಯು ಧಾರ್ಮಿಕ ವಿಷಯಗಳು ಚರ್ಚಿತ. ವ್ಯಕ್ತಿಯ ಮನೋವೃತ್ತಿಗೆ ಅನುಗುಣವಾಗಿ ಸನಾತನ ಧರ್ಮಶ್ರದ್ಧೆಯೂ ಈ ಕಾಲದ ಇಂದಿರಾ ಕಾದಂಬರಿಯಲ್ಲಿ ಚರ್ಚಿತವಾಗಿದೆ. ಸನಾತನ ಹಿಂದೂ ಧರ್ಮದ ಶಾಸ್ತ್ರ-ವಿಧಾನಗಳಲ್ಲಿ ರೀತಿ-ನೀತಿಗಳಲ್ಲಿ, ವಿಧಿ ನಿಷೇಧಗಳಲ್ಲಿ ಅಚಲವಾದ ವಿಶ್ವಾಸವುಳ್ಳ ಪಾತ್ರಗಳು ಇಂದಿರಾ ಕಾದಂಬರಿಯಲ್ಲಿ ಸೃಜಿಸಿವೆ. ಬಾಷ್ಕಳ ಪಂತ, ರಾಧಾಬಾಯಿ, ರಾಮಾಕಾಂತರಾಯ ನಡುವಿನ ಸಂವಾದವು ಕ್ರೈಸ್ತ ಧರ್ಮದ ಕಡೆ ತಿರುಗಿದಾಗ ರಮಾಕಾಂತರಾಯರು ಪುಣೆಯ ಉಪಾಸನಾ ಸಮಾಜದ ಚರ್ಚೆ ಬರುವುದು. ರಮಾಕಾಂತನು ಆ ಸಮಾಜವನ್ನು ಕುರಿತು ರಾಧಾಬಾಯಿಗೆ ಹೀಗೆ ಉತ್ತರಿಸುವನು.

"ಆ ಮತವು ನನಗೆ ಕಿಂಚಿತ್ತಾದರೂ ಸಮ್ಮತವಿಲ್ಲ. ನಾನೊಂದು ದಿವಸ ನಿಮ್ಮ ಸಮಾಜದ ಮಂದಿರಕ್ಕೆ ಹೋಗಿದ್ದೆನು. ನಾನು ಪಾದ್ರಿಯ ಚರ್ಚ್‌ನಲ್ಲಿಯೇ ಹೋಗಿದ್ದೆನೆಂದು ಭಾಸವಾಯಿತು. ಭಯದಿಂದ ಕಣ್ಣು ಮುಚ್ಚುವುದೇನು. ಮೊಣಕಾಲೂರಿ ಮೇಲಕ್ಕೆ ಕೈಎತ್ತಿ ಓ ಕರ್ತನೆ ! ಓ ಪ್ರಭುವೇ ಎಂದ ಪರಧರ್ಮೀಯರ ಪ್ರಾರ್ಥನೆಯ ಅನುಕರಣೆ ಮಾಡುವುದೇನು ! ಇದನ್ನು ಕಂಡು ಸನಾತನ ಧರ್ಮ

ಪ್ರವರ್ತಕರ ಸಂತತಿಯ ಅವಸ್ಥೆ ಹೀಗಾಯಿತೇ ಎಂದು ನಿನಗತಿಶಯವಾದ ವಿಷಾದವಾಯಿತು." ಇದಕ್ಕೆ ಪ್ರತಿಕ್ರಿಯೆಯಾಗಿ ರಾಧಾಬಾಯಿ ಹೀಗೆ ಹೇಳುವಳು "ನಿಮ್ಮಂಥವರಿದ್ದರೆ ದೇಶವು ಚೆನ್ನಾಗಿ ಸುಧಾರಿಸುವುದು ! ಇದಕ್ಕಾಗಿಯೇ ನಿಮ್ಮವಸ್ಥೆ ಹೀಗಾಗಿರುವುದು" ಎಂದು ಪಂಡಿತೆ ಸಿಟ್ಟಾಗಿ ನುಡಿದಳು" ಇದಕ್ಕೆ ರಮಾಕಾಂತನು ಉತ್ತರಿಸುತ್ತಾನೆ. "ಪಂಡಿತಾಬಾಯಿಯವರೆ ಸುಧಾರಣೆಯೆಂದರೆ ಇದ್ದದನ್ನು ಸುಧಾರಿಸಿ ಕಾಣುವಂತೆ ಮಾಡುವುದಲ್ಲವೇ? ಇದ್ದದ್ದನ್ನು ನಿರ್ಮೂಲನೆ ಮಾಡಿ ಅದರ ಸ್ಥಳದಲ್ಲಿ ವಿಜಾತಿ ಎಂಥದೋ ತಂದಿಟ್ಟರೆ ಅದಕ್ಕೆ ಸುಧಾರಣೆಯೆನ್ನಕೂಡದು."[5] ಈ ವಾದದಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬ ತರ್ಕ ಕಾಣುವುದು. ಈ ರೀತಿ ಆಕ್ರಮಿಸಿಕೊಳ್ಳುವ ಸಂಗತಿಗಳು ಲೇಖಕರಾದ ಕೆರೂರವರು ಭಾರತೀಯರಲ್ಲಾಗುತ್ತಿರುವ ಬದಲಾವಣೆಯ ಧೋರಣೆ ಇಲ್ಲಿದೆ.

ಇಡೀ ದೇಶದಲ್ಲಿ 'ಮುಂಬೈ ಬಂಗಾಲ ಪ್ರಾಂತಗಳಲ್ಲಿ ಸುಧಾರಣೆಯಾಗಿದ್ದು ವಿದ್ಯಾ ಹಾಗೂ ಪಾಶ್ಚಿಮಾತ್ಯ ಪ್ರಭಾವದಿಂದ ಗೋವಿಂದರಾವ್ ರಾನಡೆ, ಮೋರೋಪಂತ ಭಿಡೆ, ಮೊದಲಾದವರು ಸ್ಥಾಪಿಸಿದ ಸಂಘ ಸಂಸ್ಥೆಗಳು ಸಾಮಾಜಿಕ ಪ್ರಭಾವ ಬೀರಿವೆ. ಈ ಸಂಘಗಳು ಪುನರ್ವಿವಾಹ, ಸ್ತ್ರೀಸ್ವಾತಂತ್ರ್ಯ ವಿಚಾರಗಳು ಈ ಸಂಸ್ಥೆಗಳ ಮೂಲಕ ಚರ್ಚೆಗೆ ಬಂದವು.

೧೮, ೧೯ನೇ ಶತಮಾನದ ಪ್ರಸಿದ್ಧ ಸಾಮಾಜಿಕ ಸಂಸ್ಥೆಗಳಾದ ಬ್ರಹ್ಮಸಮಾಜ, ಥಿಯೋಸೋಫಿಕಲ್ ಸೊಸೈಟಿ ಆರ್ಯ ಸಮಾಜಗಳೂ ಹಿಂದೂ ಧರ್ಮವನ್ನು ಪಾಶ್ಚಿಮಾತ್ಯ ವೈಚಾರಿಕತೆಗೆ ಅನುಗುಣವಾಗಿ ವ್ಯಾಖ್ಯಾನಿಸುವ ಮತ್ತು ಸುಧಾರಿಸುವ ಧಾರ್ಮಿಕ ಸುಧಾರಣಾವಾದವು ಈ ಕಾಲದಲ್ಲಿ ಚಲಾವಣೆಗೆ ಬಂದಿತು. ಇದರಲ್ಲಿ ಭಾರತೀಯ ನೆಲೆಯನ್ನೇ ಕಂಡುಕೊಳ್ಳಲು ಹವಣಿಕೆ ಕಾಣುತ್ತಿತ್ತು. ಈ ಕಾಲದ ಬಹುತೇಕ ಕಾದಂಬರಿಗಳಲ್ಲೂ ಇದೇ ಮಾರ್ಗದ ತಾತ್ವಿಕತೆಗೆ ಚರ್ಚೆ ಒದಗಿಸಿದೆ.

ಕನ್ನಡದ ಆರಂಭಕಾಲದ ಕಾದಂಬರಿಕಾರರು ಪೂರ್ವ-ಪಶ್ಚಿಮಗಳನ್ನು ಬೆಸೆಯುವ ಆದರ್ಶವನ್ನು ಪ್ರೇರಣೆಯನ್ನಾಗಿ ರೂಪಿಸಿಕೊಂಡಿದ್ದಾರೆ. ಪೂರ್ವ-ಪಶ್ಚಿಮದ ಪರಂಪರೆ, ಆಧುನಿಕತೆ, ವಿಜ್ಞಾನ, ಧರ್ಮ, ಸಂಸ್ಕೃತಿ, ನಾಗರಿಕತೆಗಳ ಕುರಿತು ಚರ್ಚೆ ಈ ಕಾಲದ ಕಾದಂಬರಿಗಳಲ್ಲಿ ಚರ್ಚಿತ ಸಂಗತಿ. ಇಂದಿರಾ, ಇಂದಿರಾಬಾಯಿ ಕಾದಂಬರಿ ಎರಡನ್ನು ಮುಖಾಮುಖಿಯಾಗಿಸಿದರೆ, ಒಂದು ಸುಧಾರಣೆ ಎಂದು ಪ್ರಾದಿಸಿದರೆ, ಇನ್ನೊಂದು ಹೇಗೆ ಸುಧಾರಣೆ ಎಂಬ ಸುಳಿಹುಗಳನ್ನು ಹುಟ್ಟು ಹಾಕುವವು. ಪೂರ್ವ-ಪಶ್ಚಿಮಗಳ ಸಂಘರ್ಷದ ಚರ್ಚೆಯಾಗುವುದು. ಭಾರತದ, ಧರ್ಮ ಆಧ್ಯಾತ್ಮ ಪಾಶ್ಚಿಮಾತ್ಯ ಭೌತಿಕ ಪ್ರಗತಿಯ ಒಳ್ಳೆಯ ಅಂಶಗಳನ್ನು ಬೆಳೆದು ಹೊಸ ಸುಧಾರಣಾ ಸಮಾಜದ ಕಲ್ಪನೆಯನ್ನು ಕಟ್ಟಿ ಕೊಟ್ಟಿದೆ.

ಈ ರೀತಿಯಾದ ಎಲ್ಲಾ ಬೆಳವಣಿಗೆಗೆ ಕ್ರಿಶ್ಚಿಯನ್ ಮಿಶನರಿಗಳು ದೇಶಾದ್ಯಂತ ಹರಡಿ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದೆ ಕಾರಣ. ಪಾಶ್ಚಿಮಾತ್ಯ ಶಿಕ್ಷಣ ಕ್ರಮವು ರೂಢಿಯಾಗುವ ಪೂರ್ವ

ಲಂಡನ್ ಮಿಶನರಿ, ವೆಸ್ಲೆಯನ್ ಮಿಶನರಿ, ಬಾಸೆಲ್ ಮಿಶನ್ ಈ ಸಂಸ್ಥೆಗಳು ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸಿದವು. ಧರ್ಮ ಪ್ರಚಾರದ ಉದ್ದೇಶದಿಂದಲೇ ಶಿಕ್ಷಣ, ಮುದ್ರಣ, ಸಾಹಿತ್ಯಿಕ ಚಟುಟಿಕೆಗಳನ್ನು ಹಮ್ಮಿಕೊಂಡರು. ಇಲ್ಲಿರುವ ಪ್ರಾದೇಶಿಕ ದೇಶಭಾಷೆಗಳಲ್ಲಿ ಕೆಲಸ ಮಾಡುವ ಮೂಲಕ ಪಶ್ಚಿಮದ ವಿಚಾರಧಾರೆಗಳನ್ನು ಹರಡುವುದು ಇವರಿಗೆ ಸುಲಭವಾಯಿತು. ಕ್ರಿ.ಶ.೧೮೧೭ ರಷ್ಟು ಹಿಂದೆಯೇ ವಿಲಿಯಂ ಕೆರಿ ದೇಶಿಯ ವಿದ್ಯಾವಂತ ಪಂಡಿತರ ನೆರವಿನಿಂದ ದೇಶಭಾಷೆಗಳ ವ್ಯಾಕರಣ ಗ್ರಂಥ ರಚಿಸಿದರು, ಇದು ಕನ್ನಡದ ಮೊದಲ ಮುದ್ರಿತ ಗ್ರಂಥವೂ ಹೌದು !.

ಈ ದೇಶದ ಬ್ರಾಹ್ಮಣ ವರ್ಗ ಪಶ್ಚಿಮದ ವಿದ್ಯಾಭ್ಯಾಸ ಮತ್ತು ಬ್ರಿಟಿಷ್ ಆಡಳಿತ ಯಂತ್ರದ ಫಲವನ್ನು ಅನುಭವಿಸಿದವರು. ಭಾರತದ ಬಹುತೇಕ ಕೆಳವರ್ಗದವರು ಮಿಷನರಿಗಳ ಧಾರ್ಮಿಕ ಮತಾಂತರಗಳಿಗೆ ಒಳಗಾದರೂ, ಪಶ್ಚಿಮದ ವೈಚಾರಿಕತೆಯನ್ನು ಸ್ವೀಕರಿಸಿದ ಮೊದಲ ವರ್ಗವು ಬ್ರಾಹ್ಮಣರೆ ಆಗಿದ್ದಾರೆ. ಉಪನಿಷತ್ ಮೂಲ ಮೌಲ್ಯಗಳೊಂದಿಗೆ; ಪಶ್ಚಿಮದ ವೈಚಾರಿಕತೆಯೊಂದಿಗೆ ಒಪ್ಪಿಕೊಂಡರು. ವೈಚಾರಿಕತೆ ರೂಢಿಸಿಕೊಂಡು ಮುಂದೆ ಕ್ರೈಸ್ತ ಧರ್ಮ ವಿಚಾರ ಪ್ರಶ್ನಿಸುವ ಭಾರತೀಯ ವಿದ್ಯಾವಂತ ವರ್ಗವೊಂದು ಹುಟ್ಟಿಕೊಂಡಿತು. ಮುಂದೆ ಧರ್ಮ ವಿಜ್ಞಾನಗಳು ಮನುಷ್ಯರ ಸಹಬಾಳ್ವೆಗೆ ಪೂರಕವೆಂಬುದನ್ನು ಮನಗಂಡರು. ಈ ಮೂಲಕ ವಸಾಹತು ಪ್ರವೇಶಿಸಿತು.

ಈ ಹಂತದಲ್ಲಿ ಮಿಷನರಿಗಳ ಧರ್ಮ ಪ್ರಸಾರ, ಬ್ರಿಟಿಷರ ಆಡಳಿತ ಇಂಗ್ಲಿಷ್ ಶಿಕ್ಷಣ, ಈ ಕಾರಣಗಳಿಂದ ಹುಟ್ಟಿಕೊಂಡವು. ದೇಶಿವಿದ್ಯಾವಂತ ವರ್ಗದ ಅಂತರಾಳದಲ್ಲಿ ರಾಷ್ಟ್ರೀಯತೆಯೊಂದಿಗೆ ಸಾಮಾಜಿಕತೆಯೂ ಮೊಳೆಯಿತು. ೧೯ನೇ ಶತಮಾನದಲ್ಲಿ ಇಂಗ್ಲಿಷ್ ವಿದ್ಯಾವಂತ ವರ್ಗ ಏಕತೆ ಮತ್ತು ಸಮಗ್ರತೆ ಮೂಡಿಸಹತ್ತಿತು. ಇದು ಬ್ರಿಟಿಷ್ ಆಡಳಿತದ ಉದ್ದೇಶ ಆಗಿತ್ತೆಂದು ಕಾಣುವುದು. ಈ ಕ್ರಮವು ಸಾಂಪ್ರದಾಯಿಕ ಮೌಲ್ಯಗಳು ಪಶ್ಚಿಮದ ವೈಚಾರಿಕತೆಗೆ ಸಹಜವಲ್ಲದ ಮೈತ್ರಿಯೊಂದು ಏರ್ಪಟ್ಟಂತೆ ಕಾಣುವುದು. ಈ ಕ್ರಮವು ಸಾಂಪ್ರದಾಯಿಕ ಭಾರತದಿಂದ, ದೇಶಿಯ ಜೀವನಕ್ರಮ ವಿಮುಖತೆಗೆ ಮುಖಮಾಡಿತು. ಇದು ಇಡಿಯಾಗಿರಲಿಲ್ಲ. ಮತ್ತೊಂದೆಡೆ ಪಾಶ್ಚಿಮಾತ್ಯ ಮತ್ತು ಭಾರತೀಯ ಸಂಸ್ಕೃತಿಯ ನಡುವೆ ಇಂಗ್ಲಿಷ್ ವಿದ್ಯಾವಂತ ವರ್ಗ ತ್ರಿಶಂಕು ಸ್ಥಿತಿಗೆ ಬಂದಿತು. ಈ ವರ್ಗ ಪರಕೀಯವಾಯಿತು. ತನ್ನ ಕೀಳರಿಮೆಯ ಕಾರಣದಿಂದ ಪಶ್ಚಿಮ ಸಂಸ್ಕೃತಿಯೊಂದಿಗೆ ಗುರುತಿಸಿಕೊಳ್ಳುವ ವ್ಯಕ್ತಿ ಸಮಾಜಿಕ, ನೈತಿಕ, ಧಾರ್ಮಿಕ ಮೌಲ್ಯಗಳನ್ನು ಮುಂದೆಮಾಡಿಕೊಂಡು ಪಶ್ಚಿಮ ಒಪ್ಪಿಕೊಳ್ಳದ, ದೇಶಿಯ ಅಪ್ಪಿಕೊಳ್ಳದ ಸ್ಥಿತಿಗೆ ತಲುಪಿ ಸಾಮಾಜಿಕ ಅಸ್ತಿತ್ವಕ್ಕೆ ತಡಕಾಡಬೇಕಾಯಿತು. ಆಗ ಪರಕೀಯವಾದ ತನ್ನ ಸಾಮಾಜಿಕ ಸಮಾನತೆಗಾಗಿ ಹೋರಾಟ, ಸ್ತ್ರೀ ಪುರುಷರಲ್ಲಿ ಭಾರತದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ

ರಂಗದಲ್ಲಿ ಜೀವಂತಿಕೆಯನ್ನು ಪಡೆಯಿತು. ಈ ವರ್ಗ ದೇಶೀಯತೆಯ ತನಗೊಂದು ಸಾಮಾಜಿಕ ಅಸ್ತಿತ್ವ ರೂಪಿಸಿಕೊಳ್ಳಲು ಪ್ರಯತ್ನಿಸಿತು.

ಸಾಮಾಜಿಕ ಹೋರಾಟವನ್ನು ಪ್ರತಿಭಟಿಸುವ ನೆಲೆಯಲ್ಲಿ ಈ ಕಾಲದ ಕಾದಂಬರಿಗಳಲ್ಲಿ ಸುಧಾರಣವಾದಿಗಳಾಗಿ ಕಾಣಿಸಿಕೊಂಡರು. ಇವರೆಲ್ಲ ಪಾಶ್ಚಿಮಾತ್ಯ ವೈಚಾರಿಕತೆ, ಬ್ರಿಟಿಷರ ಪ್ರಜಾತಂತ್ರ ವಿರೋಧದಲ್ಲಿ ನಂಬಿಕೆಯನ್ನು ಇರಿಸಿಕೊಂಡವರಾಗಿದ್ದರು. ಈ ಕಾಲದ ಧಾರ್ಮಿಕ ಸುಧಾರಣಾವಾದವು ಹಿಂದೂ ಧರ್ಮವನ್ನು ಪಶ್ಚಿಮದ ವೈಚಾರಿಕತೆಗೆ ಅನುಗುಣವಾಗಿ ಸುಧಾರಿಸುವ ನಿಲುವಿನಲ್ಲಿ ತಮ್ಮ ಭಾರತೀಯತೆ ನೆಲೆಯನ್ನು ಕಂಡುಕೊಳ್ಳುತ್ತಿತ್ತು. ಇದು ಮುಂದೆ ರಾಜಕೀಯ ತೀವ್ರತೆ ಕಂಡರೂ ಸಾಮೂಹಿಕವಾಗಿ ಸಂಘಟನಾತ್ಮಕವಾಗಿ ಹಿಂದೂ ಪುನರುತ್ಥಾನವಾದವನ್ನು ಇವರು ಪ್ರತಿನಿಧಿಸಿದರು. ಭಾರತೀಯ ವಿದ್ಯಾವಂತ ವರ್ಗ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲು ನಡೆಸಿದ ಪ್ರಯತ್ನವಾಗಿ ಬ್ರಹ್ಮಸಮಾಜವು ರಾಜಾರಾಮ ಮೋಹನ್‌ರಾಯರ ಪಾಶ್ಚಿಮಾತ್ಯ ವೈಚಾರಿಕತೆಯನ್ನು ಸಮರ್ಥವಾಗಿ ರೂಪಿಸಿ ರೂಢಿಸಲು ಶ್ರಮಿಸಿದರು. ಭಾರತೀಯ ಧಾರ್ಮಿಕ ಗ್ರಂಥಗಳನ್ನು, ಉಪನಿಷತ್ತುಗಳನ್ನು ತಮ್ಮ ಉದಾರವಾದೀ ನಿಲುವಿನಿಂದ ಪಾಶ್ಚಿಮಾತ್ಯ ವೈಚಾರಿಕೆ ನೆಲೆಯಿಂದ ವ್ಯಾಖ್ಯಾನಿಸಿದರು. ಸನಾತನ ಹಿಂದೂ ಧರ್ಮದ ತಾತ್ವಿಕತೆಯನ್ನು ಒಪ್ಪಿಕೊಂಡು ಆಧುನಿಕ ಕಾಲಕ್ಕೆ ಹೊಂದಿಸಿಕೊಂಡು ಸುಧಾರಿಸುವ ಉದ್ದೇಶ ಅವರದಾಗಿತ್ತು. ಇದಕ್ಕೆ ಸನಾತನ ಧರ್ಮದ ಕಲ್ಪನೆಗೆ ಒಂದು ರೂಪ ಕೊಟ್ಟರು. ಪರಿಶುದ್ಧತೆಯ ಪರಿಕಲ್ಪನೆ ಮಾತ್ರ ಪಾಶ್ಚಿಮಾತ್ಯವಾದದು. ಆಗಲೇ ಸತಿ ಪದ್ಧತಿ ವಿರೋಧ, ಸ್ತ್ರೀ ಶಿಕ್ಷಣ ಪ್ರೋತ್ಸಾಹ, ಜಾತಿ ಪದ್ಧತಿ ವಿರೋಧ ಬಾಲ್ಯವಿವಾಹ, ವಿಧವಾ ವಿವಾಹ, ಹಸಬಿ ಬಿಡುವಿಕೆ ನಿರಾಕರಣೆ ಕಾರ್ಯಕ್ರಮಗಳಲ್ಲಿ ಈ ನಿಲುವು ವ್ಯಕ್ತವಾಯಿತು.

ಭಾರತೀಯರು ತಮ್ಮ ಸಂಸ್ಕೃತಿಯನ್ನು ಕುರಿತು ಆತಂಕ ವ್ಯಕ್ತಪಡಿಸಿದರೂ ಪರಂಪರೆಯನ್ನು ಬಲವಾಗಿ ಅವಲಂಭಿಸಿದರು. ವಸಾಹತನ್ನು ಪ್ರಬಲವಾಗಿ ವಿರೋಧಿಸಿದರು. ಆ ಸಮಯಕ್ಕೆ ಭಾರತೀಯ ಸಂಸ್ಕೃತಿಯೊಂದಿಗಿನ ಆಪ್ತತೆ ಕಡಿಮೆಯಾದಂತೆನಿಸಿತು. ಈ ಕಾರಣಕ್ಕೆ ಇಂಗ್ಲಿಷ್ ಓದಿದ ವಿದ್ಯಾವಂತ ವರ್ಗ ತಮ್ಮ ಸಾಂಸ್ಕೃತಿಕ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಮಾಜಿಕ ನಿಲುವು ಹಾಗೂ ಧಾರ್ಮಿಕ ನಿಲುವು ಗಟ್ಟಿಗೊಳಿಸಿಕೊಳ್ಳಲು ಹವಣಿಸಿತು. ಇಂತಹ ನಿಲುವು ಸಾಧ್ಯವಾಗುವುದು ಆಧುನಿಕ ಕಾಲದಲ್ಲಿ. ಮುದ್ರಣ ಸೌಲಭ್ಯ, ಪತ್ರಿಕೆಗಳು, ಬರಹಾರರು, ಧಾರ್ಮಿಕತೆ ಮತ್ತು ಸಾಮಾಜಿಕತೆ ಕುರಿತಾಗಿ ಜಾಗೃತಿ ಮೂಡಿಸುತ್ತಿದ್ದವು.

ಕ್ರೈಸ್ತಧರ್ಮ ಪ್ರಸಾರ, ಪ್ರಚಾರ ಉದ್ದೇಶದಿಂದ ಜರ್ಮನ್ ಮಾತನಾಡುವ ಪ್ರೊಟೆಸ್ಟಂಟ್ ಕ್ರೈಸ್ತರಿಂದ, ಬಾಸೆಲ್‌ಮಿಷನ್ ಸಂಸ್ಥೆಯು ಮಂಗಳೂರಿನಲ್ಲಿ ಪ್ರಾರಂಭವಾಯಿತು. ೧೮೧೪ ರಿಂದ

೧೯೨೦ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರ್ಮಿಕ ಸಾಮಾಜಿಕ, ಆರ್ಥಿಕ, ಶಿಕ್ಷಣ ರಂಗದಲ್ಲಿ ಈ ಮಿಷನರಿಗಳು ಪ್ರಮುಖ ಪಾತ್ರ ನಿರ್ವಹಿಸಿದವು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಇಂದಿರಾಬಾಯಿ ಇದೇ ದಕ್ಷಿಣ ಕನ್ನಡ ಸಾರಸ್ವತರಿಂದ ರಚಿಸಲ್ಪಟ್ಟಿತು. ಬ್ರಾಹ್ಮಣ ಮನೆತನದ ಉಪಜಾತಿಯೇ ಸಾರಸ್ವತ ಬ್ರಾಹ್ಮಣ ಮನೆತನ. ಹಾಗೆ ಮೈಸೂರು ಸಂಸ್ಥಾನ ಇಂಗ್ಲಿಷ್ ಪ್ರೇರಣೆಯೊಂದಿಗೆ ಮುಂದುವರೆದು ಆ ಭಾಗದಿಂದ ಎಂ.ಎಸ್. ಪುಟ್ಟಣ್ಣವರಿಂದ ಕಾದಂಬರಿ ರಚಿತಗೊಂಡಿದ್ದು, ಉತ್ತರ ಕರ್ನಾಟಕದ ಕಾದಂಬರಿಕಾರರಲ್ಲಿ ಕೆರೂರು ವಾಸುದೇವಾಚಾರ್ಯರು, ಗಳಗನಾಥರು ಪ್ರಮುಖರು. ಈ ಕಾದಂಬರಿಗಳು ಬಹುತೇಕ ಐತಿಹಾಸಿಕವಿದ್ದರೂ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆ ಇಲ್ಲಿ ಕಾಣುವುದು.

ಮಿಶನರಿಗಳ ಪಾತ್ರ ದೇಶದ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದದ್ದು. ಧರ್ಮ ಪ್ರಸಾರವು ಅದರಲ್ಲಿ ಅಡಗಿದ್ದು ಸುಳ್ಳೇನಲ್ಲ. "ಪ್ರಥಮ ಮಹಾಯುದ್ಧ ಕಾಲದವರಿಗೆ ಈ ಸಂಸ್ಥೆಯ ವತಿಯಿಂದ ನೂರಕ್ಕೂ ಮೇಲ್ಪಟ್ಟು ಮಿಶನರಿ ಜನರು ಭಾರತಕ್ಕೆ ಬಂದಿದ್ದು ಅವರಲ್ಲಿ ಅರ್ಧದಷ್ಟು ಜನರು ಸಾಹಿತ್ಯಿಕ ರಂಗದಲ್ಲೆ ಕೆಲಸ ಮಾಡಿದರು".[೧೦] ಮುದ್ರಣ ಯಂತ್ರಗಳು ಈ ಮಿಶನರಿಗಳ ಮೂಲಕ ಈ ದೇಶವನ್ನು ಪ್ರವೇಶ ಮಾಡಿದವು. ಲಿಪಿ ಸುಧಾರಣೆ, ಗ್ರಂಥ ಮುದ್ರಣ, ಗ್ರಂಥ ಸಂಪಾದನೆ, ನಿಘಂಟು ಕೋಶಗಳ ರಚನೆ ಪತ್ರಿಕೋದ್ಯಮ ಮುಂತಾದ ಭಾಷಿಕ ಚಟುವಟಿಕೆಯ ಜೊತೆಗೆ ಔದ್ಯೋಗಿಕರಣವನ್ನು ಬಾಸೆಲ್ ಮಿಶನ್ನವರು ಆರಂಭಿಸಿದರು.

ಬಾಸೆಲ್‌ಮಿಶನ್ ಶಾಲೆಗಳ ಆರಂಭ ಉದ್ಯಮದ ಸ್ವರೂಪ ಪಡೆದಂತೆ ಹೆಚ್ಚು ಹೆಚ್ಚು ಸ್ಥಾಪಿಸಿ ದೇಶದಲ್ಲಿಯೇ ಅಭೂತಪೂರ್ವವಾದ ಶೈಕ್ಷಣಿಕ, ಔದ್ಯಮಿಕ ಯಶಸ್ಸು ಗಳಿಸಿರುವುದೇ ಸಾಕ್ಷಿ. ಕೆಳವರ್ಗದ; ಹಿಂದುಳಿದ ವರ್ಗಗಳು ಶೈಕ್ಷಣಿಕ ಪ್ರಯೋಜನಗಳನ್ನು ಪಡೆಯದಿರುವುದು ಖೇದಕರ ಸಂಗತಿ. ಇದನ್ನು ಫ್ರಾಂಕ್ ಕೂಲನ್ ಗುರುತಿಸಿದ್ದಾರೆ. "ಶಾಲೆಗಳಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿದ್ದರೂ ಅವುಗಳು ಹೆಚ್ಚಾಗಿ ಮೇಲ್ಜಾತಿಯ ಜನರಿಂದಲೇ ತುಂಬಿದ್ದವು. ಸರಕಾರಿ ಉದ್ಯೋಗಕ್ಕೆ ರಹದಾರಿಯಾಗಿ ಅವರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಂಡರು"[೧೧] ಎಂಬ ಮಾತು ಶತಸತ್ಯವಾದದು. ದಕ್ಷಿಣ ಕನ್ನಡದ ಸಾರಸ್ವತರು ಇದರ ಸಂಪೂರ್ಣ ಪ್ರಯೋಜನ ಪಡೆದರು. ಬ್ರಿಟಿಷರ ಆಡಳಿತವು ೧೯ನೇ ಶತಮಾನದ ಮೊದಲರ್ಧದಲ್ಲಿ ಸ್ಥಳೀಯ ಸಾಮಾಜಿಕ ಆರ್ಥಿಕ ವಿನ್ಯಾಸದಲ್ಲಿ ಹೆಚ್ಚಿನ ವ್ಯತ್ಯಾಸಉಂಟುಮಾಡದೆಯೇ ಹೊಸ ಅವಕಾಶವನ್ನು ಕಲ್ಪಿಸಿತು. ಸಾರಸ್ವತರು ತಮ್ಮ ಸೇವೆ, ಅಕ್ಷರ ಜ್ಞಾನದಿಂದ ಆಡಳಿತಶಾಹಿಯೊಂದಿಗೆ ಸಂಪರ್ಕ ಸಾಧಿಸಿದರು. ಹೊಸ ಹೊಸ ತಂತ್ರ ಮತ್ತು ಪರಿಕಲ್ಪನೆಯನ್ನು ರೂಢಿಸಿಕೊಂಡರು. ತಮ್ಮ ಜಾತಿಯ ಪುನರ್ ಸಂಘಟನೆಗೂ ಈ ಹೊಸ ಮಾದರಿಯ ಸಂಗತಿಗಳನ್ನು ಸಾರಸ್ವತರು ಬಳಸಿಕೊಂಡರು.

ಸಾರಸ್ವತರು ಸೌಲಭ್ಯ ಬಳಸಿಕೊಂಡಿದ್ದನ್ನು ಕೇಶವಕೃಷ್ಣ ಹೀಗೆ ಗುರುತಿಸಿದ್ದಾರೆ. "ಸಾರಸ್ವತರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಇಂಗ್ಲಿಷ್ ಶಿಕ್ಷಣ ಪ್ರಯೋಜನ ಪಡೆದರು. ಗೋಮಾಂತಕದಿಂದ ತಡವಾಗಿ ಬಂದ ಕೊಂಕಣಸ್ಥರಲ್ಲಿ ಕೆಳದಿ ಅರಸರ ಕೈಕೆಳಗೆ ಕರಣಿಕ, ಶಾನುಭೋಗ ವೃತ್ತಿಯನ್ನು ನಡೆಸುತ್ತಿದ್ದ ಒಂದು ವರ್ಗ ತನ್ನ ಉನ್ನತಿಕೆಯಿಂದ ಉಳಿದ ಕೊಂಕಣಸ್ಥರಿಗೆ ಬೇರೆಯಾಗಿ ಪ್ರತ್ಯೇಕ ಮಠ ಸ್ಥಾಪಿಸಿ, ಚಿತ್ರಾಪುರ ಮಠಕ್ಕೆ ಸೇರಿದ ಸಾರಸ್ವತ ಬ್ರಾಹ್ಮಣರು ತಾವೆಂದುಕೊಂಡರೆಂದು ಇವರನ್ನು ಕುರಿತು ಕೊಂಕಣಿ ದೃಷ್ಟಿಕೋನದಿಂದ ಬಯಲಾದ ಸಾರಸ್ವತ ಸಮಾಜವೆಂಬ ಪುಸ್ತಕದಲ್ಲಿ ಹೇಳಲಾಗಿದೆ.[೧೨] ಈ ಅಂಶವೇ ಆ ಸಾರಸ್ವತರಿಗೆ ವರವಾಯಿತು. ಸಾರಸ್ವತರು ಪ್ರಗತಿಪರರು. ಕ್ರಿಯಾಶೀಲರು ಬುದ್ಧಿವಂತಿಕೆ, ಕಾಲಸ್ಥಿತಿಗೆ ಹೊಂದಿಕೊಳ್ಳುವ ಮನೋಭಾವ ವ್ಯವಹಾರಿಕ ಬುದ್ಧಿಮತ್ತೆಯಿಂದ ಪ್ರಭಾವಶಾಲಿ ಹುದ್ದೆ ಪಡೆದಿರುವರು ಅವರ ಜನಸಂಖ್ಯೆಗೂ ವಿವಿಧ ಉದ್ಯೋಗಗಳಲ್ಲೂ ನಿಯಮಿತವಾಗಿರುವ ಅವರ ಸಂಖ್ಯೆಗೂ ತಾಳಮೇಳವಿಲ್ಲ. ಒಂದು ವರ್ಗವಾಗಿ ಅವರು ಲೇಖಕರಾಗಿ, ವ್ಯಾಪಾರಿಗಳಾಗಿ, ಅಧ್ಯಾಪಕರಾಗಿ ಗುರುತಿಸಿಕೊಂಡ ಸಂಗತಿಯನ್ನು ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುಯಲ್‌ನಲ್ಲಿ ಗುರುತಿಸಲಾಗಿದೆ. ಸಾರಸ್ವತರ ಹೊಂದಾಣಿಕೆಯ ಮನೋಭಾವ ಇಷ್ಟೆಲ್ಲ ಮುಂದುವರೆಯಲು ಕಾರಣ ಶಿಕ್ಷಣವೇ ಆಗಿದೆ.

ಇಂಗ್ಲಿಷ್ ವಿದ್ಯಾಭ್ಯಾಸ ಕ್ರಮ ಆಡಳಿತಶಾಹಿಯಲ್ಲಿ ಸ್ಥಾನಗಿಟ್ಟಿಸಿಕೊಂಡಿತು, ಉದ್ಯೋಗ ಪಡೆದರು. ಇಂಗ್ಲಿಷ್ ವಿದ್ಯಾಭ್ಯಾಸವು ಆಡಳಿತ ಶಾಹಿಯಲ್ಲಿ ಸ್ಥಾನಗಿಟ್ಟಿಸಿಕೊಳ್ಳಲು ಸಾರಸ್ವತರ ನೆರವಿಗೆ ಕಾರಣವಾದಂತೆ ಸಾರಸ್ವತ ಸಮಾಜದ ಕೆಲವು ಸಮಸ್ಯೆಗಳಿಗೂ ಕಾರಣವಾಯಿತು. ಬಾಸೆಲ್ ಮಿಶನ್ ಶಾಲೆಗಳ ಶಿಕ್ಷಣ ಕ್ರಮವು ಸಾರಸ್ವತರ ಧಾರ್ಮಿಕ ನಂಬಿಕೆಗಳ ಬೇರನ್ನು ಅಲುಗಾಡಿಸತೊಡಗಿತು. ಉಗ್ರಾಣ ಆನಂದರಾಯನ ಮತಾಂತರ ಪ್ರಸಂಗವು ಈ ಸ್ಥಿತಿಯನ್ನು ಸೂಚಿಸುತ್ತದೆ."[೧೩] ನವತರುಣ ವಿದ್ಯಾವಂತರು ಸಾಂಪ್ರದಾಯಿಕ ಕಟ್ಟಳೆಗಳನ್ನು ವಿರೋಧಿಸತೊಡಗಿದರು. ಆದರೆ ಇವರೆಲ್ಲರು ಧರ್ಮವಿರೋಧಿಗಳಾಗಿರಲಿಲ್ಲ. ಸಹಜವಾದ ಸುಧಾರಣಾ ನೆಲೆ ಇವರಲ್ಲಿ ಗಟ್ಟಿಗೊಂಡಂತೆ ಕಾಣುವುದು. ಹೊಸ ವಿದ್ಯಾವಂತರು ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ವಿರೋಧಿಸತೊಡಗಿದರು. ದೈವಿಕ ಆಚರಣೆಗಳಲ್ಲಿ ಸಾರಸ್ವತ ಧಾರ್ಮಿಕತೆಯನ್ನು ಕೈಬಿಡಲಾರಂಭಿಸಿದರು.

"ಕ್ರಿ.ಶ.೧೮೭೦ರಲ್ಲಿ ಮಂಗಳೂರಲ್ಲಿ ಬ್ರಹ್ಮಸಮಾಜ ಸ್ಥಾಪನೆಗೆ ಕಾರಣಕರ್ತರಾದ ಪ್ರಮುಖರಲ್ಲಿ ಸಾರಸ್ವತ ಉಳ್ಳಾಲ ರಘುನಾಥಯ್ಯನವರು ಒಬ್ಬರು. ಬಿಲ್ಲವ ನಾಯಕ ನಿರೇಶ್ವಾಲ್ಯ, ಅರಸಪ್ಪ ಮತ್ತು ಉಳ್ಳಾಲ ರಘುನಾಥಯ್ಯನವರು ಇದರ ಸ್ಥಾಪನೆಗೆ ಕಾರ್ಯಕರ್ತರು".(ನಾಡು ನುಡಿಯ ರೂಪಕ) ಬಿಲ್ಲವರಾದ ಅರಸಪ್ಪನವರಲ್ಲಿ ಈ ಸಮಾಜವು ನಡೆಯುತ್ತಿದ್ದುದರಿಂದ ಬಹುಮಂದಿ ಸಾರಸ್ವತ ಯುವಕರು ತಮ್ಮ ಹಿರಿಯರ ಸಂಪೂರ್ಣ ವಿರೋಧವನ್ನು ಕಟ್ಟಿಕೊಂಡು ಈ ಸಮಾಜದ ಸಭೆಗಳಲ್ಲಿ

ಭಾಗವಹಿಸುವುದು ತ್ರಾಸದಾಯಕವಾಗಿತ್ತು. ಮುಂದೆ ಬ್ರಹ್ಮಸಮಾಜದ ಸಿದ್ಧಾಂತಗಳನ್ನು ಅಳವಡಿಸಿಕೊಂಡ 'ಉಪಾಸನಾ ಸಮಾಜ'ವನ್ನು ಇವರು. ಸ್ಥಾಪಿಸಿಕೊಂಡರು. ಅಳಿಯ ಅಲ್ಲ ಮಗಳ ಗಂಡವೆಂಬಂತೆ ತನ್ನ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಂಡು ಸುಧಾರಣಾಪರ ವಕಾಲತ್ತು ವಹಿಸಿತ್ತು. ಇದೇ ಸಮಯಕ್ಕೆ ಆಧುನಿಕ ವಿದ್ಯಾವಂತರು ತಮ್ಮ ದೈನಿಕ ಆಚರಣೆಗಳಲ್ಲಿ ಸಾರಸ್ವತ ಧಾರ್ಮಿಕತೆಯನ್ನು ಬಿಡಲಾರಂಭಿಸಿದ್ದರಿಂದ 'ಪಾಂಡುರಂಗಾಶ್ರಮದ ಸ್ವಾಮಿಗಳು ಸುಧಾರಣಾವಾದಿಗಳಿಗೆ ವಿರುದ್ಧ ದಿಕ್ಕಿನಲ್ಲಿ ಧಾರ್ಮಿಕ ಸುಧಾರಣೆ ಕೈಗೊಂಡಿದ್ದು ಧಾರ್ಮಿಕ ಹೊಣೆಗಾರಿಕೆ ಪ್ರದರ್ಶಿದ್ದು ಇದೇ ಕಾಲಕ್ಕೆ. ಎರಡು ಸುಧಾರಣಾ ಬೆಳವಣಿಗೆಯಿಂದ ಸಾರಸ್ವತ ಸಮಾಜದಲ್ಲಿ ಧಾರ್ಮಿಕ ವೈಚಾರಿಕೆ ಸಂಘರ್ಷ ತೀವ್ರವಾಯಿತು. ಸುಧಾರಣಾವಾದಿ ಸಿದ್ಧಾಂತದ, ವ್ಯಕ್ತಿತ್ವವಾದಿ ಸಿದ್ಧಾಂತ ಪರಸ್ಪರ ಎರಡು ಬೆಳವಣಿಗೆಗಳು ಹೊಸ ವಿದ್ಯಾಭ್ಯಾಸ ಹೊಸ ಪರಿಸ್ಥಿತಿಯ ಕಾರಣದಿಂದಲೇ ಸಾರಸ್ವತ ಸಮಾಜದಲ್ಲಿ ತೀವ್ರವಾದ ಧಾರ್ಮಿಕ ವೈಚಾರಿಕ ಸಂಘರ್ಷ ಜರುಗಿತು. ನಗರ ವಿದ್ಯಾವಂತ ಸಂವೇದನೆಯ ಧರ್ಮ ಮಾರಕವೆಂದು ಭಾವಿಸಿದ ಪಾಂಡುರಂಗಾಶ್ರಮ ಸ್ವಾಮಿ ಮತ್ತು ಧಾರ್ಮಿಕ ಕಟ್ಟಳೆಗಳು ಅರ್ಥಹೀನವೆಂದು ಶಿಕ್ಷಿತ ಸಾರಸ್ವತ ಸಮಾಜದ ಯುವಕರ ನಡುವಿನ ಸಂಘರ್ಷದಿಂದ ಸಮುದ್ರಯಾನ ಪ್ರಶ್ನೆ, ಬಾಲ್ಯ ವಿವಾಹ ಸಮರ್ಥನೆ, ವಿಧವಾ ವಿವಾಹ, ವಿರೋಧಗಳು ತೀವ್ರತರವಾದ ಚರ್ಚೆಗೆ ಬಂದು ಕಾದಂಬರಿಗಳ ವಿಷಯ ವಸ್ತುಗಳಾದವು. ಅಂತೆಯೇ ಸಾರಸ್ವತ ಸಮಾಜ ಹುಟ್ಟಿದ್ದು ಆ ಕಾಲಘಟ್ಟದ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನವೇ ಆಯಿತು.

ಗುಲ್ವಾಡಿ ವೆಂಕಟರಾಯರು ಜಾತಿ ಪದ್ಧತಿ ವಿರೋಧ, ಸ್ತ್ರೀ ಶಿಕ್ಷಣ ಮತ್ತು ಸಮಾನತೆ, ವಿಧವಾ ವಿವಾಹ ಪರವಾಗಿ ಪಾಂಡುರಂಗಾಶ್ರಮ ಸ್ವಾಮಿಗಳೊಂದಿಗೆ ಮತ್ತು ತಮ್ಮ ಸಮಾಜದ ಸದಸ್ಯರೊಂದಿಗೆ ಚರ್ಚಿಸಿದ್ದು ಇದೆ. ಇದೇ ವಿಷಯ ಕುರಿತು ಮತ್ತು ಜಾತಿ ಪದ್ಧತಿ ಕುರಿತು ಮಡಿಕೇರಿಯಲ್ಲಿ ಗುಲ್ವಾಡಿ ವೆಂಕಟರಾಯರು ಭಾಷಣ ಮಾಡಿದ್ದರು. "ವಸಾಹತುಶಾಹಿ ಆಡಳಿತದ ಪರಿಣಾಮಗಳನ್ನು ಕರ್ನಾಟಕ ದಲ್ಲಿಯೇ ಮೊದಲು ಅನುಭವಕ್ಕೆ ತಂದುಕೊಂಡ ಸಾರಸ್ವತರಿಂದ ಕನ್ನಡದ ಮೊದಲ ಕಾದಂಬರಿಗಳು ರಚಿತವಾದವು. ಗುಲ್ವಾಡಿ ವೆಂಕಟರಾಯರು ಸುಧಾರಣಾವಾದದ ಕರ್ತೃವಾಗಿದ್ದರು".[೧೪] ಈ ಅಂಶ ಗಮನಿಸಿದಾಗ ಬದಲಾವಣೆಯು ಜಗದ ನಿಯಮ. ಕರ್ನಾಟಕದಲ್ಲಿ ದಕ್ಷಿಣ ಕನ್ನಡದಿಂದಲೇ ಅವರು ರಚಿಸಿದ ಕಾದಂಬರಿಗಳಲ್ಲಿ ತೀವ್ರತರವಾದ ಧಾರ್ಮಿಕ ಸಾಮಾಜಿಕ ಕೌಟುಂಬಿಕ ಚಿಂತನೆಗಳು ಅಧಿಕವಾಗಿದ್ದು ಸಮಾಜದ ಬದಲಾವಣೆಯು ಗಾಳಿ ಬೀಸಿದ್ದು ಸ್ಥಳೀಯ ಸ್ಪಂದನೆಯೊಂದಿಗೆ ವಿರೋಧವನ್ನು ಎದುರಿಸಿದ್ದಿದೆ. ಬಲಾವಣೆಯಲ್ಲಿ ವಿರೋಧಿ ನಿಲುವುಗಳು ಕೊಚ್ಚಿ ಹೋದವು. ಇದನ್ನೆ ಕನ್ನಡ ಮೊದಲ ಕಾದಂಬರಿಗಳು ಸೂಚಿಸುತ್ತವೆ.

ಉತ್ತರ ಕರ್ನಾಟಕದಿಂದ ಕೆರೂರ ವಾಸುದೇವಾಚಾರ್ಯರು, ಗಳಗನಾಥರು, ಕರಾವಳಿ ಭಾಗದಿಂದ ದಕ್ಷಿಣ ಕನ್ನಡದ ಸಾರಸ್ವತರು, ಪ್ರಥಮತಹ ಕಾದಂಬರಿಗಳಲ್ಲಿ ಸಾಮಾಜಿಕ ಮತ್ತು ಚಾರಿತ್ರಿಕ ವಿಷಯ ನಿರೂಪಿಸಿದರು. ಅದರಲ್ಲಿ ರಮ್ಯತೆ ಕಥನವೂ ಮೂಡಿ ಬಂದವು. ನಂತರ ಕ್ರಿ.ಶ. ೧೯೧೫ರ ಸುಮಾರಿಗೆ ತಡವಾಗಿ ಎಂ.ಎಸ್. ಪುಟ್ಟಣ್ಣ, ನಂಜನಗೂಡು ತಿರುಮಲಾಂಬರವರು ಈ ವಿಷಯಗಳ ಕುರಿತು ಬರವಣಿಗೆಯಲ್ಲಿ ತೊಡಗಿದರು. ನಿಜಾಮ ಕರ್ನಾಟಕದಲ್ಲಿ ಈ ರೀತಿಯ ಬರವಣಿಗೆ ಬಾರದಿರುವುದೇ ಸೋಜಿಗದ ಸಂಗತಿ. ಇವುಗಳನ್ನು ಕುರಿತು ಹಲವಾರು ಅಪವಾದಗಳು ಇರಬಹುದಾದರೂ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಎದ್ದು ಕಾಣುವ ವೈಲಕ್ಷಣಗಳು ಪ್ರಮುಖವಾದವು. ಸಮಗ್ರ ಕರ್ನಾಟಕ ಅಲ್ಲದಿದ್ದರೂ ಒಂದು ಸಾಮಾಜಿಕ ನೆಲೆಗಟ್ಟನ್ನು ಧಾರ್ಮಿಕ ಚೌಕಟ್ಟನ್ನು ರಾಜಕೀಯ ಸ್ಥಿತಿಗತಿಯನ್ನು ಕೌಟುಂಬಿಕ ಸ್ಥಾನ ಸನ್ನಿವೇಶಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿವೆ. ವಿಧವಾ ವಿವಾಹದ ಕಥನದೊಂದಿಗೆ ಸಾಮಾಜಿಕ ವಿಡಂಬನೆಯನ್ನು ಬಿಂಬಿಸುವ 'ಇಂದಿರಾಬಾಯಿ' ಧಾರ್ಮಿಕ ಮೌಲ್ಯ ಪತನ ಅಲೋಚಿಸುತ್ತಾ ಸಾಮಾಜಿಕ ವಿಡಂಬನೆಗೆ ತೊಡಗುವುದು. 'ವಾಗ್ದೇವಿ' ಆ ಕಾಲಘಟ್ಟದ ಚಿತ್ರಣ ಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಇಂದಿರಾ, ಇಂದಿರಾಬಾಯಿಗಿಂತ ಹೆಚ್ಚು ವಿಡಂಬನೆಯು ವಾಗ್ದೇವಿಯಲ್ಲಿ ಗಾಢವಾಗಿ ಚಿತ್ರಿತಗೊಂಡಿದೆ.

'ವಾಗ್ದೇವಿ' ಧರ್ಮ ಸಂಘರ್ಷದ ವೇದಿಕೆ. ಧರ್ಮದ ಹೆಸರಿನಲ್ಲಿ ನಡೆಯುವ ಮೋಸ, ವಂಚನೆ, ಹಾದರದ ಹರಕತ್ತನ್ನು ಸರಳವಾಗಿ ತೆರೆದಿಡುವುದು. ಸಾಮಾಜಿಕ ವಾಸ್ತವಿಕತೆಯನ್ನು ಕಠೋರವಾಗಿ ಚಿತ್ರಿಸಿದೆ. ಕುಮುದಪುರದ ಚಂಚಲನೇತ್ರರು ಪೂರ್ವಾಶ್ರಮದ ಅಣ್ಣನ ನಾದಿನಿ, ವಿವಾಹಿತೆ ವಾಗ್ದೇವಿಯನ್ನು ಮೋಹಿಸುವುದರೊಂದಿಗೆ ಪತನಪೂರ್ವತೆ ಕಾಣುವುದು. ಕಾದಂಬರಿಯಲ್ಲಿ ಬರುವ ಸುಮಾರು ಐವತ್ತೇಳು ಅಧ್ಯಾಯಗಳಲ್ಲಿ ನ್ಯಾಯ ವಿಚಾರಣೆಯ ಅಹವಾಲು, ಕಾನೂನು ಕಟ್ಟಳೆಗಳು, ಮನವಿ, ಸಂಚು ಪ್ರತಿ ಸಂಚುಗಳಿಂದ ಹೆಣೆಯಲಾಗಿದೆ. ನ್ಯಾಯ, ಧರ್ಮದ ಪರ ಹೋರಾಡುವ ವೇದವ್ಯಾಸ ಚಂಚಲನೇತ್ರ, ಮತ್ತು ವಾಗ್ದೇವಿಯರ ಅನೈತಿಕ ಸಂಬಂಧ ಪ್ರಶ್ನಿಸುವನು. "ಧಾರ್ಮಿಕ, ರಾಜಕೀಯ ನ್ಯಾಯಕ್ಕಾಗಿ ಹೋರಾಡಿ ಸೋಲುವುದು, ಧರ್ಮ, ರಾಜಕೀಯ ಮತ್ತು ನ್ಯಾಯ ವ್ಯವಸ್ಥೆ ಒಂದೆಡೆ ಸೇರಲು ಸಾಧ್ಯವಿಲ್ಲವೆಂಬುದು ಇಲ್ಲಿ ಸಾಬೀತಾಗಿದೆ. ಕಾದಂಬರಿಯುದ್ದಕ್ಕೂ ಭ್ರಷ್ಟಾಚಾರ, ಅಪ್ರಾಮಾಣಿಕತೆಗಳು ವಾಗ್ದೇವಿಯೊಂದಿಗೆ ಹೆಣೆದುಕೊಂಡಿವೆ. ಜಗದಲ್ಲಿ ಹಣಬಲ, ಅಧಿಕಾರ ಬಲ, ತೋಳ್ಬಲದ ಮುಂದೆ ಸಾಮಾಜಿಕ, ಧಾರ್ಮಿಕ, ನೈತಿಕತೆಯ ಅಧಃಪತನ ಕಾಣುವುದು. ಕಾಲಗರ್ಭಕ್ಕೆ ಸಿಕ್ಕು ಸೋಲಿನ ರುಚಿ ನೋಡಲೇಬೇಕಾಗುವುದು. ಕೊನೆಗೆ ಕಾದಂಬರಿ ವಿಲಕ್ಷಣತೆ ಪಡೆಯುವುದು. ವಾಗ್ದೇವಿಯ ಮಗ ಸೂರ್ಯನಾರಾಯಣ ಶೂದ್ರ ಕನ್ಯೆಯನ್ನು ಅಪಹರಿಸಿಕೊಂಡು ಹೋಗಿ ವಿವಾಹವಿಲ್ಲದೆ ಸಂಸಾರಿಯಾಗಿದ್ದು ವಾಗ್ದೇವಿ ಬದುಕಿನ ಅಂತ್ಯ ವಿಲಕ್ಷಣಕ್ಕೆ ತಿರುಗುವುದು. ಸುಧಾರಿಗಾ

ಪರವಾದ ಮಂಡಿಸುವ ವಿಷಯ ವಸ್ತುವಿನ ಚಿತ್ರಣವಿದೆ. ಆರ್ಯಸಮಾಜದ ಆದರ್ಶದಲ್ಲಿ ರೂಪುಗೊಂಡ ಕಾದಂಬರಿಯು ನಿಷ್ಠುರ ಸಾಮಾಜಿಕ ವಿಮರ್ಶೆಯನ್ನು ಚಿತ್ರಿಸುವುದು"[೧೫] ಎಂದು ಸಿ.ಎಸ್. ರಾಮಚಂದ್ರನ್ ಅಭಿಪ್ರಾಯಪಟ್ಟಿದ್ದಾರೆ.

ಇಂದಿರಾ ಕಾದಂಬರಿಯ ನಟೇಶನದ್ದು ಧರ್ಮ ಮೀರಿದ ಪಾತ್ರ. "ಪಾದ್ರಿ ಮುದ್ರಿಸಿದ ಸತ್ಯಾರ್ಥ ದೀಪಿಕೆ, ಪುನರ್ ವಿವಾಹ ಮಂಥನ, ಲಿಂಗಪಂತರ ಆರ್ಯಮತ ಖಂಡನೆ, ಅಶ್ಲೀಲವಾದ ಕಾದಂಬರಿ, ನಾಟಕಗಳನ್ನು ಓದಿದ ನಟೇಶನು ವೃಥಾಭಿಮಾನ ಹೊಂದಿದವನಾಗಿದ್ದನು."[೧೬] ಕ್ರೈಸ್ತ ಧರ್ಮ ನಟೇಶನ್ ಮೇಲೆ ಪ್ರಭಾವ ಬೀರಿತ್ತು. ಧಾರ್ಮಿಕ ಕಾರಣಗಳನ್ನು ಶಾಸ್ತ್ರ ವಿಚಾರಗಳನ್ನು ಮುಂದೊಡ್ಡಿ ನಡೆಯುತ್ತಿದ್ದ ಶೋಷಣೆಯನ್ನು ಒಂದು ಹಂತದಲ್ಲಿ ಪ್ರಬಲವಾಗಿ ಪ್ರತಿಭಟಿಸುವುದು ಈ ಕೃತಿಯ ಉದ್ದೇಶಗಳಲ್ಲೊಂದಾಗಿರಬಹುದು. ಸೂಕ್ಷ್ಮವಾಗಿ ಕಾದಂಬರಿಯನ್ನು ಗಮನಿಸಿದಾಗ ಧರ್ಮ ಸುಧಾರಣಾವಾದವು ಒಂದು ಬಗೆಯಾಗಿ ಕಾಣಲಾರದು. ರಾಧಾಬಾಯಿಯರಿಗೂ, ಆಕೆಯ ಸಹೋದರನಾದ ಭಾಷ್ಕಳಪಂತನೆ ಒಂದೆಡೆ ಹೇಳುವನು "ನಾನು ಪುಣೆಯ ಕಾಕಾ ಜೋಶಿಯವರ ಮತಾನುವರ್ತಿಯು, ಪಂಡಿತೆಯು ಅಮೆರಿಕನ್ ಮಿಶನರಿಯವರ ಸೂತ್ರದಂತೆ ನಡೆಯುವಳು. ಹಿಂದೂ ಸ್ತ್ರೀಯರು ಇಂಗ್ರೇಜಿ ಸ್ತ್ರೀಯರಂತೆ ವರ್ತಿಸಿ ಧರ್ಮಾಂತರವನ್ನು ಕೂಡ ಮಾಡುವರು. ಅವಳಭಿಪ್ರಾಯವು ನಾನು ಸ್ತ್ರೀ ಶಿಕ್ಷಣಕ್ಕೆ ಪ್ರತಿಕೂಲ."[೧೭] ಇದನ್ನು ಗಮನಿಸಿದರೆ ಪುರಾತನ ಧರ್ಮ, ತತ್ವ, ಸತ್ವಗಳ ಮೇಲೆ ಸಾಮರ್ಥ್ಯದ ಮೇಲೆ, ಆಧುನಿಕತೆಯಲ್ಲಿ ಭಾಷ್ಕಳ ಪಂತನು ಸಮಾನ ವಿಶ್ವಾಸ ಕಾಣುವುದು.

ಧರ್ಮ ಸ್ತ್ರೀಯರ ಬದುಕಿಗೆ ತಳುಕು ಹಾಕಿದಂತೆ ಇದೆ. ಸಂಸಾರ ಕೊಂಡಿಯಂತಾಗಿದೆ. ಪತಿಯ ಕನವರಿಕೆಯಲ್ಲಿಯೇ ಕೊರಗಿ ಕುಂದಿರುವ 'ಪ್ರಬುದ್ಧ ಪದ್ಮನಯನೆ' ಕಾದಂಬರಿಯ ಪದ್ಮನಯನೆ ಪತಿ ತೀರಿಕೊಂಡನೆಂಬ ಸುದ್ಧಿ ತಿಳಿದಾಗಲೆ ಸತಿ, ಹೋಗಲು ಸಿದ್ಧಳಾಗಿ ಸತಿ ಧರ್ಮ ಮೆರೆದಿದ್ದಾಳೆ. ಆದರೆ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅರುಂಧಮ್ಮ ಗಂಡ ಸಾವನ್ನಪ್ಪಿದಾಗ ಸತಿ ಹೋಗಲು ನಿರ್ಧರಿಸಿ ಪತಿಯ ಚಿತೆಯೊಂದಿಗೆ ಸಜೀವ ದಹನಗೊಳ್ಳುವಳು. ಇದು ಅವಳಿಗೆ ಸ್ತ್ರೀಧರ್ಮವಾಗಿಯೇ ಕಾಣುತ್ತದೆ. ಸತಿ ಪತಿಯ ಸಂಬಂಧ ಧರ್ಮದ ಬೆನ್ನಿಗೆ ತಂದು ಹಚ್ಚಿದ್ದು, ವಿಪರ್ಯಾಸವೇ ಸರಿ. ಪತಿಯ ಕನವರಿಕೆಯಲ್ಲಿ ಸಾಯುವ ಸಾವು ನ್ಯಾಯವೇ? ಇದು ಎಂಥಾ ಸ್ತ್ರೀ ಸ್ವಾತಂತ್ರ್ಯ ಕಲ್ಪಿಸುವುದು ? ಧರ್ಮಕ್ಕೂ ಸ್ತ್ರೀಗೂ ಗಂಟು ಹಾಕಿದ್ದೆ ಇಂತಹ ಸ್ಥಿತಿಗತಿಗೆ ಮುಖ್ಯ ಕಾರಣ.

ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಸೀತೆ ದೇವರು, ದೈವ, ಧರ್ಮವನ್ನು ನಂಬಿದವಳೆ. ತಾನು ಮಲಗುವ ಹಾಸಿಗೆ ತೊಲೆಯ ಕೆಳಗೆ ಬಂದುದ್ದಕ್ಕಾಗಿ ಅಪಶಕುನವಾಯಿತೆಂದು ಗಾಬರಿಯಾಗಿ "ತೊಲೆಯೋ ನಾನೇ ಮರ, ನೀನೆ ಮನುಷ್ಯ. ಹಾವಿಗೆ ಹರನ ಆಣೆ, ಚೇಳಿಗೆ ಭೈರವನ

ಆಣೆ. ಇರುವೆ ಎಂಭತ್ತುಕೋಟಿ ಜೀವರಾಶಿಗೂ ಬಿದ್ದ ಬಳಿ ಬಿಟ್ಟು ಇತ್ತತ್ತ ಬಂದರೆ ತಾಯಿ ಮುದ್ರೆವ್ವೆಯ ಪಾದದಾಣೆ. ಹರಾ ಎಂತ ಬಲದ ಮಗ್ಗಲ ಹೊಡೆದೆ, ಹರಿ ಎಂತ ಎಡದ ಮಗ್ಗಲ ಹೊಡೆದೆ ಬೆತ್ತುಹೋಗಿ ಅಚ್ಚುತನನ್ನು ಕೂಡಿತು. ಮನೆ ಹೋಗಿ ಮಾಧವನನ್ನು ಕೂಡಿತು. ನಾನು ಹೋಗಿ ಕಾಶಿ ವಿಶ್ವೇಶ್ವರನನ್ನು ಕೂಡಿದೆ. ಸ್ವಾಮಿ ನಂಜುಂಡೇಶ್ವರ, ತಾಯಿ ಚಾಮುಂಡೇಶ್ವರಿ ಸಜ್ಜನರ ಸಂಗಕೊಡು ದುರ್ಜನರ ದೂರತ್ತ ಇಡು ತಾಯಿ"[೧೮] ಈ ಮಾತುಗಳು ದೇವರು, ಧರ್ಮ ಮತ್ತು ನಂಬಿಕೆಯ ಅಂತರ ಸಂಬಂಧ ಬೆಸೆದ ರೀತಿಯನ್ನು ತೋರ್ಪಡಿಸುವುದು ಧರ್ಮವನ್ನು ಸ್ತ್ರೀಯರ ಮೇಲೆ ಯಾವರೀತಿಯಾಗಿ ಹೇರಲಾಗಿತ್ತು ಎಂಬುದಕ್ಕೆ ಉದಾಹರಣೆ.

ಧರ್ಮ ಮತ್ತು ಸಮಾಜ:

ಧರ್ಮದ ಹೆಸರಿನಲ್ಲಿ ಮಠ ಮಂದಿರಗಳು ಪ್ರಬಲವಾಗಿರುವುದನ್ನು ಯಾವುದೇ ಕಾಲ, ದೇಶಗಳಲ್ಲಿ ಗುರುತಿಸಬಹುದು. ಕೆಲವು ಸಂದರ್ಭಗಳಲ್ಲಿ ಅಂತಹ ವ್ಯವಸ್ಥೆಯನ್ನು ವಿರೋಧಿಸಿರುವುದು ಕಂಡುಬರುತ್ತದೆ. ಆ ನಿಟ್ಟಿನಲ್ಲಿ ಮೊದಲ ಹಂತದ ಸ್ವತಂತ್ರ ಕಾದಂಬರಿ ರಚಿಸಿದ ಸಾಹಿತಿಗಳದು ಒಂದು ಮಹತ್ವದ ಪಾತ್ರವಾಗಿದೆ.

ಇಂದಿರಾಬಾಯಿ ಮತ್ತು ವಾಗ್ದೇವಿ ಕಾದಂಬರಿಗಳಲ್ಲಿ ಮಠಾಧೀಶರ ಬಗ್ಗೆ ಪ್ರಸ್ತಾಪವಿದೆ. ಗುಲ್ವಾಡಿಯವರು ಅನುಷಂಗಿಕವಾಗಿ ಚರ್ಚಿಸಿದ್ದರೆ, ಬಾಬುರಾಯರು ಧರ್ಮ ಪೀಠವೊಂದರಲ್ಲಿ ನಡೆಯುವ ಅನಾಚಾರ ಪೀಠಾಧಿಕಾರ ಹಾಗೂ ಅದರ ಸ್ವತ್ತುಗಳಿಗಾಗಿ ನಡೆಯುವ ಒಳಜಗಳದ ರಾಜಕೀಯ ಕಾವಿ ಬಟ್ಟೆಯ ತೆರೆಯ ಹಿಂದುಗಡೆಯಲ್ಲಿ ನಡೆಯುವ ಅನೇಕ ಸಂಚುಗಳನ್ನು ಮುಖ್ಯವಾಗಿ ಚಿತ್ರಿಸಿದ್ದಾರೆ.[೧೯] ಆ ಕಾಲಕ್ಕೆ ಇಂತಹ ವಸ್ತು ಆರಿಸಿಕೊಳ್ಳುವುದರ ಮೂಲಕ ಕಾದಂಬರಿಕಾರರು ಕ್ರಾಂತಿಕಾರಕ ಪ್ರತಿಕ್ರಿಯೆ ಕೊಟ್ಟಿರುವುದು ಮಹತ್ವದ ಸಂಗತಿ. ಒಂದರಲ್ಲಿ ಸಾರಸ್ವತ ಸಮಾಜ ಮತ್ತೊಂದರಲ್ಲಿ ಮಾಧ್ವ ಮಠಾಧಿಪತಿಯೊಬ್ಬನ ದುರ್ನಡತೆಯನ್ನು ಆಧರಿಸಿ ಕೃತಿ ರಚಿತಗೊಂಡಿದೆ.

ಹಿಂದೂ ಧರ್ಮದಲ್ಲಿದ್ದಂತಹ ನ್ಯೂನ್ಯತೆಗಳನ್ನು ಈ ಸುಧಾರಣಾವಾದಿಗಳು ದೂರ ಸರಿಸುವ ಪ್ರಯತ್ನ ಮಾಡಿದರು. ಇಂತಹ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯದಲ್ಲಿ ಆ ತೆರನಾದ ದ್ವಂದ್ವಾತ್ಮಕತೆಯ ವಿಚಾರಗಳು ಇಲ್ಲಿ ಕಾಣುತ್ತವೆ. ಆದರೂ ಒಂದು ಕಡೆ ಸಂಪ್ರದಾಯವಾದಿಗಳು, ಹಿಂದೂ ಧರ್ಮವು ಬಾಹ್ಯ ಪ್ರಭಾವದಿಂದ ಬದಲಾಗದಂತೆ ಎಚ್ಚರ ವಹಿಸಿದರು. ಇಂಗ್ಲಿಷ್ ಶಿಕ್ಷಣ ಪಡೆದ ಮಧ್ಯಮ ವರ್ಗೀಯ ಜನರು ಮೌಲ್ಯಗಳ ರಕ್ಷಣೆ ಹಾಗೂ ಕೆಲವು ಪರಿವರ್ತನೆಗಳನ್ನು ಮಾಡಿದರು. ಮತ್ತೊಂದೆಡೆ ಬಿಳಿಯರು ಜನರು ಕ್ರೈಸ್ತಧರ್ಮ ಪ್ರಚಾರದಲ್ಲೇ ತೊಡಗಿದರು. ಈ ಬಗ್ಗೆಯೂ ಭಾರತೀಯ ಧಾರ್ಮಿಕ ವಿಚಾರವಂತರು ಎಚ್ಚರ ವಹಿಸಿ ಮತಾಂತರವನ್ನು ತಡೆಯುವ ಪ್ರಯತ್ನ ಮಾಡಿದರು. ಬಾಹ್ಯ ಧರ್ಮಗಳ

ಹಾವಳಿ ತೀವ್ರವಾದಾಗ ತಮ್ಮ ಸಾಂಪ್ರದಾಯಿಕ ಮೌಲ್ಯಗಳನ್ನು ಎತ್ತಿಕಟ್ಟುವುದು ಅನಿವಾರ್ಯವಾಯಿತು. ಹೀಗಾಗಿ ಆ ಕಾಲದಲ್ಲಿ ರಚಿತವಾದ ಸಾಹಿತ್ಯದಲ್ಲಿ ವಿಶೇಷವಾಗಿ ಕಾದಂಬರಿಗಳು ಈ ಸಂಗತಿಗಳನ್ನು ಪರಿಚಯ ಮಾಡಿಕೊಟ್ಟಿರುವುದು ಕಂಡು ಬರುತ್ತದೆ.

ಸಮಸ್ಯೆಗಳ ಆಯ್ಕೆಯಲ್ಲಿ ಆ ಕಾಲದ ಲೇಖಕರದ್ದೆಲ್ಲ ಭಿನ್ನ ವಿಭಿನ್ನರೂಪದ್ದಾಗಿದೆ. ಇದರಿಂದ ಅಂದಿನ ಕಾಲದಲ್ಲಿ ಸಾಂಪ್ರದಾಯಿಕವಾಗಿ ಬದ್ಧವಾಗಿದ್ದ ಸಾಮಾಜಿಕ ವ್ಯವಸ್ಥೆಯ ಸ್ವರೂಪ ವ್ಯಕ್ತವಾಗುತ್ತದೆ. ಈ ನಿಟ್ಟಿನಲ್ಲಿ ಸುಧಾರಣಾ ವಾದದಿಂದ ಪ್ರಭಾವಿತರಾದ ಮಧ್ಯಮವರ್ಗದವರು ವಿವಿಧ ನೆಲೆಯಲ್ಲಿ ಪ್ರತಿಕ್ರಿಯಿಸಿರುವುದು ಕಾಣುವುದು.

'ಇಂದಿರಾಬಾಯಿ' ಕಾದಂಬರಿಯ ಮೊದಲ ಭಾಗದಲ್ಲಿ ಲೇಖಕರು ಸಂಪ್ರದಾಯದ ಸುದೀರ್ಘ ಚಿತ್ರಣ ನೀಡುತ್ತಾರೆ. ಇದರಿಂದ ಅವರು ಇಂಗ್ಲಿಷ್ ಶಿಕ್ಷಣದ ಮೂಲಕ ತತ್ತರಿಸಿದ್ದ ಆಗಿನ ಸಮಾಜವನ್ನು ಯಥಾವತ್ತು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮ ಸಮಾಜದ ಸ್ಥಿತಿಗತಿ ಕುರಿತು ಮಠಕ್ಕೆ ಸಂಬಂಧಿಸಿದ ಮೇಲಿನ ಮಠಾಧಿಪತಿಗಳಿಗೆ ಬಿನ್ನವತ್ತಳೆ ಬರೆಸುತ್ತಾರೆ. ಹೊಸ ಆವಿಷ್ಕಾರದಿಂದ ಸಡಿಲಗೊಳ್ಳುತ್ತಿದ್ದ ಧಾರ್ಮಿಕ ವ್ಯವಸ್ಥೆಯನ್ನು ಸರಿಗಟ್ಟಲು ಹೊಸ ಧರ್ಮ ವಿಚಾರಕನ ಅಗತ್ಯವನ್ನು ಪ್ರಸ್ತಾಪಿಸುವರು. ಇದನ್ನು ಹಲವಾರು ವಿಮರ್ಶಕರು ಗುರುತಿಸುವಂತೆ "ಇಂದಿರಾಬಾಯಿ ಕಾದಂಬರಿಯು ಅವನ ಮುಖತಃ ಸಾರಸ್ವತ ಸಮಾಜ ಅನಾವರಣಗೊಳಿಸಿದೆ." ಎನ್ನುವುದು ಗಮನಾರ್ಹವಾಗಿದೆ. ಕಾದಂಬರಿಕಾರನಿಗೆ ಈ ಚಿತ್ರಣವನ್ನು ಕೊಡುವುದರ ಉದ್ದೇಶ ಸಾಂಪ್ರದಾಯಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಾಗಿದೆ. ಕಾದಂಬರಿಯ ಕೊನೆಯ ಭಾಗದಲ್ಲಿ 'ಭೀಮರಾಯ' ಧರ್ಮ ವಿಚಾರಕ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಕಾದಂಬರಿಕಾರರು ಸಾರುವ ಆದರ್ಶದೊಂದಿಗೆ ಬೆರೆತು ಹೋಗುತ್ತಾನೆ. ವಾಸ್ತವ ಮತ್ತು ಆದರ್ಶಗಳೆರಡರ ಮಧ್ಯ ತೀವ್ರತೆರನಾದ ಸಂಘರ್ಷವೆಂಬುದು ನಡೆಯುವುದಿಲ್ಲ. ಡಿ.ಆರ್. ನಾಗರಾಜರವರ ಕನ್ನಡದ ಮೊದಲ ಕಾದಂಬರಿಗಳಲ್ಲಿ ಸಂಘರ್ಷ ಹೀನತೆ ಕಂಡುಬರುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಬೋಳಾರು ಬಾಬುರಾಯರ ವಾಗ್ದೇವಿ ಕಾದಂಬರಿಯಲ್ಲಿ ಮಠಾಧಿಪತಿಗಳ ಅನಾಚಾರವನ್ನು ಅನಾವರಣಗೊಳಿಸಿರುವುದು ಒಂದು ರೀತಿಯಲ್ಲಿ ಮಠ ಮಂದಿರಗಳನ್ನು ಕಾಪಾಡುವ ನಿಟ್ಟಿನಲ್ಲಿ ತಾಳಿದ ಧೋರಣೆಯಾಗಿದೆ. ಬೇರೊಂದು ರೀತಿಯಲ್ಲಿ ಮಠಧರ್ಮವನ್ನು ಧಿಕ್ಕರಿಸುವ ನೀತಿಯೂ ಆಗಿದೆ. ಮಠದ ಸಂಪ್ರದಾಯ ಉಳಿಸುವ ಮತ್ತು ಅಳಿಸುವ ನಿಟ್ಟಿನಲ್ಲಿ ಪ್ರಮುಖವಾಗಿದೆ. ಈ ನಿಲುವು ಅವರ ಕಾದಂಬರಿಗಳೊಡನೆ ಸ್ಪಷ್ಟವಾಗಿ ಮೂಡಿ ಬಂದಿವೆ. ಆ ಸಮಸ್ಯೆಯ ಕುರಿತು ಲೇಖಕರ ನಿಲುವನ್ನು ಬೋಳಾರು ಬಾಬುರಾಯರು. "ಕ್ರಾಂತಿಕಾರಿಯಾದ ಸುಧಾರಣಾವಾದವಲ್ಲ. ಅಷ್ಟೊಂದು ಬಗೆಯ

ಅನಾಚರಣೆ ಆಶ್ರಯವಾಗಿದ್ದ ಮಠದ ವಿರುದ್ಧ ಯಾವ ಕ್ರಿಯೆಯೂ ನಡೆಯುವದಿಲ್ಲ. ಆದರೆ ಇಂಥಹದು ನಡೆಯಬಾರದು ಎನ್ನುವುದು, ಅಂಥದೆಲ್ಲವನ್ನು ನಡೆಯಗೊಟ್ಟವರಿಗೆ, ಅದರಲ್ಲಿ ಸಹಕರಿಸಿದವರಿಗೆ, ಒದಗುವ ಗತಿ ಕಥೆಯ ಕೊನೆಯಲ್ಲೇ ವ್ಯಕ್ತವಾಗುತ್ತದೆ"[೨೦] ಎಂದಿದ್ದಾರೆ.

ಬೋಳಾರು ಬಾಬುರಾಯರು ಧಾರ್ಮಿಕ ವಿಚಾರವನ್ನು ಪ್ರಸ್ತಾಪಿಸುತ್ತ ತಾವು ಸಮಾಜದ ಕೆಟ್ಟ ವ್ಯವಸ್ಥೆಯನ್ನು ಪರಿಷ್ಕರಿಸುವದೇ ಹೊರತು, ಬದಲಾಯಿಸುವುದಕ್ಕಲ್ಲ ಎನ್ನುವ ನೀತಿ, ಧೋರಣೆಯನ್ನು ಮುಂದಿಡುತ್ತಾರೆ. ಮಠಾಧಿಪತಿಗಳು ಕಾನೂನು ಅಧಿಕಾರಿಗಳು, ವಾಗ್ದೇವಿ ಮತ್ತು ಅವಳ ಕುಟುಂಬಸ್ಥರ ದುರ್ನಡತೆ ಮಾತ್ರ ಧಾರ್ಮಿಕತೆಯ ಕುರಿತಾಗಿದ್ದ ವಿರೋಧವನ್ನು ಹೇಳುತ್ತದೆ. ವಾಗ್ದೇವಿ ಮತ್ತು ಅವಳ ಕುಟುಂಬಸ್ಥರು ಹಾಗೂ ಇತರ ಕಪಟತನದಲ್ಲಿ ಭಾಗಿಗಳಾಗಿದ್ದ ಮಠದ ಆಶ್ರಿತರಿಗೆ ಪ್ರಾಯಶ್ಚಿತವೆಂಬಂತೆ ತಕ್ಕ ಪ್ರತಿಫಲವನ್ನು ಕೊಟ್ಟಿದ್ದಾರೆ. ಸೂರ್ಯನಾರಾಯಣನು ತನ್ನ ಚರಿತ್ರೆಯನ್ನು ತಿಳಿದು ತನ್ನ ತಾಯಿ ಮತ್ತು ಚಿಕ್ಕಮ್ಮನ ನೀಚ ಕೆಲಸಕ್ಕೆ ಬೇಸತ್ತು ಶೂದ್ರಕನ್ಯೆಯೊಂದಿಗೆ ಪಯಣ ಮಾಡುವನು. ಇದು ಸಾಮಾಜಿಕತೆಯ ವಿರುದ್ಧ ಇಡಿ ವ್ಯವಸ್ಥೆಯನ್ನು ಧಿಕ್ಕರಿಸಿ ಹೋಗುವುದಾಗಿದೆ. ಕಾದಂಬರಿಯ ಕೊನೆಯಲ್ಲಿ ತಾಯಿ ಮಗನ ಅನಿರೀಕ್ಷಿತ ಸಮ್ಮಿಲನದ ಚಿತ್ರಣವಿದೆ. ವಾಗ್ದೇವಿಯು ಆತ್ಮಾಹುತಿಗೆ ಸಿದ್ಧಳಾಗಿದ್ದಾಗ ಸೂರ್ಯನಾರಾಯಣನು ಪ್ರತ್ಯಕ್ಷವಾಗಿ ರಕ್ಷಿಸುವದು ಸ್ತ್ರೀಯರ ಬಗೆಗೆ ಗೌರವ ಭಾವನೆಯನ್ನು ಮೂಡಿಸುವುದು. ಅದು ಇಲ್ಲಿ ಮಾತೃವಾತ್ಸಲ್ಯದ ಮೂಲಕ ಮಿಲನದ ಬಗೆಯನ್ನು ಕೊಟ್ಟಿರುವುದು ಲೇಖಕರ ಧೋರಣೆಗೆ ಪೂರಕವಾಗಿದೆ. ಕಾದಂಬರಿಯ ಸುಖಾಂತವು ಆ ಕಾಲದ ಸಾಹಿತ್ಯದ ಪ್ರಧಾನ ಲಕ್ಷಣಗಳಲ್ಲೊಂದು ಆಗಿರುವುದನ್ನು ಇಲ್ಲಿ ಗಮನಿಸಬಹುದು.

ಈ ಮೂಲಕ ಕಾದಂಬರಿಕಾರರ ಪರ ವಿರೋಧ ನಿಲುವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಅಂದಿನ ಕಾಲಕ್ಕೆ ಇಂತಹ ಚಿತ್ರಣಕೊಡುವುದು ಕಷ್ಟಸಾಧ್ಯವಾಗಿತ್ತು. ತಾನು ಪಡೆದ ಇಂಗ್ಲಿಷ್ ಶಿಕ್ಷಣ, ಹಿಂದೂಧರ್ಮದ ಪರ ಕಳಕಳಿ ಮುಂತಾದವುಗಳ ಹಿನ್ನೆಲೆಯಲ್ಲಿ ಈ ರೀತಿಯ ಧಾರ್ಮಿಕ ಸಂಘರ್ಷ ವ್ಯಕ್ತವಾಗಿದೆಯೆನ್ನಬಹುದು. ಇಬ್ಬರು ಕಾದಂಬರಿಕಾರರು ಧರ್ಮದ ಚೌಕಟ್ಟಿನೊಳಗೆ ಪ್ರತಿಕ್ರಿಯಿಸಿರುವುದು ಕಾದಂಬರಿಯಲ್ಲಿ ಪ್ರಸ್ತುತ ವಿಚಾರದ ಬಗ್ಗೆ ತಾಳಿರುವ ಧಾರ್ಮಿಕ ನಿಲುವಿನಿಂದ ಸ್ಪಷ್ಟವಾಗಿದೆ. ಇಂದಿರಾಬಾಯಿ ಕಾದಂಬರಿಯಲ್ಲಿನ 'ಶ್ರೀ ಗುರುಗಳಿಗೆ ಸಕಲ ಸಂಗತಿಗಳನ್ನು ವಿವರವಾಗಿ ಅರಿಕೆ ಮಾಡಿ ಪ್ರತಿಯೊಂದು ಸಂಗತಿಯನ್ನು ಚೆನ್ನಾಗಿ ತರ್ಕಿಸಿ ಬಹಿಷ್ಕರಿಸಿದ ನಿರೂಪಗಳನ್ನು ಶ್ರೀ ಗುರುಗಳವರಿಂದ ದುರ್ಬಲಪಡಿಸಿ ಭೀಮರಾಯನನ್ನು ಧರ್ಮವಿಚಾರಕ ಸ್ಥಾನದಿಂದ ತಪ್ಪಿಸಿ. ಸಂಸ್ಕೃತ ಭಾಷೆಯಲ್ಲಿ ತೇರ್ಗಡೆ ಪಟ್ಟರೆಂಬ ಬಿ.ಎ.ಗೆ ಧರ್ಮ ವಿಚಾರಸ್ಥಾನವನ್ನು ಕೊಡಿಸುವುದು"[೨೧] ಇಂತಹ ಹುದ್ದೆ ಧರ್ಮ ಸಂಘರ್ಷದ ಸಂಗತಿ ವಾಗ್ದೇವಿ ಕಾದಂಬರಿಯಲ್ಲಿ ಬರುವುದು." ವಾಗ್ದೇವಿಯು ತನ್ನ ಗಂಡನ ಮತ್ತು

ತಂದೆ ತಾಯಿಗಳ ಸಮೇತ ಕುಮದಪುರದ ಮಠದಲ್ಲಿ ವೆಂಕಟಪತಿ ಆಚಾರ್ಯನ ಪರಿಮುಖದಿಂದ ತರಿಸಲ್ಪಟ್ಟು ಎಲ್ಲರ ತಿಳುವಳಿಕೆಯಿಂದಲೇ ಬಹಿರಂಗವಾಗಿ ಚಂಚಲನೇತ್ರರ ಸಂಗಡ ಇದ್ದು ಅವರಿಂದ ಗರ್ಭವಾಗಿ ಸೂರ್ಯನಾರಾಯಣನನ್ನು ಪಡೆದಳು. ಅಂತಹ ಪಿಂಡವು ಸನ್ಯಾಸ ಮಠಕ್ಕೆ ಅಯೋಗ್ಯವಾಗಿರುವುದರಿಂದ ಚಂಚಲನೇತ್ರರು ಅವನಿಗೆ ಕೊಟ್ಟ ಆಶ್ರಯವು ಎಂದಿಗೂ ಸಿಂಧುವಾಗ ಕೂಡದು. ದ್ವಂದ್ವ ಮಠದವರಾದ ನೃಸಿಂಹ ಪುರಾಧೀಶರು, ಕೊಟ್ಟ ಆಶ್ರಯವು ನ್ಯಾಯವಾದದ್ದು. ಹಾಗೆ ಆಶ್ರಮ ಕೊಡಲಿಕ್ಕೆ ಅವರಿಗೆ ಅಧಿಕಾರವಿರದು. ಆದ ಕಾರಣ ಸೂರ್ಯನಾರಾಯಣನಿಂದ ಕುಮದಪುರದ ಮಠವನ್ನು ಅದರ ವಿಶಿಷ್ಟ ಸ್ಥಿರ, ಚರ ಸೊತ್ತುಗಳ ಸಮೇತ ಸ್ವಾಧೀನ ಪಡೆದುಕೊಂಡು ಆದಿನಾರಾಯಣ ದೇವಸ್ಥಾನದಲ್ಲಿ ಕಟ್ಟಳೆಗಳನುಸರಿಸಿ ದಿಗ್ವಿಜಯರಾಧನೆಯನ್ನು ನಡೆಸುವುದಕ್ಕೆ ನವೀನ ಆಶ್ರಯ ಹೊಂದಿದವನೇ ಅರ್ಹನಾಗಿರುತ್ತಾನೆ."[೨೨] ಈ ಸಂಗತಿಗಳಿಂದ ಇಂದಿರಾಬಾಯಿ ಹಾಗೂ ವಾಗ್ದೇವಿ ಕಾದಂಬರಿಗಳ ಲೇಖಕರ ಧೋರಣೆಗಳನ್ನು ಮಿತಿಗಳನ್ನು ಅರಿಯಬಹುದು. ಈ ಬಗ್ಗೆ ಜಿ.ಎಚ್. ನಾಯಕರು "ಮಠಾಧಿಪತಿಯನ್ನು ಕುರಿತು ಗುಲ್ವಾಡಿಯವರ ನಿಲುವು ಸೌಮ್ಯ ಸ್ವರೂಪದ್ದಾಗಿದೆ. ಭೀಮರಾಯನನ್ನು ಧರ್ಮ ಪ್ರಚಾರಕನನ್ನಾಗಿ ನೇಮಿಸಿದ್ದು ಮತ್ತು ಆ ನೇಮಕಕ್ಕೆ ಕಾರಣವಾದ ಮಠಾಧಿಪತಿಯ ವಿಚಾರಗಳು ಕಾದಂಬರಿಯ ಸುಧಾರಣಾಪರ ಕಳಕಳಿಗೆ ವಿರುದ್ಧವಾದಂತಹವು"[೨೩] ಎಂಬ ಅಭಿಪ್ರಾಯದೊಂದಿಗೆ ಕಾದಂಬರಿಯ ಸಂದರ್ಭದಲ್ಲಿ "ಧಾರ್ಮಿಕ ಅಧಃಪತನವನ್ನು ತೋರಿಸುವಾಗ ಸಂತಮಂಡಳಿಯನ್ನು ತೀವ್ರವಾಗಿ ವಿಡಂಬನೆ, ಟೀಕೆಗಳಿಗೆ ಗುರಿ ಮಾಡದೆ ಇದ್ದದ್ದಕ್ಕೆ ಕಾದಂಬರಿಕಾರನ ಮಠಪರವಾದ ವೈಯಕ್ತಿಕ ಭಾವನೆ ಕಾರಣವಾಗಿರಬಹುದೆನಿಸುತ್ತದೆ"[೨೪] ಇದಕ್ಕೆ ಮುಖ್ಯವಾಗಿ ಆಗಿನ ಪ್ರಚಲಿತ ಸಾಮಾಜಿಕ ವ್ಯವಸ್ಥೆಯಲ್ಲೆ ಮಠಾಧೀಶರನ್ನು ಅಪಾದನೆಗೊಳಪಡಿಸುವುದು ಅಪಾಯದ ಕೆಲಸವಾಗಿತ್ತು. ಧಾರ್ಮಿಕ ವ್ಯವಸ್ಥೆ ಉಳಿಯಬೇಕಾದರೆ ಅದರಲ್ಲಿನ ಅವ್ಯವಹಾರವನ್ನು ಮಾತ್ರ ಸುಧಾರಿಸಬೇಕು. ಇಡೀ ಸಮಾಜದ ವಿರುದ್ಧ ಪ್ರತಿಕ್ರಿಯಿಸಿದರೆ ಬೇರೆ ದಾರಿ ಇಲ್ಲದ ಸ್ಥಿತಿ ಉದ್ಭವಿಸುತ್ತದೆ. ನಮ್ಮ ಸಂಸ್ಕೃತಿಯ ರಕ್ಷಣೆಗೆ ಪೂರಕವಾಗುತ್ತದೆ. ಇಂತಹ ಒಂದು ಸಂಕ್ರಮಣ ಸ್ಥಿತಿಯಲ್ಲಿ ತಮ್ಮ ಸಾಮಾಜಿಕ, ಧಾರ್ಮಿಕ ಮೌಲ್ಯಗಳ ರಕ್ಷಣೆ ಮತ್ತು ಹೊಸ ವಿಚಾರಗಳ ಅಗತ್ಯದಿಂದಾಗಿ ಅಂತರಿಕ ಸಂಘರ್ಷ ಉಂಟಾಗಬಹುದು.

ವಾಗ್ದೇವಿ ಕಾದಂಬರಿಯಲ್ಲಿ ಈ ಬಗೆಯ ಧರ್ಮಕ್ಕೆ ಸಂಬಂಧಿಸಿದ, ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಪಾತ್ರಗಳ ಮುಖಾಮುಖಿ ನಡೆಯುವುದಿಲ್ಲ. ವಾಗ್ದೇವಿ ಧರ್ಮದ ವಿರುದ್ಧವಾಗಿ ಕುಮದಪುರದ ಮಠ ಪ್ರವೇಶ ಮಾಡಿದ್ದರೂ ಅದರ ಕಟ್ಟಳೆಗೆ ಸಂಬಂಧಿಸಿದಂತಹ ಸಂದರ್ಭಗಳನ್ನು ಆಕೆ ಮಠದ ನೀತಿ ನಿಯಮಗಳನ್ನು ಪ್ರಶ್ನಿಸಿ ಕೇಳುವಳು. ಚಂಚಲನೇತ್ರ ಯತಿಗಳ ಮರಣಾನಂತರ ತನ್ನ ಕುಟುಂಬಕ್ಕಾಗುವ ತೊಂದರೆಯ ಹಿನ್ನೆಲೆಯಲ್ಲಿ ಮಠದ ಸಾಮಾಜಿಕ ನೀತಿ ನಿಯಮಗಳಿಗನುಗುಣವಾಗಿ

ಮಗನಿಗೆ ಪೀಠಾಧಿಕಾರ ಸಿಗಬೇಕೆಂಬ ಪ್ರಸ್ತಾಪವನ್ನು ಮುಂದಿಡುತ್ತಾಳೆ. ಆಗ ತೀವ್ರವಾದ ವಿರೋಧವಿರುತ್ತದೆ. ಸ್ವಾರ್ಥ ಸಾಧನೆಗಾಗಿ ತನ್ನ ತಂಗಿ ಶೃಂಗಾರಿಯನ್ನು ಕಾನೂನು ಅಧಿಕಾರಿಗಳಿಗೆ ಅರ್ಪಿಸಿ ಅಧರ್ಮವಾಗಿ ಮಠ ಪ್ರವೇಶ ಗಿಟ್ಟಿಸಿಕೊಳ್ಳವಳು. ಕೊನೆಗೆ ತನ್ನ ತಪ್ಪಿಗೆ ಬೇಸತ್ತು ಅಲ್ಲಿಂದ ಪಲಾಯನ ಮಾಡಬೇಕಾಗುವುದು. ಇಲ್ಲಿ ಕಾದಂಬರಿಕಾರರ ಉದ್ದೇಶ ಸ್ಪಷ್ಟವಾಗುತ್ತದೆ. ಮಠ ಮಂದಿರ ಮುಂತಾದ ಧಾರ್ಮಿಕ ಕ್ಷೇತ್ರಗಳಲ್ಲಿ ಅಂತಹ ಸಂಸ್ಕೃತಿ ವಿರೋಧಿ ಚಟುವಟಿಕೆಗಳಿಗೆ ಅಸ್ಪದಗಳಿರಲಿಲ್ಲ. ಆದರೆ ವಾಗ್ದೇವಿ ಸಮ್ಮುಖದಲ್ಲಿ ಎಲ್ಲವೂ ನಡೆಯುತ್ತದೆ. ತಪ್ಪಿತಸ್ಥರಿಗೆ ತಕ್ಕ ಪ್ರಾಯಶ್ಚಿತವನ್ನು ಹೇಳುವುದರ ಮೂಲಕ ಪ್ರಚಲಿತ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಕಾದಂಬರಿಯಲ್ಲಿ ಲೇಖಕರು ನಡೆಸಿದ ಪ್ರಯತ್ನ ಮುಖ್ಯವಾಗಿದೆ.

ಹೀಗೆ ಮೊದಲ ಘಟ್ಟದ ಕಾದಂಬರಿಕಾರರು ಪ್ರಕಟಪಡಿಸಿರುವ ಸಾಮಾಜಿಕತೆಯ ಹಿನ್ನೆಲೆಯಲ್ಲಿ ಆದರ್ಶವೆನ್ನುವದು ಧಾರ್ಮಿವಾದುದು. ಕೆಲವು ಪಾತ್ರಗಳಲ್ಲಿ ಸಂಪ್ರದಾಯ, ಧರ್ಮ ವಿರೋಧಿ ಅಭಿಪ್ರಾಯಗಳು ವ್ಯಕ್ತವಾದರೂ ಸಮಾಜವನ್ನು ಎದುರಿಸಿ ಸಫಲತೆಯನ್ನು ಕಾಣಲು ದುರ್ಬಲವಾಗಿವೆ. ಧರ್ಮಕ್ಕೆ ವಿರುದ್ಧವಾಗಿ ವರ್ತಿಸುವುದು ಕೆಟ್ಟದೆನ್ನುವ ಅಭಿಪ್ರಾಯ ಸೂಚಿತವಾಗಿದೆ. ಹೀಗಾಗಿ ವಾಗ್ದೇವಿ, ಚಂಚಲ ನೇತ್ರನಂತಹ ಇತರ ಮಠಾಧಿಪತಿಗಳು, ಅಧಿಕಾರಿಗಳು ಸಂದರ್ಭಕ್ಕನುಗುಣವಾಗಿ ಮಹತ್ವ ಹೊಂದಿ ಮರೆಯಾಗುತ್ತಾರೆ. ಶಿಷ್ಟ ಸಮಾಜದ ಅಸಡ್ಡೆಯನ್ನು ಹೊರಹಾಕಲು ವ್ಯಂಗ್ಯ ವಿಡಂಬನೆಗಳು ಕಾದಂಬರಿಗಳಲ್ಲಿ ಪ್ರಾಶಸ್ತ್ಯ ಪಡೆದಿವೆ. ಅದಕ್ಕೆ ಕಾದಂಬರಿಯಲ್ಲಿನ ಪಾತ್ರಗಳು, ಸಾಮಾಜಿಕ, ಧಾರ್ಮಿಕ, ಕಾರ್ಯಕ್ಕೆ ಉದಾಹರಣೆಗಳಾಗಿವೆ. ಕೌಟುಂಬಿಕ ಬಿಕ್ಕಟ್ಟನ್ನು ಬಗೆ ಹರಿಸಲು ಕಾದಂಬರಿಕಾರರು ಎಷ್ಟು ಪ್ರಗತಿಪರ ಹೆಜ್ಜೆ ಇಟ್ಟಿದ್ದರೂ ಅವರಲ್ಲಿನ ಧರ್ಮನಿಷ್ಠೆ, ಸಂಸ್ಕೃತಿ, ಬದ್ಧತೆ, ಸಂಪ್ರದಾಯ ಶರಣತೆಯ ಮನೋಭಾವದಿಂದಾಗಿ ಅದರ ಧಾರ್ಮಿಕ ಚೌಕಟ್ಟಿನೊಳಗೆ ಸಾಧಿತವಾಗಿರುವುದು ಕಂಡು ಬರುತ್ತದೆ.

೪. ೨ ವಿದ್ಯಾಭ್ಯಾಸದ ಸಂಘರ್ಷದ ನೆಲೆಗಳು:

ಪ್ರಾಚೀನ ಭಾರತೀಯ ಸಂಸ್ಕೃತಿಯ ಆರಂಭದ ಶತಕಗಳನ್ನು ಗಮನಿಸಿದಾಗ ಸ್ತ್ರೀ-ಪುರುಷ. ಶಿಕ್ಷಣವು ಒಂದೇ ತೆರನಾಗಿತ್ತು. ವೇದಕಾಲದ ಶಿಕ್ಷಣದ ವಿಶ್ವವಾರಾ, ಅಪಾಲಾ ಘೋಷಾ, ಶೋಧಾ, ಲೋಪಾಮುದ್ರಾ, ಶಾಶ್ವತಿ ಮತ್ತು ರೋಮೆಶಾ ಇವರೆಲ್ಲರೂ ಬ್ರಹ್ಮವಾದಿನಿಯರಾಗಿದ್ದರು. ಇದನ್ನು ಗಮನಿಸಿದರೆ ವಿದ್ಯಾ ತಾರ-ತಮ್ಯ ಕಾಣಸಿಗದು. ವೇದಶಾಸ್ತ್ರಗಳನ್ನು ಮೊದಲ್ಗೊಂಡು ಗಮನಿಸುವಂತೆ ನಂತರ ಬಂದ ಮೈತ್ರೇಯಿ, ಗಾರ್ಗಿಯರು ವಿದೂಷಿಯರೆನಿಸಿಕೊಂಡಿದ್ದರು. ವೇದ ಕಾಲದ ಸಂದರ್ಭದಲ್ಲಿ ಪತ್ನಿಯು ಪತಿಯೊಂದಿಗೆ ಯಜ್ಞ-ಯಾಗಾದಿಗಳನ್ನು ನೆರವೇರಿಸಿದ್ದಿದೆ. ಮಂತ್ರೋಚ್ಚಾರಣೆ

ಾಡಬೇಕಾಗಿರುವ ಸ್ತ್ರೀಯರು ಅವಶ್ಯವಾಗಿ ವಿದ್ಯಾಭ್ಯಾಸ ಮಾಡಬೇಕೆಂದು ಒತ್ತಾಯಿಸಲಾಯಿತು. ಗಂಡು ಮಕ್ಕಳ ಶಿಕ್ಷಣದಂತೆ ಸ್ತ್ರೀಯರಿಗೂ ಅವಕಾಶ ಒದಗಿಬಂದಿತು.

ವೇದಕಾಲೀನ ಯುಗದಿಂದ ಇಂದಿನ ಆಧುನಿಕ ಸಂದರ್ಭದವರೆಗೂ ಸ್ತ್ರೀಯನ್ನು ಪ್ರಾಚೀನ ಪರಂಪರೆಯಲ್ಲಿ ಗುರುತಿಸಿಕೊಳ್ಳುವಾಗ ಸ್ತ್ರೀ ಶಿಕ್ಷಣವು ಒಟ್ಟಾರೆಯಾಗಿ ಕುಂಠಿತ ವಾಸ್ತವವಾಗಿ ಚರಿತ್ರೆಯಲ್ಲಿ ಸಂದರ್ಭಗಳೇ ಅಧಿಕ. ಭಾರತೀಯ ಇತಿಹಾಸವನ್ನು ಗಮನಿಸಿದರೆ ಇಲ್ಲಿಯ ಮುಕ್ತ ರಾಣಿಯರು, ವಿದುಷಿಯರು, ಲೇಖಕಿಯರು ತಾರ್ಕಿಕ ಆಲೋಚನೆಯುಳ್ಳವರಾಗಿದ್ದರು. ವೇದಕಾಲದಿಂದ ಇಲ್ಲಿಯವರೆಗಿನ ಅಂಕಿ ಅಂಶಗಳನ್ನು ಗಮನಿಸಿದಾಗ ತಿಳಿಯುವುದು. ಆದರೆ ಮೇಲ್ವರ್ಗದ ಸ್ತ್ರೀಯರು ಮಾತ್ರ ಇಂತಹ ಅವಕಾಶವನ್ನು ಪಡೆದಿದ್ದರು. ಹಿಂದುಳಿದ ಅಥವಾ ಕೆಳವರ್ಗ ಸ್ತ್ರೀಯರಿಗೆ ಈ ಅವಕಾಶಗಳಿರಲಿಲ್ಲ. ಭಾರತೀಯ ಸಂಸ್ಕೃತಿಯ ಸಂದರ್ಭ ಪಾಶ್ಚಿಮಾತ್ಯರ ಆಗಮನವು ಶಿಕ್ಷಣದ ಪ್ರಕ್ರಿಯೆಯನ್ನು ಬದಲಿಸಿತು. ಅಲ್ಲಲ್ಲಿ ಸ್ತ್ರೀ ಶಿಕ್ಷಣದ ಧ್ವನಿ ಕೇಳಿ ಬರುತ್ತಿದ್ದರೂ ಅವರನ್ನು ಗೃಹ ಸ್ವಾಮಿನಿಯ ಸ್ಥಾನದಲ್ಲಿ ಭದ್ರಗೊಳಿಸಲು ಯತ್ನಿಸಿದ ಸಂಪ್ರದಾಯವಾದಿಗಳಿಗೇನೂ ಕಡಿಮೆ ಇರಲಿಲ್ಲ.

ಭಾರತೀಯ ಸಮಾಜದ ಅಮೂಲಾಗ್ರ ಬದಲಾವಣೆಯನ್ನು ಬಯಸಿದ ರಾಜಾರಾಮ ಮೋಹನರಾಯ, ಕಲ್ಕತ್ತಾದ ಬ್ರಾಹ್ಮರ್, ಮದ್ರಾಸಿನ ವೀರೇಶಲಿಂಗಂ ಪಂತಲು, ಮುಂಬಯಿ ಡಿ.ಕೆ.ಕರ್ವೆ, ಈಶ್ವರಚಂದ್ರ ವಿದ್ಯಾಸಾಗರ, ಪಂಡಿತ ರಮಾಬಾಯಿ, ಜ್ಯೋತಿಬಾ ಫುಲೆ, ಸಾವಿತ್ರಿಬಾ ಫುಲೆ ಮುಂತಾದ ಮಹನೀಯರು ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ದೊರಕುವಂತೆ ಪ್ರಯತ್ನಿಸಿದರು. "ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದ್ದಾದರೆ ಅವರ ಸಮಸ್ಯೆಗಳನ್ನು ಅವರೇ ಬಗೆಹರಿಸಿಕೊಳ್ಳಲು ಸಶಕ್ತರಾಗುತ್ತಾರೆಂದು ಸ್ವಾಮಿ ವಿವೇಕಾನಂದರು ಸ್ತ್ರೀತ್ವದ ಗಾಂಭೀರ್ಯಶಾಲೀನತೆ ಇಲ್ಲದೆ ಸ್ತ್ರೀಯು ತನಗೆ ಬೇಕಾದ ಕಲೆಯಂತೆ ಕಾಣುತ್ತಾಳೆ ಎಂದು ಭಾರತೀಯ ಸಂಸ್ಕೃತಿಯನ್ನು ಗೌರವಿಸಬೇಕಾದ ಅಂತರ ಚಿಂತನೆಯತ್ತ ದೃಷ್ಟಿ ಹರಿಸಿದ್ದಾರೆ" ಎಂದು ಆಧುನಿಕ ಸ್ತ್ರೀ ಪುರುಷರು ಸಮನಾಗಿ ಜೀವಿಸಬೇಕೆಂದು ಸೂಚ್ಯವಾಗಿ ಹೇಳಿದ್ದಾರೆ. ಸಹಸ್ರಾಬ್ದಿಯ ಶತಮಾನ ಸಾಮಾಜಿಕ ಸಂಕ್ರಮಣಾವಸ್ಥೆಯ ಚರಿತ್ರೆಯು ಹಳೆಯದರಿಂದ ಹೊಸದರತ್ತ ಹೆಜ್ಜೆ ಹಾಕುವ ಸಂದರ್ಭ ಬಂದಿದೆ. ಪರಂಪರಾಗತ ಮೌಲ್ಯಗಳು ಮತ್ತೊಂದೆಡೆ ಪಾಶ್ಚಿಮಾತ್ಯ ಸಂಸ್ಕೃತಿಯ ಗಾಳಿ ಬಲವಾಗಿ ಬೀಸುತ್ತಿತ್ತು. ಈ ಸಂಸ್ಕೃತಿಗೆ ಮಾರುಹೋಗಿ ನಮ್ಮತನ ಅಳಿದುಹೋದರೆ ಎಂಬ ಸಂಸ್ಕೃತಿಯ ನಮ್ಮ ಹೆಣ್ಣು ಸಮಾಜದ ಸ್ಥಿತಿ ಹೇಗಾಗುವುದೋ ಎಂಬ ಇಂತಹ ಸಮಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳುವ ಕಾದಂಬರಿಗಳು ಪ್ರಾಥಮಿಕ ಶಿಕ್ಷಣಕ್ಕೆ ಪರಿಹಾರ ಕೊಡುವುದು.

ಆಧುನಿಕ ವಿದ್ಯಾಕ್ರಮ ಮತ್ತು ಮುದ್ರಣಯಂತ್ರಗಳು ಭಾರತೀಯ ಸಾಂಪ್ರದಾಯಿಕ ಓದಿನ ಕ್ರಮವನ್ನು ನಿರ್ಣಾಯಕವಾಗಿ ಬದಲಾಯಿಸಿದವು. ಪ್ರಾಚೀನ ಪಠ್ಯಕ್ರಮಗಳು ಆಧುನಿಕ ಓದುಗರು ಕೇಳುಗರು ಗ್ರಹಿಸಿದ ರೀತಿಗೂ ವ್ಯತ್ಯಾಸವಿತ್ತು. ಎಲ್ಲಾ ಓದುಗಳು, ಎಲ್ಲಾ ಸಮುದಾಯದ ಓದುಗಳು ಒಂದೇ ರೀತಿ ಅಲ್ಲ. ಕೃತಿ ಒಂದೇ ಆದರೂ ಅದರ ಆಯಾಮಗಳು ಭಿನ್ನವಾಗಿರುವವು. ಬೇರೆ ಬೇರೆ ಸಮುದಾಯ, ವರ್ಗ, ಜಾತಿ, ಸಾಮಾಜಿಕ ಗುಂಪುಗಳು ತಮ್ಮ ಸಾಮಾಜಿಕ ಸ್ಥಾನಮಾನ ಅಗತ್ಯಗಳಿಗನುಸಾರವಾಗಿ ಓದುವ ಕ್ರಮ ಜಾರಿಗೆ ಬಂದವು. ಸಮುದಾಯಗಳ ಓದಿನ ಉದ್ದೇಶ, ಅರ್ಥೈಸಿ ಕಂಡುಕೊಳ್ಳುವ ಮಾರ್ಗಗಳು ಬೇರೆ ಬೇರೆಯಾಗಿರುವುವು.

ಆಧುನಿಕ ವಿದ್ಯಾಭ್ಯಾಸ ಮತ್ತು ಮುದ್ರಣ ಸೌಲಭ್ಯಗಳು ಓದುವ ಕ್ರಮಗಳನ್ನು ಬದಲಾಯಿಸತೊಡಗಿದವು. ವಿದ್ಯಾಭ್ಯಾಸ ಅನ್ಯ ವರ್ಗಗಳ ಸದಸ್ಯರಿಗೆ ಓದುವ ಶಕ್ತಿಯನ್ನು ತಂದು ಕೊಟ್ಟರೆ ಮುದ್ರಣ ಸೌಲಭ್ಯದಿಂದ ಪುಸ್ತಕಗಳು ಸಾಮಾನ್ಯರ ಕೈಗೆ ಎಟುಕುವಂತಾದವು. ಇದರಿಂದ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಅಂದಿನ ಓದು ಪಠ್ಯಗಳಿಂದ ಬೇಕಾದ ಮಾಹಿತಿಯನ್ನು ಕೈಗೆತ್ತಿಕೊಂಡು ಅರ್ಥೈಸುವುದಾಗಿತ್ತು. ಓದಿನ ಕ್ರಮ ಹಿಂದಿನ ಗೃಹಿತಗಳು ಓದಿನ ವಿಸ್ತಾರವನ್ನು ವಿಸ್ತರಿಸಿದವು.

"ಬ್ರಿಟಿಷ್ ಆಡಳಿತದಲ್ಲಿ ಅವರ ಸ್ವಾರ್ಥ ಸಾಧನೆ ಎಷ್ಟೇ ಇರಲಿ ಆಶ್ರಮದಲ್ಲಿ ಸುವ್ಯವಸ್ಥೆಯ ಬಿಗುವು ಆ ಹಿಂದಿನ ದೇಶೀಯ ರಾಜ್ಯಭಾರಗಳಲ್ಲಿ ವಿಶೇಷವಾಗಿ ಹದಿನೇಳು, ಹದಿನೆಂಟನೆಯ ಶತಮಾನಗಳಲ್ಲಿ ಇರಲಿಲ್ಲ. ಅಧಿಕಾರಿಗಳ ಕಾರ್ಯಕ್ಷಮತೆಯಂತೂ ಸಾಮಾನ್ಯ ಭಾರತೀಯರ ಬಗೆಗಿನ ಕೆಲವೆ ಬ್ರಿಟಿಷ್ ಅಧಿಕಾರಿಗಳು ಇಡಿ ಜಿಲ್ಲೆಯೊಂದನ್ನು ಸಮರ್ಥವಾಗಿ ನಿಯಂತ್ರಿಸುತ್ತಿದ್ದಾಗ ಅವರ ಆಡಳಿತದ ಹಿಡಿತವು ದೇಶದ ಹಳ್ಳಿ-ಹಳ್ಳಿಗೂ ಪಸರಿಸಿತು. ಅದರ ಹಿಂದೆ ದೇಶದ ಆರ್ಥಿಕ ಶೋಷಣೆ ನಡೆದಿತ್ತಾದರೂ ಜನತೆಗೆ ನೆಮ್ಮದಿ ಭದ್ರತೆಗಳು ದೊರಕಿತೆಂಬುದು"[೨೫] ಈ ಹೇಳಿಕೆಯ ತಿರುಳು. ಭಾರತೀಯರ ಸಮಗ್ರ ಅಭಿವೃದ್ಧಿಗೆ ಪಾಶ್ಚಿಮಾತ್ಯ ಶಿಕ್ಷಣ ಜ್ಞಾನದ ಮಜಲುಗಳು ತಿಳುವಳಿಕೆಯಿಂದ ಪ್ರೇರಣೆ, ಪ್ರಭಾವ ಬೀರಿರುವುದು ಕಾಣುವುದು. ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಔದ್ಯೋಗಿಕ ಹೀಗೆ ಹಲವಾರು ಕಾರಣಗಳು ಪ್ರಭಾವಕ್ಕೊಳಗಾಗಿವೆ. ಭಾರತದಾದ್ಯಂತ ಆಡಳಿತ, ವ್ಯವಹಾರ, ಶಿಕ್ಷಣ, ಮುದ್ರಣಯಂತ್ರ, ಗ್ರಂಥೋದ್ಯಮ, ಕ್ರೈಸ್ತಮತ ಪ್ರಚಾರ ಮುಂತಾದ ಕ್ಷೇತ್ರಗಳಲ್ಲಿ ಹೊಸ ಅಲೆ ಎದ್ದಿದ್ದು ಕಾಣುವುದು. ಹಿಂದೂ ಸಮಾಜದಲ್ಲಿ ಈ ಸಮಯ ಕ್ರಮೇಣ ಬದಲಾಣೆಗಳು ಜರುಗಿದವು. ದೇಶೀಯ ಶಾಲೆಗಳು ಶಿಥಿಲಗೊಂಡವು. ಮೈಸೂರು ಪ್ರದೇಶದಲ್ಲಿ ಮಧ್ಯಯುಗೀನ ಪರಂಪರೆ

[illegible]

ಮುಂದುವರೆದುಕೊಂಡು ಬಂದಿತು. ಈ ಕಾಲಕ್ಕೆ ಕರ್ನಾಟಕದ ಒಟ್ಟು ವ್ಯವಸ್ಥೆಯಲ್ಲಿ ಪರಿವರ್ತನೆಯಾದುದ್ದು ಗಮನಾರ್ಹವಾದ ಸಂಗತಿಯಾಗಿದೆ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭ ಪ್ರಾದೇಶಿಕವಾಗಿಯೂ ತೀವ್ರತರವಾದ ಪ್ರಭಾವವನ್ನು ಬೀರಿತು. ಗಾಂಧೀಜಿಯವರು ಚಳುವಳಿಯ ನೇತೃತ್ವವನ್ನು ವಹಿಸಿದ ಮೇಲೆ ಮತ್ತಷ್ಟು ಬಲಗೊಂಡಿತು. ಸಾಮಾಜಿಕ ಪ್ರಜ್ಞೆ ನಾಡು ನಾಡಿನಲ್ಲಿ ಇಣುಕತೊಡಗಿತು. ಕರ್ನಾಟಕದ ಸಂದರ್ಭದಲ್ಲೂ ಮಹತ್ತರವಾದ ಬದಲಾವಣೆಗಳು ಜರುಗಿದವು. ಈ ಸಮಯಕ್ಕೆ 'ಖಾದಿ ಚಳುವಳಿ' ರಾಷ್ಟ್ರೀಯತೆ, ವಿದ್ಯಾಭ್ಯಾಸ, ಹರಿಜನೋದ್ಧಾರ ವಿಚಾರಗಳನ್ನು ಪ್ರಜ್ಞಾವಂತ ಕನ್ನಡ ಬರಹಗಾರರು ತಮ್ಮ ಕೃತಿಗಳಲ್ಲಿ ಚರ್ಚೆಗೆ ಎತ್ತಿಕೊಂಡಿದ್ದು ಗಮನಾರ್ಹ ಸಂಗತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿದವರು ಕಾರ್ನಾಡ ಸದಾಶಿವರಾಯರು. ಇದನ್ನು ಶಿವರಾಮ ಕಾರಂತರು ಸ್ಮರಿಸುತ್ತಾ 'ಈ ಜಿಲ್ಲೆಯಲ್ಲಿಯ ರಾಜಕೀಯ ಯಾವತ್ತು ಕರ್ನಾಟಕದ ರಾಜಕೀಯ ಹೊಂದಿತ್ತು."[೨೬] ಹೀಗೆ ಸ್ವಾತಂತ್ರ ಹೋರಾಟ ಹಿನ್ನೆಲೆಯಲ್ಲಿ ನಡೆದ ಚಳುವಳಿಗಳು ಸಾಹಿತ್ಯಕ್ಕೆ ಸಾಕಷ್ಟು ಸಾಮಗ್ರಿಯನ್ನೊದಗಿಸಿದವು. ಈ ೨೦ನೇ ಶತಮಾನದ ಜನಪ್ರಿಯ ಸಾಹಿತ್ಯ ಮಾಧ್ಯಮ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಕಾದಂಬರಿಗಳು ವಾಸ್ತವವಾದ ಚಿತ್ರಣ ಕೊಡುವದಲ್ಲದೆ ಆ ಕಾಲದಲ್ಲಿ ಸಾಮಾಜಿಕ ಸ್ಥಿತಿಗತಿಯ ಚಿತ್ರಣವನ್ನು ಚೆನ್ನಾಗಿ ನೀಡಿದೆ. ಅಂತೆಯೇ "ಕಾದಂಬರಿ ಇಂದು ಜನಪ್ರಿಯವಾದ ಸಾಹಿತ್ಯ ಮಾಧ್ಯಮ ಇಂದಿನ ವೈಜ್ಞಾನಿಕ ಯುಗದಲ್ಲಿ ತಾಂತ್ರಿಕ ಕ್ರಾಂತಿಯಿಂದ ಸಂಭವಿಸಿದ ಜೀವನದ ಬಹುಮುಖ ಸೌಲಭ್ಯಗಳನ್ನು ಸಮಸ್ಯೆಗಳನ್ನು ಹೆಚ್ಚು ಶಕ್ತವಾದ ಈ ಕಾದಂಬರಿ ಚಿತ್ರಿಸಬಲ್ಲದು."[೨೭]

ಇಪ್ಪತ್ತನೆಯ ಶತಮಾನ ಪೂರ್ವದಲ್ಲಿ ಕನ್ನಡ ಸಾಹಿತ್ಯ ರಚನೆ ವಿಶಿಷ್ಟತೆಯನ್ನು ಪಡೆದಿತ್ತು. ಅದೊಂದು ಸಂಧಿಕಾಲ, ಸಂಕ್ರಮಣಕಾಲ ಮತ್ತು ಸಮಾಜ ಪರಿವರ್ತನೆಯ ಕಾಲವಾಗಿತ್ತು, ಏಕೆಂದರೆ "ರಾಜಕೀಯ ಹೋರಾಟದ ಜೊತೆಯಲ್ಲೇ ಸಮಾಜವು ಪರಿವರ್ತನೆಯ ಸುಳಿಯಲ್ಲಿ ಸಿಲುಕಿತು. ಒಂದು ಕಡೆ ರಾಜಕೀಯ ರಾಷ್ಟ್ರೀಯ ಭಾವನೆ ಉದ್ದೀಪನಗೊಂಡಂತೆ ಇನ್ನೊಂದು ಕಡೆಯಲ್ಲಿ ಪ್ರಾಚೀನವಾಗಿ ಬಂದು ಸಾಮಾಜಿಕ ವ್ಯವಸ್ಥೆಯ ಬೇರುಗಳು ಅಲ್ಲಾಡಿದವು."[೨೮] ಇದಕ್ಕೆ ಮುಖ್ಯಕಾರಣ ಹಳೆ ಮತ್ತು ಹೊಸ ಮೌಲ್ಯಗಳ ಸಂಘರ್ಷಣೆಯಿಂದ ಉಂಟಾದ ಪರಿಣಾಮವಾಗಿದೆ. ಪಾಶ್ಚಾತ್ಯರಿಂದ ರಾಜಕೀಯ ಶಕ್ತಿಯು ಭಾರತದಾದ್ಯಂತ ಕಾರ್ಯ ಸಾಫಲ್ಯತೆ ಹೊಂದಿತು. ಅವರು ಭಾರತದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ಪ್ರಭುತ್ವ ಸ್ಥಾಪಿಸಿದರು. ಆವಾಗ ಅವರಿಗೆ ಸಹಾಯವಾಗುವಂತೆ ಒಂದು ವರ್ಗ ಸೃಷ್ಟಿಯಾಯಿತು. ಅದಕ್ಕೆ ಪೂರಕವಾದಂತಹ ವಿದ್ಯಾಭ್ಯಾಸ ಪದ್ಧತಿ ರೂಪುಗೊಂಡಿತ್ತು. ಈ

ಸಂದರ್ಭದಲ್ಲಿ ಇತಿಹಾಸವನ್ನು ಒಂದು ಸಾರೆ ಅವಲೋಕಿಸಿದಾಗ ಮೇಲ್ವರ್ಗದಲ್ಲಿ ಸ್ತ್ರೀಯರಿಗಿರುವ ಅವಕಾಶ ಕೆಳವರ್ಗದ ಸ್ತ್ರೀಯರಿಗೆ ಇಲ್ಲದಿರುವುದು ಈ ಸಂದರ್ಭದ ಕಾದಂಬರಿಗಳಲ್ಲಿ ಕಾಣುವುದು.

ವೈಚಾರಿಕ ಕ್ರಾಂತಿ ಮತ್ತು ಸಮಾಜ ಸುಧಾರಣೆಯನ್ನು ಬಯಸುವ ಸಂದರ್ಭದಲ್ಲಿ ಸಾಂಪ್ರದಾಯಿಕ ಸಮಾಜ ಕಲಿತ ಸ್ತ್ರೀಯರನ್ನು ಕಡೆಗಣ್ಣಿನಿಂದಲೆ ನೋಡಿದೆ. ಆದರೂ ಶಿಕ್ಷಣದ ಮಹತ್ವ ಬಿಂಬಿಸುವ ಕಾದಂಬರಿ 'ಇಂದಿರಾಬಾಯಿ'ಯಲ್ಲಿ ಬಾಲವಿಧವೆಯ ಚರ್ಚೆಯಿದೆ. ಇಂದಿರಾಬಾಯಿ ಓದಿನಲ್ಲಿ ಆಸಕ್ತಿಯುಳ್ಳವಳಾದರೆ ಅವಳ ತಾಯಿ ಅಂಬಾಬಾಯಿ ನೀತಿ ಪುಸ್ತಕ ಓದಿನಿಂದ ಜಾತಿ ಕೆಡುವುದೆಂದು ಭಾವಿಸಿ ಮಗಳನ್ನು ಹೀನಾಯವಾಗಿ ಕಾಣುವಳು. ಅದೇ ರೀತಿ ಸುಶೀಲೆ ಕಾದಂಬರಿಯ 'ಸುಶೀಲೆ' ನಿರ್ಭಾಗ್ಯವನಿತೆಯ 'ಇಂದಿರೆ', ಓದಿನ ಗೀಳಿನಿಂದಾಗಿ ನಿಂದೆಗೆ ಒಳಗಾಗಿದ್ದಾರೆ.

ಇಂದಿರಾಬಾಯಿ ಕಾದಂಬರಿಯ ಇಂದಿರೆ ಕನ್ಯಾಶಾಲೆಯಲ್ಲಿ ಕಲಿಯುತ್ತಿದ್ದ ನೆರೆಮನೆಯ ರಾಮರಾಯನ ಮಗಳು ಶಾರದಾಂಬೆಯೊಡಗೂಡಿ ಓದಿಗೆ ಒಗ್ಗುವ ಸನ್ನಿವೇಶ ಬರುವುದು. ಸ್ತ್ರೀಧರ್ಮನೀತಿ, ಈಸೋಫನ ನೀತಿ ಕಥೆಗಳು, ಪಂಚತಂತ್ರ, ಸತ್ಯವತಿ ಚರಿತ್ರೆ, ಮುಂತಾದ ಪುಸ್ತಕಗಳನ್ನು ಓದುತ್ತಾ ಸಮಯ ಕಳೆಯುವ ಪ್ರಸಂಗ ಸ್ತ್ರೀ ಬದುಕಿನ ಓದಿನ ಸ್ವರೂಪ ಚಿತ್ರಿಸುವದು. ಇದಕ್ಕೆ ಅಂಬಾಬಾಯಿ ಮತ್ತು ಇಂದಿರಾಬಾಯಿ ಇವರ ನಡುವೆ ನಡೆಯುವ ಸಂಭಾಷಣೆ ಇಂದಿರಾ ಸ್ತ್ರೀ ಶಿಕ್ಷಣ ಪ್ರತಿಪಾದಿಸಿದ ಪ್ರಮುಖ ಪಾತ್ರದಂತೆ ಕಾಣುವುದು.

"ನೀನು ಓದುವ ಪುಸ್ತಕವೆಂಥಾದ್ದು?"

"ನಾನು ನಿನ್ನೆಯವರೆಗೆ 'ಸ್ತ್ರೀ ಧರ್ಮನೀತಿ" ಎಂಬ ಪುಸ್ತಕ ಓದಿದೆ.

ಈ ಹೊತ್ತು ಈಸೋಫನ ನೀತಿ ಕಥೆಗಳು ಎಂಬ ಪುಸ್ತಕ ಓದ ತೊಡಗಿದ್ದೇನೆ". ಸ್ತ್ರೀ ಶಿಕ್ಷಣ ಪ್ರತಿಪಾದನೆ ಇದೆ. ಸ್ತ್ರೀಧರ್ಮನೀತಿ, ಈಸೋಫನ ನೀತಿ ಕಥೆಗಳು ಪಂಚತಂತ್ರ ಸತ್ಯವತಿ ಚರಿತ್ರೆ ಶಾರದೆಯೊಂದಿಗೆ ಓದಿದ, ಚರ್ಚಿಸಿದ ಸಂಗತಿಗಳು ಸ್ತ್ರೀ ಶಿಕ್ಷಣ ಪ್ರತಿಪಾದನೆ ಕಾಣುವುದು. ಆ ದಿನಗಳಲ್ಲಿ ಓದು ಬರಹ ನಿಂದನೆಯ ವಿಷಯಗಳಾಗಿದ್ದವು. ಹಾಗೆಯೇ ಸುಶೀಲೆ ಕಾದಂಬರಿಯ ವಿರಾಮ ಕಾಲದಲ್ಲಿ ಓದುವ ಆಸಕ್ತಿ ಬೆಳೆಸಿಕೊಂಡವಳು. ಈ ಓದು ಗಿರಿಯಮ್ಮನಂತಹವರಿಗೆ ಕೆಟ್ಟದಾಗಿ ಕಾಣಿಸಿದೆ. "ಒಳ್ಳೆಯ ಓದು ! ಒಳ್ಳೆಯ ಓದು !! ವಿರಾಮ ದೊರೆತು ಹೊತ್ತು ಹೋಗದಿದ್ದರೆ ಹಾಳು ಪುಸ್ತಕವನ್ನೆ ಓದಬೇಕೆ[2F] ಎಂದು ಜರೆಯುವಳಲ್ಲದೆ ಇಂತಹ ಪ್ರಸಂಗಗಳು ಅಲ್ಲಲ್ಲಿ ಚರ್ಚೆಗೆ ಆಯ್ದಿರುವ ಮೊದಲ ಹಂತದ ಕಾದಂಬರಿಕಾರರು ಶಿಕ್ಷಣ, ಸ್ತ್ರೀ ಶಿಕ್ಷಣ, ವಿದೇಶಿ ಉನ್ನತ ವ್ಯಾಸಂಗ ಪ್ರತಿರೋಧಿಸಿದ ನಿದರ್ಶನಗಳು ಶಿಕ್ಷಣಕ್ಕೆ ಪ್ರೇರಣೆಯಾಗಿವೆ. ಕಳೆದ ಶತಮಾನದಲ್ಲಿ ಓದಿಗೆ ವಿದೇಶಕ್ಕೆ ವಿರೋಧ ವ್ಯಕ್ತವಾಗಿದೆ. ಸಾಗರ ಪ್ರಿಯಾ

ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ಸಮಾಜಘಾತುಕ ಚಟುವಟಿಕೆಯಾಗಿತ್ತು. ಆದ್ದರಿಂದ ಅದನ್ನು ಪ್ರಬಲವಾಗಿ ನಿಷೇಧಿಸಲಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ ಕುಟುಂಬ ವಿದೇಶಕ್ಕೆ ಹೋದಾಗ ಅವರನ್ನು ಸಮಾಜ ಬಹಿಷ್ಕರಿಸಿತ್ತು. ಮೈಸೂರು ಅರಸರು ಕೂಡಾ ತಮ್ಮ ಇಂಗ್ಲೆಂಡ್ ಭೇಟಿಯನ್ನು ರದ್ದುಗೊಳಿಸಿದ್ದರು. ಆಗ ಉನ್ನತ ವ್ಯಾಸಂಗ ಮಾಡಬೇಕಾದರೆ ವಿಲಾಯತಿಗೆ ಹೋಗುವ ಅನಿವಾರ್ಯತೆ ಇತ್ತು. ಗುಲ್ವಾಡಿ ವೆಂಕಟರಾಯರು 'ಇಂದಿರಾಬಾಯಿ' ಕಾದಂಬರಿಯಲ್ಲಿ ಪ್ರತಿಕ್ರಿಯಿಸಿರುವುದು ಇಲ್ಲಿ ಮುಖ್ಯವಾಗಿದೆ. ಭಾಸ್ಕರ ಸಿ.ಎಸ್. ಪರೀಕ್ಷೆಗೆ ವಿಲಾಯಿತಿಗೆ ಹೋಗುವ ಸಂದರ್ಭದಲ್ಲಿ ಧರ್ಮ ವಿಚಾರಕ ಸ್ಥಾನದಲ್ಲಿದ್ದ ಭೀಮರಾಯನು ಅವನನ್ನು ಜಾತಿಯಿಂದ ಹೊರಹಾಕಲು ಬಿನ್ನವತ್ತಳೆ ಕಳುಹಿಸುತ್ತಾನೆ. ಭಾಸ್ಕರನ ತಾಯಿ ಸುಶೀಲೆ 'ಮಿಲಾಯಿತಿಗೆ ಹೋಗಿ ಬರುವುದು ಧರ್ಮವಿರುದ್ಧವೆಂದು ಹೇಳುತ್ತಾರಷ್ಟೇ? ಹಾಗೆ ಹೋಗಿ ಬಂದವರನ್ನು ಜಾತಿಯಿಂದ ತೆಗೆದು ಹಾಕುತ್ತಾರಷ್ಟೇ"[೩೦] ಎಂದು ಆಕ್ಷೇಪಿಸುವಳು. ಆಕೆಗೆ ಮಗ ಜಾತಿ ಕೆಡುವನೆಂಬ ಆತಂಕ. ಅದಕ್ಕೆ "ಅಲ್ಲಿ ನಮ್ಮ ಜಾತಿಯವರಿದ್ದಾರೆಯೇ ಏತನ್ಮಧ್ಯೆ ಊಟಕಕ್ಕೇನು ಗತಿ?"[೩೧] ಎನ್ನುವದರಿಂದ ವ್ಯಕ್ತವಾಗುವುದು. ಏಕೆಂದರೆ ಕಾದಂಬರಿಕಾರ ಉದ್ದೇಶಪೂರ್ವಕವಾಗಿಯೇ ಆಕೆಯನ್ನು ಹಾಗೆ ಚಿತ್ರಿಸಿರಬಹುದು ಎನಿಸುವುದು. ಭಾಸ್ಕರನ ಸಂರಕ್ಷಣೆಯಲ್ಲಿ ಅಮೃತರಾಯ ಜಲಜಾಕ್ಷಿಯರ ಪಾತ್ರ ಮಹತ್ವದ್ದು. ಸುಧಾರಣಾವಾದಿ ನೆಲೆಯಲ್ಲೆ ಮೂಡಿಬಂದಿದೆ. ಭಾಸ್ಕರನು ವಿಲಾಯತಿಗೆ ಕಳುಹಿಸಿ ಕಟ್ಟಳೆ ಮುರಿದರು". ಕಮಲಪುರದ ಅಸಿಸ್ಟಂಟ್ ಕಲೆಕ್ಟರ್ ಭಾಸ್ಕರರಾಯ ವಿಲಾಯಿತಿಗೆ ಹೊಗಿ ಬಂದರು. ಜಾತಿ, ಧರ್ಮಗಳು ಮನುಷ್ಯನ ಅನುಕೂಲತೆಗೆ ಸೃಷ್ಟಿಸಿಕೊಂಡವುಗಳು. ಅವು ಎಷ್ಟಿದ್ದರೂ ಮಾನವನ ಸ್ವಾರ್ಥದ ಕೂಸೆ.

ವೈಚಾರಿಕ ಕ್ರಾಂತಿ ಮತ್ತು ಸಮಾಜ ಸುಧಾರಣೆಯನ್ನು ಬಯಸುವ ಸಂದರ್ಭದಲ್ಲಿ ಸಾಂಪ್ರದಾಯಿಕ ಸಮಾಜ ಕಲಿತ ಸ್ತ್ರೀಯರನ್ನು ಕಡೆಗಣ್ಣಿನಿಂದಲೇ ನೋಡಿದೆ. ಆದರೂ ಶಿಕ್ಷಣದ ಕಾಳಜಿಯನ್ನು ಪ್ರತಿನಿಧಿಸುವ ಮೊದಲ ಕಾದಂಬರಿ 'ಇಂದಿರಾಬಾಯಿ'. ಬಾಲವಿಧವೆ ಇಂದಿರಾಬಾಯಿ ಓದಿನಲ್ಲಿ ಆಸಕ್ತಿ ಉಳ್ಳವಳಾದರೆ, ಅವಳ ತಾಯಿ ಅಂಬಾಬಾಯಿ ನೀತಿ ಪುಸ್ತಕ ಓದಿನಿಂದ ಜಾತಿ ಕೆಡುವುದೆಂದು ಭಾವಿಸಿ ಮಗಳನ್ನು ಹೀನಾಯವಾಗಿ ಕಾಣುವಳು. ಅದೇ ರೀತಿ ಸುಶೀಲೆ ಕಾದಂಬರಿಯ 'ಸುಶೀಲೆ' ನಿರ್ಭಾಗ್ಯವನಿತೆ ಕಾದಂಬರಿಯ 'ಇಂದಿರೆ' ಓದಿನ ಗೀಳಿನಿಂದಾಗಿ ನಿಂದೆಗೆ ಒಳಗಾಗಿದ್ದರೆ, ಹಾಗೆಯೇ ಸುಶೀಲೆ ಕಾದಂಬರಿಯ ಸುಶೀಲೆ ವಿರಾಮ ಕಾಲದಲ್ಲಿ ಓದುವ ಆಸಕ್ತಿ ಬೆಳೆಸಿಕೊಂಡವಳು. ಈ ಓದು ಗಿರಿಯಮ್ಮ ನಂತಹವರಿಗೆ ಕೀಳಾಗಿ ಕಾಣಿಸಿದೆ. ಒಳ್ಳೆಯ ಓದು, ಒಳ್ಳೆಯ ! ಓದು !! "ವಿರಾಮ ಸಿಕ್ಕಿರೆತು ಹೊತ್ತು ಹೋಗದಿದ್ದರೆ ಹಾಳು ಪುಸ್ತಕವನ್ನೇ ಓದಬೇಕೆ?"ಎಂದು ಜರಿದ ಪ್ರಸಂಗ ಅಂದಿನ ಸ್ತ್ರೀ

ಶಿಕ್ಷಣದ ನ್ಯೂನ್ಯತೆಯನ್ನು ತೋರಿಸುವುದು. ಮುಂದುವರೆದು "ಹಾಳು 'ಸುಶೀಲೆ" ಯಾವಾಗ ನೋಡಿದರೂ ಪುಸ್ತಕವನ್ನು ಹಿಡಿದೇ ಇರುವಳು. ಹೆಂಗಸು........ಗೆ ಓದು ಎಂದರೇನು?"[೩೨] ಎಂದು ಹೀಗಳೆಯುವಳು. ಓದಿದವರನ್ನು ಜರಿಯುವಳು. 'ಇಂದಿರಾಬಾಯಿ'ಯಲ್ಲಿ ವ್ಯಕ್ತವಾದ ಅಸಮ್ಮತಿ, ಟೀಕೆ, ವಿರೋಧಗಳು 'ಸುಶೀಲೆ' ಕಾದಂಬರಿಯಲ್ಲೂ ವ್ಯಕ್ತವಾಗಿವೆ. ಇದು ಆ ಕಾಲಘಟ್ಟದ ಸಮಸ್ಯೆಯಾಗಿ ಕಾಣುವುದು. ಅಂದಿನ ಸ್ಥಿತಿಯಲ್ಲಿ ಬಹುತೇಕವಾಗಿ ಹೆಣ್ಣು ಮಕ್ಕಳು ಓದುವದನ್ನು ಖಂಡಿಸಿದ್ದಿದೆ ಮತ್ತು ಮಾನಸಿಕ ಹಿಂಸೆ ನೀಡಿದ್ದಿದೆ. ಸ್ತ್ರೀ ಶಿಕ್ಷಣವನ್ನು ಹೆಚ್ಚಿನ ಸ್ತ್ರೀಯರು ವಿರೋಧಿಸಿದ್ದರು ಎಂಬುದು ಮತ್ತೊಂದು ವಿಪರ್ಯಾಸವಾಗಿದೆ. ಆದರೆ ಅಲ್ಲಲ್ಲಿ ಪುರುಷರ ಉದಾರತನ ಶಿಕ್ಷಣದ ಬಗ್ಗೆ ಒಲವು, ನಿಲುವುಗಳು ಸ್ವಲ್ಪ ಮಟ್ಟಿಗಾದರೂ ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಿದ್ದಾರೆ. ಸ್ತ್ರೀ ಶಿಕ್ಷಣದ ಕಾಳಜಿ ಕಳಕಳಿಯನ್ನು ಒಳಗೊಂಡಂತೆ ಚಿತ್ರಣವಾದ ಇಂದಿರಾಬಾಯಿ ಇಂದಿರಾ, ನಭಾ, ಸುಶೀಲೆ, ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣ ಅಂದಿನ ಕಾಲದ ಸಾಮಾಜಿಕ ಸ್ಥಿತಿ ಕೌಟುಂಬಿಕ ಸ್ಥಿತಿಗೆ ಅನುಗುಣವಾಗಿ ಚಿತ್ರಣಗೊಂಡಿವೆ. ಅಂಬಾಬಾಯಿ ಮಗಳು ಇಂದಿರಾಬಾಯಿ, ರಾಮರಾಯನ ಮಗಳು ಶಾರದೆಯೊಂದಿಗೆ ತಪ್ಪಿಸಿ ಓದಲು ಹೋಗುವಳೆಂಬ ಭಾವನೆಯಿಂದ "ಓಹೋ! ಜಾತಿ ಕೆಡಿಸುವುದಕ್ಕೋಸ್ಕರ ಮ್ಲೆಂಚರಾದ ಪಾದ್ರಿಗಳು ಛಾಪಿಸಿದ ಪುಸ್ತಕಗಳನ್ನು ಓದುತ್ತಾಳಷ್ಟೆ ! ಇನ್ನು ಇದರಿಂದ ಕೇಡಿದೆ" ಎಂದು ಆಲೋಚಿಸುವ ತಾಯಿ ಹೃದಯ ಕೋಣೆಗೆ ಕರೆದು ಇಂದಿರೆಯೊಂದಿಗೆ ಸಂಭಾಷಿಸುವಳು.

"ಇಂದಿರೆ ನೀನು ಶಾರದೆಯ ಮನೆಗೆ ಹೋಗುವುದು ಸರಿಯೇ"

"ಊರ ಜನರು ಏನಾದರೂ ಹೇಳುವರಷ್ಟೇ?"

"ಊರ ಜನರ ಮಾತಿಗೆ ಕಿವಿ ಕೊಡಬಾರದೆಂದು ನೀನಲ್ಲವೇ ನನಗೆ ಹೇಳಿದ್ದು"

"ನೀನು ಓದುವ ಪುಸ್ತಕವೆಂಥಾದ್ದು"

"ನಾನು ನಿನ್ನೆಯವರೆಗೆ 'ಸ್ತ್ರೀ ಧರ್ಮನೀತಿ ಎಂಬ ಪುಸ್ತಕ ಓದಿದೆ. ಈ ಹೊತ್ತು 'ಈಸೋಪನ ನೀತಿ ಕಥೆಗಳು' ಎಂಬ ಪುಸ್ತಕ ಓದತೊಡಗಿದ್ದೆ"

"ಅವು ಪಾದ್ರಿಗಳು ಛಾಪಿಸಿದ ಪುಸ್ತಕಗಳಲ್ಲವೆ"?

" ಅದೇನೋ ನಾನರಿಯೆ?"

" ಅವು ಜಾತಿ ಕೆಡಿಸುವುದಕ್ಕೆ ಛಾಪಿಸಿದ ಪುಸ್ತಕಗಳು"

"ನಾನು ಓದಿದ ಪುಸ್ತಕದಲ್ಲಿ ಜಾತಿ ಕೆಡುವ ಸಂಗತಿ ಯಾವುದೂ ಇರಲಿಲ್ಲ. ಪುಸ್ತಕ ಓದಿದ ಮಾತ್ರದಿಂದಲೆ ಜಾತಿ ಹೋಗುವುದುಂಟೆ?"[೩೩]

ಎಂಬ ವಾದದಲ್ಲಿ ವಿದ್ಯಾಭ್ಯಾಸ ಪ್ರಾರಂಭದಲ್ಲಿ ಎಂಥ ಕಠಿಣ ಸ್ಥಿತಿಯಲ್ಲಿತ್ತು, ಅದರೊಂದಿಗೆ ಜಾತಿ ಧರ್ಮಗಳು ಬೆರೆತುಕೊಂಡಿದ್ದವು ಎಂಬ ಸಂಗತಿ ಮುಖ್ಯವಾಗಿ ಗಮನಿಸಿದಾಗ ಪಾಶ್ಚಿಮಾತ್ಯ ವೈಚಾರಿಕ ನೆಲೆಯಿಂದ ದೇಶೀಯತೆಯನ್ನು ವಿಂಗಡಿಸಿದ. ಟೀಕಿಸಿದ ರೀತಿ ಇಲ್ಲಿ ಚರ್ಚಿತ. ಸುಧಾರಣಾವಾದವನ್ನು ಬಲ್ಲಿದ ವರ್ಗದಿಂದ ಬಂದಿರುವ ಲೇಖಕರಿಗೆ ಅವರ ಪರಿಸರ ಸಹಜವಾಗಿಯೇ ಒದಗಿಸಿದ ವಿಷಯ ವಸ್ತುವಾಗಿ ಮೂಡಿಬಂದಿವೆ. ವೈಚಾರಿಕ ನೆಲೆಯನ್ನು ಸೂಚಿಸುತ್ತದೆ.

ವಿಧವೆಯಾದ ಬಳಿಕ ಸೀರೆ ಕುಪ್ಪುಸ ತೊಡುವುದಕ್ಕೂ, ಮುಂದೆ ಭಾಸ್ಕರರಾಯನೊಂದಿಗೆ ವಿವಾಹವಾಗುವುದಕ್ಕೂ ಓದಿಗೂ ಸಂಬಂಧವಿದೆ. ಇಡಿ ಕಾದಂಬರಿ ತೀರ್ಮಾನವೆ ಇಂದಿರಾಬಾಯಿ ಪರವಾಗಿರುವಂತಹದ್ದು. ಹುಸಿಯಾಗುವ ಜ್ಯೋತಿಷ್ಯ, ವಿಫಲವಾಗುವ ಪಂಡಿತರ ಔಷಧಿ, ಸಂತಮಂಡಲಿಯ ಧೂರ್ತತನ, ಹೊಸ ವಿದ್ಯಾವಂತನಾದ ಭಾಸ್ಕರರಾಯ ಕಮಲಪುರಕ್ಕೆ ಅಧಿಕಾರಿಯಾಗಿ ಆಗಮಿಸುವ ಎಲ್ಲಾ ವಿದ್ಯಮಾನಗಳ ವಿದ್ಯಾಭ್ಯಾಸದ ಪ್ರತಿಫಲ ಸೂಚಿಸುವವು. ಇದು ಸುಧಾರಣಾವಾದ ಬದಲಾವಣೆಯ ಮುನ್ನುಡಿ.

ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕಾದಂಬರಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಪ್ರತಿಪಾದಿಸಿದ ಕೃತಿ. ವಿಧವೆ ಇಂದಿರೆ ತನ್ನ ಮನದ ದುಃಖ ಶಮನಕ್ಕಾಗಿ ಕ್ರೈಸ್ತ ಪಾದ್ರಿಗಳ ನೀತಿ ಕಥೆಗಳನ್ನು ಓದುತ್ತಿದ್ದಳು. ಈ ರೀತಿಯ ಓದಿಗೆ ಸ್ವತಃ ತಂದೆ ತಾಯಿಯರು ವಿರೋಧಿಸುವರು. ಅದಕ್ಕೆ ಇಂದಿರಾಬಾಯಿ ಕಿರುಕುಳ ಸಹಿಸದೆ ಮನೆಯನ್ನು ತ್ಯಜಿಸಿ ಅಮೃತರಾಯ ಜಲಜಾಕ್ಷಿಯರ ಆಶ್ರಯ ಪಡೆಯುವಳು. ಅವರ ಪ್ರೋತ್ಸಾಹದಿಂದ ಸಾತಾರದಲ್ಲಿದ್ದು, ಮೆಟ್ರಿಕ್ಯೂಲೇಶನ್ ಪಾಸು ಮಾಡುವಳು. ಆಗ ಜಲಜಾಕ್ಷಿಯೊಂದಿಗೆ ಶಿಕ್ಷಣದ ತಪ್ಪು ಕಲ್ಪನೆ ಕುರಿತು ವಾದಿಸುತ್ತಾ "ತನ್ನ ಬುದ್ಧಿಗೆ ತೋರುವದೇನೆಂದರೆ ವಿದ್ಯೆ ಕಲಿಯುವದರಿಂದ ಯಾವೊಂದು ಕೇಡಿಲ್ಲ ಮಾತ್ರವಲ್ಲ, ಎಲ್ಲಾ ಕೇಡುಗಳಿಂದಲೂ ತಪ್ಪಿಸಿಕೊಳ್ಳಬಹುದು"[೩೪] ಎಂಬ ಗುಲ್ವಾಡಿಯವರ ತಾರ್ಕಿಕ ಮನೋಭಾವ. ಈ ಕಾಲದ ವಿದ್ಯಾವಂತ ವರ್ಗ, ಮಧ್ಯಮ ವರ್ಗದ ದೃಷ್ಟಿಕೋನ. ಪಾಶ್ಚಿಮಾತ್ಯ ವೈಚಾರಿಕತೆಯನ್ನು ಆಧರಿಸಿ, ವ್ಯಕ್ತಿವಾದ ತಾತ್ವಿಕ ನೆಲೆಯನ್ನು ಧರ್ಮ, ಶಿಕ್ಷಣಗಳ ಸಮೀಕರಣದೊಂದಿಗೆ ವ್ಯಾಖ್ಯಾನಿಸುವರು.

ಇಂದಿರಾ ಕಾದಂಬರಿಯ ರಮಾಕಾಂತನು ಸ್ತ್ರೀ ಶಿಕ್ಷಣ ಕುರಿತು ಇಂದಿರೆಯ "ಆಧುನಿಕ ಶಿಕ್ಷಣದಿಂದ ಈಗಿನ ತರುಣರ ಮೇಲೆ ದುಷ್ಪರಿಣಾಮಗಳಾಗುತ್ತವೆಂದು ಕೆಲವು ಗುಣಾವಗುಣ ನಿರೀಕ್ಷಕರ ಮತವಿರುವದೆಂದು ಕೇಳುತ್ತೇನೆ. ಇಂತಹ ಶಿಕ್ಷಣ ಹೊಂದಿದ ತರುಣ ತರುಣಿಯರಲ್ಲಿ ಆದ್ಯ ಕವಿಗಳು ವರ್ಣಿಸಿದಂತೆ ನಿರ್ಮಲಾಂತಃಕರಣದವರು ಸಿಕ್ಕುವರೇನು[೩೫] "ಅದಕ್ಕೆ ರಮಾಕಾಂತ ಉತ್ತರ ಅನೇಕರನ್ನು ಕಾಣಬಹುದು ಶಿಕ್ಷಣ ಮಂಡಿತಳಾಗಿ ಪಂಪಾಜಲದಂತೆ ನಿರ್ಮಲವಾದ ಭಾವದವಳಾದ

ಕುಲವಧುವೊಬ್ಬಳು ನನ್ನ ಹತ್ತಿರವೇ ಕುಳಿತಿರುವಳಲ್ಲ."[೩೬] ಈ ಮಾತು ಸ್ತ್ರೀ ಶಿಕ್ಷಣದ ಬದಲಾವಣೆಗೆ ಸಹಮತ ವ್ಯಕ್ತಪಡಿಸುವದು. ಸೂಕ್ಷ್ಮವಾಗಿ ಗಮನಿಸಿದರೆ ಇಂದಿರಾ ಕಾದಂಬರಿಯಲ್ಲಿ ಸ್ತ್ರೀ ಶಿಕ್ಷಣವು ಸುಧಾರಣಾವಾದದ ತಹಳದಿ ಎಂಬುದು ಒಳ ತಿರುಳು. ರಾಧಾಬಾಯಿ ಅವಳ ಸಹೋದರ ಬಾಷ್ಕಳ ಪಂತನ ನಡುವೆ ಸಾಕಷ್ಟು ಭಿನ್ನತೆಗಳು, ದ್ವಂದ್ವಗಳು ಕಾಣುವವು. ಅದರ ಅಂತರವನ್ನು ಧಾರ್ಮಿಕ ಸಂಘರ್ಷದಲ್ಲಿ ಗಮನಿಸಲಾಗಿದೆ.

ಪುರಾತನ ತತ್ವ-ಸತ್ವ ವಿಧಾನಗಳಲ್ಲಿ ಭಾಷ್ಕಳ ಪಂತನಿಗೆ ವಿಶ್ವಾಸವಿದ್ದಂತೆ ಕಾಣುವುದು. ವಿದ್ಯಾಭ್ಯಾಸ, ಸ್ತ್ರೀ ಪುರುಷರಲ್ಲಿ ಸ್ವೇಚ್ಛಾಚಾರ ಅನೀತಿ, ಅಂತರ ತರುವದೆಂಬವಾದ ಅವನದು. ಇದಕ್ಕವನು ಮುಂದುವರೆದು "ನಿಮ್ಮ ವಿದ್ಯಾ ಪ್ರಸಾರಣೆಗೂ ಜೋಡಿ ನಮಸ್ಕಾರವಿರಲಿ" ಎಂದು ಕುಹಕತೆ ನುಡಿದಿದ್ದಾನೆ. ಭಾಷ್ಕಳ ಪಂತನ ನಡೆ ದ್ವಂದ್ವಾತ್ಮಕವಾಗಿದೆ. ಒಂದೆಡೆ ಸುಧಾರಣಾವಾದಿ ನಿಲುವಿನ ಸುಶಿಕ್ಷಿತ ಹೆಣ್ಣುಗಳೊಂದಿಗೆ ಇದ್ದರೂ ಅದರಿಂದ ಆಗಾಗ್ಗೆ ವಿಮುಖ ಮಾಡುವನು. ವಿರೋಧಿಸಿದಂತೆ ಕಾಣುತ್ತಿರುವಾಗಲೆ ಇನ್ನೊಂದೆಡೆ ಅಕ್ಕನ ಆ ಬಗೆಯ ಕಾಯಕಕ್ಕೆ ಸಹಾಯ ಹಸ್ತವನ್ನು ಚಾಚುವನು.

ರಮಾಕಾಂತ ಇಂದಿರೆ ಸ್ತ್ರೀ ಶಿಕ್ಷಣ ಕುರಿತು ಕೇಳಿದ ಪ್ರಶ್ನೆಯ ಉತ್ತರಕ್ಕೂ ರಾಧಾಬಾಯಿ ಕೇಳಿದ ಪ್ರಶ್ನೆಯ ಉತ್ತರಕ್ಕೂ ಒಂದಿಷ್ಟು ವ್ಯತ್ಯಾಸ ಗುರುತಿಸಬಹುದು. ರಾಧಾಬಾಯಿ ಸ್ತ್ರೀ ಶಿಕ್ಷಣದ ಬಗ್ಗೆ "ಸ್ತ್ರೀಯರು ಉಚ್ಚಪದ್ಧತಿಯ ಶಿಕ್ಷಣ ಹೊಂದುವದು ಅವಶ್ಯ, ಅವರ ಸ್ವಾತಂತ್ರ್ಯಾತಿಶಯವು ಮಾತ್ರ ನನಗೆ ಸಹಿಸದು"[೩೭] ಇದು ರಮಾಕಾಂತನ ಉತ್ತರ ಹಿಡಿಸಲಿಲ್ಲ. ಕಾರಣ ಅವರು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿದ್ದಳು. ಭಾರತೀಯ ಸ್ತ್ರೀತ್ವ ಪಾಲಿಸುವ ಇಂದಿರಾ ಸ್ತ್ರೀಯರ ನಡೆ, ನುಡಿ, ಆಚಾರ, ವಿಚಾರ ಬಿಂಬಿಸುವಂತಿದೆ. ಸಂಪ್ರದಾಯ ಶೀಲದೊಂದಿಗೆ ಅಧುನಿಕತೆಯನ್ನು ಹೊಸೆದುಕೊಂಡ ಸುಧಾರಣೆಯನ್ನು ಪ್ರಗತಿಪರ ಧೋರಣೆಯನ್ನು ಕಾಣುವುದು.

ಮಧ್ಯಮ ವರ್ಗದವರು ಇಂಗ್ಲಿಷ್ ಶಿಕ್ಷಣವನ್ನು ಬಯಸುತ್ತಿದ್ದರು. ಆದರೆ ಅವರ ಸಂಸ್ಕೃತಿಯನ್ನು ವಿರೋಧಿಸುತ್ತಿದ್ದರು. ಈ ಮನೋಭಾವ ಈಗಲೂ ಅಲ್ಲಲ್ಲಿ ಮುಂದುವರೆದಿದೆ. ಇಂಗ್ಲಿಷ್ ಶಿಕ್ಷಣ ಭಾರತೀಯರಲ್ಲಿ ಮಹತ್ವದ ಪರಿಣಾಮವನ್ನು ಬೀರಿತು. ಹಿಂದಿನ ಕಾಲದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪದ್ಧತಿ ರೂಢಿಯಲ್ಲಿತ್ತು. ಸುಧಾರಣವಾದಿ ಕಾದಂಬರಿಗಳಾದ 'ಇಂದಿರಾ' ಮತ್ತು 'ಮಾಡಿದ್ದುಣ್ಣೋ ಮಹಾರಾಯ' ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಆಕ್ಷೇಪಿಸಿದ್ದು ಕಾಣುವುದು. ಕೆರೂರ ಅವರ 'ಇಂದಿರಾ' ಕಾದಂಬರಿಯಲ್ಲಿ ಬರುವ ಸಂಗತಿಗಳನ್ನು ಹಾಗೂ ಇತರರ ಕಾದಂಬರಿಗಳಲ್ಲಿ ಬರುವ ಸಂಗತಿಗಳನ್ನು ಕುರಿತು ಕೀರ್ತಿನಾಥ ಕುರ್ತಕೋಟಿಯವರು "ಎಂ.ಎಸ್. ಪುಟ್ಟಣ್ಣನವರು ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯನ್ನು ಬಿಟ್ಟರೆ ಉಳಿದೆಲ್ಲ ಕಾದಂಬರಿಗಳು ಪಾಶ್ಚಿಮಾತ್ಯ ಕಾದಂಬರಿಗಳಿಂದ,

ಇಲ್ಲವೆ ಭಾರತದ ಇತರ ಭಾಷೆಯಲ್ಲಿಯ ಕಾದಂಬರಿಗಳಿಂದ ಸ್ಫೂರ್ತಿ ಪಡೆದ ಕೃತಿಗಳಾಗಿವೆ" ಎಂಬ ಅಭಿಪ್ರಾಯ ಸತ್ಯವಾದುದ್ದಾದರೂ ಇದೇ ಕಾಲಘಟ್ಟದಲ್ಲಿ ಬರುವ ನಂಜನಗೂಡು ತಿರುಮಲಾಂಬರವರನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ನಂತರ ಬರುವ ನಂಜನಗೂಡು ತಿರುಮಲಾಂಬ ಸ್ತ್ರೀ ಶಿಕ್ಷಣ ಕುರಿತು 'ಮಾತೃನಂದಿನಿ ಕಾದಂಬರಿಯಲ್ಲಿ ಸ್ತ್ರೀ ಶಿಕ್ಷಣ ವಿರೋಧಿಯಾದ ಪುರುಷ ವ್ಯವಸ್ಥೆಯ ವಿರುದ್ಧ ಕಿಡಿಕಾರಿದ್ದಾಳೆ. "ಬುದ್ಧಿ ತಿಳಿಯದ ಹುಡಗಿಯರು ತಾವಾಗಿ ಬಂದು ತಮ್ಮನ್ನು ಸಂಸಾರ ಚಕ್ರಗತಿಗೆ ಈಗಾಗಲೆ ಬಲಿಯಾಗಿ ಒಪ್ಪಿಸಿ ಬಿಡಬೇಕೆಂದು ನಿಮ್ಮನ್ನು ಕಾಡಲಿಲ್ಲವಷ್ಟೇ? ಹಾಗಾದರೆ ಅವರನ್ನೇಕೆ ಮೂರ್ಖರಂತೆ ಮಾಡಬೇಕು? ಬಾಲ್ಯ ಶಿಕ್ಷಣದಲ್ಲಿ ಅವರಿಗೆ ತಕ್ಕಷ್ಟು ವಿದ್ಯಾವಿವೇಚನಾದಿಗಳಿಗೆ ಅವಕಾಶವನ್ನೇಕೆ ಕೊಡಬಾರದು! ಆ ನಿಮ್ಮ ಗೃಹಿಣಿಯರು ನಿಮ್ಮ ಮನೆಗಳಲ್ಲಿ ಆಡಲಿಕ್ಕೆ ಮಾತ್ರವೇ ಗೊತ್ತಾಗಿ ಬಂದಿರುವ ತೊತ್ತುಗಳೆಂದೇ ತಿಳಿದಿರುವಿರಲ್ಲವೇ"?[೩೮] ಎಂದು ಪ್ರಶ್ನಿಸುವ ಪ್ರಶ್ನೆ ಪುರುಷ ಪ್ರಧಾನ ಸಮಾಜದಲ್ಲಿ ಶಿಕ್ಷಣವಿಲ್ಲದೆ ಅಡುಗೆ ಮನೆಯಿಂದ ನಡುಮನೆಗೂ ಬರದೆ ಒದ್ದಾಡಿದ ಚಿತ್ರಣದಂತೆ ಕಾಣುವುದು. ಮುಂದುವರೆದು 'ನಂದಿನಿ' "ವಿದ್ಯೆಯಿಂದ ಕೇಡೆಂದೂ ಉಂಟಾಗದು. ಬಾಲ್ಯದಿಂದ ಮಕ್ಕಳಿಗೆ ಸುಶಿಕ್ಷಾರೂಪವಾದ ವಿದ್ಯಾಭ್ಯಾಸ ಮಾಡಿಸಿದರೆ ಅದರಿಂದ ಅನಂತ ಸುಖವುಂಟು"[೩೯] ಸ್ತ್ರೀಯಾಗಿ ತಿರುಮಲಾಂಬ ಆರಂಭ ಕಾಲದಲ್ಲಿ ಸ್ತ್ರೀ ಶಿಕ್ಷಣದ ಬೆಂಬಲಕ್ಕೆ ನಿಂತರು, ಅದನ್ನು ಸ್ವಾಗತಿಸಿದರು.

ಮಾತೃನಂದಿನಿ ಕಾದಂಬರಿಯಲ್ಲಿ ಸಂಪ್ರದಾಯವೆ ಹೆಚ್ಚೆಂದು ವಾದಿಸಿದ ಪಂಡಿತವರ್ಗ ನಂದಿನಿ ಮೂಲಕ ಸೋಲಿಸಿದ್ದು ಸ್ತ್ರೀಪರ ಧೋರಣೆ. ಆ ಕಾಲಘಟ್ಟದಲ್ಲಿ ಸಾಂಪ್ರದಾಯಿಕ, ಸಮಾಜವು ಸ್ತ್ರೀಯರ ಪಾಂಡಿತ್ಯವನ್ನು, ಪ್ರತಿಭೆಗಳನ್ನು ಅಷ್ಟು ಸರಳವಾಗಿ ಒಪ್ಪುವಂತಿರಲಿಲ್ಲ. ಪ್ರಾಚೀನ ವೈದಿಕ ಸಂಸ್ಕೃತಿಯ ವಿರುದ್ಧ ಯಾವುದೇ ರೀತಿಯ ಧ್ವನಿ ಎತ್ತುವಂತಿರಲಿಲ್ಲ. "ನಂದಿನಿಯಂತೆ ನಮ್ಮ ಹುಡುಗಿಯರು ತಮ್ಮ ಇಂಗಿತವರಿಯದೇ ದೊಡ್ಡವರಿಗೂ ಚಿಕ್ಕವರಿಗೂ ಉಪನ್ಯಾಸ ಕೊಡಕೂಡದು. ತಾವು ಸಂಪಾದಿಸಿದ ಜ್ಞಾನವನ್ನು ಅನುಷ್ಠಾನಕ್ಕೆ ತಂದು ಇತರರಿಗೆ ಆದರ್ಶಪ್ರಾಯರಾಗಿರಲಿ"[೪೦] ಈ ನಿಬಂಧನೆಗಳ ಮಧ್ಯೆ ಸನಾತನ ಧರ್ಮದ ತಿರುಳನ್ನು ಒಪ್ಪಿಕೊಂಡು ಮಾಡಿದ ಮೇಲ್ಸ್ತ್ರೀ ಸುಧಾರಣೆಯಾಗಿದ್ದರೂ ಕೆಲವು ಆಕ್ರೋಶಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಎಂಬುದು ಮುಖ್ಯ ವಿಚಾರ. ಮಾತೃ ನಿಂದನೆಯಲ್ಲಿ ಆ ರೀತಿ ಪ್ರತಿಪಾದಿಸಿದರೆ ಅದೇ ಕಾದಂಬರಿಯಲ್ಲಿ ಮತ್ತೊಂದು ರೀತಿ ಪ್ರತಿಪಾದನೆ ಇದೆ. "ಹಾಳು ಓದು ಬರಹ ಎಲ್ಲಿ ಹೆಂಗಸರು ! ಅವರು ಮಾಡುವುದೆಲ್ಲ ಕೆಟ್ಟ ಕೆಲಸವೆ !! ಹೊರಗೆ ಮಾತ್ರ ಸಜ್ಜನರಂತೆ ಕಾಣುತ್ತಿರುವರು."[೪೧] ಶಿಕ್ಷಣದ ಮಹತ್ವಾಕಾಂಕ್ಷೆ ಜೊತೆ ದ್ವಂದ್ವತೆ ಕಾಣುವುದು. ಹಲವು ಸಂದರ್ಭಗಳಲ್ಲಿ ಈ ಕಾದಂಬರಿಯು ವಿದ್ಯಾಭ್ಯಾಸದ ಬಗ್ಗೆ ಅಸಮ್ಮತಿಯನ್ನು ಸೂಚಿಸಿದ್ದು ಅಂದಿನ ಸಮಸ್ಯೆಯೂ ಹೌದು.

ಓದುತ್ತಾ, ಬರೆಯುತ್ತಾ ಕಾಲ ಕಳೆಯುವ ಸಂದರ್ಭ ಅಂದಿನ ಕಾಲಕ್ಕೆ ಹೊಸದು. ಕೆಲವರಂತೂ ಇದನ್ನು ವಿಚಿತ್ರ ರೀತಿಯಲ್ಲಿ ನೋಡುತ್ತಿದ್ದರು. ಅಂತಹ ಸಮಸ್ಯೆಯನ್ನು ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಸ್ವತಃ ಎದುರಿಸಿರಬಹುದಾದ ಲೇಖಕಿ ಕಾದಂಬರಿಯ ವಿಷಯ ವಸ್ತುವಾಗಿ ಹೆಣೆದಿದ್ದಾರೆ. ಪರಟೆಯಿಂದ ಉಂಟಾಗಬಹುದಾದ ಹಾನಿಯನ್ನು 'ಮಾತೃನಂದಿನಿ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಸುಶೀಲೆ ಕಾದಂಬರಿಯನ್ನು ಅಂದಿನ ಕನ್ನಡ ಓದುಗರು ಬರಮಾಡಿಕೊಂಡ ರೀತಿ ಸ್ವಾರಸ್ಯಕರವಾಗಿದೆ. ರಚಿಸಿದವರು ಸ್ತ್ರೀ, ವಿಷಯ ವಸ್ತು ಸ್ತ್ರೀ ಸಮಸ್ಯೆಗಳು ಎಂಬುದು ಸಮಾಧಾನದ ಸಂಗತಿ. ಇದಕ್ಕೆ "ಇಷ್ಟು ಕಾಲದ ನಂತರವಾದರೂ ಸುಶಿಕ್ಷಿತ ಕರ್ನಾಟಕ ಸ್ತ್ರೀ ಮಂಡಳಿಯ ನಿಜ ವಿದ್ಯಾಭ್ಯಾಸದ ಇಚ್ಚಿತ ಫಲವು ಪರಿಪಕ್ವ ಸ್ಥಿತಿಗೆ ಬಂದುದನ್ನು ಕಂಡು ಆತ್ಮಾನಂದಗೊಂಡೆನು"[೬೨] ಪಾತ್ರ ಒಳಬಂಧಗಳು, ಬೆಳವಣಿಗೆ, ಸ್ಥಿತ್ಯಂತರಗಳು ಇಲ್ಲಿ ಮುಖ್ಯವಾಗುವುದಿಲ್ಲ. ಸತೀತ್ವದ ಆದರ್ಶಗಳ ಸಾಕಾರಮೂರ್ತಿತ್ವ, ಜೊತೆಗೆ ಖಳಪಾತ್ರಗಳು ಕೂಡಾ ಸರಳವೆಂಬಂತೆ ಬಿಂಬಿಸಲ್ಪಟ್ಟಿವೆ. ಕಾದಂಬರಿ ಧರ್ಮಾವತಾರಿ ಪಾತ್ರ ನಿರ್ವಹಿಸಿದಂತಿದೆ. ವೃತ್ತಾಂತ ಪತ್ರಿಕೆ "ಸ್ತ್ರೀಯರು ಇಷ್ಟು ಚೆನ್ನಾಗಿ ಗ್ರಂಥಗಳನ್ನು ಬರೆದಿರುವ ವಿಷಯದಲ್ಲಿ ಸಂತೋಷಿಸದಿರಲಾರೆನು"[೬೩] ಎಂಬ ಅಭಿಪ್ರಾಯ ಅತಿಶಯೋಕ್ತಿಯಾಗಿದೆ.

ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ', ಬೋಳಾರು ಬಾಬುರಾಯರ 'ವಾಗ್ದೇವಿ' ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣದ ಬಗ್ಗೆ ಪ್ರಸ್ತಾಪ ಇಲ್ಲದಿರುವುದಕ್ಕೆ ಅವರ ಸಾಂಪ್ರದಾಯಿಕ ಮನೋಧೋರಣೆ ಕಾರಣ ಇರಬಹುದು. ಎಂ.ಎಸ್. ಪುಟ್ಟಣ್ಣನವರು ಶಿಕ್ಷಣದ ಬಗ್ಗೆ ಕಾಳಜಿಯನ್ನು ಸಾಂಪ್ರದಾಯಿಕ ಪದ್ಧತಿಯನ್ನು ವಿಡಂಬಿಸುವುದರ ಮೂಲಕ ತೋರಿಸಿದ್ದಾರೆ. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಒಲೈಸಿಕೊಂಡು ಬೋಧನೆ ಮಾಡುವುದು ಅಧ್ಯಾಪಕನ ಜವಾಬ್ದಾರಿಯಾಗಿರಬೇಕು ಎಂಬ ನೀತಿಯವರದು. ಅವರ ಧೋರಣೆ, ಸಂಸ್ಕೃತಿನಿಷ್ಠವಾದ್ದು. ಅದಕ್ಕೆ ಮುಖ್ಯ ಸಮಸ್ಯೆ ಎತ್ತಿಕೊಳ್ಳದೆ ಸೀತಮ್ಮನ ಪಾತಿವ್ರತ್ಯ, ಅತ್ತೆ-ಸೊಸೆಯರ ಕಲಹಗಳತ್ತ ಗಮನ ಹರಿಸಿದ್ದಾರೆ. ಆ ಶೈಕ್ಷಣಿಕ ಜವಾಬ್ದಾರಿಯಿಂದ ಹೊರಗುಳಿದಂತಿದೆ. ಪುಟ್ಟಣ್ಣನವರು ಅತಿಯಾಗಿ ಪಾಶ್ಚಿಮಾತ್ಯ ಪ್ರಭಾವಕ್ಕೆ ಒಗ್ಗಿಕೊಳ್ಳದಂತೆ ಕಂಡಿದೆ.

ಈ ಕಾಲದ ಕಾದಂಬರಿಗಳು-ಇಂಗ್ಲಿಷ್ ಶಿಕ್ಷಣದಿಂದ ಪ್ರಭಾವಿತರಾಗಿ ಸಮಾಜ ಸ್ಥಿತ್ಯಂತರಗೊಳ್ಳುವಾಗ ಸಂಪ್ರದಾಯವಾದಿಗಳು ಪ್ರತಿಕ್ರಿಯಿಸುವ ರೀತಿಯಿಂದ ಅವರು ತಮ್ಮತನವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಡೆಸಿದ ಪ್ರಯತ್ನವೆಂದು ತಿಳಿದು ಬರುವುದು. ಹೀಗಾಗಿ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಕಂಡಾಚಾರದ ಸನಾತನಿಗಳು ಮತ್ತು ಪ್ರಗತಿವಾದಿಗಳ ಮಧ್ಯೆ ವಾದವನ್ನು ಕಾಣುತ್ತೇವೆ. ಈ ವಾದವು ಪ್ರಾರಂಭದ ಎಲ್ಲಾ ಕಾದಂಬರಿಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಈ ವಿಚಾರಗಳು ಬಂದಿವೆ.

ಆರಂಭಿಕ ಕಾಲದ ಬಹುತೇಕ ಕಾದಂಬರಿಕಾರರ ಧೋರಣೆ ಪ್ರಗತಿಪರವಾಗಿದ್ದರೂ, ಭಾರತೀಯ ಸಂಸ್ಕೃತಿಯ ಚೌಕಟ್ಟಿನೊಳಗೆ ಹೊಸ ಬದುಕು ನಿರ್ಮಾಣವಾಗಬೇಕೆಂಬ ಆಂತರಿಕ ಒತ್ತಾಸೆ ಇದ್ದುದನ್ನು ಕಾಣಬಹುದು. ಇಲ್ಲಿರುವ ಅಂತಹ ಸಂಘರ್ಷ ತೀವ್ರವಾಗಿರದೆ ಸೌಮ್ಯ ಸ್ವರೂಪದ್ದಾಗಿರಲು ಕಾರಣಗಳು ಹಲವು.

ಗುಲ್ವಾಡಿಯವರ 'ಇಂದಿರಾಬಾಯಿ' ಕಾದಂಬರಿಯಲ್ಲಿ 'ಇಂದಿರಾಬಾಯಿ' ತಂದೆ, ತಾಯಿಯವರು ಆಕೆಗೆ 'ಇಂಗ್ಲಿಷ್ ಭಾಷೆ' ಗಣಿತ, ಲೋಕಚರಿತೆ ಮುಂತಾದ ವಿಷಯಗಳನ್ನು ಕಲಿಯಲು ಅವಕಾಶವನ್ನು ಕೊಡುತ್ತಿರಲಿಲ್ಲ. ಈ ಕುರಿತು ಆಕೆ ಪ್ರಸ್ತಾಪಿಸಿದ್ದಿದೆ. ಇಂದಿರಾಬಾಯಿ ಮೆಟ್ರಿಕ್ಯೂಲೇಶನ್ ಪಾಸಾದಾಗ ಅವಳ ತಂದೆ ತಾಯಿಯರು ಟೀಕೆ, ವಿಡಂಬನೆಗಳನ್ನು ಮಾಡಿದರು. ಜಲಜಾಕ್ಷಿ, ಅಮೃತರಾಯ ಇಂದಿರಾಬಾಯಿ, ಭಾಸ್ಕರರಾಯ ಇವರೆಲ್ಲರೂ ಸ್ಥಿತ್ಯಂತರಗೊಳ್ಳುವ ಸಮಾಜದೊಂದಿಗೆ ಭಾರತೀಯ ಚೌಕಟ್ಟಿನೊಳಗೆ ಪ್ರತಿಕ್ರಿಯಿಸಿರುವುದು ಕಾದಂಬರಿಕಾರರ ಸಂಸ್ಕೃತಿಪರ ನಿಲುವನ್ನು ಸೂಚಿಸುತ್ತದೆ. "ಹೊಸ ಕಾಲ ಹೊಸ ಪರಿಸ್ಥಿತಿ, ಆಲೋಚನೆಗಳಿಗೆ ಹೊಂದಿಕೊಳ್ಳುವದರ ಮೂಲಕ ವ್ಯಕ್ತಿ ಹಾಗೂ ಸಮಾಜ ಜೀವನ ಹೆಚ್ಚು ಸುಖಮಯವಾಗುವದಕ್ಕೆ ಅಗತ್ಯವಾದ ಪ್ರಯೋಜನ ಮೂಲವಾದ ವ್ಯವಹಾರ, ವಿವೇಕವನ್ನು ಕಾದಂಬರಿ ಪ್ರಧಾನವಾಗಿ ಪ್ರತಿಪಾದಿಸುತ್ತದೆ"[೪೪] ಎಂಬ ವಿಚಾರವನ್ನು ಪ್ರಾರಂಭದ ಹೆಚ್ಚಿನ ಕಾದಂಬರಿಗಳಿಗೆ ಅನ್ವಯಿಸಬಹುದಾಗಿದೆ. ಕಾದಂಬರಿಯಲ್ಲಿನ ಆದರ್ಶ ಪಾತ್ರಗಳು ಸಂಸ್ಕೃತಿಯಲ್ಲಿನ ರೂಢಿ, ಅಂಧ ಮೌಲ್ಯಗಳನ್ನು ಪ್ರಶ್ನಿಸುತ್ತವೆ. "ನಾನು ಓದಿದ ಪುಸ್ತಕದಲ್ಲಿ ಜಾತಿ ಕೆಡುವ ಸಂಗತಿ ಯಾವುದು ಇಲ್ಲ. ಪುಸ್ತಕ ಓದಿದ ಮಾತ್ರದಿಂದಲೇ ಜಾತಿ ಹೋಗುವುದುಂಟೆ"[೪೫] ಎಂಬ ಪ್ರಶ್ನೆ ವೈಚಾರಿಕತೆಯ ಮೊಳಕೆ, ಇದು ಆಧುನಿಕ ಶಿಕ್ಷಣದ ಫಲ. ಕಾದಂಬರಿಯಲ್ಲಿ ಭಾಸ್ಕರರಾಯರು ತನ್ನ ಶಿಕ್ಷಣದ ಸಾಫಲ್ಯವನ್ನು ಬಾಲವಿಧವೆ ಇಂದಿರಾಬಾಯಿಯನ್ನು ಮದುವೆಯಾಗುವುದರ ಮೂಲಕ ತೋರಿಸಿಕೊಳ್ಳುವನು. ಇಂತಹ ಆದರ್ಶಗಳು, ಪ್ರಗತಿಶೀಲ ಮನೋಧೋರಣೆಯ ಪಾತ್ರಗಳು ಕಾದಂಬರಿಯಲ್ಲಿ ಮೂಡಿಬಂದಿವೆ.

ಇಂದಿರಾಬಾಯಿಯಂತೆ 'ಇಂದಿರಾ' ಕಾದಂಬರಿಯಲ್ಲಿನ ರಮಾಕಾಂತ ಸ್ತ್ರೀಯರ ಶಿಕ್ಷಣವನ್ನು ಪ್ರೋತ್ಸಾಹಿಸುತ್ತಾನೆ. "ವಿದ್ಯಾ ಪ್ರಸರಣೆಯು ಹೆಚ್ಚಾದುದರಿಂದ ಜನರು ಪ್ರಶಸ್ತವಾದ ವಿಚಾರದವರೂ ಸನ್ಮಾರ್ಗಿಗಳೂ ಆಗಿರುವರೆಂದು ನಾನು ನಂಬುತ್ತೇನೆ."[೪೬] ಈ ಮಾತಿನಿಂದ ಸಮಾಜದ ಏಳಿಗೆ ಶಿಕ್ಷಣದಿಂದ ಸಾಧ್ಯವೆಂಬುದನ್ನು ದೃಢಪಡಿಸಿದೆ. ಈ ಹಿಂದೆ ಪರಿಚಯಿಸಿದ ಮರಾಠಿ ಮತ್ತು ಬಂಗಾಲಿ ಪ್ರಾಂತಗಳ ಸುಧಾರಣಾ ವಿಚಾರಗಳ ಪ್ರಭಾವ ಕನ್ನಡಿಗರ ಮೇಲೆ ತೀವ್ರ ಪ್ರಭಾವ ಬೀರಿತು. ಅಂತೆಯೇ ಸಮಾಜದ ಆಗುಹೋಗುಗಳಿಗೆ ಅಂದಿನ ಕನ್ನಡ ಕಾದಂಬರಿ ರಚಿಸಿದವರು ಪ್ರತಿಕ್ರಿಯೆಯ ರೂಪದಲ್ಲಿ ಸಾದರ ಪಡಿಸಿದ್ದು ಮುಖ್ಯವಾಗಿದೆ. ಗುಲ್ವಾಡಿಯವರು ಕಾದಂಬರಿ ರಚಿಸಿದ ಕಾಲದಲ್ಲಿದ್ದ ಸಮಾಜಕ್ಕಿಂತ

ವಾಸುದೇವಾಚಾರ್ಯರ ಕಾಲದಲ್ಲಿಯ ಸಮಾಜ ಹೆಚ್ಚಿನ ಸುಧಾರಣೆ ಕಂಡಿದ್ದಿತು. ಆದ್ದರಿಂದ ಇಂದಿರಾಬಾಯಿಯಲ್ಲಿ ಬರುವಷ್ಟು ಸಾಂಪ್ರದಾಯಿಕ ಗಂಭೀರ ಸಮಸ್ಯೆಗಳು 'ಇಂದಿರಾ'ದಲ್ಲಿ ಚಿತ್ರಿತವಾಗಿಲ್ಲ. 'ಇಂದಿರಾ' ದಲ್ಲಿ ಚಿತ್ರಿತವಾದಂತೆ ನಂಜನಗೂಡು ತಿರುಮಲಾಂಬರವರ ನಭಾ, ಸುಶೀಲೆ, ವಿರಾಗಿಣಿಗಳಲ್ಲಿ ಚಿತ್ರಿತವಾಗಿರುವ ರೂಢಿ, ಬಂಧಗಳು ಕೂಡಾ ಸಡಿಲಗೊಂಡಂತಿವೆ. ಅವು ಲೇಖಕರ ಮಿತಿಗಳೆಂದು ಇಟ್ಟುಕೊಂಡರೂ 'ಇಂದಿರಾಬಾಯಿ' ಮತ್ತು 'ವಾಗ್ದೇವಿ' ಇತರ ಕಾದಂಬರಿಗಳಿಗಿಂತ ಭಿನ್ನವಾಗಿವೆ. ಅಲ್ಲಿ ಗಹನವಾದ ಸಮಸ್ಯೆಗಳೇ ಕೇಂದ್ರ ಸ್ಥಾನಪಡೆದುಕೊಂಡರೆ, ಕೆರೂರ ವಾಸುದೇವಾಚಾರ್ಯರು ನಂಜನಗೂಡು ತಿರುಮಲಾಂಬರವರು ಸಾಮಾಜಿಕ ವಿಚಾರಗಳಿಗೆ ಪ್ರಾಶಸ್ತ್ಯವನ್ನು ನೀಡಿದ್ದಾರೆ. ಇಂದಿರಾದಲ್ಲಿ ಮುಖ್ಯವಾಗಿ ಪ್ರಣಯದ ಸಂಗತಿಗಳು ಇದ್ದರೆ, ನಭಾ, ಸುಶೀಲೆ, ವಿರಾಗಿಣಿಯಲ್ಲಿ ಪ್ರಣಯ ಮಿಕ್ಕಿದ ದುಃಖದ ಸಂಗತಿಗಳಿವೆ. "ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಹೊಸ ಬಾಳು ರೂಢಿಸುವ ಬಯಕೆ ಕಾದಂಬರಿಯಲ್ಲಿ ಕಾಣುತ್ತದೆ. ಹಿಂದು ಸಂಸ್ಕೃತಿ ಹಿರಿತವನ ಒಪ್ಪುವ ಕಾದಂಬರಿಕಾರರು ನಾಯಕನ ಮೂಲಕ ಕ್ರಿಶ್ಚಿಯನ್ ಧರ್ಮವನ್ನು ಖಂಡಿಸುತ್ತಾರೆ. ರೂಢ ಸಂಪ್ರದಾಯಗಳನ್ನು ತಿರಸ್ಕರಿಸುವ ಹೊಸ ಬದಲಾವಣೆಗಳನ್ನು ಒಪ್ಪುವ ನಾಯಕನನ್ನು ಕೀರ್ತಿಸುವ ಉದ್ದೇಶ ಕಾದಂಬರಿಯಲ್ಲಿದೆ"[೪೭] ಎಂಬ ಅಭಿಪ್ರಾಯವನ್ನು ಸತ್ಯನಾರಾಯಣರು ಇಂದಿರಾ ಕಾದಂಬರಿ ಕುರಿತು ಪ್ರತಿಪ್ರಕ್ರಿಯಿಸಿದ್ದಾರೆ. ಗಮನಿಸಿ ನೋಡಿದರೆ ಇದು ಸತ್ಯ ಕೂಡಾ ಹೌದು.

ಸುಧಾರಣಾವಾದದ ಹಿನ್ನೆಲೆಯಲ್ಲಿ ಸ್ತ್ರೀಯರ ಬದುಕು ಉತ್ತಮಪಡಿಸುವ ಪ್ರಯತ್ನ ಕಾದಂಬರಿಯಲ್ಲಿ ಶಿಕ್ಷಣ ಎಂಬ ಪರಿಧಿಯ ಹಿನ್ನೆಲೆಯಿಂದ ಜರುಗಿದೆ. ಇಂದಿರಾ ಕಾದಂಬರಿಯಲ್ಲಿ ದೇವಯಾನಿ ವಿಧವೆಯಾದ ಬಳಿಕ ಆಕೆಯ ತಂದೆ ಸುಬ್ಬರಾಯರು ಇವಳಿಗೆ ಉಚ್ಚ ಶಿಕ್ಷಣ ಕೊಟ್ಟು, ಚಿತ್ರಕಲೆ ಮುಂತಾದ ಉಪಯುಕ್ತವಾದ ಶಿಕ್ಷಣವನ್ನಾದರೂ ಕೊಡಿಸಿದ. ಮುಖ್ಯವಾಗಿ ಈ ಕಾದಂಬರಿಕಾರರಿಗೆ ಇರುವ ಕಾಳಜಿಯೇ, ಸ್ತ್ರೀ ಶಿಕ್ಷಣ, ರಮಾಕಾಂತ ಬಹು ಭಾಷಾ ಪಂಡಿತ! "ರಮಾಕಾಂತನಿಗೆ ಆತನ ತಂದೆಯು ಒಳ್ಳೆಯ ಪ್ರಯತ್ನಪೂರಕವಾಗಿ ವಿದ್ಯೆ ಕೊಡಿಸಿದ್ದನು. ಸಂಸ್ಕೃತ, ಹಿಂದಿ, ಮರಾಠಿ ಮುಂತಾದ ಭಾಷೆಗಳು ರಮಾಕಾಂತನಿಗೆ ಅವಗತವಾಗಿದ್ದು, ಆಯಾ ಭಾಷೆಯಲ್ಲಿಯ ಮಹತ್ವವಾದ ಗ್ರಂಥಗಳ ಪರ್ಯಾಲೋಚನೆಯನ್ನು ಅವನು ಮಾಡಿದ್ದನು."[೪೮] ಇದು ತಂದೆಯೊಬ್ಬ ಮಗನ ಶಿಕ್ಷಣಕ್ಕೆ ಮಹತ್ವ ನೀಡಿದ್ದು ಅಂದಿನ ಕಾಲದ ಶಿಕ್ಷಣದ ಮಹತ್ವವನ್ನು ಸಾರಿದಂತಿದೆ.

'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ ಎಂ.ಎಸ್. ಪುಟ್ಟಣ್ಣನವರು ಶಿಕ್ಷಣದ ಬಗೆಗೆ ಕಾಳಜಿಯನ್ನು ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ವಿಡಂಬಿಸುವುದರ ಮೂಲಕ ಚಿತ್ರಿಸಿದ್ದಾರೆ. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಒಲಿಸಿಕೊಂಡು ಬೋಧನೆ ಮಾಡುವುದು

ಅಧ್ಯಾಪಕನಾದವನ ಜವಾಬ್ದಾರಿಯಾಗಿರಬೇಕೆಂಬ ನೀತಿಯನ್ನು ತಿಳಿಸಿದ್ದಾರೆ. ಇಲ್ಲಿ ವಿರೋಧಿ ನಿಲುವು ವ್ಯಕ್ತವಾಗುತ್ತದೆ. ಅವರ ಶಿಕ್ಷಣ ಧೋರಣೆ ಸಂಸ್ಕೃತಿ ನಿಷ್ಠವಾದದ್ದು. ಹೀಗಾಗಿ ಇಲ್ಲಿ ಮುಖ್ಯ ಸಮಸ್ಯೆಗಳನ್ನು ಎತ್ತಿಕೊಳ್ಳದೆ ಸೀತಮ್ಮನ ಪಾತಿವ್ರತ್ಯ, ಅತ್ತೆ ಸೊಸೆಯಂದಿರ ಕಲಹ ವಿಷಯಗಳತ್ತ ಗಮನ ಸೆಳೆದು ಜವಾಬ್ದಾರಿಯಿಂದ ನುಣುಚಿಕೊಂಡಂತೆ ಕಾಣುವುದು. ಪುಟ್ಟಣ್ಣನವರು ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗದೇ ಉಳಿದಿದ್ದು ಕೂಡಾ ಅವರ ಧೋರಣೆಯಲ್ಲಿ ಮೈಸೂರು ಅರಸು ಮನೆತನದ ಪ್ರಭಾವ ಬೀರಿದಂತೆ ಕಾಣುವುದು.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳನ್ನು ಪರಿಶೀಲಿಸಿದಾಗ ಕಾದಂಬರಿಕಾರರಿಗೆ ಶಿಕ್ಷಣದ ಬಗ್ಗೆ ಇದ್ದ ಕಾಳಜಿ, ಕಳಕಳಿ ವಿಶಿಷ್ಟವಾದದ್ದು. ಈ ಕಾದಂಬರಿಗಳಲ್ಲಿ ಪುರುಷ ಶಿಕ್ಷಣವನ್ನು ಸಾಮಾಜಿಕ ಸಮಸ್ಯೆಯಾಗಿ ಯಾರೂ ಚಿತ್ರಿಸಿಲ್ಲ. ಆದರೆ ಸ್ತ್ರೀ ಶಿಕ್ಷಣದ ಬಗ್ಗೆ ವಿಶೇಷವಾಗಿ ಚರ್ಚಿಸಿದ್ದಾರೆ. ಕೌಟುಂಬಿಕ ಮಟ್ಟದಲ್ಲಿ ಸುಧಾರಣೆಯನ್ನು ಕಂಡುಕೊಳ್ಳುವ ಮೂಲಕ ಸಮಾಜ ಬದಲಾವಣೆಯಾಗುತ್ತದೆ ಎಂಬ ಖಚಿತ ಅಭಿಪ್ರಾಯವನ್ನು ಲೇಖಕರು ಹೊಂದಿದ್ದರೆಂಬುದು ಇದರಿಂದ ಸ್ಪಷ್ಟವಾಗುವುದು.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಾದ 'ಇಂದಿರಾಬಾಯಿ', 'ಇಂದಿರಾ', 'ನಭಾ', 'ಸುಶೀಲೆ', 'ವಿರಾಗಿಣಿ' ಮುಂತಾದ ಕಾದಂಬರಿಗಳಲ್ಲಿ ಶಿಕ್ಷಣದ ಸಾಫಲ್ಯವನ್ನು ಲೇಖಕರು ಕಂಡುಕೊಂಡಿರುವುದು, ಆ ಕಾಲದ ಪ್ರಚಲಿತ ಶಿಕ್ಷಣ ಸಮಸ್ಯೆಗೆ ಪರಿಹಾರ ದೊರಕಿಸಿಕೊಟ್ಟ ಬಗೆಯಾಗಿದೆ. ಇಲ್ಲಿ ಲೇಖಕರ ಸಾಂಪ್ರದಾಯಿಕ ನಿಷ್ಠೆ ಮತ್ತು ಚಾರಿತ್ರಿಕ ಸಂದರ್ಭ, ಉಳಿದ ವರ್ಗಗಳ ಶಿಕ್ಷಣದ ಬಗೆಗೆ ಚರ್ಚಿಸದಿರಲು ಮುಖ್ಯ ಕಾರಣವಾಗಿವೆ.

ಈ ಮೇಲಿನ ಕಾದಂಬರಿಗಳಿಗಿಂತ ವಿಭಿನ್ನ ಶೈಕ್ಷಣಿಕ ನಿಲುವನ್ನು ಲಕ್ಷ್ಮಣ ಭೀಮರಾವ್ ಗದಗಕರವರು ವ್ಯಕ್ತಪಡಿಸಿದ್ದಾರೆ. ಸ್ತ್ರೀ ಶಿಕ್ಷಣದ ಬಗ್ಗೆ 'ಚಂದ್ರಪ್ರಭಾ' ಕಾದಂಬರಿಯಲ್ಲಿ ಸ್ತ್ರೀಯರಿಗೆ ಸ್ಪಷ್ಟವಾದ ವಿಚಾರವಂತಿಕೆ ಇರುವುದಿಲ್ಲ. ಕೆಲವರು ಹೀಗೆ ಹಾಗೂ ಇರುವುದರಿಂದ ಕೇವಲ ಸ್ತ್ರೀಯರನ್ನು ದೂಷಿಸುವುದು ಸರಿಯಲ್ಲ. ಅಜ್ಞಾನ ಅವರ ನೈಸರ್ಗಿಕ ಗುಣವೂ ಅಲ್ಲ. ತಂದೆ ತಾಯಿಗಳು ಅವರಿಗೆ ಯೋಗ್ಯ ಶಿಕ್ಷಣ ಕೊಡದಿರುವದೇ, ಎಂದು ಚಂದ್ರಪ್ರಭಾ ಕೇಳಿದರೆ. ಮನಮೋಹನ ಅದು ನೈಸರ್ಗಿಕ ಗುಣವಲ್ಲ ಎಂಬ ಉತ್ತರ ಮಹತ್ವದ್ದು. ಚಂದ್ರಪ್ರಭಾ ಕೇಳುವ ಪ್ರಶ್ನೆ ಸ್ತ್ರೀಯರಿಗೆ ವಿಚಾರ ಕಡಿಮೆ ಎಂದು ಹೇಳುತ್ತಾರಲ್ಲ ಇದು ನಿಜವೇ ಎಂಬ ಮಾತು ಸ್ತ್ರೀ ಪ್ರತಿಕ್ರಿಯೆಯೂ ಮನ್ನಣೆ ಕಳೆದುಕೊಂಡಂತಿದೆ. ಸ್ತ್ರೀ ಶಿಕ್ಷಣ ಕುರಿತು "ಸುಮ್ಮನೆ ಓದು ಬರಹ ಬಂತೆಂದರೆ ಅದನ್ನು ಶಿಕ್ಷಣವೆನ್ನಲಾಗದು."[೪೯] ಇಲ್ಲಿ ಎತ್ತುವ ಪ್ರಶ್ನೆ ಶಿಕ್ಷಣದ ನೆಲೆ-ಬೆಲೆ ಕುರಿತಾದ ತರ್ಕ ಕಾಣುವುದು. ವೈಚಾರಿಕ ಕ್ರಾಂತಿ ಮತ್ತು ಸಮಾಜ ಸುಧಾರಣೆಯನ್ನು ಬಯಸುವುದು. ಇಲ್ಲಿ ವಿದ್ಯೆಯೆಂದರೆ ಕೇವಲ ಓದು ಬರಹ ಅಲ್ಲ. ಅದು ವ್ಯಕ್ತಿಯ

ಬುದ್ಧಿ, ಮನಸ್ಸನ್ನು ವೃದ್ಧಿಗೊಳಿಸುವಂತಹದ್ದು. ಅಂತೆಯೇ ಅಕ್ಷರ ವಿದ್ಯೆಯನ್ನು ಬಲ್ಲ ನಂದಿನಿ ವಿದ್ಯೆಯಿಂದಾಗುವ ಪ್ರಯೋಜನಗಳನ್ನು ಹೇಳುತ್ತಾ, ಇನ್ನೂ ಮೂಢ ಸಂಪ್ರದಾಯಬದ್ಧ ಪಂಡಿತರನ್ನು ತಲೆ ತಗ್ಗಿಸುವಂತೆ ಮಾಡಿದ್ದಾಳೆಂಬುವುದನ್ನು ಮಾತ್ರ ನಂದಿನಿಯಿಂದ ನಂಜನಗೂಡು ತಿರುಮಲಾಂಬ ಕೂಡಾ ಪ್ರತಿಪಾದಿಸಿದ್ದಾಳೆ. ಮಾತೃನಂದಿನಿ ಕಾದಂಬರಿಯಲ್ಲಿ ನಂದಿನಿ 'ವಿದ್ಯೆಯಿಂದ ಕೇಡೆಂದಿಗೂ ಉಂಟಾಗದು. ಬಾಲ್ಯದಿಂದ ಮಕ್ಕಳಿಗೆ ಸುಶಿಕ್ಷಾ ರೂಪವಾದ ವಿದ್ಯಾಭ್ಯಾಸ ಮಾಡಿಸಿದರೆ ಅವರಿಂದ ಅನಂತ ಸುಖವುಂಟು."[೫೦] ವಿದ್ಯೆಯು ಕೆಡುವ ವಸ್ತುವಲ್ಲ. ಕೇಡು ಉಂಟಾಗದು. ಈ ರೀತಿ ಕಾರ್ಯಕಾರಣದ ವಸ್ತು ವಿಶ್ಲೇಷಣೆಯಿದೆ.

ಆಧುನಿಕ ವಿದ್ಯಾಕ್ರಮ ಸುಧಾರಣಾ ಪರವಾದುದು. ಮುದ್ರಣಗಳು ಸಾಂಪ್ರದಾಯಿಕ ಓದಿನ ಕ್ರಮವನ್ನು ಬದಲಾಯಿಸಿವೆ. ಪಠ್ಯಗಳನ್ನು ಓದುವ, ಅವುಗಳು ಕೇಳುಗರು ಗ್ರಹಿಸಿದ ರೀತಿಗೂ ಆಧುನಿಕ ಕಾಲದಲ್ಲಿ ಪರಿಭಾವಿಸುವದಕ್ಕೂ ಬಹಳಷ್ಟು ವ್ಯತ್ಯಾಸ ಕಾಣುವುದು. ಎಲ್ಲಾ ಓದು, ಸಮುದಾಯದ ಓದುಗಳು ಒಂದೆ ಆಗಿರಲಿಕ್ಕಿಲ್ಲ. ಸಮಾಜದಿಂದ ಸಮಾಜಕ್ಕೆ ವಿಭಿನ್ನ. ಆ ಕಾಲದ ಕೃತಿಗಳ ಮೌಲ್ಯ ಈ ಕಾಲದ ಮೌಲ್ಯಗಳು ಭಿನ್ನವಾಗಿರುವಂತೆ ಕಾಣುವುದು. ಓದುವ ಕ್ರಮಗಳು ಸಮುದಾಯ, ವರ್ಣ, ವರ್ಗ, ಜಾತಿ ಸಾಮಾಜಿಕ ಗುಂಪುಗಳು ಸಾಮಾಜಿಕ ಸ್ಥಾನಮಾನಗಳು ಅವಶ್ಯಕತೆಗಳಿಗೆ ಅನುಗುಣವಾಗಿ ಪಠ್ಯ ಅರ್ಥೈಸುವ ಪರಿಪಾಟಲುಗಳಿದ್ದಂತೆ ಇವೆ. ಅದಕ್ಕೆ ಅನುಗುಣವಾಗಿ ಅಧುನಿಕ ವಿದ್ಯಾಭ್ಯಾಸ ಮತ್ತು ಮುದ್ರಣ ಸೌಲಭ್ಯಗಳು ಓದುವ ಕ್ರಮವನ್ನು ಬದಲಾಯಿಸಿದವು. ವಿದ್ಯಾಭ್ಯಾಸ ಅನ್ಯ ವರ್ಗಗಳ ಸದಸ್ಯರಿಗೆ ಓದುವ ಶಕ್ತಿಯನ್ನು ಒದಗಿಸಿಕೊಟ್ಟರೆ, ಸಗಟು ಮುದ್ರಣ ಸೌಲಭ್ಯದಿಂದಾಗಿ ಪುಸ್ತಕಗಳು ಎಲ್ಲರ ಕೈಗೆಟುಕುವಂತಾದವು. ಇದರಿಂದಾಗಿ ಓದುವ ಮನೋಸ್ಥಿತಿಯ ಜನರಿಗೆ ಪುಸ್ತಕಗಳು ದೊರೆತ ತರುವಾಯ ಓದಿನ ವಿಸ್ತಾರ ವಿಸ್ತರಿಸಿಕೊಂಡಿತು.

ಇಲ್ಲಿ ಮೊದಲ ಸ್ವತಂತ್ರ ಕನ್ನಡ ಕಾದಂಬರಿಗಳ ಓದುಗ ವರ್ಗವನ್ನು ವಿಶ್ಲೇಷಿಸಲು ಗಮನಹರಿಸಲಾಗಿದೆ. ಮೊದಲ ಕಾದಂಬರಿಗಳ ಆಧುನಿಕ ವಿದ್ಯಾವಂತ ವರ್ಗದ ಆಸೆ, ಆಕಾಂಕ್ಷೆ, ಹಾರೈಕೆ ಮತ್ತು ತಲ್ಲಣಗಳು ವಿಶ್ಲೇಷಣೆಗೊಂಡು ಸಾಮಾಜಿಕ ಅಗತ್ಯ ಪೂರೈಸಿದವು. ಆಧುನಿಕ ವಿದ್ಯಾಭ್ಯಾಸದ ಮುನ್ನಡೆ ಮತ್ತು ಮುದ್ರಣ ಸೌಲಭ್ಯದಿಂದಾಗಿ ನಿಯತಕಾಲಿಕೆಗಳು ಮತ್ತು ಪುಸ್ತಕ ಪ್ರಕಟಣೆಯ ಕಾರ್ಯ ಚುರುಕುಗೊಂಡಿತು. ವಿದ್ಯಾವಂತವರ್ಗ 'ಆಧುನಿಕತ್ವ' ರೂಪಿಸುವಲ್ಲಿ ಪತ್ರಿಕೆಗಳು, ಪುಸ್ತಕಗಳು ನಿರ್ವಹಿಸಿದ ಪಾತ್ರ ಮೆಚ್ಚುವಂತಹದ್ದು. ಮುದ್ರಣ ಮತ್ತು ಹೊಸ ವಿಚಾರಗಳು 'ಕಾದಂಬರಿ'ಗೆ ಪ್ರೇರಣೆ ಒದಗಿಸಿದವು. ಹತ್ತೊಂಭತ್ತು ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಈ ಕಾದಂಬರಿಗಳು ಗದ್ಯ ಕಥನ ಶೈಲಿಯ ಕಾದಂಬರಿಗಳು ಮುಂಚೂಣಿಗೆ ಬಂದವು. ಓದಿನ ವಿಸ್ತಾರವನ್ನು ವಿಸ್ತರಿಸಿದವು.

ಮುದ್ರಣಯಂತ್ರಗಳಾಗಮನ ಮತ್ತು ಪತ್ರಿಕೆಗಳು:

ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳೆರಡಲ್ಲೂ ಶಿಕ್ಷಣವನ್ನು ಪ್ರೋತ್ಸಾಹಿಸಿತು. ವಸಹಾತು ವಿದ್ಯಾಪ್ರಸಾರದ ಹೊಣೆಯನ್ನು ಕಂಪನಿಯ ಮೇಲೆ ಹೊರಿಸಿತು. ಇಂಗ್ಲಿಷ್ ಶಿಕ್ಷಣ ಕ್ರಮವನ್ನು ಕೊಡಬೇಕೆ ಇಲ್ಲವೆ ಪ್ರಾದೇಶಿಕ ಶಿಕ್ಷಣ ನೀಡಬೇಕೆ ಎಂಬ ವಿಚಾರದಲ್ಲಿ ಗೊಂದಲಗಳಿದ್ದವು. ಅದು ಪ್ರಗತಿಯ ಅಭಿವೃದ್ಧಿಗೆ ಭಾಷೆ ಮುಖ್ಯ ಎಂಬ ಅರಿವು ಅವರಿಗೆ ಗೊತ್ತಾಗಿತ್ತು.

ಪ್ರಾದೇಶಿಕ ಭಾಷಾ ಮಾಧ್ಯಮದ ಶಿಕ್ಷಣ ಕ್ರಮವು ಇಂಗ್ಲಿಷ್ ವಿದ್ಯಾಕ್ರಮದ ಪ್ರಭಾವದಡಿ ರೂಪುಗೊಂಡ ಆಧುನಿಕ ಶಿಕ್ಷಣ ಕ್ರಮವೆ ಆಗಿತ್ತು. ಎಂಬ ಸಂಗತಿ ನೆನೆಯಲೇಬೇಕು. "ಇಂಗ್ಲಿಷ್ ಸಾಮ್ರಾಜ್ಯದ ಪ್ರಭಾವಕ್ಕಿಂತ ಇಂಗ್ಲಿಷ್ ಸಾಹಿತ್ಯದ ಪ್ರಭಾವ ದೊಡ್ಡದು ಎನ್ನುವುದನ್ನು ಸ್ವತಃ ಮೆಕಾಲೆ ಮನಗಂಡಿದ್ದ. ಭಾರತಕ್ಕೆ ದೊಡ್ಡ ಪ್ರಮಾಣದಲ್ಲಿ ಇಂಗ್ಲಿಷ್ ಪುಸ್ತಕಗಳು ಆಮದಾದದವು. ಇವುಗಳ ಪೈಕಿ ಇಂಗ್ಲಿಷ್ ಕಾದಂಬರಿಗಳು ಇಂಗ್ಲಿಷ್ ವಿದ್ಯಾವಂತರ ನಡುವೆ ಜನಪ್ರಿಯವಾಗಿದ್ದವು."[೫೧] ಇದಕ್ಕೆ ಮೂಲ ಕಾರಣ ಮುದ್ರಣ ಕ್ಷೇತ್ರದಲ್ಲಾದ ಆಮೂಲಾಗ್ರ ಬದಲಾವಣೆಯೇ. ಈ ಮುದ್ರಣ ಕ್ಷೇತ್ರವು ಮೊದಲು ಮಂದಗತಿಯ ಬದಲಾವಣೆಗೆ ಕಾರಣವಾದಂತೆ ಕಾಣುವುದು. ಮಂದಗತಿ ಬೆಳವಣಿಗೆಯನ್ನು ಶ್ರೀನಿವಾಸ ಹಾವನೂರು ಈ ರೀತಿ ಗುರುತಿಸಿದ್ದಾರೆ.

"ಭಾರತದಲ್ಲಿ ಮುದ್ರಣದ ಚರಿತ್ರೆಯು ಹದಿನಾರನೆಯ ಶತಮಾನದ ಮಧ್ಯಭಾಗದಿಂದ ಆರಂಭವಾಗುವುದಾದರೂ ಅದು ಗರಿಗೆದರಿದ್ದು ಹದಿನೆಂಟನೆ ಶತಮಾನದ ಅನಂತರವೇ.[೫೨] ಮುದ್ರಣದ ಆರಂಭಿಕ ಹೆಜ್ಜೆಗಳು ಮಿಷನರಿ ಕಾರ್ಯಚಟುವಟಿಕೆಯಿಂದ ಕಾಣುವವು. ಕನ್ನಡದಲ್ಲಿ ಮುದ್ರಣ ಚಟುವಟಿಕೆಯು ಬಂಗಾಳದ ಶ್ರೀರಾಮಪುರದಿಂದ ಪ್ರಕಟವಾದ ತರುವಾಯ ನಂತರದಲ್ಲಿ ಲಂಡನ್ ವೆಸ್ಲಿಯನ್, ಬಾಸೆಲ್ ಮಿಷನ್ ಮಿಶನರಿಗಳು ಬೈಬಲ್ ಅನುವಾದವನ್ನು ದೇಶಿಯ ಗ್ರಂಥಗಳನ್ನು ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದು ಇತಿಹಾಸ. ಸಾಹಿತ್ಯ ಪ್ರೇರಣೆಗೆ ಕಾರಣ.

ಕನ್ನಡದಲ್ಲಿ ೧೮೯೫ರವರೆಗೂ ಮುದ್ರಣ ಪರಿಸ್ಥಿತಿ ಉತ್ತಮವಾದದು ಆಗಿರಲಿಲ್ಲ. ಹೆಚ್ಚು ಹೆಚ್ಚು ಕನ್ನಡ ಪುಸ್ತಕಗಳು ಪ್ರಕಟವಾಗುತ್ತಿರಲಿಲ್ಲ. "ಈ ಹೊತ್ತಿನಲ್ಲಿ ಭಾರತ ಸರಕಾರದ ವಾರ್ಷಿಕ ವರದಿಗಳ ಪ್ರಕಾರ ಪ್ರತಿವರ್ಷ ಪ್ರಕಟವಾಗುತ್ತಿದ್ದ ಕನ್ನಡ ಪುಸ್ತಕಗಳ ಸಂಖ್ಯೆ ೨೦೦ನ್ನು ದಾಟಿರಲಿಲ್ಲ. ಕನ್ನಡ ಸಾಹಿತ್ಯ ಚಟುವಟಿಕೆಯ ಉತ್ಸಾಹಹೀನ ಪರಿಸ್ಥಿತಿಯನ್ನು ಕುರಿತು ಪ್ರತಿ ವಾರ್ಷಿಕ ವರದಿಯಲ್ಲೂ ಕಾಣಬಹುದೆಂದು ಸರಕಾರಿ ವರದಿಗಾರರು ಅಭಿಪ್ರಾಯ ಪಟ್ಟಿದ್ದಾರೆ."[೫೩] ಅಂದಿನ ದಿನಕ್ಕೆ ಇದು ದೊಡ್ಡ ಸಂಖ್ಯೆ. ಇಂದಿನ ದಿನಕ್ಕೆ ಅದು ಸಣ್ಣದಾಗಿ ಕಾಣುವುದು: ಆ ದಿನಗಳಲ್ಲಿ ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲೂ ಗ್ರಂಥೋದ್ಯಮದ ಸ್ಥಿತಿಯು ಅಂತಹ ಆಶಾದಾಯಕವಾಗಿರಲಿಲ್ಲ. ಕಾರಣ ಕನ್ನಡ ಮಾತನಾಡುವ ಜನ,

ಪ್ರದೇಶಗಳು ಬೇರೆ ಬೇರೆ ಆಡಳಿತಗಳಲ್ಲಿ ಹಂಚಿ ಹೋಗಿರುವುದು ಕಾರಣವಾಗಿರಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಬಹುದು. ಈ ಕಾಲಕ್ಕೆ ಆಧುನಿಕ ವಿದ್ಯಾಭ್ಯಾಸ ಕ್ರಮ, ಹೊಸಭಾಷೆ, ಸಾಹಿತ್ಯ, ಪುಸ್ತಕ, ಆಲೋಚನೆಗಳ ಸಂಪರ್ಕದಿಂದಾಗಿ ಗದ್ಯಸಾಹಿತ್ಯ ಜನಪ್ರಿಯವಾಗಿದ್ದಿತು. ಇಂಗ್ಲಿಷ್ ಬಲ್ಲ ಜನರು ಇಂಗ್ಲಿಷ್ ಕಾದಂಬರಿಗಳನ್ನು ಜನಪ್ರಿಯವಾದವುಗಳನ್ನು ಓದಲಾರಂಭಿಸಿದರು.

ಹೊಸ ಸಾಹಿತ್ಯದ ಪರಿಕಲ್ಪನೆಗೆ ಅನುಗುಣವಾಗಿ ಕಥೆ–ಕಾದಂಬರಿ ಪ್ರಕಟಿಸುವ ವಿದ್ಯಮಾನ ಕಾಣಿಸುವುದು. ಕಥನ ಪ್ರಧಾನ ನೆಲೆಯ ರಚನೆಗಳು ಮುದ್ರಣದಲ್ಲಿ ೧೯ನೇ ಶತಮಾನದಲ್ಲಿ ಕಾಣಿಸಿದವು. "೧೯೦೧ ಕರ್ನಾಟಕ ಗ್ರಂಥಮಾಲೆಯ ಸಂಚಿಕೆಯೊಂದರಲ್ಲಿ ಪ್ರಕಟವಾದ ಪುಸ್ತಕಗಳ ಪಟ್ಟಿಯೊಂದು ಹೀಗಿದೆ.*

೧. ಸುಮತಿ ಮದನಕುಮಾರ
೨. ಜೀವಂಧರ ಚರಿತ್ರೆ
೩. ಸತ್ಯವತಿ ಚರಿತ್ರೆ
೪. ಹರ್ಷ ಚರಿತ್ರೆ
೫. ಕನ್ಯಾವಿತಂತು
೬. ಈಜಿಪ್ತರ ಚರಿತ್ರೆ
೭. ಪ್ರಿಯ ಭಾರ್ಯೆ
೮. ಯುರೋಪ್ಯರ ಚರಿತ್ರೆ
೯. ಆರ್ಯಕೀರ್ತಿ
೧೦. ಇಂದಿರಾಬಾಯಿ
೧೧. ನಗೆಗಡಲು
೧೨. ಕಾದಂಬರಿ ಕಥೆ
೧೩. ವಿಷವೃಕ್ಷ
೧೪. ಇಂದಿರಾ
೧೫. ಮಾಧವೀಲತಾ
೧೬. ಚಂಡಮಾರುತ
೧೭. ಆರ್ಯಕುಲಾಂಗನಾ
೧೮. ಧರ್ಮಶರ್ಮಾಭ್ಯುದಯ[೫೪]

ಹೀಗೆ ನಾಟಕ, ಚರಿತ್ರೆ, ಪದ್ಯ ಸಂಗ್ರಹ, ಕಾದಂಬರಿ, ಅನುವಾದಗಳೆಂಬ ವಿವಿಧ ಪ್ರಕಾರದ ಪಟ್ಟಿ ಪ್ರಕಟಣೆಗೆ ಆಣಿಯಾದಂತೆ ಇಲ್ಲಿ ಕಾಣುವುದು. ಇದಕ್ಕೆ ಮುಖ್ಯ ಕಾರಣ 'ಕಥನ' ಪ್ರಕಾರಕ್ಕೆ ಸಂದಿದ್ದು ಸಂತೋಷದ ಸಂಗತಿಯೇ ಸರಿ.

ಮಿಷನರಿಗಳ ಪುಸ್ತಕ ವಿತರಣೆ ಕೇಂದ್ರಗಳಲ್ಲದೆ ವೈಯಕ್ತಿಕ ಬುಕ್ ಡಿಪೋಗಳೂ ಈ ಶತಮಾನದ ಕೊನೆಯ ಹೊತ್ತಿಗೆ (ಸುಮಾರು ೧೮೮೮) ತಲೆ ಎತ್ತಲಾರಂಭಿಸಿದವು. ಇಂತಹ ಸುಮಾರು ೧೬ ಪುಸ್ತಕ ವಿತರಣಾ ಕೇಂದ್ರ ಮತ್ತು ವ್ಯಕ್ತಿಗಳ ಹೆಸರುಗಳನ್ನು ಹಾವನೂರರು ಒದಗಿಸಿದ್ದಾರೆ"[೫೫] ಮುದ್ರಣ ಮತ್ತು ಗ್ರಂಥೋದ್ಯಮದ ಬೆಳವಣಿಗೆಯು ಶಿಕ್ಷಣದ ಬೆಳವಣಿಗೆಯೊಂದಿಗೆ ಸಂಬಂಧ ಹೊಂದಿದ್ದು

ಮರೆಯಲಾರದ ಸಂಗತಿ. ಮೊದಮೊದಲು ವ್ಯಾಕರಣ, ಕ್ರಮಿಕ ಪುಸ್ತಕ, ಪತ್ರಗಳು ಶಿಕ್ಷಣ ವ್ಯವಸ್ಥೆಯ ಅಂಗಗಳಾಗಿ ಪ್ರಕಟಗೊಂಡವು. ಈ ಸಮಯದಲ್ಲಿ ಬಂದ ಪ್ರಾಥಮಿಕ ಶಿಕ್ಷಣವು ಓದುವ ವರ್ಗವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿತು. ಹೊಸ ಬಗೆಯ ಶಿಕ್ಷಣ ಕ್ರಮ ಆಡಳಿತ ಶೈಲಿ ಮತ್ತು ಇತರ ಚಾರಿತ್ರಿಕ ಬದಲಾವಣೆಗಳು ಹೊಸ ಓದುವ ವರ್ಗದ ಆರಂಭಕ್ಕೆ ಕಾರಣವಾದವು. ಇಪ್ಪತ್ತನೆಯ ಶತಮಾನದ ಆರಂಭ ಹಂತದಲ್ಲೂ ವಾಚನಾಲಯಗಳು ಹಾಗೂ ಅವುಗಳ ಮಹತ್ವದ ಪಾತ್ರವನ್ನು ಪ್ರಾಥಮಿಕ ಶಾಲೆಗಳು ನಿರ್ವಹಿಸುತ್ತಿದ್ದವು. ಶಿವರಾಮ ಕಾರಂತರು ಹೀಗೆ ಅವಗಾಹನೆಗೊಳಪಡಿಸಿದ್ದು ಕಾಣುವುದು. "ಅವರು(ಪಿ.ಶಿವರಾಮಯ್ಯನವರು) ನಮಗಾಗಿ 'ಕರ್ನಾಟಕ ಪುಸ್ತಕ ಭಂಡಾರ'ವೊಂದನ್ನು ತೊಡಗಿ ಅಂದಿನ ಕನ್ನಡ ಬರಹಗಳ ಸವಿಯನ್ನು ಮೊದಲ ಬಾರಿಗೆ ಉಣಿಸತೊಡಗಿದರು. ವೆಂಕಟಾಚಾರ್ಯರು, ಪುಟ್ಟಣ್ಣಯ್ಯ, ವಾಸುದೇವಾಚಾರ್ಯ, ತಿರುಮಲಾಂಬಾ ಮತ್ತು ಚಾಮರಾಜ ನಗರದ ವೆಂಕಟರಮಣ ಶಾಸ್ತ್ರಿ ಮೊದಲಾದವರ ಬರಹಗಳನ್ನು ನಾನು ಓದಿದ್ದು ಆಗಲೇ. ಆಗ ನಾನು ಎರಡನೇ ಫಾರ್ಮಿನಲ್ಲಿ ಓದುತ್ತಿದ್ದೆ. ಕೃಷ್ಣ ಸೂಕ್ತಿ – ಕಾದಂಬರಿ ಸಂಗ್ರಹ, ಸತ್ಯವಾದಿ ಮೊದಲಾದ ಕನ್ನಡ ಪತ್ರಿಕೆಗಳನ್ನು ನಾವು ತರಿಸಿ ಓದುತ್ತಿದ್ದೆವು."[೫೬] ಈ ಹೇಳಿಕೆ ಪ್ರಾತಿನಿಧಿಕ ಹೇಳಿಕೆಯಂತೆ ಪರಿಗಣಿಸಬಹುದು. ಆದರೆ ಕೇವಲ ಸಾಕ್ಷರತೆ ಒಂದೇ ಒಂದು ಓದುಗವರ್ಗದ ಬೆಳವಣಿಗೆಗೆ ಕಾರಣವಾಗದು. ಆದ್ದರಿಂದ ಓದನ್ನು ವಿಶ್ಲೇಷಣೆ ಮಾಡಲು ಆರ್ಥಿಕ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರಣಗಳು ಓದುಗ ವರ್ಗದ ವಿಶ್ಲೇಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವವು.

ಹತ್ತೊಂಬತ್ತನೆಯ ಶತಮಾನದ ಕೊನೆ ಹಾಗೂ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಪ್ರಕಟವಾದ ಕಾದಂಬರಿಗಳ ಪ್ರಸರಣದ ತಾತ್ವಿಕ ನೆಲೆ ಮತ್ತು ಪ್ರಸಾರದ ರೀತಿಯು ಸಂಕೀರ್ಣವಾದದ್ದು. ಅದಕ್ಕೆ ಶ್ರಮಿಸಿದ ವ್ಯಕ್ತಿಗಳು, ಸಂಘ ಸಂಸ್ಥೆಗಳು ಮತ್ತು ಪತ್ರಿಕೆಗಳ ವಿವೇಚನೆಯಿಂದ ಅರಿಯಬಹುದು. ಈ ಸಂಗತಿಯನ್ನು ಅರಿಯಲು ಈಗಾಗಲೇ ಅಧ್ಯಯನ ಆಗಿರುವುದು. ಶ್ರೀನಿವಾಸ ಹಾವನೂರ, ರಾ.ಯ. ಧಾರವಾಡಕರ, ಕೃಷ್ಣಮೂರ್ತಿ ಕಿತ್ತೂರ, ಎಚ್.ಎಸ್. ಸುಜಾತಾ, ಹರಿಕೃಷ್ಣ ಭರಣ್ಯರವರ ಪ್ರೌಢ ಸಂಶೋಧನ ಕೃತಿಗಳನ್ನು ಗಮನಿಸಿದಾಗ ಈ ಅಂಶ ಪರಿಪೂರ್ಣವೆನಿಸುವುದು. ಈ ಮಹನೀಯರ ಜೊತೆ, ಕೆಲಸ ಮಾಡಿದ ವ್ಯಕ್ತಿ, ಸಂಘ, ಸಂಸ್ಥೆ, ಪತ್ರಿಕೆಗಳ ಪಾತ್ರವನ್ನು ಶ್ರೀನಿವಾಸ ಹಾವನೂರವರು ಅತ್ಯಂತ ಸಮರ್ಥ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಉತ್ತರ ಕರ್ನಾಟಕವನ್ನು ಪ್ರತಿನಿಧಿಸಿದಂತೆ ಕೃಷ್ಣಮೂರ್ತಿ ಕಿತ್ತೂರ, ರಾ.ಯ.ಧಾರವಾಡಕರರು ಹಾಗೂ ಮೈಸೂರು ಪ್ರದೇಶಕ್ಕೆ ಸಂಬಂಧ ಪಟ್ಟಂತೆ ಎಚ್.ಎಸ್. ಸುಜಾತಾ, ಸಮಂಜಸವಾಗಿ ಅಧ್ಯಯನ ನಡೆಸಿ ನಿರೂಪಿಸಿದ್ದಾರೆ. ಹೀಗಿದ್ದಾಗ ಸಾಮಾನ್ಯವಾಗಿ ಆ ಕಾಲಕ್ಕೆ ಸಾಹಿತ್ಯ ಪ್ರಸಾರವನ್ನು ಪ್ರಚಾರಪಡಿಸುತ್ತಿದ್ದವರು ಯಾರು? ಅಂತಹ ಬಗೆಯ ಸಾಮಾಜಿಕ ಅಗತ್ಯವೇನಿತ್ತು?

ಓದು ವರ್ಗದ ಪ್ರತಿಕ್ರಿಯೆ ಹೇಗಿತ್ತು ಎಂಬ ಸಂಗತಿಗಳು ಕಾದಂಬರಿಯ ಅರ್ಥವತ್ತತೆ, ಪ್ರಸಾರಕರು, ಓದುವರ್ಗದ ಆಂತರಿಕ ಸಂಬಂಧ ಬಿಡಿಸಲಾರದ್ದು ಎಂಬಂತೆ ಕಾಣುವುದು.

ಈ ಕಾಲದ ಕನ್ನಡಪರ ಸಂಘಟನೆಗಳು(ಪತ್ರಿಕೆ, ಸಂಘ, ಸಂಸ್ಥೆ) ನಿರ್ದಿಷ್ಟವಾಗಿ ಕಾರ್ಯನಿರ್ವಹಿಸಿದ ಸಂದರ್ಭಗಳು ಅಲ್ಲಲ್ಲಿ ಕಾಣುವವು. ಕರ್ನಾಟಕ ವಿದ್ಯಾವರ್ಧಕ ಸಂಘ ವಾಗ್ಭೂಷಣ, ಕರ್ನಾಟಕ ಗ್ರಂಥಮಾಲೆ ಆನಂದವನ, ಸದ್ಬೋಧ ಚಂದ್ರಿಕೆಗಳು ಕಾದಂಬರಿಗಳ ಸಂಗ್ರಹದೊಂದಿಗೆ ಇತರೆ ಪತ್ರಿಕೆಗಳು ಸಂಬಂಧ ಪಡೆದಂತೆ ಕಾಣುವವು. ಈ ಸಂಸ್ಥೆಗಳು ಮತ್ತು ಪತ್ರಿಕೆಗಳು ಕೆಲವು ವ್ಯಕ್ತಿಗಳೊಂದಿಗೆ ಸಂಬಂಧವನ್ನು ಪಡೆದದ್ದು ಗುರುತಿಸಬಹುದು. ಆರಂಭ ಕಾಲದ ಬಹುತೇಕ ಕಾದಂಬರಿಗಳು ಪ್ರಚುರಗೊಂಡಿದ್ದು, ಕನ್ನಡದ ಮೊದಲ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಳ ಬೆಳವಣಿಗೆ ಮತ್ತು ಕಾದಂಬರಿಗಳ ಬೆಳವಣಿಗೆಗಳು ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿವೆ. ವಾಸ್ತವದಲ್ಲಿ ಹೊಸದಾಗಿ ಹುಟ್ಟಿದ ಕನ್ನಡ ಸಂಸ್ಥೆಗಳು ಮತ್ತು ಪತ್ರಿಕೆಗಳು ಹೊಸ ವಿದ್ಯಾವಂತ ವರ್ಗದ ಸಾಹಿತ್ಯಕ ಅಗತ್ಯವನ್ನು ಒತ್ತಿ ಹೇಳಿವೆ.

ಬಿ. ವೆಂಕಟಾಚಾರ್ಯರು ಭಾಷಾಭಿವೃದ್ಧಿಯನ್ನು ಕುರಿತು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಈಗ್ಗೆ ಪ್ರಾಯಶಃ ಐವತ್ತು ವರ್ಷಗಳಿಂದ ವಂಗಭಾಷೆಯ ಸಾಹಿತ್ಯದಲ್ಲೂ ಬದಲಾವಣೆಗಳುಂಟಾಗಿವೆ. ಪ್ರಕೃತ, ವರ್ಗ ಭಾಷೆಯಲ್ಲಿ ಇಂಗ್ಲಿಷಿನಲ್ಲೂ ವಿವಿಧ ವರ್ತಮಾನ ಪತ್ರಿಕೆಗಳುಂಟೋ ಅದೇ ಮಾದರಿಯ ಮಾಸ ಪತ್ರಿಕೆಗಳು, ದೈನಿಕ, ಸಾಪ್ತಾಹಿಕ, ಪಾಕ್ಷಿಕ, ತ್ರೈಮಾಸಿಕ ಮುಂತಾದವುಗಳು ನೂರಾರು ಹುಟ್ಟಿ ಅನೇಕ ಸಹಸ್ರ ಸಹಸ್ರ ಪ್ರತಿಗಳಾಗಿ ಪ್ರಚಾರವಾಗುತ್ತಿವೆ. ಅದಲ್ಲದೆ ಭೌತಿಕ ಚಿಕಿತ್ಸಾ ಪದಾರ್ಥ ವಿಜ್ಞಾನ, ಭೌತತ್ವ ಮುಂತಾದ ಅನೇಕಾನೇಕ ಶಾಸ್ತ್ರ ಸಂಬಂಧವಾದ ಪುಸ್ತಕಗಳುಂಟಾಗಿವೆ. ಇದನ್ನೇ ಮುಂದುವರೆದು ನಮ್ಮೀ ಕರ್ನಾಟಕ ದೇಶದಲ್ಲಿ ಇಂಗ್ಲೀಷ ಭಾಷೆಯ ಪ್ರಾಚುರ್ಯವು ಕಡಿಮೆಯಾಗಿಲ್ಲದಿದ್ದರೂ ದೇಶ ಭಾಷೆಯು ಮಾತ್ರ ಹಿಂದುಸ್ತಾನ ಇತರ ದೇಶಗಳಂತೆ ಕಾಲಾನುಗಣ್ಯವಾದ ವೃದ್ಧಿಯನ್ನು ಹೊಂದಿರುವುದು ವಿಷಾದಕ್ಕೆ ಕಾರಣವಾಗಿದೆ."[೫೭]

ಅಂದಿನ ನಿಯತಕಾಲಿಕೆಗಳು, ಮ್ಯಾಗಜಿನ್‌ಗಳು ವಿದ್ಯಾವಂತರ ಅಗತ್ಯ ಅಭಿರುಚಿಯನ್ನು ಗುರುತಿಸಿವೆ. ಆ ಪತ್ರಿಕೆಗಳ ಮುಖಾಂತರ ಅಲ್ಪಸಂಖ್ಯಾತ ಓದುಗ ವರ್ಗವನ್ನು ಪತ್ರಿಕೆಗಳು ಸೆಳೆದುಕೊಂಡು ಒಂದು ಪರಂಪರೆಯನ್ನು ಮಂಗಳೂರು ಸಮಾಚಾರ ಪತ್ರಿಕೆಯು ಸ್ಪಷ್ಟಪಡಿಸಿದೆ. "ದೇಶವೆಂಬ ಮನೆಯಲ್ಲಿ ವಾಸಿಸುವ ಜನರು ಇಂದಿನ ಪರಿಯಂತರ ಹೊರಗಿನ ದೇಶಸ್ಥರ ಸಮಾಚಾರ ಮಾರ್ಗ ಮರ್ಯಾದೆಯನ್ನು ತಿಳಿಯದೆ ಕಿಟಕಿಯಿಲ್ಲದ ಬಿಡಾರದಲ್ಲಿ ಉಳುಕೊಳ್ಳುವವರ ಹಾಗೆ ಇರುತ್ತಾ ಬಂದರು. ಇದು ಕಾರಣ ಹೊರಗಿನ ಕಾರ್ಯಗಳನ್ನು ಕಾಣುವ ಹಾಗೆಯೂ ಒಳಗೆ ಸ್ವಲ್ಪ ಬೆಳಕು ಬೀರುವ

ಹಾಗೆಯೇ ನಾಲ್ಕು ದಿಕ್ಕಿಗೆ ಕಿಟಕಿಗಳನ್ನು ಮಾಡುವ ಈ ಸಮಾಚಾರ ಕಾಗದವನ್ನು ಪಕ್ಷಕ್ಕೆ ಒಂದು ಸಾರಿ ಸಿದ್ಧಮಾಡಿ ಅದನ್ನು ಓದಬೇಕೆಂದಿರುವರೆಲ್ಲರಿಗೆ ಕೊಟ್ಟರೆ ಕಿಟಕಿಗಳನ್ನು ಮಾಡಿದ ಹಾಗಾಗಿರುವುದು."[೫೮] ಈ ಸಂಗತಿಯನ್ನು ಗಮನಿಸಿದಾಗ ಪತ್ರಿಕೆಗಳು, ನಿಯತಕಾಲಿಕೆಗಳು ಮಧ್ಯಮ ವರ್ಗದ ಅಗತ್ಯಗಳನ್ನು ಪೂರೈಸಿವೆ. ಅಭಿಪ್ರಾಯ ವ್ಯಕ್ತಪಡಿಸಿದ, ನಿರೂಪಿಸುವ ಸಾಮಾನ್ಯ ತಿಳುವಳಿಕೆಯನ್ನು ಹರಡಿವೆ ನಡೆ, ನುಡಿಯನ್ನು ತರಬೇತಿಗೊಳಿಸಿ, ಆಲೋಚನಾ ಕ್ರಮಕ್ಕೆ ಜನರನ್ನು ಹಚ್ಚಿದ್ದು ಸಾಮಾನ್ಯ ಸಂಗತಿ ಅಲ್ಲ. ಇದು ಪತ್ರಿಕೆಗಳ ಪಾತ್ರ ತೋರಿಸುವುದು. ಈ ಸಂಗತಿಯನ್ನು ನೋಡಲಾಗಿ ಈ ಕಾಲದಲ್ಲಿ ತೀವ್ರವಾದ ವಸಾಹಾತುಶಾಹಿ ಒತ್ತಡದ ಪರಿಣಾಮದಿಂದಾಗಿ ಹೊಸ ವಿದ್ಯಾವಂತ ವರ್ಗ ಭಿನ್ನವಾದ ಸಾಮಾಜಿಕ ನೆಲೆಯಲ್ಲಿ ತರ್ಕ ಮಾಡಲು ತಳಹದಿಯನ್ನು ಈ ನಿಯತಕಾಲಿಕೆಗಳು ಕಾರ್ಯಮಾಡಿದವು.

ಕನ್ನಡ ಪತ್ರಿಕೆಗಳು ತಮ್ಮ ವಸ್ತು ಶೈಲಿಗಳನ್ನು ಸಾಂಪ್ರದಾಯಿಕ ಸಾಹಿತ್ಯ ಮತ್ತು ಆಂಗ್ಲ ಪತ್ರಿಕೆಗಳ ಮಾದರಿಯನ್ನು ಬಳಸಿಕೊಂಡಂತೆ ಕಾಣುವವು. ಕರ್ನಾಟಕ ಗ್ರಂಥಮಾಲೆಯಲ್ಲಿ ಏಕಕಾಲಕ್ಕೆ ಹಳಗನ್ನಡ ಕಾವ್ಯ ಭಾಗಗಳೂ ಕಾದಂಬರಿ ಅನುವಾದಗಳೂ ಪ್ರಕಟವಾಗುತ್ತಿದ್ದುದ್ದು ಈ ಮಾತಿಗೆ ಸಾಕ್ಷಿ ಒದಗಿಸುವುದು. ಇಲ್ಲಿಯೂ ವಸಹಾತುಶಾಹಿ ಉತ್ಪಾದನೆ ಹಾಗೂ ಪ್ರಸರಣವು ತನ್ನ ಹಿಡಿತ ಸಾಧಿಸಿದೆ. ಮುದ್ರಣಯಂತ್ರಗಳ ಬಳಕೆ, ಹೊಸ ಅಂಚೆ ವ್ಯವಸ್ಥೆಗಳು ಪತ್ರಿಕಾ ಬೆಳವಣಿಗೆಗೆ ಪೂರಕವಾಗಿ ಕಾರ್ಯಮಾಡಿದವು. ಇದೆ ಸಮಯದಲ್ಲಿ ವಿದ್ಯಾವಂತ ವರ್ಗ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸಿದೆ. ಸಾಮಾಜಿಕ ಗೊಂದಲ, ಅನಿಶ್ಚಯತೆಯ ಪರಿಸ್ಥಿತಿ ವಿಭಿನ್ನ ನಿಲುವನ್ನು ಮಂಡಿಸಲು ಕಾರಣವಾಗಿದೆ. ಈ ಸಮಯದಲ್ಲಿ ಆರ್ಯಧರ್ಮದಪರ, ಲೋಕ ಶಿಕ್ಷಣ ರಾಷ್ಟ್ರೀಯ, ಕ್ರೈಸ್ತ ಮತಪರ ದೃಷ್ಟಿಕೋನದ ಪತ್ರಿಕೆಗಳು ಮೊದಲು ೧೯ನೇ ಶತಮಾನದಲ್ಲಿ ಜನಿಸಿದವು. ಈ ಸಮಯದ ವಿಭಿನ್ನವಾದ ಸಾಂಸ್ಕೃತಿಕ ನೆಲೆಯನ್ನು ಈ ಪತ್ರಿಕೆಗಳು ಬಿಂಬಿಸಿದವು. ಇದಕ್ಕೆ ಉದಾಹರಣೆ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಅರುಣೋದಯ (೧೮೬೨) ಪತ್ರಿಕೆಯು ಕ್ರಿಶ್ಚಿಯನ್ ದೃಷ್ಟಿಕೋನವನ್ನು ಹೊಂದಿತ್ತು. ಇದು ವಿಶೇಷವಾಗಿ ದೇಶಿ ಕ್ರೈಸ್ತರನ್ನು ಉದ್ದೇಶಿಸಿಯೇ ಬರೆದ ಧಾರ್ಮಿಕ ವಿಚಾರಗಳು ಈ ಪತ್ರಿಕೆಯಲ್ಲಿ ಪ್ರಾಧಾನ್ಯವನ್ನು ಪಡೆದಿದ್ದವು.

ಮೊದಲ ಪತ್ರಿಕೆಗಳಲ್ಲಿ ಸಾಮಾಜಿಕ ತಳಹದಿಯನ್ನು ಸ್ಪಷ್ಟವಾಗಿ ಅರಿಯಬಹುದು. ಆಧುನಿಕ ವಿದ್ಯಾವಂತ ವರ್ಗದ ವಿಭಿನ್ನ ಕಲ್ಪನೆಯಿಂದ ಈ ಅಂಶ ನೈತಿಕವಾಗಿ ವಿಚಾರವಂತಿಕೆಯು ಧಾರ್ಮಿಕ, ಸಾಮಾಜಿಕ, ವಿಷಯಗಳತ್ತ ಯುವಕರನ್ನು ಸೆಳೆಯಿತು. ದೇಶೋದ್ಧಾರದ ಸದಾಚಾರವನ್ನು ಇಲ್ಲಿ ಗಮನಿಸಬಹುದು. "ಆನಂದ ಚಂದ್ರಿಕೆ(೧೯೧೨) ಎನ್ನುವ ಪತ್ರಿಕೆ ಆಧುನಿಕ ವಿದ್ಯಾವಂತರ ಸ್ವಾರ್ಥವನ್ನು ಸಂಸ್ಕೃತ ಪಂಡಿತ ಕೂಪ ಮಂಡೂಕತನವನ್ನು ಟೀಕಿಸಿ ನಿರ್ಮಲ ದೇಶೋದ್ಧಾರಕವಾದ ಸದಾಚಾರವನ್ನು

ಸ್ಥಾಪಿಸುವುದೇ ತನ್ನ ಉದ್ದೇಶವೆಂದು ಸಾರಿದೆ."[೫೯] ಎಂಬಲ್ಲಿ ಪತ್ರಿಕೆಗಳು ಆಧರಿಸಿದ ಸಂವಹನ ತಳಹದಿಯು ಏನು ಎಂಬ ಪ್ರಶ್ನೆಯು ವಿಭಿನ್ನ ನೆಲೆಯಲ್ಲಿ ತರ್ಕಹುಟ್ಟು ಹಾಕುವುದು ಸಂಸ್ಕೃತ ಪಂಡಿತ ವರ್ಗಕ್ಕೆ ಪ್ರತಿ ಸ್ಪರ್ಧಿಯಲ್ಲಿದ್ದರು. ವಿರೋಧಿ ನೆಲೆಯಂತು ಇದ್ದೆ ಇತ್ತು ಎಂಬ ಸಂಗತಿಯನ್ನು ಗಮನಿಸಬಹುದು. ಆದರೆ ಆಧ್ಯಾತ್ಮ ಪ್ರಕಾಶದ ಉದ್ದೇಶ ವಿಭಿನ್ನವೆಂದು ಕಾಣುವುದು. "ಮೂಲ ಗ್ರಂಥಗಳು ಶಾಸ್ತ್ರೀಯ ವಿಷಯಗಳನ್ನು ಸಾಮಾನ್ಯರಿಗೆ ವಿಶದಪಡಿಸುವ ಚಿಕ್ಕ ಗ್ರಂಥಗಳನ್ನು ತರುವುದು. ಇಂಥ ಗ್ರಂಥಗಳು ಸುಲಭ ಶೈಲಿಯಲ್ಲಿ ಬರೆದಿರುವ ಪ್ರಶ್ನೋತ್ತರ, ಕಥಾವಲಿ, ಕೀರ್ತನ ಕಾದಂಬರಿ ಮುಂತಾದ ನಿಬಂಧಗಳಾಗಿರುವವು. ಜನರಿಗೆ ವಿನೋದವಾಗಿ ಓದಿ ಆಧ್ಯಾತ್ಮ ವಿಚಾರಗಳನ್ನು ಮನಸ್ಸಿನಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಹಾಯವಾಗಿರಬೇಕೆಂದೇ ಇವುಗಳ ಉದ್ದೇಶ"[೬೦] ಆ ಕಾಲದ ಪಾಂಡಿತ್ಯ ರಚನೆಯ ಬಂಧ ಗಮನಿಸಬಹುದು. ಇಲ್ಲಿ ಗದ್ಯ ಪ್ರಧಾನತೆ ಹೆಚ್ಚು ಹೆಚ್ಚು ಮೂಡಿ ಬಂದಿತೆಂಬುದು ಗಮನಿಸಬಹುದು.

ಸ್ತ್ರೀಯರಿಗೆ ಮಿಸಲಾದ ಪತ್ರಿಕೆಗಳು ಇದ್ದವು. ಅದರಲ್ಲಿ "ಕರ್ನಾಟಕ ವಾಣೀ ವಿಲಾಸ" (೧೮೮೮) ಪ್ರಮುಖವಾದದ್ದು. ಗಳಗನಾಥರ ಕಾದಂಬರಿಗಳನ್ನು ಕುರಿತು ಹಾವನೂರವರು "ತಮ್ಮ ಕೃತಿಗಳನ್ನು ಗಳಗನಾಥರು ತಮ್ಮ ಮಕ್ಕಳಿಗೆ ಓದಿ ಹೇಳುತ್ತಿದ್ದದ್ದನ್ನು ಉಲ್ಲೇಖಿಸಿ ಹೆಣ್ಣು ಮಕ್ಕಳ ವಿದ್ಯಾರ್ಥಿಗಳ ಮುಂದೆ ಓದಿ ಹೇಳಲಾರದ್ದನ್ನು ಅವರು ಎಂದೂ ಬರೆಯುತ್ತಿರಲಿಲ್ಲ ಎಂಬ ಅಭಿಪ್ರಾಯಪಟ್ಟಿದ್ದಾರೆ."[೬೧] ಈ ಸಂದರ್ಭದಲ್ಲಿ ಎಷ್ಟೋ ವಿಷಯಗಳು ತಿಳಿಯದ ಸಾಮಾನ್ಯ ಓದುಗರ ಪರಿಕಲ್ಪನೆ ವಿಭಿನ್ನವಾಗಿತ್ತು. ಗಂಭೀರತೆ ಮತ್ತು ಜವಾಬ್ದಾರಿತನದಿಂದ ಪತ್ರಿಕೆಗಳ ಮೂಲಕ ಓದುಗರನ್ನು ತಿದ್ದುವ ಜವಾಬ್ದಾರಿ ಒಳನುಸುಳಿಕೊಂಡಂತೆ ಕಾಣುವುದು. ಈ ಪರಿಸ್ಥಿತಿಯನ್ನರಿತ ಓದುಗರು ಅದನ್ನು ಪಾಲಿಸುವ ಯತ್ನಗಳು ಈ ಪತ್ರಿಕೆಗಳಲ್ಲಿ ಕಾಣುವವು. ಈ ಸಂದರ್ಭದ ಆಧ್ಯಾತ್ಮ ಪ್ರಕಾಶ, ಅರುಣೋದಯ, ಹಿತೋಪದೇಶ, ಸದ್ಬೋಧ ಚಂದ್ರಿಕೆ ಮುಂತಾದ ಪತ್ರಿಕೆಗಳು ಪ್ರಕಟವಾಗುವ ಸಂದರ್ಭದಲ್ಲಿ ಅರ್ಥ, ಸಾಧಕ, ವಿಜ್ಞಾನ ದೀಪಿಕೆ, ಕನ್ನಡ ಸಹಕಾರಿ ಮೊದಲಾದ ಪತ್ರಿಕೆಗಳು ಪ್ರಕಟವಾಗಿ ಜನರ ಮೇಲೆ ಬೇರೆ ಬೇರೆ ಆಯಾಮದ ಪ್ರಭಾವ ಬೀರಿದ್ದು ಕಾಣುವುದು.

ಈ ಸಂದರ್ಭದ ಪತ್ರಿಕೆಗಳ ಸಾಮಾಜಿಕ ಉದ್ದೇಶಗಳು ಮತ್ತು ಕಾದಂಬರಿ ಪ್ರಕಟಣೆ ಪರಸ್ಪರ ಹೊಂದಾಣಿಕೆ ಕಾಣುವುದು. ಕಾದಂಬರಿಗಳ ಪ್ರಕಟಣೆ ಮತ್ತು ಪ್ರಸಾರದಲ್ಲಿ ಅಗ್ರಸ್ಥಾನವನ್ನು ಪಡೆದ ಪತ್ರಿಕೆ ಎಂದರೆ ಗಳಗನಾಥರ ಸದ್ಬೋಧ ಚಂದ್ರಿಕೆ. ೧೯೦೭ ರಲ್ಲಿ ಆನಂದವನ ಧಾರ್ಮಿಕ ಪತ್ರಿಕೆಯಾಗಿ ಆರಂಭವಾಯಿತು. ಈ ಪತ್ರಿಕೆಯಲ್ಲಿ ಆಗಡಿಯ ಮಠದ ಸುದ್ದಿಗಳು, ಯೋಗಾಭ್ಯಾಸ ನೈತಿಕ ಕಥಾಮಾಲೆ, ಬೀರಶೈವ ಮಹಾಸಭೆಯ ರಿಪೋರ್ಟ ಮಹಾಪುರುಷ ಚರಿತ್ರೆಗಳು ಪ್ರಕಟವಾಗಿವೆ."[೬೨] ಇಂತಹ ಪತ್ರಿಕೆಯು

ಕಾದಂಬರಿ ಪ್ರಕಟಣೆಯನ್ನು ಉದ್ಯಮವನ್ನಾಗಿ ಕೈಗೊಂಡಿದ್ದು ಕುತೂಹಲಕರ ಸಂಗತಿ. ಇಲ್ಲಿ ಗಳಗನಾಥರ ಆಸಕ್ತಿ ಧಾರ್ಮಿಕವಾಗಿದದ್ದು ಎಂಬ ಸಂಗತಿ ಗಮನಿಸಬೇಕಾದದ್ದು. ಇದರಿಂದ ಗಳಗನಾಥರ ಕಾದಂಬರಿಗಳ ಆಶಯ ಮತ್ತು ಪತ್ರಿಕೆಯ ಧೋರಣೆಗಳ ನಡುವೆ ಎಂದೂ ಭಿನ್ನಾಭಿಪ್ರಾಯ ಕಂಡಿಲ್ಲ ವೆಂಬುದು ಮನನೀಯ ವಿಷಯ. ಈ ಸಮಯದಲ್ಲಿ ಕಾದಂಬರಿಯ ಪ್ರಸರಣವನ್ನೆ ಉದ್ದೇಶ ವಾಗಿರಿಸಿಕೊಂಡು ಚಾಮರಾಜನಗರದ ಸಿ. ವೆಂಕಟರಮಣ ಶಾಸ್ತ್ರಿಯವರು ಕಾದಂಬರಿ ಸಂಗ್ರಹದ ಸಂಚಿಕೆಗಳನ್ನು ಗಮನಿಸಿದಾಗ ನೀತಿ ಬೋಧಾತ್ಮಕ, ಸಾಮಾಜಿಕ ಸಮಸ್ಯೆಗಳತ್ತ ಅವರು ಕಾದಂಬರಿ ಎನ್ನುವ ಹೆಸರಿನಲ್ಲಿ ಪ್ರಕಟಿಸಿರುವುದು ಕಂಡುಬರುತ್ತದೆ. ಇಲ್ಲಿ ಕಾದಂಬರಿ 'ಕಥನ' ಎಂಬ ಪರಿಕಲ್ಪನೆ ಮುಖ್ಯವಾದದ್ದು ಎಂದು ಕಾಣುವುದು.

ಮುಂದಿನ ಕಾಲಘಟ್ಟದ ಕಾದಂಬರಿ ಸಂಗ್ರಹವು ಆಯ್ಕೆಯಲ್ಲಿ ಸಾಮಾಜಿಕ ಮತ್ತು ಸಾಂಪ್ರದಾಯಿಕ ನಿಲುವು ಬಹುಮುಖ್ಯಪಾತ್ರ ನಿರ್ವಹಿಸಿದೆ. ಹುಬ್ಬಳ್ಳಿಯ ಸಚಿತ್ರ ಭಾರತ, ಶುಭೋದಯಗಳಲ್ಲಿ ಕೆರೂರು ವಾಸುದೇವಾಚಾರ್ಯರ ಕಾದಂಬರಿಗಳು ಪ್ರಕಟವಾಗಿ ಜನರ ಮನ್ನಣೆ ಗಳಿಸಿದ್ದವು. ಇದನ್ನು ರಾ.ಯ.ಧಾರವಾಡಕರರು "೧೯೧೩ರಲ್ಲಿ ಹೊರಟ 'ಸಚಿತ್ರ ಭಾರತ' ಮಾಸಪತ್ರಿಕೆಯಲ್ಲಿ ಅವರ ಯದುಮಹಾರಾಜ ಎಂಬ ಎರಡನೆಯ ಕಾದಂಬರಿ ಪ್ರಕಟವಾಯಿತು. ೧೯೧೪-೧೯೧೭ರ ವರೆಗೆ ಸಚಿತ್ರ ಭಾರತವು ವಾಸುದೇವಮಯವಾಯಿತು" ಎಂದು ವರ್ಣಿಸಿದ್ದು ಉಲ್ಲೇಖಿಸಬಹುದು. ಮುಂದುವರೆದು ಕೆರೂರರು 'ಶುಭೋದಯ' ದಲ್ಲಿ ತಮ್ಮನ್ನು ಉದಾರಮತವಾದಿ ಎಂದು ಸಮರ್ಥಿಸಿಕೊಂಡಿದ್ದಾರೆ."[೬೩] ಮತ ಧರ್ಮ ಕುರಿತಾದ ಪ್ರತಿಕ್ರಿಯೆಗಳು ಗಮನ ಹರಿಸಿದ್ದು ಕಾಣುವುದು. ಕಾದಂಬರಿಗಳು ಸಾಮಾಜಿಕ ಸಂಗತಿಯ ಜೀವಾಳವಾದ ವಿಷಯ ವಸ್ತು ಇಲ್ಲಿ ಜನರಿಗೆ ಪರಿಣಾಮಕಾರಿಯಾದ ಪರಿಣಾಮ ಬೀರಿದೆ.

ಕಾದಂಬರಿಗಳ ಪ್ರಕಟಣೆ ಮತ್ತು ಪ್ರಸಾರದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘ ಮತ್ತು ಅದರ ಮುಖ ಪತ್ರಿಕೆ ವಾಗ್ಭೂಷಣ ಪಾತ್ರ ಅತಿ ಮಹತ್ವದ್ದು. "ಕರ್ನಾಟಕ ವಿದ್ಯಾವರ್ಧಕ ಸಂಘವು ತೊರಮುರಿಯವರ 'ಬಾಣ' ಕಾದಂಬರಿಯ ಪ್ರಕಟಣೆ, ಕಾದಂಬರಿ ಬರಹಕ್ಕಾಗಿ ಬಹುಮಾನ ನೀಡುವ ಯೋಜನೆಗಳನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಗಳಗನಾಥರ ಪದ್ಮನಯನಾ. ಗೋಳೆಪ್ಪ ಕೊಟ್ರೆಪ್ಪ ಅರಳಿಯವರ ಕನ್ನಡ ಕಾರ್ಯಸಾಗರ ಮೊದಲಾದ ಕಾಲ್ಪನಿಕ ಕೃತಿಗಳು ವಾಗ್ಭೂಷಣದಲ್ಲಿ ಪ್ರಕಟವಾದವು. ರಾ.ಹ. ದೇಶಪಾಂಡೆಯವರು ಈ ಸಂಸ್ಥೆಗಾಗಿ ಪಟ್ಟ ಕಷ್ಟಗಳು ಮತ್ತು ಪದ್ಮನಯನಾ ಪ್ರಕಟಿಸಲು ಉಂಟಾದ ಆರ್ಥಿಕ ಅಡಚಣೆಗಳು ಅಪಾರ".[೬೪] ಕರ್ನಾಟಕತ್ವ, ಕರ್ನಾಟಕ ಈ ಸಂಸ್ಥೆಯ ಪ್ರಧಾನ ಪ್ರೇರಣೆಯಾಗಿರುವುದು ಕಾಣುವುದು. ಉತ್ತರ ಕರ್ನಾಟಕದ ಕಾದಂಬರಿಗಳು ಬೀರುವ ಅರ್ಥಗಳಿಗೆ

ಅನುಸಾರವಾದ ಸನ್ನಿವೇಶ ಕರ್ನಾಟಕ ವಿದ್ಯಾವರ್ಧಕ ಸಂಘದಂತಹ ಸಂಸ್ಥೆಗಳು ಹುಟ್ಟಿ ಬೆಳೆಯಲು ಕಾರಣವಾಗಿದ್ದು ಮುಖ್ಯ ಸಂಗತಿ.

ಸ್ತ್ರೀಪರ ಕಾಳಜಿಯನ್ನು ಕೇಂದ್ರವಾಗಿರಿಸಿಕೊಂಡು ತಿರುಮಲಾಂಬ ಅವರ 'ಕರ್ನಾಟಕ ನಂದಿನಿ' ಮತ್ತು ಆ ಕಲ್ಯಾಣಮ್ಮನವರ 'ಸರಸ್ವತಿ' ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಅಷ್ಟೇ ಅಲ್ಲದೆ ಇಲ್ಲಿ ಕೆಲವು ಕಾದಂಬರಿಗಳು ಪ್ರಕಟವಾದದ್ದು ಕಾಣುವುದು. ಈರ್ವರು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಲು ಆಯ್ಕೆ ಮಾಡುವ ಸಂದರ್ಭದಲ್ಲಿ ಸ್ತ್ರೀಪರ ದೃಷ್ಟಿಕೋನವೇ ಪ್ರಧಾನವಾಗಿತ್ತು. ಸ್ವತಃ ಕಾದಂಬರಿಕಾರ್ತಿಯರಾದ ತಿರುಮಲಾಂಬ ಅವರ ನಿರ್ಧಿಷ್ಟ ಬಗೆಯ ಕಾದಂಬರಿಗಳನ್ನು ಆಯ್ಕೆಮಾಡಿಕೊಂಡು ಸ್ತ್ರೀ ಪರ ಕಾಳಜಿ ವಹಿಸಿದ್ದು ಇಲ್ಲಿ ಕಾಣುವುದು.

ಓದು ವಿಸ್ತಾರವಾಗಲು ಈ ಕಾಲಘಟ್ಟ ಎಲ್ಲಾ ಪತ್ರಿಕೆಗಳು ಒಂದೊಂದು ರೀತಿಯಲ್ಲಿ ಬೇರೆ ಬೇರೆ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದ ಬಗೆಯನ್ನು ಗುರುತಿಸಬಹುದು. ಆರ್ಥಿಕ ವಿಚಾರ ಕುರಿತ 'ಅರ್ಥ ಸಾಧಕ', ವಿದ್ಯಾಭ್ಯಾಸವನ್ನು ಕೇಂದ್ರವಾಗಿರಿಸಿಕೊಂಡು 'ಬೋಧಿನಿ', ವಿಜ್ಞಾನ ವಿಷಯಗಳನ್ನು ಒಳಗೊಂಡ 'ವಿಜ್ಞಾನ ದೀಪಿಕೆ', ಪರಮಾರ್ಥ ವಿಚಾರವನ್ನು ವಿಶೇಷವಾಗಿ ಲಕ್ಷಿಸುತ್ತಿದ್ದ 'ಶಿವಾನುಭವ', 'ಧರ್ಮತರಂಗಿಣಿ', ಕ್ರೈಸ್ತರಪರ ಚರ್ಚಿತ 'ಅರುಣೋದಯ' ಅಲ್ಲದೆ ಸಹಕಾರಿ ಮಾಸಪತ್ರಿಕೆ 'ಕನ್ನಡ ಸಹಕಾರಿ' ಮುಂತಾದ ಪತ್ರಿಕೆಗಳು ಅಂದಿನ ದಿನಗಳಲ್ಲಿ ಧಾರಾವಾಹಿಯ ರೂಪದಲ್ಲಿ ಪ್ರಕಟಪಡಿಸಿದ್ದು, ಅಲ್ಲಿದ್ದ ಜನರನ್ನು ಓದುಗರ ಕಲ್ಪನೆಯನ್ನು ವಿಸ್ತರಿಸಿದ್ದು ಇಲ್ಲಿ ಗಮನಿಸಬಹುದಾಗಿದೆ. ಆ ಸಂದರ್ಭವನ್ನು ಧರ್ಮ ತರಂಗಿಣಿ ಸಂಪಾದಕರು 'ಇದು ಕಾದಂಬರಿಗಳ ಕಾಲವು' ಎಂದು ಹೇಳಿಕೊಂಡಿದ್ದ ನಿದರ್ಶನವಿದೆ. ಕೆಲವು ಸಂಪಾದಕರು ಕಾದಂಬರಿಗಳನ್ನು ವಿರೋಧಿಸಿದ್ದಾರೆ. 'ಪರಮಾರ್ಥ' ಸಂಪಾದಕೀಯದಲ್ಲಿ ಅದು ಕಾಣುವುದು. ಮಾತೃಭೂಮಿ ಪತ್ರಿಕೆಯ ಸಂಪಾದಕರು "ದೊಡ್ಡ ದೊಡ್ಡ ಕಾದಂಬರಿಗಳಿಂದ ಮಾಸ ಪತ್ರಿಕೆಯನ್ನು ತುಂಬುತ್ತಾ ಹೋಗುವುದು ನಮ್ಮ ಇಷ್ಟವಲ್ಲ[೬೫]" ಎಂಬಲ್ಲಿ ವಿರೋಧ ಕಾಣುವುದು. ಹಾಗೆ ವಿರೋಧ ಮಾಡಲು ಅಂದಿನ ಕಾಲದ ಸಂಜಿಕೆ ಆಚರಣೆ, ಸಾಮಾಜಿಕ ಸಮಸ್ಯೆಗಳು ಸಮಾಜದ ಮೇಲೆ ಬೀರಿದ ಪ್ರಭಾವ ಇದಕ್ಕೆ ಕಾರಣವಿರಬಹುದು.

ಉತ್ತರ ಕರ್ನಾಟಕದ ಹಾಗೆ ಮೈಸೂರು ಭಾಗದಲ್ಲೂ ಈ ರೀತಿಯಿಂದ ಸಾಕಷ್ಟು ಪ್ರಯತ್ನಗಳು ನಡೆದಿವೆ. ಅಲ್ಲಿ ಹೆಸರಿಸಬಹುದಾದ ಕರ್ನಾಟಕ ಗ್ರಂಥಮಾಲೆಯು ಮುಖ್ಯವಾದದ್ದು. ಆ ಕಾಲದಲ್ಲಿ ಕೇವಲ ಗ್ರಂಥೋದ್ಯಮವನ್ನೇ ಕೇಂದ್ರವಾಗಿರಿಸಿಕೊಂಡಿದ್ದ ಪತ್ರಿಕೆ ಕರ್ನಾಟಕ ಗ್ರಂಥಮಾಲೆ. ಅನುವಾದಿತ ಕಾದಂಬರಿಗಳು ಹೆಚ್ಚು ಸಂಖ್ಯೆಯಲ್ಲಿ ಪ್ರಕಾಶನವನ್ನು ಪಡೆದಿವೆ. ಬಾಪು ಸುಬ್ಬರಾವ್. ಎಂ.ಎಸ್. ಪುಟ್ಟಣ್ಣ, ಶ್ರೀಕಂಠಗೌಡ, ಬಿ. ವೆಂಕಟಾಚಾರ್ಯ ಕಾದಂಬರಿ ಅನುವಾದಗಳು ಬೆಳಕು ಕಂಡಿದ್ದು. ಈ ಪತ್ರಿಕೆಯ

ಮೂಲಕವೆಂಬುದು ಗಮನಿಸಬಹುದು. ಈ ಪತ್ರಿಕೆ ಮೈಸೂರು ಮಹಾರಾಜರ ಉದಾರ ಆಶ್ರಯದಲ್ಲಿ ಪ್ರಕಟವಾಗುತ್ತಿತ್ತು. ಮೊದಲು ನಿ.ಭಾಗ್ಯ, ಮುರಾದ, ಸುಮತಿ ಮದನಕುಮಾರ ಚರಿತ್ರೆ, ವಿಷವೃಕ್ಷ ಚಿಕ್ಕ ಬಣಜಿಗರು ಮುಂತಾದ ಮಹತ್ವದ ಕೃತಿಗಳನ್ನು ಈ ಗ್ರಂಥಮಾಲೆಯಲ್ಲಿ ಪ್ರಕಟಿಸಿತು. ಇವುಗಳ ಜೊತೆಗೆ ಪತ್ರಿಕೆಯು ಪ್ರಾಚೀನ ನವೀನ ಗ್ರಂಥಗಳ ಪ್ರಕಾಶನದ ಮಹತ್ವದ ಸಂಸ್ಥೆಯಂತೆ ಕಾರ್ಯ ಮಾಡಿದೆ. ಅಷ್ಟೆ ಅಲ್ಲದೆ ಈ ಕಾಲದ ಮಹತ್ವದ ಇಂಗ್ಲಿಷ್ ಕೃತಿಗಳನ್ನು ಕನ್ನಡಿಸುವುದು ನಿರಂತರವಾಗಿ ಮುಂದುವರೆಸಿತು.

ಕರ್ನಾಟಕ ಗ್ರಂಥಮಾಲೆಯೊಂದಿಗೆ, ಪರಮಾರ್ಥ, ಚಂದ್ರೋದಯ, ಪ್ರಬೋಧ, ಪ್ರಬುದ್ಧ ಕರ್ನಾಟಕ, ಸರಸ್ವತಿ, ಸಚಿತ್ರ ಭಾರತ, ಸುವಾಸಿನಿ, ವಿವೇಕೋದಯ, ಕನ್ನಡ ಸಹಕಾರಿ, ಧರ್ಮತರಂಗಿಣಿ, ಆರ್ಯಮತೋದ್ಧಾರಿಣೀ ಮುಂತಾದ ಬಹುತೇಕ ಪತ್ರಿಕೆಗಳು ಕಾದಂಬರಿಗಳನ್ನು ಪ್ರಕಟಿಸುವಾಗ ಆ ಕುರಿತು ಸಾಕಷ್ಟು ಕುತೂಹಲವನ್ನು ಕೆರಳಿಸುವ ಕೆಲಸವನ್ನು ಆ ಪತ್ರಿಕೆಗಳ ಪತ್ರಕರ್ತರು ಮಾಡುತ್ತಿದ್ದರು ಎಂಬ ಸಂಗತಿ ಮಹತ್ವದ್ದು. ಮೊದಲು ಕರ್ನಾಟಕ ಗ್ರಂಥಮಾಲೆಯೊಂದು ಕಾದಂಬರಿಗಳನ್ನು ಧಾರವಾಹಿಯಾಗಿ ಪ್ರಕಟಿಸುತ್ತಿದ್ದರು. ಇದನ್ನೆ ಶಿವರಾಮ ಪಡಿಕಲ್ ಹೀಗೆ ಗುರುತಿಸಿದ್ದಾರೆ. “ಈ ಅಧ್ಯಯನಾವಧಿಯಲ್ಲಿ ದೊರಕುವ ಸುಮಾರು ೮೦ ಪತ್ರಿಕೆಗಳ ಪೈಕಿ ೩೦ಕ್ಕೂ ಮಿಕ್ಕಿದ ಪತ್ರಿಕೆಗಳು ಕಾದಂಬರಿಗಳನ್ನು ಪ್ರಕಟಿಸಿವೆ. ೧೯೦೦ ಮೊದಲು ಕರ್ನಾಟಕ ಗ್ರಂಥಮಾಲೆಯೊಂದೆ ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದರೆ ೧೯೦೦ ರಿಂದೀಚೆಗೆ ಕಾದಂಬರಿ ಪ್ರಕಟಣೆಯನ್ನು ಬಹುತೇಕ ನಿಯತಕಾಲಿಕೆಗಳು ಆರಂಭಿಸಿರುವುದು”[೬೬] ಈ ಪತ್ರಿಕೆಯ ಸಂಪುಟಗಳು ಅರೆಬರೆಯಾಗಿ ದೊರಕಿವೆ. ಈ ಸಂಗತಿಗಳು ಆರಂಭದ ಎರಡು ದಶಕದಲ್ಲಿ ಕಾದಂಬರಿಗಳು ಜನಪ್ರಿಯವಾಗಿದ್ದವು. ಕಾರಣ ಆ ಕಾದಂಬರಿಗಳು ಜನರ ಬದುಕಿಗೆ ಸಾಮಾಜಿಕವಾಗಿ ಮುಖ ಮಾಡಿದ್ದೆ ಇಷ್ಟು ಪ್ರಚುರ ಪಡೆಯಲು ಕಾರಣವಾಗಿದೆ. ಈ ಪತ್ರಿಕೆಗಳು ಈ ಶತಮಾನದ ಆರಂಭ ಅವಧಿಯಲ್ಲಿ ಸಾಮಾಜಿಕ ಸಂಘರ್ಷವುಂಟಾದುದರಿಂದ ಜನರ ಆಸಕ್ತಿ ಹಿಗ್ಗತೊಡಗಿತು. ೧೯ನೇ ಶತಮಾನಕ್ಕೆ ಒಂದು ವರ್ಗವಾಗಿ ರೂಪುಗೊಂಡಿತು. ಇಂಗ್ಲಿಷ್ ಶಿಕ್ಷಣ ಅಧುನಿಕ ಸಂವೇದನೆಗೆ ವೇದಿಕೆ ಒದಗಿಸಿತು. ಈ ಶಿಕ್ಷಣ ಸಾಮಾಜಿಕ, ಆರ್ಥಿಕ ಸ್ಥಿತಿಯೊಂದಿಗೆ ನಿಕಟ ಸಂಪರ್ಕ ಸಂಬಂಧ ಪಡೆದದ್ದು ಸುಧಾರಣೆಯ ಪರ್ವಕ್ಕೆ ವೇದಿಕೆಯನ್ನು ಒದಗಿಸಿತು. ಈ ಅಗತ್ಯಕ್ಕಾಗಿ ಸಾಹಿತಿಗಳು ಪತ್ರಿಕೆಗಳನ್ನು ಸ್ಥಾಪಿಸಿದ್ದು. ಪತ್ರಿಕೆ ಉದ್ಯಮವಾಗಿ ಬೆಳೆಯಲು ಕಾಲ ಹಿಡಿದಂತಿದೆ. ಲೇಖಕರ ಸಾಮಾಜಿಕ ಬದ್ಧತೆಗೆ ಅನುಗುಣ ಕಾರ್ಯವೇ ಸಾಮಾಜಿಕ ಸಂಘರ್ಷಕ್ಕೊಂದು ವೇದಿಕೆಯಂತೆ ಮೂಡಿ ಬಂದಿದೆ.

ಪ್ರಾದೇಶಿಕ ಭಾಷಾ ಮಾಧ್ಯಮದ ಶಿಕ್ಷಣ ಕ್ರಮವೂ ಇಂಗ್ಲಿಷ್ ವಿದ್ಯಾಕ್ರಮದ ಪ್ರಭಾವದಡಿ ರೂಪುಗೊಂಡ ಆಧುನಿಕ ಶಿಕ್ಷಣ ಕ್ರಮವೇ ಅಗತ್ತೆಂಬುದನ್ನು ಇಲ್ಲಿ ನೆನೆಯಬೇಕು. ಮುದ್ರಣದ ಆರಂಭದ ಹೆಜ್ಜೆಗಳು, ಮಿಶನರಿಯ ಕಾರ್ಯಚಟುವಟಿಕೆಯೊಂದಿಗೆ ಸಂಬಂಧವನ್ನು ಪಡೆದಿರುವುದು

ಗಮನಿಸಬೇಕಾದ ಸಂಗತಿ. ಕ್ರಿ.ಶ.೧೮೯೫ರ ವರೆಗೆ ಕನ್ನಡ ಮುದ್ರಣ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಕನ್ನಡ ಸಾಹಿತ್ಯ ಚಟುವಟಿಕೆಯ ಉತ್ಸಾಹಹೀನ ಪರಿಸ್ಥಿತಿಯನ್ನು ಕುರಿತು ಕೊರಗು ಇಲ್ಲಿ ಕಂಡುಬರುವುದು. ಆಧುನಿಕ ವಿದ್ಯಾಭ್ಯಾಸ ಕ್ರಮ, ಹೊಸ ಭಾಷೆ, ಸಾಹಿತ್ಯ, ಪುಸ್ತಕ, ಆಲೋಚನೆಗಳ ಸಂಪರ್ಕದಿಂದಾಗಿ ಗದ್ಯ ಸಾಹಿತ್ಯವು ಜನಪ್ರಿಯವಾಯಿತು. ಈ ಶತಮಾನದ ಕಾದಂಬರಿಯು ಜನಪ್ರಿಯ ಓದಿನ ಕಥನವಾಗಿರಲಿಲ್ಲ. ಮುದ್ರಣ ಯಂತ್ರಗಳ ಆಗಮನದಿಂದ ಓದನ್ನು ವೈಯಕ್ತಿಕ ಹಂತಕ್ಕೆ ತಲುಪಿಸಿದವು.

೪.೩. ರಾಜಕೀಯ ಸಂಘರ್ಷದ ನೆಲೆಗಳು:

ಕರ್ನಾಟಕದಲ್ಲಿ ಬ್ರಿಟಿಷರಿಗೆ ನೇರವಾದ ಆಡಳಿತಕ್ಕೆ ಒಳಗಾದ ಮೊದಲ ಪ್ರದೇಶವೆಂದರೆ 'ಕೆನರಾ' ಕ್ರಿ.ಶ.೧೭೯೯ ಅದು ಟಿಪ್ಪುಸುಲ್ತಾನನಿಂದ ದೊರೆತದ್ದು. ಮರುವರ್ಷ ೧೮೦೦ ನಿಜಾಮನು ಬಳ್ಳಾರಿಯ ವಿಭಾಗವನ್ನು ಬ್ರಿಟಿಷರಿಗೆ ಕೊಟ್ಟನು. ಕ್ರಿ.ಶ.೧೮೧೭ರಲ್ಲಿ ಬ್ರಿಟಿಷರು ಧಾರವಾಡ ಸುಭಾ ಭಾಗವನ್ನು ಪಡೆದಿದ್ದರು. ಪೇಶ್ವೆ ಸತ್ತೆಯು ಅಳಿದ ಮೇಲೆ ಮುಂಬೈ ಕರ್ನಾಟಕದ ಜಿಲ್ಲೆಗಳಾದ ಧಾರವಾಡ ವಿಜಾಪೂರ, ಬೆಳಗಾವಿ ಜಿಲ್ಲೆಗಳು ಬಹುಭಾಗ ಬ್ರಿಟಿಷರಿಗೆ ಕೈವಶವಾದವು. ಅಷ್ಟೇ ಅಲ್ಲದೆ ರಾಯಚೂರು, ಕಲಬುರ್ಗಿ, ಬೀದರ ಜಿಲ್ಲೆಗಳು ಮಾತ್ರ ನಿಜಾಮನ ವಶದಲ್ಲಿ ಉಳಿದವು. ಸಣ್ಣಪುಟ್ಟ ಸಂಸ್ಥಾನಗಳಲ್ಲೊಂದಾದ ಕೊಡಗು ೧೮೩೪ರಲ್ಲಿ ಬ್ರಿಟಿಷರ ವಶವಾಯಿತು. ಈ ರೀತಿಯಾಗಿ ೧೯ನೆಯ ಶತಮಾನದ ಆರಂಭದಲ್ಲಿಯೇ ಕರ್ನಾಟಕವನ್ನು ಆಡಳಿತ ದೃಷ್ಟಿಯಿಂದ ತುಂಡುಗಳಾಗಿ ಮಾಡುವ ಕಾರ್ಯ ಮುಗಿದಿದ್ದಿತು. ಈ ಸಮಯದ ವಿಭಜನೆಯು ಯಾವುದೇ ಒಂದು ಭಾಷಾ ಪ್ರದೇಶದಲ್ಲಿ ನಡೆದಿರಲಿಲ್ಲ. ಇದು ಸಾಲದು ಎಂಬಂತೆ ಕ್ರಿ.ಶ. ೧೮೬೨ರಲ್ಲಿ ಕೆನರಾವನ್ನು ಒಡೆದು ಉತ್ತರ ಕನ್ನಡ ಜಿಲ್ಲೆಯನ್ನು ಸೃಷ್ಟಿಸಿ ಮುಂಬೈಯಿ ಪ್ರಾಂತಕ್ಕೆ ಸೇರಿಸಲಾಯಿತು. ನೆರೆಯಲ್ಲಿದ್ದ ಈ ಎರಡು ಪ್ರದೇಶಗಳ ಪ್ರಾಂತಮಟ್ಟದ ರಾಜಧಾನಿಗಳಲ್ಲಿ ಒಂದು ಪೂರ್ವಕ್ಕೆ ಮದ್ರಾಸ್, ಪಶ್ಚಿಮಕ್ಕೆ ಮುಂಬೈಗಳ ಪ್ರಭಾವಕ್ಕೊಳಗಾಗಿ ೧೯ನೇ ಶತಮಾನದ ಸಮಕ್ಕೆ ಕನ್ನಡದ ಅರ್ಧರಾಜ್ಯ ಬ್ರಿಟಿಷರ ಆಡಳಿತಕ್ಕೆ, ಅಧಿಪತ್ಯಕ್ಕೆ ಒಳಪಟ್ಟಿತು. ವಿವಿಧ ಭಾಗದಲ್ಲಿ ಹಂಚಿಹೋಗಿದ್ದ ಕನ್ನಡಿಗರು ಶೈಕ್ಷಣಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಒಂದೆ ಬಿದ್ದು ಸುಧಾರಣೆಯಿಂದ ದೂರ ಉಳಿದಿದ್ದರು.

ಭಾರತದಲ್ಲಿ ಬ್ರಿಟಿಷ್ ಸತ್ತೆಯ ಆಡಳಿತ ನಿರಂಕುಶಮತಿಯಾಗಿರಲಿಲ್ಲ. ಅಲ್ಲಲ್ಲಿ ಹುಟ್ಟಿಕೊಂಡ ಪ್ರತಿಭಟನಾ ಶಕ್ತಿಗಳು ೧೮೫೭ರ ಸುಮಾರಿಗೆ ದಂಗೆ ಎದ್ದದು ಇತಿಹಾಸ. ಉತ್ತರದಲ್ಲಿ ಪ್ರಖರವಾದಷ್ಟು ದಕ್ಷಿಣಭಾರತದಲ್ಲಿ ಪ್ರಖರವಾಗಿರಲಿಲ್ಲ. ಈ ಸಮಯಕ್ಕೆ ಬ್ರಿಟಿಷ ಸಾಮ್ರಾಜ್ಯಶಾಹಿ ಮೇಲುಗೈ ಸಾಧಿಸಿತು. ಈ ಸಮಯಕ್ಕೆ ಬ್ರಿಟಿಷರು ಪಾಶ್ಚಿಮಾತ್ಯ ನಾಗರಿಕ ಸೌಕರ್ಯಗಳನ್ನು ಇಲ್ಲಿಯ ನಾಗರಿಕರಿಗೆ ವಿಸ್ತರಿಸಿದರು.

ಇವುಗಳಲ್ಲಿ ಸಂಪರ್ಕ ಸಾಧನಗಳು ಪ್ರಮುಖವಾದವು. ಸಂಪರ್ಕ ಸಾಧನಗಳು ಮೊದಲು ಮದ್ರಾಸ್, ಮುಂಬೈ, ಕಲ್ಕತ್ತಾಗಳೆಲ್ಲ ಚಾಲನೆಗೆ ಬಂದವು. ತಂತಿ ಸಂಪರ್ಕವು ಆಡಳಿತದ ಹಿಡಿತಕ್ಕೆ ಸಮೀಪತೆ ಬೆಸೆಯಿತು. ಅಂಚೆ ವ್ಯವಸ್ಥೆಯಲ್ಲಿ ಸುಧಾರಣೆಗಳಾದವು. ಗ್ರಂಥ ಪ್ರಸಾರಕ್ಕೆ ಬುಕ್‌ಪೋಸ್ಟ್‌ನಂತಹ ಸಂಗತಿಗಳು ಜನರ ಭಾವೈಕ್ಯ ಬೆಸೆಯುವಂತೆ ಕಾರ್ಯನಿರ್ವಹಿಸಿದವು. ಈ ಬ್ರಿಟಿಷ್ ರಾಜ್ಯಭಾರದಲ್ಲಿ ಕ್ರಮೇಣ ಮಧ್ಯಯುಗದ ಪಾಳೆಗಾರಿಕೆ ಅಂತ್ಯ ಕಂಡಿತು. ನಿರಂಕುಶರಾದ ರಾಜ, ಮಂತ್ರಿ, ಸರದಾರ, ಪಂಡಿತ ಇವರಿಂದ ಕೂಡಿದ ರಾಜರ ದರಬಾರು ನಿಂತು ಹೋಯಿತು. ಪಾಳೆಯಗಾರರು ರಾಜ ಯಾರಾದರೇನು ? ಎಂಬ ತಾರ್ಕಿಕತೆಗೆ ಬಂದರು. ಈ ಮಧ್ಯಯುಗದ ರಾಜಕೀಯ ವಿದ್ಯಾಮಾನ ಅಂತ್ಯ ಆರಂಭವಾಯಿತು. ಕ್ರಿ.ಶ.೧೮೫೭ ರಿಂದ ೧೯೪೭ ರ ವರೆಗೆ ಸಾಹಿತ್ಯ ಲೋಕದಲ್ಲಿ ಕಂಡ ಪರಿಣಾಮವೆಂದರೆ ರಾಜಾಶ್ರಯದಿಂದ ಮುಕ್ತಿ ಹೊಂದಿ ಸ್ವತಂತ್ರ ರಚನೆಗೆ ಮುಖ ಮಾಡಿದರು. ಮೈಸೂರು ಸಂಸ್ಥಾನವು ಈ ಸ್ಥಿತಿಗೆ ಭಿನ್ನವಾದದ್ದು.

'ರಾಷ್ಟ್ರೀಯವಾದ' ದೇಶದ ರಾಜಕೀಯದ ಮೇಲೆ ಮತ್ತು ಲೇಖಕರ ಮೇಲೆ ಬಹಳ ಸಂಕೀರ್ಣವಾದ ಪ್ರಭಾವವನ್ನು ಬೀರುತ್ತ ಬಂದಿದೆ. ವರ್ಣ, ವರ್ಗ ಸಂರಚನೆಯನ್ನು ಹೊಂದಿರುವ ಸಮಾಜ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಆಂದೋಲನ ನಿಯಮಿಸುವ ಜವಾಬ್ದಾರಿ ಸಾಮಾನ್ಯವಾದದ್ದಲ್ಲ. ಸ್ವತಂತ್ರ ಪೂರ್ವ ಸಂದರ್ಭದಲ್ಲಿ ರಾಷ್ಟ್ರೀಯ ಆಂದೋಲನ ತೀವ್ರತೆಯನ್ನು ಬೇರೆ ಬೇರೆ ತಿರುವುಗಳನ್ನು ಪಡೆಯುತ್ತಿತ್ತು. ರಾಷ್ಟ್ರೀಯ ಆಂದೋಲನದಲ್ಲಿ ಜೀವನದ ಎಲ್ಲ ನೆಲೆಯಿಂದಲೂ ನಾಗರೀಕರು ಭಾಗವಹಿಸುವ ಅವಶ್ಯಕತೆ ಇತ್ತು. ಇಂತಹ ಆಂದೋಲನಗಳ ಮುಖಂಡತ್ವವನ್ನು ಎರಡನೆಯ ಹಂತದಲ್ಲಿ ಮಹಾತ್ಮಾಗಾಂಧಿ ವಹಿಸಿದ್ದರು. ಈ ಹಂತಕ್ಕೆ ವೇದಿಕೆಯನ್ನು ಒದಗಿಸಿ ಕೊಟ್ಟಿದ್ದು ಸ್ವಾತಂತ್ರ್ಯದ ಕಲ್ಪನೆ, ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ, ಹೋರಾಟದಲ್ಲಿ ಅವುಗಳ ಪಾತ್ರ ಗಮನಿಸುವಂತಹದ್ದು. ಇಂಗ್ಲಿಷ್ ಹಾಗೂ ಪೋರ್ಚುಗೀಸರ ಆಡಳಿತಾತ್ಮಕ ಪ್ರಭಾವ ರಾಜಕೀಯ ಗುಂಪುಗಾರಿಕೆ, ಭಾಷೆಯ ಪ್ರಚಾರ ಮೊದಲಾದ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಮೂಡಿಬಂದಿದೆ. ಹಾಗೆಯೇ ಬರಹಗಾರರ ಮೇಲೆ ಗಾಢವಾದ ಪ್ರಭಾವ ಬೀರಿದ್ದು ಸುಳ್ಳಲ್ಲ. ಆ ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ಇದನ್ನೆ ತಿಪ್ಪೇರುದ್ರಸ್ವಾಮಿಯವರು "ಈ ರಾಜಕೀಯ ಹೋರಾಟದ ಜೊತೆಯಲ್ಲೇ ಸಮಾಜವು ಪರಿವರ್ತನೆಯ ಸುಳಿಯಲ್ಲೇ ಸಿಕ್ಕಿತು. ಒಂದು ಕಡೆ ರಾಷ್ಟ್ರೀಯ ಭಾವನೆ ಉದ್ದೀಪನಗೊಂಡಂತೆ ಇನ್ನೊಂದು ಕಡೆಯಲ್ಲಿ ಪ್ರಾಚೀನವಾಗಿ ಬಂದ ಸಾಮಾಜಿಕ ವ್ಯವಸ್ಥೆಯ ಬೇರುಗಳು ಅಲ್ಲಾಡಿದವು."[೬೨] ರಾಷ್ಟ್ರ ಕೇವಲ ಒಂದು ಆರ್ಥಿಕ ಚಟುವಟಿಕೆಯನ್ನು ಬಿಂಬಿಸುವ ಪದವಲ್ಲ. ಅದು ಸಾಂಸ್ಕೃತಿಕ ಸಮುದಾಯವನ್ನು, ಸಾಮಾಜಿಕ ಈ ಸ್ಥಿತ್ಯಂತರಗಳನ್ನು ಕಲ್ಪಿಸಿಕೊಳ್ಳುವ ಕ್ರಮವೂ ಹೌದು.

ರಾಷ್ಟ್ರದ ಜನರೆಲ್ಲರೂ ಊರು, ಮನೆ ಸಮಾಜದ ಸದಸ್ಯರಂತೆ ಪರಸ್ಪರ ಅಪರಿಚಿತರೆ. ಆದರೂ ತಾವೆಲ್ಲ ಒಂದು ಎಂದು ಅವರು ಭಾವಿಸುವ ಶಕ್ತಿ ಒಂದಿದೆ. ಇಲ್ಲಿ ಕಾಲ ಬದಲಾದಂತೆ ಹಳೆ ಮತ್ತು ಹೊಸ ಮೌಲ್ಯಗಳ ಸಂಘರ್ಷ ಇದಕ್ಕೆ ಕಾರಣವಾದಂತೆ ಕಾಣುವದು. "ಪಾಶ್ಚಿಮಾತ್ಯರಿಂದ ರಾಜಕೀಯ ಶಕ್ತಿಯು ಭಾರತದಾದ್ಯಂತ ಕಾರ್ಯಸಾಫಲ್ಯತೆಯನ್ನು ಹೊಂದಿತು. ಅವರು ಪ್ರದೇಶಗಳನ್ನು ವಶಪಡಿಸಿಕೊಳ್ಳುವದರ ಜೊತೆಗೆ ಪ್ರಭುತ್ವವನ್ನು ಸ್ಥಾಪಿಸಿದರು. ಅವರಿಗೆ ಸಹಾಯವಾಗುವಂತೆ ಒಂದು ವರ್ಗ ಸೃಷ್ಟಿಗೊಂಡಿತ್ತು."[೧೮] ಈ ವ್ಯವಸ್ಥೆಗೆ ಪೂರಕವಾಗುವಂತಹ ವಿದ್ಯಾಭ್ಯಾಸ ಪದ್ಧತಿ ರೂಪುಗೊಂಡಿತು. ಅದರ ಪರಿಣಾಮ ಎರಡು ರೀತಿಯ ವರ್ಗಗಳು ನಮ್ಮಲ್ಲೆ ಉದ್ಭವಿಸಿದವು. ಮಾನವನ ಬದುಕಿನ ಮೇಲೆ ರಾಜಕೀಯ ಅಲ್ಪಸ್ವಲ್ಪ ಪರಿಣಾಮ ಬೀರುತ್ತಾ ಹೋಗುವದು. ಒಂದು ಸಾರೆ ಅದು ತೀವ್ರ ಸ್ವರೂಪವನ್ನು ಪಡೆಯುವದು. ಇತಿಹಾಸವನ್ನು ಅವಲೋಕಿಸಲಾಗಿ ಜಾಗತಿಕವಾಗಿ ಕ್ರಾಂತಿಕಾರಕ ಬದಲಾವಣೆಗೆ ಸಾಹಿತ್ಯವೆಂಬುದು ಸಂಪೂರ್ಣವಾಗಿ ಅಲ್ಲದಿದ್ದರೂ ಸಾಕಷ್ಟು ಮಟ್ಟಿಗೆ ಪರಿಣಾಮ ಬೀರುವದು. ಸಾಹಿತ್ಯ ಮತ್ತು ರಾಜಕೀಯಗಳೆರಡು ಬದುಕಿನ ಮಧ್ಯದಿಂದಲೆ ಮೂಡಿರುತ್ತವೆ. ಆದುದರಿಂದ ಅವೆರಡು ನಿಕಟ ಸಂಬಂಧವನ್ನು ಹೊಂದಿರುತ್ತವೆ. "ಮಾನವ ಬದುಕಿನಲ್ಲಿ ಸಮಾಜದಲ್ಲಿ ರಾಜಕೀಯ ವ್ಯವಸ್ಥೆ ಒಂದು ಪ್ರಮುಖವಾದ ಅಂಗ. ಆದ್ದರಿಂದ ಸಾಹಿತ್ಯ ಚಿತ್ರಿಸುವ ಬದುಕಿನ ಚಿತ್ರಣ ಹಾಗೂ ಕಾಣುವ ಕನಸುಗಳು ಮಾನವ ಸಮಾಜದ ರಾಜಕೀಯ ವ್ಯವಸ್ಥೆಯನ್ನು ಬದಲಿಸುತ್ತದೆ."[೧೯] ಈ ರೀತಿಯಾದ ಸಂಬಂಧಗಳು ರಾಜಕೀಯ ವ್ಯವಸ್ಥೆ, ಸಾಹಿತಿಯ ದೃಷ್ಟಿಕೋನದ ನಿರ್ಧಾರಗಳಲ್ಲೊಂದಾಗುವದು. ಸಾಹಿತಿಯ ರಚನಾ ವಿಧಾನವನ್ನು ತನ್ನ ಪ್ರಭಾವ ವಲಯದಲ್ಲಿ ಎಳೆದುಕೊಳ್ಳುತ್ತದೆ. ಈ ರೀತಿಯ ಸಾಹಿತ್ಯ ರಾಜಕೀಯ ವ್ಯವಸ್ಥೆಯನ್ನು ಬದಲಿಸುವ ಕಾರಣಗಳಲ್ಲೊಂದಾಗಿ ಕಾಣುವದು.

ಕನ್ನಡದ ಸಂದರ್ಭದಲ್ಲಿ ರಾಜಕೀಯ ವಲಯದ ಮೇಲೆ ಪ್ರಭಾವ ಬೀರಿದ್ದು ಗಾಂಧಿವಾದ ಮತ್ತು ಅವರ ರಾಜಕೀಯ ಆಂದೋಲನ. ಸಾಹಿತ್ಯ ಲೋಕದ ಮೇಲೆ ಗಾಂಧೀವಾದದ ಜೊತೆಗೆ ಲೋಹಿಯಾವಾದ ಮತ್ತು ಸಾಹಿತ್ಯ, ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ಮೇಲೆ ಅದರ ಪರಿಣಾಮಗಳನ್ನು ಸಾಹಿತ್ಯ ಇತಿಹಾಸ ಅವಲೋಕಿಸಿದಾಗ ಗಮನಿಸಲು ಸಾಧ್ಯ.

ಕನ್ನಡ ಸಾಹಿತ್ಯಕ್ಕೆ ಕವಿರಾಜಮಾರ್ಗದ ಕಾಲದಿಂದಲು ರಾಜಾಶ್ರಯವಿರುವದು ಕಾಣುವದು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಮೈಸೂರು ಅರಸರು ಸಹಾಯ ಮತ್ತು ಸಹಕಾರದ ಪೋಷಣೆಯನ್ನು ಕೊಟ್ಟಿದ್ದಾರೆ. ೧೯ ಮತ್ತು ೨೦ನೇ ಶತಮಾನ ಸಂದರ್ಭದಲ್ಲಿ ಪಾಶ್ಚಾತ್ಯ ಸಂಪರ್ಕ ಸಾಕಷ್ಟಾಯಿತು. ಬ್ರಿಟಿಷರ ಧಾಳಿ ಭಾರತದ ಮೇಲೆ ಹಲವು ನಿಟ್ಟಿನಲ್ಲಿ ನಡೆಯಿತು. "ಮುಂಬೈ, ಮದ್ರಾಸ್ ಈ ಮುನ್ನಿನ ವ್ಯಾಪಾರ ಸ್ಥಳಗಳು ರಾಜಕೀಯ ಕೇಂದ್ರಗಳಾದವು."[೨೦] ದೇಶಿಯ ರಾಜರು ಬ್ರಿಟಿಷರೊಟ್ಟಿಗೆ ಸೆಣಸಾಡಿ

ಅಪಜಯ ಹೊಂದಿ ನಿರ್ಮೂಲವಾದರು. ಕರ್ನಾಟಕದ ಹಲವಾರು ಜಿಲ್ಲೆಗಳು ಮುಂಬೈ, ಮದ್ರಾಸ್ ಪ್ರಾಂತಕ್ಕೊಳಪಟ್ಟವು. ಮೈಸೂರು ಹೈದ್ರಾಬಾದು, ಮದ್ರಾಸ್ ಹಾಗೂ ಮುಂಬೈ ಪ್ರಾಂತಗಳಲ್ಲಿ ಕನ್ನಡ ಪ್ರದೇಶಗಳು ಹಂಚಿ ಹೋಗಿದ್ದವು. ಬ್ರಿಟಿಷ್ ಆಡಳಿತದಲ್ಲಿನ ಕಾರ್ಯಕ್ಷಮತೆ ಕುರಿತು ಈಗಾಗಲೆ ಗಮನಿಸಿದ್ದೇವೆ. ಇದರ ಪರಿಣಾಮ ಅಭಿವೃದ್ಧಿಯ ಹಿಂದೆ ಪಾಶ್ಚಾತ್ಯ ಪ್ರೇರಣೆ, ಪ್ರಭಾವ, ರಾಜಕೀಯ ಸುಧಾರಣೆ, ಔದ್ಯೋಗೀಕರಣ ಹಲವಾರು ಅಂಶದ ಮೇಲೆ ಪ್ರಭಾವ ಬೀರಿತು. ಸ್ವಾತಂತ್ರ್ಯ ಹೋರಾಟ ಸಂದರ್ಭ ಪ್ರಾದೇಶಿಕವಾಗಿಯು ತೀವ್ರತರವಾದ ಪ್ರಭಾವವನ್ನು ಬೀರಿತು.

ರಾಜಕೀಯ ಚಳುವಳಿಗಳು ಬಿರುಸುಗೊಂಡವು. ಕರ್ನಾಟಕ ಸಂದರ್ಭದಲ್ಲಿಯೂ ಮಹತ್ತರವಾದ ಬದಲಾವಣೆಗಳಾದವು. ಕಾದಂಬರಿಕಾರರು ಅದನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದರು. ಖಾದಿ ಚಳುವಳಿ, ರಾಷ್ಟ್ರೀಯ ವಿದ್ಯಾಭ್ಯಾಸ, ಹರಿಜನೋದ್ಧಾರ, ಮುಂತಾದ ವಿಚಾರಗಳು ಮಹತ್ವದ್ದಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿದವರು. ಕಾರ್ನಾಡ ಸದಾಶಿವರಾಯರು ಎಂದು ಕಾರಂತರು ಸ್ಮೃತಿ ಪಟಲದಲ್ಲಿ ಸ್ಮರಿಸಿದ್ದಿದೆ. “ಈ ಜಿಲ್ಲೆಯ ರಾಜಕೀಯ ಮಾತ್ರ ಯಾವತ್ತೂ ಕರ್ನಾಟಕದ ರಾಜಕೀಯವನ್ನು ಹೊಂದಿತ್ತು.”[೨೧] ಎಂಬ ಸೂಕ್ಷ್ಮ ವಿಚಾರ ಪ್ರಾದೇಶಿಕತೆ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ಗಮನಿಸಬಹುದು. ಈ ನಿಟ್ಟಿನಲ್ಲಿ ಕನ್ನಡ ಕಾದಂಬರಿಕಾರರು ಸಮಾಜದ ರಾಜಕೀಯ ಆಗು ಹೋಗುಗಳನ್ನು ಕುರಿತು ಪ್ರತಿಕ್ರಿಯಿಸಿರುವುದು ಮುಖ್ಯವಾಗಿದೆ.

ಒಟ್ಟು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ನಡವಳಿಕೆಗಳು, ಚಳುವಳಿಗಳು ಸಾಹಿತ್ಯಕ್ಕೆ ಸಾಕಷ್ಟು ಸಾಮಗ್ರಿಯನ್ನೊದಗಿಸಿದವು. ಸಾಹಿತ್ಯದ ಸ್ವರೂಪದಲ್ಲಿ ಬದಲಾವಣೆಗಳು ಉಂಟಾದವು. ಕರ್ನಾಟಕದಲ್ಲಿ ಅದರ ಪ್ರಭಾವ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಮೈಸೂರು ಪ್ರದೇಶದಲ್ಲಾದ ರಾಜಕೀಯ ಬೆಳವಣಿಗೆಯ ಫಲವೆನ್ನಬಹುದು. ಕನ್ನಡ ಸಾಹಿತ್ಯ ರಚನೆಯ ಸಂದರ್ಭದಲ್ಲಿ ೨೦ನೇ ಶತಮಾನದ ಪೂರ್ವಾರ್ಧವು ಮಹತ್ವವಾದುದು. ಅದೊಂದು ಸಂಧಿಕಾಲ ಮತ್ತು ಸಮಾಜ ಪರಿವರ್ತನೆಯ ಕಾಲವಾಗಿತ್ತು. ಏಕೆಂದರೆ ಈ ರಾಜಕೀಯ ಹೋರಾಟದ ಜತೆಯಲ್ಲೇ ಸಮಾಜ ಪರಿವರ್ತನೆಯ ಸುಳಿಯಲ್ಲಿ ಸಿಕ್ಕು ಸಂಘರ್ಷಕ್ಕೆ ಎಡೆಮಾಡಿತು. ಒಂದು ಕಡೆ ರಾಷ್ಟ್ರೀಯ ಪ್ರಭಾವ ಉದ್ದೀಪನಗೊಂಡು ಪ್ರೇರಣೆ ನೀಡಿತು. ಇನ್ನೊಂದು ಕಡೆಯಲ್ಲಿ ಪ್ರಾಚೀನವಾಗಿ ಬಂದ ಸಾಮಾಜಿಕ ವ್ಯವಸ್ಥೆಯ ಬೇರುಗಳನ್ನು ಅಲ್ಲಾಡಿಸಿ ಮುರಿದು ಕಟ್ಟಲು ಪ್ರಯತ್ನಿಸಿತು.

ಈ ಸಂಗತಿಗಳಿಗೆ ಮುಖ್ಯ ಕಾರಣ ಹಳೆ ಮತ್ತು ಹೊಸ ಮೌಲ್ಯಗಳ ಘರ್ಷಣೆಯಿಂದುಂಟಾದ ಪರಿಣಾಮವಾಗಿದೆ. ಪಾಶ್ಚಾತ್ಯರಿಂದ ರಾಜಕೀಯ ಶಕ್ತಿಯು ಭಾರತದಾದ್ಯಂತ ಕಾರ್ಯಸಾಫಲ್ಯತೆಯನ್ನು ಹೊಂದಿತು. ಅವರು ವಿವಿಧ ಪ್ರದೇಶಗಳನ್ನು ವಶಪಡಿಸಿಕೊಳ್ಳುವದರ ಜೊತೆಗೆ ಪ್ರಭುತ್ವವನ್ನು ಸ್ಥಾಪಿಸಿದರು.

ಅಂತೆಯೇ "ಆಳರಸರನ್ನು ಆಶ್ರಯಿಸಿ ಸುಖಲೋಲುಪತೆಯ ಜೀವನ ಕ್ರಮಕ್ಕೆ ಒಲಿದ ಅಧಿಕಾರಿಗಳ ವರ್ಗ ಒಂದು ಕಡೆ ಬೆಳೆಯಿತು. ಆಂಗ್ಲರ ನುಡಿಗಳೇ ಅವರಿಗೆ ಆದರ್ಶವಾಗಿ ನಮ್ಮದೆನ್ನುವದೆಲ್ಲ ತಿರಸ್ಕೃತವೆಂಬ ಕ್ಷುದ್ರತನ ವ್ರತವಾಯಿತು. ಇದರ ಜೊತೆಯಲ್ಲಿ ಇಂಗ್ಲಿಷ್ ಭಾಷೆಗೆ ಮಾರು ಹೋಗಿ ಅದರ ಒರೆಗಲ್ಲಿನಲ್ಲಿ ನಮ್ಮದನ್ನು ಉಜ್ಜಿ ನೋಡುವ ವಿಚಾರವಂತಿಕೆಯೂ ಉಂಟಾಯಿತು. ಹೊಸ ವಿಚಾರಗಳ ಗಾಳಿ ಬೀಸತೊಡಗಿತು."[೨೨] ಆದುದ್ದರಿಂದ ಮೊದಲ ಕಾದಂಬರಿಗಳು ಸಿದ್ಧಾಂತವನ್ನು ಪ್ರಚುರ ಪಡಿಸಲು ವಸಾಹತುಶಾಹಿ ಆಡಳಿತ ಅದಕ್ಕೆ ಎದುರಾಗಿ ರೂಪ ತಾಳಿತ್ತು. ರಾಷ್ಟ್ರೀಯತೆಯ ಕಲ್ಪನೆ, ಅದು ಕರ್ನಾಟಕದ ಮೇಲೆ ಬೀರಿದ ಪರಿಣಾಮ, ಇಂಗ್ಲಿಷ್ ವಿದ್ಯಾವಂತ ವರ್ಗ, ಸಾಂಸ್ಕೃತಿಕ ಕಾಳಜಿಗಳು ರಾಜಕೀಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವು.

"ಭಾರತದಾದ್ಯಂತ ಆಡಳಿತ, ವ್ಯವಹಾರ, ಶಿಕ್ಷಣ ಮುದ್ರಣಯಂತ್ರ, ಗ್ರಂಥೋದ್ಯಮ, ಕ್ರೈಸ್ತಮತ ಪ್ರಚಾರ ಮುಂತಾದ ಕ್ಷೇತ್ರಗಳಲ್ಲಿ ಹೊಸ ವಿಚಾರ ಸರಣಿ ವ್ಯಕ್ತವಾದುದು ಕಂಡುಬರುತ್ತದೆ. ಈ ಸಮಯದಲ್ಲಿ ಹಿಂದು ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಗಳು ಸಹಜವಾಗಿಯೇ ಆದವು."[೨೩] ದೇಶಿಯ ಮೌಲ್ಯಗಳು ಸಡಿಲಗೊಳ್ಳತೊಡಗಿದವು. ಮೈಸೂರು ಪ್ರದೇಶದಲ್ಲಿ ಮಾತ್ರ ಮಧ್ಯಯುಗೀನ ಪರಂಪರೆ ಮುಂದುವರೆದುಕೊಂಡು ಬಂದಿತು. ಕರ್ನಾಟಕದಲ್ಲಿದ್ದಂತೆ ಒಟ್ಟು ವ್ಯವಸ್ಥೆಯಲ್ಲಿ ಪರಿವರ್ತನೆಯಾದುದು ಗಮನಿಸಬಹುದು. ಸಮಾಜ ಸ್ಥಿತ್ಯಂತರಗೊಂಡಂತೆ ಸಮಗ್ರ ವ್ಯವಸ್ಥೆಯಲ್ಲೂ ಬದಲಾವಣೆಯಾಯಿತು. ಇದನ್ನು ಸಮಾಜದಲ್ಲಾದ ಬದಲಾವಣೆಯೆಂದು ಇಲ್ಲಿ ಗಮನಿಸಲಾಗಿದೆ. ಗಾಂಧೀಜಿಯವರ ರಾಜಕೀಯ ಪ್ರವೇಶವು ಕೇವಲ ಸ್ವಾತಂತ್ರ್ಯವನ್ನು ಪಡೆಯುವ ಉದ್ದೇಶ ಅಷ್ಟೆ ಆಗಿರದೆ, ಸಮಾಜದ ಸರ್ವಾಂಗೀಣ ಅಭಿವೃದ್ಧಿ ಕಡೆಗೂ ಇದ್ದಿತ್ತು. ವಿಶೇಷವಾಗಿ ಅಸ್ಪೃಶ್ಯತಾ ನಿವಾರಣೆ, ಮೂಢನಂಬಿಕೆಗಳ ನಿರಾಕರಣೆ, ಸ್ವದೇಶಿ ಚಳುವಳಿ ವಿದೇಶಿ ವಸ್ತುಗಳ ನಿರಾಕರಣೆ ಸಾಹಿತ್ಯ ವಸ್ತುವಾಗಿ ಮೂಡಲು ಸಾಧ್ಯವಾಯಿತು. ಈ ಕಾಲದಲ್ಲಿ ರಾಜಕೀಯವಾಗಿ ಕ್ರಾಂತಿಕಾರಕ ಬದಲಾವಣೆಗೆ ವೇದಿಕೆ ಒದಗಿತು. ರಾಜಕೀಯ ಜಾಗೃತಿ ದೇಶದ ಮೂಲೆ ಮೂಲೆಗೆ ಹಬ್ಬಿತು. ಈ ಸಂಗತಿ ಸಾಹಿತ್ಯದ ಮುಖಾಂತರ ರಾಜಕೀಯ ಪ್ರಭಾವ ಪಡೆಯಿತು.

೧೮ನೇ ಶತಮಾನದ ಸಾಹಿತ್ಯವು ಹಿಂದಿನ ಕಾಲದ ಸಾಹಿತ್ಯದಷ್ಟು ಸತ್ವಪೂರ್ಣವಾಗಿರಲಿಲ್ಲ. ಅದಕ್ಕೆ ಕಾರಣ ದೇಶದ ಅಂದಿನ ಸ್ಥಿತಿಗತಿಯೇ ಮೂಲ ಕಾರಣ. ಈ ಸಮಯದಲ್ಲಿ ಕರ್ನಾಟಕದಲ್ಲಿ ಬಲಿಷ್ಠ ರಾಜಮನೆತನ ಯಾವುದೂ ಆಳುತ್ತಿರಲಿಲ್ಲ. ಅಲ್ಲದೆ ಪೇಶ್ವೆ, ನಿಜಾಮ ಮುಂತಾದ ಅನ್ಯಭಾಷಿಕರ ರಾಜಸತ್ತೆಯ ಪ್ರಭಾವವಿದೆ. ಕನ್ನಡದ ಅನೇಕ ಪ್ರದೇಶಗಳು ಇದಕ್ಕೆ ಒಳಪಟ್ಟಿದ್ದವು. ಚಿಕ್ಕದೇವರಾಯನ ಕಾಲದಲ್ಲಿನ ಕವಿ ಪರಂಪರೆ ಅವರ ಕಾಲಕ್ಕೆ ಸೀಮಿತವಾದಂತೆ ಕಾಣುವುದು. ನಂತರ ಇತರ ಮೈಸೂರು

ಅರಸರು ಮುಂದಿನ ಒಂದು ಶತಮಾನದವರೆಗೆ ಅಂತಹ ಹೇಳಿಕೊಳ್ಳುವ ಕಾರ್ಯ ಚಟುವಟಿಕೆ ನಡೆಯಲಿಲ್ಲ. ಇಂತಹ ವಾತಾವರಣದಲ್ಲಿ ೧೮ನೇ ಶತಮಾನದ ಸಾಹಿತ್ಯ ನಿರ್ಮಿತಿಯು ಇತರ ಕಾಲಕ್ಕೆ ಹೋಲಿಸಿದಾಗ ಅಷ್ಟೊಂದು ಸತ್ವಯುತವಾಗಿ ಹೊರಬರಲಿಲ್ಲವೆನ್ನುವುದು ನಿಜವಾದರೂ, ಆ ಕಾಲದ ಸಾಹಿತ್ಯವು ಅತ್ಯಂತ ಬರಡು ಮತ್ತು ನಿಸ್ಸತ್ವವಾಗಿತ್ತು ಎಂದು ತಿಳಿಯುವದು ಸರಿಯಲ್ಲವೆಂದು ಗಮನಿಸಬಹುದು. ಮೌಲಿಕವೆನ್ನುವುದು ಈ ಶತಮಾನದ ಕೃತಿಗಳಲ್ಲಿ ಇಲ್ಲವೆಂದು ಅನಿಸಬಹುದು.

ಕರ್ನಾಟಕದ ವಸಾಹತು ಚರಿತ್ರೆಯ ಕ್ರಿ.ಶ.೧೭೯೯ ರಿಂದ ಆರಂಭವಾದರೂ ೧೮೫೭ರ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ದಮನ ಮಾಡುವ ಸಮಯಕ್ಕೆ ವಸಾಹತು ಕ್ರಿಯೆ ಭಾರತದಲ್ಲಿ ಭದ್ರವಾಗಿತ್ತು. ಅದೇ ವರ್ಷ ಭಾರತದ ಮೂರು ನಗರಗಳಲ್ಲಿ ಕಲ್ಕತ್ತಾ, ಮುಂಬೈ ಮತ್ತು ಮದರಾಸುಗಳಲ್ಲಿ ಪಾಶ್ಚಿಮಾತ್ಯ ಶಿಕ್ಷಣದ ಟಿಸಿಲುಗಳು ಚಿಗಿಯತೊಡಗಿದ್ದವು. ಇದು ಆ ಕಾಲದ ಗಮನಾರ್ಹವಾದ ಸಂಗತಿ. ಈ ಶಿಕ್ಷಣದ ಹಿಂದೆ ಇರುವ ಉದ್ದೇಶ ಅದರ ಪರಿಣಾಮ ಎಲ್ಲರಿಗೂ ಗೊತ್ತಿರುವುದೆ ಆಗಿದೆ. ಮೆಕಾಲೆಯ ಪ್ರಭಾವ ಪರಿಣಾಮ ಕಾಣುವುದು. ಇಲ್ಲಿ ಮುಂದುವರೆದು 'ವಸಾಹತುಶಾಹಿ ಆಧುನಿಕತೆ' ಬೀರಿದ ಪರಿಣಾಮ, ಸವಾಲುಗಳ ಬಹಳ ಮುಖ್ಯವಾಯಿತು. ಭಾರತದಲ್ಲಿ ವಸಾಹತುಶಾಹಿಯು ತೀವ್ರ ಸಾಮಾಜಿಕ ಕ್ರಾಂತಿಯನ್ನು ತರಲಿಲ್ಲವೆಂಬುದು ಖೇದಕರ ಸಂಗತಿ. ಇದು ಹಲವಾರು ತಿರುವುಗಳ ಅಧ್ಯಯನ ಪ್ರಾರಂಭವಾಯಿತು. ಪರಿವರ್ತನೆಗೆ, ಸಂಪೂರ್ಣವಲ್ಲದಿದ್ದರು ಅಲ್ಪ ಸ್ವಲ್ಪ ದಾರಿ ಮಾಡಿಕೊಟ್ಟಿತು. ಫ್ಯೂಡಲ್ ವ್ಯವಸ್ಥೆಯು ಎದುರಿಸಿದ ರೀತಿ ಗಮನಿಸುವಂತಹದ್ದು. ಭಾರತೀಯ ಶ್ರೇಣೀಕರಣ ವ್ಯವಸ್ಥೆ ಮುಂದುವರೆಸಿದ್ದಿದೆ. ಈ ಸಂದರ್ಭಕ್ಕೆ ತಕ್ಕಂತೆ ಇಂಗ್ಲಿಷ್ ವಿದ್ಯಾವಂತರ ಮನೋಸ್ಥಿತಿಯು ಪರಿವರ್ತನೆಗೊಳ್ಳತೊಡಗಿತು.

ಭಾರತದ ಭಾಗವಾಗಿರುವ ಕರ್ನಾಟಕದ ಕನ್ನಡ ನಾಡು ನುಡಿಗಳು ಪರಾಧೀನವಾದದ್ದನ್ನು ಮೊದಲ ಹಂತದ ಕಾದಂಬರಿಕಾರರು ಪ್ರಶ್ನಿಸಿದ್ದಾರೆ. ಇದಕ್ಕೆ ಉತ್ತರ ನೀಡುವಾಗ ಆಧುನಿಕ ಮತ್ತು ಸಾಂಪ್ರದಾಯಿಕವಾದ ಚಿತ್ರಣವೊಂದನ್ನು ಕಟ್ಟಿಕೊಟ್ಟಿದ್ದಾರೆ. ಸಮಾಜವನ್ನು ಸಂಘಟಿಸುವ ಸಾಂಸ್ಕೃತಿಕ ಮೌಲ್ಯಗಳ ಅವನತಿಯಿಂದಾಗಿಯೇ ಭಾರತ ಆ ಕಾಲಕ್ಕೆ ಪರಾಧೀನವಾಯಿತು. ಮೊದಲ ಕಾದಂಬರಿಗಳಲ್ಲಿ ಚೈತನ್ಯಶೀಲವಾದ ಸಮಾಜವನ್ನು, ರಾಜಕೀಯ ನೆಲೆಯನ್ನು ಗಟ್ಟಿಗೊಳಿಸುವ ಪ್ರಯತ್ನ ಕಾಣುವುದು. ವಸಾಹತು ನಾಟಕೀಕರಣ ವಿರೋಧಿ ನೆಲೆ ನಡೆಯುವುದು. ಪರ್ಯಾಯವಾಗಿ, ಆದರೆ ನೇರವಾಗಿ ಪರಿಣಾಮ ಬೀರಿದಂತಿಲ್ಲ. ಅದನ್ನು ಪಾರ್ಥಾ ಚಟರ್ಜಿ ಈ ರೀತಿ ಚಿತ್ರಿಸಿದ್ದಾರೆ. "ವಸಾಹತು ಸಂದರ್ಭದಲ್ಲಿ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲಾಗದ ಈ ಕಾದಂಬರಿಕಾರರ

ಮೌಲ್ಯಗಳು ಅವರ ಕೃತಿಗಳಲ್ಲಿ ಕನಸಿನ ರೂಪವನ್ನು ತಾಳುತ್ತದೆ."[೨೪] ವಸಾಹತೀಕರಣದ ಬೆಳವಣಿಗೆಗಳು ಭಾರತೀಯತೆಯ ಪ್ರತಿಕ್ರಿಯೆಯನ್ನು ಮತ್ತು ಅದರ ಪರಿಣಾಮಗಳನ್ನು ಸೂಚಿಸುವಂತಿವೆ.

ಮೆಕಾಲೆಯ ಶಿಕ್ಷಣದ ನೀತಿಯಲ್ಲಿ ಪಡೆದ ಯಶಸ್ಸನ್ನು ಡಿ.ಆರ್. ನಾಗರಾಜರವರು ಈ ರೀತಿ ಗುರುತಿಸಲು ಪ್ರಯತ್ನಿಸಿದ್ದಾರೆ. "ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಭಾರತದ ಅನೇಕ ಧರ್ಮ, ಜಾತಿ ಮತ್ತು ಪ್ರಾದೇಶಿಕ ವೈವಿಧ್ಯತೆಗಳು ಅಡ್ಡಿಯಾಗಿದ್ದವು. ಆದುದರಿಂದ ತಮ್ಮ ಅನುಕೂಲಕ್ಕಾಗಿ ಭಾರತದಲ್ಲಿ ಒಂದು ಬಗೆಯ ಏಕರೂಪತೆಯನ್ನು ಸ್ಥಾಪಿಸುವೆಡೆಗೆ ಅವರು ಮೊದಲ ಲಕ್ಷವನ್ನಿತ್ತರು. ಲಾರ್ಡ್ ವೆಲ್ಲಸ್ಲಿ ೧೮೦೦ರಲ್ಲಿ ಕಲ್ಕತ್ತೆಯಲ್ಲಿ ಕಾಲೇಜ ಆಫ್ ಪೋರ್ಟ್ ವಿಲಿಯಂನ್ನು ಸ್ಥಾಪಿಸುವಾಗಲೇ ಈ ಉದ್ದೇಶವನ್ನು ಹೊಂದಿದ್ದವನು. ಇದನ್ನು ಟ್ರಪಾರ್ ಲಿಂಗ್ ಎನ್ನುವ ಲೇಖಕ ಗಮನಿಸಿದ್ದಾನೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಅನುಕೂಲವಾದ ಧಾರ್ಮಿಕ ಮತ್ತು ಸರಕಾರದ ತತ್ವಗಳನ್ನು ರೂಪಿಸುವುದು ವೆಲ್ಲಸ್ಲಿಯ ಉದ್ದೇಶವಾಗಿತ್ತು. ಆದರೆ ಬಂಗಾಳದ ಜನಪದ ಪರಂಪರೆಗಳು ವೆಲ್ಲಸ್ಲಿಯ ಪ್ರಯತ್ನಗಳಿಗೆ ಅನುಕೂಲಕರವಾಗಿರಲಿಲ್ಲ. ಬ್ರಾಹ್ಮಣರ ಹಳೆಯ ಗ್ರಂಥಗಳಲ್ಲಿ, ವೇದಾಂತಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೈದ್ಧಾಂತಿಕ ತಳಹದಿಯನ್ನು ಒದಗಿಸಬಲ್ಲ ವಿಷಯಗಳ ಸಿಕ್ಕಿದುವು."[೨೫] ಮುಂದುವರೆದು ಫ್ರಾಂಜ್ ಫ್ಯಾನಸ್ ಈ ರೀತಿ ಹೇಳುವರು. "ನಿರ್ವಸಾಹತೀಕರಣವೆಂದರೆ ವಸಾಹತುಶಾಹಿ ವಿರುದ್ಧ ಹೋರಾಟ ಮಾತ್ರವಲ್ಲ; ಅದು ಸಂಸ್ಕೃತಿಯ ಪುನಶ್ಚೇತನದ ಕೆಲಸ ಎಂದ ಫ್ಯಾನಸ್‌ನ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು."[೨೬] ವಸಾಹತು ನಾಡಿನ ಕಳಕಳಿ ಕಾದಂಬರಿಗಳಲ್ಲಿಯೂ ಮೂಡಿ ಬಂದಿದೆ. ಈ ಕಾದಂಬರಿಗಳಲ್ಲಿ ರಾಷ್ಟ್ರಕ್ಕೂ ಕಾದಂಬರಿಗೂ ಬಿಡಿಸಿಕೊಳ್ಳದ ನಂಟು ಒಂದು ಬೆಸೆದುಕೊಂಡಿದೆ. ರಾಷ್ಟ್ರವೆಂಬ ಭೌಗೋಳಿಕತೆಯು ಹಿಂದಿನಿಂದಲೂ ಇರಬಹುದು. ಆ ರೀತಿಯ ಕಲ್ಪನೆ ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಭಾವಿತವಾಗಿದೆಯಾದರೂ ಆಧುನಿಕ ರಾಷ್ಟ್ರೀಯ ಕಲ್ಪನೆಯು ಸಾಮಾಜಿಕ ಕಳಕಳಿಯಲ್ಲಿ ಮೂಡಿಬಂದಿರುವುದು ಕಾಣುವುದು. ರಾಷ್ಟ್ರ ಮತ್ತು ರಾಷ್ಟ್ರೀಯತೆಯನ್ನು ಕುರಿತು ಚಿಂತಿಸಿದ ಆ ಕಾಲದ ಕಾದಂಬರಿಕಾರರೂ ಆಧುನಿಕತೆಯೊಂದಿಗೆ ಬೆಸೆಯುವ ಕಾಲ್ಪನಿಕತೆಯಿಲ್ಲಿ ಕಾಣುವುದು.

ರಾಷ್ಟ್ರವೆಂಬ ಆದರ್ಶೀಕರಣವು, ಒಂದು ಆದರ್ಶವನ್ನು ಅದೇ ಕಟ್ಟಿಕೊಳ್ಳಬೇಕು. ತನ್ನ ಒಳ ತುಮುಲಗಳನ್ನು ಸಮರ್ಥಿಸಿಕೊಳ್ಳುತ್ತಾ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು. ಏಕೆಂದರೆ ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಮೇಲು ಜಾತಿಯಿಂದ ಬಂದ ವಿದ್ಯಾವಂತರು ರಾಷ್ಟ್ರದ ಕುರಿತ ಕಲ್ಪಿತ ಗಣ್ಯ ವರ್ಗದ ಕಲ್ಪನೆಗಳು ಹಲವಾರು ವೈರುದ್ಧಕ್ಕೆ ಕಾರಣವಾಗಿ ಕಾಣಿಸುವದು. ರಾಜಕೀಯವಾಗಿ ರಾಷ್ಟ್ರವೆಂಬ ಶಕ್ತಿಶಾಲಿಯಾದ ತಾತ್ವಿಕ ಕಲ್ಪನೆ ಪೊಳ್ಳಾಗದಂತೆ ಕಲ್ಪಿಸುವ ಅಗತ್ಯವಿದೆ. ರಾಷ್ಟ್ರವೆಂಬುದು ಅನೇಕ ಬಗೆಯ ಸಂದಿಗ್ಧತೆಗಳಿಂದ ಸಮೀಕರಣಗೊಂಡಿದ್ದು. ಸಂಕ್ರಮಣಾವಸ್ಥೆ ನಿರ್ಣಾಯಕವಲ್ಲದ ಪರಿಭಾಷೆಯಾಗಿ

ಕಾಣುವುದು. ಅಭಿರುಚಿ ಜನಾಂಗಕ್ಕನುಗುಣವಾಗಿ ಸಂಪ್ರದಾಯಗಳು, ರಾಜಕೀಯ ಅಧಿಕಾರದ ಸುಖಗಳು, ಅದನ್ನು ಹಿಂಬಾಲಿಸಿದವು ಮನೋಸ್ಥಿತಿಗಳು ಕ್ರೌರ್ಯ, ಸಾಮಾಜಿಕ ಸಂಸ್ಥೆಗಳು ಕಾನೂನಿನ ನ್ಯಾಯ ಪರಿಪಾಲನೆಯು ಹಿಂದುಗಡೆ ನಿಂತು ಕಾರ್ಯ ಮಾಡುವುದು. ಆ ರಾಷ್ಟ್ರವು ತನ್ನತನದ ಕಥೆ ಗಟ್ಟಿಗೊಳಿಸಿಕೊಂಡು ಆದರ್ಶೀಕರಣವನ್ನು ಹರಡಿ ಹೊಸ ಜನ, ಜನಾಂಗಗಳನ್ನು ತನ್ನ ಸುಳಿಯಲ್ಲಿ ತಮ್ಮನ್ನು ಪುನರುತ್ಥಾನಗೊಳಿಸಿಕೊಂಡು ಪುನರುತ್ಪಾದಿಸಿಕೊಳ್ಳಬೇಕಾಗುವುದು.

ಭಾರತದಲ್ಲಿ ಬ್ರಿಟಿಷರ ಆಡಳಿತವು ೧೯ನೆಯ ಶತಮಾನದ ಮೊದಲರ್ಧದಲ್ಲಿ ಸ್ಥಳಿಯ ಸಾಮಾಜಿಕ ವಿನ್ಯಾಸದಲ್ಲಿ ಹೆಚ್ಚಿನ ವ್ಯತ್ಯಾಸವನ್ನುಂಟುಮಾಡದೆಯೇ ಹೊಸ ಅವಕಾಶಗಳನ್ನು ಕಲ್ಪಿಸಿಕೊಟ್ಟಿತು. ಕರ್ನಾಟಕದಲ್ಲಿ ಕ್ರಿ.ಶ.೧೮೩೧ ರಿಂದ ೧೮೮೧ರವರೆಗೆ ಮಹಾರಾಜರ ದೇಶಿಯ ಆಡಳಿತ ನೆಪಮಾತ್ರದ್ದಾಗಿತ್ತು. ಮಹಾರಾಜರ ಪ್ರಭಾವವನ್ನು ಒಳಗೊಂಡರೂ ಪಾಶ್ಚಾತ್ಯ ರೀತಿಯಲ್ಲಿ ದೇಶದ ಬದಲಾವಣೆಗೆ ಮೈಸೂರು ಸ್ಪಂದಿಸಿತು. ಮಹಾರಾಜರ ಆಡಳಿತದ ಪ್ರಭಾವದಿಂದ ದೇಶಿಯ ಕೃತಿಗಳು ರಚನೆಯಾಗುತ್ತಿದ್ದ ಸಂದರ್ಭದಲ್ಲಿಯೇ ಮೈಸೂರಿನ ಸಾಮಾಜಿಕ ಆರ್ಥಿಕ ತಳಹದಿಯಲ್ಲಿ ಬದಲಾವಣೆಯು ನಡೆಯುತ್ತಿದ್ದಿತು. ಹೊಸ ವಿದ್ಯಾವಂತರು ಇಲ್ಲಿ ಬೆಳಕಿಗೆ ಬಂದರು. ಮಹಾರಾಜರ ಮೇಲೆ ಈ ವರ್ಗದ ಶ್ರದ್ಧೆ ನಂಬಿಕೆಗಳು ಅಸೀಮವಾಗಿದ್ದವು. ಅಲ್ಲಿ ಪರಂಪರಾಗತ ಸಂಗತಿಗಳು ಅವನತಿಗೆ ಸಾಗತೊಡಗಿದವು. ಪದೇ ಪದೇ ಬ್ರಿಟಿಷರಿಗೆ ಯುದ್ಧದಲ್ಲಿ ಸಹಾಯ, ಕ್ಷಾಮಗಳ ದೆಶೆಯಿಂದ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿತು. ಕ್ರಿ.ಶ.೧೮೮೧ರಷ್ಟೊತ್ತಿಗೆ ಬ್ರಿಟಿಷರು ಮಹಾರಾಜರಿಗೆ ರಾಜ್ಯವನ್ನು ಒಪ್ಪಿಸಿದರೂ ಈ ಸಮಯಕ್ಕೆ ಮಹಾರಾಜರು ಅಶಕ್ತರಾದರು. ಇದು ಈ ನಡುವೆ ಬ್ರಾಹ್ಮಣ ಬ್ರಾಹ್ಮಣೇತರ, ಮೈಸೂರಿಗರು-ಮೈಸೂರಿಗೇತರರು ಎಂಬ ವೈಷಮ್ಯದ ಸ್ಥಿತಿ ಅಲ್ಲಿ ನಿರ್ಮಾಣವಾದಂತೆ ಇದೆ.

ಕರಾವಳಿ ಭಾಗವು ಇದಕ್ಕಿಂತ ಭಿನ್ನತೆಯನ್ನು ಹೊಂದಿತ್ತು. ಸಾರಸ್ವತ ಸಮಾಜ ಕ್ರಿ.ಶ. ೧೭೦೦ ರಿಂದ ಗೋಮಾಂತಕತನದಿಂದ ತನ್ನ ವಲಸೆಯನ್ನು ಪ್ರಾರಂಭಿಸಿದ ಈ ಸಮಾಜ ಅನೇಕ ಬದಲಾವಣೆಗಳಿಗೆ ಒಳಗಾಗುತ್ತಲೇ ಬಂದಿತು. ಕೊಂಕಣಸ್ಥರಿಂದ ಬೇರೆಯಾಗಿ 'ಸಾರಸ್ವತ ಸಮಾಜ' ಹುಟ್ಟಿದದ್ದು ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನವೇ ಆಗಿತ್ತು. ಬ್ರಿಟಿಷ್ ಆಡಳಿತ ಸಮಯದಲ್ಲಿ ಸಾರಸ್ವತ ಸಮಾಜ ಮಗದೊಮ್ಮೆ ತನ್ನ ಗುರುತನ್ನು ಕಾಯುವ ಅಗತ್ಯ ಬಿದ್ದಂತೆ ಕಾಣುವುದು. ಈ ಕಾಲದಲ್ಲಿ ರಾಜಕೀಯದ ಜೊತೆಗೆ ಬೌದ್ಧಿಕ ಚರಿತ್ರೆಗೆ ಸಂಬಂಧಿಸಿದ ಸಂಘರ್ಷಗಳಿಗೆ ಒಳಗಾಗಿದ್ದುರಿಂದ ಸಹಜವಾಗಿ ಸಾಹಿತ್ಯವು ಸಾರಸ್ವತರ ಕ್ರಮಬದ್ಧ ಬದುಕಿಗೆ ವೇದಿಕೆ ಒದಗಿಸಿತು. ಇದಕ್ಕೆ ಇಂದಿರಾಬಾಯಿ ಕಾದಂಬರಿಯನ್ನು ಗಮನಿಸಬಹುದು.

ಬ್ರಿಟಿಷರು ಭಾರತಕ್ಕೆ ಬಂದ ಸಂಗತಿಗಳನ್ನು ಲೇಖಕರು ತಮಗೆ ಗಮನಕ್ಕೆ ಬಂದಂತೆ ಅರ್ಥೈಸಿದ್ದಾರೆ. ಬಂಗಾಳಿಯ ಕಾದಂಬರಿ ಆನಂದಮಠದಲ್ಲಿ ಬಂಕಿಮಚಂದ್ರರು "ವಿಧಿ ಹಿಂದುತ್ವದ ಉದಯಕ್ಕಾಗಿಯೇ ಬ್ರಿಟಿಷರನ್ನು ಭಾರತಕ್ಕೆ ಕಳುಹಿಸಿದೆ ಎಂದು ಕರೆದರೆ ಕನ್ನಡದ ಮಹಾನ್ ಕವಿ. ಕುವೆಂಪುರವರು ಬ್ರಿಟಿಷರು ಬಂದಿದ್ದರಿಂದ ತಮ್ಮಂತಹವರು ಬಿಡುಗಡೆಗೊಂಡರು ಎನ್ನುತ್ತಲೆ, ಬ್ರಿಟಿಷರಿಂದ ನಾಡನ್ನು ಬಿಡಿಸಿಕೊಳ್ಳುವ, ಬ್ರಿಟಿಷರ 'ಪರಮತಾಕ್ರಮಣ'ದಿಂದ ಸ್ವಧರ್ಮ ರಕ್ಷಣೆ ಮಾಡಬೇಕೆನ್ನುವ ಎಚ್ಚರವನ್ನು ತೋರಿದರು."[೭೭] ಬ್ರಿಟಿಷರ ಆಗಮನದ ಫಲಾಪೇಕ್ಷೆ ಗಮನಿಸಲಾಗಿ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳನ್ನು ಗಮನಿಸಬಹುದು. ಭಾರತೀಯರಲ್ಲಿ ಸುಧಾರಣಾವಾದದ ಬಿರುಗಾಳಿ ಅತಿ ಹೆಚ್ಚು ತಲ್ಲಣಿಸಿದ್ದು ಮೇಲ್‌ಸ್ತರದ ಜನರ ಮೇಲೆ ರಾಜಕೀಯವಾಗಿಯೂ, ಆರ್ಥಿಕವಾಗಿಯೂ ಯಾರೂ ತಲೆಕೆಡಿಸಿಕೊಂಡವರಲ್ಲ. ಬ್ರಿಟಿಷರೊಂದಿಗೆ ಬಂದ ವೈಚಾರಿಕತೆಯು ಭಾರತೀಯರನ್ನು ಪ್ರಬಲವಾಗಿ ಎಚ್ಚರಿಸಲು ಪ್ರಾರಂಭಿಸಿತು. ಬಂಗಾಳದ ಈಶ್ವರಚಂದ್ರ ವಿದ್ಯಾಸಾಗರ, ರಾಜಾರಾಂ ಮೋಹನರಾಯ, ಆಂಧ್ರದ ಗುರುಜಾಡ ಅಪ್ಪಾರಾವ್, ವಿರೇಶಲಿಂಗಂಪಂತಲು, ಕೇರಳದ ಚಂದುಮೆನನ್ ಸರ್ವರಲ್ಲೂ ಕಾಣುವ ಸಮಾನ ಆಲೋಚನೆ ಸ್ತ್ರೀ ಶಿಕ್ಷಣ, ಇಂಗ್ಲಿಷ್ ಶಿಕ್ಷಣ, ಸಂಪ್ರದಾಯ ವಿರೋಧ ನೀತಿ ಅವರದಾಗಿತ್ತು. ಮುಂದೆ ಅದು ರಾಜಕೀಯ ದಾಳವಾಗಿದ್ದು ಇದೆ.

ಈ ಸಂಗತಿಗೆ ಪೂರಕವಾಗಿ ಡಿ.ಆರ್. ನಾಗರಾಜ 'ರಾಷ್ಟ್ರೀಯವಾದಿ ಕಾದಂಬರಿ' ಎಂದು ಕರೆದಿದ್ದು "ನಮ್ಮಲ್ಲಿ ಮೊದಲು ಉತ್ಕಟವಾಗಿ ಪ್ರಾರಂಭವಾದದ್ದೇ ಚಾರಿತ್ರಿಕ ಕಾದಂಬರಿಗಳು. Rise of Individualismನ ಜತೆಯಲ್ಲಿ ಕಾದಂಬರಿ ಪ್ರಕಾರದ ಉಗಮ ಎಂದು ಪಾಶ್ಚಿಮಾತ್ಯ ವಿಮರ್ಶೆ ಹೇಳಿಕೊಂಡಿದೆ. ನಮ್ಮಲ್ಲಿ ಅದು ಕರ್ನಾಟಕತ್ವ ಸಮಷ್ಟಿ ಹುಡುಕಾಟದೊಡನೆ ಪ್ರಬುದ್ಧ ಸ್ಥಿತಿಗೆ ಬಂದಿತು. ಕನ್ನಡ ಕಾದಂಬರಿ ಪರಂಪರೆಯ ಬೇರುಗಳು ಇಳಿದದ್ದೇ ಸಮಷ್ಟಿ ಕರ್ನಾಟಕತ್ವದ ಹುಡುಕಾಟದಲ್ಲಿ ಗಳಗನಾಥ ಈ ವಲಯದ ಪ್ರಮುಖ ಧ್ವನಿ"[೭೮] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕರ್ನಾಟಕದ ಸಮಷ್ಟಿ ಹುಡುಕಾಟವು ೧೯ನೇ ಶತಮಾನದ ವಿದ್ಯಾವಂತ ವರ್ಗದ ತೀವ್ರವಾದ ರಾಷ್ಟ್ರೀಯವಾದಿ ಚಳುವಳಿಯ ಎರಡನೆ ಹಂತದೊಂದಿಗೆ ಇದು ಚಾಚಿಕೊಂಡಿದೆ. ಹಾಗೆ ಈ ಮೊದಲ ಘಟ್ಟದ ಕಾದಂಬರಿಗಳ ವಿಮರ್ಶೆಯನ್ನು ಗಮನಿಸಿಕೊಂಡರೆ ರಾಷ್ಟ್ರೀಯವಾದಿ/ಚಾರಿತ್ರಿಕ ಕಾದಂಬರಿಗಳ ಬಗ್ಗೆ ಕೆಲವಾರು ಸಂಗತಿಗಳನ್ನು ಅವಲೋಕಿಸಬಹುದು.

- ಸಾಮಾಜಿಕ ರಮ್ಯತೆಯ ಜೊತೆಗೆ, ಚಾರಿತ್ರಿಕ, ಐತಿಹಾಸಿಕ ಕೃತಿಗಳು ಕೂಡಾ ಜನಪ್ರಿಯತೆಯನ್ನು ಪಡೆದವು.

- ಆ ಸಮಯದಲ್ಲಿ ಉತ್ತರ ಕರ್ನಾಟಕದ ಕಾದಂಬರಿಗಳು ಐತಿಹಾಸಿಕ ವಿಷಯ ವಸ್ತುವನ್ನು ಒಳಗೊಂಡಿದ್ದು ಕಾಣುವುದು. ಮುಖ್ಯವಾಗಿ ಐತಿಹಾಸಿಕ, ಕಲ್ಪಿತ ಕಥೆಗಳೆ ಇಲ್ಲಿ ಕಾಣುವವು.

- ಜನಪ್ರಿಯವಾಗಲು ರಾಷ್ಟ್ರೀಯವಾದಿ ಉದ್ದೇಶವೆ ಪ್ರಮುಖ ಕಾರಣ. ಭಾಷಾ ರಾಜಕೀಯ, ರಾಷ್ಟ್ರೀಯತೆಯ ಉದ್ದೇಶ ಐತಿಹಾಸಿಕ ಸಾಹಸ ಕಥನ ಇಲ್ಲಿ ಪ್ರಮುಖ.

- ಕಲ್ಪಕತೆ, ರಮ್ಯತೆಯು ಕೃತ್ರಿಮ ಶೈಲಿಯ ರಚನೆಗಳೆ ಅಧಿಕವಾಗಿವೆ.

ಇಂದಿರಾ ಕಾದಂಬರಿಯನ್ನುಳಿದ ಇತರ ಕಾದಂಬರಿಗಳಲ್ಲಿ ಮುಖ್ಯವಾಗಿ ವಾಸ್ತವಕ್ಕೆ ಭಿನ್ನವಾದ ವಸ್ತುಗಳ ನೆಲೆಯಲ್ಲಿ ಚರ್ಚಿತಗೊಂಡಿವೆ. ಆದರೆ ದಕ್ಷಿಣ ಕನ್ನಡದ ಸಾಮಾಜಿಕ ಕಾದಂಬರಿಗಳ ಕಚ್ಚಾ ಸಾಮಗ್ರಿ ಸಮಕಾಲೀನ ವಾಸ್ತವವೇ ಆಗಿದೆ. ಗಳಗನಾಥರು ಐತಿಹಾಸಿಕ ನಾಯಕರ ವೈಭವಿಕರಣವನ್ನು ತಮ್ಮ ಗುರಿಯಾಗಿಸಿಕೊಂಡಂತೆ ಇವೆ. ಗಳಗನಾಥರ ಕೆರೂರವರ ಕಾದಂಬರಿಗಳಲ್ಲಿ ಗತವೈಭವ ಮೂಡಿಬಂದಿದೆ. “ಕರ್ನಾಟಕದ, ಮಹಾರಾಷ್ಟ್ರದ, ರಜಪುತನಂದ, ಮಧ್ಯಕಾಲೀನ ನಾಯಕರಿಗೆ ಸಂಬಂಧಿಸಿದ ಗತಕಾಲ, ಅವರ ಉತ್ಕರ್ಷ ಮತ್ತು ಅವನತಿಯ ಚರಿತ್ರೆಗಳು ಗಳಗನಾಥರ, ಕೆರೂರರ ಐತಿಹಾಸಿಕ ಕಾದಂಬರಿಗಳ ಕೇಂದ್ರ ಆಸಕ್ತಿ ಎನ್ನಬಹುದು.”[೨೯] ವಿಜಯನಗರ ರಾಜರು ತಮ್ಮ ಆನೆಯಂತಹ ಸಾಮ್ರಾಜ್ಯ ಬಾಲದಂತಹ ಚಂದ್ರಗಿರಿಯ ಸಂಸ್ಥಾನಕ್ಕೆ ಕಚ್ಚಾಡಿದ ವಿಷಯವಸ್ತು ಕುಮುದಿನಿಯಲ್ಲಿ ಗಳಗನಾಥರು ಚಿತ್ರಿತ ಐತಿಹಾಸಿಕ ವಿಷಯಗಳ ವಿಶ್ಲೇಷಣೆ. ಎಚ್ಚೆ.ಎಮ್. ನಾಯಕನ ಧೈರ್ಯ ಸಾಹಸಗಳು, ಕುಮುದಿನಿಯ ಸಾಹಸ ದೂರದೃಷ್ಟಿ, ಪಾತಿವ್ರತ್ಯಗಳು ಕೃತಿಯಲ್ಲಿ ಚರ್ಚಿತ.

ರಾಣಾ ಪ್ರತಾಪ ತನ್ನ ತಪೋಧನ, ಸಾತ್ವಿಕ ವ್ಯಕ್ತಿತ್ವದಿಂದ ಮೊಗಲ ಬಾದಶಹ ಅಕ್ಬರನನ್ನು ಎದುರಿಸಿದ್ದು, ಅವನಿಗೊದಗಿದ ಕಷ್ಟನಷ್ಟಗಳ ಹೃದಯವೇಧಕ ಕತೆ ತತ್ವಸಾರದಲ್ಲಿ ಮೂಡಿ ಬಂದಿದೆ. ಇದು ಮುಂದೆ ಗಳಗನಾಥರು ಬರೆದ ಸ್ವತಂತ್ರ ಕೃತಿಗಳು ಅನಂತರದ ಅವರ ಕೃತಿಗಳಲ್ಲಿಯೂ ಅನುವಾದ ಕೃತಿಗಳಲ್ಲೂ ಇದೇ ಮನೋಧರ್ಮದ ಸಂಗತಿಗಳು ಕಂಡುಬರುತ್ತವೆ.

ಕೆರೂರು ವಾಸುದೇವಾಚಾರ್ಯರ ‘ಯದುಮಹಾರಾಜ’, ‘ಭ್ರಾತೃಘಾತಕನಾದ ಔರಂಗಜೇಬ’ ಕಾದಂಬರಿಗಳು ರಾಜಕೀಯ ತಾತ್ವಿಕ ನೆಲೆಯಿಂದಲೆ ರೂಪಿತವಾಗಿವೆ. ಅಯೋಗ್ಯನಾದ ಪಾಳೆಯಗಾರ ಮಾರನಾಯಕನ ಕೈಯಲ್ಲಿ ಸಿಲುಕಿ ಬಿದ್ದಿರುವ ಮೈಸೂರಿನ ರಾಜ್ಯವನ್ನು ಬಿಡಿಸಿ ಯಾದವ ವಂಶದ ಅರಸು ಕುಮಾರನಾದ ಯದುಮಹಾರಾಜನ ಕಥಾವಸ್ತುವಾದರೆ, ಮೊಗಲ ಸಾಮ್ರಾಜ್ಯದ ಅವನತಿಯ ಕಣ್ಣು ತೆರೆಸುವ ಚಿತ್ರಣ ಭ್ರಾತೃಘಾತಕನಾದ ಔರಂಗಜೇಬ ಕೃತಿಯಲ್ಲಿದೆ. ಅವಿವೇಕಿಗಳಿಗೆ ದೈವಬಲವು ದೊರೆತು ಜೀವನ ವಿನಾಶದ ಹಾದಿಯನ್ನು ಹಿಡಿಯುವದು. ಈ ಕೃತಿಯ ಚರ್ಚಿತ ಸಂಗತಿ. ಇಂತಹ

ಕಾದಂಬರಿಗಳನ್ನು ರಚಿಸಿದ ಗಳಗನಾಥರು ಹಾಗೂ ಕೆರೂರು ವಾಸುದೇವಾಚಾರ್ಯರು ತಮ್ಮ ಸಾಮಾಜಿಕ ಕಾದಂಬರಿಗಳಲ್ಲಿ ರಾಜಕೀಯ ವಿಷಯ ವಸ್ತು ಬಳಸಿಲ್ಲ. ರಾಜಕೀಯ ಪ್ರಭಾವದಿಂದ ದೇಶಿಯ ರಾಜರನ್ನು ಪ್ರತಿನಿಧಿಸುವ ರಾಜಕೀಯ ಕಾದಂಬರಿಗಳನ್ನು ರಚಿಸಿದ್ದಿದೆ.

ಈ ಸಮಯದಲ್ಲಿ ರಚಿತವಾದ ಕಾದಂಬರಿಗಳಿಗೂ ಒಂದು ರಚನಾ ವಿನ್ಯಾಸ ಕಾಣುವುದು. ಮೊದಲು ಇವು ಬ್ರಿಟಿಷ್ ಆಗಮನ ಪೂರ್ವ ಚರಿತ್ರೆಯನ್ನು ಕೃತಿಯ ಸಾಮಗ್ರಿಯನ್ನಾಗಿ ಬಳಸಿಕೊಂಡಿವೆ. ಇತಿಹಾಸದ ಒಂದು ಚಿಕ್ಕ ಘಟನೆ ಈ ಕೃತಿಗಳಿಗೆ ಆಧಾರ ಮಾತ್ರವೆಂಬುದು ಸೋಜಿಗದ ಸಂಗತಿ. ಇನ್ನುಳಿದಂತೆ ಸಂದರ್ಭವನ್ನು ಕಲ್ಪನೆಯಲ್ಲೇ ಸೃಷ್ಟಿಸುತ್ತವೆ. ರಾಜ್ಯಗಳ ಅವನತಿ, ಉನ್ನತಿಗಳು ಸಾಮಾನ್ಯವಾಗಿ, ಎರಡು ಸಂಗತಿಗಳನ್ನು ಮಾತ್ರ ಇವು ಗಮನಿಸುತ್ತವೆ ಮತ್ತು ಕೊನೆಯದಾಗಿ ಉನ್ನತಿಯ, ಅವನತಿಯ ಕಾರಣಗಳನ್ನು ಶೋಧಿಸುವ ಯತ್ನಗಳು ಫಲಿಸಿದಂತೆ. ತಂತ್ರಗಳನ್ನು ಬಳಸಿದ್ದು ಇಲ್ಲಿ ಚರ್ಚಿತ ಸಂಗತಿ.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಕಾದಂಬರಿಕಾರರು ಚರಿತ್ರೆಗೆ ಸ್ಪಂದಿಸಿದ್ದಾರೆ. ಸ್ವಸಮುದಾಯಗಳು, ಸಮಾಜ, ರಾಷ್ಟ್ರ ಮತ್ತು ಆಧುನಿಕತೆಯ ಪ್ರಶ್ನೆಗಳನ್ನು ನಿರೂಪಿಸಿದವು. ಈ ಸಮಯದಲ್ಲಿ ಬಂದಿರುವ ಸಾಮಾಜಿಕ ವರ್ಗದ ಕಳಕಳಿಗಳು ತತಕ್ಷಣದ್ದಾಗಿದ್ದವು. ಗುಲ್ವಾಡಿ ವೆಂಕಟರಾಯರು, ಬೋಳಾರು ಬಾಬುರಾಯರು, ಕೆರೂರು ವಾಸುದೇವಾಚಾರ್ಯ ಎಂ.ಎಸ್. ಪುಟ್ಟಣ್ಣ, ಲಕ್ಷ್ಮಣ ಗದಗಕರವರು ಮಾಡಿದ ಟೀಕೆಗಳು ಮುಂದೆ ಚರಿತ್ರೆಯಲ್ಲಿ ಫಲಿಸಿಬಿಟ್ಟಿವೆ. ವಿದ್ಯಾವಂತ ಸಾರಸ್ವತರಾದ ಯುವಕರು ಅಂಬಾಬಾಯಿ, ಭೀಮರಾಯ, ಚಂಚಲನೇತ್ರ, ವಾಗ್ದೇವಿಯರ ಪ್ರತಿನಿಧಿಸುತ್ತಿದ್ದ ಮೌಲ್ಯಗಳನ್ನು ನಿರಾಕರಿಸಿ ಮುನ್ನಡೆದರು. ಕೆರೂರು ವಾಸುದೇವಾಚಾರ್ಯ, ಗಳಗನಾಥರು, ವಹಿಸಿದ ಕಾಳಜಿ ಸ್ವಾತಂತ್ರ್ಯ ಹೋರಾಟದ ಸೈದ್ಧಾಂತಿಕ ಆದರ್ಶದ ಕಳಕಳಿಯಲ್ಲಿ ನೈಜವಾದದು. ಈ ಕಾರಣಗಳಿಂದ ಭಾರತೀಯರ ಬದುಕಿನ ಎದುರಿನಲ್ಲಿ ಆ ಕಾಲದಲ್ಲಿ ಇದ್ದ ವಸಾಹತುಶಾಹಿ ಸವಾಲನ್ನು ಚಾರಿತ್ರಿಕವಾಗಿ ಗಮನಿಸಿದರು. ಪುಟ್ಟಣ್ಣವರ ಕೃತಿಗಳಲ್ಲಿ ಇತರ ಮೊದಲ ಕಾದಂಬರಿಗಳಿಗಿಂತ ಹೆಚ್ಚಿನ ಚಾರಿತ್ರಿಕ ಅಂಶಗಳು ಮೂಡಿಬಂದಿವೆ.

ಉತ್ತರ ಕರ್ನಾಟಕದ ಕಾದಂಬರಿಕಾರರು ವಿಭಿನ್ನವಾದ ಪುನರುತ್ಥಾನವಾದಿ ನೆಲೆಯನ್ನು ತಮ್ಮ ಕಾದಂಬರಿಗಳ ಮೂಲಕ ಭದ್ರ ತಳಪಾಯವನ್ನು ಹಾಕಿಕೊಂಡರು. ನೆಲೆ ಊರುವ ಕೃತಿ ರಚಿಸಿದರು. ಈ ನಿಲುವು ೧೯ನೇ ಶತಮಾನದ ಭಾರತದ ಅವಸ್ಥಾಂತರಗಳ ಪ್ರತಿಫಲವೇ ಆಗಿದೆ. ನಿಲುವನ್ನು ರಾ.ಯ. ಧಾರವಾಡಕರ, ಕೃಷ್ಣಮೂರ್ತಿ ಕಿತ್ತೂರ, ಕೀರ್ತಿನಾಥ ಕುರ್ತಕೋಟಿ ಜಿ.ಬಿ. ಜೋಶಿಯವರು ಅಂದಿನ ರಾಜಕೀಯ ಸ್ಥಿತ್ಯಂತರ ಈ ರೀತಿ ಗುರುತಿಸಿದ್ದಾರೆ. "ಉತ್ತರ ಕರ್ನಾಟಕದ ಕಾದಂಬರಿಕಾರರು ಈ

ಪುನರುತ್ಥಾನವಾದಿ ನೆಲೆಯನ್ನು ತಮ್ಮ ಕೃತಿಗಳಲ್ಲಿ ಭದ್ರ ತಳಪಾಯವನ್ನು ಆರಿಸಿಕೊಂಡರು. ವಿಜಯನಗರದ ವಿನಾಶದ ಅನಂತರದಲ್ಲಿ ಕನ್ನಡ ನಾಡಿನ ಛಿದ್ರೀಕರಣವಾಯಿತು. ಎನ್ನುವುದನ್ನು ಅತ್ಯಂತ ತೀವ್ರವಾಗಿ ನಿರೂಪಿಸಿದವರಲ್ಲಿ ಮೊದಲಿಗರು ಉತ್ತರ ಕರ್ನಾಟಕದ ಲೇಖಕರೇ. ಅವರ ಪ್ರಕಾರ ಈ ದುರಂತವು ಪೂರ್ಣವಾದದ್ದು ವಸಾಹತುಶಾಹೀ ಆಡಳಿತದಲ್ಲಿ. ಕೊಗಳತೆಯ ದೂರದಲ್ಲಿ ಕನ್ನಡ ಮನೆ ಮಾತಿನ ಜನರಿರುವ ಅನೇಕ ರಾಜ್ಯಗಳಿದ್ದ ಸ್ಥಿತಿ ಉತ್ತರ ಕರ್ನಾಟಕದ್ದು. ಉತ್ಕಟವಾದ ಮತ್ತು ಬಾವುಕವಾದ ರಾಷ್ಟ್ರೀಯವಾದೀ ಕಾದಂಬರಿಗಳಿಗೆ ಈ ಸ್ಥಿತಿಯು ಕಾರಣವಾಯಿತು. ಕರ್ನಾಟಕ ಏಕೀಕರಣದ ದನಿ ಮುಂದೆ ಇದೆ ಭಾಗದಿಂದ ಆಲೂರ ವೆಂಕಟರಾಯರಂತಹವರ ನೇತೃತ್ವದಲ್ಲಿ ಮುನ್ನೆಲೆಗೆ ಬಂತು"[೮೦] ಎನ್ನುವದೂ ಇಲ್ಲಿ ಉಲ್ಲೇಖನೀಯ.

ಎಂ.ಎಸ್. ಪುಟ್ಟಣ್ಣವರು ತಮ್ಮ ಕಾದಂಬರಿಗಳಿಗೆ ಬಳಸುವ ಆಕರ ಸಾಮಗ್ರಿ ಎದ್ದು ಕಾಣುವಂತಹದ್ದು. ತಮ್ಮ ಕಥನಕ್ಕೆ ಬಳಸಿಕೊಳ್ಳುವ ಸಾಮಗ್ರಿ ಮುಮ್ಮಡಿ ಕೃಷ್ಣರಾಜರ ಆಡಳಿತದ ಕಾಲಕ್ಕೆ ಸಂಬಂಧಿಸಿದಂತೆ ಇದೆ. ಪುಟ್ಟಣ್ಣವರು ಬರೆಯುವುದು ಸಾಮಾಜಿಕ ಕಾದಂಬರಿಯನ್ನು ಆದರೂ ಮುಮ್ಮಡಿಯವರ ಆದರ್ಶ, ಔದಾರ್ಯ, ಆಸ್ಥಾನ ವಿವರಗಳು, ಆಡಳಿತದ ವಿವರ, ಜನಜೀವನ ಸ್ಥಿತಿಗತಿಗಳನ್ನು ವಿವರಿಸುತ್ತಲೆ ಆ ಕಾಲದ ಮೈಸೂರಿನ ಸಾಮಾಜಿಕ ಅವಸ್ಥಾಂತರಗಳು ದಾಖಲಾಗಿದೆ. ಇದನ್ನು ಎಂ.ಎಸ್.ಪುಟ್ಟಣ್ಣವರ ಬಗ್ಗೆ ಅಧ್ಯಯನಗೈದಿರುವ ಡಾ. ಸುಜಾತ. ಎಚ್.ಎಸ್. ಗುರುತಿಸಿದ್ದಾರೆ. ಐತಿಹಾಸಿಕವಾಗಲಿ, ಸಾಮಾಜಿಕವಾಗಿ ಆಗಲಿ ಕನ್ನಡ ಕಾದಂಬರಿಗಳಿಗೆ ವಸ್ತು ನಮ್ಮಲ್ಲೆ ವಿಪುಲವಾಗಿವೆ ಎಂಬುದನ್ನು ಕಂಡುಕೊಂಡ ಮೊದಲಿಗರಲ್ಲಿ ಎಂ.ಎಸ್. ಪುಟ್ಟಣ್ಣನವರು ಎಂದು ಸುಜಾತ ಹೇಳಿದ್ದಾರೆ. "ಈ ಕಾದಂಬರಿಗಳಲ್ಲಿ ಪುಟ್ಟಣ್ಣವರು ಚಿತ್ರಿಸಿರುವುದು ಬ್ರಿಟಿಷ್ ಅಧಿಪತ್ಯದ ಆಶ್ರಿತ ಸಂಸ್ಥಾನವಾದ ಮೈಸೂರು ಸುಮಾರು ನೂರು ವರುಷಗಳ ಹಿಂದಿನ ಕನ್ನಡಿಗರ ಬಾಳು ಬದುಕು, ಅರಮನೆ ಗುರುಮನೆಗಳ ಪರಿಸರ, ಅವರ ಪೂರ್ವಾಚಾರ ಶ್ರದ್ಧೆ, ವಿದ್ಯಾಭ್ಯಾಸ, ಕುಟುಂಬ ಕಲಹಗಳು, ಜನರ ನೇರ ಕೊಂಕುಗಳು ಇತ್ಯಾದಿ ವಿಷಯಗಳು ಇಲ್ಲಿ ಚಿತ್ರಿತವಾಗಿವೆ."[೮೧] ಎಂದು ಹೇಳಿದ್ದಾರೆ. ಡಿ.ಎಲ್. ನರಸಿಂಹಾಚಾರ್ ಅವರು ಗಮನಿಸಿದಂತೆ "ಪುಟ್ಟಣ್ಣರವರ ಕೃತಿಗಳಲ್ಲಿ ಅವರು ಕಂಡು ಕೇಳಿದ ಅಥವಾ ಅವರ ಅನುಭವಕ್ಕೆ ಬಂದ ಪ್ರಪಂಚ ಪರಿಮಿತಿಯುಳ್ಳದಾದರೂ ರಮ್ಯವಾಗಿ ರೂಪುಗೊಂಡಿದೆ." ಹಾಗೂ ಡಿ.ವ್ಹಿ.ಜಿ.ಯವರು ಗುರುತಿಸಿದಂತೆ ಪುಟ್ಟಣ್ಣನವರ ಕಾದಂಬರಿಗಳು 'ಇಂಗ್ಲಿಷ್ ನಾವೆಲ್‌ಗಳಂತೆ ಪ್ರತ್ಯಕ್ಷ ಜೀವನ ಚಿತ್ರಗಳು."[೮೨] ಈ ಮಾತುಗಳು ಮೈಸೂರು ಪ್ರಾಂತದ ಜನಜೀವನವು ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮುಂದನೆಯಾಗುವ ಕ್ರಮವನ್ನು, ವಾಸ್ತವಿಕತೆಯನ್ನು ಅವರ ಕಟ್ಟುವ ರೀತಿಯನ್ನು ಪಿಶ್ಲೇಷಿಸಿವೆ.

ಚಾರಿತ್ರಿಕತೆಯ ಬದಲಾವಣೆ ಕಾರಣ ಸಾಮಾಜಿಕವಾಗಿ ಜೀವನ ಕ್ರಮದಲ್ಲಿ ಪಲ್ಲಟ ಕಾಣುವುದು. ಈ ಕಾರಣಕ್ಕೆ ಹೊಸ ವಿದ್ಯಾವಂತ ವರ್ಗ ಹುಟ್ಟಿದ್ದು. ಒಂದೆಡೆ ಪಾಶ್ಚಿಮಾತ್ಯ ವೈಚಾರಿಕತೆಯನ್ನು ಮೈಗೂಡಿಸಿಕೊಂಡ ಹೊಸ ವಿದ್ಯಾವಂತ ವರ್ಗದಿಂದ ದೇಶಿಯ ಸಾಂಪ್ರದಾಯಿಕ, ಐತಿಹಾಸಿಕ ಆದರ್ಶವು ವಿಂಗಡಣೆಗೆ ಟೀಕೆ ಟಿಪ್ಪಣಿಗೆ ಒಳಗಾಗುತ್ತದೆ. ಮತ್ತೊಂದೆಡೆ ದೇಶಿಯ ಜೀವನಕ್ರಮ ತನ್ನ ಒಳಗಿನಿಂದಲೆ ಒಂದು ಬಗೆಯ ಅಸಹಜವಾದ ಬದಲಾವಣೆಯನ್ನು ಕಾಣುವುದು. ಈ ಬಗೆಯ ನಿಲುವುಗಳಿಗೆ ಪುಟ್ಟಣ್ಣನವರು ತಮಗಿಂತ ಸ್ವಲ್ಪ ಹಿಂದಿನ ಕೃಷ್ಣರಾಜಭೂಪರನ್ನು ಕುರಿತು ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡಿರುವುದಕ್ಕೆ ಪರಸ್ಪರ ಸಂಬಂಧ ಕಾಣುವುದು. ಇತಿಹಾಸವನ್ನು ಆದಷ್ಟು ವಸ್ತುನಿಷ್ಟವಾಗಿ ಅರಿಯುವದು ಮತ್ತು ಅದರಿಂದ ಪ್ರೇರಣೆಯನ್ನು ಪಡೆಯುವದು ಅವರ ಅಧ್ಯಯನ ಕ್ರಮವಾಗಿತ್ತು. ಪುನರ್‌ಸಂಘಟನೆಯಿಂದ ಪ್ರಜ್ಞಾಶೀಲತೆಯನ್ನು ಬೆಳೆಸಿಕೊಳ್ಳುವುದು ಒಂದೆಡೆಯಾದರೆ, ತನ್ನ ಮುಂದೆ ನಡೆಯುವ ಬದಲಾವಣೆಗಳನ್ನು ಪಡೆಯುವದು ಮತ್ತೊಂದಡೆಯಾಗಿತ್ತು. ಪುನರ್‌ಸಂಘಟನೆಯಿಂದ ಪ್ರಜ್ಞಾಶೀಲತೆಯನ್ನು ಬೆಳೆಸಿಕೊಳ್ಳುವುದು. ತನ್ನ ಮುಂದೆ ನಡೆಯುವ ಬದಲಾವಣೆಗಳನ್ನು ದಾಖಲಿಸುವುದು, ಕಾರಣಗಳನ್ನು ಅರಿಯಲು ಪ್ರಯತ್ನಿಸುವುದು ಈ ಆಯ್ಕೆಯ ಹಿಂದಿನ ತರ್ಕ.

ಐತಿಹಾಸಿಕವಾಗಿ ಗಮನಿಸಲಾಗಿ "ಪುಟ್ಟಣ್ಣನವರ ಕಾದಂಬರಿಗಳಿಗೆ ನಿಜವಾದ ಪರೋಕ್ಷ ನಾಯಕರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು."[೮೩] ತಿ.ನಂ. ಶ್ರೀಯವರ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು. ಮಹಾರಾಜರ ಆಡಳಿತ, ಆದ ಪ್ರಕಟಿಸುವ ಮತ್ತು ಪ್ರತಿನಿಧಿಸುವ ಮೌಲ್ಯಗಳು ಆದರ್ಶಪ್ರಾಯವಾಗಿ ಇಲ್ಲಿ ಮೂಡಿಬಂದಿವೆ. ಐತಿಹಾಸಿಕವಾದ ಸಂಗತಿಗಳು ಮಾಡಿದ್ದುಣ್ಣೋ ಮಹಾರಾಯದಲ್ಲಿ ಮೂಡಿ ಬಂದಿವೆ. "ಕೃಷ್ಣರಾಜ ಪ್ರಭು ತಾನು ಸ್ವತಃ ಮುಂದೆ ನಿಂತು ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಮಾಡಿಸುತ್ತಿದ್ದ ಧರ್ಮಪ್ರೇಮಿ"(ಪು.೨೮). "ಸದ್ಗುಣಗಳನ್ನು ಸಾಮಾನ್ಯರಲ್ಲಿ ಕಂಡರೂ ಗುರುತಿಸಿ ಸನ್ಮಾನಿಸುತ್ತಿದ್ದ ಗುಣಾಗ್ರಣಿ"(ಪು.೨೯). 'ಲಂಚಕೋರ ಅಧಿಕಾರಿಗಳು ಜನರನ್ನು ಸುಲಿಯುತ್ತಿದ್ದರು.'(ಪು.೩೨) ಸರಕಾರಿ ಅಧಿಕಾರಿಗಳೆ ಕಳ್ಳಕಾಕರಿಗೆ ಒತ್ತಾಸೆಯಾಗಿರುವುದು(ಪು.೧೮೩). 'ಅಧಿಕಾರಿಗಳು ಅತಿವಿನಯ ತೋರಿ ನಂಜಿಕೆಯ ಭಂಟರಾದದ್ದು(ಪು.೩೧) 'ಜಾತಿ ಕಲಹ, ಮತ್ತು ಪೈಪೋಟಿ'(ಪು.೮೮) ಮುಂತಾದ ಸಂಗತಿಗಳನ್ನು ಗಮನಿಸಲಾಗಿ, ಜೀವ ಕೇಂದ್ರಿತ ವಿಚಾರಗಳ ಸರಣಿ ಇಲ್ಲಿದೆ. ನೈತಿಕ ಮತ್ತು ಪಾರಮಾರ್ಥಿಕವಾದ ಸಮಾಜ ಮತ್ತು ನೈತಿಕ ಅಧಿಕಾರ ಕೇಂದ್ರವಾದ ಮೈಸೂರಿನ ಚಿತ್ರಣವೆ ಇಲ್ಲಿ ಕಂಡು ಬರುವುದು.

ಸಾಂಪ್ರದಾಯಿಕ ಜೀವನ ಕ್ರಮದಲ್ಲಿ ಸಮುದಾಯದ ನೈತಿಕತೆಯ ಜೊತೆ ಹಳ್ಳಿಯ ಸಣ್ಣ ಸಮುದಾಯದ, ಬ್ರಾಹ್ಮಣ ಮನೆತನದ ಚಿತ್ರಣವಿದೆ. ಆದರ್ಶಪಾತ್ರ ಗೆಲುವನ್ನು ಪಡೆಯುವ ಮತ್ತು ಹಳೆ

ಪಾತ್ರಗಳಿಗೆ ಅಂತ್ಯ ಕಾಣಿಸುವ ವಿಶ್ಲೇಷಣ ಕ್ರಮವಿದೆ. ಮೈಸೂರಿನ, ರಾಜಸ್ಥಾನ, ಹಳ್ಳಿಯ ಬ್ರಾಹ್ಮಣರು ಸಂಜವಾಡಿಯ ಅಮ್ಮನವರ ಗುಡಿ ತಮ್ಮಲ್ಲಿಯೇ ಧರ್ಮಚ್ಯುತಿಯಾಗಿರುವ ಸ್ಥಿತಿ ಪುಟ್ಟಣ್ಣರ ಕಾದಂಬರಿಯಲ್ಲಿ ಕಾಣುವುದು. ಕಾದಂಬರಿಯಲ್ಲಿ ಅಂತಸ್ಥವಾದದ್ದರ ಮೇಲೆ ಕಲಾತ್ಮಕತೆಯು ಹೆಚ್ಚುವುದು. ಕಾದಂಬರಿಕಾರರ ಪ್ರಕಾರ ವಾಸ್ತವಿಕತೆ ಲೇಖಕನ ಅಭಿಪ್ರಾಯಗಳನ್ನು ಮೀರಿ ಸತ್ಯ ದರ್ಶನ ಮಾಡುವುದು. ಸಾಮಾಜಿಕ ಶಕ್ತಿಯನ್ನು ರೂಪಿಸುವ ಬರವಣಿಗೆಯು ಪರಿಣಾಮಕಾರಿಯಾದದ್ದು ಎಂಬ ಅರಿವು ಲೇಖಕನಲ್ಲಿರುತ್ತದೆ. ಕಾದಂಬರಿಯ ತನ್ಮಯತೆ ಕಲಾತ್ಮಕತೆ, ಸಾಮಾಜಿಕತೆಯು ಅಂತರ್ಗತವಾಗಿರುವವು. ವಾಸ್ತವಿಕತೆಯೊಂದಿಗೆ ಲೇಖಕನ ತಾತ್ವಿಕ ನಿಲುವುಗಳಿಗೆ ಹೊರತಾಗಿಯೂ ಚಾರಿತ್ರಿಕ ಅರಿವು ತಿಳುವಳಿಕೆಯನ್ನು ಹೊರಹೊಮ್ಮಿಸುವ ಶಕ್ತಿ ಲೇಖಕನಲ್ಲಿ ಕಾಣುವುದು.

ಪುಟ್ಟಣ್ಣನವರ ಕಾದಂಬರಿಗಳಲ್ಲಿ ಚಾರಿತ್ರಿಕ ಸಂಗತಿಗಳು ಬಂದರೆ, ಗುಲ್ವಾಡಿ ವೆಂಕಟರಾಯರು ಕೃತಿಗಳಲ್ಲಿ ಪರಿಪೂರ್ಣ ವೈಚಾರಿಕತೆಯನ್ನು ತೋರ್ಪಡಿಸುವ ಸಂಗತಿಗಳಿವೆ. ಪಾಶ್ಚಿಮಾತ್ಯ ಪರಿಣಾಮದ ವೈಚಾರಿಕತೆಯು ಸನಾತನವಾದ ಭಾರತೀಯತೆಯನ್ನು ಸುಧಾರಿಸುವ ಕಲಾತ್ಮಕತೆ ಅಲ್ಲಿ ಕಾಣುವುದು. ಕೆರೂರು ವಾಸುದೇವಾಚಾರ್ಯ, ಗಳಗನಾಥರು ಚಿತ್ರಿಸುವ ಚಿತ್ರಣ ಕೃತಿಗಳ ವಿಶ್ಲೇಷಣಾ ಪ್ರಜ್ಞೆ ಬದಲಾಗುತ್ತಿರುವ ವಾಸ್ತವದ ಚಾರಿತ್ರಿಕವಾದ ಅನಿವಾರ್ಯತೆಯನ್ನು ಅರಿತುಕೊಳ್ಳದೆ ಕನಸನ್ನು ಕಾಣುವ ರೀತಿಯದು ಎಂದು ಗುರುತಿಸಬಹುದು. ಈ ಕಾಲದ ಕಾದಂಬರಿಗಳಲ್ಲಿ ಜೀವನ ದರ್ಶನವನ್ನು ಅವರ ಉದ್ದೇಶಗಳನ್ನು ಮಂಡಿಸುತ್ತಲೆ ಬರಹಗಾರರು ಜೀವನದ ಒಳಸುಳಿಗಳನ್ನು, ಶಕ್ತಿಯನ್ನು ವಾಸ್ತವಿಕತೆ ಪಡೆದದ್ದಿದೆ. ವಾಸ್ತವಿಕ ಪ್ರಬುದ್ಧತೆ ಈ ಕಾಲದ ಎಲ್ಲಾ ಕಾದಂಬರಿಕಾರರು ಪಡೆದುಕೊಂಡಿಲ್ಲ. ಕನ್ನಡ ಅದರಲ್ಲೂ ಹೊಸಗನ್ನಡದ ಪ್ರಗತಿಯ ಬದಲಾವಣೆಯು ಅನುಕಂಪದಿಂದ ಕಾಣುವ ಕಾದಂಬರಿ ಲೇಖಕರಿಗಿಂತ ಸಂಪ್ರದಾಯವಾದಿ ಬರಹಗಾರರಲ್ಲಿ ಪ್ರಬುದ್ಧತೆಯನ್ನು ಪಡೆದುಕೊಂಡಿದೆ. ಶುದ್ಧತೆ, ಮೌಲ್ಯನಿಷ್ಠತೆ ಚರಿತ್ರೆಯ ಸಣ್ಣ ಬದಲಾವಣೆಯನ್ನು ತೀವ್ರತರವಾಗಿ ಗ್ರಹಿಸುವ ಶಕ್ತಿ ಇತ್ತು ಎಂಬ ಸಂಗತಿ ಅವರ ಕಾದಂಬರಿಗಳಲ್ಲಿ ಚರಿತ್ರೆಯ ದಾಖಲೆಗಳ ಚಿತ್ರಣದಲ್ಲಿ ಕಾಣುವುದು.

ಗುಲ್ವಾಡಿ ವೆಂಕಟರಾಯರು. ಬೋಳಾರು ಬಾಬುರಾಯರು ಪಾಶ್ಚಿಮಾತ್ಯ ವೈಚಾರಿಕತೆಯ ನೆಲೆ ಬೆಲೆಯನ್ನು ಆದರಿಸುತ್ತಾರೆ. ಆ ಸಮಯದಲ್ಲಿ ದೇಶಿಯ ವಿಡಂಬನಾತ್ಮಕತೆ. ಕಟು ಟೀಕೆಗಳು ವಾಸ್ತವವನ್ನು ಪಡೆಯುವವು. ಕೆರೂರು ವಾಸುದೇವಾಚಾರ್ಯರು. ಗಳಗನಾಥರು ಗತಕಾಲಕ್ಕೆ ಭಾವುಕರಾದದ್ದು ಕಾಣುತ್ತೇವೆ. ಸಂಪ್ರದಾಯಶೀಲರಾದ ಪುಟ್ಟಣ್ಣನವರಿಗೆ ಪಶ್ಚಿಮದ ವೈಚಾರಿಕ ಸಂಗತಿಗಳಲ್ಲಿ ನಂಬಿಕೆಗಳಿಲ್ಲ. [illegible] [illegible] ಮೌಲ್ಯಗಳನ್ನು ಛಿದ್ರಗೊಳಿಸುವುದು ಎಂದು ಅವರು ಬಲ್ಲವರಾಗಿದ್ದರು. ಅದರಂತೆ

ಆದರ್ಶ ಶತ ಜೀವನವನ್ನು ಪುನರುಜ್ಜೀವಿಸುವದು ಸಾಧ್ಯವಿಲ್ಲ ಎನ್ನುವ ತಿಳುವಳಿಕೆ ಮತ್ತು ಹೊಸ ಕಾಲದ ಅನಿವಾರ್ಯತೆಯ ಅರಿವು ಅವರಿಗೆ ಗೊತ್ತಿದ್ದದ್ದು ಎಂದು ಗುರುತಿಸಬಹುದು.

ವಸಾಹತು ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿ ಕುರಿತು ಶಾಂತಿನಾಥ ದೇಸಾಯಿಯವರು ಹೀಗೆ ಹೇಳಿದ್ದಾರೆ. ಇಂದಿರಾಬಾಯಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರನಾಗಿದ್ದ ಕೋಚ್‌ಮನ್ ಎಂಬ ಆಂಗ್ಲ ಇಂಗ್ಲಿಷಗೆ ೧೯೦೩ರಲ್ಲಿ ಅನುವಾದಿಸಿದನು. ಈ ಸಂಗತಿಯನ್ನು ಪ್ರಸ್ತಾಪಿಸುತ್ತಾ, "ಅವರಿಗೆ ಈ ಕಾದಂಬರಿಯಲ್ಲಿ ಇಂಗ್ಲಿಷ್ ಶಿಕ್ಷಣದ ಹಾಗೂ ಪಾಶ್ಚಾತ್ಯೀಕರಣದ ಉದೋ ಉದೋ ಆದುದ್ದು ಬಹಳ ಸೇರಿರಬೇಕು ! ಬ್ರಿಟಿಷ್ ಸಾಮ್ರಾಜ್ಯಶಾಹಿ ಒಳ್ಳೆಯ ಪರಿಣಾಮಗಳಿಗೆ ಈ ಕಾದಂಬರಿ ಸಾಕ್ಷಿಯಾಗಿದೆ ಎಂದು ಹಿಗ್ಗಿ ಭಾಷಾಂತರಿಸಿರಬೇಕು."[೮೪] ಇದನ್ನು ಗಮನಿಸಲಾಗಿ ಸಮಾಜಪ್ರಜ್ಞೆ, ಪ್ರಾಂತ, ಘಟನೆ, ಭಾಷೆಗಳ ಮೂಲಕವೇ ಅಭಿವ್ಯಕ್ತಿ ಪಡೆದಿದೆ ಎಂದು ಗಮನಿಸಬಹುದು. ಇಲ್ಲಿ ಸಾಮಾಜಿಕ ಕ್ರಾಂತಿಯ ಬದಲಾಗಿ ಸಾಮಾಜಿಕ ತಳಮಳವನ್ನು ಬಿಂಬಿಸಿ ಜನರನ್ನು ಎಚ್ಚರಿಸುವ ಮನೋಭಾವ ಅವರದ್ದಾಗಿರಬಹುದೆಂದು ಹೇಳಬೇಕಾಗುವದು.

ಇಂದಿರಾ ಕಾದಂಬರಿಯಲ್ಲಿ ಈ ರಾಷ್ಟ್ರೀಯ ಪ್ರಜ್ಞೆ ಮತ್ತೊಂದು ರೀತಿಯದು. ಕಮಲೆಯ ಪುರುಷ ದ್ವೇಷವೂ ಕಾದಂಬರಿಯಲ್ಲಿ ಭರ್ತ್ಸನೆಗೆ ಎಡೆಯಾಗುವುದು. ಪಂಡಿತೆಯ ಪರಿವಾರದಲ್ಲಿ ಫಣಿಂದ್ರದಾಸಾಚಾರ್ಯ ಆದ್ಯ ಎಂಬವರ ಹೆಸರಿದೆ. ಈ ಪಣಿಂದ್ರದಾಸಾಚಾರ್ಯ ಬೇರೆ ಯಾರೋ ಆಗಿರದೆ ಪ್ರತ್ಯಕ್ಷವಾಗಿ ವಿಧವಾ ಪುನರ್ವಿವಾಹ ಮಾಡಿಕೊಂಡ ಶೇಷಾಚಾರ್ಯ ಆದ್ಯ ಎಂಬುವವರೆ ಅವರು. ಕೆರೂರುರವರ ಅಭಿಪ್ರಾಯ ಏನು? ಎಂಬುದನ್ನು ರಮಾಕಾಂತನಲ್ಲಿ ಕಾಣುವದು. ಪಂಡಿತಾಬಾಯಿಯವರೇ ಸುಧಾರಣೆಯ ಸೇವೆಯನ್ನು ನಾನು ಮನಮುಟ್ಟಿ ಮಾಡಿರುವೆನು. ಪರಂಪರಾಗತವಾದ ಕುಲಧರ್ಮಗಳ ಲೋಪ ಮಾಡಿಸಿರುವೆನು ಎಂದು ಫಣೀಂದ್ರದಾಸಾಚಾರ್ಯ ಹೇಳಿಕೊಂಡಾಗ "ರಮಾಕಾಂತನೆದ್ದು ಈ ಸರ್ವಾರಿಷ್ಟಕಳೆಸುರಿಯುತ್ತಿದ್ದ ಬ್ರಾಹ್ಮಣಾಧಮನ ಹಸ್ತಸ್ಪರ್ಷ ಮಾಡಲಾರದೆ ದೂರದಿಂದಲೆ ನಮಸ್ಕಾರ ಮಾಡಿದನು"[೮೫] ಹೀಗೆ ನುಡಿದಾಗ ವಾಸುದೇವಾಚಾರ್ಯರ ಸಾಮಾಜಿಕ ಧೋರಣೆಗಳು ಪ್ರತಿಗಾಮಿಳಾಗಿದ್ದವು ಎಂದು ಅರ್ಥವಾಗಲ್ಲ. ಉದಾಹರಣೆ ಅವರ ರಾಷ್ಟ್ರಪ್ರೇಮ ಜಾಗೃತವಾದದ್ದನ್ನು ರಮಾಕಾಂತನ ಹಲವಾರು ಹೇಳಿಕೆಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಲಕ್ಷ್ಮಣ ಭೀಮರಾವ ಗದಗಕರ ಅವರ ಸೂರ್ಯಕಾಂತ ಕನ್ನಡ ಮೊದಲ ಕಾದಂಬರಿಗಳಲ್ಲೊಂದು. ಮೊದಲ ಕಾದಂಬರಿಗಳು ಸ್ತ್ರೀ ಪ್ರಧಾನವಾದವು ಅಲ್ಲದೆ ನಾಯಕಿಯರ ಹೆಸರನ್ನು ಶೀರ್ಷಿಕೆಯಾಗಿ ಹೊಂದಿದ್ದಕ್ಕೆ ಈ ಕೃತಿ ಅಪವಾದ. ಇದು ನಾಯಕಪ್ರಧಾನ ಪಾತ್ರ. ಕಾದಂಬರಿಯ ಆರಂಭದಲ್ಲಿ ಶಿವಾಜಿಯ ಚರಿತ್ರೆಯ ಉಲ್ಲೇಖವಿದ್ದರೂ ಇದು ಐತಿಹಾಸಿಕ ಕೃತಿಯಲ್ಲ. ಅದನ್ನು ನೀಡಲು

ಕಾರಣವೆಂದರೆ ಕೃತಿಯ ನಾಯಕನ ಚರಿತ್ರೆ ಶಿವಾಜಿಯ ಚರಿತ್ರೆಯನ್ನು ಹೋಲುವುದು ಎಂಬುದಾಗಿ ಲೇಖಕರು ಹೇಳುತ್ತಾರೆ. ಸ್ತ್ರೀಯು ಗುಣನೀಯಳಲ್ಲ ಎಂಬ ಸಾಮಾನ್ಯ ದೃಷ್ಟಿಕೋನವು ಇಲ್ಲಿ ಸಹಜವಾಗಿ ಮೂಡಿಬಂದಿದೆ.

ಸೂರ್ಯಕಾಂತನ ಶೌರ್ಯ, ಸಾಹಸ ಔದಾರ್ಯ ಧೀಮಂತಿಕೆಗಳು ಮುಂದುವರೆಯುವವು. ಗದಗಕರರ ಮೇಲೆ ಇಲ್ಲಿ ಆ ಕಾಲದ ಸಾಮಾಜಿಕ ಸಮಸ್ಯೆಗಳು ಪ್ರಭಾವ ಬೀರಿದಂತೆ ಗತಕಾಲದ ಐತಿಹಾಸಿಕ, ರಾಜಕೀಯ ರಾಜಮನೆತನದ ವಿಚಾರ ಸಂಗತಿಗಳು ಪ್ರಭಾವ ಬೀರಿರಬಹುದು. ಈ ಕಾದಂಬರಿಯಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸಂಗತಿಗಳ ಸಮಾಗಮ ಕಾಣುವುದು. ಸೂರ್ಯಕಾಂತ ಕಾದಂಬರಿಯಲ್ಲಿ ಗದಗಕರವರು ಕೆಲವು ಐತಿಹಾಸಿಕ ದೃಷ್ಟಾಂತಗಳನ್ನು ನಿರ್ಧಿಷ್ಟ ಮಾಡಿ ಮುಂದಿನ ಚರಿತ್ರೆಯನ್ನು ಬರೆಯಲಾರಂಭಿಸುತ್ತೇನೆ ಎಂಬ ಮೊದಲ ಪುಟದ ಮಾತು ಗತಕಾಲ ಆಧುನಿಕ ಕಾಲದ ಕೊಂಡಿಯಾಗಿ ಸೂರ್ಯಕಾಂತ ಮೂಡಿಬಂದಿದೆ.

ಯೂರೋಪಿನ ಬಂಡವಾಳಶಾಹಿ ಕಾದಂಬರಿ ರೂಪದ ವಿಘಟಿತ ಬಿಂಬವಾಗಿ ನಮ್ಮ ಮೊದಲ ಕಾದಂಬರಿಗಳನ್ನು ಕಾಣುವದಕ್ಕಿಂತ ಒಂದು ವಿಶಿಷ್ಟ ಸಾಹಿತ್ಯ ರೂಪವಾಗಿ ಚರ್ಚಿಸಲು ಅವಕಾಶವಿದೆ. ಇಲ್ಲದ ಸಂಗತಿಗೆ ಬದಲಾಗಿ ಹೇಳುವುದು ವರ್ಣನಾತ್ಮಕತೆ. ಈ ವಸಾಹತು ಕಾದಂಬರಿ ಅಂದರೆ ಏನು ? ಇಲ್ಲಿಯ ಜನರು ಪಾಶ್ಚಿಮಾತ್ಯ ಪ್ರಕಾರವನ್ನು ತೆಗೆದುಕೊಂಡರೂ ಅದನ್ನು ತಮ್ಮ ಮೌಲ್ಯಗಳಿಗೆ ತಮ್ಮ ಒತ್ತಡಗಳಿಗೆ ಅನುಗುಣವಾಗಿ ಒಗ್ಗಿಸಿಕೊಳ್ಳುತ್ತಾರೆ. ಒಬ್ಬ ಪ್ರತಿಷ್ಠಿತ ಚರಿತ್ರಕಾರ ಆಧುನಿಕ ಜಗತ್ತಿನ ಬಗ್ಗೆ ಹಾಗೆ ಚರ್ಚಿಸುವರು. ವಸಾಹತುವಿನ ವೈಶಿಷ್ಟ್ಯ ಏನು ಅಂದರೆ ಅದು ಯುರೋಪಿನ ಸಾಹಿತ್ಯಿಕ ಪ್ರಕಾರಗಳನ್ನು ತೆಗೆದುಕೊಂಡು ಒಂದು ಬಗೆಯ ಅಸಾಧಾರಣವಾದ ಸಾಧನೆಯನ್ನು ಮಾಡುವುದನ್ನು ಗುರುತಿಸುವ ಪ್ರಯತ್ನವಾಗಿದೆ.

ಮರಾಠಿಯ ಪ್ರಭಾವದಿಂದ ಕಾದಂಬರಿಯು ಮೊದಲು ಉತ್ತರ ಕರ್ನಾಟಕದಲ್ಲಿ ಮಾತ್ರ ಪರಿಚಯವಿತ್ತು ಎಂದು ಹಾವನೂರರು ಹೇಳಿದರೆ. ಡಾ.ಕೆ. ಸತ್ಯನಾರಾಯಣರ ಪ್ರಕಾರ ಮೈಸೂರು ಮತ್ತು ದಕ್ಷಿಣ ಕನ್ನಡಗಳಲ್ಲೂ ಈ ಹೆಸರು ಪ್ರಚಲಿತವಿದ್ದುದನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣ ಪಾಶ್ಚಿಮಾತ್ಯ ಶಿಕ್ಷಣ ಮತ್ತು ಅಂದಿನ ಸಾಮಾಜಿಕ ಸಮಸ್ಯೆಗಳ ಚಿಂತನೆಯೇ ಬಂಡವಾಳಶಾಹಿ ನಾಗರಿಕತೆಯ ಬೆಳವಣಿಗೆಯೊಂದಿಗೆ ಅಖಂಡ. ಪರಿಪೂರ್ಣ ಜಗತ್ತು ವಿದಳನಗೊಳ್ಳಲು, ವಿಸ್ತರಿಸಲು, ಬದಲಾವಣೆ ಕಾಣಲು ಶುರುವಾಯಿತು. ಬಂಡವಾಳಶಾಹಿ ನಾಗರಿಕತೆಯೊಂದಿಗೆ ಹೊಸ ಮಧ್ಯಮ ವರ್ಗ ಜನ್ಮ ತಳೆಯಿತು. ಹಳೆಯ ನಂಬಿಕೆ, ಮೌಲ್ಯಗಳನ್ನು ಸಾರ್ವತ್ರಿಕವಾದ, ವಿಶ್ವಸ್ಥ ಸ್ಥಿತಿಯಿಂದ ಇದ್ದ ಸಂಗತಿಗಳನ್ನು ಪ್ರಶ್ನಿಸಲು ಪ್ರಾರಂಭಿಸಿತು. ಈ ಸಮಯಕ್ಕೆ ಹೊಸ ವೈಜ್ಞಾನಿಕ

ಆವಿಷ್ಕಾರಗಳು, ಅನ್ವೇಷಣೆಗಳು ಬೆಳಕು ಕಂಡು ಮಾನವ ಬದುಕಿಗೆ ಪೂರಕವಾದ ವಾತಾವರಣ ಸೃಷ್ಟಿಯಾಗತೊಡಗಿತು. ಸಮಾಜದ ಸದಸ್ಯರಿಗೆ ಜೀವನದ ಸಾಧ್ಯತೆಯ ಅರಿವುಗಳಿಗೆ ಪ್ರಚೋದಿಸಿತು. ಸಾಮಾನ್ಯ ಭಾರತೀಯ ಮಾದರಿಯೂ ಈ ಸಮಯದಲ್ಲಿ ನೆಲೆ ಕಾಣಲು ಪ್ರಾರಂಬಿಸಿತು.

ಕನ್ನಡದ ಮೊದಲ ಕಾದಂಬರಿಗಳ ಸ್ವರೂಪವನ್ನು ಅರಿಯಲು, ಅದರ ತಾತ್ವಿಕತೆಯನ್ನು ಅರಿಯಲು ಕರ್ನಾಟಕದ ಆಧುನಿಕತೆಯನ್ನು ವಸಾಹತುಶಾಹಿ ರಾಜಕೀಯ ಚರಿತ್ರೆಯನ್ನು ಗಮನಿಸಲೇ ಬೇಕು. ೧೯ನೆಯ ಶತಮಾನದ ಕೊನೆ ೨೦ನೇ ಶತಮಾನದ ಆರಂಭದ ದಶಕಗಳ ಸಾಮಾಜಿಕ, ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಬೇಕು. ಈ ಸಂದರ್ಭದಲ್ಲಿ ಬಂಡವಾಳಶಾಹಿ ನಾಗರಿಕತೆಯ ಬೆಳವಣಿಗೆಯೊಡನೆ ಪಾಶ್ಚಾತ್ಯ ನಾವಲ್ ಹುಟ್ಟಿಕೊಂಡಿತು. ಅದು ಆಧುನಿಕ ಮಧ್ಯಮ ವರ್ಗದ ಮನಸ್ಥಿತಿಯ, ಜೀವನದರ್ಶನದಿಂದ ಮೂಡಿ ಬಂದದ್ದು ಗಮನಾರ್ಹವಾದ ಸಂಗತಿ. ಇದು ಕನ್ನಡ ಕಾದಂಬರಿಯ ಒಟ್ಟು ಭಾರತೀಯ ಕಾದಂಬರಿಗೆ ಅನ್ವಯಿಸುವ ಮಾತು. ಆಧುನಿಕ ವಿದ್ಯಾವಂತ ವರ್ಗದ ತಾತ್ವಿಕತೆಯನ್ನು ಅರಿಯಲು ಪ್ರಯತ್ನಿಸಿತು. ಇಲ್ಲಿ ದೇಶಿಯ ವಿದ್ಯಾವಂತರ ಜೀವನದರ್ಶನದಿಂದಲೆ ಅರಿತ ಸಂಗತಿ ವಿಶಿಷ್ಟವಾದದ್ದು.

ಈ ಕಾಲದ ಬದಲಾವಣೆಯ ಸಾಮಾಜಿಕ ಸ್ಥಿತ್ಯಂತರದ ಮತ್ತೊಂದು ವೈಶಿಷ್ಟ್ಯವೆಂದರೆ ಭಾರತೀಯರಲ್ಲಿ ಮೂಡಿಬಂದ ಲೌಕಿಕ ಹಾಗೂ ವ್ಯಕ್ತಿಗತ ದೃಷ್ಟಿಕೋನ. ಇದುವರೆಗೂ ಮತಧರ್ಮದ ಆವರಣದಲ್ಲಿ ಬೆಳೆದುಬಂದ ಮನೋವೃತ್ತಿ ಸಮಷ್ಟಿ ಪ್ರಜ್ಞೆಯಿಂದ ಕೂಡಿದ್ದಾಗಿತ್ತು. ಪಾಶ್ಚಿಮಾತ್ಯ ಪ್ರಭಾವದಿಂದ ಮೂಡಿಬಂದ ಲೌಕಿಕ ವಿಚಾರಗಳಿಂದ ಜೀವನಕ್ರಮ ವ್ಯಕ್ತಿಪರವಾಗುತ್ತಾ ನಡೆಯಿತು. ನಡುವಳಿಕೆಯಲ್ಲಿ ಪ್ರಾಧಾನ್ಯತೆಯನ್ನುನುಸರಿಸಬೇಕಾದ ಪರಿಸ್ಥಿತಿಯು ನಿರ್ಮಾಣವಾಯಿತು. ವ್ಯಕ್ತಿಯ ಮನೋಸ್ಥಿತಿಯ ಮೇಲೆ ಜಿಜ್ಞಾಸೆ ಪ್ರವೃತ್ತಿಯು ಮೂಡಿತು. ಈ ಜಿಜ್ಞಾಸೆ ಮಧ್ಯಮ ವರ್ಗದ ಜನರ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತಾ ತಾರ್ಕಿಕ ವಿಚಾರ ಸರಣಿಗೆ ಜನರನ್ನು ಸೆಳೆದುಕೊಳ್ಳುತ್ತಾ ತನ್ಮಯಗೊಳಿಸಿತು.

ಕಾದಂಬರಿಗಳು ರಾಜಕೀಯವಾಗಿ ನೇರವಾದ ಪರಿಣಾಮವನ್ನು ಬೀರದಿದ್ದರು ಪರೋಕ್ಷವಾಗಿ ಪ್ರಭಾವಿಸಿವೆ. ಭಾರತದಲ್ಲಿ ವಸಾಹತು ಆಡಳಿತ ಮತ್ತು ಇಂಗ್ಲಿಷ್ ವಿದ್ಯಾಕ್ರಮಗಳ ಒಂದು ಪರಿಣಾಮವೆಂದರೆ ಬದುಕಿನ ರೀತಿಯನ್ನು ನಾವು ಅರಿಯುವ ಕ್ರಮದಲ್ಲಾದ ಬದಲಾವಣೆ. ದೇಶದಲ್ಲಿ ಪ್ರಜೆಗಳು ಗಮನಿಸುವ ಸ್ವಯಂತಂತ್ರವಾದಿ, ತರ್ಕ ಆಲೋಚನೆಗಳು, ಮಾನವತಾವಾದ ಮುಂತಾದ ಚಿಂತನ ಕ್ರಮವನ್ನು ಇಂಗ್ಲಿಷ ಶಿಕ್ಷಣ ರಾಜಕೀಯ ಪ್ರಸಂಗಗಳನ್ನು ನಿರ್ಣಾಯಕವಾಗಿ ಜಾರಿಗೆ ತಂದಿದೆ. ವಸಾಹತು ಆಡಳಿತದ ಮೊದಲ ಬಲಿಪಶುಗಳ ಪೈಕಿ ದೇಶಿಯ ಚರಿತ್ರೆಯು ಒಂದು. ರಾಜಕೀಯ

ಪ್ರವೃತ್ತಿಯಿಂದ ಪೌರ್ವಾತ್ಯವಾದವನ್ನು ಹುಟ್ಟುಹಾಕಿತು. ಭಾರತದ ಸ್ಥಾವರ ಸಂಸ್ಕೃತಿಯನ್ನು ಪರ್ಯೀಕರಿಸುವ, ಆವಿಷ್ಕರಿಸುವ, ಶೋಧಿಸುವ, ಅದರ ಚರಿತ್ರೆಯನ್ನು ಬರೆಯುವದಕ್ಕೆ ಮೀನಮೇಷವೆಣಿಸಲಾಯಿತು.

ರಾಜಕೀಯವು ಒಂದು ಆಧುನಿಕ ಸಂವೇದನೆ. ಅದು ಆಧುನಿಕ ಸನ್ನಿವೇಶ ಕುರಿತಾದ ಅದರ ಸ್ವರೂಪ, ಆದರ್ಶ ಮತ್ತು ವಾಸ್ತವಗಳ ಗ್ರಹಿಕೆ ಮತ್ತು ಪ್ರಯೋಗಗಳನ್ನು ಕಾಣುತ್ತೇವೆ. ರಾಜಕೀಯ ಸ್ವರೂಪವು ಕಾಲದಿಂದ ಕಾಲಕ್ಕೆ ಬೇರೆಯಾಗಿರುವ ಸಾಧ್ಯತೆಯು ಇದೆ. ಹಲವಾರು ಶಕ್ತಿಗಳು ರಾಜಕೀಯವನ್ನು ನಿರ್ಧರಿಸುವಂತವಾಗಿದ್ದು ಭಾರತ ಅದರಂತೆ ಕರ್ನಾಟಕದ ಸಂದರ್ಭಗಳಲ್ಲಿ ಜಾತಿ ರಾಜಕೀಯವನ್ನು ನಿರ್ಧರಿಸುವ ಮಹತ್ವದ ಅಂಶಗಳಲ್ಲೊಂದು. ರಾಜಕೀಯ ನಿರ್ವಹಿಸುವ, ನಿರ್ಧರಿಸುವ ಶಕ್ತಿಗಳಾಗಿದ್ದು, ಒಬ್ಬ ಲೇಖಕನು ರಾಜಕೀಯ ವಿಷಯವನ್ನು ಗಮನಿಸಿಕೊಂಡು ಕಾದಂಬರಿಗಳಲ್ಲಿ ಚಿತ್ರಿಸಿರುವುದು ಕಾಣುತ್ತೇವೆ. ಸಾಮಾನ್ಯವಾಗಿ ಮಹತ್ವದ ಕೃತಿಗಳು ಸಮಕಾಲಿನ ಪ್ರಜ್ಞೆವುಳ್ಳದ್ದಾಗಿರುವುದು. ಅಂದರೆ ಯುಗದ ಸಾಮಾಜಿಕ, ಧಾರ್ಮಿಕ, ರಾಜಕೀಯ ಬದಲಾವಣೆಗಳ ಪರಿಣಾಮದಿಂದ ನಿರ್ಮಿತವಾದ ಮೌಲ್ಯಪ್ರಜ್ಞೆ ಈ ಮೊದಲ ಘಟ್ಟದ ಕಾದಂಬರಿಗಳಲ್ಲಿ ಕಂಡುಬರುವುದು.

ಅಡಿ ಟಿಪ್ಪಣಿ:

೧. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಪು.೧೪.

೨. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಪು.೧೫.

೩. ಶಿವರಾಂ ಪಡಿಕಲ್, ಕನ್ನಡ ಕಾದಂಬರಿಯ ಮೊದಲ ಘಟ್ಟ, ಪು.೫೩.

೪. ಇಂದಿರಾ ಆರ್–ಮಹಿಳೆ ಸಮಾಜ ಮತ್ತು ಸಂಸ್ಕೃತಿ–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.೧೧.

೫. ಇಂದಿರಾ ಆರ್–ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯

೬. ಮನು ಸಂಸ್ಕೃತಿ, ಅಧ್ಯಾಯ–೨ ಶ್ಲೋಕ–೧೪೫, ಪು.೫೮, ಅನುವಾದ, ನವರತ್ನ ಶೇಷ,

೭. ಮನು ಸಂಸ್ಕೃತಿ, ಅಧ್ಯಾಯ–೫, ಶ್ಲೋಕ–೧೫೫, ಪು.೨೨೭.

೮. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೊ ಮಹಾರಾಯ, ಪು.೯೮–೯೯.

೯. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪುಟ.೯೩.

೧೦. ಶ್ರೀನಿವಾಸ ಹಾವನೂರು ಹೊಸಗನ್ನಡ ಅರುಣೋದಯ, ಪು.೧೦೭, ೧೩೨.

೧೧. ಪ್ರಾಂಕ್ ಕಾಲೋನಿ, ಎ.ಕಾಸ್ಟ್ ಇನ್ ವರ್ಡ್: ದಿ ಚಿತ್ತಾಪೂರ ಬ್ರಾಹ್ಮನ್ಸ್, ಪೂರ್ವೋಕ್ತ – ನಾಡುನುಡಿ ರೂಪಕ, ಪು.೭೮.

೧೨. ಕೇಶವ ಕೃಷ್ಣ ಕುಡ್ವಾ – ಸಾರಸ್ವತ ಸಮಾಜ, ಪೂರ್ವೋಕ್ತ – ನಾಡುನುಡಿ ರೂಪಕ, ಪು.೬೬.

೧೩. ಶ್ರೀನಿವಾಸ ಹಾವನೂರು – ಹೊಸಗನ್ನಡ ಅರುಣೋದಯ, ಪು.೧೦೯.

೧೪. ಸಂಕ್ರಮಣ ಸಂಪುಟ–೧೯ ಸಂಚಿಕೆ–೪,೫.

೧೫. ನಾಯಕ ಜಿ.ಎಚ್, ಶತಮಾನದ ಕನ್ನಡ ಸಾಹಿತ್ಯ, ಪು.೧೮೯.

೧೬. ಕೆರೂರು ವಾಸುದೇವಾಚಾರ್ಯ, ಇಂದಿರಾ, ಪುಟ.೯೩.

೧೭. ಕೆರೂರು ವಾಸುದೇವಾಚಾರ್ಯ. ಇಂದಿರಾ. ಪುಟ.೩೪.

೧೮. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೊ ಮಹಾರಾಯ, ಪು.೧೦೮

೧೯. ಇನಾಂದಾರ ವಿ.ಎಂ – ಇಂದಿರಾ, ಮುನ್ನುಡಿ, ಪು.೨೬.

೨೦. ಇನಾಂದಾರ ವಿ.ಎಂ – ಇಂದಿರಾ ಮುನ್ನುಡಿ, ಪು.೨೭.

೨೧. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ, ಪು.೨೫೯.

೨೨. [illegible] - ವಾಗ್ದೇವಿ. ಪು.[illegible]

೨೩. ನಾಯಕ ಜಿ.ಎಚ್ – ಕನ್ನಡ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಇಂದಿರಾಬಾಯಿ – ವಿವೇಕರೈ ಬಿ.ಎ. (ಸಂ) ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಪು–೧೧೧

೨೪. ನಾಯಕ ಜಿ.ಎಚ್ – ಕನ್ನಡ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಇಂದಿರಾಬಾಯಿ – ವಿವೇಕರೈ ಬಿ.ಎ. (ಸಂ) ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಪು.೧೧೧–೧೧೨.

೨೫. ಶ್ರೀನಿವಾಸ ಹಾವನೂರು, ಹೊಸಗನ್ನಡ ಅರುಣೋದಯ, ಪು.೧೪.

೨೬. ಶಿವರಾಮ ಕಾರಂತ, ಸ್ಮೃತಿ ಪಟಲದಿಂದ, ಪು.೫೫.

೨೭. ತಿಪ್ಪೇರುದ್ರಸ್ವಾಮಿ ಎಚ್ – ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಚಿನ್ನದ ಗರಿ, ಪು.೯೪.

೨೮. ತಿಪ್ಪೇರುದ್ರಸ್ವಾಮಿ ಎಚ್ – ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಚಿನ್ನದ ಗರಿ, ಪು.೯೫.

೨೯. ನಂಜನಗೂಡು ತಿರುಮಲಾಂಬ – ಸುಶೀಲೆ, ಪು.೨೩.

೩೦. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ, ಪು.೯೬.

೩೧. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ, ಪು.೯೬

೩೨. ನಂಜನಗೂಡು ತಿರುಮಲಾಂಬ – ಸುಶೀಲೆ ಹಿತೈಷಿಣಿ ಹೆಜ್ಜೆಗಳು, ಪು.೨೬

೩೩. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ– ಪು.೧೧೩.

೩೪. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ– ಪು.೨೦೫.

೩೫. ಕೆರೂರು ವಾಸುದೇವಾಚಾರ್ಯ – ಇಂದಿರಾ– ಪು.೪೫.

೩೬. ಕೆರೂರು ವಾಸುದೇವಾಚಾರ್ಯ – ಇಂದಿರಾ– ಪು.೪೫.

೩೭. ಕೆರೂರು ವಾಸುದೇವಾಚಾರ್ಯ – ಇಂದಿರಾ– ಪು.೮೯.

೩೮. ನಂಜನಗೂಡು ತಿರುಮಲಾಂಬ – ಮಾತೃನಂದಿನಿ– ಪು.೩೩.

೩೯. ನಂಜನಗೂಡು ತಿರುಮಲಾಂಬ – ಮಾತೃನಂದಿನಿ– ಪು.೩೪.

೪೦. ವಿಜಯಾದಬ್ಬೆ – ಹಿತೈಷಿಣಿಯ ಹೆಜ್ಜೆಗಳು – ಪು.೯೪.

೪೧. ನಂಜನಗೂಡು ತಿರುಮಲಾಂಬ – ಸುಶೀಲೆ – ಪು.೩೧

೪೨. ಭೀಮರಾವ್ ಎಚ್ – ಸುಶೀಲೆ, ಪೂರ್ವೋಕ್ತ, ಅನುಬಂಧ, ಪು.೭.

೪೩. ವಿಜಯಾದಬ್ಬೆ – ಹಿತೈಷಿಣಿಯ ಹೆಜ್ಜೆಗಳು(ವೃತ್ತಾಂತ ಪತ್ರಿಕೆಯ ಅಭಿಪ್ರಾಯ, ಪು.೨೯.

೪೪. ನಾಯಕ ಜಿ.ಎಚ್ ಕನ್ನಡ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ' ಮೊದಲ ಹೆಜ್ಜೆಗಳು – ಸಂ. ವಿವೇಕ ರೈ ಬಿ.ಎ – ಪು.೧೦೦–೧೦೧.

೪೫. ಗುಲ್ವಾಡಿ ವೆಂಕಟರಾಯ – ಇಂದಿರಾಬಾಯಿ, ಪು.೧೧೩

೪೬. ಕೆರೂರು ವಾಸುದೇವಾಚಾರ್ಯ – ಇಂದಿರಾ– ಪು.೧೧೩

೪೭. ಸತ್ಯನಾರಾಯಣ-ಶ್ರೀನಿವಾಸ ಕಥಾಸಾಹಿತ್ಯ' ಒಂದು ಅಧ್ಯಯನ(ಮಹಾಪ್ರಬಂಧ ಅಪ್ರಕಟಿತ). ಪು.೨೯೨.

೪೮. ಕೆರೂರು ವಾಸುದೇವಾಚಾರ್ಯ - ಇಂದಿರಾ, ಪು.೬೭.

೪೯. ಲಕ್ಷ್ಮಣ ಭೀಮರಾವ್ ಗದಗಕರ - ಚಂದ್ರಪ್ರಭಾ, ಪು.೧೪೯.

೫೦. ನಂಜನಗೂಡು ತಿರುಮಲಾಂಬ - ಮಾತೃನಂದಿನಿ, ಪು.೩೪.

೫೧. ಶಿವರಾಮ ಪಡಿಕಲ್ - ನಾಡುನುಡಿಯ ರೂಪಕ, ಪು.೨೨೩.

೫೨. ಶ್ರೀನಿವಾಸ ಹಾವನೂರ - ಹೊಸಗನ್ನಡ ಅರುಣೋದಯ, ಪು.೩೪-೫೬.

೫೩. ಶ್ರೀನಿವಾಸ ಹಾವನೂರು - ಉದ್ಧತ ಪೂರ್ವೋಕ್ತ, ಪು.೨೦೨-೨೦೫.

೫೪. ಕನವಳ್ಳಿ ಕೃಷ್ಣ-ರಾಜನಂದಿನಿ ಶ್ರೀ ಶೇಷಾಚಲ ಗ್ರಂಥಮಾಲೆ ಆನಂದವನ-೧೯೩೪, ಪೂರ್ವೋಕ್ತ ಶಿವರಾಮ ಪಡಿಕಲ್ - ಕನ್ನಡ ನಾಡು ನುಡಿ ರೂಪಕ, ಪು.೨೨೬.

೫೫. ಶ್ರೀನಿವಾಸ ಹಾವನೂರು - ಪೂರ್ವೋಕ್ತ, ಕನ್ನಡ ನಾಡು ನುಡಿ ರೂಪಕ, ಪು.೨೨೬.

೫೬. ಶಿವರಾಮ ಕಾರಂತರ, ಹುಚ್ಚುಮನಸ್ಸಿನ ಹತ್ತು ಮುಖಗಳು, ಪು.೨೫-೨೬.

೫೭. ವೆಂಕಟಾಚಾರ್ಯ ಬಿ - ದುರ್ಗೇಶನಂದಿನಿ ಪೀಠಿಕಾ ಭಾಗ, ಪು.೨.

೫೮. ಮಂಗಳೂರು ಸಮಾಚಾರ, ಉದ್ಧತ ಪೂರ್ವೋಕ್ತ ಶ್ರೀನಿವಾಸ ಹಾವನೂರು. ಶಿವರಾಮ ಪಡಿಕಲ್, ಕನ್ನಡ ನಾಡು ನುಡಿಯ ರೂಪಕ.

೫೯. ಆನಂದ ಚಂದ್ರಿಕ, ಸಂಪುಟ-೧, ಸಂಚಿಕೆ-೨, ಪು.೫೦. ಪೂರ್ವೋಕ್ತ, ನಾಡು ನುಡಿಯ ರೂಪಕ - ಶಿವರಾಮ ಪಡಿಕ್ಕಲ್, ಪು.೨೩೪.

೬೦. ಆಧ್ಯಾತ್ಮ ಪ್ರಕಾಶ ಪೂರ್ವೋಕ್ತ ಪು.೩, ೪, ನಾಡುನುಡಿಯ ರೂಪಕ, ಶಿವರಾಮ ಪಡಿಕ್ಕಲ್- ಪು.೨೩೪.

೬೧. ಶ್ರೀನಿವಾಸ ಹಾವನೂರು. ಗಳಗನಾಥ ಮಾಸ್ತರರು. ಪು.೫೩.

೬೨. ಶ್ರೀನಿವಾಸ ಹಾವನೂರು. ಗಳಗನಾಥ ಮಾಸ್ತರರು. ಸದ್ಬೋಧ ಚಂದ್ರಿಕೆಯ ಅಮೃತ ಮಹೋತ್ಸವ ಸಂಚಿಕೆ. ನಂದನವನ. ಪೂರ್ವೋಕ್ತ ನಾಡುನುಡಿಯ ರೂಪಕ. ಶಿವರಾಮ ಪಡಿಕಲ್. ಪು.೨೩೫.

೬೩. ಧಾರವಾಡಕರ ರಾ.ಯ - ಹೊಸಗನ್ನಡ ಸಾಹಿತ್ಯ ಉದಯ. ಪು.೩೯೦-೩೯೧, ಪೂರ್ವೋಕ್ತ.

೬೪. ಗಳಗನಾಥರ ಕಾದಂಬರಿಗಳು. ಕೃಷ್ಣಮೂರ್ತಿ ಕಿತ್ತೂರ. ಪು.೩೭-೪೮.

೬೫. ಮಾತೃಭೂಮಿ ಸಂಪುಟ-೧, ಸಂಚಿಕೆ-೧, ಪೂರ್ವೋಕ್ತ, ಕನ್ನಡ ನಾಡು ನುಡಿಯ ರೂಪಕ, ಪು.೨೩೫

೬೬. ಪಡಿಕ್ಕಲ್ ಶಿವರಾಮ - ನಾಡು ನುಡಿಯ ರೂಪಕ, ಪು.೨೪೪.

೧೭. ತಿಪ್ಪೆರುದ್ರಸ್ವಾಮಿ ಎಚ್ – ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಪು.೯೫.

೧೮. ಲಕ್ಷ್ಮಣಗೌಡ ಕೆ.ಟಿ – ಸ್ವಾತಂತ್ರ್ಯಪೂರ್ವ ಕನ್ನಡ ಕಾದಂಬರಿಗಳಲ್ಲಿ ಸಾಂಪ್ರದಾಯಿಕ ಸಂಘರ್ಷ. ಪು.೨೧.

೧೯. ಬಾಪು ಹೆದ್ದೂರ ಶೆಟ್ಟಿ. ಸಾಹಿತ್ಯ ಮತ್ತು ರಾಜಕೀಯ ಸಾಧನೆ, ಪೂರ್ವೋಕ್ತ, ಸಂಪುಟ.೧೧, ಸಂಚಿಕೆ ೧:೮.

೨೦. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಪು.೧೨.

೨೧. ಶಿವರಾಮ ಕಾರಂತ, ಸ್ಮೃತಿ ಪಟಲದಿಂದ, ಪು.೫೫.

೨೨. ತಿಪ್ಪೆರುದ್ರಸ್ವಾಮಿ ಎಚ್ – ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ಪು.೯೫.

೨೩. ಶಿವರಾಮ ಪಡಿಕ್ಕಲ್ ಕನ್ನಡ ಕಾದಂಬರಿಯ ಮೊದಲಘಟ್ಟ, ಪು.೩೧.

೨೪. ಪಾರ್ಥ ಚಟರ್ಜಿ ಪೂರ್ವೋಕ್ತ ನಾಡು ನುಡಿ ರೂಪಕ. ಪು.೪೨.

೨೫. ನಾಗರಾಜ ಡಿ.ಆರ್ – ಮೆಕಾಲೆ ಮಕ್ಕಳು, ಪೂರ್ವೋಕ್ತ, ನಾಡು ನುಡಿ ರೂಪಕ, ಪು.೪೧.

೨೬. ಪೂರ್ವೋಕ್ತ, ಪಾಂಚ್ ಘಾನಸ್, ನಾಡು ನುಡಿ ರೂಪಕ, ಪು.೪೨.

೨೭. ರಹಮತ್ ತರೀಕೆರೆ – ಮರದೊಳಗಿನ ಕಿಚ್ಚು, ಪು.೧೩೬.

೨೮. ನಾಗರಾಜ ಡಿ.ಆರ್ – ಅಮೃತ ಮತ್ತು ಗರುಡ, ಪು.೧೮.

೨೯. ಶಿವರಾಮ ಪಡಿಕ್ಕಲ್ – ನಾಡು ನುಡಿ ರೂಪಕ, ಪು.೯೪.

೩೦. ಈ ಸಂಗತಿ ಈಗಾಗಲೇ ರಾ.ಯ.ಧಾರವಾಡಕರರ ಹೊಸಗನ್ನಡ ಉದಯ ಕಾಲ, ಕೃಷ್ಣಮೂರ್ತಿ ಕಿತ್ತೂರರ, ಗಳಗನಾಥರು ಮತ್ತು ಅವರ ಕಾದಂಬರಿಗಳು, ಕೀರ್ತಿನಾಥ ಕುರ್ತಕೋಟಿ, ಜಿ.ಬಿ. ಜೋಶಿಯವರ ವಾಸುದೇವ ಪ್ರಶಸ್ತಿ ಚರ್ಚಿತ.

೩೧. ಸುಜಾತಾ ಎಚ್.ಎಸ್ – ಎಂ.ಎಸ್. ಪುಟ್ಟಣ್ಣ ಒಂದು ಅಧ್ಯಯನ, ಪು.೭೯.

೩೨. ಶಿವರಾಮ ಪಡಿಕ್ಕಲ್ – ನಾಡು ನುಡಿ ರೂಪಕ, ಪು.೧೦೨.

೩೩. ಸುಜಾತಾ ಎಚ್.ಎಸ್. ತಿ.ನಂ. ಶ್ರೀಯವರು, ನಾಡು ನುಡಿ ರೂಪಕ ಪೂರ್ವೋಕ್ತ, ಪು.೧೦೪.

೩೪. ಶಾಂತಿನಾಥ ದೇಸಾಯಿ. ಕನ್ನಡ ಕಾದಂಬರಿ ನಡೆದು ಬಂದ ರೀತಿ, ಪೂರ್ವೋಕ್ತ. ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪು.೩೩.

೩೫. ಆಮೂರ ಜಿ.ಎಸ್ – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪು.೪೧.

ಅಧ್ಯಾಯ - ೫

ಮೊದಲ ಘಟ್ಟದ ಕಾದಂಬರಿಗಳ ಸಾಮಾಜಿಕತೆ:

ಸಮಾಜ ಮತ್ತು ನಂಬಿಕೆ

ಹರಕೆ ಮತ್ತು ಬಲಿ

ಪೂಜೆ, ಶಾಪ, ವ್ರತಾಚರಣೆಗಳು

ವಿಧಿಕ್ರಿಯೆಗಳು

ಅಧ್ಯಾಯ – ೫

ಮೊದಲ ಘಟ್ಟದ ಕಾದಂಬರಿಗಳು

ಸಾಮಾಜಿಕತೆ:

ಬದುಕು ಸಾಗಿಸುವ ಪ್ರತಿಯೊಬ್ಬರು ಪ್ರೀತಿ ಸಹಕಾರ, ಸೌಹಾರ್ದತೆ ಸಮನ್ವಯತೆ ರೂಢಿಸಿಕೊಂಡು ಬದುಕು ಸಾಗಿಸುವದು ಅಗತ್ಯ. ಇಷ್ಟಾಗಿಯೂ ಸಂಪೂರ್ಣವಾಗಿ ಸರ್ವಸಮಾನತೆಯ ದೃಷ್ಟಿಕೋನವನ್ನು ಇಟ್ಟುಕೊಂಡು ಬಂದಿರುವವರು ವಿರಳ. ಸ್ತ್ರೀ ಸಂಬಂಧಿ ಸಮಸ್ಯೆ ಮೊದಲ ಘಟ್ಟದ ಕಾದಂಬರಿಗಳಲ್ಲಿ ಕೇವಲ ಕೌಟುಂಬಿಕ ಸರಕಾಗಿ ಸಿಮೀತಗೊಳಿಸಿದ್ದು ವಿಪರ್ಯಾಸವೆ ಸರಿ. ಅವಳನ್ನು ತಾಯಿಯಾಗಿ, ಹೆಂಡತಿಯಾಗಿ ಮನೆಯ ಪೂಜಾವಿಧಾನದ ಪ್ರತಿನಿಧಿಯಾಗಿ ರೂಪಿಸಿದ್ದು ಗೆರೆ ಹಾಕಿದಂತಿದೆ. ಕೇವಲ ಕುಟುಂಬಕ್ಕೆ ಮಾತ್ರ ಸಂವಾದಿಯಾಗಿ ನಿಲ್ಲಿಸಲಾಗಿದೆ. ಸಾಹಿತ್ಯ ಗ್ರಹಿಸುವ ವಿವಿಧ ವಿಧಾನಗಳಲ್ಲಿ 'ಸಮಾಜ ಶಾಸ್ತ್ರಿಯ ನೆಲೆಯು' ಒಂದು. ಸಾಹಿತ್ಯ ಗ್ರಹಿಕೆಯನ್ನು ರಾಜಕೀಯ, ವರ್ಗ, ವರ್ಣ, ಲಿಂಗ, ಕೌಟುಂಬಿಕ, ಸಮುದಾಯಿಕ, ಧಾರ್ಮಿಕ, ಸಂಘರ್ಷದ ಸಂದರ್ಭಗಳಲ್ಲಿ ಚರ್ಚಿಸಲಾಗಿದೆ. ಈ ಕಾದಂಬರಿಗಳಲ್ಲಿ ವ್ಯಕ್ತಿಯ ಸ್ವಭಾವ, ಮನೋಧರ್ಮ, ಕುಟುಂಬ, ಸಮುದಾಯಗಳ ವಿವಿಧ ಜಾತಿಯ, ಧರ್ಮದ ಸಂಗತಿಗಳನ್ನು ಅರಿಯಬೇಕೆಂದರೆ ಈ ಪಠ್ಯಗಳು ನೆರವಾಗುವಂತೆ ಇಲ್ಲಿ ಸಾಹಿತ್ಯ ಆಕರವಾಗುತ್ತದೆ.

ಸಾಹಿತ್ಯವನ್ನು ಸಾಮಾಜಿಕ ನೆಲೆಯಿಂದ ಗ್ರಹಿಸುವದು ಒಂದು ಜನಪ್ರಿಯ ವಿಧಾನವೂ ಹೌದು. ಜಾತಿ, ಧರ್ಮ, ಸಮುದಾಯ, ವರ್ಗ ಮುಂತಾದ ಸಂಗತಿಗಳು ಕೃತಿಯಲ್ಲಿ ಕೃತಿಕಾರನಿಗೆ ಅರಿವಿದ್ದೋ ಇಲ್ಲದೆಯೋ ಪ್ರವೇಶ ಪಡೆದಿರುತ್ತವೆ. ಹಾಗಾಗಿ ಆಯಾ ಕಾಲದ ಬರಹಗಾರರು ತಮ್ಮ ಕಾಲಘಟ್ಟದ ಲೋಕ ವ್ಯವಹಾರಗಳ ವಿವರಗಳನ್ನು ಬಿಂಬಿಸುವದು ಸಾಮಾನ್ಯ. ಕೆಲವೊಮ್ಮೆ ಪ್ರಯತ್ನ ಪೂರ್ವಕವಾಗಿಯೂ ಮೂಡಿಬರುವವು. ಅಂತಹ ಕೃತಿಗಳಲ್ಲಿ ವಾಸ್ತವ ಸಂಗತಿಗಳು ಕೃತಿಯ ಆಶಯವನ್ನು ಸ್ಪಷ್ಟಪಡಿಸುವವು. ಅದರ ಜೊತೆಯಲ್ಲಿ ಸಾಮಾಜಿಕ ವಿವಿಧ ವರ್ಗಗಳ ತಳಮಳಗಳನ್ನು ಗುರುತಿಸಿಕೊಂಡು ಬರೆದವರು ಹಲವರಿದ್ದಾರೆ. ಅಂತಹ ಸಂದರ್ಭದಲ್ಲಿ ಬೇರೆ ಬೇರೆ ಮಾದರಿಯ ಪ್ರತಿರೋಧಗಳನ್ನು ಅದಕ್ಕೆ ಕಾರಣಗಳನ್ನು ಗುರುತಿಸಲು ಸಹಾಯಕಾರಿಯಾಗುತ್ತದೆ. ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ಸಮಾಜವಾದ, ಸಮತಾವಾದದ ಆಶಯಗಳು ಸಾಮಾಜಿಕತೆಯ ಪ್ರಗತಿಯ ಕಡೆಗೆ ಮುಖ ಮಾಡಿದ್ದು ಬದಲಾವಣೆಯ ಸೂಚನೆಯಂತೆ ಇದೆ. ಇಲ್ಲಿ ಬದಲಾವಣೆಗಾಗಿ ದಾರಿಯನ್ನು ಹುಡುಕುತ್ತಿರುವ ಸನ್ನಿವೇಶವು ಕಾಣುವದು.

ಮಾನವ 'ಚಿಂತನಾ ಜೀವಿ', 'ಸಾಂಸ್ಕೃತಿಕ ಜೀವಿ', 'ರಾಜಕೀಯ ಜೀವಿ', 'ಆಧ್ಯಾತ್ಮಿಕ ಜೀವಿ' ಎನ್ನಲಾಗುತ್ತದೆ. ಅಂತೆಯೇ 'ಸಂಘಜೀವಿ' ಕೂಡಾ ಆಗಿದ್ದಾನೆ. ಅಂತೆಯೇ ಜೀವವಿಕಾಸ ಹಂತದ ಕೊನೆಯ ಫಲಶೃತಿಯಾಗಿರುವ ಮಾನವ ವಿಕಸಿತ ಮೆದುಳು ಹೊಂದಿದ್ದೆ ಇತರ ಜೀವಿಗಳಿಗಿಂತ ಭಿನ್ನವಾಗಲು ಕಾರಣ. ಈ ಜೀವಿಗಳಲ್ಲಿ ಒಬ್ಬನಾದ ಲೇಖಕ ತನ್ನ ಸುತ್ತಮುತ್ತಲಿನ ಸಾಮಾಜಿಕ ಸಮಸ್ಯೆ ಎತ್ತಿಕೊಂಡು ಪ್ರತಿರೋಧ ನೆಲೆಯಲ್ಲಿ ಬರಹ ರೂಪ ನೀಡಿದ್ದು ಕಂಡುಬರುತ್ತದೆ. ಅದು ಸಾಮಾಜಿಕ ಸ್ತರವಿನ್ಯಾಸ ಗಮನದಲ್ಲಿಟ್ಟುಕೊಂಡು ಬಂದ ಬರವಣಿಗೆಗಳಾಗಿದ್ದು ಸಾಮಾಜಿಕ ಸಂಘರ್ಷದ ಚಿಂತನೆಗೆ ದಾರಿ ಮಾಡಿಕೊಟ್ಟವು. ವಾದ, ವಿತರ್ಕ, ವಿವಾದಗಳು ಹುಟ್ಟಿಕೊಂಡವು.

ಆರಂಭಿಕ ಕಾಲದ ಕಾದಂಬರಿಗಳಲ್ಲಿ ಬರುವ ಚಿತ್ರಣ ಭಾರತೀಯರಿಗೆ ಸಂಕ್ರಮಣ ಕಾಲಘಟ್ಟವಾಗಿತ್ತು. ಶಿಕ್ಷಣ, ಸಂಸ್ಕೃತಿ, ಸ್ವಾತಂತ್ರ್ಯ, ಸಮಾನತೆಯ ಅಂಶಗಳು ಸಮಾಜಿಕ ಚಿಂತನೆಗೆ ತೊಡಗಿಸಿದವು. ಸ್ತ್ರೀ ಕೇಂದ್ರಿತ ವಿಷಯ ಚರ್ಚಿತವಾಗಿರುವದು ಇನ್ನೂ ಸ್ವಾರಸ್ಯಕರವಾಗಿದೆ. ಜನಸಮೂಹವು ಒಂದೆಡೆ ಬ್ರಿಟಿಷ್ ದಾಸ್ಯದಿಂದ ಬಿಡುಗಡೆಯಾಗಲು ಹವಣಿಸಿದೆ. ರಾಷ್ಟ್ರೀಯ ಆಂದೋಲನ ಐಕ್ಯತೆಯ ಮಂತ್ರ ಜಪಿಸಿತು. ಭಾರತೀಯ ಸಂಸ್ಕೃತಿಯ ಪುನರ್ ಶೋಧಿಸುವ ಕಾರ್ಯ ಆರಂಭವಾಯಿತು. ಹೀಗೆ ಒಟ್ಟಾರೆ ನಡೆದು ಬಂದ ದಾರಿ. ರಾಷ್ಟ್ರೀಯ ಪುನರುತ್ಥಾನವಾದಿ ಚಳವಳಿಗಳು, ಸನಾತನದ ಧರ್ಮ ಸಂಪ್ರದಾಯಗಳು ಸಮಾಜ ಸುಧಾರಕರು ತಮ್ಮ ತಾತ್ವಿಕ ಚಿಂತನೆಗೆ ದಾರಿ ನಿರ್ಮಿಸಿಕೊಂಡರು. ಈ ಸಂದರ್ಭದಲ್ಲಿ ಸಮಾಜ ಸುಧಾರಣೆಯ ವಿಷಯ ವಸ್ತುವಾಗಿ ಸ್ತ್ರೀ ಕೇಂದ್ರಿತ ಸಮಸ್ಯೆಯನ್ನು ಲೇಖಕರು ಪರಿಶೀಲಿಸಿದ್ದಾರೆ. ಸ್ತ್ರೀ ಸುಧಾರಣೆಯ ಧೋರಣೆಯುಳ್ಳ ಪಾಶ್ಚಿಮಾತ್ಯ ಮತ ಪ್ರಚಾರಕರಿಗೆ ಈ ಸಂಗತಿ ಮತ್ತಷ್ಟು ಪುಷ್ಟಿ ನೀಡಿತು. ದೇಶಿಯ ಹೋರಾಟದ ಚಳುವಳಿಗಳು ತೀವ್ರವಾದವು. ಸಂಸಾರದ ಜಂಜಾಟದಲ್ಲಿ ಒಳ್ಳೆಯ ಪತ್ನಿಯರಾಗಿ ತಾಯಂದಿರಾಗಿ, ಕಾರ್ಯನಿರ್ವಹಿಸಿದ ರೀತಿಯ ಚಿತ್ರಣ ಇಲ್ಲಿ ಕಾಣುವದು. ಶಿಕ್ಷಣವು ಸ್ತ್ರೀಯರಿಗೆ ಪರೋಕ್ಷ ಜೀವನದ ವಾಸ್ತವ ಬದುಕು ಅರಿಯಲು ಅನುಕೂಲಕರ ವಾತಾವರಣ ನಿರ್ಮಿಸಿಕೊಟ್ಟಿತು.

ಭಾರತೀಯ ವೇದಕಾಲದ ಸ್ಥಿತಿಗತಿ ಗಮನಿಸಿದಾಗ ಸ್ತ್ರೀಯರ ಬದುಕು ಇಷ್ಟೊಂದು ಕ್ಲಿಷ್ಟಕರವಾಗಿರಲಿಲ್ಲ ಎಂಬ ಅಭಿಮತವಿದೆ. ಕ್ರಮೇಣ ಪುರುಷ ಸ್ತ್ರೀಯರ ಮೇಲೆ ಪ್ರಭುತ್ವ ಸಾಧಿಸಿದಂತೆ ಕಾಣುವದು. ಒಂದು ಹಂತದಲ್ಲಿ ಸ್ತ್ರೀಯರನ್ನು ವೈಭವೀಕರಿಸಲಾಗಿದ್ದು 'ಆದರ್ಶದ ಚೌಕಟ್ಟಿಗೆ' ಹಾಕಲಾಯಿತು. "ಭಾರತೀಯ ಸಂಸ್ಕೃತಿಯ ವೈಧಿಕ ಯುಗ, ವೀರ ಕಾವ್ಯಯುಗ, ಉಪನಿಷತ್ತು ಯುಗ, ಸೂತ್ರಯುಗ, ಮತ್ತು ರಜಪೂತ ಯುಗದಲ್ಲಿ ಭಾರತೀಯ ನಾರಿ ಅನೇಕ ಸಾಮಾಜಿಕ ಸ್ತರಗಳ ಐತಿಹಾಸಿಕ ಯುಗಗಳ ಮತ್ತು ರಾಜಕೀಯ ಪರಿಸ್ಥಿತಿಗಳ ಮೂಲಕ ಹಾದು ಬಂದಿದ್ದಾಳೆ".[೧] ಈ ಸಂಗತಿಯನ್ನು

ಗಮನಿಸಿದಾಗ ಕ್ರಮೇಣ ಸ್ತ್ರೀ ಪುರುಷನಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರೀತಿ, ಪ್ರೇಮ, ಭಯ ಭಕ್ತಿ, ನಯ-ವಿನಯ ವಿಧೇಯತೆ, ತ್ಯಾಗ, ರೂಢಿಸಿಕೊಂಡಳು. ಸಾಧ್ವಿತನದ ಹೆಗ್ಗಳಿಕೆಗಳೊಂದಿಗೆ ಗೃಹಿಣಿಯ ಪಟ್ಟವನ್ನು ಪಡೆದಳು. ಸನಾತನವಾದ ಪುರುಷರು ಪುರುಷ ವ್ಯವಸ್ಥೆ ಗಟ್ಟಿಗೊಳಿಸಿಕೊಂಡಿದ್ದು ಐತಿಹಾಸಿಕ ಸಂಗತಿಯೇ ಸರಿ. ಇಷ್ಟಕ್ಕೂ ಸ್ತ್ರೀಗೆ ಸ್ತ್ರೀತ್ವ, ಪಾತಿವ್ರತ್ಯದ ಮೌಲ್ಯ ಹೊಂದಿಸಿದರು. ಅವಳ ಆ ಸ್ಥಿತಿಗೆ ಅದು ಸೂಕ್ತ ಎಂಬ ರೀತಿಯಲ್ಲಿ ಬಿಂಬಿಸಿಕೊಂಡು ಬರಲಾಗಿದೆ. ಅಷ್ಟಕ್ಕೂ ಭಾರತೀಯ ಸ್ತ್ರೀ ಆದರ್ಶನಾರಿಯಾಗಿ ಒಳ್ಳೆಯ ಪತ್ನಿಯಾಗಿ ಸುಧಾರಣೆ ಕಾಣುವ ಮನೋಸ್ಥಿತಿಯನ್ನು ಬಯಸಿದ್ದಳೆಂಬಂತೆ ಕಾಣುವದು. ಒಂದು ಹಂತದಲ್ಲಿ ಪುರುಷರನ್ನು ತ್ಯಜಿಸಿ ಸ್ವತಂತ್ರಳಾಗಿ ಬದುಕುವಷ್ಟು ಅವಳ ಬೌದ್ಧಿಕ ಮಟ್ಟ ಸದೃಢವಾಗಿ ರೂಪಗೊಂಡಿರಲಿಲ್ಲ ಎಂಬಂತೆ ಕಾಣುವದು ಅಥವಾ ಹಾಗೆ ಬಿಂಬಿಸಲಾಗಿದೆ. ಅಂತಹ ಜಾಗೃತ ನಾರಿಯರನ್ನು ಆದರ್ಶ ನಾರಿಯರಾಗಿ ಬಾಳುವ ಕನಸನ್ನೆ ಭಾರತೀಯ ಸಮಾಜ ರೂಪಿಸಿತ್ತು. ಮಹಿಳೆಯ ವಾಸ್ತವಿಕ ಬದುಕನ್ನು ತೆರೆದಿಡಲು ಮೊದಲು ಆಸಕ್ತಿ ತಳೆದವರು ಕೂಡ ಪುರುಷರೇ.

ಈ ದೃಷ್ಟಿಯಿಂದ ಮೊದಲ ಘಟ್ಟದ ಕಾದಂಬರಿಗಳಲ್ಲಿ ಸ್ತ್ರೀ ಜೀವನದ ವಿವಿಧ ನೆಲೆಗಳನ್ನು ಅರಿಯುವ ಪ್ರಯತ್ನ ನಡೆಯಿತು. ಕೌಟುಂಬಿಕ ನೆಲೆಯಲ್ಲಿ ಗಮನಿಸಿದಾಗ ಕುಟುಂಬ ಸಾಮಾಜಿಕ ವ್ಯವಸ್ಥೆಯ ಚಿಕ್ಕ ಘಟಕ. ಇಂತಹ ಹಲವಾರು ಘಟಕಗಳು ಸೇರಿ ಸಮಾಜ ಅಸ್ತಿತ್ವ ಪಡೆಯುವದು. ಕುಟುಂಬ ಜೀವನ ಅಸ್ತಿತ್ವಕ್ಕೆ ಬಂದ ಮೇಲೆ ಕುಟುಂಬಕ್ಕೆ ಯಜಮಾನ ಅಥವಾ ಯಜಮಾನಿ ಪ್ರಾಮುಖ್ಯಕ್ಕೆ ಬರುವ ಈ ದಿಶೆಯಲ್ಲಿ ಯಜಮಾನನೆ ಸುಪರ್ದಿಗೆ ಬಂದುದು. ಅಂತೆಯೇ ಪುರುಷ ಪ್ರಧಾನ ವ್ಯವಸ್ಥೆ ಜಾರಿಯಾಗಿದ್ದು. ಮುಂಚೆ ಮಾತೃ ಪ್ರಧಾನ ವ್ಯವಸ್ಥೆ ಜಾರಿಯಲ್ಲಿದ್ದಂತೆ ಕಂಡರೂ ಉಳಿದುಕೊಂಡು ಬಂದಿಲ್ಲ. ಕೃಷಿಯ ಮೂಲಕ ಬದುಕು ಕಟ್ಟಿಕೊಂಡ ಮಾನವ ಸಾರ್ವಜನಿಕ ಜೀವನದಲ್ಲಿ ಪ್ರಾಧಾನ್ಯತೆ ಪಡೆಯುತ್ತಲೆ ಹೋದ. ಮಹಿಳೆ ಕೇವಲ ಕುಟುಂಬ ವ್ಯವಸ್ಥೆಗೆ ಸಿಮೀತವಾಗಿಬಿಟ್ಟಳು. ಕುಟುಂಬದಲ್ಲಿ ಪರೋಕ್ಷವಾಗಿ ಮುಖ್ಯ ಆಗುತ್ತಾ ಹೋಗುವಳು. ಹೆಂಡತಿಯಾಗಿ ಮನು ಕುಲದ ಮುಂದುವರಿಕೆಯ ಸಾಧನವಾದಳು. ಮಾನವ ಪೀಳಿಗೆಯನ್ನು ಉಳಿಸಿ ಬೆಳೆಸುವಲ್ಲಿ ಸ್ತ್ರೀ ಪುರುಷ ಪಾತ್ರ ಪ್ರಧಾನವಾದದ್ದು.

ಸಮಾಜ ಮತ್ತು ನಂಬಿಕೆಗಳು:

ನಂಬಿಕೆ ಪ್ರತಿಯೊಬ್ಬ ಮಾನವನ ಸಹಜ ಗುಣ. ಮಾನವನ ಬೌದ್ಧಿಕ ಶಕ್ತಿ ಜಾಗೃತಗೊಂಡಂತೆ ವ್ಯಕ್ತಿಯೂ ನಂಬಿಕೆಯಲ್ಲಿ ವಿಶ್ವಾಸವಿರಿಸಿದನು. ಜಗದಲ್ಲಿ ಯಾರನ್ನು ಯಾವುದನ್ನು ನಂಬದಿದ್ದರೂ ನಮ್ಮನ್ನು ನಾವಾದರೂ ನಂಬಿಕೊಳ್ಳಬೇಕು. ಅಂದಾಗ ಮಾತ್ರ ಜೀವನ ಸುಗಮವಾಗಿ ಸಾಗಿಸಲು ಸಾಧ್ಯ. ವಿಶ್ವವ್ಯಾಪಿಯಾಗಿರುವ ನಂಬಿಕೆ ತುಂಬಾ ವೈವಿಧ್ಯಮಯವಾಗಿದೆ. "ಜಗತ್ತಿನ ಯಾವುದೆ ಭಾಗಕ್ಕೆ ಹೋದರೂ, ಅಲ್ಲಿಯ ಜನತೆಗೆ ಗ್ರಾಹ್ಯವಾದ ಹಲ ಕೆಲವು ನಿರ್ದಿಷ್ಟವಾದ ನಂಬಿಕೆಗಳು. ವಿಧಿಕ್ರಿಯೆ

(Ritual)ಗಳು ಇದ್ದೇ ಇರುತ್ತವೆ. ಜನಾಂಗೀಯ ಲಕ್ಷಣಗಳಾದ ಅವು ಕಾಲ. ಪ್ರದೇಶಗಳ ಭಿನ್ನತೆ ಹೊಂದಿರುತ್ತವೆ"[1] ಎಂಬುದು ಡಾ. ಗುರುಪಾದ ಮರಿಗುದ್ದಿಯವರ ಅಭಿಪ್ರಾಯ. ನಂಬಿಕೆ ವಿಧಿಕ್ರಿಯೆಗಳನ್ನು ತಿಳಿಯಲು ತೋರು ಬೆರಳಾಗಿದೆ.

"ತಾವು ಕಂಡುಕೊಂಡ ಇಲ್ಲವೆ ಪರಂಪರೆಯಿಂದ ಪಡೆದುಕೊಳ್ಳುವ ಕೆಲವು ವಿಚಾರಗಳಲ್ಲಿ ಜನರು ಹೊಂದಿರುವ ಆಳವಾದ ಶ್ರದ್ಧೆ – ವಿಶ್ವಾಸವನ್ನು ನಂಬಿಕೆ ಎನ್ನಬಹುದು".[2] ಎಂಬ ವಿವರಣೆಯು ಸಾಹಿತ್ಯ ಕೃತಿಗಳ ಮೂಲಕ ಮೂಡಿ ಬೇರು ಮಟ್ಟದಲ್ಲಿರುವದನ್ನು ಕೇಂದ್ರೀಕರಿಸುವದು. ಭಾರತದಂತಹ ವಿಶಾಲವಾದ ದೇಶದಲ್ಲಿ ನಂಬಿಕೆ ತನ್ನ ಮೈಚಾಚಿಕೊಂಡಿದ್ದರೂ ಇಂಥದ್ದೆ ಎಂದು ಹೆಸರಿಸಲಿಕ್ಕಾಗದು. ಸಾಮಾನ್ಯವಾಗಿ ಪರಂಪರಾಗತವಾಗಿ ನಡೆದುಬಂದ ಕೆಲವೊಂದು ವಿಚಾರಗಳಲ್ಲಿ ಇಟ್ಟಿರುವ ವಿಶ್ವಾಸ, ಶ್ರದ್ಧೆಯನ್ನು ನಂಬಿಕೆ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ನಾವು ನಂಬಿಕೊಂಡಿರುವ ವಿಚಾರಗಳಲ್ಲಿ ಸತ್ಯ ಗೋಚರವಾದಾಗ ನಂಬಿಕೆ ಮತ್ತಷ್ಟು ದೃಢವಾಗುತ್ತದೆ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟ ನಾವು ಎಷ್ಟೊಂದು ಮುಂದುವರೆದಿದ್ದರೂ ನಂಬಿಕೆಗಳನ್ನು ಪೂರ್ಣವಾಗಿ ತ್ಯಜಿಸಲಾಗಿಲ್ಲ. ವಿಪರ್ಯಾಸವೆಂದರೆ, ವಿದ್ಯಾವಂತರು ಸಹ ನಂಬಿಕೆಗಳಲ್ಲಿ ವಿಶ್ವಾಸವುಳ್ಳವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ತ್ರೀಯರ ಬದುಕನ್ನು ಗುರುತಿಸಬಹುದು.

ಈ ನಂಬಿಕೆ–ವಿಶ್ವಾಸಗಳ ಫಲವಾಗಿ ಹರಕೆಗಳು ರೂಪುಗೊಳ್ಳುತ್ತವೆ. ಅವುಗಳ ಹಿಂದೆ ಭಾವನಾತ್ಮಕ ಹಾಗೂ ಧಾರ್ಮಿಕ ಪ್ರಜ್ಞೆಗಳು ಕೆಲಸ ಮಾಡಿರುತ್ತವೆ. ವಿವಿಧ ಕಾಲ ಪ್ರದೇಶಗಳ ಜನತೆಯಲ್ಲಿ ರೂಢಿಯಲ್ಲಿದ್ದ ನಂಬಿಕೆ, ಹರಕೆಗಳಲ್ಲಿ ಜನಾಂಗೀಯ ಸಾಂಸ್ಕೃತಿಕ ಸ್ವರೂಪವನ್ನು ಕಾಣಬಹುದಾಗಿದೆ.

ನಂಬಿಕೆಗಳನ್ನು ನಿತ್ಯ ಜೀವನದಲ್ಲಿ ಹಾಗೂ ಹರಕೆಗಳನ್ನು ವಿಶಿಷ್ಟ ಸಂದರ್ಭಗಳಲ್ಲಿ ಕಾಣುತ್ತೇವೆ. ಆದರೆ ಎರಡರ ಹಿಂದೆಯೂ ಭಾವನೆಗಳು ನೆಲೆಗೊಂಡಿರುತ್ತವೆ ಎಂಬುದನ್ನು ಕಡೆಗಣಿಸುವಂತಿಲ್ಲ. ಪ್ರಾದೇಶಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಇದರ ಸ್ಪಷ್ಟತೆಯನ್ನು ಕಂಡುಕೊಳ್ಳಬಹುದು. ನಂಬಿಕೆಗಳು ವ್ಯಕ್ತಿ ಜೀವನದಲ್ಲಿ ಆಳವಾಗಿ ಬೇರು ಬಿಟ್ಟಿರುತ್ತದೆ. ಆ ಕಾರಣವಾಗಿಯೇ ಸಾಮಾಜಿಕ ಸಹಕಾರ ಹಾಗೂ ಧಾರ್ಮಿಕ ವಿಚಾರಗಳು ವಿಕಾಸ ಹೊಂದುತ್ತದೆ. ಮಾನವನಲ್ಲಿ ನಂಬಿಕೆಗಳು ನಿತ್ಯ ಜೀವನ ಹಾಗೂ ವಿಶಿಷ್ಟ ಸಂದರ್ಭಕ್ಕೆ ಸಂಬಂಧಿಸಿದಂತೆ ಬೇರೆ ಬೇರೆಯಾಗಿರುತ್ತವೆ. ಅದು ನಂಬಿಕೆಯ ಸ್ವರೂಪವನ್ನು ಅವಲಂಬಿಸಿರುತ್ತದೆ.

ಸಾಮಾನ್ಯವಾಗಿ ಮನುಷ್ಯನು ಭವಿಷ್ಯದಲ್ಲಿ ಅಪಾರ ನಂಬಿಕೆ–ವಿಶ್ವಾಸಗಳನ್ನು ಇಟ್ಟುಕೊಂಡಿರುತ್ತಾನೆ. ಭೀಮರಾಯನು ಅಂಬಾಬಾಯಿಯನ್ನು ಕೈಹಿಡಿದ ಮೇಲೆ ಶ್ರೀಮಂತಿಕೆ ಹೆಚ್ಚುತ್ತ ಬರಲು ತನ್ನ ಹೆಂಡತಿಯ ಜಾತಕದಲ್ಲಿ 'ಗಜಕೇಸರಿ ಯೋಗ'ವೇ ಅದಕ್ಕೆ ಕಾರಣವೆಂದು ನಂಬಿದ್ದನು ಎಂದು 'ಇಂದಿರಾಬಾಯಿ'ಯಲ್ಲಿ

ಚಿತ್ರಣಗೊಂಡರೆ (೧೯೮೫:೨೧), 'ಮಾರಮಣಯರು' ಜೋಯಿಸರ ವಾಕ್ಕಿನಾಗೆ ಅಮೃತಾವಿರಾದು ಎಂದು ನಂಬಿದ್ದನ್ನು 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ಚಿತ್ರಿತವಾಗಿರುವುದನ್ನು(೧೯೮೬:೨) ಕಾಣುತ್ತೇವೆ.

ಇಂದಿರಾಬಾಯಿ ಕಾದಂಬರಿಯಲ್ಲಿ ಕೆಲವು ನಂಬಿಕೆಗಳು ಕಂಡುಬರುತ್ತವೆ. ಗಜ ಕೇಸರಿಯೋಗವಿದ್ದವರು ಯಶಸ್ಸು ಸಾಧ್ಯವೆಂಬ ನಂಬಿಕೆ ಒತ್ತಾಯ ಪೂರಕವಾಗಿ ಪ್ರಯೋಗಿಸಿದಂತೆ ಇದೆ. ಸಾಮಾನ್ಯವಾಗಿ ದೇವರ ಮನೆಯ ದೀವಿಗೆ ಒಳ್ಳೆಣ್ಣೆಯಿಂದ ಬೆಳಗಿದರೆ ಒಳ್ಳೆಯದೆಂಬ ಅಭಿಪ್ರಾಯ, ನಂಬಿಕೆ ಸಾಮಾನ್ಯ. ಅದಕ್ಕೆ ಸೀಮೆ ಎಣ್ಣೆ ಹಾಕಿ ಉರಿಸಿದರೆ ದೇವರ ಸಾನಿಧ್ಯ ನಿಂತೆ ಹೋಗುವದೆಂಬ ನಂಬಿಕೆಯು ಬೇರು ಮಟ್ಟದಲ್ಲಿ ಅಲುಗಾಡಿಸಿದಂತೆ ಕಾಣುವುದು. ಮತ್ತೊಂದು ಸಂದರ್ಭದಲ್ಲಿ ಹುರುಳಿಯ ತಾಳಿದವನ್ನು ತಿನ್ನುವುದು, ಬರಿಬಾಯಿಲೆ ಅಕ್ಕಿ ಮುಕ್ಕುವುದು ಗರ್ಭಧಾರಣೆಯ ಸಂಕೇತವೆಂಬ ನಂಬಿಕೆ ಮನುಷ್ಯ ಜೀವನದಲ್ಲಿ ಮುಂದುವರೆಯಲು ತವಕಿಸಿದ ಸಂತಾನ ಸಂಕಲ್ಪಿಸಿದ ಸಾಮಾಜಿಕವಾದ ಸಂಗತಿಯನ್ನು ಗುರುತು ಮಾಡಲು ಗುಲ್ವಾಡಿ ವೆಂಕಟರಾಯರು ಪ್ರಯತ್ನಿಸಿದಂತಿದೆ.

ಜನನ ತಾಳಿದ ಮಕ್ಕಳ ಕುರಿತಾದ ಸುಳ್ಳು ಮೌಲ್ಯ ಇಲ್ಲಿ ಕಾಣುವುದು. 'ಗಂಡು ಹೆತ್ತರೆ ಹೆಣ್ಣು, ಹೆಣ್ಣು ಹೆತ್ತರೆ ಗಂಡು' ಎಂದು ಹೇಳುವ ಒಂದು ನಂಬಿಕೆ ಕೆಲ ಕ್ಷಣ ತಲ್ಲಣ ಸೃಷ್ಟಿಸಿದಂತೆ ಕಾಣುವುದು. ಮದ್ದು(ಔಷಧಿ) ವಿಚಾರ ರೋಗಿಯ ಪರಿವರ್ತನೆಯಾಗಿಸುವ ಹಂಬಲ ಇಲ್ಲಿ ಕಾಣುವುದು. ಒಂದು ವೇಳೆ ಹಾಗಾಗದಿದ್ದರೆ ರೋಗ ಹೆಚ್ಚು ಇರುವದೆಂಬ ಪ್ರಬಲ ನಂಬಿಕೆ ಕಾಣುವುದಾಗಿದೆ. 'ಕುಜರಾಹುಗಳ ಸಂಧಿಗೆ ಸುವರ್ಣದ ಒಂದು ಸವತ್ಸ ಗೋದಾನ ನೀಡುವ ನಂಬಿಕೆ' ಈಗಲೂ ಸಮಾಜದಲ್ಲಿ ಬೇರು ಬಿಟ್ಟಿದೆ. ನಂಬಿಕೆಯನ್ನುವುದು ಸರ್ವಕಾಲಿಕವಾದದ್ದು. ಇದರಲ್ಲಿ ಸಾಮಾಜಿಕ ಸಂಘರ್ಷವನ್ನು ಕಾಣುತ್ತೇವೆ.

'ಇಂದಿರಾ' ಕಾದಂಬರಿಯ ನಂಬಿಕೆಗಳು ಮತ್ತೊಂದು ರೀತಿಯವು. 'ಮದುವೆಯಾಗದ ಗಂಡು ಕಾಶಿಗೆ ಹೋಗಬೇಕೆಂಬ' ನಂಬಿಕೆ ಸಮಕಾಲೀನವಾದದ್ದು 'ಕಾಶಿಗೆ ಹೋದರೂ ಬೀಸುವುದು ತಪ್ಪಲಿಲ್ಲವೆಂಬ' ಮತ್ತೊಂದು ನಾಣ್ನುಡಿ ನೆನಪಿಸುವುದು. ಮದುವೆಯಾಗಲು ಆದ ವಿಳಂಬದ ಹಿಂದಿನ ಸಾಮಾಜಿಕ ಆರ್ಥಿಕ ತೊಂದರೆಯ ಬದಲಾಗಿ ಕಾಶಿಗೆ ಮುಖ ಮಾಡಿಸಿದ್ದು ವಿಪರ್ಯಾಸವೇ ಸರಿ ಎಂಬ ಸಂಗತಿ ಗಮನಿಸಬಹುದು. 'ವಿಲಾಯತಿಗೆ ಹೋದವರೆಲ್ಲ ಜಾತಿಗೆಡುವರು' ಎಂಬ ನಂಬಿಕೆ ಬಾಲಿಶತನದ್ದು. ಈ ನಂಬಿಕೆ ಆಧುನಿಕವಾಗಿ ಗಮನಿಸಲಾಗಿ ವಿದೇಶದಲ್ಲಿ ಅದರಲ್ಲೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಾತಿ ವ್ಯವಸ್ಥೆ ಇಲ್ಲಿ ಸ್ತ್ರೀ ಪುರುಷ ಜಾತಿ ಎಂಬ ಸಂಗತಿ ಅರಿಯದೆ ಅದನ್ನು ಭಾರತೀಯ ಪರಂಪರೆಯ ಹಿನ್ನೆಲೆ, ಜೀವನ ಶೈಲಿಗೆ ಹೋಲಿಸಿದ ರೀತಿ ಇಲ್ಲಿ ಕಾಣುವುದು.

'ತ್ರಿವೇಣಿ ಸಂಗಮ ಸ್ನಾನದಿಂದ ಪುಣ್ಯಬರುವುದು', ಈ ಮೌಲ್ಯ ಇಂದು ಹುಸಿಯಾಗಿದೆ. ಇಂದು ಕಲುಷಿತವಾದ ಅಲ್ಲಿ ಸ್ನಾನ ಮಾಡಿದರೆ ಹಲವಾರು ರೋಗಗಳು ಬರುವವು ಎಂಬಷ್ಟರ ಮಟ್ಟಿಗೆ ನಂಬಿಕೆ ತನ್ನ ಮೌಲ್ಯ ಕಳೆದುಕೊಂಡಿದೆ. ಮತ್ತೊಂದು ನಂಬಿಕೆ 'ಸತ್ಯನಾರಾಯಣ ವ್ರತದಿಂದ ಕಷ್ಟ ದೂರ'. ಈ ಮಾತು ಬಡತನದಲ್ಲಿ ಬೆಂದ ತಕ್ಕ ಕುಟುಂಬಗಳು ದುಂದು ವೆಚ್ಚದ ಪರಿಣಾಮ ಮತ್ತಷ್ಟು ಕಷ್ಟಕ್ಕೆ ಸಿಲುಕಿದಂತೆ ಕಾಣುವವು. ಈ ನಂಬಿಕೆ ಅಂದಿನ ಕಾಲದ ಸಾರಸ್ವತರ ಬಹುತೇಕ ನಂಬಿಕೆಗಳು ಕಾದಂಬರಿಯ ನಿಷ್ಕರ್ಷಗೆ ಗುರಿಯಾಗಿವೆ. ಈ ಜಗತ್ತಿನಲ್ಲಿ ಒಂದು ಗಂಡಿಗೆ ಒಂದು ಹೆಣ್ಣು ಎಂಬ ನಿಯಮವಿದೆ. ಇದನ್ನೆ ನಂಬಿಕೆಯ ಮೌಲ್ಯವಾಗಿಸಿ ಕಾದಂಬರಿಕಾರರು 'ಕಪಿಲಾಷಷ್ಟಿಯ ಯೋಗ' 'ಸ್ತ್ರೀಗೆ ತಕ್ಕ ಪುರುಷ, ಪುರುಷನಿಗೆ ತಕ್ಕ ಸ್ತ್ರೀ ದೊರೆಯುವಳು' ಎಂಬ ಸನಾತನ ಕಾಲದಿಂದಲೂ ಮೂಡಿ ಬಂದ ನಂಬಿಕೆ ಪ್ರತಿಷ್ಠಾಪಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ವಿದ್ಯೆ ಮತ್ತು ಸಂಪತ್ತು ಮನುಷ್ಯ ಬಯಸುವ ಕೆಲವೇ ಸಂಗತಿಗಳಲ್ಲಿ ಮುಖ್ಯವಾದವು. ವಿದ್ಯೆಯನ್ನು ಪ್ರೋತ್ಸಾಹಿಸಲು, ಲಕ್ಷ್ಮೀಯ ಆಸೆ ತೋರಿಸಿದಂತೆ ಈ ಮೌಲ್ಯ ಬಿತ್ತರಗೊಂಡಿದೆ. ಅದು 'ಸರಸ್ವತಿ ಒಲಿಸಿಕೊಂಡರೆ ಲಕ್ಷ್ಮೀಯು ಒಲಿಯುವಳು' ಎಂದು ಹೇಳಿದ್ದರ ತಾತ್ಪರ್ಯ ಅದೆ ಆಗಿದೆ.

ಸಾಕು ಪ್ರಾಣಿ ಬೆಕ್ಕು ಮನೆ ಬಿಟ್ಟು ಹೋಗುವದೆಲ್ಲಿ. ಇಂತಹ ಸಮಯದಲ್ಲಿ 'ಬೆಳಗ್ಗೆ ಎದ್ದು ಬೆಕ್ಕಿನ ಮುಖ ನೋಡಬಾರದು' ಎಂದರೆ ಹೇಗೆ ? ಅಡ್ಡ ಬರಬಾರದೆಂದರೆ ಹೇಗೆ ? ಸಾಕು ಪ್ರಾಣಿಗಳಲ್ಲಿ ಬೆಕ್ಕು ಬಹಳ ಸೌಮ್ಯ ಪ್ರಾಣಿಯಾಗಿದ್ದರೂ ಗೊಡ್ಡು ಮೌಲ್ಯದಿಂದ ಅದೊಂದು ನಂಬಿಕೆಯಾಗಿದ್ದು ವಿಪರ್ಯಾಸವೇ ಸರಿ. ಮತ್ತೊಂದು ನಂಬಿಕೆ ಇದು ವಿಚಿತ್ರವಾದರೂ ಸತ್ಯವಾದದ್ದು, 'ಮಕ್ಕಳಾಗದಿದ್ದರೆ ಕಠಿಣ ಹೃದಯವು ಕಾರಣ.' ಇದಕ್ಕೆ ವೈಜ್ಞಾನಿಕವಾಗಿ ಪರಿಹಾರ ಕಂಡುಕೊಂಡು ಸ್ತ್ರೀ ಪುರುಷರ ಹಾರ್ಮೋನುಗಳ ವ್ಯತ್ಯಾಸ ಮತ್ತು ಅದಕ್ಕೆ ವಿಜ್ಞಾನದ ಪರಿಹಾರ ದೊರಕಿದ ಮೇಲೆ ಈ ನಂಬಿಕೆ ಇಂದು ಬಿದ್ದು ಹೋಗಿದೆ. ಎಷ್ಟೋ ನಂಬಿಕೆ ಕಂದಾಚಾರಗಳು ಸಾಮಾಜಿಕವಾಗಿ ಹಲವಾರು ಸಂಘರ್ಷಮಯ ಬದುಕು ಸೇರಿಕೊಂಡು ಜನರ ಮನಸ್ಸು ಸೇರಿದ್ದೆ ಒಂದು ದುರಂತದ ಸಂಗತಿ. ಇಲ್ಲಿರುವ ನಂಬಿಕೆಗಳು ಕರಾವಳಿ ಕರ್ನಾಟಕ ಹಾಗೂ ಮರಾಠಿ ಪ್ರಭಾವ ಇರುವ ಉತ್ತರ ಕರ್ನಾಟಕದ ನಂಬಿಕೆಗಳು ಒಂದಕ್ಕೊಂದು ರೀತಿಯಲ್ಲಿ ಪರ್ಯಾಯ ರೀತಿಯಾಗಿ ಪರ್ಯಾಲೋಚಿಸಲಾಗಿದೆ.

ಕೆಲವು ನಂಬಿಕೆಗಳು ಇಂತಿವೆ (ಇಂದಿರಾಬಾಯಿ, ಇಂದಿರಾ):

೧) ಗಜಕೇಸರಿ ಯೋಗವಿದ್ದವರು ಯಶಸ್ಸು ಬದುಕು ಸಾಗಿಸುವರು. ೨

೨) ಮನೆಯಲ್ಲಿ ದೇವರ ಕೋಣೆಯಲ್ಲಿ, ದೀಪಗಳಿಗೆ ಸೀಮೆ ಎಣ್ಣೆ ಹಾಕಿ ಉರಿಸಿದರೆ ದೇವರ ಸಾನಿಧ್ಯ ನಿಂತು ಹೋಗುವುದು. ೨೧

೩) ಹುರುಳಿಯ ತಾಳಿದವನ್ನು ತಿನ್ನುವದು, ಬರಿಬಾಯಿಲೆ ಅಕ್ಕಿ ತಿನ್ನುವದು ಗರ್ಭದಾರಣೆಯ ಸಂಕೇತ. ೩೪

೪) ಗಂಡು ಹೆತ್ತರೆ ಹೆಣ್ಣು ಹೆಣ್ಣು ಹೆತ್ತರೆ ಗಂಡೆಂದು ಸೂಲಗಿತ್ತಿಯರು ಹೇಳಬೇಕು. ೬೬

೫) ಮದ್ದು ಕೊಟ್ಟಾಕ್ಷಣ ಎದ್ದು ನಿಲ್ಲಬೇಕು. ೧೨೯

೬) ಕುಜರಾಹುಗಳ ಸಂಧಿಗೆ ಸುವರ್ಣದ ಒಂದು ಸವತ್ಸ ಗೋಧಾನ ಪುರೋಹಿತರಿಗೆ ಕೊಡಬೇಕು. ೭೭

೭) ಮದುವೆಯಾಗದ ಗಂಡು ಕಾಶಿಗೆ ಹೋಗಬೇಕು. ೭೫

೮) ಮಿಲಾಯತಿಗೆ ಹೋದವರೆಲ್ಲ ಜಾತಿಗೆಡುವರು. ೯೩

೯) ತ್ರಿವೇಣಿ ಸಂಗಮ ಸ್ನಾನದಿಂದ ಪುಣ್ಯ ಬರುವದು. ೨೦೮

೧೦) 'ಕಪಿಲಾಷಷ್ಟಿಯ ಯೋಗ' ಸ್ತ್ರೀಗೆ ತಕ್ಕ ಪುರುಷ, ಪುರುಷನಿಗೆ ತಕ್ಕ ಸ್ತ್ರೀ ದೊರಕಲು ಮಾಡುವ ಯೋಗ. ೨೨೯

೧೧) ಸತ್ಯನಾರಾಯಣ ವ್ರತ ಆಚರಣೆಯಿಂದ ಕಷ್ಟ ದೂರ. ೩೦೬

೧೨) ಸರಸ್ವತಿ ಒಲಿಸಿಕೊಂಡರೆ ಲಕ್ಷ್ಮೀಯು ಒಲಿವಳು. ೧೪೪

೧೩) ಬೆಳಗ್ಗೆ ಎದ್ದು ಬೆಕ್ಕಿನ ಮುಖ ನೋಡಬಾರದು. ೨೯

೧೪) ಮಕ್ಕಳು ಆಗದಿರುವುದಕ್ಕೆ ಕಠಿಣ ಹೃದಯವು ಕಾರಣ. ೫೨[೪]

ವಾಗ್ದೇವಿ ಹಾಗೂ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಗಳಲ್ಲಿ ದಕ್ಷಿಣ ಕನ್ನಡದ ಪ್ರಾದೇಶಿಕತೆಯ ನೆಲೆಯ ಹಲವಾರು ನಂಬಿಕೆಗಳು ತೆರೆದುಕೊಂಡಿವೆ. ಸಾಮಾಜಿಕ ವಿಚಾರ ಸಂಗತಿಗಳು ಚರ್ಚಿತವಾಗಿರುವುದರಿಂದ ಇಲ್ಲಿ ಕೆಲವು ನಂಬಿಕೆಗಳನ್ನು ಒತ್ತಾಯಪೂರಕವಾಗಿ ಹೇರಿದಂತಿದೆ. ಈ ನಂಬಿಕೆಗಳು ಸ್ವಾಮಿನಿಷ್ಠೆಯನ್ನು ಒಳಗೊಂಡಿದ್ದು ಕಾಣುವುದು. ಅಂತೆಯೇ ಉದಾಹರಣೆಗೆ 'ಉಪ್ಪನ್ನು ಕೊಟ್ಟು ಸಾಕಿದ ಗುರುವಿನ ಆಜ್ಞೆಯನ್ನು ಮೀರುವುದು ಪಾಪಕೃತ' ಇಲ್ಲಿ ಅನ್ನದ ಋಣದ ವಾಸನೆಯನ್ನು ಹೇರಲಾಗಿದ್ದು ಕಾಣುವುದು. ನಗರ ಮತ್ತು ಗ್ರಾಮೀಣ ಮಹಿಳೆಯರ ನಡುವಿನ ಅಂತರವನ್ನು ಹೇಳುವಲ್ಲಿ ಗ್ರಾಮೀಣ ಸ್ತ್ರೀಯರು, ನಗರ ಸ್ತ್ರೀಯರನ್ನು ಹೆಚ್ಚೆಂದು. ಕೀಳೆಂದು ಬಿಂಬಿಸಲು ಹೋಗಿ ಸೋತಂತೆ ಕಾಣುವುದು. ಗ್ರಾಮೀಣ ಸ್ತ್ರೀಯನ್ನು ಮಂದಮತಿ ಎಂದು ನಗರ ಸ್ತ್ರೀ ಚಾಲಾಕಿ ಎಂದು ಗುರುತಿಸುವಲ್ಲಿ 'ಹಳ್ಳಿಯ ಸ್ತ್ರೀಯರಿಗಿಂತ ಪಟ್ಟಣ ಸ್ತ್ರೀಯರು ಚಾಲಾಕಿಯರು' ಎಂಬ ಒತ್ತಾಸೆಯ ನಂಬಿಕೆ ಇಲ್ಲಿ ಹೇರಿದ್ದು

ಕಾಣುವುದು. ಇದೇ ರೀತಿಯ ನಂಜಿಕೆ 'ರೂಪ ಇದ್ದಕಡೆ ದೋಷವಿಲ್ಲದೆ ಇರದು' ಎಂಬ ನಂಜಿಕೆಯು ಸಾಮಾಜಿಕ ಸೌಂದರ್ಯದ ಕುರೂಪುತನವೇ ಸಾಕ್ಷಿಯಾದ ಸಂಗತಿ ಕಾಣುವುದು. ಸುಂದರತೆ, ಚೆಲುವಿಕೆ ಎಂಬುದೇ ಕುರೂಪಿಯರು ಎಷ್ಟು ಹೀನ ಎಂಬ ಸಂಗತಿ ಅವಲೋಕಿಸಿದರೆ ಇದು ಒಂದು ರೀತಿಯ ಮನೋವಿಕಾರದ ಒತ್ತಡ, ಒತ್ತಾಯದ ಅಭಿಲಾಷೆ ಇಲ್ಲಿ ಮೂಡಿಬಂದಿದೆ.

'ದಾನ' ಎಂಬ ಕಲ್ಪನೆಯೇ ಮನುಷ್ಯ ತನ್ನ ಬೇಕು ಬೇಡಿಕೆಗಳಿಗೆ ಅನುಗುಣವಾಗಿ ರೂಪ ಪಡೆಯುತ್ತವೆ. ದಾನಕ್ಕೆ ಮಹತ್ವ ಸ್ಥಾನ ಕಲ್ಪಿಸಿ ನಂಬುವಂತೆ ಮಾಡಿ ನಂಬಿಸಿ ಹೇರಿದೆ. ಹೇರಿಕೆಯಿಂದ ಲಾಭದ ಕಲ್ಪನೆ ಬೆನ್ನು ಹತ್ತಿಸಿ ಮೋಸದ ಸುಳಿಗೆ ಸಿಲುಕಿಸುವ ಪ್ರಯತ್ನ ಮಾಡಲಾಗುವುದು. ಉದಾಹರಣೆ, 'ವಿನಾಯಕ ಚೌತಿಯೆಂದು ಕಡುಬಿನ ದಾನ ಶ್ರೇಷ್ಠ' ಎಂಬ ಸಂಗತಿ. ದೈವತ್ವದ ಕಲ್ಪನೆಯ ಬೆನ್ನಿಗೆ ನಿಂತು ನಂಬಿದ ನಂಬಿಕೆಯನ್ನು ಕಾಣುತ್ತೇವೆ.

ದೇವರು, ಪೂಜೆ, ಮಂತ್ರ ಎಂಬ ನಂಬಿಕೆಗಳು ವಾಗ್ದೇವಿ ಕಾದಂಬರಿಯಲ್ಲಿ ಬಂದಿವೆ. 'ಬೇವಿನ ಸೊಪ್ಪನ್ನು ತೆಗೆದುಕೊಂಡು ಮಂತ್ರ ಹಾಕಿ ಮೂರು ಸಾರಿ ನಿವಾಳಿಸಿ ತೆಗೆದರೆ ರೋಗ ಹೋಗುವುದು'. ಕಾಯಿಲೆಗೆ ದೇವರು ದಿಂಡಿರು ಎಂದು ನಂಬುವ ಜನರಿಗೆ ಏನೂ ನಂಬದ ಹಾಗೆ ಮನೋಸ್ಥಿತಿಯನ್ನು ಕದಡಿದ್ದು ಕಾಣದ ಕೈಗಳು. ಇನ್ನೊಂದೆಡೆ 'ರಂಗನೆ ಪೆರಮಾಳು ಗೊಂಗಲೇ ಪ್ರಸಾದಂ ಕಂಬವೆ ತಣ್ಣೆ' ಈ ಮಂತ್ರ ಹೇಳಿದರೆ ಮುಸರೆ ದೋಷವೆಲ್ಲಾ ಹೋಯಿತು ಎಂಬ ಶಾಸ್ತ್ರವಿದ್ದುದು ನಂಬಿಕೆಯ ಪರಾಕಾಷ್ಟೆ. ಕೆಲವು ಸಾಮಾನ್ಯ ಕಾಯಿಲೆಗೆ ಸಾಮಾನ್ಯವಾದ ನಂಜಿಕೆಗಳು ರೂಢಿಯಲ್ಲಿವೆ. ಅದಕ್ಕೆ 'ಪಿತ್ತವಾದರೆ ಬೆಲ್ಲ ಹುಣಸೆ ಗೊಜ್ಜು ಕುಡಿಯುವದು. 'ಪಿತ್ತಕ್ಕೆ ಲಿಂಬು ಹಣ್ಣು ಉಪ್ಪಿಗೆ ಸೇರಿಸಿ ಕುಡಿದು ಕಡಿಮೆ ಮಾಡಿಕೊಳ್ಳು ಸಾಮಾನ್ಯವಾಗಿ ಇರುವ ನಂಬಿಕೆ. ಇನ್ನು ಕೆಲವು ನಂಬಿಕೆಗಳ ಬಾಂಧವ್ಯ ಬೆಸೆಯುವ ಪ್ರಯತ್ನ ಕಾಣುವುದು. 'ಅಶ್ವತ್ಥಮರ ಪ್ರದಕ್ಷಿಣೆ ಹಾಕಿದರೆ ದಂಪತಿಗಳ ಬಾಂಧವ್ಯ ವೃದ್ಧಿ'. ಹೀಗೆ 'ಹಿಂದೆ ಆಡಿಕೊಂಡರೆ ಬಾಯಲ್ಲಿ ಹುಳು ಬೀಳುವವು' ಎಂಬ ನಂಬಿಕೆಯು ಒಬ್ಬರ ಬಗ್ಗೆ ಮತ್ತೊಬ್ಬರು ಹಿಂದೆ ಮಾತಾಡಿಕೊಳ್ಳದಿರಲೆಂದು ಹೇರಲಾದ ನಂಜಿಕೆ. ಅಂತೆಯೇ 'ಅರಳಿ ಮರ ಸುತ್ತು ಹಾಕಿದರೆ ಗುರುಬಲ ಬರುವುದು', ದೋಷ ಪರಿಹಾರವಾಗುವ ನಂಜಿಕೆಯನ್ನು ಸೂಚಿಸಿದಂತೆ ಕಂಡರೂ ಇಂತಹ ಹಲವಾರು ನಂಬಿಕೆಗಳು ವಾಗ್ದೇವಿ ಕಾದಂಬರಿಯಲ್ಲಿ ಕಾಣುವುದು.

ಮೈಸೂರು ಭಾಗದಲ್ಲಿ ಜಾರಿಯಲ್ಲಿದ್ದ ನಂಜಿಕೆ ಆಚರಣೆಗಳೆಂದು ಹೇಳುವದು ತಪ್ಪು ಎನಿಸುವದು. ಆ ಭಾಗಕಷ್ಟೇ ಸೀಮಿತ ಎನಿಸದು. ಒಂದಿಷ್ಟು ಹೆಚ್ಚು ಇಲ್ಲಿ ಬಳಕೆಗೆ ಇರುವಂತೆ ಕಾಣುವುದು. ಅಂತಹ ನಂಬಿಕೆಗಳಲ್ಲಿ ಒಂದು ಹೀಗಿದೆ. 'ಮರಾಠಿ ಜಾತಿಯಲ್ಲಿ ಮೈನೆರೆಯುವದಕ್ಕೆ ಮುಂಚೆಯೇ ಮದುವೆಯಾಗಬೇಕು' ಇದೊಂದು ಆ ಕಾಲದ ಸಾಮಾಜಿಕ ಅನಿಷ್ಟ ನಂಬಿಕೆಯೇ ಸರಿ. ಮತ್ತೊಂದು

ವಿಚಿತ್ರವಾದ ನಂಬಿಕೆ 'ಮಠದ ಕಡೆಯಿಂದ ಕರಿ ಕಾಗೆ ಬಂತೆಂದು ಯಾರಾದರೂ ಹೇಳಿದರೆ ಒಂದು ನಮಸ್ಕಾರ ಹಾಕಬೇಕು'. ಇಂದೊಂದು ವಿಚಿತ್ರ ರೀತಿಯ ನಂಜಿಕೆ. ಆಹಾರಕ್ಕಾಗಿ ಹಾರುವ ಕಾಗೆಯಿಂದ ಅವಘಡ ಸಂಭವಿಸುವದೆಂದು ನಂಬುವುದು ಮೂರ್ಖತನದ ಪರಮಾವಧಿ. ಕಾಗೆಗಳನ್ನು ಸಾಕಿ ಬದುಕು ಸಾಗಿಸುವ ಈ ಕಾಲದಲ್ಲಿ ನಂಬದ ಸಂಗತಿ. ನಂಬುವವರು ಮಹಾಮೂರ್ಖರೆ ಸರಿ. ಮತ್ತೊಂದು ರೀತಿಯ ನಂಬಿಕೆ ಇಂತಿದೆ. 'ಎಡಗಣ್ಣು ಹಾರಿದರೆ ಶುಭ ಬಲಗಣ್ಣು ಹಾರಿದರೆ ಅಶುಭ' ಎಂಬದು ಸಾಮಾನ್ಯ ಸಂಗತಿ. ಇದು ನರ ದೌರ್ಬಲ್ಯದಿಂದ ಆಗುವ ಕ್ರಿಯೇ ಮತ್ತೇನೂ ಅಲ್ಲದೆ ಅಲ್ಲ. ಇದಕ್ಕೆ ವಿಭಿನ್ನವಾದ ಪ್ರತಿಕ್ರಿಯೆ ಮೂಡಿಬರುವವು.

ಮಠದ ವಿಚಾರದ ಒಂದೆರಡು ನಂಬಿಕೆಗಳು ವಿಚಿತ್ರ ಸ್ವರೂಪದ್ದಿವೆ. 'ಕಾಣಿಕೆ ಸ್ವೀಕರಿಸಿದರೆ ಮಂತ್ರ ಶಕ್ತಿಯೆಲ್ಲ ಮಾಯವಾಗುವುದು', 'ಮಂತ್ರಬಲ್ಲ ವ್ಯಕ್ತಿಗೆ ಕಾಣಿಕೆ ನೀಡಿದ ವ್ಯಕ್ತಿಯೂ ಪಾಪಕ್ಕೆ ಗುರಿಯಾಗುವನು'. ಸ್ವಾಮಿ, ಭಕ್ತರ ಜಾಗೃತಿಗಾಗಿ ಹುಟ್ಟಿದ ನಂಬಿಕೆಗಳು ಇರಬಹುದು. ಇವು ಕೆಲವೊಂದು ಸಾರಿ ಈ ನಂಬಿಕೆಗಳು ಜನರ ಆಕರ್ಷಣೆಗಳನ್ನು ಹೆಚ್ಚಿಸಲು ಸ್ವಾಮಿಗಳು ಜನರ ಸಮೀಪಕ್ಕೆ ಬರಲು ಮಾಡಿಕೊಂಡ ತಂತ್ರಗಾರಿಕೆಯ ನಂಬಿಕೆಗಳಿರಬಹುದು.

೧) ಉಪ್ಪನ್ನು ಕೊಟ್ಟು ಸಾಕಿದ ಗುರುವಿನ ಆಜ್ಞೆಯನ್ನು ಮಿರುವದು ಪಾಪಕೃತ. ೮

೨) ಹಳ್ಳಿಯ ಸ್ತ್ರೀಯರಿಗಿಂತ ಪಟ್ಟಣ ಸ್ತ್ರೀಯರು ಚಾಲಾಕಿಯರು. ೬೮

೩) ಹಿಂದೆ ಆಡಿಕೊಂಡರೆ ಬಾಯಲ್ಲಿ ಹುಳು ಬಿಳುವವು. ೮೦

೪) ವಿನಾಯಕ ಚೌತಿಯಂದು ಕಡುಬಿನ ದಾನ ಶ್ರೇಷ್ಠ. ೮೩

೫) ಬೇವಿನ ಸೊಪ್ಪನ್ನು ತೆಗೆದುಕೊಂಡು ಮಂತ್ರ ಹಾಕಿ ಮೂರು ಸಾರಿ ನೀವಾಳಿಸಿ ತೆಗೆದರೆ ರೋಗ ಹೋಗುವದು. ೯೫

೬) ರೂಪು ಇದ್ದಕಡೆ ದೋಷವಿಲ್ಲದೆ ಇರುವದೆ ಇಲ್ಲ. ೧೧೪

೭) ಅಶ್ವತ್ಥ ಮರ ಪ್ರದಕ್ಷಿಣೆ ಹಾಕಿದರೆ ದಂಪತಿಗಳ ಬಾಂಧವ್ಯ ವೃದ್ಧಿ. ೧೧೯

೮) ಅರಳಿ ಮರ ಸುತ್ತು ಹಾಕಿದರೆ ಗುರುಬಲ ಬರುವುದು, ದೋಷ ಪರಿಹಾರ. ೧೧೯

೯) ರಾವು ಬಡಿದರೆ ಕೆಂಪನೀರು ತೆಗೆದು ಹಾಕುವದು. ೧೨೦

೧೦) ಪಿತ್ತವಾದರೆ ಬೆಲ್ಲ ಹುಣಸೆಗೊಜ್ಜು ಕೊಡುವುದು. ೧೨೬

೧೧) "ರಂಗನೆ ಪೆರಮಾಳು, ಗೊಂಗಲೇ ಪ್ರಸಾದಂ ಕಂಬವೆ ತಣ್ಣಿ" ಈ ಮಂತ್ರ ಹೇಳಿದರೆ ಮುಸರೆ ದೋಷವೆಲ್ಲಾ ಹೋಯಿತು ಎಂಬ ಶಾಸ್ತ್ರವಿದೆ. ೧೩೨

೧೨) ಹೊದ್ದರೆ ಮಡಿ ಉಟ್ಟರೆ ಮೈಲಿಗೆ. ೧೩೬

೧೩) ಆದಿತ್ಯವಾರ ಅಮವಾಸ್ಯೆಯ ಚಿತ್ತ ನಕ್ಷತ್ರದಲ್ಲಿ ಹುಟ್ಟಿದರೆ ತಿಥಿ, ನಕ್ಷತ್ರ, ವಾರವೆಲ್ಲವು ಕೆಟ್ಟವುವಂತೆ. ೧೪೮

೧೪) ಮರಾಠಿ ಜಾತಿಯಲ್ಲಿ ಮೈನೆರೆಯುವುದಕ್ಕೆ ಮುಂಚೆಯೇ ಮದುವೆಯಾಗಬೇಕು. ೧೫೦

೧೫) ಎಡಕಣ್ಣು ಹಾರಿದರೆ ಶುಭ, ಬಲಕಣ್ಣು ಹಾರಿದರೆ ಅಶುಭ ಎಂಬುದು ಸಾಮಾನ್ಯ ಬಳಕೆ. ೧೬೮

೧೬) ಮಠದ ಕಡೆಯಿಂದ ಕರಿಕಾಗೆ ಬಂತೆಂದು ಯಾರಾದರೂ ಹೇಳಿದರೆ ಒಂದು ನಮಸ್ಕಾರ ಹಾಕಬೇಕು. ೨೦

೧೭) ನಿಂದಿಸಿದವರ ನಾಲಗೆಗೆ ಹುಣ್ಣಾಗುವುದು. ೧೪

೧೮) ಶ್ರೇಯಸ್ಸು ಬರಲು ಅನೇಕ ವಿಘ್ನಗಳಿದ್ದದ್ದೆ. ೧೫

೧೯) 'ಸೋಮಾರಿಯು ಕಡಿಮೆ', 'ಕೆಲಸಗಾರನು ಹೆಚ್ಚು', 'ಬಡವನು ಹೀನನು', 'ದೊಡ್ಡವನು ಮಹಾತ್ಮ ಎಂಬ ನಂಬಿಕೆ ಸಮಾಜದಲ್ಲಿ ಚಾಲ್ತಿ ಇರುವುದು. ೨೦

೨೦) ಗಂಡ ತೀರಿದ ಬಳಿಕ ಸ್ತ್ರೀ ಕೇಶಮುಂಡನ ಮಾಡಿಸುವದು. ೧೮

೨೧) 'ಹಾಳು ಮೈಲಿಗೆಯ ಕೂದಲು ತೆಗೆಯದೆ, ಅಡುಗೆ-ಮನೆಯ ಕಾರ್ಯ ಮಾಡುವಂತಿಲ್ಲ". ೨೪

೨೨) 'ಕಾಣಿಕೆಯನ್ನು ಸ್ವೀಕರಿಸಿದರೆ ಮಂತ್ರಶಕ್ತಿಯೆಲ್ಲ ಮಾಯವಾಗುವದು'. ೧೮೪

೨೩) ಮಂತ್ರ ಬಲ್ಲ ವ್ಯಕ್ತಿಗೆ ಕಾಣಿಕೆ ನೀಡದ ವ್ಯಕ್ತಿಯು ಪಾಪಕ್ಕೆ ಗುರಿಯಾಗುವನು. ೧೮೪

೨೪) ಒಳ್ಳೆಯ ನಕ್ಷತ್ರದಲ್ಲಿ ಹೆಣ ಮಣ್ಣು ಮಾಡಬೇಕು. ೧೭೦

ಶೃಂಗಾರ ಚಾತುರ್ಯೋಲ್ಲಾಸಿನಿ ಕಾದಂಬರಿಯ ಕೆಲವು ನಂಬಿಕೆಗಳಲ್ಲಿ ಸಾಮಾಜಿಕ ಶೋಷಣೆ, ಸಂಘರ್ಷದ ಸ್ಥಿತಿಗಳು ಕಂಡುಬರುತ್ತವೆ. ಜಾತಿಯ ನೆಲೆಯಲ್ಲಿ 'ಕೊಲ್ಲುವದು ಕ್ಷತ್ರಿಯಧರ್ಮ' ಜನರನ್ನು (ಕ್ಷತ್ರಿಯ)ರನ್ನು ಹುರಿದುಂಬಿಸಿ ಯುದ್ಧದಲ್ಲಿ ಗೆಲ್ಲುವದಕ್ಕಾಗಿ ಈ ತಂತ್ರ ರಾಜರು ರೂಢಿಸಿಕೊಂಡಿರಬಹುದು. ಹಾಗಾಗಿ ಇದನ್ನು ಯುದ್ಧ ಹೋರಾಟದ ಸಂದರ್ಭಕ್ಕೆ ಮಾತ್ರ ಅನ್ವಯಿಸಬೇಕು. ಈ ಜನರು ಶೂರರು, ಶೌರ್ಯವಂತರು ಆಗಿದ್ದರಿಂದಲೆ ಇವರನ್ನು ಹೀಗೆ ಬಳಸಿಕೊಂಡಿರಬಹುದು. ಮತ್ತೊಂದು ನಂಬಿಕೆ 'ಚಂಡಿಯೂ, ಬ್ರಾಹ್ಮಣನೂ, ರಾಜನೂ, ಯಮನೂ

ಸಮುದ್ರವೂ, ಹೊಟ್ಟೆಯೂ, ಮನೆಯೂ ಎಷ್ಟಾದಾಗ್ಯೂ ತುಂಬದೆ ಮತ್ತೆ ಮತ್ತೆ ಅಪೇಕ್ಷಿಸುವುದು'. ಈ ಎಲ್ಲಾ ಸಂಗತಿಗಳು ಎಷ್ಟು ಕೊಟ್ಟರು ಬೇಡ ಎನ್ನದ ಸಂಗತಿಗಳೆ ಆಗಿವೆ. ಬೇಕು ಬೇಕು ಎಂಬ ಬಯಕೆಯ ಜೀವಿಗಳೆ ಆಗಿವೆ. ಬೆಂಕಿಗೆ ಯಾವುದು ಈಡಾಗದು, ರಾಜನಿಗೆ, ಮಾನವನಿಗೆ, ಬ್ರಾಹ್ಮಣತ್ವದ ಮನೋಧರ್ಮ, ಸಾಗರದ ವಿಸ್ತಾರವಾದ ಬಯಕೆಗಳೇ ಇಲ್ಲಿ ಬಯಸುವ ಸಂಗತಿ. ಬೇಡಿಕೆಗೆ ಮಿತಿಯೆಂಬುದೆ ಇಲ್ಲ. ಇದಕ್ಕೆ ನಾವು ಸಾಮಾನ್ಯವಾಗಿ ಮೀತಿಮೀರಿದ್ದು ಎಂಬ ಸಂದರ್ಭ ಇಲ್ಲಿ ಪ್ರಸ್ತುತ.

'ಕೆಟ್ಟದ್ದರಿಂದ ಕೆಟ್ಟದ್ದನ್ನು ಬಯಸುವ ವಾಡಿಕೆ'. 'ವಿಪತ್ತು ಸಂಭವಿಸಿದರೆ ಧೈರ್ಯವನ್ನು ಅವಲಂಬಿಸಬೇಕು' ಈ ನಂಬಿಕೆಗಳು ಮನುಷ್ಯ ಸಾಮಾನ್ಯವಾಗಿ ಕೆಟ್ಟ ಕಾರ್ಯದ ಪರಿಣಾಮ ಕೆಟ್ಟದ್ದೆ. ಅದಕ್ಕೆ ಅದನ್ನೆ ಬಯಸುವದು. ಈ ಕಾರ್ಯಕ್ಕೆ ಧೈರ್ಯವನ್ನು ಅವಲಂಬಿಸುವ ಮನೋಧರ್ಮ ಸಾಮಾನ್ಯೀಕರಣದ್ದು. ಸಾಮಾನ್ಯೀಕರಣ ನಂಬುಗೆ ಪೂಜಾ ನಂಬಿಕೆ ಮತ್ತಷ್ಟು ಜನರನ್ನು ಬಂಧನಕ್ಕೆ ಒಳಪಡಿಸಿದೆ. 'ಶುದ್ಧ ಸಪ್ತಮಿ ಶುಕ್ರವಾರ ಸಕಲ ಕಾರ್ಯಕ್ಕೆ ಒಳ್ಳೆಯ ದಿವಸ'. ಒಳ್ಳೆಯದು ಕೆಟ್ಟದ್ದು ಎಂದು ತೀರ್ಮಾನಿಸುವ ಸಂದರ್ಭಗಳೇ ದೋಷಪೂರ್ಣವಾದದ್ದು. ಶುದ್ಧ ಕೆಟ್ಟ ಎಂದು ಸಾಮಾಜಿಕವಾಗಿ ಒಪ್ಪಿಸಲಾಗಿರುವ ಸಂದರ್ಭ ಅಮಾನ್ಯವಾದದು. ಇಂತಹ ಅಮಾನ್ಯಗಳಿಂದ ಒಂದಿಷ್ಟು ಜನರು ಸಮಾಜದ ಮೇಲೆ ಪರಿಣಾಮ ಕೆಟ್ಟ ಒಳ್ಳೆಯದೆಂದು ತಿರ್ಮಾನಿಸಿದ್ದು ಕಾಣುವುದು. ಸಂಕಷ್ಟವೆಂಬುದು ಜಗದ ಜೀವಿಗಳಿಗೆ ಸಂಬಂಧಿಸಿದ್ದು. ಈ ರೀತಿಯ ನಂಬಿಕೆಯೊಂದು ಹೀಗಿದೆ. 'ಈಶ್ವರ ಸಂಕಲ್ಪದಿಂದ ಪ್ರಾಪ್ತವಾದ ಆಪತ್ತಿಗೆ ವ್ಯಸನಪಟ್ಟು ಫಲವೇನು' ಕಷ್ಟಗಳನ್ನು ಸಾದ್ಯವಾದಷ್ಟು ಭಾರತೀಯರಾದ ನಾವು ಈ ಹೆಸರಿಗೆ ಹೇರಿಬಿಟ್ಟಿದ್ದೇವೆ. ಕಷ್ಟ ಬಂದರೆ ದೇವರ ಹೆಸರು ಬಳಸಿಕೊಂಡು ನೆನೆಸಿಕೊಳ್ಳುವ ಮನೋಧರ್ಮ ಸಮಾಜದಲ್ಲಿ ಬಿತ್ತಲಾಗಿದೆ. ಹೀಗೆ ಬಿತ್ತಲಾದ ಬೀಜದ ಮೊಳಕೆ ಮರವಾಗಿ ಹೆಮ್ಮರವಾಗಿದೆ. ಇದು ದೈವ ನಂಬಿಕೆಯ ಹಿನ್ನೆಲೆಯಲ್ಲಿ ಬೆಳೆದುದು.

ಸಾಮಾಜಿಕವಾಗಿ ಸ್ತ್ರೀ ಆಲೋಚನೆಯಲ್ಲೂ ಕೆಲವು ನಂಬಿಕೆಗಳು ವಿಚಿತ್ರವಾದರೂ ಸತ್ಯದ ಒರೆಗಲ್ಲಿಗೆ ಹಚ್ಚುವ ಪ್ರಯತ್ನಗಳು ಇಲ್ಲಿ ಜರುಗಿವೆ. ಅಂತಹ ಒಂದು ವಿಚಿತ್ರವಾದ ಸ್ತ್ರೀ ಕುರಿತು ನಂಬಿಕೆ ಹೀಗೆ ಹೇರಲಾಗಿದೆ. 'ಮಗಳು ಹುಟ್ಟಿದರೆ ಏಳು ಕೆರೆ ನೀರು ಕುಡಿಸುವಳು' ಎಂಬುದು. ಇದು ಸ್ತ್ರೀ ಶೋಷಣೆಯ ಮುಂದುವರೆದ ಭಾಗ. ಸ್ತ್ರೀಯರನ್ನು ಕೀಳಾಗಿ ಕಾಣುವ ಕಾಲಘಟ್ಟದಲ್ಲಿ ಈ ಹೇಳಿಕೆ ಮೂಡಿಬಂದಿದ್ದು ಮತ್ತಷ್ಟು ಅವರ ಶೋಷಣೆಗೆ ಇಂಬು ನೀಡಿದೆ. 'ಗಂಡು ಹುಟ್ಟಿದರೆ ಶ್ರೇಷ್ಠ. ಹೆಣ್ಣು ಹುಟ್ಟಿದರೆ ಕೀಳು' ಎಂಬ ಭಾವನೆಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಜನ್ಮ ಪಡೆದ ಸ್ತ್ರೀಯನ್ನು ಜನ್ಮ ನೀಡಿದ ತಾಯಿಯನ್ನು ಏಕಕಾಲದಲ್ಲೆ ಹೀನ ರೀತಿಯಲ್ಲಿ ಕಂಡ ಸಂಗತಿ. ಈ ಕಾಲದಲ್ಲಿ ಸಾಮಾಜಿಕವಾಗಿ

ಮಹಿಳೆಯ ಸ್ಥಾನ ಮಾನವನ್ನು, ಮೌಲ್ಯವನ್ನು ಗಮನಿಸಲು ಪ್ರಯತ್ನಪಟ್ಟು ಸೋತಂತೆ ಕಾಣುವುದು. ಪರೋಕ್ಷವಾಗಿ ಅಂದು ಸ್ತ್ರೀಯಳ ದುರ್ಭರ ಬದುಕನ್ನು ಇದು ನಿರ್ದೇಶಿಸುತ್ತಿರಬೇಕು.

ಸಂಕಟ ಎದುರಾದ ಸಂದರ್ಭದಲ್ಲಿ ಸಂಕಟವನ್ನು ವೆಂಕಟರಮಣನ ಹೆಸರಿಗೆ ವರ್ಗಾಯಿಸಿದ ಸಂದರ್ಭಗಳೆ ಅಧಿಕ 'ಅನಿಷ್ಟಕ್ಕೆ ಶನೀಶ್ವರನೆ ಕಾರಣ', 'ಅರಳಿ ಮರ ಸುತ್ತು ಹಾಕಿದರೆ ಗುರುಬಲ ಬರುವುದು, ದೋಷ ನಿವಾರಣೆಯಾಗುವುದು'. ಎಂಬ ನಂಬುಗೆಗಳನ್ನು ಹೇರಿದ್ದೆ ದುರಂತ. ನಂಜಿಕೆಗೆ ಮನುಷ್ಯನ ಬೆನ್ನು ಬಿಡದೆ ಒಂದಿಲ್ಲ ಒಂದು ಸಮಯದಲ್ಲಿ ಸೋಲಿಸುವ ಗೆದ್ದಂತೆ ಬೀಗುವ ವಾತಾವರಣವನ್ನು ನಿರ್ಮಾಣ ಮಾಡಿದೆ. ಇವುಗಳಿಗೆ ತದ್ವಿರುದ್ಧವಾಗಿ 'ಸಜ್ಜನರು ಶತ್ರುಗಳನ್ನಾಶ್ರಯಿಸಿದರೆ ಅಸಂಗತ ಸಂಭವಿಸುವುದು'. ಉಲ್ಲಸಿತ ಮನೋಸ್ಥಿತಿಯವರಾದ ಸೃಜನರು ಹೊಸದರ ಬೆನ್ನು ಹತ್ತುವವರು. ಅವರು ಶತ್ರುಗಳನ್ನು ಆಶ್ರಯಿಸಿದರೆ ಅದಃಪತನ ಶತಸಿದ್ಧ. ಆದರೂ ಮನದ ಹಲವಾರು ವ್ಯಾಪಾರಗಳು ಅಂತಹ ಸಂದರ್ಭವನ್ನು ತಂದೊದಗಿಸುವ ಸನ್ನಿವೇಶ ಬರುವುದು. ಅದಕ್ಕವರು ಅಸಂಗತಕ್ಕೆ ತಾವೆ ಬರಮಾಡಿಕೊಳ್ಳುವ ಸಂದರ್ಭಕ್ಕೆ ಸಿಕ್ಕು ಹಾಕಿಕೊಳ್ಳುವರು. ಕೆಲವು ನಂಬಿಕೆಗಳು ಅನುಭವ, ಸಾಮಾಜಿಕ ಸಂದರ್ಭ, ಮನೋವಿಜ್ಞಾನದಿಂದಲೂ ಬಂದಿವೆ. ಎಲ್ಲವೂ ಕೆಟ್ಟವಾಗಿಲ್ಲ, ಕೆಲವು ಹಿನ್ನೆಲೆ ಹೊಂದಿವೆ.

೧) ಅಧಿಕವಾಗಿ ಬೆಳೆದದ್ದು ಅಧೋ ಪ್ರದೇಶವನ್ನೆ ಸೇರುವುದು. ೧೬

೨) ಕೊಲ್ಲುವದು ಕ್ಷತ್ರಿಯರ ಧರ್ಮ. ೨೮

೩) ದಕ್ಷಿಣ ದೇಶದಲ್ಲಿರುವ ಅಮರಾವತಿ ಗ್ರಾಮದ ಮಹಾದ್ವಾರದ ಗಣಪತಿ ದೇವಾಲಯಕ್ಕೆ ಹೋಗಿ ಬರುವದರ ಸಂದರ್ಭದಲ್ಲಿ ಗಣಪತಿಯ ದೇವಸ್ಥಾನಕ್ಕೆ ಬಂದು ಪ್ರಸಾದವನ್ನು ಕೇಳುವ ಆಚರಣೆಯನ್ನು ಇಟ್ಟುಕೊಂಡಿದ್ದರು. ೧೦೩

೪) ಬೆಂಕಿಯೂ, ಬ್ರಾಹ್ಮಣನೂ, ರಾಜನೂ, ಯಮನೂ, ಸಮುದ್ರವೂ, ಹೊಟ್ಟೆಯೂ, ಮನೆಯೂ, ಎಷ್ಟಾದಾಗ್ಗೂ ತುಂಬದೆ ಮತ್ತೆ ಮತ್ತೆ ಅಪೇಕ್ಷಿಸುವದು. ೧೦೫

೫) ಸಜ್ಜನರು ಶತ್ರುಗಳನ್ನಾಶ್ರೈಸಿದರೆ ಅಸಂಗತ ಸಂಭವಿಸುವದು. ೧೧೧

೬) ಶುದ್ಧ ಸಪ್ತಮಿ ಶುಕ್ರವಾರ ಸಕಲಕಾರ್ಯಕ್ಕೆ ಒಳ್ಳೆ ದಿವಸ. ೧೬೩

೭) ಕೆಟ್ಟದ್ದರಿಂದ ಕೆಟ್ಟದ್ದನ್ನೆ ಬಯಸುವದು ವಾಡಿಕೆ. ೧೬೪

೮) ಈಶ್ವರ ಸಂಕಲ್ಪದಿಂದ ಪ್ರಾಪ್ತವಾದ ಆಪತ್ತಿಗೆ ಇನ್ನು ವ್ಯಸನಪಟ್ಟು ಫಲವೇನು. ೧೬೫

೯) ವಿಪತ್ತು ಸಂಭವಿಸಿದ ಕಾಲದಲ್ಲಿ ಧೈರ್ಯವನ್ನು ಅವಲಂಬಿಸಬೇಕು. ೧೬೫

೧೦) ಮಗಳು ಹುಟ್ಟಿದರೆ ಪಳೂರ ಕರೆ ನೀರು ಕುಡಿಸುವಳು. ೧೯೪

೧೧) ಅನಿಷ್ಟಕ್ಕೆ ಶನೀಶ್ವರನೇ ಕಾರಣ. ೩೬[2]

ನಂಜನಗೂಡು ತಿರುಮಲಾಂಬ ಕಾದಂಬರಿಯಲ್ಲಿಯ ನಂಬಿಕೆಗಳು ಸಾಮಾಜಿಕತೆಗೆ ಪೂರಕವಾದವೇ ಆಗಿವೆ. ನಂಬಿಕೆಯು ಪುರುಷನ ಧೋರಣೆಗೆ ಒಗ್ಗಿಕೊಂಡಂತೆ ಕಾಣುವವು. ಕೈಲಾಗದ ವ್ಯಕ್ತಿಯು ಶಾಪದ ರೂಪದ ಮಾತಿನಂತಿದ್ದರೂ. ಅಂತಹ ನಂಬಿಕೆಯನ್ನು ಇಲ್ಲಿ ಬಿಂಬಿಸಿದೆ. 'ನಿಂದಿಸಿದವರ ನಾಲಿಗೆಗೆ ಹುಣ್ಣಾಗುವುದು', 'ಗಂಡ ತೀರಿದ ಬಳಿಕ ಸ್ತ್ರೀ ಕೇಶಮುಂಡನ ಮಾಡಿಸುವುದು', 'ಹಾಳು ಮೈಲಿಗೆಯ ಕೂದಲು ತೆಗೆಯದೆ ಅಡುಗೆ ಮನೆಯ ಕಾರ್ಯ ಮಾಡುವಂತಿಲ್ಲ', ಎಂಬ ನಂಬಿಕೆಗಳು ಪುರುಷ ಪ್ರಧಾನ ವ್ಯವಸ್ಥೆಯ ಒತ್ತಾಸೆ ಇಲ್ಲಿ ಕಾಣುವದು. ಕೇಶಮುಂಡನದ ನಂಬಿಕೆಯು ಇಂದಿರಾಬಾಯಿ ಕಾದಂಬರಿಯಲ್ಲಿ ಗುಲ್ವಾಡಿಯವರು ಬಳಸಿರುವದಕ್ಕೂ ನಭಾ ಕಾದಂಬರಿಯಲ್ಲಿ ತಿರುಮಲಾಂಬರವರು ಬಳಸಿರುವದಕ್ಕೂ ಒಂದೇ ಧೋರಣೆಯಲ್ಲಿ ಕಾಣದು. ಒಂದೆಡೆ ಸ್ತ್ರೀಶೋಷಣೆಯ ಮುಖವಾಡ ಕಂಡರೆ, ತಿರುಮಲಾಂಬರವರು ಅದನ್ನು ಸಮರ್ಥಿಸುವ ಧೋರಣೆಯನ್ನು ಕಾಣುತ್ತೇವೆ. ಸ್ತ್ರೀಯರ ಪರವಾಗಿ ವಿಷಯ ಮಂಡಿಸಿದವರು ತಿರುಮಲಾಂಬರವರು ಒಂದೊಂದೆಡೆ ಪುರುಷ ಧೋರಣೆಯು ಅವರ ಮೇಲೆ ಗಾಢವಾದ ಪರಿಣಾಮ ಬೀರಿದಂತೆ ಗೋಚರಿಸುವುದು.

ಸ್ತ್ರೀ ಕುರಿತು ಓದಿನ ವಿಷಯದಲ್ಲಿ ತಿರುಮಲಾಂಬರವರದು ವಿಚಿತ್ರ ನಿಲುವು. 'ಹೆಂಗಸು ಓದಿ ಕೆಟ್ಟಳು', ಎಂಬ ನಂಬಿಕೆಯು ಸಾಮಾಜಿಕ ಸುಧಾರಣೆಯು ಅವರಲ್ಲಿ ಯಾವ ರೀತಿಯ ಮನೋಸ್ಥಿತಿಯಿತ್ತು ಎಂಬುದನ್ನು ತೋರಿಸುವುದು. ಕಾಮದಂತಹ ಸಂಗತಿಗಳನ್ನು ಖಂಡಿಸುವ ತಿರುಮಲಾಂಬ 'ಕಾಮ ಮೋಹಿತನಿಗೆ ಅಧಃಪತನ', 'ಮಾನಿನೀ ಚಿತ್ತನೆ ಮಾತ್ಸರ್ಯಕ್ಕೆ ನೆಲೆ,' ಮುಂತಾದ ನಂಬಿಕೆಗಳನ್ನು ಗಮನಿಸಲಾಗಿ ಅವು ಬದುಕಿನ ಒಂದು ಭಾಗವಾಗಬೇಕೆ ವಿನಃ ಅದೇ ಮುಖ್ಯವಲ್ಲವೆಂಬ ರೀತಿಯಲ್ಲಿ ಪ್ರತಿಕ್ರಿಯಿಸಿರುವುದು ಅವರ ಮನೋಧೋರಣೆ.

'ಹೆಂಗಸರಿಗೆ ಶೀಲವೇ ಭೂಷಣ, ಸತಿತ್ವವೇ ಸರ್ವಾಭರಣ', 'ಸ್ತ್ರೀಯರಿಗೆ ಪತಿಯೇ ಸರ್ವಸ್ವ' ಎಂಬ ನಂಬಿಕೆಗಳು ಬಹುತೇಕ ಪುರುಷ ಪ್ರಧಾನ ಮನೋಸ್ಥಿತಿಯ ಹೇರಿಕೆ ಬಲವಂತದ ಪರಿಣಾಮವೇ ಆಗಿದೆ. ಪುರುಷ ಆಶ್ರಿತ ಸ್ತ್ರೀ ಮನೋಸ್ಥಿತಿ ಅವರ ಮೇಲೆ ಗಾಢವಾದ ಪರಿಣಾಮವನ್ನು ಬೀರಿದೆ. ಪಾಪಕೃತ ಮನೋಸ್ಥಿತಿಯು ಇವರ ಮೇಲೆ ಬಹಳ ತೀವ್ರತರವಾದ ಪರಿಣಾಮವನ್ನು ಬೀರಿದಂತಿದೆ. 'ಕಾಲವೊದಗದೆ ಕರ್ಮಸಿದ್ಧಿ ಸಿಗದು'. 'ಕರ್ಮಫಲ ಯಾರನ್ನೂ ಬಿಟ್ಟಿಲ್ಲ'. ಸಂತಾಪವೇ ಕರ್ಮಫಲ'. 'ಕಷ್ಟ ಬಂದಾಗ ಆಲೋಚನೆಗೆ ನೆಟ್ಟಗೆ ಹರಿಯುವದಿಲ್ಲ' ಈ ನಂಬಿಕೆಗಳು ಪಾಪಕೃತ ಮನೋಸ್ಥಿತಿಯ ಅಂತರಾಳದಲ್ಲಿ ಬೇರು ಬಿಟ್ಟ ಮನೋಸ್ಥಿತಿಯ ಪರಿಣಾಮ ಕಾಣುವುದು. ಕರ್ಮಫಲ ಕೆಟ್ಟದ್ದು, ಒಳ್ಳೆಯದು

ಎಂದು ವಿಂಗಡಿಸಿ ನೋಡಿದ್ದೆ ಇಲ್ಲಿಯ ದೌರ್ಬಲ್ಯ. ಮನೋದೌರ್ಬಲ್ಯದಿಂದ ಇಂತಹ ಸಂಗತಿಗಳು ತಾರ್ಕಿಕತೆ ಒಳಗೊಳ್ಳದೆ ಮುನ್ನೆಲೆಗೆ ಬಂದಂತೆ ಕಾಣುವುದು.

ಕುಟುಂಬದ ಗೌರವಕ್ಕೆ ತಿರುಮಲಾಂಬರವರು ಮಹಿಳೆ ಎಂತಹ ತ್ಯಾಗಕ್ಕೂ ಸಿದ್ಧಳಿರಬೇಕು ಎಂಬ ಮನೋಧೋರಣೆಯವರದು ಎಂಬುದು ಅವರ ನಂಬಿಕೆಗಳಲ್ಲಿ ಕಾಣುವುದು. 'ಹಿರಿಯರನ್ನು ಬಳಲಿಸಬಾರದು', 'ಸತ್ತರೆ ಬರುವ ಶಿರಿಯೇನು', 'ಕೆಟ್ಟು ಹೋಗಿರುವ ಪುರುಷನನ್ನು ಶ್ರಮದಿಂದ ಸನ್ಮಾರ್ಗಕ್ಕೆ ತರಬಹುದು', 'ಅಭಿಮಾನಾಂಧತೆಯಿಂದ ಬೆಂದು ಹೋಗಿರುವ ಸ್ತ್ರೀಯರನ್ನು ದಾರಿಗೆ ತರುವುದು ಆಗದು', 'ಗಂಡನ್ನುಳ್ಳವರು ಎಲ್ಲೂ ಹೋಗಕೂಡದು', ಎಂದು ಹೇಳುವ ತಿರುಮಲಾಂಬರವರ ನಂಬಿಕೆಗಳಲ್ಲಿ ಪುರುಷ ಸ್ತ್ರೀಯರ ನಡುವಿನ ಅಂತರವನ್ನು ಗುರುತಿಸಬಹುದು. ಪುರುಷ ಕೆಟ್ಟರೆ ತಿದ್ದಬಹುದೆಂದು ಒಂದೆಡೆ ಹೇಳಿದರೆ, ಸ್ತ್ರೀ ಕೆಟ್ಟರೆ ತಿದ್ದಲಾಗದು ಎಂಬ ಸಂಗತಿ ಮೂರ್ಖತನದ್ದು. ಕೌಟುಂಬಿಕ ಸ್ಥಿತಿಯ ಗೌರವ, ನೆಮ್ಮದಿ ಸ್ತ್ರೀಯರಿಂದ ಕೆಡದಿರಲೆಂಬ ಧೋರಣೆಯು ತಿರುಮಲಾಂಬರವರಲ್ಲಿ ಕಾಣುವುದು. ಅಷ್ಟೆ ಅಲ್ಲದೆ ದೇವರು ದಿಂಡಿರು ಎಂಬ ಕಲ್ಪನೆಯು ಅವರಲ್ಲಿ ಆಳವಾಗಿ ಬೇರೂರಿತ್ತು. 'ನದಿ ಸ್ನಾನಕ್ಕೆ ಹೋಗುವುದು ಪುಣ್ಯ ಕಾರ್ಯ,' 'ನದಿಯಲ್ಲಿ ಸ್ನಾನ ಮಾಡಿದರೆ ಪಾಪ ಹೋಗುವುದು' ಎಂಬ ನಂಬಿಕೆಯು ಗೃಹಲಕ್ಷ್ಮೀಯ ಕರ್ತವ್ಯದಿಂದ ಬಿಂಬಿಸಿದ್ದರು. ಆವಾಗಾವಾಗ ಸ್ತ್ರೀಯರು ಈ ಪುಣ್ಯಕಾರ್ಯಕ್ಕೆಂದು ನದಿ ಸ್ನಾನದ ಮನೋಭಿಲಾಶೆ ತೀರಿಸಿಕೊಳ್ಳಲು ಅವರು ನದಿಗೆ ಹೋದರೆ ತಪ್ಪಿಲ್ಲವೆಂದು ದ್ವಂದ್ವತೆಯ ತರ್ಕ ಕಾಣುವುದು. ಇದು ಪುರುಷ ಸ್ತ್ರೀ ಇಬ್ಬರಿಗೂ ಅನ್ವಯವಾಗಿರುತ್ತಿತ್ತು. ಈ ರೀತಿಯಾದ ಕೆಲವು ನಂಬಿಕೆಗಳು ಈ ಕೆಳಕಂಡಂತೆ ಬಳಕೆಯಾಗಿವೆ.

೧) ಹಿರಿಯರನ್ನು ಬಳಲಿಸಬಾರದು. ೯೭

೨) ಸತ್ತರೆ ಬರುವ ಸಿರಿಯೇನು. ೯೭

೩) ದೇವಸ್ಥಾನಕ್ಕೆ ಹೋಗುವದು ಪುಣ್ಯ ಕಾರ್ಯ. ೧೧೪

೪) ನದಿಯಲ್ಲಿ ಸ್ನಾನ ಮಾಡಿದರೆ ಪಾಪ ಹೋಗುವದು. ೧೧೪

೫) ಗಂಡನ್ನುಳ್ಳವರು ಎಲ್ಲಿಗೂ ಹೋಗಕೂಡದು. ೧೧೬

೬) ವಿಧವೆಯರು, ಪತಿ ವಿರಹಿತೆಯರು ಇಂತಹ ಕಂಳಂಕಿತ ಸ್ಥಳಕ್ಕೆ ಹೋಗುವದನ್ನು ನೆನೆಯಬಾರದು. ೧೧೬

೭) ಕೆಟ್ಟು ಹೋಗಿರುವ ಪುರುಷನನ್ನು ಶ್ರಮದಿಂದ ಸನ್ಮಾರ್ಗಕ್ಕೆ ತರಬಹುದು. ೧೧೯

೮) ಅಭಿಮಾನಾಂಧತೆಯಿಂದ ಬೆಂದುಹೋಗಿರುವ ಸ್ತ್ರೀಯರನ್ನು ದಾರಿಗೆ ತರುವದು ಆಗದು. ೧೧೯

೯) ಹೆಂಗಸು ಓದಿ ಕೆಟ್ಟಳು. ೧೨೭

೧೦) ಹೆಂಗಸಿಗೆ ಶೀಲವೆ ಭೂಷಣ ಸತಿತ್ವವೇ ಸರ್ವಾಭರಣ. ೧೩೦

೧೧) ಸ್ತ್ರೀಯರಿಗೆ ಪತಿಯೇ ಸಮಸ್ತಾಭರಣ. ೧೩೭

೧೨) ಕಾಮ ಮೋಹಿತನಿಗೆ ಅಧಃಪತನ. ೧೮೩

೧೩) ಮಾನಿನಿ ಚಿತ್ತವೇ ಮಾತ್ಸರ್ಯಕ್ಕೆ ನೆಲೆ. ೨೦೨

೧೪) ಪರಿಶುದ್ಧದಲ್ಲಿಯೂ ಕಳಂಕವನ್ನು ಚಿಂತಿಸುತ್ತಿರುವುದು ಪಾತಕ. ೨೧೩

೧೫) ಸತ್ವಕ್ಕೆ ಸರ್ವತ್ರ ವಿಜಯವಲ್ಲದಿರುವದು. ೨೧೪

೧೬) ಕಾಲವೊದಗದೆ ಕರ್ಮಸಿದ್ಧಿ ಸಿಗದು. ೨೨೯

೧೭) ಕರ್ಮಫಲ ಯಾರನ್ನೂ ಬಿಟ್ಟಿಲ್ಲ. ೨೩೧

೧೮) ಸಂತಾಪವೇ ಕರ್ಮಫಲ. ೨೩೯

೧೯) ಕಷ್ಟ ಬಂದಾಗ ಆಲೋಚನೆ ನೆಟ್ಟಗೆ ಹರಿಯುವದಿಲ್ಲ. ೧೨೭

೨೦) ರಾತ್ರಿ ತ್ರಿಪಾದಿ ನಕ್ಷತ್ರದಲ್ಲಿ ಹೆಣ ಸಾಗಿಸಬಾರದು. ೧೭೧

೨೧) ವೈಶಾಖ ಮಾಸಕ್ಕೆ ಮಳೆ ಬರಲ್ಲ. ೧೭೦

೨೨) ಕರ್ಮಲೋಕಕ್ಕೆ ಪ್ರಾಯಶ್ಚಿತವಿದೆ. ೧೭೨ [೮]

ಹರಕೆ ಬಲಿ ಮತ್ತು ಸಮಾಜ:

ಜಗತ್ತಿನಲ್ಲಿಯ ಬಹುಪಾಲು ಜನರು ದೈವಿಶಕ್ತಿಯ ಮೇಲೆ ಅವಲಂಬಿತರಾಗಿದ್ದಾರೆ. ಈ ಶಕ್ತಿಯನ್ನು ಭಾರತೀಯರು ಅಷ್ಟೇ ಅಲ್ಲ ಜಗತ್ತಿನ ಎಲ್ಲಾ ಜಾತಿ, ಜನಾಂಗಗಳು ಗಾಢವಾಗಿ ನಂಬಿವೆ. ಪ್ರಕೃತಿಯಲ್ಲಿ ಬದುಕುವ ಪ್ರತಿಯೊಬ್ಬರು ರೋಗ-ರುಜಿನ, ಕಷ್ಟ-ಕಾರ್ಪಣ್ಯಗಳಿಗೆ ಸಿಲುಕಿ ಕಾರಣಗಳನ್ನು ತಿಳಿಯದೆ ನಿಗೂಢವಾಗಿದ್ದಾಗ ದೈವಿಶಕ್ತಿ ಇಲ್ಲವೆ ದುಷ್ಟಶಕ್ತಿಗೆ ಮೊರೆ ಹೋಗುತ್ತಿದ್ದರು. ದೈವಿಶಕ್ತಿಯಲ್ಲಿ ಮೂರು ಪ್ರಕಾರಗಳಿವೆ. ಮೊದಲನೆಯದು ಸೌಮ್ಯದೇವತೆಗಳು ಪುರುಷ ದೇವತೆಗಳು. ಎರಡನೆಯದು ಉಗ್ರದೇವತೆಗಳು. ಅವು ಗ್ರಾಮ ಪ್ರದೇಶಕ್ಕೆ ಸೀಮಿತವಾದ ಹೆಣ್ಣು ದೇವತೆಗಳು. ಮೂರನೆಯದಾಗಿ ದುಷ್ಟಶಕ್ತಿ ಅವು ಭೂತಪ್ರೇತ ಇನ್ನಿತರ ಕ್ರೂರ ಶಕ್ತಿಯನ್ನು ಒಳಗೊಂಡಿದೆ.

ಹರಕೆಗಳು ಧಾರ್ಮಿಕ ಭಾವನೆಯನ್ನು ಹೊಂದಿದ್ದು, ವ್ಯಕ್ತಿ ಹಾಗೂ ವಿವಿಧ ಸಮಾಜಗಳ ಗುಂಪುಗಳಲ್ಲಿ ಅವುಗಳ ಆಚರಣೆಯನ್ನು ಕಾಣುತ್ತೇವೆ. ಇದಕ್ಕೆಲ್ಲ ಕಾರಣವೆಂದರೆ ಮನುಷ್ಯ ದೈವಿಕ ಶಕ್ತಿಯ ಮೇಲೆ ಇಟ್ಟ ನಂಬಿಕೆ. ತನಗಾಗಲಿ ಇಲ್ಲವೆ ತನ್ನನ್ನು ನಂಬಿದವರಿಗಾಗಲಿ ಏನಾದರೂ ಪೀಡೆ, ಕಷ್ಟ ನಷ್ಟಗಳು ಸಂಭವಿಸಿದಾಗ, ಯಾವುದಾದರೊಂದು ಕಾರ್ಯಸಾಧನೆಯಲ್ಲಿದ್ದಾಗ ದೈವೀಶಕ್ತಿಗೆ ಮೊರೆಹೋಗಿ

ಹರಕೆಗಳನ್ನು ಮಾಡಿಕೊಳ್ಳುತ್ತಾನೆ. ಹಣ್ಣುಕಾಯಿಗಳನ್ನು, ಪ್ರಾಣಿಬಲಿಗಳನ್ನು, ಇತರ ತನಗೆ ಪ್ರಿಯವಾದ ವಸ್ತುಗಳನ್ನು ದೇವರಿಗಾಗಿ ಅರ್ಪಿಸುವನು. ಈ ಪದ್ಧತಿ ಎಲ್ಲ ಕಾಲದ ಪರಿಸರದ ಜನತೆಯಲ್ಲಿ ಕಾಣಬಹುದಾಗಿದೆ.

ಹಿಂದೂ ಧರ್ಮದಲ್ಲಿ ಹಲವು ದೇವೋಪಾಸನೆಯನ್ನು ಕಾಣುತ್ತೇವೆ. ಅವುಗಳಲ್ಲಿ ಕೆಲವು ಸಾತ್ವಿಕ ದೇವರುಗಳಾದರೆ, ಇನ್ನು ಕೆಲವು ಉಗ್ರದೇವರುಗಳು. ಅವುಗಳ ಸಂತೃಪ್ತಿಗಾಗಿ ಪೂಜೆ ನೇಮಗಳನ್ನು ಮಾಡಿ ಹರಕೆಗಳನ್ನು ಸಲ್ಲಿಸುವರು. ವಿಶೇಷ ಸಂದರ್ಭಗಳಲ್ಲಿ ಹರಕೆಗಳನ್ನು ತೀರಿಸಲಾಗುತ್ತದೆ. ಅದಕ್ಕಾಗಿ ಹಬ್ಬ-ಹರಿದಿನ, ಹುಣ್ಣಿಮೆಗಳು, ಜಾತ್ರೆ-ಉತ್ಸವಗಳು ಪ್ರಶಸ್ತ ವೇಳೆಯಾಗಿರುತ್ತದೆ. ಒಮ್ಮೊಮ್ಮೆ ಸಂಕಲ್ಪ ಈಡೇರದಂತಹ ಸಂದರ್ಭದಲ್ಲಿ ಹರಕೆ ತೀರಿಸುವರು.

'ಇಂದಿರಾಬಾಯಿ'ಯಲ್ಲಿ ಸುಂದರನು ವಿಷ ಪ್ರಾಶನದಿಂದ ಸಂಕಟಪಡುತ್ತಿದ್ದಾಗ ಮನೆಯವರು ಸುಂದರರಾಯನಿಗೆ ಗುಣವಾದರೆ ಶನಿಪ್ರದೋಷ ವ್ರತ ಮಾಡುವುದಾಗಿ ಹರಕೆ ಹೊತ್ತುಕೊಳ್ಳುವರು. ತಮಗೊದಗಿದ ತೊಡಕುಗಳಿಂದ ಪಾರಾಗಲು ಮನುಷ್ಯ ಹರಕೆಯ ಮೂಲಕ ದೇವರಲ್ಲಿ ಮೊರೆ ಹೋಗುವನು. ಹೆಚ್ಚಾಗಿ ಜನರು ತಮ್ಮ ಹರಕೆಗಳನ್ನು ಜಾತ್ರೆ-ಉತ್ಸವಗಳಲ್ಲಿ ದೇವರ ಸನ್ನಿಧಿಗೆ ಬಂಧು-ಬಾಂಧವರೊಂದಿಗೆ ಹೋಗಿ ಪೂರೈಸುವರು.

ಕ್ಷುದ್ರ ಶಕ್ತಿಗಳ ಮುಂದೆ ಕುಬ್ಜನಾದ ಮನುಷ್ಯ, ಕೆಲವೊಂದು ಸಲ ದೇವರು ತಮ್ಮನ್ನು ಪರೀಕ್ಷೆ ಮಾಡುತ್ತಿರುವನೆಂದು ಭಾವಿಸಿದ್ದಾರೆ. ಭೂತ ಆರಾಧಕರು ಭೂತ ಚೇಷ್ಟೆ ಎಂದು ಭಾವಿಸುತ್ತಾರೆ. ತಮ್ಮ ದುಃಖ ರೋಗ, ರುಜಿನ ದುಃಖ ದುಮ್ಮಾನಗಳಿಗೆ ಕಾರಣವಾಗಿವೆ. ಈ ಎರಡು ಶಕ್ತಿಗಳನ್ನು ಸುಪ್ರೀತಗೊಳಿಸಲು ನಡೆಸಿದ ಆರಾಧನೆಯ ಹಲವು ಪ್ರಕಾರಗಳಲ್ಲಿ 'ಹರಕೆ' ಮತ್ತು 'ಬಲಿ' ಕೂಡಾ ಸೇರುತ್ತವೆ. ದೇವರ ಅನುಗ್ರಹಕ್ಕಾಗಿ ಜನರು ಭಕ್ತಿಯಿಂದ ದೇವರ ಮುಂದಿಡುವ ಬೇಡಿಕೆಗಳು 'ಹರಕೆ'ಗಳಾಗಿದ್ದರೆ, ಆ ಅನುಗ್ರಹಕ್ಕೆ ಪ್ರತಿಯಾಗಿ ಕೊಡುವಂಥದ್ದೆ 'ಬಲಿ'. ಈ ರೀತಿಯಾದ ಹರಕೆ ಮತ್ತು ಬಲಿ ಗ್ರಾಮೀಣ ಪ್ರದೇಶದವರಲ್ಲಿ ಅದರಲ್ಲೂ ಸಾಂಪ್ರದಾಯಿಕ ಸ್ತ್ರೀಯರಲ್ಲಿ ಹಾಸು ಹೊಕ್ಕಾಗಿವೆ. ಇದಕ್ಕೆ ಕಾರಣಗಳನ್ನು ಕೌಟುಂಬಿಕ ನೆಲೆಯಲ್ಲಿ ಕಾಣುತ್ತೇವೆ. ಕಾಲರಾ, ಪ್ಲೇಗ್, ಮಲೇರಿಯಾದಂತಹ ಕಾಯಿಲೆ ಬಂದಾಗ, ಅದರಿಂದ ಮುಕ್ತರಾಗಲೆಂದೂ ತಮಗೆ ಒಳ್ಳೆಯ ಗಂಡು ಸಿಗಲೆಂದು, ಒಳ್ಳೆಯ ಮಗು ಹುಟ್ಟಲೆಂದು ಹರಕೆ ಹೊರುತ್ತಿದ್ದರು. ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ ಹರಕೆ ಹೊರುವದು ಸಾಮಾನ್ಯವಾಗಿ ರೂಢಿಯಾಗಿದ್ದವು.

ಹರಕೆಗಳು ಜಾತಿ-ಜನಾಂಗ, ಮತ-ಧರ್ಮ, ಆಸ್ತಿ-ಅಂತಸ್ತಿಗೆ ಅನುಗುಣವಾಗಿವೆ. ಹಿಂಸಾತ್ಮಕ ಹರಕೆಗಳನ್ನು ಕೋಳಿಯಿಂದ ಹಿಡಿದು ಕೋಣದವರೆಗಿವೆ. ಅಹಿಂಸಾತ್ಮಕ ಹರಕೆಗಳಾದ, ಕಾಯಿ, ಕರ್ಪೂರ,

ಕಳಸ-ಕನ್ನಡ, ಕಿರೀಟ ಅಲ್ಲದೆ ಕೋರೆ ಮೀಸೆ ಕಣಬಟ್ಟುಗಳು ತಲೆ ಕೂದಲು ಅರ್ಪಿಸುವವರೆಗೆ ಹರಕೆ ಬಂದು ತಲುಪಿವೆ. ಸ್ವಾತಂತ್ರ್ಯ ಪೂರ್ವ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳನ್ನು ಪರಿಶೀಲಿಸಿದಾಗ ಸ್ತ್ರೀಯರು ತಮ್ಮ ಬದುಕಿಗೆ ಸಂಬಂಧಿಸಿದಂತೆ ಹಿಂಸಾತ್ಮಕ ಹಾಗೂ ಅಹಿಂಸಾತ್ಮಕ ಹರಿಕೆಗಳನ್ನು ಹೊತ್ತ ಚಿತ್ರಣ ಕಾಣುತ್ತೇವೆ. ಇಂದಿರಾಬಾಯಿ ಕಾದಂಬರಿಯಲ್ಲಿ "ಲಕ್ಷಬತ್ತಿಯ ವ್ರತ ಹರಕೆಗಳು, ಹೋಮ, ನೇಮಗಳು ಜರುಗುವವು"[೯]

ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಅಮ್ಮನ ಗುಡಿಯ "ದೊಡ್ಡ ಮಂಗಳಾರತಿಯೂ, ಅಲಂಕಾರ ಮಾಡಿ ನೈವೇದ್ಯಕ್ಕೆ ಮಾಡಿ ಅಲಂಕಾರಕ್ಕಾಗಿ ಮೈಸೂರಿನಿಂದ 'ಮಹಿಷಾಸುರ ಮರ್ಧಿನಿ, ಮಹಾಕಾಳಿ, ಸೀತಾಪಾರ್ವತಿ, ಸಾವಿತ್ರಿ, ಗಾಯತ್ರಿ, ಸತಿ ಪಾರ್ವತಿ, ರಾಜರಾಜೇಶ್ವರಿ, ತ್ರಿಪುರ ಸುಂದರಿ, ಗಂಗೆ"[೧೦] ಮುಂತಾದ ಬಗೆ ಬಗೆ ಅಲಂಕಾರ ಜರುಗುವವು. ಈ ರೀತಿ ಸೇವೆ ಪೂಜೆಗೆ ಸುತ್ತಲಿನ ಗ್ರಾಮದ ಜನರೆ ಬಂದು ದರ್ಶನ ಪಡೆಯುತ್ತಿದ್ದರು. ಇಷ್ಟೆ ಅಲ್ಲದೆ "ದಶಕಂಠ ರಾವಣನ ಸಂಹಾರದ ಅಲಂಕಾರವನ್ನು, ಮೋಹಿನಿಯ ಅಲಂಕಾರವನ್ನು ಮಾಡುವ ದಿವಸಗಳಲ್ಲಿ ಇನ್ನೊಂದು ಸಾರಿ ನೋಡಬೇಕೆಂದು ಜನರಿಗೆ ನಿಜವಾಗಿಯೂ ಆಶೆ ಹುಟ್ಟುವ ಹಾಗೆ ಇರುತ್ತಿತ್ತು".[೧೧]

ನವರಾತ್ರಿಯಲ್ಲಿಯೂ 'ವರಮಹಾಲಕ್ಷ್ಮೀ' ಹಬ್ಬದಲ್ಲಿಯೂ ಸುವಾಸಿನಿಯರ ಪೂಜೆ ಎಂಬ ನೆವದಿಂದ ಒಳ್ಳೆಯ ಸೀರೆ ಕುಪ್ಪಸಗಳನ್ನುಟ್ಟು ದೀಕ್ಷಿತರ ಕುಟುಂಬಕ್ಕೆ ಕೊಡಲು ಆರಂಭವಾಯಿತು ಎಂಬ ಸಂಗತಿ ಬರುವದು. ಭೀಮರಾಯ ಅಂಬಾಬಾಯಿಯರ ನಡುವಿನ ಸಂಭಾಷಣೆಯ ಒಂದು ಸಂದರ್ಭದಲ್ಲಿ ಮಂಚದ ಮೇಲೆ ಮಲಗಿದಾಗ ವಿಕಾರವಾಗಿ ವರ್ತಿಸಿದಾಗ "ಕಳೆದ ಸಾರಿ ಅವರಿಗೆ ಓೀಗೆಯೇ ಆದಾಗ ಒಂದು ನವಗ್ರಹ ಶಾಂತಿ, ಒಂದು ಗೋದಾನ ಇವುಗಳನ್ನು ಹೇಳಿಕೊಳ್ಳಲು ಗುಣಾಂಶ ಬಂದಿತ್ತು. ಈ ಸಾರಿ ಕಠಿಣವಾದ ಆಪತ್ತಿಲ್ಲವಾದರೂ, ಪ್ರತಿ ಶನಿವಾರದಲ್ಲೂ 'ಅಶ್ವತ್ಥ ನಾರಾಯಣ ಪೂಜೆ', 'ಶನಿ ಪ್ರದೋಷ' ವ್ರತವನ್ನು ಸಹ ಆಚರಿಸುವದಾಗಿ 'ಹರಕೆ' ಹೇಳಿಕೊಂಡಿದ್ದೇನೆ."[೧೨] ಅಂಬಾಬಾಯಿ ಬೇಡಿಕೆ, ಹರಕೆಯ ವಿಚಾರ ಬರುವದು. ದೈವತ್ವದ ಕ್ರೂರತೆ ಮಾನವನ್ನು ತೊಂದರೆಗೆ ಸಿಲುಕಿಸುವ ಪ್ರಯತ್ನ ಜನರ ಅರಿವಿಗಿಲ್ಲದೆ ಜರುಗುವುದು. ಇಂತಹ ಕ್ಷುದ್ರ ದೇವ ದೇವತೆಯರನ್ನು ಆರಾಧಿಸುವ ಹಲವಾರು ಪ್ರಕಾರಗಳಲ್ಲಿ ಹರಕೆ ಮತ್ತು ಬಲಿಗೆ ಪ್ರಾಧಾನ್ಯತೆ.

ಹರಕೆ ಸಾಮಾಜಿಕವಾಗಿ ಬೇರು ಬಿಟ್ಟಿರುವುದು. ಜನರ ಭಾವನೆ ಗಟ್ಟಿಗೊಳಿಸಲು ತ್ರಿಯಂಬಕರಾಯ ಹಾಗೂ ಭೀಮರಾಯನ ನಡುವಿನ ಒಂದು ಸಂಭಾಷಣೆ ಸ್ವಾರಸ್ಯಪೂರ್ಣವಾಗಿದೆ. ವಿಠಲರಾಯನು ಗಂಡಾಂತರದಿಂದ ತಪ್ಪಲು "ಶ್ರೀ ಮಹಾಲಿಂಗೇಶ್ವರನಿಗೆ ಒಂದು ಮಹಾರುದ್ರಾಭಿಷೇಕ, ಸಹಸ್ರ ಬ್ರಾಹ್ಮಣರಿಗೆಲ್ಲಾ ಸಂತರ್ಪಣೆ, ಮಾಡಿಸುವದಲ್ಲದೆ ದೇವಸ್ಥಾನದ ಪಶ್ಚಿಮ ದಿಕ್ಕಿನ ಹೆಬ್ಬಾಗಿಲಲ್ಲಿ

ಸಾಯಂಕಾಲ ಸಮಯದಲ್ಲಿ ಬಾರಿಸುವುದಕೋಸ್ಕರ ಮೂರು ಮಣ ತಾಮ್ರದ ಕಳಸಿಗೆಯ ಒಂದು ನಗಾರಿಯನ್ನು ಮಾಡಿಸಿ ಅದಕ್ಕೆ 'ದೇವದುಂದುಬಿ' ಎಂಬ ಹೆಸರನ್ನಿಟ್ಟು ಅದಕ್ಕೆ ಬೇಕಾದ ಬಂಡಿ ಸಮೇತ ಶ್ರೀ ಮಹಾಲಿಂಗೇಶ್ವರನ ಪಾದದಲ್ಲಿ ಒಪ್ಪಿಸುತ್ತೇನೆ."[೧೩] ಪ್ರಸ್ತುತ ಹರಕೆ ವಿಚಾರ ತಪ್ಪಿನಿಂದ ತಪ್ಪಿಸಿಕೊಳ್ಳುವ ಮೋಸ ಮನೋಸ್ಥಿತಿ ಬಿಂಬಿಸುವುದು.

ಪೂಜೆ, ಶಾಪ ಹಾಗೂ ವ್ರತಾಚರಣೆಗಳು:

ಆರಾಧನೆ, ಅರ್ಚನೆ, ಇಲ್ಲವೆ ಪ್ರಾರ್ಥನೆಗಿಂತ ಪೂರ್ವದಲ್ಲಿ ದೇವರನ್ನು ನಾನಾ ವಿಧಾನಗಳಿಂದ ಅಲಂಕಾರಗೊಳಿಸುವ. ವಿಧಿ ವಿಧಾನವೇ ಪೂಜೆ. ಸರ್ವಧರ್ಮಗಳಿಗೆ ಸಮನ್ವಯವಾದ ಭಾರತದ ಬಹುತೇಕ ಧರ್ಮಗಳಲ್ಲಿ ಪೂಜೆಗೆ ಪುರಸ್ಕಾರವಿದೆ. ಆದರೆ ದೇವತೆಗಳಲ್ಲಿಯೂ ಸಹ ಸೌಮ್ಯ ಇಲ್ಲವೆ ಶಿಷ್ಟ ದೇವತೆಗಳು ಉಗ್ರದೇವತೆಗಳೆಂಬ ಬಗೆ ಇವೆ. ಗ್ರಾಮ್ಯ ದೇವತೆಗಳು ಎಂಬ ಭಿನ್ನತೆ ಇದೆ. ಪೂಜೆ ಭಾರತೀಯರ ಜನಮನದಲ್ಲಿ ನಿರಂತರವಾಗಿ ಮುಂದುವರೆದುಕೊಂಡು ಬಂದಿದೆ. ದೇವರ ಪೂಜೆ ಅರ್ಚನೆ ಎಂಬಂತೆ ಪುರೋಹಿತವರ್ಗ ಹುಟ್ಟಿಕೊಂಡು ದೇವರ ಪ್ರತಿನಿಧಿಗಳೆಂಬಂತೆ ವರ್ತಿಸಿದರು. ಬೌದ್ಧಿಕವಾಗಿ ಪ್ರಬಲರಾದ ಪುರೋಹಿತರು ದುರ್ಬಲ ವರ್ಗದವರನ್ನು ತಾವೇ ಹುಟ್ಟು ಹಾಕಿದ ಧರ್ಮಶಾಸನಗಳಿಂದ ಬಂಧಿಸಿದರು. ಈ ಪುರೋಹಿತರ ಏಳಿಗೆಗೆ ಭಾರತೀಯ ಜನರಲ್ಲಿ ಬೇರೂರಿದ್ದ ಧಾರ್ಮಿಕ ನಂಬಿಕೆಯು ಕಾರಣವಾಗಿದೆ. ಹೀಗಾಗಿ ಕಲ್ಲು, ಮಣ್ಣು, ಪ್ರಾಣಿ ಪಕ್ಷಿಗಳನ್ನು ಪೂಜಿಸುತ್ತಾ ಬಂದಿದ್ದಾರೆ. ದೇವರ ರೂಪ ನೀಡಿದ್ದಾರೆ.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಾದ 'ಇಂದಿರಾ', 'ಇಂದಿರಾಬಾಯಿ', 'ಪ್ರಬುದ್ಧ ಪದ್ಮನಯನೆ', 'ಮಾಡಿದುಣ್ಣೋ ಮಹಾರಾಯ', 'ವಾಗ್ದೇವಿ', 'ಶೃಂಗಾರಚಾತುರ್ಯೋಲ್ಲಾಸಿನಿ', ಎಲ್ಲಾ ಕಾದಂಬರಿಗಳ ಸ್ತ್ರೀ ಪಾತ್ರಗಳು ದೇವರ ಪೂಜೆಗಳಲ್ಲಿ ತೊಡಗಿಕೊಂಡಿದ್ದು ಕಾಣುವುದು. ಪೂಜಿಸುವುದು ಒಂದು ಪುಣ್ಯದ ಕೆಲಸ. ಆದ್ದರಿಂದಲೆ ಸ್ತ್ರೀಯರು ದೇವತೆಗಳ ಪೂಜೆಗಳಲ್ಲಿಯೇ ಸಂತೃಪ್ತರಾಗುತ್ತಿದ್ದರು. ಇದಕ್ಕೆ ಉದಾಹರಣೆ, 'ಪ್ರಭುದ್ಧ ಪದ್ಮನಯನೆ' ಕಾದಂಬರಿಯ ಪದ್ಮನಯನೆ, 'ರಾಕ್ಷಸ ಮೇಘನಾದದಿಂದ' ಪಾರಾಗಲು 'ಗೌರಿ ಪೂಜೆ' ಮಾಡಿದಳು. ಈ ಪೂಜೆಯ ಫಲವೆಂಬಂತೆ ಪ್ರಿಯನಾದ ಕಮಲಾಕ್ಷನನ್ನು ಮದುವೆಯಾಗಿ ರಾಕ್ಷಸನಿಂದ ಬಿಡುಗಡೆ ಪಡೆದಳು. ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಅರುಂಧತಮ್ಮ ಹುಟ್ಟಿದಂದಿನಿಂದ ಸಾಯುವವರೆಗೆ ಗೌರಿ ಪೂಜೆಯಲ್ಲಿ ತಲ್ಲೀನಳು. ದೇವರು, ಮಠ, ಮಂದಿರ ಇಲ್ಲದೆ ಅಗ್ರಹಾರಗಳಿಗೆ ಹೋಗಿ ತಮ್ಮ ಸುಖ-ಸಮೃದ್ಧಿಗಾಗಿ ಪೂಜೆ ಮಾಡಿಕೊಂಡು ಬರುವದು ವಾಡಿಕೆ ಮಾಡಿಕೊಂಡಿದ್ದಳು.

ಪೂಜಿಸಿದ ದೇವರಲ್ಲಿರುವ ಅಸದೃಶ್ಯವಾದ ಮಹಿಮೆಯನ್ನು ನಂಬಿರುವ ಸ್ತ್ರೀಯರು ದೇವರ ಪ್ರತಿ ರೂಪರಾಗಿರುವ ಸಾಧು ಸಂತರನ್ನು ಋಷಿ ಮುನಿಗಳನ್ನು ಭಯ ಭಕ್ತಿಯಿಂದ ಪೂಜಿಸಿದ್ದಾರೆ. ಪ್ರಬುದ್ಧ ಪದ್ಮನಯನೆ, ಇಂದಿರಾಬಾಯಿ, ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಗಳಲ್ಲಿ ಋಷಿ ಮುನಿಗಳು ಭಕ್ತರ ಬೇಡಿಕೆಯನ್ನು ಈಡೇರಿಸುವ ಉಲ್ಲೇಖವಿದೆ. 'ಪ್ರಬುದ್ಧ ಪದ್ಮನಯನೆ'ಯ ಕಾದಂಬರಿಯ ರಾಜ ವೀರವರ್ಮ ಮತ್ತು ಮನಮೋಹಿನಿ ಕಪಿಂಜಲ ಋಷಿಗಳ ಪೂಜಾ ಸೇವೆಗಳಿಂದ ಸಂತಾನ ಭಾಗ್ಯ ಪಡೆದರೆ, 'ಇಂದಿರಾಬಾಯಿ', ಕಾದಂಬರಿಯ ಭೀಮರಾಯ ಅಂಬಾಬಾಯಿ ಶ್ರೀಗುರುಗಳನ್ನು ಸ್ವಾಗತಿಸಿ ಒಂದು ಸಾವಿರ 'ಕಂಠಿರಾಯ' ವರಹಗಳಿಂದ ಕನಕಾಭಿಷೇಕ ಮಾಡಿ ಸಂತಾನ ಗೋಪಾಲ ಮಂತ್ರೋಪದೇಶ ಪಡೆದವರು. ಶ್ರೀಗಳ ಆಶೀರ್ವಾದದ ಫಲವೆಂಬಂತೆ ಅಂಬಾಬಾಯಿ ಇಂದಿರಾಬಾಯಿಗೆ ಜನ್ಮ ನೀಡುತ್ತಾಳೆ. ಮಂತ್ರದಿಂದ ಮಾವಿನಕಾಯಿ ಉದರುವುದಿಲ್ಲ.

ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಪೂಜಾ ವಿಧಾನಗಳನ್ನು ಶಿಷ್ಟ ಮತ್ತು ಜನಪದ ಎಂದು ವಿಂಗಡಿಸಬಹುದು. ಶಿಷ್ಟ ಪೂಜೆ ವಿಧಾನಗಳಲ್ಲಿ ಪೌರಾಣಿಕ, ಆಗಮೋಕ್ತ ಮಾರ್ಗಗಳನ್ನು ಅನುಸರಿಸಿ ಬಹುತೇಕ ಸಂಸ್ಕೃತಮಯ ಮಂತ್ರಗಳ ಜೊತೆಯಲ್ಲಿ ಆಚರಿಸುವದು ರೂಢಿ. ಆವಾಹನ, ಆಸನ, ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ವಸ್ತ್ರ, ಯಜ್ಞೋಪವೀತ, ಅನುಲೇಪನ, ಪ್ರಷ್ಟಿ, ದೂಪ, ದೀಪ, ನೈವೇದ್ಯ, ನಮಸ್ಕಾರ, ಪ್ರದಿಕ್ಷಿಣೆ, ಮಂತ್ರಪುಷ್ಪ ವಿಧಗಳ ಸಲ್ಲಿಸುವುದು, ಅರ್ಪಿಸುವದು ವ್ರತಾಚರಣೆ ಪದ್ಧತಿಯಾಗಿದೆ. ಈ ಸಂಗತಿಗಳು ಕರ್ನಾಟಕದಾದ್ಯಂತ ಪ್ರಚಾರದಲ್ಲಿದ್ದದ್ದು ಕಾಣುವುದು. ಈ ರೀತಿಯ ಪೂಜಾ ಕಾರ್ಯಗಳು ಭಾಗಶಃ ಪೂಜೆಗಳು ಮೊದಲಘಟ್ಟದ ಕಾದಂಬರಿಗಳಲ್ಲಿ ಚರ್ಚೆಯಾಗಿವೆ.

ಜನರು ಇಷ್ಟಾರ್ಥಸಿದ್ಧಿಗಾಗಿ, ಅನಿಷ್ಟ ನಿವಾರಣೆಗೆ ದೇವರನ್ನು ಒಲಿಸಿಕೊಳ್ಳುವ ಮಾರ್ಗಗಳು ವೈಶಿಷ್ಟ್ಯಪೂರ್ಣವಾದವು. ಪೂಜೆ ಸೇವೆ ಎರಡು ಒಂದೇ ಆಗಿ ತೋರಿದರೂ ಆಚರಣೆಯಲ್ಲಿ ಒಂದಕ್ಕೊಂದು ವ್ಯತ್ಯಾಸವಿರುತ್ತದೆ. ಪೂಜೆಗಳಲ್ಲಿ ಪ್ರತಿಷ್ಠಾಪಿಸಿ ದೇವರಿಗೆ ಅರಿಶಿನ ಕುಂಕುಮ ಹಚ್ಚಿ, ದೀಪ ಹಚ್ಚಿಸಿ, ಧೂಪ ಹಾಕಿ, ನೈವೇದ್ಯ ಮಾಡಿಸುವುದು ಒಂದು ಕ್ರಮ. ಕೆಲವು ದೇವರಿಗೆ ತಮ್ಮಡಿ, ಸಿದ್ಧಿ, ಜೋಗಿ, ಬೆಸ್ತರು ಮುಂತಾದ ನಿರ್ಧಿಷ್ಟ ಜಾತಿಗೆ ಸೇರಿದ ಪೂಜೆ ಕೈಗೊಳ್ಳುವ ಜನರಿರುತ್ತಾರೆ. ಇವರ ಮೂಲಕ ದೇವರನ್ನು ಪ್ರಾರ್ಥಿಸಿ ಬಂದಿರುವ ಕೇಡಿನ ಪರಿಹಾರಕ್ಕೆ ಜನ ಪೂಜೆ ಮಾಡಿಸುತ್ತಾರೆ. 'ಗೊಂಬ್ಬಿಯಮ್ಮ', 'ಉಡಸಲಮ್ಮ', 'ಹೊನ್ನಾಲಮ್ಮ' ಮುಂತಾಗಿ ದೇವತೆಗಳನ್ನು ಹೊಲದ ಬದುವಿನಲ್ಲಿ, ಹೊಳೆ ತೀರದಲ್ಲಿ ಸ್ಥಾಪಿಸಿ ಪೂಜೆ ಮಾಡಿ ಅಲ್ಲಲ್ಲಿಯೇ ವಿಸರ್ಜನೆ ಮಾಡುತ್ತಾರೆ. ಈ ಬಗೆಯ ಪೂಜೆಗಳು ಬೇರೆ ಬೇರೆ ಉದ್ದೇಶಕ್ಕಾಗಿ ಪ್ರತಿ ಹಳ್ಳಿಯ ಪ್ರದೇಶದಲ್ಲೂ ನಡೆಯುತ್ತಲೇ ಇರುತ್ತವೆ.

ಪೂಜೆಯಲ್ಲಿ ಬಾಲಗ್ರಹ ಚಿಕಿತ್ಸೆ, ಹುಚ್ಚು ಬಿಡಿಸುವುದರಿಂದ ಕಾಯಿಲೆ ಗುಣಪಡಿಸುವದು ಮುಂತಾದವುಗಳಿಗೆ ಸಂಬಂಧಪಟ್ಟದ್ದು. ಇವುಗಳಲ್ಲಿ ಮುಖ್ಯವಾಗಿ ಜೋಯಿಸರಲ್ಲಿ ಅಥವಾ ಗೊತ್ತಾದ ಇತರರಲ್ಲಿ ಚೀಟಿ ಅಥವಾ ತಗಡು ಬರೆಯಿಸುವ ಸಂಪ್ರದಾಯವಿದೆ. ತಗಡು ಬರೆಯುವವರು ಅವರವರ ಪದ್ಧತಿಯಂತೆ ದೇವರ ಹೆಸರು, ಒಂದು ವಿಗ್ರಹ ಇವುಗಳನ್ನು ಬರೆದು ಸುರುಳಿ ಸುತ್ತಿ ಅದನ್ನು ಪೂಜೆ ಮಾಡಿ ಕೊಡುತ್ತಾರೆ. ಭಕ್ತ ಅದನ್ನು ತಂದು ಮಣೆಯ ಮೇಲೆ ಇಟ್ಟು ಧೂಪ, ದೀಪ ಹೂಗಳಿಂದ ಪೂಜಿಸಿ ರಟ್ಟೆಗೋ, ಮುಂಗೈಗೋ, ಕತ್ತಿಗೋ ರಕ್ಷಣೆಗಾಗಿ ಕಟ್ಟಿಕೊಳ್ಳುತ್ತಾನೆ. ಇಂತಹ ಪೂಜೆಗಳು ಬಹುತೇಕ ಗಂಡು ವಾರಗಳಾದ ರವಿವಾರ ಗುರುವಾರ ಅಥವಾ ಹೆಣ್ಣು ದೇವತೆಗಳ ವಾರವಾದ ಮಂಗಳವಾರ, ಶುಕ್ರವಾರ ಜರುಗುವದು ವಾಡಿಕೆ. ಈ ಪೂಜಾ ವಿಧಾನಗಳಿಗೆ ಇಷ್ಟೇ ಹಣ ಎಂಬ ನಿಯಮಗಳಿಲ್ಲ. ಭಕ್ತರ ತೊಂದರೆಗೆ ಅನುಸಾರವಾಗಿ ಅಸಂಖ್ಯಾತವಾದ ಪೂಜಾ ವಿಧಾನಗಳಿವೆ.

ದೆವ್ವಗಳನ್ನು ಬಿಡಿಸುವದಕ್ಕಾಗಿ ಪ್ರಾರಂಭ ದೆಸೆಯಲ್ಲಿ ಚೀಟಿ ಬರೆಸಿ ಅದನ್ನು ಪೂಜಿಸಿ ದೆವ್ವ ಹಿಡಿದವರಿಗೆ ಕಟ್ಟುತ್ತಾರೆ. ಕಲ್ಲು ಹೊರೆಸಿ ನಿಲ್ಲಿಸುವದು, ಕಸಬರಗಿಯಿಂದ ಥಳಿಸುವುದು. ಪೂಜಾರಿ ಕೈಕೊಳ್ಳುವ ಕ್ರಮಗಳಾಗಿವೆ. ಈಗಲೂ ಅವು ಬಿಡದಿದ್ದರೆ ಇದಕ್ಕೆ ಪೂಜಾರಿ ಆಗಮಿಸಿ ನಾನಾ ಪೂಜೆಗಳನ್ನು ನಡೆಸುವನು. ಶಕ್ತಿ ಮತ್ತು ಶ್ರಮದ ಮೇಲೆ ಅವಲಂಬಿಸಿರುತ್ತದೆ. ಇದೆಲ್ಲದಕ್ಕೂ ಪೂಜೆ ಎಂದೆ ಗುರುತಿಸಿದ್ದಾರೆ. ಕೆಲವು ತೊಂದರೆಗಳು ಪೂಜಾರಿ ಅಥವಾ ಜೋಯಿಸರ ಪೂಜೆಯಿಂದ ಗುಣವಾದರೆ ಆಗ ಪೂಜಾರಿ ಆ ಪ್ರದೇಶದಲ್ಲಿ ಪ್ರಸಿದ್ಧಿಗೆ ಬರುವನು. ಇದರಲ್ಲಿ ಪೂಜಾರಿಯ ಬೇಕು ಬೇಡಿಕೆಗಳು ಜನರಿಗೆ ಗೊತ್ತಿಲ್ಲದಂತೆ ಹೇರಲ್ಪಡುವವು.

ಮೊದಲ ಘಟ್ಟದ ಈ ಕಾದಂಬರಿಗಳಲ್ಲಿ ಇನ್ನೂ ಒಂದು ವಿಶೇಷವೆಂದರೆ, ದೈವಿಕೃಪೆಗೆ ಒಳಗಾದ ಸ್ತ್ರೀಯರು ಸದಾ ತಮ್ಮೆದುರಿನಲ್ಲಿರುವ ಪತಿಯನ್ನೂ ಸಹ ದೇವರೆಂದು ಪೂಜಿಸುವ ಚಿತ್ರಣವಿದೆ. 'ಪರಮ ಪತಿವ್ರತೆಗೆ ಗಂಡನೆ ದೇವರು' ಎಂಬ ಉಲ್ಲೇಖಗಳು ಕಾದಂಬರಿಯಲ್ಲಿ ದೊರೆಯುತ್ತವೆ. ಗಂಡನನ್ನು ದೇವರೆಂದು ಪೂಜಿಸುವ ಪದ್ಧತಿ ಬಹು ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಇಂತಹ ಚಿತ್ರಣವುಳ್ಳ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅರುಂಧಮ್ಮ, ಸೀತಮ್ಮ ಪ್ರತಿ ದಿನ ಏಳುತ್ತಲೆ ಗಂಡನ ಪಾದವನ್ನು ಕಾಣದೆ ಕೆಲಸ ಹಿಡಿದವರಲ್ಲ. ಅರುಂಧಮ್ಮಳಂತೂ ಗಂಡನ ಪಾದ ತೊಳೆದ ನೀರನ್ನು ಊಟ ಮಾಡುವ ಮೊದಲು ತೀರ್ಥವಾಗಿ ಸ್ವೀಕರಿಸುತ್ತಿದ್ದಳು. ಈಗ ಇದೊಂದು ಅನಿಷ್ಟ ಪದ್ಧತಿ ಎಂಬುದು ನಿರ್ವಿವಾದ.

ಪೂಜಾ ವೈಶಿಷ್ಟ ಮತ್ತು ರೀತಿಗಳು ವಿಚಿತ್ರ. ಪ್ರತಿವರ್ಷವು "ಜೋಯಿಸರ ಮನೆಯಲ್ಲಿ 'ಪಾನಕ ಪೂಜೆ', ಜರಗುತ್ತಿತ್ತು. ಇದು ಬಹು ವಿಜೃಂಭಣೆಯಿಂದ ನಡೆಯುತ್ತಿತ್ತು. ಆ ಒಂದು ದಿವಸದ ಫಲಾಹಾರ

ಪೂಜೆಗೆ ಸುತ್ತಲೂ ಇರುವ ೮-೧೦ ಗ್ರಾಮಗಳಿಂದಲೂ ಬ್ರಾಹ್ಮಣರು ಬರುತ್ತಿದ್ದರು. ಇದು ವೈಶಾಖ ಶುದ್ಧ ಹದಿನೈದು ದಿವಸ ಇರುತ್ತಿತ್ತು"[೧೪] ಈ ಕುಟುಂಬದ ಸೊಸೆಯ ಗುಣಗಾನವು ಅಲ್ಲಿ ಕಾಣುತ್ತಿತ್ತು. ಜೊತೆಗೆ ಸೀತಮ್ಮನ ನಡೆ, ನುಡಿ ಆಚಾರ, ವಿಚಾರಗಳ ವಿನಿಮಯವೇ ಮೊತ್ತೊಂದು ದಿನದ ಬೆಳಗ್ಗೆ ಜರುಗಿದ 'ಬೃಂದಾವನ ಪೂಜೆ'ಯು ಜರುಗಿದ್ದು ಇದೆ. "ಸೀತಮ್ಮನ ಪ್ರಜ್ಞಾಹೀನಸ್ಥಿತಿಗೆ ಭೂಗ್ರಹಚೇಷ್ಟೆ ಇರಬಹುದೆಂದು ಪೂಜೆಯನ್ನು ಮೂರು ಸಾರಿ ಹಾಕಿಸಿದರು."[೧೫] ಇನ್ನೂ ಕೆಲವು ಪೂಜಾ ವಿಧಾನಗಳನ್ನು ಕಾಣಬಹುದು.

ಸೀತಮ್ಮನ ಅತ್ತೆ ಅವಳಿಗೆ ಮೇಲನೋಟಕ್ಕೆ "ಹದಿನೆಂಟು ದೇವರಿಗೆ ಹರಕೆ ಹೊತ್ತನಲ್ಲೆ ಕೊಲ್ಹಾಪುರದ ಅಮ್ಮನ ಗುಡಿಗೆ ತಂಬಿಟ್ಟಿನ ದೀಪಾ ವಾರಕ್ಕೊಮ್ಮೆ ಹೊತ್ತನಲ್ಲಮ್ಮ"[೧೬] ಎಂದು ನಮ್ಮ ಭಾಗಕ್ಕೆ ಯಾರು ಇಲ್ಲವೆಂದು ಸೀತೆಯ ಬಗ್ಗೆ ಬರುವಲ್ಲಿ. ೧೮ ದೇವರಿಗೆ ಹರಕೆಯು ಇಲ್ಲಿ ಬರುವದು. ಹರಕೆ ಭಕ್ತರಿಗೆ ಭಾರವಾದ ಸಂದರ್ಭಗಳು ಅಧಿಕ ಪ್ರಮಾಣದಲ್ಲಿವೆ. ಪೂಜಾರಿ ಆದಷ್ಟು ತನ್ನ ಹೊಟ್ಟೆ ಹೊರುವುದು ತನ್ನ ಉದ್ದೇಶವಾಗಿಸಿಕೊಂಡಿರುವುದು ಕಾಣುವುದು.

ಶಾಪ ಇದು ಪುರಾಣ ಇತಿಹಾಸಗಳ ಕಾಲದಿಂದಲೂ ನಡೆದು ಬಂದಿದೆ. ಶಾಪ ಎಂದರೆ ಒಬ್ಬರಿಗೆ ಕೇಡನ್ನು ಬಯಸುವದು. ಶಾಪ ಸಮಾಜದ ನ್ಯಾಯ, ನೀತಿಯನ್ನು ಧರ್ಮದ ಸತ್ಯತೆಯನ್ನು ಕಾಯ್ದುಕೊಂಡು ಬರಲು ಸೃಷ್ಟಿಯಾಯಿತು. ಮೂಲದಲ್ಲಿ ದೇವ-ದೇವತೆಗಳು, ಋಷಿ-ಮುನಿಗಳು ಶಾಪ ಹಾಕುತ್ತಿದ್ದರು. ಇವು ಧರ್ಮವನ್ನು ಅವಲಂಬಿಸಿದ್ದವು. ಸಾಮಾನ್ಯವಾಗಿ ಅನ್ಯಾಯಕ್ಕೊಳಗಾದ, ನೋವನ್ನುಂಡಿರುವ ಹೃದಯಗಳು ತಮಗೆ ಅನ್ಯಾಯ ಮಾಡಿದವರಿಗೆ ಕೇಡು ಬಯಸುವದೇ ಅಲ್ಲವೇ. ಅವರು ನುಡಿಯುವ ಕೆಟ್ಟ ನುಡಿಗಳನ್ನು 'ಶಾಪ' ಎಂದು ಕರೆಯಲಾಗಿದೆ. ಕ್ರಮೇಣ ಪಟ್ಟಭದ್ರ ಹಿತಾಸಕ್ತಿಗಳು ಸವರ್ಣಿಯರು ಈ ಶಾಪ ಸಂಪ್ರದಾಯವನ್ನು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಂಡಿರುವದರಿಂದ ಹಿಂದುಳಿದ ಮತ್ತು ಕೆಳವರ್ಗದ ಸ್ತ್ರೀಯರು ಮಾನಸಿಕ ಸ್ಥಿತಿಯಿಂದ ಮೇಲೆ ವಿಳಲಾಗಲಿಲ್ಲ.

ಮೊದಲ ಘಟ್ಟದ ಕಾದಂಬರಿಗಳಲ್ಲಿ ಅನ್ವಯಿಸಿಕೊಂಡಾಗ ಇಲ್ಲಿ ಸ್ತ್ರೀ-ಪುರುಷರಿಗೆ ಶಾಪ ಹಾಕಿದ ಹಲವಾರು ಘಟನೆಗಳು ಕಾಣುವವು. ಒಂದು ಕಾಲದಲ್ಲಿ ಸ್ತ್ರೀಯನ್ನು ದೇವತೆಯೆಂದು ಪರಿಗಣಿಸದೆ ಇದ್ದರೂ ಅವರು ದೇವರಲ್ಲಿ ದೃಢನಂಬಿಕೆ ಉಳ್ಳವರು. ಪ್ರತಿಯೊಂದು ಕ್ರಿಯೆಯಲ್ಲೂ ದೇವರ ಆರಾಧನೆ, ಅರ್ಚನೆ, ವ್ರತ ನೇಮಗಳಲ್ಲಿಯೇ ಜೀವನ ಸಾಗಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಂದಿರಾ, ವಾಗ್ದೇವಿ, ಭಾಗೀರಥಾಬಾಯಿ, ಸಭಾ, ಸುಶೀಲೆ, ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಗಳಲ್ಲಿ ಹಲವಾರು ಕಡೆ ಶಾಪ ಪ್ರಸಂಗಗಳು ಬರುವವು.

ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಗೋಪಾಲನಿಗೂ ಅರುಂಧಮ್ಮಳ ಗಂಡನಿಗೂ ಬಿದ್ದ ಮನೆಯ ಗೋಡೆಕಟ್ಟಲು ನ್ಯಾಯ ಪ್ರಾರಂಭವಾದಾಗ ಗಂಡನ ಮಾನ ಹಿಡಿದು – 'ಗೋಪಾಲ ನೀನು ಚಿಕ್ಕವನು. ಆದರೂ ಚಿಂತೆಯಿಲ್ಲ ಹೇಳಿದವರ ಮಾತನ್ನು ಕೇಳಿ ಮಾನಿಷ್ಠರಾದ ನಮ್ಮ ಮಾನವನ್ನು ಕಳೆಯಬೇಡ. ನಿನ್ನ ಕಾಲಿಗೆ ನಮಸ್ಕಾರ ಮಾಡುತೇನಪ್ಪ ಎಂದಳು ಇದಕ್ಕೆ ದುರುಳನಾದ ಗೋಪಾಲ ಈ ಭಿನ್ನಾಣವನ್ನು ಯಾರಿಗೆ ಕಲಿಸುತ್ತೀಯೇ? ಸೂಳಿಯ ಹಾಗೆ ಬಂದು ನಿಂತು ಕೈ ಬಾಯಿ ತಿರುಗಿಸಿಕೊಂಡು ಮಾತನಾಡುವದಕ್ಕೆ ಬಂದಿಯೇ? ಎಂದನು'. ದುಖಃ ತಪ್ತಳಾದ ಅರುಂಧಮ್ಮನ ಕಣ್ಣಲ್ಲಿ ನೀರು ಅದನ್ನು ಸಹಿಸಿಕೊಂಡ ಅರುಂದಮ್ಮಳ ತಾಯಿಯು "ಎಲಾ ಗೋಪಾಲ ನಾನು ನಿನ್ನನ್ನು ಬೈಯುವದಿಲ್ಲ, 'ನಿನ್ನಲ್ಲಿ ಸತ್ಯವಿದ್ದರೆ ನಮಗೆ ಹುಟ್ಟುವ ಕೂಳು ಹುಟ್ಟಬೇಡ' ನನ್ನ ಎರಡು ಮಕ್ಕಳು ಸುಟ್ಟುಬೂದಿಯಾಗಲಿ. ನಮ್ಮಲ್ಲಿ ಸತ್ಯವಿದ್ದರೆ ನಾನು ಹೇಳುತ್ತೇನೆ ಕೇಳು ಈ ಸೂರ್ಯನಾರಾಯಣ ಸಾಕ್ಷಿಯಾಗಿದ್ದಾನೆ. ನಾನು ಪತಿವ್ರತೆ, ನಿನ್ನ ಎರಡು ಕಾಲಿಗೂ ಕುಷ್ಟರೋಗ ಬಂದು ಬಿದ್ದುಹೋಗುತ್ತದೆ. ನಿನ್ನ ನಾಲಿಗೆ ಸೆಳೆದು ಹೋಗುತ್ತದೆ, ನೀರೂ, ನೆರಳೂ ಇಲ್ಲದ ಕಡೆ ನೀನು ಪ್ರಾಣ ಬಿಟ್ಟು ಅಂತರ್ಪಿಶಾಚಿಯಾಗುತ್ತಿ"[೧೭] ಎಂದು ಶಾಪವಿತ್ತಳು. ಮುಂದೆ ಸ್ವಲ್ಪ ದಿನದಲ್ಲಿ ಗೋಪಾಲನಿಗೆ ಕಾಲು ಊತ ಬಂದು ದವಾಖಾನೆಗೆ ಹೋಗುವಾಗ ರಾಮಸಮುದ್ರದಿಂದ ಚಾಮರಾಜ ನಗರಕ್ಕೆ ಹೋಗುವಾಗ ಪ್ರಾಣವೇ ಹಾರಿ ಹೋಯಿತು.

ಇದೇ ಕಾದಂಬರಿಯ ವರದನೆಂಬ ಶೂದ್ರ ಅರುಂಧಮ್ಮನಿಗೆ ಎಂಟು ಖಂಡಗ ಭತ್ತವನ್ನು ಕೊಟ್ಟು, ಸ್ವಲ್ಪ ದಿನದ ತರುವಾಯ ಮರಳಿಕೊಡುವಾಗ ಇಪ್ಪತ್ತು ಕಂಡಗವೆಂದು ವಾದಿಸಿದ. ಅರುಂದಮ್ಮ ಸಾಕ್ಷೀಕರಿಸಿ, "ನೀನು ಹುಟ್ಟಿದ ೬೦ ವರುಷಕ್ಕೆ ನಿನಗೆ ನೀನು ಎತ್ತಿಕೊಂಡಿರುವ ಒಂದು ಗಂಡು ಮಗುವಾಗಿದೆ. ನಿನ್ನ ಸುಳ್ಳಿಗೆ ಆ ಮಗು ಸಾಕ್ಷಿಯಾಗಿರಲಿ. ಈ ಮಾತನ್ನು ಕೇಳಿದ ಶೂದ್ರ ಬಾಯಿಗೆ ಬಂದ ಹಾಗೆ ಆಡಿಕೊಳ್ಳುತ್ತಾ ಮನೆಗೆ ಹೋದನು. ಒಂದು ದಿನ ಇವನ ಹೆಂಡತಿ ಮಗು ರಾತ್ರಿ ಮಲಗಿರುವಾಗ ಒಳಗೆ ಗೆದ್ದಲು ತಿಂದು ಹೋಗಿದ್ದ ಒಂದು ತೊಲೆ ಮುರಿದು ಮಗುವಿನ ಮೇಲೆ ಬಿತ್ತು. ಆ ಕ್ಷಣದಲ್ಲೆ ಮಗು ಸತ್ತು ಹೋಯಿತು. ಆ ಹೆಂಗಸು ಅರೆಜೀವವಾಯಿತು"[೧೮] ಈ ಸಂಗತಿಯು ಅರುಂಧಮ್ಮಳ ಶಾಪದ ಫಲವೆಂದು ಸುತ್ತು ಹಳ್ಳಿಯಲ್ಲಿ ಸುದ್ಧಿಯಾಯಿತು.

ಅಲೌಕಿಕ ಶಕ್ತಿಯನ್ನು ನಂಬಿಕೊಂಡಿರುವ ಮಾನವ ತನಗಾಗಿಯೋ ಇಲ್ಲ ತನ್ನವರ ಸುಖಃ ಸಮೃದ್ಧಿಗಾಗಿಯೋ ಕೆಲವು ಸಂದರ್ಭಗಳಲ್ಲಿ ಉಪವಾಸವಿದ್ದು ದೇವರನ್ನು ಆಚರಿಸುತ್ತಾನೆ. ಇದನ್ನೆ ನಾವು ವ್ರತಾಚರಣೆ ಎಂದು ಕರೆಯುತ್ತೇವೆ. ವ್ರತ ಆಚರಣೆಗೆ ಹೆಚ್ಚಾಗಿ ಅಂಟಿಕೊಂಡಿರುವರು ಹೆಣ್ಣು ಮಕ್ಕಳು. ಅದರಲ್ಲೂ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ವಾರಕ್ಕೆ ಎರಡು ಮೂರು ದಿನ ಉಪವಾಸದಲ್ಲಿಯೇ ಕಳೆಯುತ್ತಾರೆ. ಇದಕ್ಕೆ ಅವರು ದೇವರಲ್ಲಿಟ್ಟ ಅಚಲವಾದ ನಂಬಿಕೆಯೇ ಕಾರಣ. ಇನ್ನು ವಿಧವೆಯರ ಬಗ್ಗೆ

ಹೇಳುವದಾದರೆ ದಿನಕ್ಕೆ ಒಂದೆ ಊಟ ಮಾಡಿ ವ್ರತದಲ್ಲಿಯೇ ಜೀವನ ಕಳೆಯಬೇಕೆಂಬ ಕಟ್ಟಳೆಯು ಇದ್ದದ್ದು ಅಲ್ಲಲ್ಲಿ ಕಾಣುವದು. ಆದರೆ ಕಾಯಕದಲ್ಲಿ ಶಿವನನ್ನು ನೆನೆಯುವ ಕೆಳವರ್ಗದ ಸ್ತ್ರೀಯರನ್ನು ಈ ವ್ರತಗಳು ಕಾಡುವದೇ ಇಲ್ಲ. ವ್ರತ ಆಚರಣೆಗಳನ್ನು ಅಳವಡಿಸಿಕೊಂಡು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದವರಲ್ಲಿ ಬ್ರಾಹ್ಮಣರು, ಪುರೋಹಿತರು, ಜೋಯಿಸರು, ಹಾಗೂ ಕುಲಕರ್ಣಿಯ ಜಾತಿಯ ಸ್ತ್ರೀಯರು. ಈ ನೆಲೆಯಲ್ಲಿ ಚಿತ್ರಣಗೊಂಡಿರುವ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಅರುಂಧಮ್ಮ ಬಾಲ್ಯದಿಂದಲೆ ಒಳ್ಳೆಯ ಗಂಡ ಸಿಗಲೆಂದು 'ಗೌರಿವ್ರತ' ಮಾಡಿ ಅದಕ್ಕೆ ತಕ್ಕ ಫಲ ಎಂಬಂತೆ ಒಳ್ಳೆಯ ಗಂಡನನ್ನು ಪಡೆದಳು. ಈ ಘಟನೆಗೆ ಸ್ವಂತ ಮಗಳಾದ ವೆಂಕಮ್ಮಳೆ ಸಾಕ್ಷೀಕರಿಸಿದ್ದಾಳೆ.

ಇಂದಿರಾಬಾಯಿ ಕಾದಂಬರಿಯ "ಭೀಮರಾಯ ಅಂಬಾಬಾಯಿ ಸಂಗಡ ಆಲೋಚಿಸಿ ಅವಳ ಸಮ್ಮತಿಯನ್ನು ಪಡೆದು, ಸ್ವಂತ ವ್ಯಾಪಾರವನ್ನೆ ನಡೆಸಲಾರಂಭಿಸಿದ, ದೇವರ ಪೂಜೆ, ಸಂತರ್ಪಣೆ, ಯಕ್ಷಗಾನ ಪ್ರಸಂಗವೇ ಮುಂತಾದ ಸತ್ಕರ್ಮಗಳನ್ನು ಮೊದಲಿಗಿಂತಲೂ ಇನ್ನಷ್ಟು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ನಡೆಸುತ್ತಾ ಬಂದನು."[೧೯]

ಅದೇ ರೀತಿಯಾಗಿ ಭೀಮರಾಯನು ಪೀತಾಂಬರ ಉಟ್ಟು ಮದುವೆ ಮಂಟಪಕ್ಕೆ ಬಂದಾಗ' 'ಉದ್ದಿನ ಮುಹೂರ್ತ' ಮಾಡಿಸಿದನು ಪುರೋಹಿತ. ಅದಕ್ಕೆ ಮಧ್ಯಾಹ್ನ ಮುಹೂರ್ತವೆಂಬ ನಂಬಿಕೆ ಇದೆ. ಇದು ಶೋಡಷ ಸಂಸ್ಕಾರಗಳಲ್ಲಿ ಒಂದು.

ಇಂದಿರೆಯ ರಮಾಕಾಂತನನ್ನು ಪಡೆಯಬೇಕೆಂಬ ಛಲ ಹೊಂದಿದ್ದಳು. ರಮಾಕಾಂತನು ಪ್ರೀತಿಯ ಮುತ್ತನ್ನಿಕ್ಕಿ 'ರುಕ್ಮಿಣೀ ಸ್ವಯಂವರ' ಪಾರಾಯಣದ ಪ್ರಸಂಗ ಕೇಳಿದಾಗ ಅವಳು ನಾಲ್ಕು ತಿಂಗಳಿಂದ ಪಾರಾಯಣ ಮಾಡುತ್ತಿದ್ದೇನೆ. ಅಷ್ಟೆ ಅಲ್ಲ. ರಮಾಕಾಂತನನ್ನು ನೋಡುತ್ತಾ "ಈ ಮೋಹನಾಂಗನ ಸ್ಪರ್ಶ ಮಾಡುವ ಅಧಿಕಾರವು ನನಗೆ ಪ್ರಾಪ್ತವಾದರೆ ಸತ್ಯನಾರಾಯಣ ವ್ರತ ಮಾಡುವೆನೆಂದು ಬೇಡಿಕೊಂಡಿದ್ದೇನೆ"[೨೦] ಎಂದು ಹೇಳುವಳು. ಮನೋಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಈ ರೀತಿಯಾದ ವ್ರತಾಚರಣೆಗಳು ಜರಗುತ್ತಿದ್ದುದಕ್ಕೆ ಅಂದಿನ ದಿನಮಾನದ ಜನರ ನಂಬಿಕೆಗಳೇ ಕಾರಣ.

'ಇಂದಿರಾ' ಕಾದಂಬರಿಯ 'ಭಟ್ಟ ಶಾಮಯ್ಯ' ಭಟ್ಟರು ಸೂಪಶಾಸ್ತ್ರ ಸಂಪನ್ನರೇ ಆಗಿದ್ದರು."[೨೧] ಭಟ್ಟಶಾಮರ ಗುಣ ಕರ್ಮಗಳು ಬಳಕೆಯಲ್ಲಿರುವ ನಿದರ್ಶನ ಕಾದಂಬರಿಯಲ್ಲಿ ಕಾಣುವದು. ಇದೆ ಕಾದಂಬರಿಯಲ್ಲಿ 'ಧಾರವಾಡ ದೇಶದಲ್ಲಿ – ಕೂಡಾ ಕೆಲವು ಪಂಡಿತರು 'ಅಳಲಿ ಭಕ್ತಿ' ಎಂಬ ನ್ಯಾಯದಿಂದ ತಮ್ಮ ಕೈಲಾದ ಮಟ್ಟಿಗೆ ಈ ಮಹತ್ಕಾರ್ಯಕ್ಕೆ ನೆರವಾಗುತ್ತಿರುವರೆಂದು 'ರಾಜಹಂಸ'ವು ಹೇಳುವದು'.

ಇಂದಿರಾ ಕಾದಂಬರಿಯ ಸರದಾರ ಸಿಂಗನ ತಂದೆ ಕಾನಪೂರದ ಬಂಡಿನಲ್ಲಿ ಮಡಿದಿದ್ದ ತಂದೆಯ ವ್ರತ ಮೂಢನಂಬಿಕೆಯ ಕಥೆ ಜನರಿಗೆ ಹೇಳುತ್ತಿದ್ದ. ಯಾರಿಗಾದರೂ ಕಸಬಂದಿರಲಿ, ಕಾಲುದೂಳಿಯಾಗಿರಲಿ. ಅದಕ್ಕೆ ಇವನು "ಬಾವಾ ಆಯಾ, ರೋಟಿ ಕಾಯಾ, ಪಾನಿ ಪೀಯಾ ಚಲ್‌ಗಯಾ"[೨೨] ಎಂಬ ಮಂತ್ರ ಹಾಕುತ್ತಿದ್ದನು.

ತ್ರಿವೇಣಿ ಸಂಗಮವಾದ ಕೃಷ್ಣಾ, ಗೋದಾವರಿ, ನರ್ಮದಾ ಮಹಾನದಿಗಳಲ್ಲಿ ಸ್ನಾನ ಮಾಡುವ ಸಮಯದಲ್ಲಿ ಸಂಗಮ ಕ್ಷೇತ್ರ ನೋಡುತ್ತಾ 'ಗಂಗೆ ಮಂಗಲತರಂಗೆ' ಎಂದು ಗರ್ಜಿಸಿ ಸ್ನಾನ ಮಾಡುವ ಸ್ತ್ರೀ ಪುರುಷರು ಅಸಂಖ್ಯ ಸಮುದಾಯದವರನ್ನು ಆ ನದಿ ತಟದಲ್ಲಿ ನೋಡಬಹುದು.

ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಸೀತಮ್ಮ ಪ್ರತಿದಿನ ಮಲಗುವಾಗ, ತೊಲೆಯೇ ತೊಲೆಯೇ, ನಾನೇ ಮರ, ನೀನೆ ಮನುಷ್ಯ, ಹಾವಿಗೆ ಹರಿಯ ಆಣೆ, ಚೇಳಿಗೆ ಬೈರವನ ಆಣೆ, ಇರುವೆ ಆಣೆ ಎಂಬತ್ತು ಕೋಟಿ ಜೀವಾಶಿಗೂ ಬಿದ್ದ ಬಳಿ ಬಿಟ್ಟು ಇತ್ತಿತ್ತ ಬಂದರೆ ತಾಯಿ ಮುದ್ರವ್ವೆಯ ಪಾದದಾಣೆ, ಹರಾ ಎಂಬ ಬಲ ಮಗ್ಗಲು ಹೊಡಿದೆ."[೨೩] ಈ ರೀತಿ ಮಂತ್ರ ಉವಾಚ ಮಾಡುವದು ಸೀತಮ್ಮ ರೂಢಿಸಿಕೊಂಡಿದ್ದಳು. ಈ ಮಂತ್ರ ಅವಳಿಗೆ ಅವಾಂತರವನ್ನೆ ಸೃಷ್ಟಿಸಿದೆ.

'ವಾಗ್ದೇವಿ' ಕಾದಂಬರಿಯ ಚಂಚಲನೇತ್ರರು ವಾಗ್ದೇವಿಯ ಹೆರಿಗೆ ಆದ ತರುವಾಯ ಗಂಡು ಕೂಸು 'ವೃದ್ಧಿ ಸೂತಕ' ನಿವಾರಣೆಗಾಗಿ ಹನ್ನೆರಡನೆ ದಿನ ಶಿಶುವಿನ ಕಿವಿ ಚುಚ್ಚಿ ತೊಟ್ಟಿಲಲ್ಲಿ ಹಾಕಿ ಜಾತಕ ಕರ್ಮವನ್ನು ತೀರಿಸಿದರು."[೨೪] ಒಬ್ಬ ಮಠದ ಅಧಿಪತಿಯೂ ಕ್ರಿಯಾದಿಗಳನ್ನು ಮಾಡಿದ್ದು ತರ್ಕನೀಯ ವಿಚಾರ. ಇದೆ ಕಾದಂಬರಿಯ ರಾಮದಾಸನು ಕೊಲೆ, ಕೋರ್ಟು ವಿಚಾರಕ್ಕೆ ಹೇಳುವ ಮಾತು "ರಾಯರೇ! ಮಂತ್ರವಾದಿಯ ಕೈಗೆ ಸಿಕ್ಕದ ದೈವವುಂಟೇ? ಈ ತನಕ ಕ್ಷುದ್ರ ದೇವತೆ ! ಸಣ್ಣದೊಂದು ಮಂತ್ರದ ತುಂಡಿನಿಂದ ಕಟ್ಟಿಬಿಡಬಹುದು."[೨೫] ಮಾಟ, ಮಂತ್ರದ ವಿಚಾರದ ಸಂಗತಿ ಬರುವದು. ಭೀಮಾಜಿಯ ಮಾಟದ ಪ್ರತಾಪ ಮುಂದೆ ಕಂಡುಬರುವುದು.

ಆಂಧ್ರಪ್ರದೇಶದ ಆನಂದ ಬಟಜಿ, ಶ್ರೀರಂಗಪಟ್ಟಣದ ಗಿರಿಯಣ್ಣ ಕೊಯಿಮತ್ತೂರು ರಸ್ತೆಗುಂಟ ಬರುವಾಗ ಸೀತಮ್ಮ ಅಂತ್ಯ ಸಂಸ್ಕಾರ ಸರಿಯಾಗಿ ಜರುಗದ ಸಂದರ್ಭ ಬರುವದು. ಭಟಜಿ ತನ್ನ ಮಡಿಚೀಲವನ್ನು ಗಿರಿಯಣ್ಣನ ಕೈಗೆ ಕೊಟ್ಟು ಮಡಿಪಂಜೆಯನ್ನುಟ್ಟು ನದಿಯಲ್ಲಿ ಸ್ನಾನ ಮಾಡಿ ಹಣೆಗೆ ವಿಭೂತಿಯನ್ನು ಮಡಿಚೀಲದಲ್ಲಿದ್ದ ಕುಂಕುಮವನ್ನು ಇಟ್ಟುಕೊಂಡು ಗಟ್ಟಿಯಾಗಿ ಕೂಗಿ ಏನೋ ಮಂತ್ರವನ್ನು ಹೇಳುತ್ತಾ ನಿಂತುಕೊಂಡಿದ್ದ. ತರುವಾಯ ಕೂತುಕೊಂಡು ಬೆಂಕಿಯ ಕಡೆಗೆ ತಿರುಗಿದನು. ಮತ್ತು ಎರಡು ಕಡೆಗೆ ಬೆಳ್ಳಿ ಕಟ್ಟನ್ನು ಹಾಕಿದ್ದ ಒತ್ತೊಳುದ್ದ ಕರೀಬೆತ್ತವನ್ನು ತೆಗೆದುಕೊಂಡು ನೀರು ನೋಡುತ್ತಿದ್ದ ತನ್ನ ಜುಟ್ಟಿನಿಂದ ನೆಲದ ಮೇಲೆ ಬಡಿಯುತ್ತಾ ಮನಸು ಚಿತ್ತದಿಂದ ಅನೇಕ ದೇವತೆಗಳ ಹೆಸರು

ಹೇಳುತ್ತಾ “ಹ್ರಾಂ ಹ್ರೀಂ ಹ್ರೋಂ, ಪಟ್ಟುಸ್ವಾಃ ಎನ್ನುತ್ತಾ ಮುವತ್ತ ಮೂರು ಕೋಟಿ ದೇವತೆಗಳ ಕಟ್ಟುವೆ, ಬೂತ, ಬೇತಾಳ, ಬ್ರಹ್ಮರಾಕ್ಷಸ, ಶಾಕಿನಿ, ಢಾಕಿನಿ, ಪ್ರೇತ ಪಿಶಾಚಿಗಳನ್ನು ಕಟ್ಟುವೆ, ದುಷ್ಟರ ಕಟ್ಟುವೆ, ನೀಚರ ಮನವನು ಕಟ್ಟುವೆ ಓಂ ಪಟುಸ್ವಾಃ ಓಂ ಪಟುಸ್ವಾಃ ಓಂ ಪಟುಸ್ವಾಃ ಎಂಬ ಮಂತ್ರ ಪಠಣದಿಂದ ಸೀತಮ್ಮನೊಡನೆ ಜೀವನದ ಯಶೋಗಾಥೆ ಅರಿಯುವ ಪ್ರಯತ್ನ ತಂತ್ರ-ಯಂತ್ರ ಮಂತ್ರಗಳ, ಸಮಾಗಮದ ಸಂಗತಿಯೇ ಸರಿ. ಸುಡುವ ಶವ ಸುತ್ತು ಹಾಕುವದು, ‘ಬೀಜಾಕ್ಷರಗಳನ್ನು’ ಬರೆಯುವದು, ‘ವೀರಾಸನವನ್ನು’ ಹಾಕುವದು, ಹಲವಾರು ರೀತಿ ರಿವಾಜ ಅನುಸರಿಸಿದ್ದು ಇಲ್ಲಿ ಕಾಣುವದು. ಸ್ತ್ರೀ ಜನ್ಮವು ಹೊಳೆಯಲ್ಲಿ ಸ್ನಾನ ಮಾಡಿ ಬಂದಿತು. ತನ್ನ ಬೆತ್ತದಿಂದ ಭಟಜಿ ನಿವಾಳಿಸಿ ಅವಳ ಸುತ್ತಲು ಗೀಟು ಹಾಕಿ ತನ್ನ ಭರಣಿಯ ಕುಂಕುಮ ಇಟ್ಟು ವಿಶೇಷವಾಗಿ ಮಂತ್ರಿಸಿದನು. “ಆಗ ಊರ ಕಡೆಯಿಂದ ದೊಡ್ಡದಾಗಿ ಕೂಗಾಯಿತು ‘ಅಯ್ಯೋ ಅಯ್ಯೋ ಎಂದು ಘಟ್ಟಿಯಾಗಿ ವ್ಯಕ್ತಿ ಕೂಗುತ್ತಾ ಓಡಿ ಓಡಿ ಬರುತ್ತಾನೆ. ಅಲ್ಲಿ ಎಡವಿಬೀಳುತ್ತಾ ‘ಅಮ್ಮಾ ಉರಿ ತಾಯಿ ಉರಿ ತಪ್ಪಾಯಿತು ತಪ್ಪಾಯಿತು”[೨೬] ಎಂದು ಅರಚುವ ಸಂದರ್ಭ ಭಟಜಿಯ ಮಂತ್ರದಂಡದ ಮಂತ್ರಶಕ್ತಿಯ ಮೂಲಕ ಎಂಬುದು ಅಶ್ಚರ್ಯದ ಸಂಗತಿ. ಇಲ್ಲಿ ಮಾಟ ಮಂತ್ರದ ವಸ್ತುಗಳು ನ್ಯಾಯ ತೀರ್ಮಾನಕ್ಕೆ ಪೂರಕವಾಗಿರುವವು. ಅಪರಾಧ ಪತ್ತೆಗಾಗಿ ಬಳಕೆಯಾಗಿದ್ದು ಕಾಣುತ್ತೇವೆ. ಇದು ಅಂದಿನ ಕಾಲದಲ್ಲಿದ್ದ ಅತಿಮಾನುಷ, ಅಮಾನುಷ ಶಕ್ತಿಗಳಲ್ಲಿಯ ಶ್ರದ್ಧೆ ವಿಶ್ವಾಸವನ್ನು ಪರಿಚಯಿಸುವವು. ಹಾಗೆ ಗಮನಿಸಿ ನೋಡಿದರೆ ಶುದ್ಧ ಧಾರ್ಮಿಕತೆಗೂ ಧರ್ಮದ ಹೆಸರಿನಲ್ಲಿ ಈ ವ್ರತಾಚರಣೆಗಳನ್ನು ಕಾಣುತ್ತೇವೆ.

ಸಮಾಜ ಮತ್ತು ವಿಧಿಕ್ರಿಯೆಗಳು:

ಸಮಾಜದಲ್ಲಿ ವಾಸವಿರುವ ಪ್ರತಿಯೊಂದು ಕುಟುಂಬವು ಬೇರೆ ಬೇರೆ ತೆರನಾದ ಸಂಸ್ಕಾರ ಮತ್ತು ವಿಧಿಕ್ರಿಯೆಗಳನ್ನು ಹೊಂದಿರುತ್ತವೆ. ಮಾನವನ ಹುಟ್ಟಿನಿಂದ ಚಟ್ಟದವರೆಗೂ ಭಿನ್ನ ಭಿನ್ನ ರೂಪದಲ್ಲಿ ಅವು ಪ್ರಸ್ತುತತೆ ಪಡೆದುಕೊಂಡಿರುವವು. ಅವುಗಳಲ್ಲಿ ವಿಧಿಕ್ರಿಯೇಗಳು ತಮ್ಮ ಪಾಲನ್ನು ಪಡೆದಿವೆ. ಜನನ, ನಾಮಕರಣ, ವಿವಾಹ, ಮರಣಗಳನ್ನು ಕುರಿತು ಕೆಲವೊಂದು ಘಟನೆಗಳು, ಸಂದರ್ಭಗಳು ಬದುಕಿನ ಹಿನ್ನೆಲೆಯಲ್ಲಿ ಅಂದಿನ ಕಾಲಘಟ್ಟದಲ್ಲಿ ವಿಧಿಕ್ರಿಯೆಗಳು ಪ್ರಸ್ತಾಪವಾಗಿರುವದನ್ನು ಕಾಣಬಹುದು. ವಿಧಿಕ್ರಿಯೆಗಳು ಜನರ ನಂಬಿಕೆಯ ಒಂದು ಭಾಗವಾಗಿ ಕಾಣುವುವು.

ಜನನದ ಆರಂಭದಿಂದಲೆ ವಿಧಿಕ್ರಿಯೆಗಳು ಆರಂಭವಾಗುತ್ತವೆ. ವಿಧಿ ಬರಹ, ಶಟಿಗಿ ಹಣೆಬರಹ ಬರೆಯುವದು, ತೊಟ್ಟಿಲ ಕಾರ್ಯಕ್ರಮ, ನಾಮಕರಣ ಹೀಗೆ ಹಲವಾರು ಕಾರ್ಯಕ್ರಮಗಳು ಜರುಗುವವು. ಭಾರತೀಯ ಮಹಿಳೆ ತಾಯ್ತನದ ಹಂಬಲವನ್ನು ಹೊತ್ತು ಜೀವಿಸುವಳು. ಸ್ತ್ರೀ ತಾಯಿಯಾಗಿ

ಮಗುವಿನೊಂದಿಗೆ ಸಂತಸವನ್ನು ಕಾಣುವದು ಪ್ರತಿಯೊಬ್ಬ ತಾಯಿಯ ಬಯಕೆ. ಸ್ತ್ರೀ ತಾಯಿಯಾಗಲು ಬಸಿರು, ಹೆರಿಗೆಗಳೇ ಮೂಲ. ಇದರಲ್ಲಿ ಪುರುಷರ ಒತ್ತಾಸೆಗಳು ಒಳಸುಳಿಯಲ್ಲಿ ಇಣಕುವವು.

ಬಸರಿನಲ್ಲಿ ಕಾಣುವ ಸುಖಃ ಸಂತೋಷ ಹೆರಿಗೆ ನೋವಿನಲ್ಲಿ ಕ್ಷೀಣಿಸುವದಾದರೂ ಮಗುವನ್ನು ನೋಡಿದ ಮೇಲೆ ಆ ಸುಖ ಆ ಸಂತೋಷ ಇಮ್ಮಡಿಗೊಳ್ಳುತ್ತದೆ. ಸ್ತ್ರೀ ಬಸಿರಿನಲ್ಲಿ ಕಂಡಿರುವ ಸುಖವನ್ನು ಮತ್ತೊಂದರಲ್ಲಿ ಕಂಡಿಲ್ಲ. ಅಂತೆಯೆ ಮಹಿಳೆ ಬಸಿರನ್ನು ಬಯಸಿ ಬರಮಾಡಿಕೊಂಡಿದ್ದಾಳೆ. ಈ ಬಯಕೆಯ ಹಿಂದೆ ಪುರುಷ ಪ್ರಧಾನ ಧೋರಣೆ ಒಳಗೊಂಡಿರುವದರಲ್ಲಿ ಅನುಮಾನವೆ ಇಲ್ಲ.

ನಾಮಕರಣ ವಿಷಯದಲ್ಲಿ ಭಾರತೀಯ ಸಂಪ್ರದಾಯದ ಪದ್ಧತಿ ಕಾಣುವದು. ಇಂದಿರಾಬಾಯಿ ಕಾದಂಬರಿಯ 'ಅಂಬಾಬಾಯಿ' 'ಗಜ ಕೇಸರಿ' ಜಾತಕದವಳಾದ ಸೊಗಸಾದ ವಿವರಣೆ ಕಾಣುವದು. ಓದುಗರನ್ನು ಆಕರ್ಷಿಸುವವು.

ಇಂದಿರಾಬಾಯಿ ಕಾದಂಬರಿಯ ಅಂಬಾಬಾಯಿ ಗರ್ಭಧಾರಣೆ ಸಂದರ್ಭದಲ್ಲಿ 'ಅವಳಿಗೆ ತಕ್ಕ ಸಮಯದಲ್ಲಿ ಚಂದ್ರತಾರಾ ಬಲವನ್ನು ನೋಡಿ, ಸೀಮಂತ, ಬಯಕೆ-ಕೂಳು ಮುಂತಾದ ಶಾಸ್ತ್ರಾಚಾರ, ಲೋಕಾಚಾರಗಳನ್ನು ಲೋಪವಿಲ್ಲದೆ ಮಾಡಿಸಿದನು.' ಮಗು ಜನಿಸಿದಾಗ ನಕಲಿಗೆ ಹೆಣ್ಣು ಮಗು ಎಂದು ಮಂಜಪ್ಪ ಹೇಳಿದ್ದು ನಂತರ ಗಂಡೆಂದು ಗೊತ್ತಾಗಿ ಹೀಗೆ ಹೇಳಿದಳು – "ಗಂಡು ಹೆತ್ತರೆ ಹೆಣ್ಣು, ಹೆಣ್ಣು ಹೆತ್ತರೆ ಗಂಡೆಂದು ಸೂಲಗಿತ್ತಿಯರು ಹೇಳಬೇಕೆಂದು ಹಿರಿಯರ ಕಟ್ಟಳೆ ಇದೆ"[೨2] ಕಟ್ಟಳೆಯೇ, ಸುಡಗಾಡೂ ಇದನ್ನು ನಾನು ಎಲ್ಲಿಯೂ ಕೇಳಿಲ್ಲವೆಂದು ಬೇಸರ ವ್ಯಕ್ತಪಡಿಸಿದನು. ಇಲ್ಲಿ ಸ್ತ್ರೀ ವಿರೋಧಿ ರೀತಿಯ ನೀತಿ ಕಾಣುವುದು.

ಎಲ್ಲ ಕಾಲದ ಧರ್ಮ ಮತ್ತು ಸಮಾಜಗಳಲ್ಲಿ ಅವರದೇ ಆದ ಸಂಸ್ಕಾರಗಳಿದ್ದು, ಅವುಗಳು ಹುಟ್ಟಿನಿಂದ ಸಾಯುವವರೆಗೂ ಹಾಗೂ ಸತ್ತ ನಂತರದಲ್ಲೂ ಆಚರಿಸಲ್ಪಡುತ್ತವೆ. ಆದ್ದರಿಂದ ಅವುಗಳೆಲ್ಲ ಸಾಮಾಜಿಕ ಹಿತ ಹಾಗೂ ದೋಷರಹಿತವಾದ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಅತಿ ಮಹತ್ವವೆನಿಸಿವೆ. ಹೀಗಾಗಿ ಸಂಸ್ಕಾರಗಳು ಕೇವಲ ಬಾಹ್ಯಕ್ರಿಯಾವಿಧಿಗಳಾಗಿರದೆ: ಆಂತರಿಕ ಭಾವನಾತ್ಮಕ ಕ್ರಿಯಾವಿಧಿಯಾಗಿ ಬರುತ್ತವೆ. (ಶಂಕರರಾವ್: ೧೯೯೧: ೩೮) ಎನ್ನುವ ಮಾತು ಗಮನಾರ್ಹವಾಗಿದೆ.

ಮಗು, ತಾಯಿಯ ಗರ್ಭದಲ್ಲಿರುವಾಗಲೇ ಸಂಸ್ಕಾರಗಳು ಆರಂಭವಾಗಿ, ಸಾವಿನ ಆಚೆಗೂ ಚಾಚಿಕೊಂಡಿರುತ್ತವೆ. ಆದ್ದರಿಂದ ಅವುಗಳನ್ನು ಜನನ ಪೂರ್ವದಲ್ಲಿ; ಜನನ ಕಾಲದಲ್ಲಿ; ಹಾಗೂ ಬದುಕಿನ ಅಂತ್ಯದಲ್ಲಿ ಕೈಗೊಳ್ಳುವ ಸಂಸ್ಕಾರಗಳಾಗಿ ವಿಭಾಗಿಸಿಕೊಳ್ಳಬಹುದು. ಇವುಗಳನ್ನು ಸಮಾಜವು ಧಾರ್ಮಿಕ ವಿಧಿಗಳನ್ನಾಗಿ ಪುರಸ್ಕರಿಸುತ್ತದೆ.

ಸಾಮಾನ್ಯವಾಗಿ ಸ್ತ್ರೀಯು ಚೊಚ್ಚಲು ಗರ್ಭಧರಿಸಿದಂದಿನಿಂದ ಸಂಸ್ಕಾರಗಳು ಆರಂಭವಾಗುತ್ತದೆ. ಅವುಗಳಲ್ಲಿ 'ಸೀಮಂತ ಸಂಸ್ಕಾರ' ತುಂಬಾ ಮುಖ್ಯವಾಗಿದೆ. ಹಿಂದುಗಳಲ್ಲಿ ಸಂತಾನೋತ್ಪತ್ತಿ ಕೇವಲ ಲೈಂಗಿಕ ಕ್ರಿಯೆಯಾಗಿರುವುದಿಲ್ಲ. ವಂಶವೃಕ್ಷದ ಬೆಳವಣಿಗೆಯಾಗಿರುತ್ತದೆ. 'ನ ಪುತ್ರಸ್ಯ ಗತಿರ್ನಾಸ್ತಿ:' ಎಂಬ ನಂಬಿಕೆ ಬಲವಾಗಿರುವುದರಿಂದ ಪ್ರತಿಯೊಬ್ಬ ಸ್ತ್ರೀಯು ತಾಯಿಯಾಗಲು ಹಂಬಲಿಸುತ್ತಾಳೆ. ಆದ್ದರಿಂದ ಸೀಮಂತತನಕ್ಕೆ ಸಾಂಸ್ಕೃತಿಕ ಮಹತ್ವವಿದೆ. 'ಇಂದಿರಾಬಾಯಿ'ಯಲ್ಲಿ ಅಂಬಾಬಾಯಿ, 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ಸೀತಮ್ಮ.

'ಇಂದಿರಾಬಾಯಿ'ಯಲ್ಲಿ ಅಂಬಾಬಾಯಿ ಚೊಚ್ಚಲು ಗರ್ಭಿಣಿಯಾಗಿರಲು "ಭೀಮರಾಯನು ಅವಳಿಗೆ ತಕ್ಕ ಸಮಯದಲ್ಲಿ ಚಂದ್ರ ತಾರಾಬಲಗಳನ್ನು ನೋಡಿ 'ಸೀಮಂತ'," 'ಬಯಕೆ-ಕೂಳು', ಮುಂತಾದ ಶಾಸ್ತ್ರಾಚಾರ, ಲೋಕಾಚಾರಗಳನ್ನು ಲೋಪವಿಲ್ಲದೆ ಮಾಡುವನು.

ಸೀಮಂತ ಸಂದರ್ಭದಲ್ಲಿ ಹೆಣ್ಣನ್ನು ಸಿಂಗರಿಸಿ 'ಹಸೆಮಣೆಯ', ಮೇಲೆ ಕೂಡಿಸುವರು. ಅವಳ ಮುಂದೆ ಹಣ್ಣು, ಹಂಪಲ, ಕಳಸ, ಕನ್ನಡಿಗಳನ್ನು ಇರಿಸುತ್ತಾರೆ. ಕಾಯಿ, ಎಲೆ, ಅಡಿಕೆ, ಧಾನ್ಯ, ಅರಿಷಿಣವನ್ನು ಐದು ಜನ ಮುತ್ತೈದೆಯರು ಬಸುರಿ ಹೆಣ್ಣಿನ ಉಡಿ ತುಂಬಿ ಸೋಬಾನೆ ಹಾಡುತ್ತಾರೆ. ಇಲ್ಲಿ ಸಂತಾನ ಶಾಸ್ತ್ರ ಹಾಗೂ ಆರೋಗ್ಯಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಅಂಶಗಳನ್ನು ಕಾಣುತ್ತೇವೆ. ಗರ್ಭಿಣಿ ಸ್ತ್ರೀಯ ಮನಸ್ಸು ಸಂತೋಷಗೊಳಿಸಿ, ಅವಳ ಬಯಕೆಗಳನ್ನು ತೀರಿಸುವುದು ಗಂಡ-ಹೆಂಡತಿಯರು ತಮ್ಮ ಲೈಂಗಿಕ ಚಟುವಟಿಕೆಗಳನ್ನು ನಿಯಂತ್ರಿಸಿಕೊಳ್ಳಬೇಕೆಂಬ ಆಶಯದಿಂದ ಕೂಡಿದೆ.

ಮಗುವಿನ ಜನನವಾದ ೧೨, ೧೩, ಇಲ್ಲವೆ ೨೧ನೇ ದಿನಕ್ಕೆ ನಾಮಕರಣ ಕಾರ್ಯವನ್ನು ಇಟ್ಟುಕೊಳ್ಳುತ್ತಾರೆ. ಅಂದು ಶೆಟವಿ ಪೂಜೆ ಮಾಡಿ ಬಾಣಂತಿಯನ್ನು ಗಂಗಾಪೂಜೆಗೆ ಕರೆದೊಯ್ಯುತ್ತಾರೆ. ಮಗು ಹುಟ್ಟಿದ ವಾರ, ದಿನ, ಗಳಿಗೆ, ನಕ್ಷತ್ರ, ಜಾತಕ ಫಲಗಳನ್ನು ನೋಡಿ ನಾಮಕರಣ ಮಾಡುತ್ತಾರೆ. ಮಗುವಿಗೆ ಹೆಸರಿಡುವಾಗ ಕುಲದೇವರ, ಗ್ರಾಮದೇವರ ಇಲ್ಲವೆ ಗುರುಹಿರಿಯರ ಹೆಸರುಗಳನ್ನು ಅಥವಾ ತಮಗೆ ಪ್ರಿಯವಾದ ಹೆಸರುಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ.

ಮಕ್ಕಳು ಬೆಳೆದು ದೊಡ್ಡವರಾಗುತ್ತಿದ್ದಂತೆ ಕೆಲವು ಸಂಸ್ಕಾರಗಳು ಆಚರಿಸಲ್ಪಡುತ್ತವೆ. ಗಂಡು ಮಗುವಿಗೆ ಉಪನಯನ, ಹೆಣ್ಣು ಮಗು ಪುಷ್ಪವತಿಯಾದಾಗ ಮಾಡುವ ವಿಧಿಗಳು ತುಂಬಾ ಮುಖ್ಯವಾಗಿದೆ. ಹುಡುಗಿ ದೊಡ್ಡವಳಾಗಿದ್ದನ್ನು ತಿಳಿದ ಕೂಡಲೆ ಮುತ್ತೈದೆಯರು ಬಂದು ಎಣ್ಣೆನೀರು ಹಾಕಿ, ಹೊಸಬಟ್ಟೆ, ಉಡಿಸಿ, ಹೂವು ಮುಡಿಸಿ, ಮಕರ(ಮಂಟಪ) ಕಟ್ಟಿ ಏಳು-ಒಂಭತ್ತು-ಹನ್ನೊಂದು ದಿವಸಗಳವರೆಗೆ ಕೂಡಿಸುವರು. ಬಂಧು-ಬಳಗವೆಲ್ಲ ಆಗಮಿಸಿ ಆರತಿ ಮಾಡುತ್ತಾರೆ. ಕುಲಬಾಂಧವರಿಗೆ

ಸಿಹಿ ಊಟ ಹಾಕಿಸುತ್ತಾರೆ. ವಿವಾಹವಾದ ಮೇಲೆ ಮೈನೆರೆದಿದ್ದರೆ ಗಂಡ-ಹೆಂಡತಿಯರಿಬ್ಬರೂ ಹೆಣ್ಣಿನ ತವರಿನವರು ಬಟ್ಟೆ-ಬಂಗಾರವನ್ನು ಮುಯ್ಯಿ ಮಾಡುವರು.

ಸೀತಾರಾಮ ಜೋಯಿಸರ ಬಳಿ ಹೋಗಿ ಅಂಬಾಬಾಯಿ ವಿಠ್ಠಲರಾಯ ಇಂದಿರೆಯ ಜಾತಕ ತೋರಿಸಲು ಬಂದ ಪ್ರಸಂಗದಲ್ಲಿ ಜೋಯಿಸರು ಹುಡುಗನ ಜಾತಕವೆಲ್ಲಿ? ಎಂದಾಗ ಅಂಬಾಬಾಯಿ ಮೊದಲು ಹುಡುಗನ ಜಾತಕದ ಬದಲಾಗಿ 'ಜೋಯಿಸರೆ ಹುಡಗಿಯ ಜಾತಕವನ್ನು ಪ್ರಥಮತಃ ಚೆನ್ನಾಗಿ ಪರಿಶೋಧಿಸಿ ನೋಡಿ ಹೇಳಿರಿ, ಆ ಮೇಲೆ ಹುಡುಗನ ಜಾತಕಕ್ಕೆ ಕೂಡಿಬರುವದೋ ಇಲ್ಲವೋ ನೋಡಬಹುದೆಂದಳು.' ಆಗ ಶಾಸ್ತ್ರಿಗಳು ಜಾತಕ ನೋಡಿ "ಹುಡುಗಿಯ ಆಯುರ್ಬಲ ಚೆನ್ನಾಗಿದೆ. ಸೌಮಾಂಗಲ್ಯ ಗಜಕೇಸರಿ ಯೋಗಗಳು ಸಹ ಇವೆ."[೨೮] ಎಂದು ಹೇಳಿದ ತರುವಾಯ ಹುಡುಗನ ಜಾತಕ ನೋಡಿ ಮನಸ್ಸಿನಲ್ಲಿ ಬ್ರಹ್ಮಾಂಡ ಯೋಚನೆ ಮಾಡಿ "ಹುಡುಗನಿಗೆ ದೀರ್ಘಾಯುಷ್ಯ, ಸುಪತ್ನಿ ಯೋಗ ಸಹ ಇವೆ. ಎರಡು ಜಾತಕಗಳನ್ನು ನೋಡಿದ್ದಲ್ಲಿ ಅಂಶಮಿತತ್ವ ಗೃಹಮಿತ್ರತ್ವ ಸಹ ಚೆನ್ನಾಗಿ ಕೂಡಿ ಬರುತ್ತವೆ. ಹುಡುಗನಿಗೆ ಹದಿನೆಂಟು ವರ್ಷದಲ್ಲಿ 'ಕುಜರಾಹುಗಳ ಸಂಧಿ' ಅಂದರೆ ಪೂರ್ಣ ಸಂಧಿಯಲ್ಲಿ ಯೋಗ ಮಾತ್ರವೆ ಇದೆ ಅದುದೊಡ್ಡದಲ್ಲ. ಆ ಕಾಲದಲ್ಲಿ ಪುರೋಹಿತರಿಗೆ ಸುವರ್ಣದ ಒಂದು ಸವತ್ಸ ಗೋದಾನ ಕೊಟ್ಟುಬಿಟ್ಟರೆ ಪರಿಹಾರವಾಗುವದು."[೨೯] ಈ ಸಂಗತಿಗಳು ಮದುವೆಯ ಸಂದರ್ಭದ ವಿಧಿಕ್ರಿಯೆಗಳನ್ನು ಸಾದರ ಪಡಿಸುವವು. ಮದುವೆ ನಡೆಯುವ ಮುಂಚೆ ಹುಡುಗ ಹುಡುಗಿಯ ಜಾತಕ ಪರೀಕ್ಷಿಸುವ ಪದ್ಧತಿ ಇದೆ. ಇದು ಇಂದಿಗೂ ಚಾಲ್ತಿಯಲ್ಲಿದೆ.

ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಮಹದೇವ ಸೀತಮ್ಮನ ಮದುವೆಯ ಸಂದರ್ಭದಲ್ಲಿ ಪ್ರಸ್ಥದ ಮೆರವಣಿಗೆ ಆನೆ, ಅಂಬಾರಿ, ಮುವ್ವತ್ತು, ಬೆಳ್ಳಿ ಕಟ್ಟಿಗೆ, ಕೊಂಬು, ತಮಟೆ, ತಾಸಾ ಮರಫ, ಖಾಸಾ ಜಲಗದವರು, ಒಂದು ಜೋಡಿ ತಾಫೆದವರು, ಇಲಾಯಿಗಳು, ಫರಮೀನುಗಳು, ಅದಕ್ಕೆ ಎಣ್ಣೆ, ಬತ್ತಿ ಸಹಾ ಇಬ್ಬರು ಅವಸರದ ಮೊಬಳಿ ಕಟ್ಟಿಗೆಯವರು, ಅರಮನೆಯ ಅಹಲೆಕಾರರು. ಕಛೇರಿಯ ಉದ್ಯೋಗಸ್ಥರು ಮೊದಲಾದವರೆಲ್ಲರಿಗೂ ಔತಣ ಹೇಳಿದ್ದರು. ಪ್ರಸ್ತದಲ್ಲೆಲ್ಲಾ ಒಂದೊಂದು ದಿವಸ ಒಂದೊಂದು ಬಗೆಯ ರವೆ ಭಕ್ಷ್ಯ ಮಾಡುತ್ತಿದ್ದರು. ಪ್ರತಿ ದಿನವೂ ಆರತಿ ಅಕ್ಷತೆ ಕಾಲದಲ್ಲಿ ಸೂಳೆಯರ ಮೇಳ, ಸಂಗೀತಗಾರರ ಗಾನ, ಮಧ್ಯೆ ಮಧ್ಯೆ ನಕಲಿ ನಾರಣಪ್ಪನ ಹಾಸ್ಯ. ಇದೆಲ್ಲವನ್ನು ಮೀರಿಸುವ ಹಾಗೆ ನಡೆಯುತ್ತಿದ್ದ ವೇದಘೋಷ, ಶಾಸ್ತ್ರಾರ್ಥ ವಿಚಾರ ಇವುಗಳೆಲ್ಲಾ ಜರುಗಿದವು.

ಒಂದೊಂದು ಸಾರೆ ಕೈಕೊಂಡಿರುವ ಆಚರಣೆಗಳು ಫಲ ನೀಡಿಲ್ಲ. ಇಂದಿರಾಬಾಯಿ ಕಾದಂಬರಿಯ ಭೀಮರಾಯನಿಗೆ ಪುತ್ರ ಸಂತತಿ ಇಲ್ಲದ ಕೊರಗಿಗೆ ಹಲವಾರು ವಿಧಿಕ್ರಿಯೆ ಕೈಗೊಂಡರು. "ಲಕ್ಷಬತ್ತಿಯ ವ್ರತ, ಹರಕೆಗಳು, ಹೋಮಹೋಮಗಳು, ಧಾನಧರ್ಮಗಳು ಇವೆ ಮುಂತಾದ ಅನೇಕ

ಸತ್ಕಾರ್ಯಗಳನ್ನು ಯಥಾಭಕ್ತಿಯಿಂದ ಮಾಡಿದರೂ ಫಲ ಪ್ರಾಪ್ತಿಯಾಗಲಿಲ್ಲ".[೩೦] ಭೀಮರಾಯನ ಸಂಪ್ರದಾಯಶೀಲತೆಯ ಪರಾಕಾಷ್ಠೆ ಇಲ್ಲಿ ಕಾಣುವದು.

ಮರಣದ ತರುವಾಯ ಹಲವಾರು ವಿಧಿಕ್ರಿಯೆಗಳು ಜರುಗುವವು. ವ್ಯಕ್ತಿ ಮರಣಹೊಂದಿದ ತರುವಾಯ 'ಜನವಾಣಿ' ಊರ ತುಂಬಾ ಬಾಯಿಂದ ಬಾಯಿಗೆ ಹರಡುವದು. ಸುತ್ತಲಿನ ಹಳ್ಳಿಗಳಿಗೆ ಸುದ್ಧಿ ತಲುಪಿಸಲು ಮರಣ ಖಚಿತ ಪಡಿಸಿಕೊಂಡು ಆಳು ಬಿಡುವ ಪದ್ಧತಿ ಜಾರಿಯಲ್ಲಿದೆ. ಕೋವಿಯನ್ನು ಬಳಸುವ 'ಬಾಬತ್ತಿನ' ಮನೆಗಳು ಹಳ್ಳಿಯಲ್ಲಿ ಈಗಲೂ ಕೆಲವು ಕಡೆ ಬಳಕೆ ಇದೆ. ಊರಲ್ಲಿ ತೀರಿದ ವ್ಯಕ್ತಿಯ ವ್ಯಕ್ತಿತ್ವಕ್ಕನುಗುಣವಾಗಿ ಮುಂದಿನ ವಿಧಿ ವಿಧಾನಗಳು ಜರಗುತ್ತಿದ್ದವು. ಮರಣ ಸಂಭವಿಸಿದ ಮನೆಯ ಮುಂದೆ ಜನರು 'ಸಿದಗಿ' ಕಟ್ಟುವ ವ್ಯವಸ್ಥೆ ಪ್ರಮುಖರ ಮಾರ್ಗದರ್ಶನದಲ್ಲಿ ಜರುಗಿದರೆ, ಆಳು ಮಕ್ಕಳು ಅದನ್ನು ಕಟ್ಟುವ ರೂಢಿ ಜಾರಿಯಲ್ಲಿದೆ. ಮೊದಲ ಹಂತದ ಸ್ವತಂತ್ರ ಕಾದಂಬರಿಗಳಲ್ಲಿ ಸ್ತ್ರೀಯರಿಗೆ ಸಂಬಂಧಪಡುವ ವಿಧಿಗಳ ಬಳಕೆ ಇವೆ.

ಇಂದಿರಾಬಾಯಿ ಕಾದಂಬರಿಯ ವಿಠ್ಠಲರಾಯನ ಮರಣದ ತರುವಾಯ ಹಲವಾರು ವಿಧಿಕ್ರಿಯೆಗಳು ಜರುಗುವವು. ಮರಣವಾದ ಮೇಲೆ "ಹುಡುಗಿಗೆ (ಇಂದಿರೆ) ಕೇಶ ಛೇದನವಾಗಬೇಕಷ್ಟೆ ? ನಾಪಿತನನ್ನು ಕರಿಸಿದ್ಧಿರಾ? ಅದಕ್ಕೆ ಭೀಮರಾಯ ಭಟ್ಟರೆ ಅದು ಈಗಲೆ ಬೇಕೆ ? ಊರಲ್ಲಿದ್ದು ಸ್ವಲ್ಪ ದಿವಸ ಕಳೆದ ಮೇಲೆ ನಡೆಯುವ ಕಟ್ಟಳೆಯಲ್ಲವೆ?"[೩೧] ಎಂದಾಗ ಭಟ್ಟರು ಪತಿಯ ಮರಣಾ ನಂತರ ಪತ್ನಿಯು ಕೇಶ ಛೇದನವಾಗದೆ ಸ್ನಾನ ಮಾಡಿದರೆ ಒಂದೊಂದು ಸಾರಿ ಸ್ನಾನ ಮಾಡುವಾಗ ಆಕೆಯ ಒಂದೊಂದು ಕೂದಲಿಂದ ಎಷ್ಟು ಹನಿ ನೀರನ್ನು ಭೂಮಿಯ ಮೇಲೆ ಬೀಳಿಸುವಳೋ ಅಷ್ಟು ವರ್ಷಗಳ ಪರ್ಯಂತರ ಪತಿಯು ಅಘೋರವಾದ ನರಕದಲ್ಲಿ ಯಾತನೆ ಅನುಭವಿಸುವನೆಂದು ಶಾಸ್ತ್ರವಿದೆ. ದೇಶಾಚಾರ ಕಟ್ಟಳೆಯನ್ನು ಅನುಸರಿಸುವದರಲ್ಲಿ ವಿರೋಧವಿಲ್ಲ ! ಎಂಬ ವಾದ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇದೆ. ಸ್ವಲ್ಪ ಸಮಯದ ತರುವಾಯ ಕಾಶಿನಾಥ ಭಟ್ಟರು ಪುನಹಃ ಭೀಮರಾಯನನ್ನು ಕರೆದು ಸಹಗಮನ ವಿಚಾರ ಪ್ರಸ್ತಾಪಿಸಿ ಮ್ಲೆಂಚರು ಆಗಮಿಸಿದ ತರುವಾಯ ನಿಂತ ಸಂಗತಿ. 'ಆದರೂ ಅನೇಕ ಸ್ತ್ರೀಯರ ಸ್ಮಶಾನದ ವರೆಗೆ ಹೋಗಿ ಚಿತೆಗೆ ಅಗ್ನಿ ಕೊಡುವಷ್ಟರಮಟ್ಟಿನ ಕಟ್ಟಳೆಯಾದರೂ ಇತ್ತಿತ್ತಲಾಗಿ ಕೆಲವು ದಿವಸಗಳವರೆಗೆ ನಡೆದು ಬಂದಿದೆ. ತಮ್ಮ ಮನಸ್ಸು ಹೇಗೆ ಹುಡುಗಿಯನ್ನು ಕಳುಹಿಸುತ್ತೀರಾ' ಎಂದು ಕೇಳದನು. ಅದಕ್ಕೆ ಭೀಮರಾಯ "ಇಂದಿರೆ ಚಿಕ್ಕಪ್ರಾಯದವಳು. ಇಲ್ಲಿಂದ ಸ್ಮಶಾನದವರೆಗೆ ನಡೆಯುವದಕ್ಕೆ ಶಕ್ತಿ ಇಲ್ಲದವಳು. ಮಾತ್ರವಲ್ಲ ದುಃಖದಿಂದ ಕಂಗೆಟ್ಟಿರುವದರಿಂದ ಈಗ ಸಾಧಾರಣಾ ಊರಲ್ಲಿ ನಡೆಯುವ ಕಟ್ಟಳೆಯಂತೆಯೇ ಹೇಗೋ ಕೆಲಸ ಸುಧಾರಿಸಿ ಕೊಡಿರಿ ಇನ್ನು ತಾವಕಾಶ ಮಾಡಬೇಡಿ ಕೆಲಸ ಮುಂದುವರೆಸಲಿ."[೩೨] ಮುಂದುವರೆದು ಕಾಶಿನಾಥ ಭಟ್ಟರು ಶವ ಹೊರುವವರನ್ನು ಕರೆದು 'ಹೂಂ !

ಎತ್ತಿರೋ ! ಎಂದು ಹೇಳಿದನು. ಆಗ ಅವರೆಲ್ಲರು 'ನಾರಾಯಣ', 'ನಾರಾಯಣ' ಎನ್ನುತ್ತಾ ಶವವನ್ನು ಎತ್ತಿ ತೆಗೆದುಕೊಂಡರು. ತ್ರಿಯಂಬಕರಾಯನ ಅಣ್ಣನ ಮಗನಾದ ಕೃಷ್ಣರಾಯನು' ಪರಕಾಶಿಯ ಮುಸುಕು ಹಾಕಿಕೊಂಡು ಹಗ್ಗ ಕಟ್ಟಿದ ಒಂದು ಮಣ್ಣಿನ ಹೊಸ ಪಾತ್ರೆಯಲ್ಲಿ ಅಗ್ನಿಯನ್ನು ಹಿಡಿದುಕೊಂಡು ಮುಂದಾಗಿ ಶವ ಹೊತ್ತವರು ಹಿಂದಾಗಿ ಶವ ಸಂಸ್ಕಾರಕ್ಕೋಸ್ಕರ ಸ್ಮಶಾನಕ್ಕೆ ಹೋದರು.' ಹಗ್ಗ ಬಿಗಿದ ಮಡಿಕೆಯಲ್ಲಿ ಬೆಂಕಿ ಹಾಕಿರುವರು ಸತ್ತ ಸುದ್ಧಿ ಖಚಿತ ಪಡಿಸಲು ಬೆಂಕಿ ನಂದದಂತೆ ನೋಡಿಕೊಳ್ಳುವ ವಾಡಿಕೆ. ಈಗಲೂ ಅಲ್ಲಲ್ಲಿ ಕಾಣಸಿಗುವದು.

ಮರಣವಾದ ವ್ಯಕ್ತಿಯ ಕ್ರಿಯೆಗೆ ತಿಥಿ ನಕ್ಷತ್ರ ನೋಡುವದು ವಾಡಿಕೆ. ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಸೀತಮ್ಮ ಹೆಣ ಎತ್ತುವಾಗ "ರಾತ್ರಿಗೆ ತ್ರಿಪಾದಿ ನಕ್ಷತ್ರವಿರುತ್ತೆ ಈಗಲೆ ಶವವನ್ನು ಸಾಗಿಸಿ ಬಿಡೋಣ, ಇವತ್ತು ಪೌರ್ಣಿಮಿ ರಾತ್ರಿ ಎಲ್ಲಾ ಬೆಳದಿಂಗಳಿದೆ. ವೈಶಾಖ ಮಾಸ, ಮಳೆ ಬರುತ್ತೆ ಎಂಬ ಭಯವೇನು ಇಲ್ಲ."[೨೨] ಮರಣಹೊಂದಿದ ವ್ಯಕ್ತಿ ಪಂಚಕದಲ್ಲಿ ತೀರಿಕೊಂಡರೆ ಮುಂದಿನ ಮೂರು ತಿಂಗಳೊಳಗೆ ಮೂರು ಜನ ತೀರಿ ಹೋಗುವರೆಂಬ ನಂಬಿಕೆ ಈಗಲೂ ಇದೆ.

ವ್ಯಕ್ತಿಯ ಮರಣದ ಸಮಯದಲ್ಲಿ ಕೆಲವು ವಿಧಿಕ್ರಿಯೆಗಳನ್ನು ಆಚರಿಸಲಾಗುತ್ತದೆ, ಅವುಗಳು ಭಿನ್ನ ಭಿನ್ನ ಸಾಮಾಜಿಕ ಸನ್ನಿವೇಶಗಳಲ್ಲಿ ವೈವಿಧ್ಯಮಯವಾಗಿ ರೂಢಿಯಲ್ಲಿರುತ್ತವೆ. ಮದುವೆ ಆದವರು ಸತ್ತರೆ, ಮದುವೆ ಆಗದವರು ಸತ್ತರೆ, ಬ್ರಾಹ್ಮಣರು-ಬ್ರಾಹ್ಮಣೇತರರು ಸತ್ತರೆ, ದುರ್ಮರಣದಿಂದ ಸತ್ತರೆ, ಮಕ್ಕಳು ಸತ್ತರೆ ಆಚರಿಸುವ ವಿಧಿಕ್ರಿಯೆಗಳು ಬೇರೆ ಬೇರೆಯಾಗಿರುತ್ತವೆ.

ಬ್ರಾಹ್ಮಣರಲ್ಲಿ ಯಾರೇ ಸಾಯಲಿ ಅವರನ್ನು ಸುಡಲಾಗುತ್ತದೆ. ಆದರೆ ಬ್ರಾಹ್ಮಣೇತರರಲ್ಲಿ ಈ ವಿಧಿ ಕಟ್ಟುನಿಟ್ಟಾಗಿಲ್ಲ. ಮಲೆನಾಡಿನ ಬ್ರಾಹ್ಮಣೇತರರಲ್ಲಿ ಒಕ್ಕಲಿಗರನ್ನು ಮಾತ್ರ ಸುಡುವುದನ್ನು ಕುವೆಂಪು ಕಾದಂಬರಿಗಳಲ್ಲಿ ಕಾಣುತ್ತೇವೆ. ಉತ್ತರ ಕರ್ನಾಟಕದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದವರನ್ನು ಹೂಳುವರು. ಆಕಸ್ಮಿಕವಾಗಿ ಯಾರಾದರೂ ದುರ್ಮರಣ ಹೊಂದಿದರೆ ಅಂಥವರನ್ನು ಮಾತ್ರ ಸುಡುವರು.

ಮುತ್ತೈದೆ ತೀರಿಕೊಂಡರೆ ಹೆಣದ ಮೇಲೆ ಅರಿಷಿಣ ಕುಂಕುಮ ಹೂವುಗಳನ್ನು ಹಾಕುವರು. 'ಮಾಡಿದ್ದುಣ್ಣೋ ಮಹಾರಾಯ' ದಲ್ಲಿ ಸೀತೆ ತೀರಿಕೊಂಡಾಗ ಅರಿಷಿಣ ಕುಂಕುಮ ಚೆಲ್ಲಿ ಹೂವನ್ನು ಹಾಕಲಾಗಿತ್ತು(೧೯೮೩:೧೮೪).

ಶವ ಸಂಸ್ಕಾರದಲ್ಲಿ ಎಲ್ಲರೂ ಪಾಲ್ಗೊಳ್ಳುತ್ತಾರೆ. ಅವರಲ್ಲಿ ಕೆಲವರಿಗೆ ಒಂದೊಂದು ಕೆಲಸಗಳನ್ನು ವಹಿಸಲಾಗುತ್ತದೆ. ಕಟ್ಟಿಗೆ ಕಡಿಯುವುದು, ಮತ್ತು ಕುಳಿ ತೆಗೆಯುವ ಕೆಲಸ ಹೊಲೆಯರದು. ಕುಳವಾಡಿ ಸಾವಿನ ಸುದ್ಧಿ ಹರಡುವುದು, ಆಚಾರ ಕುಲಗುರು ಶವಕ್ಕೆ ಮಡಿ ತೊಡಿಸುವುದು ಮುಂತಾದ ಕಾರ್ಯಗಳು ಜರುಗುತ್ತವೆ. ಸಾವು ಎಲ್ಲರಿಗೂ ಒಂದೇ. ಆದರೂ ಸತ್ತ ಮೇಲೆ ಅವರನ್ನು ಸಂಸ್ಕಾರ

ಮಾಡುವ ಸ್ಮಶಾನಗಳು ಬೇರೆ ಬೇರೆಯಾಗಿದ್ದವು. ಅವುಗಳಿಗೆ ಸ್ಮಶಾನಪಟ್ಟಿ ಅಥವಾ ಸುಡುಗಾಡುಪಟ್ಟಿ ಎಂದು ಕರೆಯಲಾಗುತ್ತಿತ್ತು(ಅಂಬಳಿಕೆ: ೧೯೭೮:೮೧). ನಮ್ಮ ಊರಲ್ಲೂ ಮೇಲ್ವರ್ಗ ಹಾಗೂ ಕೆಳವರ್ಗದ ಜನರ ಸ್ಮಶಾನಗಳು ಇರುವುದು ಕಾಣುವುದು.

ವಿಧಿಕ್ರಿಯೆಯನ್ನು ನೆರವೇರಿಸುವದಕ್ಕೆ ಹಣಕಾಸಿಗೆ ತೊಂದರೆಯಾಗಿದ್ದು ಈ ಕಾದಂಬರಿಗಳಲ್ಲಿ ಕಾಣುವದು. ಇಂದಿರಾ ಕಾದಂಬರಿಯ ಕೊನೆಯಲ್ಲಿ ರಮಾಕಾಂತ ನಟೇಶನ ಸಂಭಾಷಣೆ ವಿಧಿಕ್ರಿಯೆ ವಿವರಿಸುವದು. ಶ್ರೀರಂಗಪಟ್ಟಣಕ್ಕೆ ಹೋಗುವಾಗ ನಟೇಶ “ನನ್ನ ತಾಯಿ ತೀರಿಕೊಂಡಳು ಅಂತಃಕರಣದವಳೆಂದರೆ ಅವಳೊಬ್ಬಳೆ ಉಳಿದಿದ್ದಳು. ದೇವರ ಮನಸಿಗೆ ಅದೂ ಬರಲಿಲ್ಲ. ಕುದುರೆ ಸತ್ತ ಹಾನಿಯಲ್ಲದೆ. ಜೇನು ಹೊರುವ ಪೇಚಾಟ ಬೇರೆ ಎಂಬಂತೆ ಉತ್ತರಾಧಿ ಕ್ರಿಯೆಗಳ ವೆಚ್ಚವನ್ನು ಹೊರಬೇಕಾಗಿರುವುದು”[೩೪] ಎಂಬಲ್ಲಿ ವಿಧಿಕ್ರಿಯೆ ಮಾಡುವ ಮಾತಿನ ಅರ್ಥವಿದೆ. ಮರಣದ ತರುವಾಯ ಓಣಿಯ, ಊರ ಪ್ರಮುಖರು ಸೇರಿಕೊಂಡು ಶವ ತೊಳೆದು ಶವಕ್ಕೆ ಅರಿವೆಯನ್ನು ತಿರುಪು ಹಾಕುವರು. ತಲೆಗೆ ರುಮಾಲು ಸುತ್ತಿ ಹೀರೆಮಠದ ಸ್ವಾಮಿಗಳನ್ನು ಕರೆಯಿಸಿ ‘ಮಠಪತಿ’ಯಿಂದ ಪೂಜೆ ಮಾಡಿಸಿ ಮಾಲೆ ಹಾಕಿ ಪತ್ರಿ ಹಾಕುವರು. ಇದಕ್ಕೆ ‘ಗೂಟಕ ಬಡೆಯುವ ಶಾಸ್ತ್ರ’ ಎಂದು ಕರೆಯುವರು. ಒಳಗೆ ಬಂಧು ಬಾಂಧವರು ಅಳುತ್ತಿರುತ್ತಾರೆ, ಹೊರಗೆ ಪ್ರಮುಖ ಪಂಚರು ಹೆಣಕ್ಕೆ ಸ್ಮಶಾನಕ್ಕೆ ಒಯ್ಯಲು. ಜಾತಿಗೆ ಅನುಗುಣವಾಗಿ ‘ಸಿದಗಿ’ ಕಟ್ಟುವ ಸಂಪ್ರದಾಯ ಪಾಲಿಸಿಕೊಂಡು ಬರಲಾಗಿದೆ. ಈ ‘ಸಿದಗಿಗೆ’ ಹಳ್ಳಿಗಳಲ್ಲಿ ‘ವಿಮಾನ’ ಎಂದು ಕೂಡಾ ಕರೆಯುವರು. ಮದುವೆಯಾಗಿದ್ದವರ ಶವವನ್ನು ಕುರ್ಚಿಯಲ್ಲೋ, ಸಿಂದಗಿಯಲ್ಲೊ ಕೂಡ್ರಿಸಿಕೊಂಡು ‘ಊರ ಅಗಸಿಯ’ ಬಾಗಿಲಲ್ಲಿ ಹಾದು ಮೆರವಣಿಗೆ ಮಾಡುತ್ತಾ ಸ್ಮಶಾನ ತಲುಪುವರು. ಕುರ್ಚಿಯಲ್ಲಿ ಕೂಡ್ರಿಸಲು, ಗೂಟಕ್ಕೆ, ಬಡಿಯುವಾಗ ಶವ ಶುದ್ಧ ಕೂಡ್ರಿಸಲು ಬಿದರಿನ ‘ಸಿಪಾಯಿ’ ಕಟಿಗೆಯನ್ನು ಕೊಡುವರು. ನೋಡುವವರಿಗೆ ಸೂಕ್ತವಾಗಿ ವ್ಯಕ್ತಿ ಗುರುತಿಸುವ ಹಾಗೆ ಕೂಡ್ರಿಸುವರು. ಮದುವೆಯಾಗದವರನ್ನು ಕೌದಿಯಲ್ಲಿ ನಾಲ್ಕು ಮೂಲೆಗೆ ಹಿಡಿದೆ ಕೆಳಗೆ ಮುಂಗೈ ಮೇಲೆ ಒಯ್ಯುವರು. ಇದನ್ನು ‘ಅಡ್ಡ ಒಯ್ಯುವದು’ ಎಂದು ಕರೆಯುತ್ತಾರೆ.

ಸ್ಮಶಾನ ವಿಚಾರಕ್ಕೆ ಬಂದರೆ ಮರಣ ಹೊಂದಿದ ತರುವಾಯ, ಕೆಳವರ್ಗದವರನ್ನು, ಮನೆಯ ಹೊಲೆಯರನ್ನು ಕರೆದು ಗುದ್ದು ತೆಗೆಯಲು ಹೇಳುವರು. ಇದಕ್ಕೆ ‘ಶಮ’ ತೆಗೆಯುವದು ಎನ್ನುವರು. ಶಮವನ್ನು ಐದು ಅಡಿ ಆಳ ಮೂರು ಅಡಿ ಅಗಲ ಆರು ಅಡಿ ಉದ್ದ ತೆಗೆಯುವರು. ಶಮವನ್ನು ಪೂರ್ವಾಭಿಮುಖವಾಗಿ, ಉತ್ತರಾಭಿಮುಖವಾಗಿ ಕೂಡ್ರಿಸುವದು ಹುಗಿಯುವದು ವಾಡಿಕೆ. ಶಮೆಯಲ್ಲಿ ನಾಲ್ಕು ದಿಕ್ಕಿಗೆ ದೀಪ ಹಚ್ಚಲು ನಾಲ್ಕು ಮಾಡ ಮಾಡುವರು. ಪೂರ್ವ ಅಥವಾ ಉತ್ತರಾಭಿಮುಖವಾಗಿ ಒಂದು ದೊಡ್ಡ ‘ಮಾಡ’ ಮಾಡುವರು. ಈ ರೀತಿ ‘ಶಮ’ ತಯಾರಿಸಿ ಸುತ್ತಲು ಹಸಿರು, ಕೆಂಪು, ಬಿಳಿ

ರಂಗವಲ್ಲಿಯಿಂದ ಶೃಂಗರಿಸುವರು. ಮರಿಬಾಳೆ, ಟೆಂಗಿನ ಗರಿಯನ್ನು ನೆಡಿಸುವರು. ಈ ರೀತಿಯಾದ ಮೇಲೆ ಶವದ ಮನೆಗೆ ಹೇಳಿಕಳುಹಿಸುವರು. ಮೆರವಣಿಗೆಯ ಮೂಲಕ ಶವ ಬಂದ ತರುವಾಯ 'ವಸ್ತು ಒಡವೆ' ಬಿಚ್ಚುವರು. 'ಬರುವಾಗಲು ಬತ್ತಲೆ ಹೋಗುವಾಗಲು ಬತ್ತಲೆ' ಎಂಬ ದಾಸರ ವಾಣಿಯಂತೆ. ಅವರಿಯದೋ, ಹೊಣ್ಣೆಯದೋ ತಪ್ಪಲಿನಿಂದ ಸಂಸಾರ ಮುಚ್ಚುವರು. ಹಿರೇಮಠದವರು ಮಂತ್ರ ಜಪಿಸಿದರೆ, ಮಠಪತಿಗಳು ಪೂಜೆ ಸಲ್ಲಿಸುವರು. ಬಂದ ಮಾಲೆಯ ಹೂ, ಕರಿಕೆ ಎಸೆದು ಪ್ರತಿಯೊಬ್ಬರು ಮೂರು ಬೊಗಸೆ ಮಣ್ಣು ಹಾಕುವರು. ಸಂಪೂರ್ಣ ಮಣ್ಣು ಹಾಕಿದ ಮೇಲೆ ಮತ್ತೊಮ್ಮೆ ಪೂಜೆ ನೆರವೇರುವದು. ಶಕ್ತಿಗನುಸಾರವಾಗಿ ಸ್ಮಶಾನದಲ್ಲಿ 'ದಾನ' ಮಾಡುವ ನಿಯಮಗಳು ಇವೆ. ಮಣ್ಣಾದ ತರುವಾಯ ೩ ದಿನದ ಕಾರ್ಯ ಮಠಪತಿ, ಕೂಗಿ ಹೇಳುವದು ಒಂದು ವಿಧಿಕ್ರಿಯೆ. ಸತ್ತ ಸಮಯದ ಮುಂದು ಹುಣ್ಣಿಮೆ, ಅಮವಾಸ್ಸೆ ಇದ್ದರೆ ಅದರೊಳಗೆ ದಿವಸ ಕಾರ್ಯ ಮಾಡಿಕೊಳ್ಳುವರು. ಅದಕ್ಕೆ 'ಅಕ್ಕ ಸತ್ತರೆ ಅಮವಾಸೆ ನಿಲ್ಲಲ್ಲ, ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲಲ್ಲ' ಎಂಬ ಗಾದೆ ಹುಟ್ಟಿದ್ದು. ಈ ದಿವಸವನ್ನೇ ಹಳ್ಳಿಗಳಲ್ಲಿ 'ದೈವದಲ್ಲಿ' ತೆಗೆದುಕೊಳ್ಳುವದು ಎನ್ನುವರು. ಈ ದಿನಕ್ಕೆ ಬರುವವರು ಫಲ ಪುಷ್ಪ ತರುವರು, ಆ ದಿನ ಇಡಿ ಮನೆಯನ್ನು ಸಾರಿಸಿ, ಹೊಸ ಅಡುಗೆ ಮಾಡಿ, ಊಟಕ್ಕೆ ಹಾಕಿಸುವರು. ತಯಾರಿಸಿದ ಅಡುಗೆ ಅವತ್ತೆ ಕಾಲಿಯಾಗಬೇಕು ಎಂಬ ನಿಯಮವಿದೆ. ಸತ್ತ ವ್ಯಕ್ತಿಯ ಇಷ್ಟವಾದ ಅಡುಗೆ, ಚಟದ ವಸ್ತುಗಳು ಇಟ್ಟು ಪೂಜಿಸುವ ವಿಧಿಕ್ರಿಯೆಗಳು ಚಾಲನೆಯಲ್ಲಿ ಇವೆ. ಕೆಟ್ಟ ನಕ್ಷತ್ರದಲ್ಲಿ ತೀರಿ ಹೋದರೆ ತಿಂಗಳೊ, ಮೂರು ತಿಂಗಳೋ ಆರು ತಿಂಗಳೋ ಮನೆ ಬಿಡುವ ರೂಢಿಗಳು ಜಾರಿಯಲ್ಲಿವೆ."[೩೫]

'ನಭಾ' ಕಾದಂಬರಿಯ ನಭಾಳ ಪತಿ ತೀರಿ ಹೋದ ಪ್ರಸಂಗ ಗಮನಿಸಿದರೆ ಇಡಿ ಕಾದಂಬರಿ ಸ್ತ್ರೀ ಸಮಸ್ಯೆ ಜೀವಾಳದಂತಿದೆ. ಕಥೆಯ ಪ್ರಾರಂಭವೇ ಎರಡು ಸಾವಿನಿಂದ ಆರಂಭವಾಗುವದು. ಒಂದು ಪ್ರಸಂಗ ಒಂಬತ್ತು ದಿನದ ಕ್ರಿಯೆಗೆ ಸಂಬಂಧಿಸಿದಂತೆ ಶಂಕರ ಮತ್ತು ಶರಾವತಿ ಸಂಭಾಷಣೆ ಸಂಘರ್ಷದ್ವನಿಸಿದೆ.

ಶಂಕರ – ಒಂಬತ್ತು ದಿನಗಳು ಕಳೆದು ಹೋದವು ? ಅಂದರೇನು ?

ಶರಾವತಿ – ಮುಂದಿನ ಕೆಲಸಕ್ಕೆ ಏನು ಏರ್ಪಡಿಸುವಿರಿ ?

ಶಂಕರ – ಮುಂದಿನ ಕೆಲಸವೇನು ?

ಶರಾವತಿ – ಹುಡಗಿಯ ವಿಚಾರ ?

ಶರಾವತಿ – ಅಲಂಕಾರ ವಿಸರ್ಜನೆ ?

ಶಂಕರ – ಉಳಿದಿರುವದೇನು ? ಮೈಮೇಲೆ ಇದ್ದುದ್ದೆಲ್ಲವನ್ನು ತೆಗೆದಿದೆ.

ಶರಾವತಿ – ತಲೆಯೋ

ಶಂಕರ – ಹಾಗೆ ಇರಕೂಡದೇತಕೆ ?

ಶರಾವತಿ – 'ನಿಮ್ಮ ವಿಚಾರ ಹಾಳಾಗಲಿ ! ದೇವರು ನಿಮಗೆಕೆ ಇಂತಹ ಬುದ್ಧಿಯನ್ನು ಕೊಟ್ಟನೋ ಗಂಡ ನಿಲ್ಲದವಳಿಗೆ ಹಾಳು ಮೈಲಿಗೆಯ ಕೂದಲು ಬೇರೆ ಕೇಡು?"[೩೬] ಇದು ಮುಂದುವರೆದ ವಿಚಾರವಂತರ ಮನೋಭಿಲಾಷೆಯನ್ನು ಪ್ರತಿಫಲಿಸುವದು. ಇಲ್ಲಿಯೂ ಮರಣ ಕಾಲದ ಸ್ತ್ರೀ ಕೇಶ ಮುಂಡನವೇ ಪ್ರಸ್ತುತವಾದಂತೆ – ವಿರೋಧವು ವ್ಯಕ್ತವಾಗಿದೆ. ಇದಕ್ಕೆ ಸ್ತ್ರೀಗೆ ಸ್ತ್ರೀ ವಿರೋಧಿ ಎಂಬುದು ಈ ಹಂತದ ಕಾದಂಬರಿಗಳಲ್ಲಿ ಪದೆ ಪದೆ ವ್ಯಕ್ತವಾಗಿದೆ. ಇದು ಸ್ತ್ರೀ ಪುರುಷ, ಸ್ತ್ರೀ ಸ್ತ್ರೀ ವಿರೋಧಿ ನೆಲೆಗಳು.

ಆ ಕಾಲದ ಅನೇಕ ನಂಬಿಕೆಗಳು ತಿರುಮಲಾಂಬಾರವರ ಕಾದಂಬರಿಗಳಲ್ಲಿ ಕಾಣುವವು. ಅಂದಿನ ಸಾಂಪ್ರದಾಯಿಕ ಹಿನ್ನೆಲೆಯಿಂದ ಅಂದಿನ ದಿನದ ಪಠ್ಯಗಳ ಕುರಿತು ಬರೆದಿರುವ ಟೀಕೆ ಟಿಪ್ಪಣಿಗಳು ಹಲವಾರು ನಿದರ್ಶನಗಳು ಇಲ್ಲಿವೆ. ಒಂದು ಪಾಠವು ಹಜಾಮರವನ ವಿಚಾರವಾಗಿದೆ. ಅದರಲ್ಲಿ ಹಜಾಮನೊಬ್ಬನ ಚಿತ್ರಣವು ಅವನ ಮಗ್ಗುಲಲ್ಲಿಯೇ ಹಡಪ ಮೊದಲಾದವು ಇವೆ. ಪಾಠವು 'ಇವನು ಹಜಾಮ ಇವನ ಬಳಿ ಕತ್ತಿ, ಚಾಕು, ಬಟ್ಟಲುಗಳಿವೆ, ಇವನು ಕ್ಷೌರ ಮಾಡುವನು' ಎಂಬ ಮೊದಲಾದ ವಿಷಯಗಳನ್ನು ಅಜ್ಜಿವೊಬ್ಬಳಿದ್ದರೆ ಆ ಹುಡುಗಿಯ ಪಾಡು ಹೇಳಬೇಕೆ ? ಆ ಪಾಠದಿಂದೇನು ಫಲ ? ಮುದುಕಿಯು ಆ ಪಾಠವನ್ನು ಕೇಳಿದ ಮಾರನೆ ದಿನದಿಂದಲೇ ತನ್ನ ಮೊಮ್ಮಗಳನ್ನು ಪಾಠಶಾಲೆಗೆ ಕಳುಹಿಸುವುದಿಲ್ಲ. ಸ್ತ್ರೀ ವಿದ್ಯಾಭ್ಯಾಸ, ವಿಧವೆಯರ ಸಕೇಶೀತ್ವ ವಿಧವಾ ವಿವಾಹ ಈ ಮೊದಲಾದ ವಿಷಯ ವಿಚಾರಗಳನ್ನು ಅಂದಿನ ಸಾಂಪ್ರದಾಯಿಕ ಆವರಣವು ವಿರೋಧಿಸಿದ ರೀತಿಯ ನಂಬಾಚರಣೆಗಳು ಇಲ್ಲಿ ಕಾಣುವವು. ಮತ್ತೊಂದೆಡೆ 'ನಿಮ್ಮ ಆಚಾರವು ಹಾಳಾಗಲಿ ! ದೇವರು ನೀಮಗೇಕೆ ಇಂತಹ ಬುದ್ಧಿಯನ್ನು ಕೊಟ್ಟನೋ? ಗಂಡನಿಲ್ಲದವಳಿಗೆ ಹಾಳು ಮೈಲಿಗೆ ಬೇರೆ ಕೇಡು?' 'ಅದೆಂತಹ ಕೆಲಸಮ್ಮ ಹಾಳು ಮೈಲಿಗೆಯ ಕೂದಲು ತಲೆ ತುಂಬ ಇರುವಾಗ' 'ಸರಿಯಮ್ಮಾ ಸರಿ ಕೇಡುಗಾಲದ ಬುದ್ಧಿ ! ಈಗಲೇ ಆ ಹಾಳು ಕಸ ಮೈಲಿಗೆಯನ್ನು ತೆಗೆಯಿಸಿ ಕೆಲಸದಲ್ಲಿ ನುರಿಗಿಸಬಾರದೆ?'. (ಹಿತೈಷಿಣಿಯ ಹೆಜ್ಜೆಗಳು, ಪು.೩೩) ಗಮನಿಸಬಹುದು.

ತಿರುಮಲಾಂಬಾ ಅವರು ಆ ಕಾಲದ ಸಾಮಾಜಿಕವಾಗಿ ಪ್ರಭಾವ ಬೀರಿದ ನಂಬಿಕೆಗಳನ್ನು ದಾಟದೆ ಅಲ್ಲೆ ನಿಂತು ಅವುಗಳನ್ನು ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಮುರಿದು ಕಟ್ಟುವಲ್ಲಿ ಯಶಸ್ವಿಯಾಗಿಲ್ಲ. ಅದು ಅವರ ಧೋರಣೆಯೂ ಆಗಿರಬಹುದು. ಸ್ತ್ರೀ ಜನ್ಮ ಧಾರಣೆಯಿಂದ, ವೈಧವ್ಯಾನುಭವದಲ್ಲಿ ಪಾದಾರ್ಪಣ ಮಾಡಿರುವುದರಿಂದ, ವಿಚಾರ ವಿಮರ್ಶೆಗೆ ನಿಂತಿರುವುದರಿಂದ ಸ್ತ್ರೀ ವರ್ಗದಲ್ಲಿ ಅಭಾಗಿನಿಯರನ್ನು ಪ್ರತಿಭಟಿಸುತ್ತಿರುವ ಭೀತಿಯ ಸ್ವರೂಪವನ್ನು ಚೆನ್ನಾಗಿ ಅನುಭವಕ್ಕೆ ತಂದುಕೊಳ್ಳುವಂತಾಯಿತು. ದೇಶಸೇವಾ ವ್ರತದಲ್ಲಿ ಹಾಗೂ ಭಗಿನಿ ಸಮ್ಮೇಳನದಲ್ಲಿ ತೊಡಗಿದುದರಿಂದ

ಪುರುಷ ಪ್ರಯತ್ನವನ್ನು ಸ್ತುತಿಸಿರುವ ಭೀತಿಯ ಭಿನ್ನ ಭಿನ್ನ ವಿಷಯಗಳನ್ನು ತಿಳಿದುಕೊಳ್ಳುವಂತಾಯಿತು. ಹೊಗಳಲಿ, ತೆಗಳಲಿ, ಹಳಿಯಲಿ ಎಂಬ ಸಂಗತಿಗಳು ಆ ಕಾಲಕ್ಕೆ ಮುಖ್ಯವೆನಿಸಿರಲಿಲ್ಲ. ಸಾಮಾಜಿಕ ಸಂಗತಿಗೆ ಮನ್ನಣೆಯು ದೊರತಿದ್ದು ಈ ಧೋರಣೆಯಲ್ಲಿ ಪ್ರತಿಪಾದಿಸಿದ್ದಾರೆ.

ಶೃಂಗಾರ ಚಾತುರ್ಯೋಲ್ಲಾಸಿನಿ ಕಾದಂಬರಿಯಲ್ಲೂ ಹಲವಾರು ನಂಬಿಕೆ ವಿಧಿಕ್ರಿಯೆಗಳು ಕಾಣುವವು. ಉತ್ತರದ ಕಾಡುಜನರು ಈ ದೇಶಕ್ಕೆ ಆರ್ಯರು ಪ್ರವೇಶ ಮಾಡಿದ ತರುವಾಯ ಇವರನ್ನೆ ಶಕರೆಂದು ಕರೆಯುತ್ತಾರೆ. ಕಾಲಾಂತರದಲ್ಲಿ ಮಹ್ಮದಿಯ ಮತಕ್ಕೆ ಸೇರಿಕೊಂಡರು. ಇತರ ಮತಕ್ಕೆ ಸೇರಿದ ಮಹಿಳೆಯರು ಹಿಂದೂ ಮಂದಿಯ ಸ್ತ್ರೀಯರಂತೆ ಮದುವೆಯಾಗುವ ಪದ್ಧತಿಯುಂಟು. 'ಕೊಡುವಳಿ' ಪದ್ಧತಿ ತಕ್ಕಮಟ್ಟಿಗುಂಟು. ತಮ್ಮ ಧರ್ಮ, ಶಾಸ್ತ್ರ ಪ್ರಕಾರ ಮದುವೆಯಾಗಿ ಅವರು ನಂತರ ಅದನ್ನು 'ಖಾಜೀ' ಹತ್ತಿರ ಬರಿಸುವ ಪದ್ಧತಿ ರೂಢಿಯಾಗಿಸಿಕೊಂಡು ಒಂದು ನಿಯಮದಂತೆ ಪಾಲಿಸಿಕೊಂಡು ಬಂದಿದ್ದಾರೆ(ಪು.೩೨) ಷೋಡೊಪಚಾರದ ವಿಧಿಯೊಂದು(ಪು.೨೮) ಪ್ರಸ್ತಾಪವಿದೆ. ಮನೆದೇವರಿಗೆ ಹರಕೆ ತೀರಿಸುವ ಸಂದರ್ಭದಲ್ಲಿ ಇದು ಬಳಕೆಯಾಗಿದೆ.

ದಕ್ಷಿಣದೇಶದ ಅಮರಾವತಿಯಲ್ಲಿ ಮಹಾದ್ವಾರದ ಬಳಿ ಒಂದು ಗಣಪತಿಯಾಲಯವಿತ್ತು. ಆ ಪಟ್ಟಣದ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸ ಆರಂಭಿಸುವುದಕ್ಕೆ ಮುಂಚೆ ಮಕ್ಕಳು ವಿದ್ಯಾವಂತರಾಗುವರೋ ? ಇಲ್ಲೊ ಎಂಬ ಪರೀಕ್ಷೆ ನಡೆಸುವ ನಿಯಮವೊಂದು ಇಲ್ಲಿ ಬಂದು ಪ್ರಸಾದ ಕೇಳುವ ಆಚರಣೆಯೊಂದಿತ್ತು(ಪು.೧೦೩). ಈ ರೀತಿಯಾದ ವಿಧಿ ನಿಯಮಗಳು ಶೃಂಗಾರ ಚಾತುರ್ಯೋಲ್ಲಾಸಿನಿ ಕಾದಂಬರಿಯಲ್ಲಿ ಸಾಮಾನ್ಯವಾಗಿ ಕಾಣುವವು. ಇಂತಹ ನಿಯಮಗಳೇ ಶೋಷಣೆಯ ಮೂಲಗಳು ಎಂದು ಗುರುತಿಸಬಹುದು.

ಮದುವೆಯ ವಿಧಿನಿಯಮಕ್ಕೊಂದು ಉದಾಹರಣೆಯು (ಪು.೧೦೨) ದೊರೆಯುವುದು. ಮದುವೆಯ ಮಿತಿಗಳನ್ನು ಹಲವಾರು ರೀತಿಯಲ್ಲಿ ವಿಶ್ಲೇಷಿಸುವರು. ದೊರೆತ ಸಂದರ್ಭ ಬಳಸಿಕೊಳ್ಳಲು ಎಲ್ಲಾ ಗ್ರಹ ಫಲಾಫಲತೆ ಹೀಗೆ ಗುರುತಿಸುವರು. ಆಚಾರ್ಯನು ರಾಜನಿಗೆ 'ನಿನ್ನೆಯ ದಿವಸ ನಿಮ್ಮ ಜಾತಕ ನೋಡಲಾಗಿ ಎಲ್ಲಾ ಗ್ರಹಗಳು ಒಳ್ಳೆಯ ಫಲಗಳನ್ನೇ ಕೊಡುವವಾಗಿವೆ. ಜಾತಕವು ವೃಷಭ ಲಗ್ನವಾಗಿಯೂ ವೃಷಭಾಂತವುಳ್ಳದ್ದಾಗಿಯೂ ಇರುವುದಲ್ಲದೆ. ವೃಷಭಾಂಶದಲ್ಲಿ ಬುಧನು ದಯವಾಗಿರುತ್ತಾನೆ. ವೃಷಭರಾಶಿಯೊಳ್ ವೃಷಭಾಂಶದಲ್ಲಿ ರಾಜಗ್ರಹನು ಲಗ್ನದೊಳ್ ಚಂದನೊ ಮಕರದೊಳ್ ಕುಜನು, ಕನ್ಯಾರಾಶಿಯೊಳ್ ಬುಧನು, ಕಟಕರಾಶಿಯೊಳ್ ಗುರುವು, ಮೀನದಲ್ಲಿ ಶುಕ್ರನು, ತುಲಾರಾಶಿಯೊಳ್ ಶನಿಯೂ ಜನಸರಾಗುವರು. ಅಲ್ಲದೆ ಇದರೊಳಗೆ ಶುಕ್ರಮಹರ್ದಸೆ ಇರುವದರಿಂದ ಇದರ ಫಲಶ್ರುತಿಗಳನ್ನು ಎಷ್ಟೆಂದು ಹೇಳಲಿ' ಎಂದು ಮದುವೆ ವಿಧಿ ನಿಯಮವು ಅಂದು ಇಂದು

ಮುಂದು ಚಾಲ್ತಿಯಲ್ಲಿರುವ ಸಂದರ್ಭಗಳನ್ನು ಗುರುತಿಸಬಹುದು. ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕ ಇಂತಹ ಕಟ್ಟು ಪಾಡುಗಳು ವಿಧಿ ನಿಯಮಗಳು ಇಂದೂ ಚಾಲ್ತಿಯಲ್ಲಿವೆ.

ಗ್ರಾಮ ವೈದ್ಯಕೀಯ ನಂಬಿಕೆಗಳು:

ಜನಪದರು ದೇವರಲ್ಲಿಟ್ಟಷ್ಟೇ ನಂಬುಗೆಯನ್ನು ದೆವ್ವ, ಮಂತ್ರ, ಮಾಟ, ಶಕುನಗಳಲ್ಲಿ ಇಟ್ಟಿರುತ್ತಾರೆ. ದೇವರ ನಂಬುಗೆಯಲ್ಲಿ ನಮ್ರತೆ ಭಕ್ತಿ ಭಾವವಿದ್ದರೆ, ಮಂತ್ರ-ಮಾಟಗಳಲ್ಲಿ ಭಯ ಹಾಗೂ ಪೂರ್ವಗ್ರಹಿಕೆಗಳು ಇರುತ್ತವೆ. ಇಂದಿನ ನಾಗರಿಕತೆಯು ಅವುಗಳ ಪ್ರಭಾವವನ್ನು ತಗ್ಗಿಸಿದೆಯಾದರೂ ಗ್ರಾಮಗಳಲ್ಲಿ ಅವುಗಳ ಅಸ್ತಿತ್ವವನ್ನು ಇನ್ನೂ ಕಾಣುತ್ತೇವೆ. ಒಂದು ಕಾಲದ ಜನರಲ್ಲಿ ನಂಬುಗೆಯ ರೂಪವಾಗಿ ಬಂದಿರುವ ಮಾಟ-ಮಂತ್ರ, ಶಕುನ-ವೈದ್ಯ ಪದ್ಧತಿಗಳನ್ನು ಕನ್ನಡ ಪ್ರಾದೇಶಿಕ ಕಾದಂಬರಿಗಳಲ್ಲಿಯೂ ದಾಖಲಿಸಲಾಗಿದೆ.

ಹಳ್ಳಿಗಳಲ್ಲಿ ಯಾರಿಗಾದರೂ ಕಾಯಿಲೆ ಬಂದರೆ, ಮಗು ಚಂಡಿ ಹಿಡಿದರೆ, ರಾವು ಹಿಡಿದರೆ, ದನ ಹಾಗೂ ಇತರ ಪ್ರಾಣಿಗಳಿಗೆ ಜಾಡ್ಯ ಹಿಡಿದರೆ, ಹಸು ಹಾಲು ಕರೆಯದಿದ್ದರೆ, ಮಂತ್ರವಾದಿ, ಪೂಜಾರಿ, ಜೋಯಿಸ ಮೊದಲಾದವರಿಂದ ಮಂತ್ರ ಹಾಕಿಸಿ ತಾಯಿತ (ಯಂತ್ರ)ಗಳನ್ನು ಕಟ್ಟಿಸುತ್ತಿದ್ದರು.

'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ಸೀತಮ್ಮ ದೇಹಾಲಸ್ಯದಿಂದ ಮೂರ್ಛಿತಳಾಗಿ ಬಿದ್ದಾಗ ರಾವು ಬಡಿದಿರಬೇಕೆಂದು ಕೆಂಪು ನೀರನ್ನು ತೆಗೆದು ಹಾಕಿಸಿ ಇಂದ್ರಾಕ್ಷಿ ಶಿವಕವಚವನ್ನು ಹೇಳಿ ಮಂತ್ರ ಹಾಕಿಸುವರು(೧೯೮೩:೧೩೪).

ಮಾಟ ಇಲ್ಲವೇ ಮದ್ದನ್ನು ವಿಶೇಷವಾಗಿ ತಮಗಾಗದವರ ಮೇಲೆ ಉಪಯೋಗಿಸುತ್ತಿದ್ದರು. ಮಾಟದ ಪ್ರಭಾವಕ್ಕೆ ಒಳಗಾದ ವ್ಯಕ್ತಿಗಳು ಮಾಟ ಮಾಡಿದವರ ನಿಯಂತ್ರಣಕ್ಕೊಳಗಾಗುವರು. ಆ ಪ್ರಭಾವದಿಂದ ಬಿಡುಗಡೆಗೊಳಿಸಲು ಇನ್ನೊಬ್ಬ ಮಂತ್ರವಾದಿಯೇ ಬೇಕು.

'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ಸೀತಮ್ಮಳ ಮೇಲೆ ಅಮ್ಮನವರ ಗುಡಿಯ ಪೂಜಾರಿ ಸಿದ್ಧ ಕಾಮದೃಷ್ಟಿ ಹಾಯಿಸಿ ಅವಳನ್ನು ವಶೀಕರಣ ಮಾಡಿಕೊಳ್ಳಲು ಅಪಾರ ಪ್ರಯೋಗ ಮಾಡುವನು. ದಿನೇದಿನೇ ಸೀತೆ ಕೃಶಳಾಗಿ ಹಾಸಿಗೆ ಹಿಡಿದು, ಪ್ರಜ್ಞೆ ಕಳೆದುಕೊಳ್ಳುವಳು. ನಿಜಕ್ಕೂ ಅವಳು ಸತ್ತಳೆಂದೇ ಭಾವಿಸಿ ಸ್ಮಶಾನಕ್ಕೆ ಕೊಂಡೊಯ್ದು ಸಂಸ್ಕಾರ ಮಾಡುವರು. ಆದರೆ ಕೊಯಿಮತ್ತೂರಿನ ಪ್ರಾಂತಕ್ಕೆ ಹೋಗುವ ದಾರಿಯಲ್ಲಿ ಆಂಧ್ರದ ಭಟಜಿ ಎಂಬುವನು ಸೀತೆಯನ್ನು ನೋಡಿದನು. ಅವಳಲ್ಲಿ ಇನ್ನೂ ಜೀವವಿದೆ, ಯಾವುದೋ ಮಾಟದ ಪ್ರಭಾವಕ್ಕೆ ಒಳಗಾಗಿದ್ದಾಳೆಂದು ತಿಳಿದುಕೊಂಡು ಮಾಟ ಪರಿಹಾರ ಮಾಡುವನು. (೧೯೮೩:೧೮೭)

ಮಾಟ ಮಾಡುವವರು ಯಾರ ಮೇಲೆ ಮಾಟ ಮಾಡಬೇಕಾಗಿರುತ್ತದೆಯೋ ಅವರ ಹಳೆ ಬಟ್ಟೆ, ಉಣ್ಣುವ ಆಹಾರ, ಇಲ್ಲವೆ ಅವರು ಸಂಚರಿಸುವ ದಾರಿಯಲ್ಲಿ ಗೊಂಬೆಯನ್ನು ಹೂಳಿಟ್ಟು ಅದರ ಮೇಲೆ ಮಂತ್ರ ಪ್ರಯೋಗಿಸುವರು. ಹೀಗೆ ಮಾಡುವುದರಿಂದ ಮಾಟಕ್ಕೆ ಒಳಗಾದ ವ್ಯಕ್ತಿ ಚಿತ್ರಹಿಂಸೆಯನ್ನು ಅನುಭವಿಸುವನು. ಕೆಲವು ಸಲ ಊಟದಲ್ಲಿ ಮದ್ದನ್ನು ಹಾಕಿಸಿ ಕೊಲ್ಲುವಂತೆ ಮಾಡುತ್ತಾರೆ. 'ಇಂದಿರಾಬಾಯಿ'ಯಲ್ಲಿ ಸುಂದರರಾಯನು ಭೀಮರಾಯನಿಂದ ಅಂಥ ಪ್ರಯೋಗಕ್ಕೆ ಬಲಿಯಾಗುವನು.

ನಮ್ಮ ಗ್ರಾಮೀಣರು ಮಾಟಮಂತ್ರ, ಶಕುನಗಳಂತೆ ಜನಪದ ವೈದ್ಯ ಪದ್ಧತಿಯಲ್ಲಿಯೂ ಧಾರ್ಮಿಕ ಹಿನ್ನೆಲೆಯಲ್ಲಿ ಬಲವಾದ ನಂಬಿಕೆಯನ್ನು ಹೊಂದಿರುತ್ತಾರೆ. ಜನಪದ ವೈದ್ಯನನ್ನು ಹಳ್ಳಿಗಳಲ್ಲಿ ಪಂಡಿತನೆಂದು ಕರೆಯುವ ರೂಢಿಯಲ್ಲಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಆಧುನಿಕತೆ ಕಾಲಿಡುವ ಪೂರ್ವದಲ್ಲಿ ನಾಟಿವೈದ್ಯ ತುಂಬಾ ಜನಪ್ರಿಯವಾಗಿತ್ತು. ಗಿಡಮೂಲಿಕೆಗಳನ್ನು ಔಷಧಿಗಳನ್ನಾಗಿ ಬಳಸುತ್ತಿದ್ದರು. 'ಇಂದಿರಾಬಾಯಿ'ಯಲ್ಲಿ ಅಲೋಪತಿ ವೈದ್ಯಕೀಯ ಔಷಧಿಗಳನ್ನು ವಿಡಂಬನಾತ್ಮಕ ದೃಷ್ಟಿಯಿಂದ ನೋಡಲಾಗಿದೆ. ಔಷಧಿಗಳನ್ನು ಕೊಡುವವರು ರೋಗದ ಗುಣಲಕ್ಷಣಗಳನ್ನು ಅನುಸರಿಸಿ ಉಪಚರಿಸುತ್ತಿದ್ದರು. ಇಂದಿರಾಬಾಯಿಯಲ್ಲಿ ದೇವಕಿ ಎಂಬವಳು ಬದನೆಕಾಯಿ ಬಜ್ಜಿಯಲ್ಲಿ ಮದ್ದಿನ ಔಷಧಿಯನ್ನು ಕೊಟ್ಟಿದ್ದಳು. (೧೯೮೩:೧೧೭)

ಸಾಮಾನ್ಯವಾಗಿ ನಾಟಿವೈದ್ಯರು ಔಷಧಿಗಳನ್ನು ಕೊಡುವಾಗ ಅವುಗಳ ಹೆಸರನ್ನು ಬಹಿರಂಗಪಡಿಸುವುದಿಲ್ಲ. ಹಾಗೆ ಮಾಡಿದರೆ ಅವುಗಳ ಮಹತ್ವ ಕಡಿಮೆಯಾಗುವುದರ ಜೊತೆಗೆ ಔಷಧಿ ನಾಟುವುದಿಲ್ಲ ಎಂಬ ಬಲವಾದ ನಂಬಿಕೆಯನ್ನು ಹೊಂದಿರುತ್ತಾರೆ. ಮಲೆನಾಡು, ಕರಾವಳಿ ತೀರ, ಬಯಲುನಾಡು ಹೀಗೆ ಅನೇಕ ಕಡೆಗಳಲ್ಲಿ ನಾಟಿವೈದ್ಯ ಪದ್ಧತಿಯನ್ನು ಕಾಣುತ್ತೇವೆ.

ವೈದ್ಯಕೀಯ ಉಪಚಾರಗಳು ಸಾರ್ವಕಾಲಿಕವಾಗಿ ವಿಭಿನ್ನ ಕಾಲಕ್ಕೆ ವಿಭಿನ್ನ ರೀತಿಯಲ್ಲಿ ಬಳಕೆಯಲ್ಲಿವೆ. ಕಾಲ, ಮತ್ತು ಕಾಯಿಲೆಗೆ ವೈದ್ಯಕೀಯ ಉಪಚಾರಗಳು ಬಳಕೆಯಲ್ಲಿವೆ. ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಈ ರೀತಿಯಾದ ಹಲವಾರು ವೈದ್ಯಕೀಯ ವಿಧಾನಗಳು ಬಳಕೆಯಲ್ಲಿರುವುದು ಕಾಣುವುವು. ಜನರ ನೋವು, ಕಾಯಿಲೆಗಳು, ಅಸ್ವಸ್ಥರಾದ ಸಂಗತಿಗಳಿಗೆ ಉಪಚಾರಗಳನ್ನು ಆಶ್ರಯಿಸಿದ್ದರು. ಈ ರೀತಿಯ ಉಪಚಾರಗಳನ್ನು ಡಾ. ಗುರುಪಾದ ಮರಿಗುದ್ದಿಯವರು ಈ ಚಿಕಿತ್ಸೆಯನ್ನು ೨ ರೀತಿಯಾಗಿಸಿದ್ದಾರೆ – ಒಂದು 'ಮಂತ್ರೋಪಚಾರ'ವಾದರೆ ಇನ್ನೊಂದು 'ನಿಸರ್ಗೋಪಚಾರ'[೩೭] ಎಂದು ವಿಭಾಗಿಸಿದ್ದಾರೆ.

ಮಾಟ ಮಂತ್ರಗಳಿಂದ ತೊಂದರೆ, ಸಮಸ್ಯೆಗಳಿಗೆ ಪರಿಹಾರ ಪಡೆಯುವಂತೆ, ರೋಗ ರುಜಿನಗಳ ಪರಿಹಾರದಲ್ಲೂ ಪಡೆಯುತ್ತಿದ್ದರು. ತಾಮ್ರದ ತಾಯಿತ ಕಟ್ಟಿಸುವುದು, ಕೈಯಲ್ಲಿ ಕೊರಳಲ್ಲಿ ಕರಿದಾರ ಮಂತ್ರಿಸಿ

ಕಟ್ಟುವುದು. ಮಂತ್ರಿಸಿದ ಲಿಂಬೆ ಹಣ್ಣು ಹೊಟ್ಟೆಗೆ ತೆಗೆದುಕೊಳ್ಳುವದು. ಏನೋ ಒಂದು ಶ್ರದ್ಧೆ, ನಂಬಿಕೆಗಳಿಂದ ಈ ರೀತಿಯ ಉಪಚಾರ ಪಡೆಯುವುದು ಈಗಲೂ ಹಳ್ಳಿಗಳಲ್ಲಿ ಕಾಣುವೆವು. ಸರ್ಪಹುಣ್ಣು ಆದರೆ ವಿಭೂತಿ ಬರೆಯುವದು, ಹೊಟ್ಟೆ ನೋವಿಗೆ ಅಜವಾನ ತಿನ್ನುವ ವಾಡಿಕೆಗಳು ಇವೆ. ಈ ಸಂಗತಿಗಳೆಲ್ಲವು ಬಡವರ, ಕೆಳವರ್ಗದವರ ಕಾಯಿಲೆಗೆ ಹೆಚ್ಚಾಗಿ ಬಳಕೆಯಾಗಿವೆ.

ಇಂದಿರಾಬಾಯಿ ಕಾದಂಬರಿಯಲ್ಲಿ ಗ್ರಾಮ ವೈದ್ಯಕೀಯ ಕೆಲವು ನಂಬಿಕೆಗಳು ಬಳಕೆಗೊಂಡಿವೆ. "ವೆಂಕಟರಾಯನು ಭೀಮರಾಯನ ಅಪ್ಪಣೆಯ ಪ್ರಕಾರ ಔಷಧಿಯ ಚೀಲದಿಂದ ಸ್ವರ್ಗಾಂಜನ ಮಾತ್ರೆ"[೩೮] ಕೊಡುವ ಪ್ರಸಂಗ ಇಂದಿರಾಬಾಯಿ ಕಾದಂಬರಿಯಲ್ಲಿ ಬರುವುದು. ಇದು ಬಡವರ ಶೋಷಣೆಗೆ ಕಾರಣವಾಗಿರಲಿಲ್ಲವೆಂಬುದು ಇಲ್ಲಿ ಗಮನೀಯವಾದದ್ದು.

ಸರದಾರಸಿಂಗನು "ತಲೆನೋವಿಗೂ ಹೊಟ್ಟೆ ಕಡಿತಕ್ಕೂ ಗಿಡ ಮೂಲಿಕೆಗಳನ್ನು ಕೊಡುವನು."[೩೯] ಈ ಪ್ರಸಂಗ ಇಂದಿರಾ ಕಾದಂಬರಿಯಲ್ಲಿ ಕಾಣುವುದು. ಸಸ್ಯ ಸಂಪತ್ತಿನಲ್ಲಿ ಔಷಧಿಯ ಗುಣ ಇರುವ ಗಿಡಮೂಲಿಕೆ ವಿಚಾರ ತಲೆತಲಾಂತರದಿಂದ ಬೆಳದುಕೊಂಡು ಬಂದಿದ್ದು. ಇದು ಜನರಿಗೆ ಅನುಕೂಲಕರವಾದದ್ದೆಂಬುದು ಸಾಮಾಜಿಕ ಕಾಳಜಿಯಾಗಿದೆ. ಇಂದಿರಾ ಕಾದಂಬರಿಯಲ್ಲಿ ಗ್ರಾಮ ವೈದ್ಯಕೀಯ ಕಂಡರೂ ಯಥೇಚ್ಚವಾಗಿಲ್ಲ. 'ಗಾಯಕ್ಕೆ ಗಾಮೇರಿ ತಪ್ಪಲು ಹಚ್ಚುವುದು' 'ಹಳೆ ಗಾಯಕ್ಕೆ ಹಳೆಯ ಬೇವಿನ ಮರದ ತೊಗಟೆ ತಿಕ್ಕಿ ಹಚ್ಚಿದರೆ ಮಾಯವಾಗುವ ಗಾಯಗಳು' ಇಂತಹ ನಂಬಿಕೆಗಳು ಸರ್ವೆ ಸಾಮಾನ್ಯ ವೈದ್ಯಕೀಯತೆಗಳು ಗ್ರಾಮೀಣ ಭಾಗದಲ್ಲಿ ಇದ್ದವು. ಚಿಕ್ಕಪುಟ್ಟ ಕಾಯಿಲೆಗಳಿಗೆ ತೊಂದರೆಗಳಿಗೆ ಉಪಚಾರಗಳನ್ನು ತಾವೆ ಮಾಡಿಕೊಳ್ಳುತ್ತಿದ್ದರು. ಹಳೆಯ ತಲೆಮಾರಿನ ವ್ಯಕ್ತಿಗಳು ತಾವು ಬಳಸುತ್ತಿದ್ದ ವೈದ್ಯಕೀಯ ಗೌಪ್ಯತೆ ಕಾಪಾಡಿಕೊಂಡು ಬರುತ್ತಿದ್ದರು. ಕ್ರಮೇಣ ಸಮೀಪದ ವಿಶ್ವಾಸಿಕ ವ್ಯಕ್ತಿಗೆ ಅಂತಹ ಔಷಧಿಯ ಗುಣಾವಗುಣಗಳನ್ನು ಹೇಳಿಕೊಡುವ ಪರಿಪಾಟಲು ಚಾಲ್ತಿಯಲ್ಲಿರುವುದು ಕಾಣುತ್ತೇವೆ. ಈ ರೀತಿಯ ಔಷಧಿಯು ಗ್ರಾಮ್ಯ ಭಾಗದಲ್ಲಿ ಈಗಲೂ ಚಾಲ್ತಿಯಲ್ಲಿದೆ. ಈ ರೀತಿಯ ಸಂದರ್ಭಗಳು ಅಂದಿನ ಕಾಲದಲ್ಲಿ ಬಳಕೆಯಲ್ಲಿದ್ದುದು ಕಾಣುವುದು.

ಮಂತ್ರಶಕ್ತಿಯ ಉದಾಹರಣೆಗೆ ಮಾಡಿದ್ದುಣ್ಣೋ ಮಾಹಾರಾಯ ಕಾದಂಬರಿಯ ಸೀತಮ್ಮನು ಪೂಜೆಗೆ ಹೋಗಿ ಬರುವ ದಾರಿಯಲ್ಲಿ ಅಮ್ಮನ ಗುಡಿಯ ಪೂಜಾರಿ ಮರದಲ್ಲಿ ಮಾಡಿದ ಹೆಣ್ಣು ಬೊಂಬೆಗೆ ಎಲ್ಲಾ ಭಾಗಕ್ಕೂ ಮೊಳೆ ಜಡಿದಿತ್ತು. ಭಟಜಿ ಮಂತ್ರ ಶಕ್ತಿಯಿಂದ ಪೂಜಾರಿಯ ಕೈಯಿಂದ ಆ ಗೊಂಬೆ ತರಿಸಿ ಸುಟ್ಟು ಹಾಕಿದನು. ಮಂತ್ರವಾದಿ ತನ್ನ ಬೆತ್ತದಿಂದ ಪೂಜಾರಿಯ ಎರಡು ಕೆನ್ನೆಯನ್ನು ಮುಟ್ಟಿದನು. ಮಹಾ ಸಂಕಟವಾಗಿ ರಕ್ತವನ್ನು ಕಾರಿಕೊಂಡು ಬಾಯಲ್ಲಿನ ಹಲ್ಲು ಉದುರಿಹೋದ ಪ್ರಸಂಗ ಪುನಃ ಬೆತ್ತದಿಂದ ತಲೆಯ ಮೇಲೆ ಭಟಜಿ ಒಂದು ಏಟನ್ನು ಕೊಟ್ಟನು. "ನಿನ್ನ ಹಲ್ಲನ್ನು ಉದುರಿಸಿದ್ದೇನೆ.

ಇನ್ನು ಮೇಲೆ ನೀನು ಯಾರಿಗೂ ಇಂಥಾ ಕೇಡನ್ನು ಮಾಡಲಾರೆ. ನೀನು ಪರಮ ನೀಚ. ಈ ಮಹಾ ಪತಿವ್ರತೆಗೆ ನೀನು ಎರಡು ಬಗೆದದ್ದಕ್ಕೆ ಇನ್ನು ಕಷ್ಟವನ್ನು ನೀನು ಅನುಭವಿಸಿಯೇ ತೊಲಗಾಚೆಗೆ"[೪೦] ಎಂಬ ಸಂಗತಿ ಮಂತ್ರೋಪಚಾರದ ಉದಾಹರಣೆಯಾಗಿದೆ. ಮಾಟ ಮಂತ್ರ ಆ ಕಾಲದ ಸಂದರ್ಭಗಳಲ್ಲಿ ಲೇಖಕರ ಪ್ರತಿಕ್ರಿಯೆ ಜನರ ಪ್ರತಿಕ್ರಿಯೆಗಳೆಂದು ಗಮನಿಸಲಾಗಿದೆ.

ಇಂದಿರಾಬಾಯಿ ಕಾದಂಬರಿಯ ಭೀಮರಾಯ, ತ್ರಿಯಂಬಕರಾಯ, ವೆಂಕಟರಾಯ ಮಾತುಕತೆಯ ಸಂದರ್ಭದಲ್ಲಿ ಭೀಮರಾಯ ವೈದ್ಯರನ್ನು ನೋಡಿ ಅನುಪತ್ಯಕ್ಕೆ ಬೇಕಾದ ಔಷಧಿಗಳನ್ನೆಲ್ಲ ತಂದಿದ್ದರಷ್ಟೇ? ಎಂದಾಗ "ಅಂಜನ, ಚೂರ್ಣ, ಭಸ್ಮ, ಮಾತ್ರೆ, ರಸಾಯನ, ಘೃತ, ಕರ್ತಗಳಿಗೆ, ಮರ್ಮಗುಳಿಗೆ, ಪಾಷಾಣ ದ್ರಾವಕ, ಜ್ವರಾಂತಕ ತೈಲ, ಇವೆ ಮುಂತಾದ ಅಷ್ಟಾಂಗ ಹೃದಯದಲ್ಲಿ ಹೇಳಿರುವ ಸಕಲ ಔಷಧಿಗಳನ್ನು ತಂದಿದ್ದೇನೆ. ರೋಗಿಯೆಲ್ಲಿ?"[೪೧] ಎಂಬಲ್ಲಿ ಅಂದಿನ ಔಷಧಿಗಳ ಪಟ್ಟಿಯೇ ದೊರೆಯುವದು.

ಗೊತ್ತಿದ್ದು ಜರಗುವ ವೈದ್ಯಕೀಯ ಕ್ರಿಯೆಗಳು ಸ್ತ್ರೀ, ಪುರುಷರನ್ನು ಇಕ್ಕಟ್ಟಿಗೆ ಸಿಲುಕಿಸಿದ ಪ್ರಸಂಗಗಳಿವೆ. ಇಂದಿರಾಬಾಯಿ ಕಾದಂಬರಿಯ ಕಾವೇರಿ ಹಾಗೂ ದೇವಕಿಯರ ನಡುವಿನ ಸಂವಾದಕ್ಕೆ ಕಳ್ಳ ಔಷಧಿಯೊಂದು ಪ್ರಸಾರಕ್ಕೆ ಬರುವದು. ಕಾವೇರಿಗೆ ಕಳ್ಳ ಬಸುರಿ ಪ್ರಸಂಗ ಮುಚ್ಚಿ ಹಾಕಲು "ತಿನ್ನುವ ವಸ್ತುವಿನಲ್ಲಿ ಯಾರ ಕಣ್ಣಿಗೂ ಕಾಣದ ಹಾಗೆ ಕೂಡಿಸುವ, ನೀರಿನಂತೆ ತೆಳ್ಳಗಿರುವ ಔಷಧಿಗಳಿವೆ. ಅವುಗಳನ್ನು ಸುಣ್ಣದಲ್ಲಿ ಕಲಸಿ ವೀಳ್ಯೆದೆಲಿ ತಿಂದರೆ ಸರಿ ಕೂಡಲೇ ಗರ್ಭವಿಳಿದು ಹೋಗುವದು."[೪೨] ಇದು ಕಳ್ಳ ಬಸುರಿಯ ಕಳ್ಳ ಔಷಧಿ ಜಾರಿಯಲ್ಲಿರುವದು ಕಾಣುವದು. ಗ್ರಾಮ ವೈದ್ಯಕೀಯದಲ್ಲಿ ನಂಬಿಕೆಗಳ ಮಹತ್ತರ ಪಾತ್ರವನ್ನು ಇಲ್ಲಿ ಕಾಣುತ್ತೇವೆ. ಇರುವ ಸಮಸ್ಯೆಗಳಿಗೆ ಪರಿಹಾರ ಪಡೆಯುವಂತೆ ರೋಗರುಜಿನಗಳಲ್ಲಿಯೂ ಪರಿಹಾರವನ್ನು ಪಡೆಯುತ್ತಿದ್ದೇವೆ. ಅವುಗಳೆಲ್ಲವನ್ನು ಸಾಮಾಜಿಕವಾಗಿ ಜನರು ನಂಬುವಂತೆ ಮಾಡಿದ್ದು ಇಲ್ಲಿ ಕಾಣುವುದು.

ಅಡಿ ಟಿಪ್ಪಣಿಗಳು

೧. ಮೂಲ-ಪ್ರಧಾನ ಗುರುದತ್ತ, ಕನ್ನಡಕ್ಕೆ: ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ.

೨. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪು. ೧೨೧.

೩. ಅದೇ, ಪು. ೧೨೧.

೪. ೧. ಇಂದಿರಾಬಾಯಿ, ಪು-೨, ೨. ಇಂದಿರಾಬಾಯಿ, ಪು-೨೧, ೩. ಇಂದಿರಾಬಾಯಿ, ಪು-೬೪, ೪. ಇಂದಿರಾಬಾಯಿ, ಪು-೬೬, ೫. ಇಂದಿರಾಬಾಯಿ, ಪು-೧೨೯, ೬. ಇಂದಿರಾಬಾಯಿ, ೭೭-೭೮, ೭. ಇಂದಿರಾಬಾಯಿ, ಪು-೮೫, ೮. ಇಂದಿರಾಬಾಯಿ, ಪು-೯೩, ೯. ಇಂದಿರಾಬಾಯಿ, ಪು-೨೦೮, ೧೦. ಇಂದಿರಾ, ಪು-೨೨೯, ೧೧. ಇಂದಿರಾ, ಪುಟ-೩೦೬, ೧೨. ಇಂದಿರಾ ಪು-೧೪೪, ೧೩. ಮಾಡಿದ್ದುಣ್ಣೋ ಮಾಹಾರಾಯ, ಪು-೨೯, ೧೪. ಮಾಮ, ಪುಟ-೫೨.

೫. ೧. ವಾಗ್ದೇವಿ, ಪು-೮, ೨. ಮಾಡಿದ್ದುಣ್ಣೋ ಮಹಾರಾಯ, ಪು-೬೮, ೩. ಮಾ ಮ, ಪು-೮೦, ೪. ಮಾ ಮ, ಪು-೮೩, ೫. ಮಾ ಮ, ಪು-೯೫, ೬. ಮಾ ಮ, ಪು-೧೧೪, ೭. ಮಾ ಮ, ಪು-೧೧೯, ೮. ಮಾ ಮ, ಪು-೧೧೯, ೯. ಮಾ ಮ, ಪು-೧೨೫, ೧೦. ಮಾ ಮ, ಪು-೧೨೬, ೧೧. ಮಾ ಮ, ಪು-೧೩೨, ೧೨. ಮಾ ಮ, ಪು-೧೩೬, ೧೩. ಮಾ ಮ, ಪು-೧೪೮.

೬. ೧೪. ಮಾ.ಮ., ಪು-೧೫೦, ೧೫. ವಾಗ್ದೇವಿ, ಪು-೧೬೮, ೧೬. ವಾಗ್ದೇವಿ, ಪು-೨೦, ೧೭. ನಭಾ, ಪು-೧೪, ೧೮. ನಭಾ ಪು-೧೫, ೧೯. ನಭಾ ಪು-೨೦, ೨೦. ನಭಾ, ಪು-೧೮, ೨೧. ನಭಾ, ಪು-೨೪, ೨೨. ಮಾ.ಮ., ಪು-೧೮೪, ೨೩. ಮಾ.ಮ., ಪು-೧೮೪, ೨೪. ಮಾ.ಮ., ಪು-೧೭೦.

೭. ೧.ಶೃ.ಚಾ., ಪು-೧೬, ೨. ಶೃ.ಚಾ., ಪು-೨೮, ೩. ಶೃ.ಚಾ., ಪು-೧೦೩, ೪. ಶೃ.ಚಾ., ಪು-೧೦೫. ೫. ಶೃ.ಚಾ., ಪು-೧೧೧. ೬. ಶೃ.ಚಾ., ಪು-೧೬೩. ೭. ಶೃ.ಚಾ., ಪು-೧೬೪. ೮. ಶೃ.ಚಾ., ಪು-೧೬೫. ೯. ಶೃ.ಚಾ., ಪು-೧೬೫. ೧೦. ಇಂದಿರಾ. ಪ್ರ-೧೯೪. ೧೧. ನಭಾ. ಪು-೩೬.

೮. ೧. ಓ.ಹ., ಪು-೯೭. ೨. ಓ.ಹ., ಪು-೯೭. ೩. ಓ.ಹ., ಪು-೧೧೪. ೪. ಓ.ಹ., ಪು-೧೧೪. ೫. ಓ.ಹ., ಪು-೧೧೬. ೬. ಓ.ಹ., ಪು-೧೧೬. ೭. ಓ.ಹ., ಪು-೧೧೯. ೮. ಓ.ಹ., ಪು-೧೧೯. ೯. ಓ.ಹ., ಪು-೧೨೭. ೧೦. ಓ.ಹ., ಪು-೧೩೦. ೧೧. ಓ.ಹ., ಪು-೧೩೭. ೧೨. ಓ.ಹ., ಪು-೧೮೩. ೧೩. ಓ.ಹ., ಪು-೨೦೨. ೧೪. ಓ.ಹ., ಪು-೨೧೩. ೧೫. ಓ.ಹ., ಪು-

೨೧೪, ೧೬. ಹಿ.ಹೆ., ಪು-೨೨೯, ೧೭. ಹಿ.ಹೆ., ಪು-೨೩೧, ೧೮. ಹಿ.ಹೆ., ಪು-೨೫೯, ೧೯. ಇಂ.ಬಾ., ಪು-೧೨೭, ೨೦. ಮಾ.ಮ., ಪು-೧೭೧, ೨೧. ಮಾ.ಮ., ಪು-೧೭೦, ೨೨. ಮಾ.ಮ., ಪು-೧೭೨.

೯. ಗುಲ್ವಾಡಿ ವೆಂಕಟರಾಯ - ಇಂದಿರಾಬಾಯಿ, ಪು.೪.

೧೦. ಪುಟ್ಟಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು.೧೧೮.

೧೧. ಅದೇ,

೧೨. ಗುಲ್ವಾಡಿ ವೆಂಕಟರಾಯ - ಇಂದಿರಾಬಾಯಿ, ಪು.೧೯.

೧೩. ಗುಲ್ವಾಡಿ ವೆಂಕಟರಾಯ - ಇಂರಾಬಾಯಿ, ಪು.೧೨೯.

೧೪. ಪುಟ್ಟಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು. ೧೦೭.

೧೫. ಪುಟ್ಟಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರ್ರಾಯ, ಪು. ೧೨೮

೧೬. ಪುಟ್ಟಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು. ೧೭೧.

೧೭. ಪುಟ್ಟಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು. ೯೪.

೧೮. ಪುಟ್ಟಣ್ಣ ಎಮ್.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು.೯೪, ೯೫.

೧೯. ಗುಲ್ವಾಡಿ ವೆಂಕಟರಾಯ - ಇಂದಿರಾಬಾಯಿ, ಪು.೬೦.

೨೦. ಕೆರೂರು ವಾಸುದೇವಾಚಾರ್ಯ - ಇಂದಿರಾಬಾಯಿ, ಪು.೩೦೭.

೨೧. ಕೆರೂರು ವಾಸುದೇವಾಚಾರ್ಯ - ಇಂದಿರಾಬಾಯಿ, ಪು.೨೭.

೨೨. ಕೆರೂರು ವಾಸುದೇವಾಚಾರ್ಯ - ಇಂದಿರಾಬಾಯಿ, ಪು.೩೨

೨೩. ಪುಟ್ಟಣ್ಣ ಎಮ್.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು.೧೦೨,

೨೪. ಬೋಳಾರು ಬಾಬುರಾವ್, ವಾಗ್ದೇವಿ, ಪು.೧೧೦.

೨೫. ಬೋಳಾರು ಬಾಬುರಾವ್, ವಾಗ್ದೇವಿ, ಪು.೨೨೩.

೨೬. ಪುಟ್ಟಣ್ಣ ಎಮ್.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು.೧೭೬.

೨೭. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೬೬.

೨೮. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೭೭.

೨೯. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೭೮.

೩೦. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೪.

೩೧. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೪೨.

೩೨. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೪೨.

೩೩. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೭೦.

೩೪. ಕೆರೂರು ವಾಸುದೇವಾಚಾರ್ಯ, ಇಂದಿರಾಬಾಯಿ, ಪು.೨೩೩.

೩೫. ನಮ್ಮ ಊರಾದ ಶೀಮಿಕೇರಿ ಗ್ರಾಮದಲ್ಲಿರುವ ಕೆಲವು ಮರಣಕಾಲದ ವಿಧಿ ಕ್ರಿಯೆಗಳು.

೩೬. ವಿಜಯಾ ದಬ್ಬೆ, ಹಿತೈಷಿಣಿ ಹೆಜ್ಜೆಗಳು, ಪು.೧೮.

೩೭. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಂಸ್ಕೃತಿಕ ಅಧ್ಯಯನ, ಪು.೧೪೪.

೩೮. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೨೯.

೩೯. ಇಂದಿರಾ, ಕೆರೂರು ವಾಸುದೇವಾಚಾರ್ಯ, ಪು.೩೨.

೪೦. ಪುಟ್ಟಣ್ಣ ಎಮ್.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪು.೧೭೬.

೪೧. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೧೨೨.

೪೨. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಪು.೮.

ಅಧ್ಯಾಯ – ೬

ಮೊದಲ ಸ್ವತಂತ್ರ ಕಾದಂಬರಿಗಳು

ವಸ್ತು ಮತ್ತು ಭಾಷೆ

ಶೈಲಿ

ತಂತ್ರಗಳು

ಅಧ್ಯಾಯ - ೬

ಮೊದಲ ಸ್ವತಂತ್ರ ಕಾದಂಬರಿಗಳ ವಸ್ತು, ಭಾಷೆ, ಶೈಲಿ ತಂತ್ರಗಳ ವಿಶ್ಲೇಷಣೆ

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಕಾರರು ಅವರವರ ದೃಷ್ಟಿಕೋನಗಳಿಗೆ ಅನುಗುಣವಾಗಿ ತಮ್ಮ ಭಾಷಿಕ ನೆಲೆಯನ್ನು ಪಡೆದುಕೊಂಡಿರುವುದು ವಿದಿತವಾಗಿದೆ. ಅದು ಒಂದೇ ಬಗೆಯದ್ದಾಗಿರಬೇಕೆಂಬ ನಿಯಮವಿಲ್ಲ. ಒಂದು ಕಾದಂಬರಿಯೊಳಗೆ ವಸ್ತುವಿನ ಉದ್ದೇಶ, ಪಾತ್ರ ಸಂಯೋಜನೆ ಮತ್ತು ನಿರೂಪಣಾ ಕ್ರಮಗಳು ಅಭಿವ್ಯಕ್ತಿಯ ಆಯಾಮವನ್ನು ಬದಲಿಸುತ್ತವೆ. ಆದುದ್ದರಿಂದ ಕಾದಂಬರಿಯ ರಚನೆಗಾಗಿ ದುಡಿಯುವ ಭಾಷೆ ಕೇವಲ ಶಾಬ್ದಿಕ ರೂಪದ್ದಾಗಿರುವುದಿಲ್ಲ. ಅರ್ಥ, ಸುಳಿಗಳ ಘಟಕವಾಗಿರುತ್ತದೆ. ಅಂದರೆ, ಕಾದಂಬರಿಯೊಂದರ ಭಾಷಿಕ ವಿಶ್ಲೇಷಣೆ ಎಂಬುದು ಘಟನೆ, ಪಾತ್ರ, ಸನ್ನಿವೇಶಗಳನ್ನು ಕುರಿತದ್ದೇ ಆಗಿರುತ್ತದೆ. ಕನ್ನಡದ ಮೊದಲ ಘಟ್ಟದ ಕಾದಂಬರಿಗಳ ವಸ್ತು ಮತ್ತು ಭಾಷೆಯ ದೃಷ್ಟಿಯಿಂದ ಹೆಚ್ಚಿನ ಅನನ್ಯತೆಯನ್ನು ಸಾಧಿಸಿವೆ. ಅಲ್ಲಲ್ಲಿ ಹೊಸ ಹೊಸ ನಿರೂಪಣಾ ತಂತ್ರಕ್ಕಾಗಿ ಹವಣಿಸಿದಂತಿದೆ.

ಪಾಶ್ಚಿಮಾತ್ಯ ಸಾಹಿತ್ಯದ ಸಂಪರ್ಕ ಅಧ್ಯಯನದ ಮೂಲಕ ಭಾರತಕ್ಕೆ ಪ್ರವೇಶ ಪಡೆದ ಕಾದಂಬರಿ ಸ್ವಲ್ಪ ಸಮಯದಲ್ಲೇ ಜನಪ್ರಿಯ ಮಾಧ್ಯಮವಾಗಿ ಬೆಳೆದ ಪರಿ ಆಶ್ಚರ್ಯಕರವಾದದ್ದು. ಕಾದಂಬರಿ ವಿಷಯದಲ್ಲಿ ಹಾಗೆ ಸೂತ್ರೀಕರಿಸುವುದು ಬಹು ದುಷ್ಕರ ಆದರೂ "ಸಾಹಿತ್ಯಭಿವ್ಯಕ್ತಿಯ ಮಹಾಪ್ರಕಾರಗಳಲೆಲ್ಲ ಅತ್ಯಂತ ನಮ್ಯ(Elastic)ವೂ ಕ್ರಮ ರಹಿತವೂ ಆಗಿರುವ ಈ ಕಾದಂಬರಿಗೆ ಕೂಡ ಕೆಲವು ನಿಯಮಗಳು ಉಂಟೇ ಉಂಟು; ಅವುಗಳಲ್ಲಿ ಹೆಚ್ಚು ಸಾರ್ವತ್ರಿಕವೂ ಮುಖ್ಯವೊ ಅದನ್ನು ಕಂಡು ಹಿಡಿದು, ಅವುಗಳನ್ನು ಸ್ಪಷ್ಟಪಡಿಸುವುದು ಈಗ ನಮ್ಮ ಕೆಲಸ."[೧]

ಕಾದಂಬರಿ ಪ್ರಕಾರದಲ್ಲಿ ಮೊದಲು ವಸ್ತು, ಭಾಷೆ, ಶೈಲಿ, ಕಾದಂಬರಿ ಸಂವಿಧಾನಕ್ಕೆ ಮೊದಲ ಆದ್ಯತೆಗಳು. ಈ ಆದ್ಯತೆಗೆ ಅನುಗುಣವಾಗಿ ಘಟನೆ ಸಂದರ್ಭಗಳ ಮುಖಾಮುಖಿಯಾಗಿ ನಿಲ್ಲುವ ಪಾತ್ರಗಳ ಸಂಘರ್ಷ ಗಮನಿಸುವಂತಹದ್ದು.

ಕಾದಂಬರಿಯಲ್ಲಿ ಸಮಾವೇಶಗೊಳ್ಳುವ ಅಂಶಗಳನ್ನು ಪಟ್ಟಿ ಮಾಡುತ್ತಾ ಹೋದರೆ ವಸ್ತು, ಪಾತ್ರ, ಸಂಭಾಷಣೆ, ಶೈಲಿ, ತಂತ್ರಗಳಲ್ಲಿ ಲೇಖಕನ ಇಡೀ ಜೀವನ ದರ್ಶನವೇ ಕಾಣುವುದು. ವಸ್ತುವನ್ನು ಹದವರಿತು ಬಳಸಿಕೊಂಡಾಗ ಮಾತ್ರ ಕಾದಂಬರಿ ಸತ್ವಪೂರ್ಣವಾಗುವುದು. ಈ ದಿಶೆಯಲ್ಲಿ ಆಲೋಚಿಸಿದಾಗ ವಸ್ತುವಿನ ಜೊತೆಗೆ ಭಾಷೆ, ಘಟನೆ, ಪಾತ್ರ ಮತ್ತು ತಂತ್ರಗಳು ಪ್ರಮುಖ ಪಾತ್ರ ನಿರ್ವಹಿಸುವವು.

ವಸ್ತು ಎಂದರೇನು? ತಂತ್ರ ಎಂದರೇನು ? ಅವು ಸಿದ್ಧಾಂತ ರೂಪವೆ ಮುಂತಾದ ಪ್ರಶ್ನೆ ಹುಟ್ಟುವುದು ಸಹಜ. ಹೀಗಾಗಿ ಕಾದಂಬರಿಯ ವಸ್ತು, ತಂತ್ರ, ಸ್ವರೂಪವನ್ನು ಅರಿಯುವುದು ಅಗತ್ಯ ಸಂಗತಿ. ಸಾಹಿತ್ಯ ರಚನೆಗೆ ಇಂತಹದ್ದೆ ವಿಷಯ ವಸ್ತು ಆಯ್ದುಕೊಳ್ಳಬೇಕೆಂಬ ನಿಯಮವೇನೂ ಇಲ್ಲ. ಯಾವುದೇ ವರ್ಗದ ಜೀವನ ಕ್ರಮವಾಗಿರಬಹುದು. ಒಟ್ಟು ಮಾನವ ಬದುಕನ್ನು ಆದರಿಸುತ್ತದೆ. ಕಾಲಗಳಿಗೆ ಸಂಬಂಧಿಸಿದಂತೆ ವಸ್ತು ಪ್ರಾಚೀನ, ಮಧ್ಯಕಾಲೀನ ಇಲ್ಲವೆ ಸಮಕಾಲಿನ ಸಂದರ್ಭದ್ದು ಆಗಿರಬಹುದು. ವಸ್ತುವನ್ನು ಬೇರೆ ಕಡೆಯಿಂದ ಅನಾಮತ್ತಾಗಿ ಎತ್ತಿಕೊಂಡು ತನ್ನ ದೃಷ್ಟಿ ಧೋರಣೆಯ ಹಿನ್ನೆಲೆಯಾಗಿ ಸಮಕಾಲಿನ ಸ್ಥಿತಿಗತಿಗೆ ತಕ್ಕ ಹಾಗೆ ಮಾರ್ಪಡಿಸಿಕೊಳ್ಳುವ ಅಧಿಕಾರ ಕಾದಂಬರಿಕಾರನಿಗಿರುವುದು. ಸಂದರ್ಭ, ಸನ್ನಿವೇಶಗಳಲ್ಲಿ ಘಟನೆ, ಪಾತ್ರ, ತಂತ್ರಗಳೊಂದಿಗೆ 'ವಸ್ತು' ಹೊಸದಾಗಿ ಜೀವ ಪಡೆದು ಹೊಸ ಆಯಾಮ ದೊರೆಯುವುದು.

ಕಾದಂಬರಿಕಾರ ಎಸ್.ಎಲ್. ಭೈರಪ್ಪನವರು ಲೇಖಕರು ಕಾದಂಬರಿ ರಚನೆಯಲ್ಲಿ ವಸ್ತುವನ್ನು ಆಯ್ದುಕೊಳ್ಳುವ ಬಗೆ ಮತ್ತು ಆ ವಸ್ತುವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಹೀಗೆ ಹೇಳಿದ್ದಾರೆ. "ಜೀವನವೇ ಸಾಹಿತ್ಯದ ವಸ್ತು ಎಂಬುದು ನಿಜವಾದರೂ ತುಂಬಾ ಅಸ್ಪಷ್ಟವಾದ ಮಾತು. ಜೀವನವನ್ನು ದರ್ಶಿಸುವಮಟ್ಟಿಗೆ ಅನುಭವವು ಸಾಹಿತಿಗೆ ಅವಶ್ಯಕ. ಆದರೆ ಸ್ವಾನುಭವವೇ ಸಾಹಿತ್ಯದ ವಸ್ತುವಾಗುವುದಿಲ್ಲ. ವೈಕ್ತಿಕವಾದ ಸ್ವಾನುಭವವು ಜೀವನದಷ್ಟು ವಸ್ತುನಿಷ್ಠತೆಯನ್ನು ಪಡೆದಿರುವುದಿಲ್ಲ."[೨] ಕಾದಂಬರಿಗಳ ಅಧ್ಯಯನದಲ್ಲಿ 'ವಸ್ತು'ವಿನ ಕುರಿತು ಅಧ್ಯಯನ ಮಾಡುವಾಗ 'ತಂತ್ರ' ಬಳಕೆಯಾಗಿರುವುದು ಕಾಣುತ್ತೇವೆ. ತಂತ್ರವನ್ನು ಯಾವ ಅರ್ಥದಲ್ಲಿ ಬಳಸುತ್ತಿದೆ, ಎಂಬುದಕ್ಕೆ ಶೋರೆನ್‌ನ ಪ್ರಕಾರ "ತಂತ್ರವೆಂದರೆ ಲೇಖಕನ ಸಾಮಗ್ರಿಯಾದ ಅನುಭವ. ತನ್ನ ಬಗ್ಗೆ ಸರಿಯಾಗಿ ಗಮನ ಕೊಡಲು ಅವನನ್ನು ಒತ್ತಾಯಿಸುವ ಸಾಧನ. ತಂತ್ರವೆಂದರೆ ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು ಅದರ ಅಥವನ್ನು ಸೂಚಿಸಲು ಹಾಗೂ ಕೊನೆಯದಾಗಿ ವಸ್ತುವನ್ನು ಬೆಲೆಗಟ್ಟಲು ಇರುವ ಏಕಮಾತ್ರ ಸಾಧನ."[೩] ತಂತ್ರವೆಂದರೆ ಹೆಚ್ಚು ಕಡಿಮೆ ಎಲ್ಲವೂ ಆಗಿದೆ.[೪]

ಪಾಶ್ಚಿಮಾತ್ಯ ವಿದ್ವಾಂಸ ವಿಲಿಯಂ ಹೆನ್ರಿ ಹಡ್ಸನ್ ಕಾದಂಬರಿ ವಸ್ತು ಕುರಿತು ಹೀಗೆ ಹೇಳಿದ್ದಾರೆ. "ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಮತ್ತು ಮೂಡಿದ ಸಂಗತಿಗಳೊಡನೆ ಕಾದಂಬರಿ ವ್ಯವಹರಿಸುತ್ತದೆ. ಅವು ಸಾಮಾನ್ಯವಾಗಿ ನಾವು ಸಂವಿಧಾನ(Plot)ಎಂದು ಕರೆಯತಕ್ಕದ್ದನ್ನು ರೂಪಿಸುತ್ತದೆ."[೫] ಕಥಾ ಸಂವಿಧಾನದೊಡನೆ ವ್ಯವಹರಿಸುವುದು. "ಕಚ್ಚಾ ಸಾಮಗ್ರಿಯ ಸ್ವರೂಪವನ್ನು ಜೀವನವೇ ಒದಗಿಸುವ ಮಾನದಂಡಗಳಿಂದ ತಿಳಿದು ಬರುವ ಆ ಸಾಮಗ್ರಿಯ ಗುಣವನ್ನು ಪರಿಗಣಿಸುವುದು ಯಾವಾಗಲೂ ನಮ್ಮ ಮೊದಲ ಕೆಲಸವಾಗುತ್ತದೆ."[೬] ಕಾದಂಬರಿಯನ್ನು ಅದರ ವಸ್ತು

ವೈವಿಧ್ಯ ತಂತ್ರ ನಿರೂಪಣೆ ಬಂಧ ಇತ್ಯಾದಿಗಳನ್ನು ಆಧರಿಸಿ ಅನೇಕ ಪ್ರಭೇದಗಳಲ್ಲಿ ವರ್ಗೀಕರಿಸಬಹುದಾಗಿದೆ. ಕಾದಂಬರಿಗಳ ವರ್ಗೀಕರಣ ಅಷ್ಟು ಸಹಜ ಎನಿಸದಿದ್ದರೂ ಕೆಲವು ಸಮಾನ ಲಕ್ಷಣಗಳ ಕೃತಿಗಳನ್ನು ಒಂದೊಂದು ವರ್ಗವಾಗಿ ವಿಂಗಡಿಸಿ ಅಧ್ಯಯನ ಮಾಡುವುದು ಓದುಗ, ವಿಮರ್ಶಕರ ದೃಷ್ಟಿಯಿಂದ ಅನುಕೂಲಕರ. ಇದೊಂದು ವಿಶಿಷ್ಟವಾದ ತೌಲನಿಕ ಸ್ವರೂಪದ ಸಾಹಿತ್ಯ ಅಧ್ಯಯನವು ಆಗುತ್ತದೆ. ನಿರ್ಧಿಷ್ಟ ರೂಪ ಕೊಡುವ ಮತ್ತು ಅವುಗಳಲ್ಲಿರುವ ಸಮಾನ ಲಕ್ಷಣಗಳನ್ನು ಗುರುತಿಸಿ ಅದಕ್ಕನುಗುಣವಾಗಿ ವರ್ಗೀಕರಿಸುವ ಕೆಲಸ ಮಾಡಬೇಕಾಗುವುದು.

ಭಾಷೆ ಮತ್ತು ವಸ್ತು

ಮೊದಲ ಘಟ್ಟದ ಕಾದಂಬರಿಕಾರರು ತಮ್ಮ ಭಾಷಾ ಪ್ರಯೋಗದಿಂದ ಗಮನ ಸೆಳೆಯುತ್ತಾರೆ. ಅನುಭವದ ಸೂಕ್ಷ್ಮ ಪದರುಗಳನ್ನು ನಿರುದ್ವಿಗ್ನ ಗತಿಯಲ್ಲಿ ನಿರಾಡಂಬರಯುಕ್ತ ಶಿಷ್ಟ ಭಾಷೆಯಲ್ಲಿ ಹಿಡಿದಿಟ್ಟಿದ್ದಾರೆ. ಅಲ್ಲಿ ಆವೇಶರಹಿತ ಭಾಷಾ ಬಳಕೆ ಇದೆಯಾದರೂ ಅಭಿವ್ಯಕ್ತಿ ಕಾದಂಬರಿಗಳಲ್ಲಿ ಭಾವುಕವಾದುದೆ ಆಗಿದೆ. ಸಜ್ಜನಿಕೆ, ಸದ್ಭಾವಗಳಿಂದ ಕೂಡಿದ ಆತ್ಮೀಯತೆ, ಸಂವಾದದ ರೀತಿ ಮೊದಲ ಹಂತದ ಸ್ವತಂತ್ರ ಕಾದಂಬರಿಗಳಾದ ಇಂದಿರಾಬಾಯಿ, ವಾಗ್ದೇವಿ, ಇಂದಿರಾ, ಮಾಡಿದ್ದುಣ್ಣೋ ಮಹಾರಾಯ, ನಭಾ, ಸುಶೀಲೆ, ವಿರಾಗಿಣಿ ಹೀಗೆ ಹಲವಾರು ಕಾದಂಬರಿಗಳಲ್ಲಿ ವೈಶಿಷ್ಟ್ಯಕ್ಕೆ ಒಳಪಡಿಸಿದೆ. ಓದುಗನಿಗೆ ಅನ್ಯಭಾವವನ್ನು ಒಪ್ಪಿಸುವಂತ ಅಥವಾ ಅನುಭವಗಳನ್ನು ಓದುಗ ಒಪ್ಪಿಕೊಳ್ಳುವಂತೆ ಮಾಡುವ ಕಳಕಳಿ ಒಮ್ಮೊಮ್ಮೆ ಕಾದಂಬರಿಗಳ ಅರ್ಥವಂತಿಕೆ ವ್ಯಾಪ್ತಿಯನ್ನು ಸೀಮಿತಗೊಳಿಸಬಹುದು. ಒಮ್ಮೊಮ್ಮೆ ವರ್ತಮಾನದ ಅನುಭವ ಮತ್ತು ಘಟನೆಗಳಿಗಿಂತ ನಡೆದು ಹೋದ ಸಂಗತಿಗಳ ಜೊತೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ದೃಷ್ಟಿಯಿಂದ ಭಾಷಾ ಪ್ರಯೋಗ ಯಶಸ್ವಿಯಾಗುವುದು.

ಮೊದಲ ಘಟ್ಟದ ಸಾಮಾಜಿಕ ಸ್ವತಂತ್ರ ಕಾದಂಬರಿಗಳ ಭಾಷೆ ಹಲವಾರು ಗುಣಗಳಿಂದ ಪುಷ್ಟಿಗೊಂಡಿದೆ. ಗುಲ್ವಾಡಿ ವೆಂಕಟರಾಯ, ಬೋಳೂರ ಬಾಬುರಾಯ, ಕೆರೂರ ವಾಸುದೇವಾಚಾರ್ಯ, ಲಕ್ಷ್ಮಣ ಭೀಮರಾವ್ ಗದಗಕರವರು, ನಂಜನಗೂಡು ತಿರುಮಲಾಂಬರವರು ವಿಶಿಷ್ಟವಾದ ಭಾಷಾರೂಪ ಸ್ವರೂಪ ಒದಗಿಸಿಕೊಟ್ಟರೂ ಅವುಗಳ ಬಳಕೆಯಲ್ಲಿ ಕೆಲವು ಕೊರತೆಗಳಿವೆ. ಕರಾವಳಿಯ ಹವ್ಯಕ ಭಾಷೆ. ಬಂಗಾಲಿ. ಮರಾಠಿ ಭಾಷೆಗಳ ಪ್ರಭಾವವು ಕಾದಂಬರಿಗಳಲ್ಲಿ ಕಾಣುವವು. ಸಾಮಾಜಿಕ ಕೃತಿಗಳಲ್ಲಿ ಹೆಚ್ಚಿನವುಗಳಲ್ಲಿಯೂ ಭಾಷೆಯ ಬಗೆಗೆ ಹೆಚ್ಚಿನ ಕಾಳಜಿಯನ್ನು ವಹಿಸಿದುದು ಕಾಣಿಸುವುದಿಲ್ಲ. ಪ್ರಾದೇಶಿಕ ಕಾದಂಬರಿಗಳಲ್ಲಿ ಗ್ರಾಂಥಿಕ ಕನ್ನಡ ಹಾಗೂ ಪ್ರಾದೇಶಿಕ ಭಾಷೆಗಳನ್ನು ಬಳಸಿದ್ದು ಗೊತ್ತಾಗುವುದು. ದಕ್ಷಿಣ ಕನ್ನಡದಿಂದ ಬಂದ ಹೆಚ್ಚಿನ ಕೃತಿಗಳಲ್ಲಿಯೂ ಈ ರೀತಿಯ ಪ್ರತ್ಯೇಕತೆ ಇದೆ. ಶಿಷ್ಟ ಕನ್ನಡವನ್ನು

ವ್ಯವಹಾರಿಕ ಕನ್ನಡವನ್ನು ಬಳಸಿಕೊಂಡು ಕೃತಿಗಳು ಮೂಡಿ ಬಂದವು. ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿ ಇರುವ ತುಳು, ಕೊಂಕಣಿ ಭಾಷೆ ಇಂದಿರಾಬಾಯಿ ಕಾದಂಬರಿಯಲ್ಲಿ ಗಮನಿಸಬಹುದು.

ಭಾಷಿಕ ನೆಲೆಗಳು:

ಅನುಭವ ವಿಶೇಷವಾದ ಅಭಿವ್ಯಕ್ತಿ ಸಾಹಿತ್ಯವಾದರೆ, ಆ ಅಭಿವ್ಯಕ್ತಿಗೆ ಮಾಧ್ಯಮ ಭಾಷೆಯಾಗುತ್ತದೆ. ಆದ್ದರಿಂದ ಭಾಷೆಗೂ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ. ಸಾಹಿತ್ಯಾಭಿವ್ಯಕ್ತಿಯಲ್ಲಿ ಭಾಷೆ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆಯಾದರೂ ಭಾಷೆಯೇ ಸಂಪೂರ್ಣ ಸಾಹಿತ್ಯವೆನ್ನಿಸಿಕೊಳ್ಳುವುದಿಲ್ಲ. ಅದು ಸಾಹಿತ್ಯ ಪ್ರಕಟನೆಯ ಒಂದು ರೂಪವಾಗಿರುತ್ತದೆ. ಆದ್ದರಿಂದ ಭಾಷೆ ಬೌದ್ಧಿಕ ಸೃಷ್ಟಿಯಾದರೆ, ಸಾಹಿತ್ಯ ಭಾವನಾತ್ಮಕ ಸೃಷ್ಟಿಯಾಗಿರುತ್ತದೆ.

'ಸಾಹಿತ್ಯ' ಜೀವನದ ಪ್ರತಿಸೃಷ್ಟಿಯಾಗಿರುವುದರಿಂದ ಲೇಖಕನು ವಿಶಿಷ್ಟ ಸಾಮಾಜಿಕ ಪರಿಸರದಲ್ಲಿ ಜೀವನವನ್ನು ಪ್ರತಿಸೃಷ್ಟಿಸುವಾಗ ಕೃತಿಗೆ ಆ ನೆಲದ ಭಾಷೆ ದ್ರವ್ಯವಾಗಿ ಬರುತ್ತದೆ. ಆದ್ದರಿಂದ ಕೃತಿಯ ವಸ್ತು, ಕಥಾಸಂವಿಧಾನ, ಪಾತ್ರಚಿತ್ರಣ, ಜೀವನದರ್ಶನದಷ್ಟೇ ಭಾಷೆಯೂ ಮುಖ್ಯವಾಗುತ್ತದೆ. ಲೇಖಕ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಷ್ಟು ಕೃತಿಯ ಉದ್ದೇಶಿತ ಪರಿಣಾಮ ಪೂರ್ಣವಾಗುವುದು. ಆದ್ದರಿಂದ ಸಾಹಿತ್ಯ ಕೃತಿಯನ್ನು ಕುರಿತಾದ ಯಾವುದೇ ಆಲೋಚನೆಯು ಅದರ ಭಾಷಿಕ ನೆಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ. (ರಾಘವೇಂದ್ರರಾವ್: ೧೯೯೨:೧೩೮) ಎನ್ನುವ ಮಾತು ಪ್ರಾದೇಶಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಉಚಿತವೆನಿಸುತ್ತದೆ. ಕಾದಂಬರಿಕಾರನಲ್ಲಿ ಪರಿಸರದ ಭಾಷಾಪ್ರಜ್ಞೆ, ಆಡುನುಡಿಯ ಸ್ವರೂಪ, ಮಣ್ಣಿನ ವಾಸನೆಯನ್ನು ಗರ್ಭೀಕರಿಸಿಕೊಂಡಿರುವ ಗಾದೆ, ನುಡಿಗಟ್ಟು, ಪದಗಳ ಧ್ವನ್ಯಾತ್ಮಕ ಸ್ವರೂಪ, ಪದಗಳ ಸಾಂಸ್ಕೃತಿಕ ನಿಷ್ಪತ್ತಿ, ಭಾಷೆಯ ಬಗೆ ತೆರೆದ ಕಣ್ಣಿನಿಂದ ನೋಡುವ ದೃಷ್ಟಿಯಿರಬೇಕು. ಏಕೆಂದರೆ ಕಾದಂಬರಿಗೆ ನೀರು-ಆಹಾರವನ್ನು ಒದಗಿಸುವ ತಾಯಿಬೇರು ಈ ಭಾಷೆಯಾಗಿರುತ್ತದೆ.

ಪ್ರಾದೇಶಿಕ ಭಾಷಾ ನೆಲೆ:

ಒಂದು ಭಾಷೆಯ ಭಿನ್ನತೆಗೆ ಅನೇಕ ಸಾಮಾಜಿಕ ಕಾರಣಗಳಿರುತ್ತವೆ. ಅವುಗಳಲ್ಲಿ ಮುಖ್ಯವಾಗಿ ನೈಸರ್ಗಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮುಂತಾದವುಗಳು ಭಾಷೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ನೈಸರ್ಗಿಕ ಕಾರಣವಾಗಿ ಎತ್ತರದ ಗುಡ್ಡ ಬೆಟ್ಟಗಳು, ದಟ್ಟ ಅರಣ್ಯಗಳು, ಆಳವಾದ ನದಿಕೊಳ್ಳಗಳಿಂದ ಬಹುಕಾಲ ಜನಾಂಗ-ಜನಾಂಗಗಳ ಮಧ್ಯ ಸಂಪರ್ಕ ಕಡಿಮೆಯಾದಾಗ ಸಂಸ್ಕೃತಿ-ಭಾಷೆಗಳಲ್ಲಿ ವ್ಯತ್ಯಾಸಗಳು ನಿರ್ಮಾಣಗೊಳ್ಳುತ್ತವೆ. ಇದು ಹೀಗೆಯೇ ಮುಂದುವರೆದು ಭಾಷಾ

ಪ್ರಭೇದಗಳು ಉಂಟಾಗಿ ಪ್ರಾದೇಶಿಕ ರೂಪ ತಾಳುತ್ತವೆ. ಆದ್ದರಿಂದ 'ಜನರ ಭಾಷೆಯ ಮೇಲೆ ಪ್ರಾದೇಶಿಕತೆಯ ಪ್ರಭಾವ ಅನನ್ಯವಾಗಿರುತ್ತದೆ. ಪ್ರದೇಶದ ಭೌಗೋಳಿಕ ಸ್ಥಿತಿ-ಗತಿಗಳು, ನೈಸರ್ಗಿಕ ಅನುಕೂಲತೆ, ಅನಾನುಕೂಲತೆಗಳು ಜನರ ಭಾಷೆಯನ್ನು ರೂಪಿಸುತ್ತವೆ'(ಮರಿಗುದ್ದಿ : ೧೯೮೯:೧೮೭) ಎಂದು ಹೇಳಬೇಕಾಗುತ್ತದೆ.

ಕರ್ನಾಟಕದ ಭೌಗೋಳಿಕ ಪರಿಸರ ಏಕರೂಪದ್ದಾಗಿಲ್ಲ. ಅಂತೆಯೇ ಆಯಾ ಪರಿಸರಗಳನ್ನನುಸರಿಸಿ ಭಾಷೆಯೂ ಏಕರೂಪದ್ದಾಗಿಲ್ಲ. ಸ್ವಾಭಾವಿಕವಾಗಿ, ಬಯಲುಸೀಮೆಯಲ್ಲಿ ಮತ್ತೆ ಉತ್ತರ, ದಕ್ಷಿಣ ಹಾಗೂ ಒಳನಾಡು ಪ್ರದೇಶಗಳ ಭಾಷೆ, ಮಲೆನಾಡಿನ ಪ್ರದೇಶದಲ್ಲಿ – ಘಟ್ಟದ ಮೇಲಿನ ಹಾಗೂ ಘಟ್ಟದ ಕೆಳಗಿನ ಭಾಷೆ, ಕರಾವಳಿ ತೀರದಲ್ಲಿ ಅವುಗಳ ಒಳಪ್ರದೇಶಗಳಲ್ಲಿ ಉತ್ತರ, ದಕ್ಷಿಣ ಭಾಷೆಗಳಲ್ಲಿ ಭಿನ್ನತೆಗಳನ್ನು ಕಾಣುತ್ತೇವೆ.

ಆಧುನಿಕತೆಯ ಪ್ರಭಾವ ಇಂದು ಎಲ್ಲ ಪ್ರದೇಶಗಳ ಮೇಲಾಗಿದ್ದು, ದಕ್ಷಿಣ, ಸಾರಿಗೆ ಸಂಪರ್ಕ ಸಾಧನಗಳು, ಪತ್ರಿಕೆ, ರೇಡಿಯೋ, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳು ರಾಜಕೀಯ, ಆಡಳಿತಾತ್ಮಕ ಮುಂತಾದ ಕಾರಣಗಳಿಂದ ಏಕಸ್ವಾಮ್ಯ ಏರ್ಪಟ್ಟಿದೆಯೆಂದರೂ ಸಹ ಆಂತಸತ್ವಗಳಲ್ಲಿ ಇನ್ನೂ ಮೂಲವನ್ನು ಉಳಿಸಿಕೊಂಡಿವೆ. ಇದಕ್ಕೆ ಸಾಕ್ಷಿಭೂತವಾಗಿ ಹೊಸಕಾಲದ ಸೃಷ್ಟಿಯಾಗಿ ಬಂದ ಕಾದಂಬರಿಗಳಾಗಿವೆ.

ಕಾದಂಬರಿಕಾರರು ತಮ್ಮ ಕೃತಿಗಳಿಗೆ ಆರಿಸಿಕೊಂಡ ವಸ್ತು ಗ್ರಾಮೀಣ ಪರಿಸರದ್ದಾಗಿದೆ. ಅಲ್ಲಿನ ಜನರ ಜೀವನ ಸಂಸ್ಕೃತಿ-ಪ್ರವೃತ್ತಿ-ಭಾಷೆಗಳನ್ನು ಪ್ರಾದೇಶಿಕ ಕಾದಂಬರಿಗಳು ಪ್ರತಿಬಿಂಬಿಸುತ್ತದೆ. ಆದ್ದರಿಂದ ಮೌಖಿಕ ಭಾಷೆಯ ಮೇಲೆ ಹೆಚ್ಚು ಅವಲಂಬಿತವಾಗಿರುವ ಪ್ರಾದೇಶಿಕ ಕಾದಂಬರಿಗಳು ಭಾಷೆಯ ನೆಲೆಗಟ್ಟಾಗಿವೆ.

ಭಾಷೆಯಲ್ಲಿ ಸಾಮಾನ್ಯವಾಗಿ ಪ್ರೇರಣೆ, ಪ್ರಭಾವ, ಸ್ವೀಕರಣ, ಪರಿಷ್ಕರಣಗಳು ನಡೆಯುತ್ತಿರುತ್ತವೆ. ಹೀಗಾಗಿ ಆಯಾ ಕಾಲ ಹಾಗೂ ಪ್ರದೇಶಗಳ ಕಾದಂಬರಿಗಳ ಅಧ್ಯಯನದಿಂದ ಭಾಷಿಕ ನೆಲೆಗಳ ಪದರುಗಳು ಬಿಚ್ಚಿಕೊಳ್ಳುತ್ತವೆ.

ಪ್ರಾದೇಶಿಕ ಭಿನ್ನತೆ:

ಪ್ರಾದೇಶಿಕ ಭಿನ್ನತೆಗಳನ್ನಾಧರಿಸಿ ಪ್ರಮುಖವಾಗಿ ಮಲೆನಾಡು, ಕರಾವಳಿ, ಬಯಲು ಪ್ರದೇಶಗಳೆಂದು ಕರೆದರೂ ಅವುಗಳಲ್ಲಿಯೂ ಸಾಕಷ್ಟು ಒಳಪ್ರಭೇದಗಳಿರುವುದನ್ನು ಕಾಣಬಹುದು.

೧) ಮಲೆನಾಡು ಇವುಗಳಲ್ಲಿಯೇ ಒಳಭೇದಗಳಾಗಿ ಘಟ್ಟದ ಮೇಲೆ, ಘಟ್ಟದ ಕೆಳಗೆ ಆಡುವ ಭಾಷೆ.

ಬ) ಕರಾವಳಿ ತೀರದಲ್ಲಿ ಉತ್ತರ ಹಾಗೂ ದಕ್ಷಿಣ ತೀರದಲ್ಲಿನ ಭಾಷೆ.

ಕ) ಬಯಲು ಪ್ರದೇಶದಲ್ಲಿ ಉತ್ತರ, ದಕ್ಷಿಣ ಹಾಗೂ ಒಳನಾಡು ಭಾಷೆ.

ಡ) ಹಾಗೆಯೇ, ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಗಳೂರು, ಕನ್ನಡ, ಗುಲಬರ್ಗಾ ಕನ್ನಡ, ಬೀದರ ಕನ್ನಡ, ಬಳ್ಳಾರಿ ಕನ್ನಡಗಳೆಂದು ವಿಭಾಗಿಸಿ ಅಭ್ಯಸಿಸಲಾಗುತ್ತದೆ.

ಸಾಮಾಜಿಕ ಭಿನ್ನತೆ:

ಸಾಮಾಜಿಕ ಭಿನ್ನತೆಗಳನ್ನಾಧರಿಸಿ ಇಲ್ಲಿ ಪ್ರಮುಖವಾಗಿ ಭಾಷಾವ್ಯತ್ಯಾಸಗಳನ್ನು ಗಮನಿಸಲಾಗುತ್ತದೆ. 'ಸಮಾಜ' ಎಂದಾಗ ಅದರಲ್ಲಿ ವಿವಿಧ ಜಾತಿ, ಮತ, ಪಂಗಡ, ವಿವಿಧ ವರ್ಗಗಳ ಜನರಿರುತ್ತಾರೆ. ಅವರ ಆಚಾರ, ವಿಚಾರ, ಶಿಕ್ಷಣ, ಲಿಂಗ, ಉದ್ಯೋಗ, ಸ್ಥಾನಮಾನಗಳಿಗನುಗುಣವಾಗಿ ಭಾಷೆಯಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ.

(ಅ) ಜಾತಿ–ಮತ–ಪಂಗಡ: ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ಶೂದ್ರರು, ಮರಾಠರು, ತೆಲುಗರು, ಜೈನರು, ಮುಸ್ಲಿಂರು, ಕ್ರಿಶ್ಚಿಯನ್, ಮೊದಲಾದವರು.

(ಆ) ವರ್ಗ : ಶ್ರೀಮಂತರು, ಜಮೀನದಾರರು, ಕೂಲಿಕಾರರು, ಕಾರ್ಮಿಕರು ಬಡವರು.

(ಇ) ವೃತ್ತಿ : ಪುರೋಹಿತರು, ವ್ಯಾಪಾರಿಗಳು, ಕೃಷಿಕರು, ಕುಶಲಕರ್ಮಿಗಳು, ಸೇರೆಗಾರರು, ಬ್ಯಾರಿಗಳು, ಮೇಸ್ತ್ರಿಗಳು ಇತ್ಯಾದಿ.

(ಈ) ಲಿಂಗ: ಸ್ತ್ರೀಯರು, ಪುರುಷರು, ಮಕ್ಕಳು, ತರುಣರು ಹಾಗೂ ಮುದುಕರು.

(ಉ) ಅಧಿಕಾರಿಗಳು: ಮೇಲಧಿಕಾರಿಗಳು, ಅಮಲ್ದಾರರು, ಫೌಜದಾರರು, ಪೋಲೀಸರು, ಸಿಪಾಯಿ, ಶಾನುಭೋಗರು ಇತ್ಯಾದಿ.

(ಊ) ಶೈಕ್ಷಣಿಕ : ಕಲಿತವರು ಹಾಗೂ ಕಲಿಯದವರು.

ಭಾಷೆ ಮತ್ತು ಸಾಮಾಜಿಕ ಸಂಬಂಧ:

ಭಾಷಾ ಪ್ರದೇಶಗಳನ್ನು ಸಾಮಾನ್ಯವಾಗಿ ವ್ಯಕ್ತಿಭಾಷೆ, ಪ್ರಭೇದ ಭಾಷೆ, ಮತ್ತು ಉಪಭಾಷೆ ಅಥವಾ ಪ್ರಾದೇಶಿಕಭಾಷೆಗಳೆಂದು ಪರಿಗಣಿಸುತ್ತಾರೆ. ವ್ಯಕ್ತಿ–ವ್ಯಕ್ತಿಗಳ ನಡುವಿನ ಭಾಷೆಯ ಬಳಕೆ ಧ್ವನಿ ಉಚ್ಚಾರಗಳಲ್ಲಿ ಕಾಣುವ ವ್ಯತ್ಯಾಸಗಳು ವ್ಯಕ್ತಿ ಭಾಷೆಯಾದರೆ, ಹಲವು ಸಾಮಾಜಿಕ ಪಂಗಡ(ಉಪಸಂಸ್ಕೃತಿ)ಗಳಲ್ಲಿ ಉಂಟಾಗುವ ವ್ಯತ್ಯಾಸಗಳು ಪ್ರಭೇದ ಭಾಷೆ ಎನ್ನಿಸಿಕೊಳ್ಳುತ್ತವೆ. ಪ್ರದೇಶ–ಪ್ರದೇಶಗಳ ನಡುವೆ ಗುರುತಿಸುವಷ್ಟು ಪ್ರಮಾಣದ ವ್ಯತ್ಯಾಸಗಳಾಗಿ ಉಪಭಾಷೆ ಅಥವಾ ಪ್ರಾದೇಶಿಕ ಭಾಷೆಗಳೆಂದು

ಕರೆಯಿಸಿಕೊಳ್ಳುತ್ತವೆ. ಈ ವ್ಯತ್ಯಾಸಗಳು ಪ್ರಾದೇಶಿಕ ಸಾಮಾಜಿಕ, ಸಾಂಸ್ಕೃತಿಕ ಸ್ತರಗಳನ್ನು ಅವಲಂಬಿಸಿರುತ್ತವೆ.

ಸಾಮಾಜಿಕವಾಗಿ ಮೊದಲ ಸ್ಥಾನದಲ್ಲಿರುವ ಬ್ರಾಹ್ಮಣರು ಆಡುವ ಭಾಷೆಯು ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ಏಕಸ್ತರವಾಗಿದೆ. ಸಂಸ್ಕೃತ ಭಾಷೆಯ ಪ್ರಭಾವ ಅವರ ಮಾತುಗಳಲ್ಲಿ ಕಾಣಸಿಗುತ್ತವೆ. ಹೀಗಾಗಿ ಅವರ ಭಾಷೆ ಶಿಷ್ಟವೂ; ಪ್ರೌಢವೂ ಆಗಿರುತ್ತದೆ. ಬ್ರಾಹ್ಮಣೇತರ ಭಾಷೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಅನುಭವದ ಅಭಿವ್ಯಕ್ತಿ ಮಾಧ್ಯಮವಾದ ಭಾಷೆ ನಿರಂತರ ಚಲನಶೀಲವಾದದ್ದು. ಒಬ್ಬ ಕಾದಂಬರಿಕಾರ ಏನು ಹೇಳಬೇಕೆಂಬುದನ್ನು ನಿರ್ಧರಿಸುವುದರ ಜೊತೆಯಲ್ಲಿಯೇ ಅದನ್ನು ಹೇಗೆ ಹೇಳಬೇಕೆಂದು ನಿರ್ಧರಿಸಬೇಕಾಗುವುದು. ಅದು ಸೃಜನಶೀಲತೆಯ ಗುಣ.ಸೃಜನಶೀಲ ಬರಹಗಾರರು ಅನುಭವ ಹಾಗೂ ಅಭಿವ್ಯಕ್ತಿಗೆ ಹಂಬಲಿಸುತ್ತಿರುತ್ತಾರೆ. ಕಲಾತ್ಮಕ ಚೌಕಟ್ಟು ಹಾಗೂ ಭಾಷಾ ಸಾಧ್ಯತೆಗಳ ಬಗ್ಗೆ ತನ್ನದೇ ಆದ ಕಲ್ಪನೆಯನ್ನು ಇರಿಸಿಕೊಂಡಿರುತ್ತಾನೆ. ಸುಧಾರಣೆಯು – ಭಾಷೆಯಲ್ಲಿ ಅಳೆಯುವುದಕ್ಕೆ ಬಾಸ್ಕರ ವಿಲಾಯಿತಿಗೆ ಹೋದಾಗ "ಓಹೋ ! ತಾವರಿಯಲಿಲ್ಲವೇ ? ಅದು ಇನ್ನಷ್ಟು ಚನ್ನಾಯಿತು. ಮೊನ್ನೆ ಇತ್ತಲಾಗಿ ವಿಲಾಯಿತಿಗೆ ಹೋದನು. ಸಿ.ಎಸ್ಸೋ.ಪಿ.ಎಸ್ಸೋ ಎಂಥಾ ಸುಡಗಾಡ ಎಸ್ಸೋ ಏನೋ ಒಂದು ಪರೀಕ್ಷೆ ಕೊಡುವುದಕ್ಕಂತೆ ಒಂದು ವೇಳೆ ತಿರುಗಿ ಬಂದ ಮೇಲೆ ಜಾತಿ ಎಲ್ಲಿ"?[2] ಭಾಷೆ ಸುಲಭತೆ, ಸರಳತೆ ಇಲ್ಲಿ ಕಾಣುವುದು. ಸರಳ ಸಂಭಾಷಣೆಯು ಇಲ್ಲಿ ಕಾಣುವುದು. ಇಂದಿರಾಬಾಯಿ ಅವಳ ತಂದೆ ಸಂವಾದ –

"ಇದೇನಪ್ಪಯ್ಯಾ ಹಾಸ್ಯ ಮಾಡುತ್ತಿಯಾ?"

"ಹಾಸ್ಯ ಮಾಡಿದ್ದ್ಯಾರು? ಈ ಮೇಜಿನ ಹತ್ತಿರ ನಿಂತು ನೀನಲ್ಲವೇ"

"ನೀನೇಕೆ ಅಡಗಿ ನಿಂತದ್ದು?"

"ನೀನೇನು ಮಾಡುತ್ತಿಯೋ ನೋಡುವುದಕ್ಕೆ?"

"ನಾನೇನು ಮಾಡಿದೆ?"

"ಈಗಾಗಲೇ ಮರೆತು ಬಿಟ್ಟೆಯಾ?"

"ಅದರಲ್ಲೇನು ಅಸಹಜವಾದದ್ದು?"

"ಹಾಗಾದರೆ ಅವೆಲ್ಲ ಸಹಜವಾದ ವಿಕಾರಗಳೇನು?"[3]

ತಂದೆಯು ವಿಚಾರ ಕದ್ದು ಕೇಳಿದ ಮೇಲೆ ನಡೆದ ಸಂಭಾಷಣೆ ಸರಳವಾದದ್ದು. ಕಾದಂಬರಿಯಲ್ಲಿ ಆಂಗ್ಲಭಾಷಾ ಪ್ರಯೋಗ ಪದಗಳು ಅಲ್ಲಲ್ಲಿ ಬಳಕೆಯಾಗಿವೆ. "ಬರೇ ಹಣವಿನ ಮಾತು. more money matter. ಕೂಟ ಸಂಪರ್ಕ ಭಂಗ Social ostracison boycotting ಭಾಷಣ lecture beach, ಸಮುದ್ರ ತೀರ. sanction ಸಮೇತ. practical steps ಕಾರ್ಯರೂಪಕ ವ್ಯವಹರಣೆ,letter ಪತ್ರಗಳು. reformers ಧರ್ಮಪರಿವರ್ತಕರು. champion of reform ಧರ್ಮ ಪರಿವರ್ತನೆಯ ವೀರ. remarks ಅಭಿಪ್ರಾಯ. sea voyage ಸಮುದ್ರ ಪ್ರಯಾಣ. agitation ವಾಗ್ವಾದ. delegates ಪ್ರತಿನಿಧಿಗಳು. propose ಆಲೋಚನೆ ಹೇಳು. I permit ಅನುಮತಿಸುತ್ತೇನೆ. good night ವಿದಾಯ ಜನರ ಸಭ್ಯಾಚಾರದ ಮಾತುಗಳು."[೯] ಮುಂತಾದ ಪದಗಳು ಬಳಕೆ ಇವೆ. ಇಷ್ಟೆ ಅಲ್ಲದೆ ದೇಶಭಾಷೆ vernacular ಅನುಮತಿ permission, ಆಲೋಚನೆ propose, second ಅನುಮತಿಸು, ಬಹಳ ಒಳ್ಳೆಯದು very well ಸ್ವದೇಶಸ್ಥ countryman, First native Assistant collector ಪ್ರಥಮ ನೇಟಿವ್ ಅಸಿಸ್ಟಂಟ್ ಕಲೆಕ್ಟರ್ District ಜಿಲ್ಲೆ, presidency ಸಂಸ್ಥಾನ. Highest honour ದೊಡ್ಡ ಮರ್ಯಾದೆ. Special ಪ್ರತ್ಯೇಕ. land ಕರೆಗೆ ಬರು. fitting reception ಯೋಗ್ಯವಾದ ಉಪಚಾರ, meeting ಸಭೆ. address ಮಾನಪತ್ರ. China silver ಚೀನಿ ಬೆಳ್ಳಿ case ಪೆಟ್ಟಿಗೆ. present ಉಡುಗೊರೆ advisable course ತಕ್ಕದಾದ ರೀತಿ"[೧೦] ಈ ರೀತಿಯಾದ ಪದಬಳಕೆ ವಿಲಾಯತಿಗೆ ಹೋಗಿ ಬಂದ ವ್ಯಕ್ತಿಗಳು ಅಲ್ಲಲ್ಲಿ ಬಳಸುವ ಭಾಷಾ ಪ್ರಯೋಗ ಇಂಗ್ಲಿಷ್ ಪ್ರಭಾವ ಕಾಣುವುದು. ಇದು ಮುಂದುವರೆದ ಸಮಾಜದಂತೆ ಕಂಡರೂ ಕೆಲವೇ ಕೆಲವರು ಉಳ್ಳವರ ಸ್ವತ್ತಂತೆ ಬಳಕೆ ಮಾಡುವುದನ್ನು ಗಮನಿಸುವುದು.

ಇಂದಿರಾ ಕಾದಂಬರಿಯ ವಿಚಾರ ಭಿನ್ನವಾದದ್ದು. ಇಂದಿರಾ ಹೊಸ ಹೊಸ ಗ್ರಂಥಗಳನ್ನು ಓದಲಾರಂಭಿಸಿದಾಗಿನ ಭಾಷೆ ವಿಶ್ಲೇಷಣೆ ಬರುವುದು. 'ಪ್ರೊ. ಗೋಳೆಯವರು ಬರೆದ 'ಹಿಂದೂ ಧರ್ಮ ಆಣಿ ಸುಧಾರಣಾ' ಗ್ರಂಥ ಬೋಧನಾ ಗ್ರಂಥವಾಗಿ ಅಂದು ಇಡಿ ಉತ್ತರ ಕರ್ನಾಟಕದಲ್ಲಿ ಪ್ರಚಾರ ಪಡೆದಿತ್ತೆಂದು ತೋರುತ್ತೆ. ಡಾಕ್ಟರ್ ದೇವಯಾನಿ ಇಂದಿರೆಯ ನಡುವಿನ ಸಂವಾದ ಮೆಚ್ಚುವಂತಹದ್ದು. ಮರಾಠಿ ಬಗ್ಗೆ ಉತ್ಪ್ರೇಕ್ಷೆ ಮಾತಾಡಿದಾಗ ಬಂದ ಪ್ರತಿಕ್ರಿಯೆ ಸೂಕ್ತವಾದದ್ದೆ. "ಕನ್ನಡ ಭಾಷೆಯಲ್ಲಿ ಬರೆದ ಕಾವ್ಯಗಳ ಮಾಧುರ್ಯವು ಮಹಾರಾಷ್ಟ್ರ ಭಾಷೆಯಲ್ಲಿ ಹುಡುಕಿದರು ಸಿಕ್ಕಲರಿಯದು. ಲಕ್ಷ್ಮೀಶ. ಷಡಕ್ಷರಿ. ಅಭಿನವ ಪಂಪ ಮುಂತಾದ ಕವಿಗಳ ಗ್ರಂಥಗಳನ್ನೋದಿದರೆ ರಸಜ್ಞರಿಗೆ ಉದ್ರೇಕ ಬಾರದಿರದು."[೧೧] "ಅಲ್ಲಿಯೂ ಹಳಗನ್ನಡ. ಓದಲು ಕೇಳಲು ಕಠಿಣ ಕಠೋರವಾದ ಸಂಗತಿ ಚರ್ಚೆ ಇದೆ."[೧೨] "ಪಂಡಿತೆಯು

ಮಹಾರಾಷ್ಟ್ರ ಭಾಷಾಭಿಮಾನಿಯಾಗಿದ್ದರಿಂದ, ಏನೆ ಆಗಲಿ ಸದ್ಯಕ್ಕೆ ಕನ್ನಡಕ್ಕಿಂತಲೂ ಮಹಾರಾಷ್ಟ್ರ ಭಾಷೆಯು ಉನ್ನತವಾಗಿರುವುದೋ? ಇಲ್ಲವೋ?"[೧೩] ಎಂದಳು. ಇದು ಭಾಷೆಯ ಸಂಘರ್ಷ.

'ಇಂದಿರಾ' ಕಾದಂಬರಿಯ ಇಂದಿರೆಯ ಮೆಚ್ಚಿಸಲು ಶ್ರೀ ಕಂಠ ಹೇಳಿದ ಮಾತುಗಳು ಚುಚ್ಚು ಮಾತುಗಳೆ. ಸುಳ್ಳು ಮಾತುಗಳೆ "ನಾನು ಹಿಂದುಸ್ತಾನದ ನಿವಾಸಿ, ಚೈತನ್ಯ ಚರಿತ್ರೆ, ಮುದ್ರಾ ಮಂಜೂಷ ಹೀಗೆ ಅನೇಕ ಗ್ರಂಥಗಳನ್ನೊದಿರುವೆನು. ಅರ್ಥಶಾಸ್ತ್ರದಲ್ಲಂತೂ ನಾನು ಇಂಗ್ಲಿಷ್ ತತ್ವವಿರದ ಗ್ರಂಥಗಳನ್ನು ಪರ್ಯಾಲೋಚಿಸಿರುವೆನು.[೧೪] ಎಂದ ವಿಚಾರ ಅಂದಿನ 'ಹಳಗನ್ನಡ – 'ಇಂಗ್ಲಿಷ್'ನ ವ್ಯಾಮೋಹ ಚರ್ಚೆ ಇದೆ. 'ಇಂದಿರಾ' ಕಾದಂಬರಿಯ ಭಾಷೆಯು ಲಾಲಿತ್ಯ ಪೂರ್ಣವಾಗಿರುವುದು ಕೇಳುಗರಿಗೂ ಪಾತ್ರಗಳಿಗೂ ಮಧುರತೆ ಬೆಸೆಯುವ ಭಾಷೆಯಿಂದಲೇ ಎಂಬುದಿಲ್ಲಿ ಅರಿಯಬೇಕು. ರಮಾಕಾಂತ ಇಂದಿರಾಗೆ ತಮ್ಮ ಮದುವೆ ಶ್ರೀಕಂಠನ ಜೊತೆ ನೆರವೇರುವ ಹಾಗೂ ರಮಾಕಾಂತ ಮನದ ಇಂಗಿತ ಹೇಳಿದಾಗ ಭೋಜನ ಸಿದ್ಧತೆಯ ಸಂದರ್ಭ ಭಾಷೆ ಗಮನಿಸಿದರೆ ಅರಿವಿಗೆ ಬರದೆ ಇರದು.

ರಮಾಕಾಂತ "ಪ್ರಿಯೇ ಇನ್ನೊಂದು ನನ್ನ ಮಾತು ನೀನು ನಡಿಸತಕ್ಕದ್ದು"

ಇಂದಿರಾ – ಅದೇನು ಮಾಡಿರುವುದು ? ಪ್ರಾಣನಾಥರು ಆಜ್ಞಾಪಿಸಬೇಕು.

ರಮಾಕಾಂತ – ಲಗ್ನಕ್ಕಿಂತಲೂ ಮುಂಚಿತವಾಗಿ, ಪ್ರಾಣನಾಥ, ಪ್ರೀಯರೆ, ಮುಂತಾದ ಸಂಬೋಧನೆ ಉಪಯೋಗಿಸಬೇಡ ಇಷ್ಟೇ ನನ್ನ ಪ್ರಾರ್ಥನೆ ಇರುವುದು"[೧೫] ಈ ರೀತಿ ಬಳಕೆಯಾದ ಭಾಷೆ ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣುವುದು.

ಭಾಷಾ ರಾಜಕೀಯ ಪ್ರಸ್ತುತ ಕಾದಂಬರಿಗಳಲ್ಲಿ ಕಾಣುವುದು. ಇಂದಿರಾ ಕಾದಂಬರಿಯ ಕೊನೆಯಲ್ಲಿ ಮುಂಬೈ ಸರಕಾರದ ಶ್ರೀಕಾಂತರಾಯನು ಆಗಮಿಸಿದಾಗ ಸ್ವತಃ ದಿವಾನರೆ ಬಂದು ಹಾರ, ತುರಾಯಿ ನೀಡಿ "ತಮ್ಮ ತರುಣ ರಮಾಕಾಂತನನ್ನು ಕಂಡು ರಾಮ್ ರಾಮ್ ಮಾಡಿ ರಮಾಕಾಂತ ಧನಿಸಾಬ ಅಫೋನ್ ಕಾಯಾ? ಎಂದು ಕೇಳಿದನು.

"ಹೋಯಿ ಮಿಚ್. ಕೋಣ ಕೋಣ ಆಲೇರೇ"

"ಸರಕಾರ ಸ್ವಾರಿ ಆಲಿಯಾ ಧನಿಸಾಬ್"[೧೬] ಎಂದು ಜವಾನನ ಸಂಭಾಷಣೆ. ಎರಡು ಭಾಷಾ ಕೊಂಡಿಯಾಗಿ ಕಾರ್ಯ ಮಾಡಿದೆ.

ಆ ಕಾಲದ ಲೇಖಕರು ಹೊಸಗನ್ನಡದೊಂದಿಗೆ ಹಳಗನ್ನಡವನ್ನು ಸಮ್ಮಿಶ್ರಮಾಡಿ ಬಳಸಿದ್ದು ಭಾಷಾ ಬದಲಾವಣೆ ಅಲ್ಲಲ್ಲಿ ಕಾಣುವುದು. ಕೆಲ ಲೇಖಕರಿಗೆ ಹೊಸಗನ್ನಡದಲ್ಲಿ ಬರೆದದ್ದನ್ನು ಅಲ್ಲಗಳೆಯುವ ಪರಿಪಾಠವಿತ್ತೆಂದು ಕೆರೂರ ವಾಸುದೇವಾಚಾರ್ಯರು "ಹಳಗನ್ನಡವನ್ನು

ಹೊಸಗನ್ನಡದಲ್ಲಿ ಕಲಿಸಿ ಜಾಣತನವೆಂದು ತಿಳಿದು ಕರ್ಣಕಟುಗಳಾದ ಸಂಧಿಗಳನ್ನು ಮಾಡಿ ಅರ್ಥ ತಿಳಿಯವುದು ಒತ್ತಟ್ಟಿಗಿರಲಿ ಓದಲಿಕ್ಕೂ ಬಾರದಂತಹ ಹೊತ್ತಿಗೆಗಳನ್ನು ಬರೆದವರೆ ಈಗ ಪಂಡಿತರೆನ್ನಿಸುವರು" ಎಂದು ಪಂಡಿತ ಪಾಮರ ಸಾಹಿತಿಗಳ ಒಳ ಸಂಬಂಧವನ್ನು ಟೀಕಿಸಿ "ಈ ಹಳಗನ್ನಡ ಪ್ರಿಯರೆ ಪ್ರಚಲಿತವಾದ ಕನ್ನಡದ ಪ್ರಸಾರಕ್ಕೆ ಕಾಲ್ತೊಡಕಾಗಿರುವರು. ಹೊಸಗನ್ನಡಕ್ಕೆ ಮಾದರಿಯ ಚಲನವನ್ನು ಕೊಟ್ಟ ರಸಾಲಂಕಾರವನ್ನು ವ್ಯಕ್ತಪಡಿಸುವಂತೆ ಸದ್ವಸ್ತು ವರ್ಣನೆಯುಳ್ಳ ಗ್ರಂಥಗಳನ್ನು ಪಂಡಿತರು ಬರೆಯುತ್ತಿದ್ದರೆ ಮಹಾರಾಷ್ಟ್ರ ಭಾಷೆಯು ಎಷ್ಟು ಹಿಂದುಳಿದಿರುವುದೆಂಬುದನ್ನು ನಾವು ಹಿಂದಿರುಗಿ ನೋಡಬಹುದು."[೧೭] ಎಂಬ ವಿಷಾದ ಧ್ವನಿ ಕೇಳುವುದು. ಹಳಗನ್ನಡ, ಹೊಸಗನ್ನಡದ ತಿಕ್ಕಾಟ ಇಂದಿರಾ ಕಾದಂಬರಿಯಲ್ಲಿ ಕಾಣುವುದು.

"ಇಂದಿರಾ ಕಾದಂಬರಿಯ ಭಾಷೆ ವಸ್ತುಗಳಂತಹ ಘಟಕಗಳು ಪ್ರಯೋಗಾವಸ್ಥೆಯಲ್ಲಿದ್ದವು"[೧೮] ಎಂಬಲ್ಲಿ ಎಷ್ಟೋ ಪಾಶ್ಚಾತ್ಯ ಕಾದಂಬರಿ ಮೇಲಿನ ಅರ್ಥಪ್ರಭಾವಿತರಾದ ಕಥೆಯು ಮುಖ್ಯವಾಗಿ ಪಾತ್ರಗಳ ಮೂಲಕ ನಿಭಾಯಿಸಿದಂತೆ ಕಾಣುವುದು. ಹೀಗಾಗಿ ಇಂದಿರಾ ಕಾದಂಬರಿ ವಸ್ತುವನ್ನು ನಿಖರವಾಗಿ ಗುರುತಿಸುವುದು ಕಷ್ಟ. ವಸ್ತು ಕೇವಲ ಪ್ರೇಮ ಕಥೆಯೆಂದರೆ ಹಗುರವಾಗುತ್ತದೆ. ಸಾಮಾಜಿಕ ಸುಧಾರಣೆ, ಸವಾಲುಗಳ ನಿರ್ವಹಣೆ ಎಂದರೆ ಅಂಥ ಪ್ರಗಾಢತೆ ಇರಲಿಲ್ಲ. ಒಂದು ನಿರ್ಧಿಷ್ಟ ತಂತ್ರದೊಂದಿಗೆ ಕಾದಂಬರಿಯ ಪಾತ್ರ, ಸನ್ನಿವೇಶ, ಭಾಷೆ, ಮುಂತಾದವುಗಳೆಲ್ಲ ವಸ್ತುವನ್ನು ಪಕ್ವಗೊಳಿಸಬೇಕು. ಆದರೆ ಇಲ್ಲಿ ಹಾಗೆ ಆಗಿಲ್ಲ"[೧೯] ಎಂಬ ಅಭಿಪ್ರಾಯದಿಂದ ವಸ್ತು ತಂತ್ರ ನಿಶ್ಚಿತ ರೂಪ ಪಡೆದುಕೊಂಡಿಲ್ಲ. ಸಮಾಜ ಸುಧಾರಣೆಯ ನೆಲೆಯಲ್ಲಿ ಕಾದಂಬರಿ ಮಹತ್ವದೆನಿಸಿದರೂ ಅದು ಸಾಮಾಜಿಕ ಬದಲಾವಣೆಯನ್ನು ಸ್ಥೂಲವಾಗಿ ತೋರಿಸುತ್ತಾ ಆಧುನಿಕತೆಯೆಡೆಗೆ ತಿರುಗುವ ವ್ಯಕ್ತಿಗಳನ್ನು ಬೆಂಬಲಿಸುತ್ತದೆ. ವ್ಯಕ್ತಿಗಳ ಮನೋವೃತ್ತಿಗಳನ್ನು ಪರೀಕ್ಷಿಸುವ ನೋಟದಿಂದ ವರ್ಣನೆಯ ಶೈಲಿ ಕಾದಂಬರಿಗೆ ರಮ್ಯತೆ ರಂಜಕತೆ ಒದಗಿಸಿವೆ.

'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ರಾಮಾಯಣದ ಹಲವಾರು ಅಂಶಗಳು ಗಟ್ಟಿಯಾಗಿ ಉಳಿದಿವೆ. ನಿರ್ಮಲ ಮೂರ್ತಿಗಳಾದ ಶ್ರೀರಾಮ, ಸೀತಾದೇವಿ, ಯುಧಿಷ್ಠಿರ, ದ್ರೌಪದಿ ಇವರುಗಳ ಗುಣಗಳಲ್ಲಿ ಕೆಲವು ಭಾಗವನ್ನು ಹೊಂದಿ ಲೋಕದ ನಿಂದೆಗೆ ಸಿಕ್ಕು ಗುರಿಯಾದರು. ತಮ್ಮ ಧೀರೋದ್ಧಾತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೋ, ಊಹಿಸಿಕೊಂಡೋ ವರ್ಣಿಸುವುದು. ಮನಸ್ಸನ್ನು ಚೆನ್ನಾಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ. ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರಗಳಾಗಿದ್ದಾರೆ. ಮನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ"[೨೦] ಎಂ.ಎಸ್. ಪುಟ್ಟಣ್ಣನವರ ಕೃತಿ ಪ್ರಕಟವಾಗಿರುವ ಕಾಲ ಗಮನಿಸಿದರೆ

ವ್ಯಾಕರಣಕ್ಕೆ ಹೆಚ್ಚು ಗಮನ ನೀಡಿರುವ ಸಂಗತಿ ಅಚ್ಚರಿ ಎನಿಸುವುದು. ಬಹುತೇಕ ಬರವಣಿಗೆಯ ಉದ್ದೇಶವೇ ಸಂವಹನ ಕ್ರಿಯೆಗೆ ಸಂಬಂಧಿಸಿದ್ದು. ಕನ್ನಡ ಗದ್ಯವನ್ನು ಜಿಡಿಸಿ ಲಾಲಿತ್ಯದ ಬಳುಕನ್ನು ನೀಡಿದ್ದಲ್ಲಿ ಕಾಣುವುದು. ಅದು ಗುಪ್ತಗಾಮಿನಿಯಂತಿದೆ. "ಪುಟ್ಟಣ್ಣನವರ ಭಾಗ ಎಂಬುದು ನಿಸ್ಸಂದೇಹವಾದ ಮಾತು. ಅವರ ಗದ್ಯ ಶೈಲಿಯಲ್ಲಿ ನಿರಾಯಸತೆಯನ್ನು ಕಾಣಬಹುದು."[೨೧] ಯಾರು ಏನು ಮಾತನಾಡಿದರೂ ನಮ್ಮ ದೇಶದ ಶಬ್ದಗಳನ್ನೆ ಬಳಸಬೇಕೆಂಬ ಸಂಗತಿ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಕಂಡುಬರುವುದು. ಉದಾ: ಅರ್ಜಿ> ಮನವಿ, ಶಾಯಿ> ಮಸಿ, ಛಾಪಾಕಾಗದ> ಮುದ್ರಕಾಗದ, ಹುದ್ದೇದಾರ> ಅಧಿಕಾರಿ, ತೇರಿಜ>ಟೆವಣೆ, ತರಿಖುಷ್ಕಿ> ಗದ್ದೆಬೆದ್ದಲು, ನಿರಾಡಂಬ> ಕಾಡಾರಂಭ, ಹಣದ ವಸೂಲಿ> ಹಣ ಎತ್ತುವುದು, ಒಡ್ಡೋಲಗ>ದರ್ಬಾರು."[೨೨] ಮುಂತಾದ ಶಬ್ದಗಳ ಬಳಕೆಯಲ್ಲಿ ಇದೇ ರೀತಿ ಬಳಸಬೇಕೆಂದುದ್ದನ್ನು ಕಾಣುವುದು. ಇದು ಅಂದಿನ ಅನ್ಯಭಾಷೆಯ ಪದಗಳನ್ನು ಒತ್ತಾಯಪೂರ್ವಕ ಹೇರಿದ್ದು ಕಾಣುವುದು.

'ಶೃಂಗಾರ ಚಾತುರ್ಯೋಲ್ಲಾಸಿನಿ' ಕಾದಂಬರಿಯ ಭಾಷೆ ಮತ್ತು ವಸ್ತು ಸುಂದರ ಸುಲಲಿತವಾದದ್ದು. ಗುಬ್ಬಿ ಮುರಿಗಾರಾಧ್ಯರು ಈ ಕಾದಂಬರಿಗೆ ಕಲ್ಪಿಸಿದ ಶೃಂಗಾರ, ಲಾಲಿತ್ಯಪೂರ್ಣವಾದ ಕಥೆಗೆ ಇತಿಹಾಸದ ಹೊದಿಕೆ ಇದೆ. ಐತಿಹಾಸಿಕವಾಗಿರುವುದರಿಂದ ಕಾಶ್ಮೀರ, ಇಂದ್ರಪ್ರಸ್ತ ಆಯೋಧ್ಯ ರಾಜ್ಯಗಳ ಪೂರ್ವಚರಿತ್ರೆ ಇದೆ. ಪ್ರಾಚೀನ ಸಂಸ್ಕೃತ ಕನ್ನಡ ಕಾವ್ಯಗಳಲ್ಲಿ ಬಂದ ಸ್ತ್ರೀ ವರ್ಣನೆ, ಕಾಮಶಾಸ್ತ್ರ, ಸ್ತ್ರೀ ಲಕ್ಷಣ, ರೂಪಲಾವಣ್ಯವೆ – ರಾಜ್ಯ ಹೋರಾಟಗಳ ಸಂದರ್ಭಗಳೆ ಕಥೆಯ ವಿಷಯ ವಸ್ತುವಾಗಿದೆ. ಇಂದ್ರಪ್ರಸ್ತದ ಪ್ರತಾಪ ವಿಜಯವರ್ಮ, ಸೌರಾಷ್ಟ್ರದ ರೆಂಜೆಂಟ್ ಸಿಂಗ್, ಅಯೋಧ್ಯೆಯ ಜಯಸಿಂಹ, ವಂಗದೇಶದ ಕೃಷ್ಣಭೂಪಾಲ ಈ ಪಾತ್ರಗಳಿಗೆ ಬರುವ ಅನಂಗಲಲನೆಯೆಂಬ ರಾಜಕುಮಾರಿಯ ಸೆರೆಇಟ್ಟು–ಬಿಡಿಸುವ ಪ್ರಸಂಗ ರಾಜಕೀಯ ಕಾದಂಬರಿಯ ವಾಸನೆ ನೀಡುವುದು. ಚರ್ಚಿತ ವಿಷಯ ಚರ್ಚಿತ ಸಂಗತಿ ಸಾಮಾಜಿಕತೆಯೊಂದಿಗೆ ಬೆಸೆದುಕೊಂಡಿದೆ.

ನಂಜನಗೂಡು ತಿರುಮಲಾಂಬರವರು ಮಹಿಳಾ ಸಂವೇದನೆಯ ವಿಷಯ ವಿಶ್ಲೇಷಣೆ ಮಾಡಿದ್ದು, 'ಸುಶೀಲೆ' ಮತ್ತು 'ನಭಾ' ಕಾದಂಬರಿಯಲ್ಲಿ ಕಾಣುವುದು. ಚಿ.ನ. ಮಂಗಳಾರವರು "ತಿರುಮಲಾಂಬ ಅವರ ಸಾಹಿತ್ಯ ಬರಿ ರಂಜನೆಗಾಗಿ ಬರೆದ ಸಾಹಿತ್ಯವಲ್ಲ ಅಥವಾ ಸಂತೋಷಕ್ಕಾಗಿ ಮಾತ್ರ ಸೃಷ್ಟಿಸಿದ ಸಾಹಿತ್ಯವಲ್ಲ." ಮುಂದುವರೆದು ಅವರ ಸಾಹಿತ್ಯದ ದೃಷ್ಟಿ ಸೃಷ್ಟಿ ಎರಡಕ್ಕೂ ನಿರ್ದಿಷ್ಟ ಧ್ಯೇಯೋದ್ದೇಶಗಳಿದ್ದವು. ಬರಹಗಾರರಿಗೊಂದು ಸಾಮಾಜಿಕ ಹೊಣೆಗಾರಿಕೆ ಇದೆ ಎಂಬುದು ಅವರ ಅನಿಸಿಕೆಯಾಗಿತ್ತು."[೨೩] ಇದು ಕಾರ್ಯರೂಪಕ್ಕೆ ಬರಬೇಕೆಂದರೆ ಭಾಷಾ ಬಳಕೆಯ ರೀತಿ ಮತ್ತು ವಿಷಯ ಎಷ್ಟು ಮಹತ್ವದ್ದೆಂದು ಇಲ್ಲಿ ಕಾಣುವುದು. ಸುಶೀಲೆ ಕಾದಂಬರಿ ವಸ್ತು ವಿಷಯ ಮತ್ತು ಭಾಷೆಯ

ಕುರಿತಾಗಿ ಗಮನ ಸೆಳೆಯುವುದು. ಭಾಷೆ ಸರಳ ಸುಲಲಿತವಾದದ್ದು. ಅವರೆ ಹೇಳಿದಂತೆ ಸುಶೀಲೆ ಕಾದಂಬರಿಯ ಭಾಷೆ ಮತ್ತು ವಿಷಯವಸ್ತು ಮೆಚ್ಚುವಂತಹದ್ದು. ಸ್ತ್ರೀಯರ ಸ್ಥಿತಿಯ ವಿವರ ವರ್ಣನೆಯ ಸಂದರ್ಭದಲ್ಲಿ ಪೀಠಿಕಾ ಭಾಗದಲ್ಲಿ "ನಮ್ಮ ಹೃದಯವು ಶೋಕದಿಂದ ಕರಗುತಿಹುದು. ಕಣ್ಣು ನೀರು ತುಂಬಿ ಲೇಖನಿಯು ಮುಂದುವರೆಯುವುದು."[೨೪] ನಿರ್ದಿಷ್ಟ ಗುರಿ ಪ್ರಚುರ ಪಡಿಸುವುದು. ಸರಳ ಭಾಷೆ ಬಳಕೆ ಕಾಣುವುದು. ಗಿರಿಯಮ್ಮ ಸುಶೀಲೆಯ ನಡುವೆ ಜರುಗುವ ಸಂವಾದ ಮೆಚ್ಚುವಂತಹದ್ದು.

ತಿರುಮಲಾಂಬರವರ 'ವಿಷಯ ನಿರುಪಣಾ ಶೈಲಿ' ವಿಶಿಷ್ಟವಾದದ್ದು. ವಿನೋದ ಯಾವ ಬಲವಾದ ಕಾರಣವಿಲ್ಲದೆ ಧಿಡೀರ್ ಬದಲಾದುದ್ದಕ್ಕೆ ಮಾಸ್ತಿಯವರು ವಿರೋಧಿಸಿದ್ದು. "ಮನುಷ್ಯ ಬದಲಾಗಲು ಯುಗಗಳು ಬೇಕಾಗಿಲ್ಲ. ಕ್ಷಣಗಳೇ ಸಾಕು"[೨೫] ಎಂಬ ಮಾತು ತಿರುಮಲಾಂಬ ಕಾದಂಬರಿಗಳ ಬದಲಾದ ಸನ್ನಿವೇಶಗಳ ಚಿತ್ರಣದಂತೆ ಕಾಣುವುದು. "ಕಾದಂಬರಿಯ ಸ್ವರೂಪದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಈ ಕಾಲದ ಲೇಖಕರು ತಮ್ಮದೆ ಆದ ಮಾರ್ಗಗಳನ್ನು ಹುಡುಕಿಕೊಂಡರು." "ಕೆಲವರು ಕಾಲ್ಪನಿಕತೆಯನ್ನು ಹೆಚ್ಚಾಗಿ ಅವಲಂಬಿಸಿದರೆ ಇನ್ನು ಕೆಲವರು ವಾಸ್ತವಿಕತೆಯನ್ನು ಸಮನ್ವಯ ಸಾಧಿಸಲು ಯತ್ನಿಸಿದರು. ಹೀಗಿದ್ದರೂ ಶ್ರೇಷ್ಠ ದರ್ಜೆಯ ಸೃಜನಶೀಲತೆಯನ್ನು ಇವರಾರೂ ಮೆರೆಯಲಿಲ್ಲ"[೨೬] ಎಂಬ ಮಾತು ಸಂಧಿಕಾಲದ ಸಂದಿಗ್ಧತೆಯನ್ನು ಸಾರುವುದು. ಈ ಮೇಲಿನ ಮಾತುಗಳು 'ಇಂದಿರಾಬಾಯಿ' ಕಾದಂಬರಿಯ ವಾಸ್ತವ ಮತ್ತು 'ಇಂದಿರಾ' ಕಾದಂಬರಿಯ ವಾಸ್ತವದ ಅಭಾಸವನ್ನು ಪ್ರತಿಬಿಂಬಿಸಿದಂತೆ ಕಾಣುವವು.

ಅರಿಸ್ಟಾಟಲ್ ಹೇಳಿದ ನಾಟಕದ ಆರು ಅಂಗಗಳಲ್ಲಿ 'ವಸ್ತು' ಕೃತಿಯ ಆತ್ಮವಿದ್ದಂತೆ, ಕಾದಂಬರಿಯಲ್ಲಿ ವಸ್ತುವಿಗೆ ಪ್ರಾಧಾನ್ಯತೆ ಇದೆ. ವಸ್ತು ಮತ್ತು ಪಾತ್ರಗಳ ನಡುವೆ ಸಂಘರ್ಷ ಕಲ್ಪಿಸುವ ಮಾತು ಇಲ್ಲಿ ಮುಖ್ಯವಾಗುವುದು. ಅಂತೆಯೇ "ಒಂದು ಕೃತಿಯ ವಸ್ತು ಆತ್ಮದಂತೆ ನಿರಾಕಾರವಾಗಿದ್ದು, ಕೃತಿಯ ದೇಶ, ಕಾಲ ಹಾಗೂ ವ್ಯಕ್ತಿಗಳ ಮುಖಾಂತರವಾಗಿ ತನ್ನ ಅಸ್ತಿತ್ವವನ್ನು ಪ್ರಕಟಗೊಳಿಸಬೇಕಾಗುತ್ತದೆ." ಅಂತೆಯೇ ಸಾಹಿತ್ಯ ಕೃತಿಗಳಲ್ಲಿನ ಭಾಷೆಯ ಸ್ವರೂಪ, ಕುರಿತಾದ ಅಧ್ಯಯನದ ಅವಶ್ಯಕತೆ ಭಾಷಾಶಾಸ್ತ್ರಕ್ಕೆ ಮಹತ್ವದ್ದು. ಕಾದಂಬರಿಗಳ ಸಾಹಿತ್ಯ ಶಿಲ್ಪ, ಸಾಂಸ್ಕೃತಿಕ ವೈಶಿಷ್ಟ್ಯಗಳಂತೆ ಭಾಷಿಕತೆ ವೈಶಿಷ್ಟ್ಯ ಪೂರ್ಣವೆನಿಸುವುದು. ಕೀರ್ತಿನಾಥ ಕುರ್ತುಕೋಟಿಯವರು 'ಇಂದಿರಾ' ಕಾದಂಬರಿಯ 'ಪ್ರಮುಖ ಪಾತ್ರಗಳು ಹಾಗೂ ಉಪ ಪಾತ್ರಗಳಲ್ಲಿಯ ಇಂಥ ನಿಸ್ಸಂಗತೆ ಕಾದಂಬರಿಯ ದೊಡ್ಡ ದೌರ್ಬಲ್ಯವಾಗಿದೆ. ಇದರಿಂದಾಗಿ ಕಾದಂಬರಿಯ ವಸ್ತು ಸಂಘಟಿತರಾಗಲು ಅವಕಾಶ ದೊರೆತಿಲ್ಲ"[೨೭] ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಭಾಷೆಯ ಪ್ರಬೇಧಗಳು, ಸಾಮಾನ್ಯವಾಗಿ ವ್ಯಕ್ತಿಭಾಷೆ, ಪ್ರಭೇದ ಭಾಷೆ, ಉಪಭಾಷೆ ಪ್ರಾದೇಶಿಕ ಭಾಷಾ ಪ್ರಭೇದಗಳನ್ನು ಪರಿಗಣಿಸುತ್ತಾರೆ. ಹಲವು ಸಾಮಾಜಿಕ ಪಂಗಡಗಳ ಉಪಸಂಸ್ಕೃತಿಗಳಲ್ಲಿ ಉಂಟಾಗುವ, ವ್ಯತ್ಯಾಸಗಳು ಪ್ರಭೇದ ಭಾಷೆ ಎನಿಸಿಕೊಳ್ಳುತ್ತವೆ. ಪ್ರದೇಶ-ಪ್ರದೇಶಗಳ ನಡುವೆ ಗುರುತಿಸುವಷ್ಟು ಪ್ರಾದೇಶಿಕ ಸಾಮಾಜಿಕ, ಸಾಂಸ್ಕೃತಿಕ ಸ್ತರಗಳನ್ನು ವಿಶ್ಲೇಷಿಸುವುದು. ಇದು ಭಾಷೆಯ ಬೆಳವಣಿಗೆ ಗುರುತಿಸಲು ಸಹಾಯಕ.

ಕ್ರಿಯೆಯೇ ಪ್ರಧಾನವಾದ ಕಾದಂಬರಿಗಳಲ್ಲಿ ಕಥೆ, ಮುಖ್ಯ ಎನ್ನುವದನ್ನು ಕಂಡಿದ್ದೇವೆ. ಇಲ್ಲಿ ಎಷ್ಟೋ ಕಥೆಯ ಅಂಶವೇ 'ವಸ್ತು'ವಿನ ಅಂಶಕ್ಕಿಂತ ಪ್ರಾಮುಖ್ಯತೆ ಪಡೆಯುತ್ತದೆ."ಹೀಗಾಗಿ ಕಾದಂಬರಿಕಾರನಲ್ಲಿ ಪರಿಸರದ ಭಾಷಾ ಪ್ರಜ್ಞೆ, ಆಡು ನುಡಿಯ ಸ್ವರೂಪ, ಮಣ್ಣಿನ ವಾಸನೆಯನ್ನು ಒಳಗೊಂಡಿರುವುದು. ಗಾದೆ ಮಾತುಗಳು, ನುಡಿಗಟ್ಟುಗಳು, ಪದಗಳ ಧನ್ಯಾತ್ಮಕ ಸ್ವರೂಪ ಮುಂತಾದ ಸಂಗತಿಗಳು ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಕಾಣುವುದು. ಹಾಗೆ ವಸ್ತುವಿನ ವಿಶ್ಲೇಷಣೆ. "ಕಥೆಯನ್ನು ಹೇಳುವ ಕಾರ್ಯವನ್ನು ಕಥೆಗಾರ ಎರಡು ರೀತಿಯಲ್ಲಿ ಸಾಧಿಸಬಹುದು. ಮೊದಲನೆಯದು, ವೃತ್ತಾಂತ, ಎರಡನೆಯದು ದೃಶ್ಯ ಚಿತ್ರಣ. ಕಥೆಗಾರ ನಡೆದ ಘಟನೆಗಳನ್ನು ತಾನೇ ವರ್ಣಿಸುತ್ತಾ ಹೋಗಬಹುದು."[೨೮] ಎಂಬ ಸಂಗತಿಗಳನ್ನು ಕಾದಂಬರಿಯಲ್ಲಿ ಸಾಮಾನ್ಯವಾಗಿ ಕಾಣಬಹುದು.

ಆಧುನಿಕತೆಯ ಪ್ರಭಾವ ಇಂದು ಯಾವ ಕ್ಷೇತ್ರ-ಪ್ರದೇಶವನ್ನೂ ಬಿಟ್ಟಿಲ್ಲ. ದಕ್ಷಿಣ-ಉತ್ತರ ಹೆದ್ದಾರಿ ಮಾರ್ಗಗಳು, ಸಾರಿಗೆ, ಸಂಪರ್ಕ ಸಾಧನಗಳು, ಪತ್ರಿಕೆಗಳು, ರೇಡಿಯೋ, ದೂರದರ್ಶಕಗಳು ರಾಜಕೀಯ, ಆಡಳಿತಾತ್ಮಕ ಕಾರಣಗಳಿಂದ ಏಕಸ್ವಾಮ್ಯ ಏರ್ಪಟ್ಟಿರುವ ಅಂತಃಸತ್ವ ಮೂಲ ಉಳಿಸಿಕೊಂಡಿದೆ. ಸಾಹಿತ್ಯ ಮಾನವ ಜೀವನದ ಪ್ರತಿಬಿಂಬವಾಗಿರಿರುವುದರಿಂದ ಲೇಖಕನು ವಿಶಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ಜೀವನ, ಪ್ರತಿಸೃಷ್ಟಿಸುವಾಗ ಕೃತಿಗೆ ಆ ನೆಲದ ಭಾಷೆ ದ್ರವ್ಯವಾಗುವುದು. ಆದ್ದರಿಂದ ಕೃತಿಯ ವಸ್ತು, ಕಥಾ ಸಂವಿಧಾನ, ಪಾತ್ರ ಚಿತ್ರಣ. ಜೀವನ ದೃಷ್ಟಿ ಭಾಷೆಯು ಮುಖ್ಯ. ಲೇಖಕ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಷ್ಟು ಕೃತಿಯ ಉದ್ದೇಶ ಪರಿಣಾಮಕಾರಿಯಾಗುವುದು.

ಬಹುತೇಕ ಕನ್ನಡದ ಮೊದಲ ಘಟ್ಟದ ಕಾದಂಬರಿಗಳಲ್ಲಿ ಶಿಥಿಲ ಬಂಧ ಕಾದಂಬರಿಯಿಂದ ಕಾದಂಬರಿಗೆ ಭಿನ್ನ ಭಿನ್ನ ಸ್ವರೂಪ ಪಡೆದುಕೊಂಡಿವೆ. ಕಾದಂಬರಿಯ ಬಂಧಕ್ಕೂ ವಸ್ತುವಿಗೂ ನಿಕಟ ಸಂಬಂಧ ಕಾಣುವುದು. ಜೊತೆಗೆ ಈ ಹಂತದ ಕಾದಂಬರಿಗಳು ಸಮಕಾಲೀನ ಸಾಮಾಜಿಕ ಪ್ರಜ್ಞೆಯ ಪ್ರತಿಬಿಂಬದಂತೆ ಕಾಣುವವು. ಅದಕ್ಕೆ ಬಳಸಿದ ಕೆಲವು ಸಾಹಿತ್ಯಿಕ ಪದಬಂಧಗಳು, ನುಡಿಗಟ್ಟುಗಳು, ಗಾದೆ ಮಾತುಗಳು, ಕೊಂಕು ನುಡಿಗಳು ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರಿವೆ. ಉದಾಹರಣೆಗೆ

ಮೊದಲ ಹಂತದ ಸ್ವತಂತ್ರ ಕಾದಂಬರಿಗಳಲ್ಲಿ ಬಳಕೆಯಾದ ಕೆಲವು ಪ್ರಭಾವಿಕ ಗಾದೆ ಮಾತುಗಳನ್ನು ಇಲ್ಲಿ ಗಮನಿಸಬಹುದು.

ಶೈಲಿ-ತಂತ್ರಗಳ ವಿಶ್ಲೇಷಣೆ:

ಮೊದಲ ಹಂತದ ಸ್ವತಂತ್ರ ಕಾದಂಬರಿಗಳಲ್ಲಿ ಶೈಲಿ-ತಂತ್ರಗಳು ವಿಶೇಷವಾಗಿ ಬಳಕೆಯಾಗಿವೆ. ಕಾದಂಬರಿಗಳ ವಿನ್ಯಾಸವಾಗಲಿ, ಶೈಲಿ, ತಂತ್ರಗಳ ನಿರ್ವಹಣೆಯಾಗಲಿ ತೀರಾ ಭಿನ್ನವೆನಿಸುವುದಿಲ್ಲ. ವಸ್ತುವಿನ ಹುಡುಕಾಟ, ಶೈಲಿ. ತಂತ್ರಕ್ಕೂ ವಿಭಿನ್ನತೆ ರೂಢಿಸಿಕೊಂಡಿದ್ದಾರೆ. ಪ್ರಥಮ ಹಂತದ ಕಾದಂಬರಿಗಳ ಸುಪ್ತ ಪ್ರಜ್ಞೆಯ ನೆಲೆಯಲ್ಲಿ ಕೌಟುಂಬಿಕ ಚೌಕಟ್ಟಿನ ಧಾರುಣ ಕಥೆಗಳನ್ನು ಹೇಳಲು ಪ್ರಯತ್ನಿಸಿರುವುದು ಗಮನಾರ್ಹ. ಹಿಂದಿನ ಪೌರಾಣಿಕ ಪರಂಪರೆಗಿಂತ ಆ ಕಾಲದ ಸಾಮಾಜಿಕ ವಿಷಯ ವಸ್ತುವಿಗೆ ಮನ್ನಣೆ ನೀಡಿದ್ದಾರೆ. ಕಾದಂಬರಿಗೆ ಸೂತ್ರ ಅಳವಡಿಸಿಕೊಂಡು ಅದಕ್ಕೆ ರೂಪ ಸ್ವರೂಪ ಮತ್ತು ರಚನೆಯ ತಂತ್ರವನ್ನು ಹೇರುವುದು ಬಹಳ ಕಷ್ಟ. ಕಾದಂಬರಿಯಲ್ಲಿ ದೀರ್ಘ ಸಂಕ್ಷಿಪ್ತತೆ ಮುಖ್ಯವಲ್ಲ. ಅಲ್ಲಿ ಕಾದಂಬರಿಯ ವಸ್ತುವಿಗಿಂತ ನಿರೂಪಣಾ ಶೈಲಿ, ತಂತ್ರಗಳು ಪರಿಣಾಮಕಾರಿಯಾಗಿರಬೇಕು. ವಿಷಯ ವಸ್ತುವಿನ ತಂತ್ರ ನಿರೂಪಣಾ ಕ್ರಮ ಪಥಿಕತೆ, ವರ್ಣನೆ, ಸಂಭಾಷಣೆ, ನಿರೂಪಣೆಗೆ ಪೂರಕವಾಗುತ್ತಾ ಸಾಗಬೇಕು ಮತ್ತು ವಸ್ತುವಿಗೆ ಪೋಷಕವಾಗಿರಬೇಕು.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಕಾರರು ಬಳಸಿಕೊಂಡ ತಂತ್ರ ಮತ್ತು ಶೈಲಿ ವಿವರಣಾತ್ಮಕವಾಗಿಯೇ ಇವೆ. ಕೆಲವು ಕಡೆ ಹೇಳಿಕೆಗಳಲ್ಲೆ ಕಥೆಯನ್ನು ಹೆಣೆದಿದ್ದು ಕಂಡುಬರುತ್ತದೆ. "ಈ ತಂತ್ರವನ್ನು ಈಗಾಗಲೇ ಬಿ. ವೆಂಕಟಾಚಾರ್ಯರು ಬಂಗಾಳಿಯ ಅನುವಾದದ ಮೂಲಕ ಕನ್ನಡಕ್ಕೆ ತಂದಿದ್ದಾರೆ.[೨೯] "ಆ ಕಾಲದ ಕೃತಿಗಳಲ್ಲಿ ಕೆಲ ಲೇಖಕರು ಹೊಸಗನ್ನಡದೊಂದಿಗೆ ಹಳಗನ್ನಡವನ್ನು ಸಮ್ಮಿಶ್ರ ಮಾಡಿ ಬಳಸಿದ್ದು ಅಲ್ಲಲ್ಲಿ ಕಾಣುವುದು. ಅನ್ಯಭಾಷೆಯನ್ನು ಕನ್ನಡದೊಂದಿಗೆ ಸಮೀಕರಿಸಿ ಬರೆದಿದ್ದಾರೆ. 'ಇಂದಿರಾಬಾಯಿ' ಕಾದಂಬರಿಯಲ್ಲಿ 'ತುಳು' ಮತ್ತು ಕೊಂಕಣಿ ಬಳಕೆ ಕಾಣುವುದು. ಶೃಂಗಾರ ಚಾತುರ್ಯೋಲ್ಲಾಸಿನಿಯಲ್ಲಿ ಹಳಗನ್ನಡವನ್ನು ಬಳಸಿದ್ದಾರೆ. ಗದಗಕರವರು ರತ್ನಾವಳಿ ನಾಟಕ 'ಬಿಲ್ಹಣ ಚರಿತೆ. ಕುವಲಯಾನಂದ. ಮುಕುಂದಾನಂದಬಾಣ ರಾಜಶೇಖರ ವಿಳಾಸ, ಜೈಮಿನಿ ಭಾರತ, ಮುಂತಾದ ಕೃತಿಗಳ ಪದ್ಯ ಬಳಸಿರುವುದು ಸ್ತ್ರೀವರ್ಣನೆ ಶೃಂಗಾರ ಚಾತುರ್ಯೋಲ್ಲಾಸಿನಿಯ ದ್ವಿತೀಯ ಪರಿಚ್ಛೇದದಲ್ಲಿ ಹೇರಳವಾಗಿದೆ. ಇದನ್ನ ಕೆರೂರ ವಾಸುದೇವಾಚಾರ್ಯರು "ಹಳಗನ್ನಡವನ್ನು ಹೊಸಗನ್ನಡದಲ್ಲಿ ಕಲಿಸಿ ಜಾಣತನವೆಂದು ತಿಳಿದು ಕರ್ಣಕಟುಗಳಾದ ಸಂಧಿಗಳನ್ನು ಮಾಡಿ ಅರ್ಥ ತಿಳಿಯುವುದೊತ್ತಟ್ಟಿಗಿರಲಿ ಓದಲಿಕ್ಕೂ ಭಾರತದಂತಹ ಹೊತ್ತಿಗೆಗಳನ್ನು ಬರೆವವರೆ ಈ ಪಂಡಿತರೆನ್ನಿಸುವರು..... ಎಂದು ಪಂಡಿತ ಪಾಮರ ಸಾಹಿತಿಗಳ ಒಳ ಸಂಬಂಧವನ್ನು ಟೀಕಿಸಿ, 'ಈ ಹಳಗನ್ನಡ ಪ್ರಿಯರೆ ಪ್ರಚಲಿತ ಕನ್ನಡ ಪ್ರಸಾರಕ್ಕೆ

ಕಾಲ್ತೊಡರಾಗಿರುವರು. ಹೊಸಗನ್ನಡಕ್ಕೆ ಮಾದರಿ ಚಲವನ್ನು ಕೊಟ್ಟು ರಸಾಲಂಕಾರಗಳನ್ನು ವ್ಯಕ್ತಪಡಿಸುವಂತೆ ಸದ್ವಸ್ತು, ವರ್ಣನೆಯುಳ್ಳ ಭಾಷೆಯು ಎಷ್ಟು ಹಿಂದುಳಿದಿರುವುದೆಂಬುದನ್ನು ನಾವು ಹಿಂತಿರುಗಿ ನೋಡಬಹುದು.[೩೦]

ಇಂದಿರಾ ಕಾದಂಬರಿಗಿಂತ ಮುಂಚೆ ಬಂದ 'ಸೌಗಂಧಿಕಾ ಪರಿಣಯ' 'ಕಲಾವತಿ ಪರಿಣಯ', ಕಾದಂಬರಿಗಳು, 'ಪದ್ಯಾತ್ಮಕ ಗದ್ಯಶೈಲಿ' ಹೊಂದಿದಂತೆ ಕಂಡರೂ. 'ದಂಡಕ' ವೃತ್ತದಲ್ಲಿ ಬರೆದ ಕೃತಿಗಳು. ಕಲಾವತಿ ಪರಿಣಯ 'ಸ್ವತಂತ್ರವೂ, ನವೀನವೂ ಆದ ಅದರ ಕಥಾವಸ್ತು ಇಷ್ಟೊಂದು ಹೃದ್ಯವಾಗಿದೆಯಲ್ಲ ಅದನ್ನು ಹೊಸಗನ್ನಡದಲ್ಲಿ ಬರೆದುದಾದರೆ ಇಂದಿನ ವಾಚಕರನ್ನು ಸಹ ರಂಜಿಸಬಲ್ಲದು ಎಂದು ಗೋವಿಂದ ಪೈಯವರು ತಮ್ಮ ಮುಂಬೈ ಭಾಷಣದಲ್ಲಿ 'ಕನ್ನಡ ಪ್ರಥಮ ಕಾದಂಬರಿ"[೩೧] ಎಂದು ಉದ್ಗರಿಸಿದ್ದು ಗದ್ಯದ ಬೆಳವಣಿಗೆಯನ್ನು ಗುರುತಿಸಿದ್ದಾರೆ. ಕ್ರಿ.ಶ.೧೯ನೇ ಶತಮಾನದ ಪೂರ್ವಾರ್ಧದದಲ್ಲೆ ಕೆಂಪುನಾರಾಯಣ "ಮುದ್ರಾಮಂಜೂಷದಲ್ಲಿಯ ಕಥನ ರೀತಿ ಕಾದಂಬರಿಗೆ ಹೆಚ್ಚು ಸಮೀಪ"[೩೨] ಎನ್ನಬಹುದಾಗಿದೆ. "ಕಾದಂಬರಿ ಬರೆಯದಿದ್ದರೂ ಅದರ ಬರವಣಿಗೆಗೆ ಕನ್ನಡ ಗದ್ಯವನ್ನು ಹದಗೊಳಿಸಿದ ಶ್ರೇಯಸ್ಸು ಕೆಂಪು ನಾರಾಯಣನಿಗೆ ಸಲ್ಲುತ್ತದೆ."[೩೩] ಮುದ್ರಾಮಂಜೂಷವು ನಿಜವಾಗಿಯೂ ಮೊದಲ ಕಾದಂಬರಿ ಇಂಗ್ಲಿಷ್ ಸಂಪರ್ಕ ಕನ್ನಡಕ್ಕೆ ತಟ್ಟದಿದ್ದಾಗಲೇ ಹುಟ್ಟಿದ ಐತಿಹಾಸಿಕ ಕಾದಂಬರಿ."[೩೪] ಈ ರೀತಿಯಾಗಿ ಕಾದಂಬರಿಯ ಪ್ರಾರಂಭಿಕ ಹಂತ ಗದ್ಯ ಪದ್ಯ ರೂಪ (Form) ಕುರಿತು ಚರ್ಚಿತವಾಗಬೇಕಾದ ಅವಶ್ಯಕತೆಯು ಇಲ್ಲಿ ಕಂಡುಬರುತ್ತದೆ. ಈ ಕಾಲದ ಕೆಲವು ಕೃತಿಗಳಲ್ಲಿ ಸಂಭಾಷಣೆ, ನಾಟಕ ರೀತಿಗೆ ಬಂದದ್ದು ಕಾಣಬಹುದು.

"ಕನ್ನಡ ಕಾದಂಬರಿಯ ನಿಜವಾದ ಪ್ರೇರಣೆ ವಿಡಂಬನೆ"[೩೫] ಎಂದು ಜಿ.ಎಸ್. ಅಮೂರವರು ಹೇಳಿದ್ದಾರೆ. ಕನ್ನಡ ಕಾದಂಬರಿ ಪ್ರಕಾರ ತನ್ನ ರೂಪ (Form) ನಿರ್ಧರಿಸಿಕೊಳ್ಳಬೇಕಾದಂತಹ ಪ್ರಾರಂಭ ಹಂತದಲ್ಲೆ ಗುಲ್ವಾಡಿಯವರು ಈ ಕಾದಂಬರಿಯಲ್ಲಿ ಪ್ರಕಟಪಡಿಸಿದ ಅಪೂರ್ವ ತಂತ್ರ ಕುಶಲತೆಗೆ ಚಾರಿತ್ರಿಕ ಮಹತ್ವವೂ ಇದೆ."[೩೬] ಕಾದಂಬರಿಯ ತಂತ್ರಗಳನ್ನು ಶೈಲಿ ಕೇವಲ ಮೇಲಿನ ನೋಟಕ್ಕೆ ರೂಪ ಪಡೆದುಕೊಂಡಿಲ್ಲ. ಸಮಾಜ ಸುಧಾರಣೆಯ ನೆಲೆಯಲ್ಲಿ ಕಾದಂಬರಿ ಮಹತ್ವದ್ದೆನಿಸಿದರೂ ಅದು ಸಾಮಾಜಿಕ ಬದಲಾವಣೆಗಳನ್ನು ಸ್ಥೂಲವಾಗಿ ತೋರಿಸುತ್ತಾ, ಆಧುನಿಕತೆಯೆಡೆಗೆ ತಿರುಗುವ ವ್ಯಕ್ತಿಗಳನ್ನು ಬೆಂಬಲಿಸುತ್ತದೆ. ವ್ಯಕ್ತಿಗಳ ಮನೋವೃತ್ತಿಯನ್ನು ಪರೀಕ್ಷಿಸುವ ನೋಟದಿಂದ ವರ್ಣನ ಶೈಲಿ ಕಾದಂಬರಿಗೆ ರಮ್ಯತೆ, ರಂಜಕತೆಯನ್ನು ತಂದು ಒದಗಿಸಿದೆ.

ಎಂ.ಎಸ್. ಪುಟ್ಟಣ್ಣನವರ ಕಾದಂಬರಿಗಳ ವಸ್ತು ಶೈಲಿ ವಿಶಿಷ್ಟವಾದದ್ದು. ಸಮಕಾಲೀನ ಸಾಂಸ್ಕೃತಿಕ ಸಂವೇದನೆಗಳ ನೆಲೆ ಬೆಲೆಗಳನ್ನು ಕಟ್ಟಿಕೊಡುವ ಎದೆಗಾರಿಕೆಯ ಬರಹಗಾರ ಪುಟ್ಟಣ್ಣನವರು "ಒಳಿತಿಗೆ

ಒಳಿತು. ಕೆಡುಕಿಗೆ ಕೆಡಕು ಎಂಬ ಗ್ರಾಮೀಣರ ಭದ್ರ ನಂಬಿಗೆಯನ್ನು ಪುಟ್ಟಣ್ಣನವರು 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ದೇಶಿಯ ನೆಲೆಯಲ್ಲಿ ಪ್ರಯೋಗಿಸಿದ್ದಾರೆ."[೩೭] ದೇಶಿಯತೆಗೆ ಆಡುನುಡಿಯ ಸಮರ್ಥಬಳಕೆಯ ಸೊಗಡು ಬೀರುವ ಪುಟ್ಟಣ್ಣನವರ ಭಾಷೆ, ಮೊದಲ ಸುತ್ತಿನಲ್ಲೆ ಆಕರ್ಷಕವಾಗಿ ಕಾಣುವುದು.

ಇಂದಿರಾಬಾಯಿ ಕಾದಂಬರಿ ತರುವಾಯ ಬರುವ ಭಾಗೀರಥಿ ಕಾದಂಬರಿ ನಿರೂಪಕಿಯ ಪಾತ್ರದಂತೆ ಮೂಡಿಬಂದಿದೆ. ಭಾಗೀರಥಿ ಹೀನ ಮನೋಭಾವ ಹೇಳುವಾಗ ಮಾತೋಶ್ರೀಯವರ ನಲವತ್ತೆಂಟು ವರ್ಷ ಪ್ರಾಯವೆಂದಾಗ "ಆನೆಯ ಗರ್ಭದಲ್ಲಿ ಕತ್ತೆ" ಎಂಬಂತೆ ನಾನು ಹುಟ್ಟಿದೆನು" ಎನ್ನುತ್ತಾಳೆ. ಅವರ ದೃಷ್ಟಿಯಲ್ಲಿ ನನ್ನ ಚರಿತ್ರೆ ಸುಟ್ಟ ಚರಿತ್ರೆ ಮುಂದಿನ ನನ್ನ ಸುಟ್ಟ ಚರಿತ್ರೆಯನ್ನು ಕೇಳು"[೩೮] ಎನ್ನುವ ಮಾತಿನ ಹಿಂದೆ ಕೃತಿಯ ಬಂಧ ಮನೋಸ್ಥಿತಿ ವಿಶ್ಲೇಷಣೆ ಕಾಣುವುದು.

"ಈ ಧರಿತ್ರಿಯಲ್ಲಿ ಏಳು ಅದ್ಭುತಗಳಿವೆಯಂತೆ. ಇದೆಂತಹ ಮಾತು.... ಧರಿತ್ರಿಯಲ್ಲಿ ಮಹಾದ್ಭುತಗಳಿವೆಂಬುದು ಸತ್ಯವಾದರೆ 'ಪುತ್ತೂರು ಎಂಬ ಊರು ಧರಿತ್ರಿಯಲ್ಲಿ ಸೇರಲಿಲ್ಲವೇ? ಆ ಒಂದು ಊರಲ್ಲಿ ಹತ್ತು ಮಹಾದ್ಭುತಗಳಿವೆ. ಅಷ್ಟೇ ? ಅವುಗಳಲ್ಲಿ ಭಾಗೀರಥಿಯೆಂಬ ಪ್ರಾಣಿಯು ಒಂದು"[೩೯] ಎಂಬಲ್ಲಿ ಕಾದಂಬರಿ ನಿರೂಪಣಾ ಶೈಲಿ ಗೋಚರವಾಗುವುದು.

ಕಾಂದಬರಿಯ ಭಾಷೆ, ಶೈಲಿ, ಅಂದಿನ ಸಂಪ್ರದಾಯಕ್ಕೆ ಸೇರಿದ್ದರೂ ಬಾಬುರಾಯರು ಕಥಾವಸ್ತುವಿನ ಆಯ್ಕೆಯಲ್ಲಿ ದಿಟ್ಟತನವನ್ನು ತೋರಿದ್ದು, ವಾಗ್ದೇವಿಯ ವೈಶಿಷ್ಟ್ಯ"[೪೦] ಅಂದಿನ ಸಂಪ್ರದಾಯ ಕಾಲದ ಮಠಮಾನ್ಯರ ದೋಷಗಳನ್ನು ಎತ್ತಿ ತೋರಿಸುವುದು ಒಂದು ಎದೆಗಾರಿಕೆ. 'ವಾಗ್ದೇವಿ' ಕಾದಂಬರಿ ಆಗಿನ ಕಾಲದ ಪ್ರಸಂಗವನ್ನಾಧರಿಸಿ ಕಟ್ಟಿದ ಕಥೆ. ಅಂದಿನ ಸಮಾಜದಲ್ಲಿಯ ಲೋಪದೋಷಗಳನ್ನು ಎತ್ತಿ ತೋರಿಸಿದ ಸಾಹಸಕ್ಕೆ ಕಾದಂಬರಿಕಾರ ಬಳಸಿದ ಭಾಷೆ, ಅದರ ಪರಿಣಾಮ ಮೆಚ್ಚಲೇಬೇಕು.

ಒಂದು ಭಾಷೆಯ ಭಿನ್ನತೆಗೆ ಅನೇಕ ಸಾಂಸ್ಕೃತಿಕ ಕಾರಣಗಳಿರುತ್ತವೆ. ಅವುಗಳಲ್ಲಿ ಮುಖ್ಯವಾಗಿ ನೈಸರ್ಗಿಕ ಸಾಮಾಜಿಕ. ರಾಜಕೀಯ. ಧಾರ್ಮಿಕ. ಆರ್ಥಿಕ ಮುಂತಾದವುಗಳು ಭಾಷೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಜನಾಂಗ, ಜನಾಂಗದ ಭಾಷೆಯ ನಡುವೆ ಮಧ್ಯ ಸಂಪರ್ಕ ಕಡಿಮೆಯಾದಾಗ ಸಂಸ್ಕೃತಿ, ಭಾಷೆಗಳಲ್ಲಿ ವ್ಯತ್ಯಾಸ ನಿರ್ಮಾಣಗೊಳ್ಳುತ್ತವೆ. ಹೀಗೆ ಮುಂದುವರೆದು ಭಾಷಾ ಪ್ರಭೇದಗಳು ಉಂಟಾಗುತ್ತವೆ. ಪ್ರಾದೇಶಿಕ ರೂಪ ತಾಳುತ್ತದೆ. ಆದ್ದರಿಂದ ಜನರ ಭಾಷೆಯ ಮೇಲೆ ಪ್ರಾದೇಶಿಕತೆಯ ಪ್ರಭಾವ ಅನನ್ಯವಾಗಿರುತ್ತದೆ. ಪ್ರದೇಶದ ಭೌಗೋಳಿಕ ಸ್ಥಿತಿಗತಿಗಳು ನೈಸರ್ಗಿಕ ಅನುಕೂಲತೆ ಅನಾನುಕೂಲತೆಗಳು ಜನರ ಭಾಷೆಯನ್ನು ರೂಪಿಸುತ್ತವೆ"[೪೧]

ಭಾಷೆಯಲ್ಲಿ ಸಾಮಾನ್ಯವಾಗಿ ಪ್ರೇರಣೆ, ಪ್ರಭಾವ, ಸ್ವೀಕರಣ ಪರಿಷ್ಕರಣಗಳು ನಡೆಯುತ್ತವೆ. ಹೀಗಾಗಿ ಆಯಾ ಕಾಲ, ಪ್ರದೇಶಗಳ ಅಧ್ಯಯನದಿಂದ ಭಾಷಿಕ ನೆಲೆಗಳ ಅಧ್ಯಯನದಿಂದ ವಿವಿಧ ಪದರುಗಳು ಬಿಚ್ಚಿಕೊಳ್ಳುತ್ತಲೆ ಇರುವವು. 'ಇಂದಿರಾಬಾಯಿ' ಕಾದಂಬರಿಯುದ್ದಕ್ಕೂ 'ಕೊಂಕಣಿ', 'ತುಳು' ಮತ್ತು ಕನ್ನಡ ಇಂಗ್ಲಿಷ್ ಭಾಷಾ ಮಿಶ್ರಣವನ್ನು ಗುಲ್ವಾಡಿಯವರು ಬಳಸಿದ್ದಾರೆ. ವಿಮರ್ಶೆಯ ದೃಷ್ಟಿಯಿಂದ ನೋಡಿದಾಗ 'ವಾಸ್ತವಿಕತೆಗೆ' ತರ್ಕಿಸಿಕೊಂಡು ವಾಸ್ತವವಾದೀ ಪರಂಪರೆ ಆರಂಭಿಸಿದ್ದು ಕಾದಂಬರಿಯಲ್ಲಿ ಕಾಣುವುದು. ಕಾದಂಬರಿಯಲ್ಲಿ ಹಳೆಯ 'ವಾರಸುದಾರಿಕೆ', 'ಶ್ರೇಣಿಕರಣಗಳು' ನಂತರ ಕೊನೆಗೆ 'ಸ್ತ್ರೀಧರ್ಮ ನೀತಿಯೇ' ಮುಖ್ಯವಾದಂತೆ ಕಾಣುವುದು.

'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ 'ಅಮೀಲರೂ', 'ಕಿಲ್ಲೇದಾರರೂ', 'ಶಿರಸ್ತೇದಾರರೂ', 'ಉಪ್ರಲಿಗರೇ' ಎಂಬ ಹದಿನೆಂಟು ಪಣದವರ ವಿವರ ಬರುವುದು."[೪೨] ಇಷ್ಟೆ ಅಲ್ಲದೆ ಸಣ್ಣ ಸಣ್ಣ ಜಾತಿಗಳ ಸಮೀಕರಣ ಕಾಣುತ್ತಿವೆ." ಜೋಗಿ, ಜಂಗಮ, ದಾಸ, ಗೊರವ, ಪಂಡಾರ, ಬುಡಬುಡಕ್ಕೆ, ಕೊರವಂಜಿ, ಮೊದಲಾದ ವೇಷಗಳನ್ನು ಹಾಕಿಕೊಂಡು ಬೇರೆ ಬೇರೆ ಇರುತ್ತಿದ್ದವು. ಕೆಲವರು ಭಾರಿವರ್ತಕರ ವೇಷವನ್ನು ಇನ್ನು ಕೆಲವರು ಬ್ರಾಹ್ಮಣರ ವೇಷವನ್ನು ಹಾಕಿಕೊಂಡು ಇರುತ್ತಿದ್ದರು."[೪೩] ಭಾಷಿಕತೆಯ ಸುರಳಿ ಇಲ್ಲಿ ಬಿಚ್ಚಿಕೊಳ್ಳುವುದು. ಭಾಷೆ ಪರಿವರ್ತನಶೀಲವಾದದ್ದು. ಭೌಗೋಳಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ತರಗಳಲ್ಲಿ ಬದಲಾವಣೆ ಹೊಂದುತ್ತದೆ. ಆದ್ದರಿಂದ ಅವುಗಳ ಪ್ರಮಾಣ ಎಲ್ಲಾ ಕಡೆಗೂ ಒಂದೇ ರೀತಿಯಾಗಿರುವುದಿಲ್ಲ. ಅದು ಪ್ರಾದೇಶಿಕ ವಿಸ್ತಾರ, ಅನ್ಯಭಾಷಾ ಪ್ರಭಾವ ಸಮ್ಮಿಶ್ರತೆ, ಧ್ವನಿ ವ್ಯತ್ಯಾಸ, ರೂಪವ್ಯತ್ಯಾಸ, ಅರ್ಥವ್ಯತ್ಯಾಸ, 'ಇಂದಿರಾಬಾಯಿ', 'ಇಂದಿರಾ', 'ಮಾಡಿದ್ದುಣ್ಣೋ ಮಹಾರಾಯ', 'ಶೃಂಗಾರಚಾತುರ್ಯೋಲ್ಲಾಸಿನಿ' ವಿರಾಗಿಣಿ ಕಾದಂಬರಿಗಳಲ್ಲಿ ಇದೆ ತರ್ಕಗಳು ಕಾಣುವವು.

ಕಾದಂಬರಿಗಳಲ್ಲಿ ವೃತ್ತಾಂತ, ನಾಟಕೀಯ, ತಂತ್ರಗಳು ಒಂದಕ್ಕೊಂದು ಪೋಷಕವಾಗಿರಬೇಕು. ಪಾತ್ರ ಘಟನೆಗಳು ಕಾದಂಬರಿ ಕಾರಣ ಗುರಿ ಸಾಧನೆಗೆ ಸಹಾಯಕವಾಗಬೇಕಾದ ವರ್ಣನೆ ಪಾತ್ರ, ಸನ್ನಿವೇಶ ಶೈಲಿಗಳನ್ನೆಲ್ಲ ಏಕೀಕರಿಸಿಕೊಂಡು ಸಂಕೀರ್ಣ ಸಂಗತಿಗಳ ಸಮಾಗಮವೇ ಆಗಿದೆ. "ಕಾದಂಬರಿ ಜೀವನದ ಪ್ರತಿಬಿಂಬವಲ್ಲ. ಪ್ರತಿಸೃಷ್ಟಿ, ಕಲಾತ್ಮಕ ನಿರೂಪಣೆ ಎನ್ನುವುದು ಒಪ್ಪಿಕೊಳ್ಳುವುದಾದರೆ ತಂತ್ರ ದೃಷ್ಟಿಯಿಂದ ಕಾದಂಬರಿಯ ಅತಿ ಮುಖ್ಯ ಅಂಶ ಯಾವುದೆಂದು ಸ್ಪಷ್ಟವಾಗುವುದು ಕಷ್ಟವಲ್ಲ. ಅದು ಕಾದಂಬರಿಕಾರನ ದೃಷ್ಟಿ ಅವನ ನಿಲುವು."[೪೪] ಎಂಬುದು ಕಾದಂಬರಿಯ ವಿಷಯ ವಸ್ತುವಿನ ಸಂದರ್ಭಕ್ಕೆ ಸರಿ ಹೊಂದುವ ಮಾತು. "ಆಳುವವ ಹಾಗೂ ಅಳಿಸಿಕೊಳ್ಳುವವನ ಸಂಘರ್ಷದ ಸಂದರ್ಭದಲ್ಲಿ

ಕಾದಂಬರಿ ಹುಟ್ಟುತ್ತದೆ”[೪೫] ಎಂಬ ಡಿ.ಆರ್. ನಾಗರಾಜರ ಮಾತು, ಭಾಷೆ, ಶೈಲಿ, ತಂತ್ರಗಳೊಂದಿಗೆ ಸಂಘರ್ಷ ಹುಟ್ಟು ಹಾಕುವುದು.

ಕನ್ನಡದಲ್ಲಿ ಕಾದಂಬರಿಯ ಮೊದಲ ಬೆಳವಣಿಗೆ ಭಾರತದ ದೇಶ ಭಾಷೆಗಳಲ್ಲಿ ಕಾಣಿಸಿಕೊಂಡಿತು. ಕಾದಂಬರಿಯ ರೂಪ ಪ್ರಕಾರದಲ್ಲಿ ಯುರೋಪಿನ ಕಾದಂಬರಿಗಳ ಪ್ರಭಾವ ಕಾಣುವುದು. ಹತ್ತೊಂಭತ್ತನೆ ಶತಮಾನದಲ್ಲಿ ಹೊಸ ಶಿಕ್ಷಣದ ಮೂಲಕವಾಗಿ ಜಗತ್ತನ್ನು ಬೆರಗುಗಣ್ಣುಗಳಿಂದ ಕಾಣುವಂತೆ ಮಾಡಿತು. ಇದರಿಂದ ಹೊಸ ಓದುವ ವರ್ಗ ಕಾಣಲಾರಂಭಿಸಿತು.

ಶೈಲಿಯು ಈ ಕಾಲದಲ್ಲಿ ರೂಪುಗೊಂಡ ರೀತಿಯನ್ನು ಡಾ.ಗುರುಪಾದ ಮರಿಗುದ್ದಿಯವರು “ಹತ್ತೊಂಭತ್ತನೆಯ ಶತಮಾನದಲ್ಲಿ ಮುದ್ದಣ್ಣನ ಕೃತಿಗಳ ಸಾಂಪ್ರದಾಯಿಕ ಗದ್ಯ, ಕೈಫಿಯತ್ತುಗಳ ವಿವರಣಾ ಗದ್ಯ ಮಿಷನರಿಗಳ ಬೈಬಲ್ ವಿವರಣೆ, ಅನುವಾದ, ಪತ್ರಿಕಾ ವಿವರಣೆ ಗದ್ಯಗಳೆಲ್ಲ ಹಿನ್ನೆಲೆಯೊಂದನ್ನು ನಿರ್ಮಿಸಿದ್ದವು. ಕಥನ ಮತ್ತು ಅದರ ವಿವರಗಳನ್ನು ಒಳಗೊಂಡು ಸಂವಹಿಸಬಲ್ಲ ‘ಶೈಲಿ’ ಕನ್ನಡದಲ್ಲಿ ರೂಢಿಗೊಂಡಿತ್ತು”[೪೬] ಎಂದಿದ್ದಾರೆ. ಇದು ಮುಂದುವರೆದು ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ಈ ತೆರನಾದ ಶೈಲಿ, ತಂತ್ರಗಳನ್ನು ಮುಂದುವರೆಸಿಕೊಂಡು ಬಂದಿದೆ.

ವಸ್ತು ನಿರ್ವಹಣೆ ಮತ್ತು ಸಮಕಾಲಿನ ಸಮಸ್ಯೆಗಳ ವಿಷಯದಲ್ಲಿ ತಳೆದ ತಟಸ್ಥ ಧೋರಣೆಯ ಮಾತು ಏನೆ ಇದ್ದರು ೧೯-೨೦ನೇ ಶತಮಾನದ ಹೊಸಗನ್ನಡ ಸಾಹಿತ್ಯ ಸಂದರ್ಭವನ್ನು ನೋಡಿದರೆ ಕುತೂಹಲ, ಪಾತ್ರ, ಪೋಷಣೆ, ಭಾಷಾ ಬಳಕೆಯ ನಿರ್ವಹಣೆಯಲ್ಲಿ ಧಾರಾಳವಾಗಿ ಗುರುತಿಸಬಹುದಾಗಿದೆ. ಉದಯ ಕಾಲದ ಕಾದಂಬರಿಗಳ ಭಾಷೆ, ವಸ್ತುಗಳಂತಹ ಘಟಕಗಳು ಪ್ರಯೋಗಾವಸ್ಥೆಯಲ್ಲಿದ್ದವು. ಕಾದಂಬರಿಗೆ ಕಥೆ ಮುಖ್ಯವಾಗಿ ಪಾತ್ರಗಳ ಮೂಲಕ ಅದನ್ನು ನಿಭಾಯಿಸುವುದು ಸಾಮಾನ್ಯವಾಗಿತ್ತು. ಕಥೆಯೊಂದಿಗೆ ಉದ್ದೇಶಿತ ವಸ್ತುವನ್ನು ನಿರ್ವಹಿಸುವ ತರುವಾಯದ ರೀತಿ ಆಗಿನ ಕಾಲದಲ್ಲಿ ನಿಚ್ಚಳವಾಗಿರಲಿಲ್ಲ ಆದರೂ ಭಾರತೀಯ ಸಾಂಪ್ರದಾಯಿಕ ಬದುಕು ಹೊಸ ವಿಚಾರಣೆಗಳಿಗೆ ತೆರೆದುಕೊಳ್ಳುತ್ತಿದ್ದ ಆ ಸಂಧಿಕಾಲದಲ್ಲಿ ಆ ಪ್ರಭಾವದಿಂದ ಹೊರಗುಳಿಯುವುದು ಲೇಖಕರಿಗೆ ಸಾಧ್ಯವಿರಲಿಲ್ಲ. ಹೀಗಾಗಿ ಆ ಕಾಲದ ಕೆಲವರಿಗಾದರೂ ಪ್ರಗತಿಪರ ವಿಚಾರ ಸಂಗತಿಗಳನ್ನು ಕಥಾನಕಗಳೊಂದಿಗೆ ಹರಿಬಿಡುವುದು ಸಾಧ್ಯವಿದೆ ಎಂದೆನಿಸಿದ್ದು ಬಹುಮುಖ್ಯ ವಿಷಯ.

ಸಾಮಾನ್ಯವಾಗಿ ಒಂದು ನಿರ್ಧಿಷ್ಟ ಅವಧಿಯ ಸಾಹಿತ್ಯಿಕ ಕೃತಿಗಳ ಭಾಷೆ ಇಲ್ಲವೆ ಶೈಲಿಗಳನ್ನು ಗಮನಿಸುವುದು, ಅದರ ಬಗ್ಗೆ ಬರೆಯುವುದು ಎಂದರೆ ಔಪಚಾರಿಕವೆಂದು ಎನಿಸುವುದು. ಈ ಕಾದಂಬರಿಗಳ ತಾರ್ಕಿಕ ಆಲೋಚನೆಯೆಂದರೆ, ವಿಮರ್ಶೆಯೆಂದರೆ ಅಲ್ಲಿ ಹಲವಾರು ಪ್ರಯೋಗಗಳು ಪ್ರಯೋಗಾತ್ಮಕತೆ ನಡೆಯುತ್ತಲೆ ಇರುವವು. ಅವು ವ್ಯಕ್ತಿಯಿಂದ ವ್ಯಕ್ತಿಗೆ, ವಾದಗಳಿಂದ ವಾದಕ್ಕೆ ವಿಭಿನ್ನತೆ

ಕಾಣುವವು. ಇಲ್ಲಿ ಕಾದಂಬರಿಯ ಭಾಷೆ ಇಲ್ಲವೆ ಶೈಲಿಯ ಆಯಾಮ, ಸಮಸ್ಯೆಗಳನ್ನು ಕುರಿತು ಚಿಂತನೆಗಳು ಕಾಣುವವು. ಈ ಕಾಲದ ಕನ್ನಡದಲ್ಲಿ ಬಂದಂತಹ ಇಂದಿರಾಬಾಯಿ, ಇಂದಿರಾ, ವಾಗ್ದೇವಿ, ಮಾಡಿದ್ದುಣ್ಣೋ ಮಹಾರಾಯ, ನಭಾ, ಸುಶೀಲ, ವಿರಾಗಿಣಿ ಮುಂತಾದ ಕಾದಂಬರಿಗಳ ಕುರಿತಾದ ಶೈಲಿ ತಂತ್ರಗಳನ್ನು ಕುರಿತು ವ್ಯಾಖ್ಯಾನಿಸುವಾಗ ಈ ಕೃತಿಗಳ ಲಕ್ಷಣ, ಸಮನ್ವಯಗಳನ್ನು ನಿರ್ಣಯಿಸಲಾರದಷ್ಟು ಗೊಂದಲಗಳು ಆರಂಭದಲ್ಲಿ ಕಾಣುವವು. ಆರಂಭದಲ್ಲಿ ಕಾದಂಬರಿ ಎಂಬ ಪ್ರಕಾರವೇ ಇಂತಹ ಪ್ರಯೋಗಾತ್ಮಕ ಆಯ್ಕೆಯಿಂದ ಬೆಳೆದು ಬಂದಿದ್ದು, ಇಲ್ಲಿ ಕೃತಿಗಳ ಮಹತ್ವ ಇರುವುದು ನಿಜ ಸಂಗತಿ.

ಪ್ರಥಮ ಹಂತದ ಸ್ವತಂತ್ರ ಕೃತಿಗಳ ಭಾಷೆ, ಶೈಲಿ ಎಂಬ ಎರಡು ಪರಸ್ಪರ ಸಂಬಂಧ ಕಲ್ಪಿಸುವಂತಿಲ್ಲ. ಭಾಷೆ ಶೈಲಿ ಒಂದಕ್ಕೊಂದು ಪ್ರತ್ಯೇಕತೆ ಕಾಣಲಾರದು. ಭಾಷೆ ಕುರಿತು ಚರ್ಚಿಸುವ ಸಮಯದಲ್ಲಿ ಶೈಲಿ ಮುನ್ನೆಲೆಗೆ ಬರುವುದು. ಶೈಲಿಯನ್ನು ಕುರಿತು ಗಮನಿಸುವಾಗ ಭಾಷೆಯು ಹಿಂಬಾಲಿಸಿಕೊಂಡು ಬರುವುದು. ಹೀಗೆ ಗಮನಿಸಲಾಗಿ ಶೈಲಿ ಎಂಬುದು ಸಾಮರ್ಥ್ಯ ಗುರುತಿಸುವಂತಿದ್ದರೆ ಅದನ್ನು ಪ್ರಕಟಿಸಿದ ರೂಪವೇ ಭಾಷೆಯಾಗುವುದು. ಕಥನ ರೂಪವೇ ಗದ್ಯಕ್ಕೆ ಹೇಳಿ ಮಾಡಿಸಿದ ಪ್ರಮೇಯ ಮತ್ತು ಹಳೆಯದು ಕೂಡಾ ಹೌದು. ಈ ರೀತಿಯಾದ ಸಾಹಿತ್ಯ ಕೃತಿಗಳಲ್ಲಿ ಗದ್ಯದ ಭಾಷೆ ವಿವರಣೆಗೆ, ಸಂಭಾಷಣಾ ರೀತಿಗೆ ಹೊಂದುವಂತಹದ್ದಾಗಿದೆ. ಇವೆಲ್ಲಕ್ಕಿಂತ ಹೆಚ್ಚಿನ ನಿಯೋಗವನ್ನು ಭಾಷೆಯು ಅಪೇಕ್ಷೆಯನ್ನು ಗಮನಿಸುವುದಿಲ್ಲ. ಈ ರೀತಿಯಾದ ಬರವಣಿಗೆ ಕನ್ನಡದ ಚಂಪೂವಿನ ಗದ್ಯ ಪದ್ಯಗಳೆರಡರ ಹೊಣೆಯನ್ನು ಹೊರುವ ಖಚಿತ ಸಂದರ್ಭ ಈಗ ಹೊಸದೆಂದು ಹೇಳುವ ಸಂದರ್ಭವು ಕಾಣುವುದು. ದೇಶಿಯ ಸಾಹಿತ್ಯ ಪರಂಪರೆಯಲ್ಲಿ ಕಾಣುವ ಮುಖ್ಯ ಲಕ್ಷಣವೆಂದರೆ ಸಂಸ್ಕೃತ ಮಾರ್ಗ ಪರಂಪರೆಯಲ್ಲಿ ವಿಭಿನ್ನ ರೀತಿಯ ನಿರೂಪಣ ಪ್ರಧಾನತೆ ಈ ಸಂದರ್ಭದ ಸಾಹಿತ್ಯದಲ್ಲಿ ಕಾಣುವುದು. ವಿಸ್ತಾರತೆ, ವೈವಿಧ್ಯತೆಯು ಗದ್ಯದಲ್ಲಿ ಹೊಸ ಪ್ರಯೋಗದಿಂದ ಪ್ರೇರಣೆಯನ್ನು ಹೊತ್ತು ಭಾಷೆಯಲ್ಲಿ ಆಸಕ್ತದಾಯಕವಾಗಿ ಕಾಣುವುದು.

ಕಾದಂಬರಿಯಲ್ಲಿರುವ ಭಾಷೆಯನ್ನು ಕುರಿತಾಗ ರೂಪ ಹಾಗೂ ಅನ್ವಯಿಕ ನೆಲೆಯಲ್ಲಿ ನಡೆಯುವ ಸಂಗತಿಗಳು ಭಿನ್ನವಲ್ಲ. ಇವು ಒಂದಕ್ಕೊಂದು ಅಂತರ ಸಂಬಂಧವನ್ನು ಪಡೆದುಕೊಂಡಿವೆ. ರೂಪ ಗಮನಿಸುವುದಾದರೆ ಕೆಲವು ಕುತೂಹಲಕರ ಸಂಗತಿಗಳು ಗಮನಕ್ಕೆ ತರುವ ಸಂಗತಿ ಮುಖ್ಯವಾಗುವದು. ಮೈಸೂರು ಸಂಸ್ಥಾನದಲ್ಲಿ ಹದಿನೆಂಟು, ಹತ್ತೊಂಭತ್ತನೆಯ ಶತಮಾನದ ವೇಳೆಗೆ ಕನ್ನಡ ಗದ್ಯ ಪಡೆದುಕೊಂಡ ಹೊಸರೂಪ ನಿರಾಕರಿಸಿ, ಅದನ್ನು ಪುರಸ್ಕರಿಸುವ ಪ್ರಯತ್ನಗಳು ಈ ಸಂದರ್ಭದಲ್ಲಿ ಕಂಡುಬರುವವು. ಇಂತಹ ಪರಿಣಾಮದಿಂದ ಈ ಸಮಯದ ಗದ್ಯದ ಮಾದರಿಗಳು ಬೇರೆ ಬೇರೆಯಾಗಿ

ಕಾಣಲಾರಂಭಿಸಿದವು ಎನಿಸಲು ಪ್ರಾರಂಭಿಸಿದವು. ಈ ಸಮಯದಲ್ಲಿ ಶ್ರವಣದ ಪರಿಣಾಮ ಗಮನಾರ್ಹವಾದದು. ಗದ್ಯದ ನಿರೂಪಣೆಗೆ, ವಿವರಣಾತ್ಮಕತೆಗೆ ಮೀಸಲಾದಂತೆ ಕಾಣುವುದು.

ಭಾಷಿಕ ಪ್ರವೇಶ ಪಡೆಯುವ ಉಪ ಪ್ರಭೇದಗಳು ಗದ್ಯದ ಸಾಧ್ಯತೆಗಳು ಕಡಿಮೆಯಾಗಿರುವಾಗಲೆ ಒಂದಿಷ್ಟು ಕೃತಿ ರಚಿಸಲ್ಪಟ್ಟಿವೆ. ಉತ್ತರ ಕರ್ನಾಟಕ ತುರುಮುರಿಯಂಥವರು 'ಕಾದಂಬರಿ' ಕನ್ನಡಕ್ಕೆ ತರ್ಜುಮೆ ಮಾಡಲು ಬಳಸಿದ ಭಾಷಿಕ ರೂಪಕ್ಕೆ ಸಾಮೀಪ್ಯತೆಯನ್ನು ತರಲು ಪ್ರಯತ್ನಿಸಿದ್ದು ಕಂಡುಬರುವುದು. ಇಂತಹ ಭಾಷಿಕ ಮಾರ್ಪಾಡುಗಳನ್ನು ಶ್ರೀನಿವಾಸ ಹಾವನೂರರು 'ಹೊಸಗನ್ನಡ ಅರುಣೋದಯ'ದಲ್ಲಿ ಸಾಮಾನ್ಯ ವ್ಯತ್ಯಾಸಗಳನ್ನು, ಕಾರಣಗಳನ್ನು ನೀಡದಿದ್ದರೂ ಸಾಮಾಜಿಕ ಸಾಂಸ್ಕೃತಿಕ ಭಾಷಾ ವ್ಯತ್ಯಾಸಗಳು ಪ್ರೇರಕವಾದ ಅಂಶವನ್ನು ಕೂಲಂಕಷವಾಗಿ ಅನುಲಕ್ಷಿಸಿಕೊಳ್ಳಬಹುದಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಸಾಮಾಜಿಕ ವಿಘಟನೆಗಳು ಜರುಗುವ ಅನಿವಾರ್ಯತೆಗೆ ಸಿಲುಕಿದಾಗ ಆಯಾ ಪ್ರದೇಶಗಳ ವ್ಯಾಪ್ತಿಯಲ್ಲಿ ಮೊದಲ ಹಂತದ ಕಾದಂಬರಿಗಳ ಭಾಷಿಕ ರೂಪವನ್ನು ಪ್ರಭಾವಿಸಿರುವವು. ಇಂತಹ ಅಖಚಿತ, ಅಂಶಿಕ ನಿರ್ಣಯಗಳನ್ನು ಶೈಲಿಗೆ ಸಂಬಂಧಿಸಿದಂತೆ ಹೊಂದಿಸಿಕೊಂಡಂತೆ ಕಾಣುವುದು. ಕಾರಣ ಭಾಷೆಯ ಅನ್ವಯಕ್ಕೆ ಸಂಬಂಧಿಸಿದಂತೆ ಸಹಮತ ವ್ಯಕ್ತಪಡಿಸಬಹುದು. ಕಾದಂಬರಿಯಿಂದ ಕಾದಂಬರಿಗೆ ತಳೆದಿರುವ ವ್ಯತ್ಯಾಸ, ಪ್ರಾದೇಶಿಕ ಭಾಷಾ ವ್ಯತ್ಯಾಸ ಕಾಣುವುದು. ಇವು ಸಾಮಾಜಿಕ, ಪಾರಂಪರಿಕ ಪ್ರವೃತ್ತವಾದಷ್ಟು ಸಾಂಸ್ಕೃತಿಕ ಕ್ಷೇತ್ರಕ್ಕೆ ವ್ಯತ್ಯಾಸ ಕಾಣುವುದಿಲ್ಲ. ಆದರೆ ದೇಶಿಯ ಸಾಹಿತ್ಯ ಪರಂಪರೆ ವೈಲಕ್ಷಣಗಳೆ ಕನ್ನಡದ ಮೊದಲ ಸ್ವತಂತ್ರ ಕಾದಂಬರಿಗಳಲ್ಲಿ ಗದ್ಯ ಪ್ರವಹಿಸಿಕೊಂಡು ಬಂದ ಸಂಗತಿಯನ್ನು ಗಮನಿಸಲೇಬೇಕು. ಈ ಕಾಲಘಟ್ಟದಲ್ಲಿ 'ಕಾದಂಬರಿ' ಎಂಬ ಸಾಹಿತ್ಯ ಪ್ರಕಾರ ಹೆಚ್ಚು ಸಾಮಾಜಿಕ ಆಸಕ್ತಿಗಳನ್ನು ಪ್ರಕಟಪಡಿಸತೊಡಗಿತು. ಇದಕ್ಕೆ ಪೂರಕವೆಂಬಂತೆ 'ಸೌಗಂಧಿಕಾ ಪರಿಣಯ', 'ಕಲಾವತಿ ಪರಿಣಯ', 'ಮುದ್ರಾಮಂಜೂಷ' ಕೃತಿಗಳನ್ನು ಹಿಂದಿನ ಸ್ವರೂಪ ಕುರಿತು ಗಮನಿಸಿದಾಗ ಅರಿತುಕೊಂಡಿದ್ದೇವೆ.

'ಕಥನಗದ್ಯ', 'ಕಲ್ಪಕತೆ'ಗಳು ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಕಾದಂಬರಿಯ ಶೈಲಿ, ತಂತ್ರವನ್ನು ಪ್ರಭಾವಿಸತೊಡಗಿದ್ದನ್ನು ಗಮನಿಸಬಹುದಾಗಿದೆ. ಸಾಮಾಜಿಕ ಸಂಗತಿಯನ್ನು ಆಸಕ್ತಿಯನ್ನು ಹೊಂದಿರುವ ಕೃತಿಗಳ ಕಥಾನಿರೂಪಣೆ ಹಾಗೂ ವ್ಯಾಖ್ಯಾನಗಳೆಂಬ ಎರಡು ವಲಯಗಳಲ್ಲೂ ವಿಭಿನ್ನತೆಯನ್ನು ಬಿಂಬಿಸುವವು. ಸಂಗತಿ ಪ್ರಾಧಾನ್ಯತೆ, ವಿವರಣಾ ಪ್ರಾಧಾನ್ಯ ನೆಲೆಯನ್ನು ಗಮನಿಸುವಾಗ ಶೈಲಿಗೆ ಸಂಬಂಧಿಸಿದಂತೆ ಹಲವಾರು ನಿದರ್ಶನಗಳನ್ನು ನೀಡಬಹುದು. ಗಳಗನಾಥರಲ್ಲಿ 'ಪ್ರಾತಿನಿಧಿಕ ನೆಲೆ'ಯನ್ನು ಗುರುತಿಸಿದರೆ ಗುಲ್ವಾಡಿಯವರಲ್ಲಿ 'ಸಾಮಾಜಿಕ ಸಂಕೀರ್ಣತೆ'ಯನ್ನು ಗುರುತಿಸಬಹುದು. ಕೆರೂರು ವಾಸುದೇವಾಚಾರ್ಯರಲ್ಲಿ 'ನಿರೂಪಣಾ ಮತ್ತು ವರ್ಣನಾ ರೀತಿಯ' ಶೈಲಿಯನ್ನು ಗುರುತಿಸಬಹುದು.

ನಂಜನಗೂಡು ತಿರುಮಲಾಂಬರವರ ಕೃತಿಗಳಲ್ಲಿ ಸರಳ ತಂತ್ರರೂಪತೆ ಕಾಣುವುದು. ಹಳೆ ಮೈಸೂರು ಭಾಗದ ಗದ್ಯದಲ್ಲಿ ವರ್ಣನೆಗಳ ಮಟ್ಟ ಗಮನಿಸಲಾಗಿ ಅನುಸರಣಯುಗದ ಗುಂಗು ಹೆಚ್ಚಾಗಿ ಕಾಣುವುದು. ಎಂ.ಎಸ್. ಪುಟ್ಟಣ್ಣನವರು ನೀಡುವ ವರ್ಣನೆ ಸಾಂಪ್ರದಾಯಿಕ ವಿನ್ಯಾಸ ಶೈಲಿಯ ಕಡೆ ಗಮನ ಹರಿಸಿದೆ. ಗದ್ಯ ಕಥನವು ಗುಲ್ವಾಡಿ ವೆಂಕಟರಾಯರ ಕೃತಿಯಲ್ಲಿ, ಕರಾವಳಿ ಕನ್ನಡದಲ್ಲಿ ಮೂರ್ತಗೊಂಡಿವೆ. ೧೯ನೇ ಶತಮಾನದ ಚಲನಶೀಲತೆಯನ್ನು ಕೊನೆಯ ತಿರುವಿನಲ್ಲಿ ನಿಕಟವಾದ ಸಂಬಂಧ ಶೈಲಿಯೊಂದಿಗೆ ಸಮೀಕರಿಸಬಹುದು.

ಹತ್ತೊಂಭತ್ತನೇ ಶತಮಾನದಲ್ಲಿ ಆಡಳಿತದ ಹಿಡಿತ ನಾಮಮಾತ್ರವಾಗಿತ್ತು, ಜನಜೀವನದ ಸಂದರ್ಭದಲ್ಲಿ ಮಿಷನರಿಗಳ ಪ್ರಭಾವ ಇತ್ತು. ಶೈಕ್ಷಣ ಪ್ರಸಾರದಿಂದ ರೂಪಗೊಂಡ ಸಾಮಾಜಿಕ ಜಾಗೃತಿಗಳ ಸಮಸ್ಯೆ ಮತ್ತೊಂದೆಡೆ ಕಾಣುತ್ತಿತ್ತು. ಇದು ದಕ್ಷಿಣ ಕನ್ನಡದಲ್ಲಿ ಹೆಚ್ಚಾಗಿತ್ತು. ಇದು ಗುಲ್ವಾಡಿಯವರ ಇಂದಿರಾಬಾಯಿ ಕಾದಂಬರಿಯಲ್ಲಿ ಕಾಣುವುದು. ಇದಕ್ಕೆ ಪ್ರತಿಯಾಗಿ ಕೆರೂರು ವಾಸುದೇವಾಚಾರ್ಯರು ಇಂದಿರಾ ಕಾದಂಬರಿಯಲ್ಲಿ ಆಧುನಿಕತೆ ಮತ್ತು ಹಿಂದು ಪುನರುತ್ಥಾನದ ತಿಕ್ಕಾಟ ಹಾಗೂ ಮರಾಠಿ ಪ್ರಭಾವದಿಂದ ಉತ್ತರ ಕರ್ನಾಟಕದವರ ಸಮಸ್ಯೆಗಳು ಮುಂಚೂಣಿಗೆ ಬಂದವು. ಈ ರೀತಿಯ ವಿಭಿನ್ನ ಸಮಸ್ಯೆಗಳು ಆಯಾ ಪ್ರದೇಶದ ಕೃತಿ ರಚನೆಗೆ ವಸ್ತುವಿನ ತಳಹದಿಯನ್ನು ಒದಗಿಸುವುದರೊಂದಿಗೆ ಹೊಸ ಶೈಲಿಗಳು ಮುನ್ನೆಲೆಗೆ ಬಂದವು. ದ್ವಿಮುಖ ನೀತಿಯ ನಡೆಯಿಂದಾಗಿಯೇ ಕಾದಂಬರಿಗಳ ಶೈಲಿಯ ಸ್ವರೂಪ ನಿಗದಿಯಾಗುವವು. ಅಲ್ಲಿ ಒಳನೋಟಗಳ ಅನ್ವೇಷಣೆಯನ್ನು ಕಾಣುತ್ತವೆ. ಈ ದಿಶೆಯಲ್ಲಿ ಮೊದಲ ಕಾದಂಬರಿಗಳನ್ನು ಅವು ಪ್ರಾತಿನಿಧಿಕ ವಾದವುಗಳನ್ನು, ಅವುಗಳ ಶೈಲಿಯ ಸ್ವರೂಪವನ್ನು ಈ ಮೇಲೆ ಹೇಳಿದಂತೆ ರೂಪಿಸಿಕೊಳ್ಳಲು ಸೂಕ್ತವಾದಿತೆಂದು ಅವಲೋಕಿಸಬಹುದು.

'ಇಂದಿರಾಬಾಯಿ' ಕಾದಂಬರಿಯು ಕಾಲ ದೇಶಗಳ ವಿಶಿಷ್ಟ ಹಾಗೂ ನಿರ್ಧಿಷ್ಟತೆಗಳನ್ನು ವಿಷಯ ವಸ್ತುವಿನಲ್ಲಿ ಮಾತ್ರವಲ್ಲದೆ ಭಾಷೆಯ ಹಂತದಲ್ಲಿ ಸಾಧಿಸುವುದೇ ಈ ಶೈಲಿಯ ವಿಶಿಷ್ಟತೆ. ನಿರೂಪಣೆಯ ಭಾಷೆಗೂ ಪಾತ್ರಗಳಿಗೂ ಅಂತರ ಕಾಣುವುದು. ಇಲ್ಲಿ ಕೆಲವು ಪಾತ್ರ ಕೊಂಕಣಿಯಲ್ಲಿ ಮಾತನಾಡುವುದು ಗಮನಿಸಬಹುದು. ಸಂಭಾಷಣೆಯಲ್ಲಿ ತೊಡಗಿದ ಪಾತ್ರಗಳಲ್ಲಿ ಒಂದು ಕೊಂಕಣಿ ಮಾತನಾಡಿದರೆ, ಎದುರು ಪಾತ್ರ ಮಾತೃ ಭಾಷೆಯಲ್ಲಿ ಸಂವಾದಿಸುವುದು ಇಲ್ಲಿಯ ವಿಶೇಷ. ಭಾಷಾ ಪ್ರಭೇದಗಳ ಮಿಶ್ರಣವನ್ನು ಇಂದಿರಾಬಾಯಿ ಅತ್ಯಂತ ಸೃಜನಶೀಲವಾಗಿ ಬಳಸಿಕೊಂಡಿದೆ. ಪಾತ್ರಗಳ ಸಂಭಾಷಣೆಯ ಹಂತದಲ್ಲಿ, ನಂತರ ವರ್ಣನೆಯ ಹಂತದಲ್ಲೂ ಎರಡು ರೀತಿಯಲ್ಲಿ ಪಾತ್ರಗಳ ಬಗ್ಗೆ ವರ್ಣನೆಯ ಬಗ್ಗೆ ತಮ್ಮ ದೃಷ್ಟಿಕೋನವನ್ನು ತೋರಿಸಲು ಬಳಸಿಕೊಂಡಿದ್ದಾರೆ. ಅದನ್ನು, ಇದನ್ನು, ಹೇಳಲು ಅಲ್ಲ ಎಂಬ

ಸಂಗತಿ ಈ ಕಾಂದಬರಿಯಲ್ಲಿ ಕಾಣುವುದು. ನಿರೂಪಣೆಯಲ್ಲಿ ಉದ್ದೇಶಗಳನ್ನು, ಭಾಷೆಯ ಬಳಕೆಯ ಸ್ವರೂಪವನ್ನು ನಿಯಂತ್ರಿಸಿವೆಯಾದರೂ ಶೈಲಿ ಲಕ್ಷಣ ಗುರುತಿಸಲು ಕೂಡಾ ಈ ನೆಲೆಗಳನ್ನು ಬಳಸಬಹುದಾಗಿದೆ. ಗುಲ್ವಾಡಿ ವೆಂಕಟರಾಯ 'ಇಂಗ್ಲಿಷ್ ಕನ್ನಡ ಕೊಂಕಣಿ'ಯನ್ನು ಬೆರೆಸುವ ಕ್ರಮವನ್ನು ಗಮನಿಸಿದರೆ ಮೇಲಿನ ಸಂಗತಿಗಳು ಸತ್ಯವಾಗಿವೆ. ವರ್ಣನೆಗೆ ಬಂದಾಗ ವರ್ಣಿಸುವ ಸಂದರ್ಭದಲ್ಲಿ ಈ ಸಂಗತಿ ಕಂಡುಬರುವುದು. ಆಗ ಆ ಪಾತ್ರಗಳು ಸಾಮಾಜಿಕ ಬಂಧದ ಸ್ವರೂಪವನ್ನು ಹೊರಹಾಕಲು ಪ್ರಯತ್ನಿಸಿದಂತೆ ಕಾಣುವುದು. ವಿವರಣೆ ಮಾತ್ರ ಹೇಳಲು ಭಾಷೆಯನ್ನು ಬಳಸದೆ ತಮ್ಮ ಧೋರಣೆ ದೃಷ್ಟಿಕೋನವನ್ನು ಪ್ರಕಟಿಸಲು ಕ್ರಿಯಾತ್ಮಕತೆಯಿಂದ ಬಳಸಿದ್ದಾರೆ ಎಂಬುದನ್ನು ಗಮನಿಸಬಹುದು.

ಭಾಷಾ ಮಿಶ್ರಣದ ವರ್ಣನೆ, ಸಂಭಾಷಣೆಯಲ್ಲಿ ವಿಡಂಬನಾತ್ಮಕವಾಗಿ ಕಾಣುವುದು. ಕಾದಂಬರಿಯು ಸ್ಥಳೀಯ ದೃಷ್ಟಿಕೋನದ ಮೂಲಕ ವಸ್ತು, ಪಾತ್ರ, ಶೈಲಿಯನ್ನು ವಿವರಿಸತೊಡಗಿವೆ. ಅನ್ವಯಿಕ ಭಾಷಿಕ ರೂಪಗಳನ್ನು ಈ ನೆಲೆಯಲ್ಲಿ ಬಳಸಿಕೊಂಡು ಪ್ರಥಮ ಹಂತದ ಸ್ವತಂತ್ರ ಕಾದಂಬರಿಗಳ ಬರಹ ರೂಪಿಸಲಾಗಿದೆ.

'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಪಾತ್ರಗಳಲ್ಲಿ ಭಾಷಿಕ ಸಂಭಾಷಣೆಯ ಹಂತಗಳಲ್ಲಿ ವಿಶಿಷ್ಟ ರೂಪಗಳನ್ನು ಬಳಸಿ ತನ್ಮೂಲಕ ಆಯಾ ಪಾತ್ರಗಳ ಭಾವನೆಯನ್ನು ಬೆಸೆಯುವ ಪ್ರಯತ್ನ ಮಾಡಲಾಗಿದೆ. ಈ ರೀತಿಯಾದಂತಹ ಘಟನೆಗಳನ್ನು ಸಾದರಪಡಿಸಲು, ಪ್ರಸ್ತುತಪಡಿಸಲು ಪ್ರಯತ್ನಿಸಲಾಗಿದೆ. ಎಂ.ಎಸ್. ಪುಟ್ಟಣ್ಣನವರು ನಿರೂಪಣೆಗಾಗಿ ಬಳಸುವ ಭಾಷೆಗೆ ಭಾವಕೋಶವಿಲ್ಲ ವೆಂಬಷ್ಟು ಕಡಿಮೆ. ಈ ರೀತಿಯ ಶೈಲಿ, ವಿನ್ಯಾಸ, ಅತ್ಯಂತ ಕುತೂಹಲಕಾರಿಯಾಗಿದೆ. ಶೈಲಿಯ ಇಕ್ಕಟ್ಟಿನಿಂದಲೆ ಹೇಳಿದ ಸಾಂಸ್ಕೃತಿಕ ಮತ್ತು ಸಾಮಾಜಿಕ ವೈರುಧ್ಯಗಳನ್ನು ಪ್ರಕಟಿಸಲು ಅನುಕೂಲಕರ. ಪುಟ್ಟಣ್ಣನವರಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಭಾಷೆಯನ್ನು ಬಳಸುವ ಎಚ್ಚರವಿದ್ದರೂ ಅದರ ಪ್ರಮಾಣ ಗುಲ್ವಾಡಿ ವೆಂಕಟರಾಯರಲ್ಲಿ ಸ್ವಲ್ಪ ಅಧಿಕವೆ ಆಗಿದೆ. ಈ ಲಕ್ಷಣವೆ ಮುಂದುವರೆದುಕೊಂಡು ಅತ್ಯಂತ ಪ್ರಬಲ ಶೈಲಿಯ ಬಹುತ್ವವನ್ನು ಪ್ರಕಟಪಡಿಸಿದ್ದಾರೆ. ನಿರೂಪಣೆಯ ಲಕ್ಷಣವನ್ನು ಬಳಸಿರುವುದು ಕಾಣುವುದು. ಸಾಮಾಜಿಕ ತುಮುಲುಗಳನ್ನು ಚಿತ್ರಿಸಲು ಪುಟ್ಟಣ್ಣನವರು ನೇರ ಮತ್ತು ಸರಳವಾದ ವಿಧಾನವನ್ನು ಬಳಸಿದ್ದು ಕಾಣುವುದು. ಈ ಮೂಲಕ ಸಾಮಾಜಿಕ ಸ್ತರವಿನ್ಯಾಸ ಹಾಗೂ ಘಟನಾವಳಿಗಳ ಮುಖಾಮುಖಿಯಿಂದ ಕಾದಂಬರಿಗೆ ಒಂದು ಬಲವಾದ ಆಯಾಮ ದೊರೆಯುವುದು. ಈ ಅರ್ಥದಲ್ಲಿ ಪುಟ್ಟಣ್ಣಾವರ ಕಾಂದಬರಿಯ ಶೈಲಿ ಸಾಂಪ್ರದಾಯಿಕ ಗದ್ಯಕಥನ ಚೌಕಟ್ಟನ್ನು ಮಿನಿ ಆಧುನಿಕ ಕಾದಂಬರಿಗಳ ಶೈಲಿಯ ಬೆಳವಣಿಗೆಯಲ್ಲಿ ಕಾಣುವುದು.

ಗುಲ್ವಾಡಿ ವೆಂಕಟರಾಯರು ಎಂ.ಎಸ್. ಪುಟ್ಟಣ್ಣವರ ಹಿನ್ನೆಲೆಯಲ್ಲಿ ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಯ ಶೈಲಿಯನ್ನು ಗಮನಿಸುವುದು ವೈಶಿಷ್ಟ್ಯತೆಯಿಂದ ಕೂಡಿದೆ. ಇಂದಿರಾ ಕಾದಂಬರಿಯ ವೈಚಾರಿಕ ಸಂದಿಗ್ಧತೆ ಅದರ ಶೈಲಿಯ ಸಂದಿಗ್ಧತೆಗೂ ಕಾರಣವಾಗಿದೆ. ಸಾಂಪ್ರದಾಯಿಕತೆಯ ವರ್ಣನೆಯು ಒಂದೆಡೆಯಾದರೆ ಸಮಕಾಲೀನ ಘಟನೆ, ಸನ್ನಿವೇಶಗಳನ್ನು ಚಿತ್ರಿಸುವುದು ಇನ್ನೊಂದೆಡೆ. ಸಮಕಾಲೀನ ಚಿತ್ರಣಗಳ ವಿಶ್ಲೇಷಣೆಯಲ್ಲಿ ದ್ವಂದ್ವಕತೆಯು ಕಾಣುವುದು. ಗುಲ್ವಾಡಿಯವರಂತೆ ಹೊರನಿಂತು ಘಟನೆಗಳನ್ನು ವರ್ಣಿಸುತ್ತಾ ಆ ಮೂಲಕವಾಗಿ ತಮ್ಮತನದ ನಿಲುವನ್ನು ವ್ಯಕ್ತಪಡಿಸುವ ಸಾಮರ್ಥ್ಯ ಈ ಕಾದಂಬರಿಯ ಶೈಲಿಯಲ್ಲ. ಉತ್ತರ ಕರ್ನಾಟಕವನ್ನು ಪ್ರತಿನಿಧಿಸುವ ಕೆರೂರ ವಾಸುದೇವಾಚಾರ್ಯರರಲ್ಲಿ ಪ್ರಾದೇಶಿಕತೆಯ ಸತ್ವ ಕಾಣುವುದು. ಗುಲ್ವಾಡಿಯವರು ಪ್ರತಿನಿಧಿಸುವ ಶೈಲಿಯಲ್ಲಿ ಸಾಂಸ್ಕೃತಿಕ, ಸಾಮಾಜಿಕ ಸಂಗತಿಗಳನ್ನು ಗಮನಿಸಬಹುದಾಗಿದೆ. ತುರುಮುರಿಯವರ ಬಾಣಕಾದಂಬರಿಯ ಶೈಲಿಯನ್ನು ಕೆರೂರ ವಾಸುದೇವಾಚಾರ್ಯರರನ್ನು ಪ್ರಭಾವಿಸಿದೆ. ಅಲ್ಲಿ ಸಿಗುವ ಶೈಲಿಯ ಸಾಮ್ಯತೆ, ವಿಭಿನ್ನತೆಗಳು, ಅವರ ಕೃತಿಯಲ್ಲಿ ಕಂಡುಬರುವುದು. ತಿದ್ದಿದ ಆವೃತ್ತಿ ರೀತಿ ಒಂದು ಶೈಲಿಯಾಗುವುದು. ಈ ತಿದ್ದುವ ಮಾತು 'ಇಂದಿರಾ' ಕಾದಂಬರಿಗೂ ಅನ್ವಯವಾಗುವುದು. ಒಂದು ಸಮಯಕ್ಕೆ ಮೈಸೂರಿನಲ್ಲಿ ಪಠ್ಯಪುಸ್ತಕವಾಗಿ ಮಾಡಬೇಕಾದಾಗ ಉತ್ತರ ಕರ್ನಾಟಕ ಭಾಷೆ ಮೈಸೂರಿನವರಿಗೆ ತಿಳಿಯದಿರುವದರಿಂದ ಮೈಸೂರಿನವರಿಗೆ ತಿಳಿಯುವ ಹಾಗೆ ತಿಳಿಯುವ ಭಾಷೆ ಪರಿವರ್ತಿಸಬೇಕೆನ್ನುವ ಅರ್ಥದ ಮಾತು ವಿದ್ವಾಂಸರಾದ ಬಿ.ಎಂ. ಶ್ರೀಯವರು ಬರೆದಿದ್ದರು ಎನ್ನಬಹುದಾದ ಪತ್ರ ಗಮನಿಸಬಹುದು. ಇದನ್ನು 'ಇಂದಿರಾ' ಮುನ್ನುಡಿಯಲ್ಲೂ ಗಮನಿಸಬಹುದು.

ಡಿ.ಆರ್. ನಾಗರಾಜರು ತುರುಮರಿಯವರ ಹಾಗೂ ಕೆರೂರು ವಾಸುದೇವಾಚಾರ್ಯರ ಎರಡರ ಮೂಲ ಕೃತಿ ಗಮನಿಸಿ ಶೈಲಿಯ ಗಟ್ಟಿತನವನ್ನು ಹೀಗೆ ಗುರುತಿಸಿದ್ದಾರೆ. "ಆ ಎರಡು ಆವೃತ್ತಿಯನ್ನು ನಾನು ನೋಡಿದ್ದೇನೆ. ವಿದ್ಯಾವರ್ಧಕ ಸಂಘದವರು ಪ್ರಕಟಿಸುವಾಗ ಕಾಲದಿಂದ ಕಾಲಕ್ಕೆ ಭಾಷಾ ಮರ್ಯಾದೆಯನ್ನು ಅನುಸರಿಸಿ ಬದಲಾವಣೆ ಮಾಡುತ್ತಾ ಬಂದಿದ್ದರೂ 'ಮೂಲದ ಸೊಗಸನ್ನು ಕೆಡದ ಹಾಗೆ' ಅಂತ ಸೇರಿಸಿಕೊಂಡಿದ್ದಾರೆ. ಆದ್ದರಿಂದ ಅವರು ಎಷ್ಟೇ ತಿರುಚಿದ್ದರೂ ಮೂಲ ಲೇಖಕರ ಭಾಷೆಯ ಸರಳತೆ ಮತ್ತು ಸೊಗಸಿದೆಯಲ್ಲ, ಅದನ್ನು ನಾಶಮಾಡುವದಕ್ಕೆ ಸಾಧ್ಯವಿಲ್ಲ. ಮೂಲದಲ್ಲಿ ಇಲ್ಲದ ಹೊಸ ಸೊಗಸನ್ನು ಕೊಡುವುದಕ್ಕೂ ಆಗಲಿಲ್ಲ."[೪೨] ಎಂಬ ಮಾತು ಗಮನಿಸಿದ್ದು ಆ ಕಾಲದ ಭಾಷೆಯ ಲಾಲಿತ್ಯ, ಶೈಲಿ ಬಳಕೆಗೊಂಡ ತಂತ್ರಗಾರಿಕೆಯು ಈ ಕಾಲಘಟ್ಟದ ಕಾದಂಬರಿಯಲ್ಲಿ ಗಮನೀಯವಾದದ್ದು. ಭಾಷೆ, ಶೈಲಿ, ತಂತ್ರಗಳು ಆಯಾ ಕಾಲದ ಸಂದರ್ಭ, ಲೇಖಕರ ಮನೋಧರ್ಮ ಅವರ ಧೋರಣೆಗಳು ತಂತ್ರಗಾರಿಕೆಗಳು, ಲೇಖಕರಿಂದ ಲೇಖಕರಿಗೆ ವಿಭಿನ್ನವಾದವು.

ಭಾಷಾ ವೈವಿಧ್ಯ ಗಾದೆ ಮಾತು ಮತ್ತು ಸಾಮಾಜಿಕ ಸಂದರ್ಭ

ಇಂದಿರಾಬಾಯಿ:

ಈ ಕಾಲದಲ್ಲಿ ಮೂಡಿಬಂದ ಮೊದಲಘಟ್ಟದ ಸ್ವತಂತ್ರ ಕೃತಿಗಳಾದ ಇಂದಿರಾಬಾಯಿ, ವಾಗ್ದೇವಿ, ಇಂದಿರಾ, ಮಾಡಿದ್ದುಣ್ಣೋ ಮಹಾರಾಯ, ಸಭಾ, ಸುಶೀಲೆ, ವೀರಾಗಿಣಿ, ಶೃಂಗಾರ ಚಾತುರ್ಯೋಲ್ಲಾಸಿನಿ ಮುಂತಾದ ಕಾದಂಬರಿಗಳಲ್ಲಿ ಪ್ರಾದೇಶಿಕತೆ ಸೊಗಡಿನ ಭಾಷೆ, ನುಡಿಗಟ್ಟು ಗಾದೆ ಮಾತುಗಳನ್ನು ಬಳಸಲಾಗಿದೆ. ಮನುಷ್ಯ ಸಂಬಂಧಗಳ ವ್ಯಂಗ್ಯ, ಸತ್ಯಾಸತ್ಯತೆ, ಆಸೆ-ಅಭಿಲಾಷೆಗಳು ತಲೆಮಾರುಗಳ ನಡುವಿನ ಕಂದರಗಳನ್ನು ಬಿಂಬಿಸಲು ಸಾಹಿತಿಗಳು ಪ್ರಾದೇಶಿಕತೆಗೆ ಅನುಗುಣವಾಗಿ ಜನರ ನಾಲಿಗೆ ಮೇಲೆ ಹರಿದಾಡುವ ನುಡಿಗಟ್ಟು, ಗಾದೆ ಬಳಸಿ ಭಾಷಾ ಗಟ್ಟಿತನ, ವೈವಿಧ್ಯತೆ ಪ್ರದರ್ಶಿಸಿದ್ದಾರೆ.

ಇಂದಿರಾಬಾಯಿ ಕಾದಂಬರಿಯ ಈ ರೀತಿಯಾದ ಗಾದೆ ಮಾತುಗಳು ಕರಾವಳಿ ಭಾಗದ, ಹವ್ಯಕರ ನುಡಿಗಟ್ಟುಗಳ ಗಟ್ಟಿತನವು ಇಲ್ಲಿ ಕಾಣುತ್ತದೆ. ಇಲ್ಲಿ ಬಳಕೆಯಾಗಿರುವ ಮೌಲ್ಯಗಳಲ್ಲಿ ಪ್ರಾಮಾಣಿಕತೆಯೂ ಒಂದು. ಅಜ್ಜಿ, ಮಗಳು, ಮೊಮ್ಮಗಳ ನಡುವಿನ ಕಂದರ ಹೆಚ್ಚಾದುದ್ದಕ್ಕೆ, ಸಂತೋಷದಲ್ಲಿ ಆನಂದ ಸಮಯದಲ್ಲಿ 'ಇದ್ದ ಮಕ್ಕಳಿಗೆ ಗಂಜಿ ಇಲ್ಲ ಮತ್ತೊಂದು ಕೊಡೊಶಿವಾ 'ಎಂಬ ನುಡಿ ಹೊರಟಿದ್ದು ಔಚಿತ್ಯಪೂರ್ಣವಾದದ್ದು. ಸಹಾಯ ಸಹಕಾರ ಮರೆಯುವ ಸಂದರ್ಭಕ್ಕೂ ಉದಾಹರಣೆ ಎಂಬಂತೆ ಮೂಡಿ ಬಂದಿವೆ. ಸಾಮಾಜಿಕ ಕೆಡುಕಿನ ಸಂಬಂಧ ಸಮಸ್ಯೆಗಳನ್ನು 'ಸೂಳೆಯ ನಂಬಿದವನ ಬಾಳು ಗಾಳಿಗೊಡ್ಡಿದ ದೀಪ' ಎಂದು ಕುಟುಕಿದ್ದಾರೆ. ದೇವರ ನಂಬಿಕೆಯನ್ನು ವಿಡಂಬಿಸಿದ್ದು, 'ಎರಡು ದೇವರ ನಂಬಿ ಕುರುಡ ದಾಸ ಕೆಟ್ಟ' ಎಂದು ತಾರ್ಕಿಕವಾಗಿ ಉದ್ಘೋಷಿಸಿದ್ದಾರೆ. 'ಮನೆ ಅರಿಯದೆ ಓಣಿ ಅರಿಯಲಾರ', 'ಮನೆಗೆದ್ದು ಮಾರು ಗೆಲ್ಲುವ', 'ತನ್ನಕ್ಕನ ಅರಿಯದವಳು ನೆರೆಮನೆಯ ಬೊಮ್ಮಕ್ಕನ ಅರಿಯುವಳೆ' ಎಂದು ಪ್ರಶ್ನಿಸಿದ್ದಾರೆ. ಇಲ್ಲಿ ಬಳಕೆಯಾಗಿರುವ ಬಹುತೇಕ ಗಾದೆ ಮಾತುಗಳು ಕರಾವಳಿ ಭಾಗದ ಹಾಗೂ ಹವ್ಯಕ ಸಮಾಜದಲ್ಲೆ ಹೆಚ್ಚು ಬಳಕೆ ಇದ್ದಿರಬಹುದಾದವು. ಪ್ರತಿನಿತ್ಯ ಸಮಾಜದೊಡನೆ ವ್ಯವಹರಿಸುವುದರಿಂದ ಇವು ಯಥೇಚ್ಛವಾಗಿ ಬಳಕೆಯಾಗಿರಬಹುದು. ಅವುಗಳಲ್ಲಿ ಮುಖ್ಯವಾಗಿ ಈ ಕೆಳಗಿನಂತೆ ಉದಾಹರಿಸಬಹುದು.

೧. ನಿನಗೆ ಪ್ರಮಾಣ ! ದನ ತಿನ್ನುವವನಿಗೆ ಸಗಣಿಯಾಣೆ-೪೮

೨. ಮದುವೆಗೆ ತಂದ ಅಕ್ಕಿ ಸೇಸೆಗೆ ಹೋಯಿತು-೬

೩. ಹಾಡಿದ್ದೆ ಹಾಡು ಕಿಸಬಾಯಿದಾಸ-೬

೪. ಅಜ್ಜಿಗೆ ಅರಮನಿ ಚಿಂತೆ ಮಗಳಿಗೆ ಮಿಂಡರ ಚಿಂತೆ, ಮೊಮ್ಮಕ್ಕಳಿಗೆ ಐಜ್ಜಾಯ ಚಿಂತೆ-೬

೫. ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ-೫೪

೬. ಅಗಸನ ಕತ್ತೆಗೆ ಸೊಗಸಿನ ಏಟು-೫೫

೭. ಇದ್ದ ಮಕ್ಕಳಿಗೆ ಗಂಜಿ ಇಲ್ಲ ಇನ್ನೊಂದು ಕೊಡೋ ಶಿವಾ-೫೫

೮. ಅಲ್ಲಿಗಿಲ್ಲ ಎಲ್ಲಿಗೊಬಂದು ತಾಳಿ-೫೬

೯. ರಾಮೇಶ್ವರ ಹೋದರೂ ಶನೇಶ್ವರ ಬಿಡಾ-೫೯

೧೦. ಗರ್ಭವೆಂಬುದು ನೋಡುವವರಿಗೆ ಸೊಗಸು ಹೊರುವವರಿಗೆ ಪ್ರಾಣಸಂಕಟ-೬೪

೧೧. ರೋಗಿ ಬಯಸಿದ್ದು ಹಾಲೋಗರ, ವೈದ್ಯ ಹೇಳಿದ್ದು ಹಾಲೋಗರ-೭೮

೧೨. ಸೂಳೆಯ ನಂಬಿದವನ ಬಾಳು ಗಾಳಿಗೊಡ್ಡಿದ ದೀಪ-೧೪೦

೧೩. ಇದ್ದುದ್ದು ಹೋಯಿತು ಮುದ್ದಿನ ಗುಣದಿಂದ-೧೫೧

೧೪. ಮದುವೆ ಮಾಡಿದವನೆಬಲ್ಲ ಮನೆಯ ಕಟ್ಟಿದವನೆ ಬಲ್ಲ-೭೫

೧೫. ಎರಡು ಹೆಂಡಿರ ಕಾಟ-೧೯

೧೬. ಎರಡು ದೇವರ ನಂಬಿ ಕುರುಡ ದಾಸ ಕೆಟ್ಟ-೧೨೬

೧೭. ಹುಚ್ಚು ಹೋಯಿತು ಬಣಕ್ಕೆ ತನ್ನಿ-೧೫೨

೧೮. ಕುಲಗೆಟ್ಟರು ಸುಖ ಪಡಬೇಕು-೧೯೪

೧೯. ಕೆಟ್ಟ ಮೇಲೆ ಬುದ್ಧಿ ಅಟ್ಟ ಮೇಲೆ ಒಲೆಯುರಿ-೧೯೬

೨೦. ಮುದುಕೆ ಇಲ್ಲದ ಮುನ್ನೂರು ಪದ-೧೯೯

೨೧. ಬೂದಿ ಕಾಣದವರು ಹಿಟ್ಟು ಕಂಡರೆ ಹೊಗಳದೆ ಮತ್ತೇನು-೧೯೯

೨೨. ತನ್ನಕ್ಕನ ಅರಿಯದವಳು ನೆರೆಮನೆಯ ಬೊಮ್ಮಕ್ಕನ ಅರಿಯುವಳೆ-೨೦೭

ವಾಗ್ದೇವಿ:

ವಾಗ್ದೇವಿ ಕಾದಂಬರಿ ಕನ್ನಡದ ಮಹತ್ವದ ಮತ್ತು 'ವಾಗ್ಧಾನದ' ಮಹತ್ವ ಸಾರಿದ್ದು. ಮುಗ್ಧ ಪ್ರೇಮದಿಂದ ತೊಡಗಿ, ಹಾದರ, ಮಠಗಳಲ್ಲಿನ ಅತ್ಯಾಚಾರ, ಭ್ರಷ್ಟತನ, ಸ್ತ್ರೀಯರ ಅಧಿಕಾರ ಲಾಲಸೆ ಇವೆಲ್ಲವುಗಳನ್ನು ಅನುಭವಿಸಿ ಪಶ್ಚಾತ್ತಾಪದ ನೆರಳಿಗೆ ಹೊರಳುವುದೇ ಮಹತ್ವದ ಸಂಗತಿ. ಮೂರ್ಖತನದ ಪರಮಾವಧಿ, ಮಠದ ಅನಾಚಾರಗಳು ಹಲವಾರು ಭಾಷಾ ವೈಶಿಷ್ಟ್ಯತೆಯಿಂದ ಸಮಾಜದ, ಬ್ರಾಹ್ಮಣತ್ವ ಆಚಾರ ವಿಚಾರಗಳು ತರ್ಕಕ್ಕೆ ವೇದಿಕೆ ಒದಗಿಸಿವೆ. ಕರ್ನಾಟಕದ ಉದ್ದಗಲಕ್ಕೂ ಬಳಕೆಯಲ್ಲಿರುವ ಹಲವಾರು ಗಾದೆಮಾತುಗಳು ಹಲವಾರು ಮುಖಚಾಚಿಕೊಂಡು ಪರಿಣಾಮ, ಪರಿಹಾರ ಸೂಚಿಸಿದಂತೆ ಈ ನುಡಿಗಳು ನೇರವಾಗಿ ಎದೆಗೆ ನಾಟುವ ಹಾಗೆ ಚಿತ್ತರಗೊಂಡಿವೆ.

ಕೆಲಸದ ಮಹತ್ವ ಸಾರುವ, ದುಡಿಮೆಗಾರರು ದೂಕುವ ಅನಾದರತೆ ಕುರಿತು 'ತಾನು ಮಾಡಿದ್ದು ಉತ್ತಮ ಮಗ ಮಾಡಿದ್ದು ಮಧ್ಯಮ, ಆಳು ಮಾಡಿದ್ದು ಹಾಳು' ಎಂಬಲ್ಲೆ ಕಾರ್ಯ ಸಿದ್ಧಿಯ ಮಹತ್ವ ನೀಡಿದ್ದು, ಪಾಪಪ್ರಜ್ಞೆಯನ್ನು 'ಮಾಡಿದವನ ಪಾಪ ಆಡಿದವನ ಮೇಲೆ' ಎಂಬಲ್ಲಿ ವ್ಯಕ್ತವಾಗಿದೆ. ನಾಯಿಯನ್ನು ಕೀಳಾಗಿ ಕಾಣುವ ಈ ಸಮಾಜದಲ್ಲಿ ನಿಂದನಾ ರೂಪಕ್ಕೆ ಬಳಸುವರು. 'ನಾಯಿಗೆ ಪ್ರಾಯವಾದರೆ ಅಜ್ಜನೆಂದು ಕರೆಯಬಹುದೆ?' 'ನಾಯಿ ಬೊಗಳಿದರೆ ದೇವಲೋಕ ಹಾಳಾಗುವದೋ', 'ನಂದರಾಯನ ಬದುಕು ನಾಯಿ ನರಿ ತಿಂದು ಹೋಯಿತು' ಎಂಬಲ್ಲಿ ಔಚಿತ್ಯಪೂರ್ಣ ಸೂಚಕವೆಂಬಂತೆ ಮೂಡಿ ಬಂದಿವೆ. ಇದ್ದದ್ದು ನೇರವಾಗಿ ಹೇಳುವ ಜಾತಿಗೆ 'ಕಂಡಂತೆ ಆಡಿದರೆ ಕೆಂಡದಂತ ಉರಿ' ಎಂಬುದು ಸೂಚಿಸುವುದು. ಹಣಕ್ಕೆ ಬೆನ್ನು ಬಿದ್ದು ತಿರುಗುವ, ಅನವಶ್ಯಕವಾಗಿ ಹಿಂಬಾಲಕರು ಬರುವ ಸಂಗತಿಗೆ 'ಬಸವನ ಹಿಂದೆ ಬಾಲ' ಎಂಬಲ್ಲಿ ಅದು ಕೆಟ್ಟದ್ದಾಗಿರಲಿ, ಒಳ್ಳೆಯದಾಗಿರಲಿ ಹಿಂಬಾಲಕರ ಒತ್ತಾಸೆಗಳ ವ್ಯಕ್ತಪಡಿಸಿದಂತಿವೆ.

೧. ಮೂರ್ಖಂಗೆ ಹೇಳಿದ ಬುದ್ಧಿ ಬೋರ್ಕಲ್ಲ ಮೇಲೆ ಹೊಯಿದ ಮಳೆ-೮

೨. ತಾನು ಮಾಡಿದ್ದು ಉತ್ತಮ ಮಗ ಮಾಡಿದ್ದು ಮಧ್ಯಮ ಆಳು ಮಾಡಿದ್ದು ಹಾಳು-೨೨

೩. ಅಂಡೆ ಬಾಯಿಯಾದರು ಕಟ್ಟಬಹುದು ತೊಂಡೆಬಾಯಿ ಕಟ್ಟ ಕೂಡದು-೫೦

೪. ಕುದುರೆಗೆ ಹಿಷಾರೆ ಕತ್ತೆಗೆ ಲತ್ತೆ-೫೧

೫. ಕಂಡಂತೆ ಆಡಿದರೆ ಕೆಂಡದಂತ ಉರಿ-೬೯

೬. ಮರ ಘಟಕ್ಕೆ ಹೋದರೂ ಅದಕ್ಕೆ ಮೂರೆ ಎಲೆ-೬೨

೭. ಮಾಡಿದವನ ಪಾಪ ಆಡಿದವನ ಮೇಲೆ-೧೦೦

೮. ಮೈಯುರಿಯುವ ಮಾತಿಗೆ ಸಿಟ್ಟುಂಟೆ -೧೦೩

೯. ಅಗಲವಾದದ್ದು ಹಿಗ್ಗುವುದು ಉದ್ದವಾದದ್ದು ಮುರಿಯುವುದು-೧೩೮

೧೦. ರೋಗಿ ಬಯಸಿದ್ದು ಹಾಲೋಗರ ವೈದ್ಯ ಹೇಳಿದ್ದು ಹಾಲೋಗರ-೧೪೪

೧೧. ನಾಯಿ ಹಸದಿತ್ತು ಅಂಬಲಿ ಹಳಸಿತ್ತು-೧೬೪

೧೨. ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ- ಮ ೬೪

೧೩. ಬಸವನ ಹಿಂದೆ ಬಾಲ-೧೮೧

೧೪. ನಾಯಿ ಬೊಗಳಿದರೆ ದೇವಲೋಕ ಹಾಳಾಗುವುದೇ?-೨೩೩

೧೫. ನಾಯಿಗೆ ಪ್ರಾಯವಾದರೆ ಅಜ್ಜನೆಂದು ಕರೆಯುಬಹುದೆ? -೨೪೯

೧೬. ನಂದರಾಯನ ಬದುಕು ನಾಯಿ ನರಿ ತಿಂದು ಹೋಯಿತು-೨೭೧

ಇಂದಿರಾ:

'ಇಂದಿರಾ' ಕಾದಂಬರಿಯಲ್ಲಿ ಲೇಖಕರು ಉತ್ತರ ಕರ್ನಾಟಕದ ಪ್ರಭಾವನ್ನು, ಮುಂಬೈ ಕರ್ನಾಟಕದ ಮರಾಠಿ ಪ್ರಭಾವವನ್ನು ಕಾದಂಬರಿಯಲ್ಲಿ ಬಳಸಿಕೊಂಡಿದ್ದಾರೆ. ಉತ್ತರ ಕರ್ನಾಟಕ ಸಂಗತಿಯನ್ನು ದಕ್ಷಿಣ ಕನ್ನಡದ ಕರ್ನಾಟಕದ ಸಂಗತಿಗಳನ್ನು ಸಮೀಕರಣ ಮಾಡಿಕೊಂಡ ಚಿತ್ರಣವಿದೆ. ವಿಷಯ ವಸ್ತು ಉತ್ತರ ಕರ್ನಾಟಕದ್ದು ಪಾತ್ರಗಳು ಬೆಂಗಳೂರು ಮೈಸೂರು ಭಾಗದ್ದಕ್ಕೆ ಕಲ್ಪಿಸಿಕೊಂಡಿದ್ದಾರೆ. ಹಾಗೆ ದಕ್ಷಿಣ ಕರ್ನಾಟಕದ್ದು ಚಾಮರಾಜೇಂದ್ರ ಮೈಸೂರು ಅರಸ, ಬಡತನದ ಸಂಗತಿಯನ್ನು ರಾಜರಿಗೂ ತಪ್ಪಿದ್ದಲ್ಲ ಎಂಬುದನ್ನು 'ರಾಗಿಮುದ್ದೆ ರಾಮರಾಜೇಂದ್ರರಿಗೂ ತಪ್ಪಿದ್ದಲ್ಲ' ಎಂಬ ಮಹತ್ವದ ಸಂಗತಿ ಹೇಳಿದ್ದು. ಇದೇ ಬಡತನದ ಹೋಲಿಕೆ. 'ಇದ್ದದ್ದರಲ್ಲಿ ಹಂಚಿಕೊಂಡಿರುವುದು ತೊತ್ತಿನ ಕೆಲಸ', 'ಬುದ್ಧಿಶಾಲಿಗೆ ಸಂಪತ್ತಿನ ಬೆಲೆಯಿಲ್ಲ' ಎಂಬಲ್ಲಿ ಸಾಮಾಜಿಕ ಕಳಕಳಿ ಮೂಡಿಬಂದಿರುವುದು. ಇಂದಿಗೂ ಪ್ರಚಲಿತವಿರುವ 'ಸಾವಿರ ಸುಳ್ಳುಹೇಳಿ ಒಂದು ಕಲ್ಯಾಣ ಕಟ್ಟಬೇಕು' ಎಂಬಲ್ಲಿಯು ಕೆಟ್ಟ ವ್ಯಕ್ತಿಯ ಸುಧಾರಣೆಯಾಗಲೂ ಅವಕಾಶ ಒದಗಿಸುವ ಸಂದರ್ಭವಿದೆ.

'ಕುಟಿಲತೆಗೆ ಕುಟಿಲತೆಯೇ ಪ್ರಯೋಗ', 'ವಿಷ ತಿಂದವನಿಗೆ ಏನುಪಾಯ ಮಾಡಬೇಕೆಂದು ತಿಳಿಯದು', 'ಶ್ವಾನದ ಬಾಲ ಡೊಂಕು' ಎಂಬಲ್ಲಿ ಕೆಟ್ಟದಕ್ಕೆ ಕೆಟ್ಟದ್ದರಿಂದಲೇ ಉತ್ತರ ನೀಡುವುದು. 'ಕೆಟ್ಟ ಕಾರ್ಯಕ್ಕೆ ತಲೆ ವಿಚಾರಿಸದು' ಎಂಬ ವಿಶ್ಲೇಷಣೆಗೆ ವೇದಿಕೆ ಒದಗಿಸುವುದು. ಇದರಲ್ಲಿ ಸಾಮಾಜಿಕ ಕಳಕಳಿಯನ್ನು ಕಾಣುವುದು. ಸ್ತ್ರೀಯರ, ವಿಚಾರಕ್ಕೆ ಕೆಲವು ಕವಲು ಚರ್ಚೆ ನೀಡಿದ್ದಿದೆ. ಅಂದಿನ ದಿನದಲ್ಲಿ ಹೆಣ್ಣು ಹುಟ್ಟಿದರೆ ಅಗೌರವದಿಂದ ಕಾಣಲಾಗುತ್ತದೆ. ಅಂತಹ ಸಂದರ್ಭಗಳಿಗೆ 'ಮಗಳು ಹುಟ್ಟಿದರೆ ಏಳೂರ ಕೆರೆಯ ನೀರು ಕುಡಿಸುವುದು ಸುಳ್ಳಲ್ಲ'. ಸ್ತ್ರೀ ಕುರಿತಾದ ಸಮಾಜದ ಧೋರಣೆ ಏನಿತ್ತು ಎಂಬುದನ್ನು ಸೂಚಿಸಿದೆ. ಕೆರೂರು ವಾಸುದೇವಾಚಾರ್ಯ ಪೂನಾ, ಮುಂಬೈ, ವಕೀಲಿ ವೃತ್ತಿಗಳು ಇಂಗ್ಲಿಷ್ ಭಾಷೆಯ ಪ್ರಯೋಗವು ಕಾಣುವುದು. 'ಮುಳುಗುವ ಮನುಷ್ಯ ಹುಲ್ಲು ಕಡ್ಡಿಯಾದರೂ ಹಿಡಿಯಲು ಹೋಗುತ್ತಾನೆ' ಎಂಬ ಇಂಗ್ಲಿಷ್ ಗಾದೆ ಬಳಸಿದ್ದು ಭಾಷಾ ವೈವಿಧ್ಯತೆಯನ್ನು ಇಲ್ಲಿ ಗಮನಿಸಬಹುದು. ಇಂತಹ ಹಲವಾರು ಪಡೆನುಡಿ, ಗಾದೆಮಾತು ಬಳಸಿದ್ದು ಇನ್ನು ಹಲವಾರು ಇಂತಿವೆ.

೧. ರಾಗಿಮುದ್ದೆ ಚಾಮರಾಜೇಂದ್ರರಿಗೂ ತಪ್ಪಿದ್ದಲ್ಲ-೨೫

೨. ಬಡವರ ಮನೆಗೆ ಭಾಗೀರತಿ ಬಂದಂತಾಯಿತು-೩೦

೩. ಸಜ್ಜನಾನಾಂ ಮನೋಯಥಾ-೩೯

೪. ಇದ್ದದ್ದರಲ್ಲಿ ಸುಖ ಹಂಚಿಕೊಂಡಿರುವುದು ತೊತ್ತಿನ ಕೆಲಸ-೫೬

೫. [illegible]

೬. ಬುದ್ಧಿಶಾಲಿಗಳಿಗೆ ಸಂಪತ್ತಿನ ಬೆಲೆಯಿಲ್ಲ–೯೬

೭. ರೂಢಿಯಿಂದ ಸಿದ್ಧವಾದರೆ ಚಿಂತಿಲ್ಲ–೧೩೨

೮. ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ–ಕಟ್ಟಬೇಕು–೧೮೮

೯. ಕುಟಿಲತೆಗೆ ಕುಟಿಲತೆಯೇ ಪ್ರಯೋಗ–೧೯೨

೧೦. ಸರ್ವನಾಶೆ ಸಮುತ್ತನ್ನೆ ಅರ್ಧಂ ತ್ಯಜತಿ ಪಂಡಿತಃ ಸಂಸ್ಕೃತ ಗಾದೆ–೧೯೪

೧೧. ಮಗಳು ಹುಟ್ಟದರೆ ಏಳೂರ ಕೆರೆ ನೀರು ಕುಡಿಸುವಳೆಂಬುದು ಸುಳ್ಳಲ್ಲ–೧೯೪

೧೨. ಮುಳುಗುವ ಮನುಷ್ಯ ಹುಲ್ಲು ಕಡ್ಡಿಯಾದರೂ ಹಿಡಿಯಲು ಹೋಗುತ್ತಾನೆ.(ಇಂಗ್ಲಿಷ್ ಗಾದೆ) ೨೨೧

೧೩. ವಿಷ ತಿಂದವನಿಗೆ ಏನುಪಾಯ ಮಾಡಬೇಕೆಂದು ತೋಚುವುದಿಲ್ಲ–೨೩೧

೧೪. ಶ್ವಾನನ ಬಾಲ ಡೊಂಕು–೨೩೭

೧೫. ಚಿನ್ನದ ಚೂರಿಯೆಂದು ಮೂಗು ಕೊಯಿಸಿಕೊಳ್ಳಕೂಡದಲ್ಲ ೨೪೬

೧೬. ಆಯಿ ನೂತದ್ದು ಮೊಮ್ಮಗನ ಉಡದಾರಕ್ಕೆ–೩೦೧

ಮಾಡಿದ್ದುಣ್ಣೋ ಮಹಾರಾಯ:

ಹಳೆ ಮೈಸೂರು ಭಾಗದ ಹಾಗೂ ಚಾಮರಾಜೇಂದ್ರ ಒಡೆಯರ ಪ್ರಭಾವ, ರಾಜಸತ್ತೆಯ ನೆರಳು ಸಾಮಾನ್ಯ ಜನರ ನಾಲಿಗೆಯ ಮೇಲೆ ಸುಳಿದಾಡುವ ಮೌಲ್ಯಯುತ ಮಾತು ನುಡಿಗಳು ಹೇರಳವಾಗಿ ಬಳಕೆಯಾಗಿವೆ. ಇಲ್ಲಿ ಮೈಸೂರು ಪ್ರಾದೇಶಿಕತೆಯ ಸೊಗಡಿನ ನುಡಿಗಳು ಅಧಿಕ. ಕಾಯಕದ ಮಹತ್ವ ಸಾರುವ, ಕೆಲಸ ಹೆಚ್ಚು ಮಾತು ಕಡಿಮೆ ಎಂಬ ರೀತಿಯ 'ಏಟುಮುಂಚು ಮಾತು ಹಿಂಚು', ' ಬುದ್ಧಿ ವಿಕಾರಕ್ಕೆ ನೋಟವೆ ಅಂಕದ ಬಾಗಿಲು' ಮುಂತಾದ ನುಡಿ ಮಾತುಗಳು ಕಾರ್ಯಕ್ಷಮತೆ ಪಾತ್ರ ಕುರಿತು ಹೇಳಿದರೆ, 'ಬಯಸಿ ಬಯಸಿ ಬಾಳೆ ಹೊಕ್ಕರೆ ಬಡ್ಡಿಗಂಡ ದಡ್ಡಿ ತಂದ', 'ಹೋಗೋ ಸೂಳೆ ಕಂಡು ಹಮ್ಮೈಸಿ ಬಿದ್ದ', 'ಹಣ ಹೆಚ್ಚಿದರೆ ಅಲ್ಪರಿಗೆ ಬುದ್ಧಿ ವಿಕಾರಗಳೆ ಅಧಿಕ' ಎಂಬ ನುಡಿಗಳು ವ್ಯಕ್ತಿಯು ವ್ಯಕ್ತಿಯ ದಡ್ಡತನದ ಪರಮಾವಧಿಯನ್ನು ಗುರುತಿಸಲು ಇಂತಹ ಅಧಿಕ ಚುಚ್ಚು ಮಾತುಗಳು ಬಳಕೆಗೆ ಬಂದಿದ್ದು ಕಾದಂಬರಿಕಾರರ ಸಾಮಾಜಿಕ ಜಾಗೃತಿ ಕೃತಿಯಲ್ಲಿ ವ್ಯಕ್ತವಾಗಿದೆ.

ಮುಖವಂತಿಕೆಯನ್ನು ತೀಕ್ಷ್ಣವಾಗಿ ಸ್ಪಂದಿಸಿದಂತಿದೆ. ಅದಕ್ಕೆ 'ಹೊದ್ದರೆ ಮಡಿ ಉಟ್ಟರೆ ಮಡಿ' ಉತ್ತರಿಸಿದ್ದಾರೆ. ಮಾನವನ ವ್ಯರ್ಥಪ್ರಯತ್ನ ಬಿಂಬಿಸುವ 'ಹೊಳೆಯಲ್ಲಿ ಹುಣಸೆ ಹಣ್ಣು ಕಿಮುಕಿದಂತಾಯಿತು' ಎಂದು ವಿಡಂಬಿಸಿದ್ದಾರೆ. ಕೊನೆಯಲ್ಲಿ ಕಾದಂಬರಿಯ ನೀತಿಯನ್ನು ಪ್ರಸ್ತಾಪಿಸುವ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ಹೆಸರೆ ಒಂದು ಗಾದೆ ಮಾತು. ನೀತಿಯನ್ನು

ಮೌಲ್ಯವನ್ನು ಪ್ರತಿಪಾದಿತವಾದದ್ದು. ಕಾದಂಬರಿಯುದ್ದಕ್ಕೂ ಗಮನಿಸಬಹುದು. ಕೊನೆಯ ತೀರ್ಮಾನ 'ಅಗಸ್ತೇಶ್ವರ ಉಗಾ ಭೋಗ, ಮಾರ್ಕಂಡೆಯನಿಗೆ ಸತ್ಯಪ್ರಮಾಣ'ವೆಂಬ ಸಂಗತಿಯು ಮನುಷ್ಯ ಕೈಗೊಳ್ಳುವ ತೀರ್ಥಯಾತ್ರೆಯನ್ನು ಪ್ರಶ್ನಿಸುವ ಪ್ರಯತ್ನ ವ್ಯರ್ಥವೆಂದರು ನೀತಿ ಮೌಲ್ಯ ಸಾರಿದೆ.

೧. ಏಟು ಮುಂಚು ಮಾತು ಹಿಂಚು-೨೭
೨. ಹೊಳೆಯಲ್ಲಿ ಹುಣಸೆಹಣ್ಣು ಕೆದರಿದ ಹಾಗಾಯಿತು-೫೦
೩. ಐಭೋಗ ಅಗಸ್ತೇಶ್ವರನಿಗೆ ಸತ್ಯಪ್ರಮಾಣ ಮಾರ್ಕಂಡೆಯ್ಯನಿಗೆ -೬೨
೪. ಬಯಸಿ ಬಯಸಿ ಬಾಳೆ ಹೊಕ್ಕರೆ ಬಡ್ಡಿಗಂಡ ದಡ್ಡಿ ತಂದ-೨೦
೫. ಹಣ ಹೆಚ್ಚಿದರೆ ಅಲ್ಪರಿಗೆ ಬುದ್ಧಿ ವಿಕಾರಗಳು ಹುಟ್ಟುವುದು ವಾಡಿಕೆ-೧೧೦
೬. ಬುದ್ಧಿ ವಿಕಾರಕ್ಕೆ ನೋಟವೇ ಅಂಕದ ಬಾಗಿಲಾಗಿದೆ-೧೧೧
೭. ಹೋಗೋ ಸೂಳೆ ಕಂಡು ಹಮ್ಮೈಸಿ ಬಿದ್ದನಂತೆ-೧೧೩
೮. ನೆಂಟರ ಮನೆಗೆ ನಾಯಿ ಹೊಕ್ಕರೆ ಎಂಟೂರಿಗೂ ಬೆರೆಯಿತು-೧೩೨
೯. ಹೇಳುವವರು ಹೆಡ್ಡರಾದರೆ ಕೇಳುವವರು ಕಿವುಡರಾಗಬೇಕು-೧೩೨
೧೦. ಹೊದ್ದರೆ ಮಡಿ ಉಟ್ಟರೆ ಮಡಿ-೧೩೬
೧೧. ಮಾಡಿದ್ದುಣ್ಣೋ ಮಹಾರಾಯ-೧೮೬

ಶೃಂಗಾರಚಾತುರ್ಯೋಲ್ಲಾಸಿನಿ:

ಮೈಸೂರು ವಿಭಾಗದ ಪ್ರಥಮ ಸ್ವತಂತ್ರ ಕಾದಂಬರಿ 'ಶೃಂಗಾರಚಾತುರ್ಯೋಲ್ಲಾಸಿನಿ'. ಗುಬ್ಬಿ ಮುರಿಗಾರಾಧ್ಯರು ವಿದ್ಯಾರ್ಥಿಯಾಗಿರುವಾಗಲೆ ರಚಿಸಿದ್ದು. ಸರಸ್ವತಿಯ ಸ್ತುತಿಯೊಂದಿಗೆ ಕಾದಂಬರಿ ಪ್ರಾರಂಭವಾಗುವುದು. ಇಂಗ್ಲಿಷ್ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸುವ ಇರಾದೆಯೊಂದಿಗೆ ಮೊದಲು ಕನ್ನಡದಲ್ಲಿ ಈ ಕಾದಂಬರಿಯನ್ನು ರಚಿಸಿದರು. ಹಳೆಯದನ್ನು ಬಿಟ್ಟು ಹೊಸದನ್ನು ಕೊಡುವ ಇರಾದೆಯಲ್ಲಿ ಗಟ್ಟಿತನದ ಭಾಷೆ ಬಳಸಿಕೊಂಡು. ಶೃಂಗಾರ ಚಾತುರ್ಯೋಲ್ಲಾಸಿನಿಯಲ್ಲಿ ಮೌಲ್ಯಗಳನ್ನು ನೀತಿಗಳನ್ನು ಐತಿಹಾಸಿಕ ವಿಷಯ ವಸ್ತುವಿನೊಂದಿಗೆ ಕೃತಿಯನ್ನು ಹೆಣೆದಿದ್ದಾರೆ. ಮೈಸೂರು ಭಾಗದ ನುಡಿಗಟ್ಟು, ಐತಿಹಾಸಿಕ ಪ್ರಜ್ಞೆ, ಗಾದೆಮಾತು, ನೀತಿಯ ಮಾತುಗಳನ್ನು ಶೃಂಗಾರ ಅದ್ಭುತವಾದ ಕಲ್ಪನೆಯೊಂದಿಗೆ ಕೃತಿ ರಚಿಸಿದ್ದಾರೆ.

'ಕೆಡುಕಾಲಕ್ಕೆ ವಿಪರೀತ ಬುದ್ಧಿ' ಪ್ರಯೋಗದಿಂದ ಮತ್ತಷ್ಟು ಕೆಡುಕೆ ಸಂಭವಿಸುವುದು. 'ವಿನಾಶ ಕಾಲಕ್ಕೆ ವಿಪರೀತ ಬುದ್ಧಿ'. 'ನಡೆದು ಹೋದದ್ದು ಚಿಂತಿಸಿ ಫಲವಿಲ್ಲ', 'ಸಂಕಟ ಬಂದಾಗ ವೆಂಕಟರಮಣ'. 'ಆತುರದ ಆಮಂತ್ರಣಕ್ಕೆ ಕಾತರದ ಉತ್ತರ ನೀಡಿದಂತೆ' ಈ ನುಡಿಗಟ್ಟುಗಳನ್ನು ಬಳಸಿ ಕೃತಿ ಪರಿಣಾಮಕಾರಿಯಾಗಿಸಲು ಪ್ರಯತ್ನಿಸಿದ್ದು ಕಾಣುವುದು. 'ಇಬ್ಬರ ನ್ಯಾಯ ಮೂರನೆಯವನಿಗೆ ಲಾಭ'.

'ಒಬ್ಬನಿಗೆ ಅಮೃತ ಮತ್ತೊಬ್ಬರಿಗೆ ವಿಷ'. ಸಾಮಾಜಿಕ ತಾರತಮ್ಯ ನೀತಿಯನ್ನು ಗುರುತಿಸಲು ಈ ರೀತಿಯ ನೀತಿಯನ್ನು ಕೃತಿಯಲ್ಲಿ ತರ್ಕಿಸಿದ್ದಾರೆ. 'ಇಂದಲ್ಲವೆ ಹಾಲನ್ನು ಬಯಸುತ್ತಿದ್ದ ರೋಗಿಗೆ ವೈದ್ಯನು ಹಾಲನ್ನ ಪಥ್ಯ ಹೇಳಿದ್ದು' ಎಂದು ಒಂದು ಕಡೆ ಬಳಸಿದರೆ ಪುನಃ ಅದೇ ಅರ್ಥದ 'ರೋಗಿ ಬಯಸಿದ್ದು ವೈದ್ಯನು ಪಥ್ಯೆ ಹೇಳಿದ್ದು ಎರಡೂ ಒಂದೆಯಾದಂತೆ' ಎಂದು ಸಂದರ್ಭಕ್ಕನುಸಾರವಾಗಿ ಭಾಷೆಯ ಪರಿಣಾಮಕಾರತೆಗೆ ಸ್ವಲ್ಪ ಬದಲಾವಣೆಯೊಂದಿಗೆ ಬಳಸಿದ್ದು ಕಂಡುಬರುವುದು.'ಕಬ್ಬಿಣ ಕಾದಾಗಲೇ ಬಡೆಯಬೇಕು' ಎಂದು ಕಾದಂಬರಿಯಲ್ಲಿ ೧೦೪-೧೬೮ನೇ ಪುಟದಲ್ಲಿ ಪರಿಸ್ಥಿತಿಯ ನಿಭಾಯಿಸು ಸಾಮಾಜಿಕ ಸಂದರ್ಭ, ಸನ್ನಿವೇಶ ಪೂರೈಸಲು ಈ ರೀತಿಯ ಬರವಣಿಗೆಯನ್ನು ಭಾಷೆಯಲ್ಲಿ ಬಳಸಿದ್ದು ಕಾಣುವುದು. ಇಂತಹ ಹಲವಾರು ಸಂಗತಿಗಳು ಕಾದಂಬರಿಯ ಮೌಲ್ಯ ನೀತಿ ಸಾರಲು ಬಯಸಿದ್ದು ಕಾಣುವುದು. ಕೆಲವು ಉದಾಹರಣೆಗಳು ಇಂತಿವೆ.

೧. ವಿನಾಶಕಾಲೇ ವಿಪರೀತಬುದ್ಧಿ-೪

೨. ಇಂದಲ್ಲವೆ ಹಾಲನ್ನೆ ಬಯಸುತ್ತಿದ್ದ ರೋಗಿಗೆ ವೈದ್ಯನು ಹಾಲನ್ನೆ ಪಥ್ಯ ಹೇಳಿದ್ದು-೧೪

೩. ಅಧಿಕವಾಗಿ ಬೆಳೆದದ್ದು ಅಧೋ ಪ್ರದೇಶವನ್ನೇ ಸೇರುವುದು-೧೬

೪. ಇಬ್ಬರ ವ್ಯಾಜ್ಯ ಮೂರನೆಯವನಿಗೆ ಲಾಭ-೨೭

೫. ಒಬ್ಬನಿಗೆ ಅಮೃತ ಇನ್ನೊಬ್ಬನಿಗೆ ವಿಷ-೪೨

೬. ಕುಣಿಯುವುದಕ್ಕೆ ಒಂದು ಮುಸುಕು-೯೧

೭. ಕಬ್ಬಿಣ ಕಾದಾಗ ಬಡೆಯ ಬೇಕು-೧೦೪

೮. ಅಫೀಮು ತಿಂದ ಕಪಿಯಂತೆ-೫೦

೯. ರೋಗಿ ಬಯಸಿದ್ದು, ವೈದ್ಯನು ಪಥ್ಯ ಹೇಳಿದ್ದು ಎರಡೂ ಒಂದೇಯಾದಂತೆ-೧೧೮

೧೦. ನಡೆದು ಹೋದುದ್ದನ್ನು ಚಿಂತಿಸಿ ಫಲವೇನ-೧೬೫

೧೧. ಕಬ್ಬಿಣ ಕಾದಾಗಲೆ ಬಡೆಯಬೇಕು-೧೬೮

೧೨. ಸಂಕಟ ಬಂದಾಗ ವೆಂಕಟರಮಣ-೧೭೧

೧೩. ಮೊರೆಪೊಕ್ಕವರನ್ನು ರಕ್ಷಿಸುವುದು ಧರ್ಮ-೧೭೨

೧೪. ಪತಿವ್ರತೆಯರಿಗೆ ನ್ಯಾಯ-೧೭೩

ಸಭಾ, ಸುಶೀಲೆ ಮತ್ತು ವಿರಾಗಿಣಿ:

ನಂಜನಗೂಡು ತಿರುಮಲಾಂಬ ಕನ್ನಡ ಪ್ರಾರಂಭಿಕ ಪರಿಣಾಮಕಾರಿ ಕಾದಂಬರಿಕಾರ್ತಿ. ಮೈಸೂರು, ಹೆಗ್ಗಡದೇವನಕೋಟೆಯ. ನಂಜನಗೂಡು ಭಾಗದ ಕನ್ನಡ ಭಾಷೆ ಬರವಣಿಗೆಯ ಬೇರು. ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳ ಅಧ್ಯಯನ ಕೈಗೊಂಡಿದ್ದ ತಿರುಮಲಾಂಬ ಅವ್ರಗಳ ಎಳೆಯಲ್ಲಿ ಸಮಾಜದ ಓರೆ ಕೋರೆಗಳನ್ನು ನೀತಿ, ನಿಯಮ, ಮೌಲ್ಯಯುತ ಭಾಷಾ ತಿರುಳುಗಳನ್ನು

ತಿರುಮಲಾಂಬರವರು ತಮ್ಮ ಕೃತಿಗಳಲ್ಲಿ ಬಳಸಿ ಕೃತಿಯ ಮೌಲ್ಯ ಹೆಚ್ಚಿಸಿದರೆ ಸಾಮಾಜಿಕ ಪರಿಣಾಮಕ್ಕೆ ವೇದಿಕೆಯಾಗಿಸಿಕೊಂಡು ಕಾದಂಬರಿಯಲ್ಲಿ ದುಡಿಸಿಕೊಂಡಿದ್ದಾರೆ.

ದುಃಖ ತಿರುಮಲಾಂಬರ ಬದುಕಿನ ಅವಿಭಾಜ್ಯ ಅಂಗ. ಮೊಸಳೆ ಕಣ್ಣೀರು ಸುರಿಸುವವರಿಗೆ 'ಎಂದೋ ಸತ್ತರೆ ಇಂದು ಅತ್ತರು' ಎಂದು ವ್ಯಂಗ್ಯವಾಡಿದ್ದಾರೆ. ಮನುಷ್ಯ ಉನ್ನತಿ ಸಾಧಿಸಲು 'ಶ್ರೇಯಸು ಬರಲು ವಿಘ್ನಗಳು ಅಧಿಕ' ಎಂದು ಸಮರ್ಥಿಸಿದ್ದಾಳೆ. 'ಬಡವನ ಸಿಟ್ಟು ದವಡೆಗೆ ಮೂಲ', 'ಕುಲಕ್ಕೆ ಮೃತ್ಯು ಕೊಡಲಿಯ ಕಾವು', 'ಸಸಿಯಲ್ಲಿ ಬಗ್ಗದ್ದು ಮರವಾಗಿ ಬಗ್ಗೀತೆ?' ಮನುಷ್ಯನ ವಿರೋಧ ಮನೋಸ್ಥಿತಿ, ಸಂಭವಿಸುವ ದುರಂತದ ಚಿತ್ರಣದ ಮುಖಾಂತರ ವಿವರಣೆ ನೀಡಿದ್ದಾರೆ. ನಂಬದ ಮನುಷ್ಯನನ್ನು 'ತಾನು ಕಳ್ಳ ಪರರ ನಂಬ' ಎಂದು ತಿಳಿಯುವ ಸಾಹಸ ಮಾಡಿದ್ದಾರೆ. ಮನುಷ್ಯ ವಿಕಾರ ಚಿತ್ರಿಸುತ್ತಾ 'ಬೆಕ್ಕಿನ ಕಣ್ಣು ಹಾಲಿನ ಮೇಲೆ' ಎಂದಿದ್ದಾರೆ. ಹಿರಿಯರಿಗೆ ನೀಡದ ಗೌರವವನ್ನು ಪ್ರಶ್ನಿಸಿದ್ದಾರೆ. 'ಹಡೆದ ತಂದೆ ಹುಲ್ಲು ಕಡ್ಡಿಗಿಂತ ಕಡೆಯಾಗಿಸಿದ' ಸಮಾಜದ ಸ್ಥಿತಿಯನ್ನು ಜರೆದಿದ್ದಾರೆ. ಯಾವ ಸಮಯದಲ್ಲಿ ಏನು ಮಹತ್ವ ಪಡೆದುಕೊಳ್ಳುವುದೆಂದು ಹೇಳುವಲ್ಲಿ 'ಹೂವಿಂದ ನಾರು ಮುಡಿಗೇರಿತು' ಎಂದು ತರ್ಕಿಸಿದ್ದಾರೆ. ಕೆಟ್ಟ ಕಾರ್ಯದ ಪರಿಣಾಮ ವಿವರಿಸುವಲ್ಲಿ 'ಉಪ್ಪು ತಿಂದಷ್ಟು ದಾಹ ತಪ್ಪದು' 'ಉಪ್ಪು ತಿಂದಷ್ಟು ನೀರಡಿಕೆ ಹೆಚ್ಚು' ಎಂದು ಪರಿಣಾಮ ಪ್ರಸ್ತುತ ಪಡಿಸಿದ್ದಾರೆ. 'ಅನಿಷ್ಟಕ್ಕೆ ಶನಿಶ್ವರನೇ ಗುರಿ', 'ಸಂಕಟ ಬಂದಾಗ ವೆಂಕಟರಮಣ' ಎಂಬ ನುಡಿಗಳು ಮನುಷ್ಯನ ಆತುರಗಾರಿಕೆ ಅವಾಂತರಗಳನ್ನು ಪ್ರಶ್ನಿಸಿವೆ. 'ಕಳ್ಳನ ಹೆಂಡತಿ ಎಂದಿದ್ದರೂ ಮುಣ್ಣಗೆ', 'ಕಳ್ಳನ ಜಾಡು ಕಳ್ಳನಿಗರಿವು' ಎಂಬ ವಾಕ್ಯಗಳು ಅಪಾಯದ ಅವತಾರ ಚಿತ್ರರಿಸಿವೆ. ಇಂತಹ ಹಲವಾರು ನೀತಿ ನಿಯಮಿತ ವಾಕ್ಯ ತಿರುಮಲಾಂಬ ಕಾದಂಬರಿಯಲ್ಲಿ ಬಳಸಿದ್ದಾರೆ. ಮತ್ತಷ್ಟು ಇಂತಹ ನುಡಿಗಳು ಇಂತಿವೆ.

ನಭಾ:

೧. ಎಂದೋ ಸತ್ತವರಿಗೆ ಇಂದು ಅತ್ತರು-೩

೨. ಶ್ರೇಯಸ್ಸು ಬರಲು ವಿಘ್ನಗಳಧಿಕ-೧೫

೩. ಹಣವೆಂದರೆ ಹೆಣವು ಬಾಯಿ ಬಿಡುವುದು-೧೬

೪. ಕುಲಕ್ಕೆ ಮೃತ್ಯು ಕೊಡಲಿ ಕಾವು-೧೯

೫. ಅನಿಷ್ಟಕ್ಕೆ ಶನೀಶ್ವರನೆ ಗುರಿಯಲ್ಲವೆ? ೩೬

೬. ಸಸಿಯಲ್ಲಿ ಬಗ್ಗದದ್ದು ಮರದಲ್ಲಿ ಬಗ್ಗಿತೆ-೪೩

೭. ಶಯ್ಯೆಯೇ ಸರ್ಪವಾದರೆ ಸುಖಜೀವನದಾಸೆಯುಂಟೆ? ೬೨

೮. ತಾನು ಕಳ್ಳ ಪರರ ನಂಬ-೬೩

೯. ಉಪ್ಪು ತಿಂದಷ್ಟು ನೀರಡಿಕೆ ಹೆಚ್ಚು-೬೪

೧೦. ಬೆಕ್ಕಿನ ಕಣ್ಣು ಹಾಲಿನ ಮೇಲೆ-೬೯

೧೧. ಬೀಸುವ ದೊಣ್ಣೆಯ ಏಟು ತಪ್ಪಿದರೆ ಸಾವಿರ ವರ್ಷ ಆಯುಸ್ಸು-೭೮

೧೨. ಹಡೆದ ತಂದೆ ಹುಲ್ಲು ಕಡ್ಡಿಗಿಂತ ಕಡೆ-೨೯

ವಿರಾಗಿಣಿ:

೧. ಅಲಂಕಾರದಲ್ಲಿ ಆಸೆಯಿದ್ದ ಮಾತ್ರಕ್ಕೆ ಅಪಾತ್ರರಾಗಬೇಕೇ?-೧೦

೨. ಹೂವಿಂದೆ ನಾರೂ ಮುಡಿಯನೇರಿತು-೧೦೪

೩. ಗಂಡ ಕೊಂಡಾಡಿದರೆ ಗುಂಡು ಪಾವನ-೧೧೨

೪. ನರಕವಿಲ್ಲುದಿದು ನಾಲಗೆ-೧೧೭

೫. ಡೊಂಕುಬಾಲ ನೆಟ್ಟಗಾಗುವುದೆ-೧೧೯

೬. ಬಿದಿರು ಎಳೆಯದಿರುವಾಗ ಬಗ್ಗುವುದಲ್ಲದೆ ಬಲಿತ ಮೇಲೆ ಬಗ್ಗೀತೆ? -೧೧೯

೭. ಉಪ್ಪು ತಿಂದಷ್ಟು ದಾಹ ತಪ್ಪದು-೧೧೮

೮. ಸ್ವಾನಕ್ಕೆ ಜ್ಞಾನ ಸಾಮ್ರಾಜ್ಯವೆಂತು-೧೨೦

೯. ಕುಲಕ್ಕೆ ಮೃತ್ಯು ಕೊಡಲಿಯ ಕಾವು -೧೨೮

೧೦. ಅನಿಷ್ಟಕ್ಕೆ ಶನಿಶ್ವರನೇ ಗುರಿ-೧೬೧

೧೧. ವಿಷಮಕ್ಕೆ ಸನ್ನಿಪಾತವೆ ಸಹಕಾರಿ-೧೭೦

೧೨. ಸಂಕಟಬಂದಾಗ ವೆಂಕಟರಮಣ-೧೭೭

೧೩. ಕಳ್ಳನ ಹೆಂಡತಿ ಎಂದಿದ್ದರೂ ಮುಣ್ಣಗೆ-೧೮೩

೧೪. ಕಳ್ಳನ ಜಾಡು ಕಳ್ಳನಿಗರಿವು-೧೮೩

೧೫. ಸಂಧಿಯಲ್ಲೊಂದು ಸಣ್ಣ ಸಂತರ್ಪಣೆ-೨೩೩

೧೬. ಪುರುಷರ ಉನ್ನತಿಗೂ ಅವನತಿಗೂ ಸ್ತ್ರೀಯರೆ ಕಾರಣರಲ್ಲವೆ-೨೩೪

ಭಾಷೆಯು ಮಾನವನ ಪ್ರಯತ್ನಪೂರ್ವಕ ಸಾಧನೆ. ಪರಸ್ಪರ ವಿನಿಮಯದ ಸಾಧನವು ಹೌದು. ವ್ಯವಹಾರಿಕ ಮಾಧ್ಯಮವು ಹೌದು. ಅದಕ್ಕೆ ಭಾಷೆ ಆಯಾ ಜನರ ಭಾವನೆ , ಆಲೋಚನಾಕ್ರಮ, ಚಿಂತನೆಗಳ ಅಭಿವ್ಯಕ್ತಿ ಅಧಿಕವಾಗಿರುವುದು. ಕಾಲ ಪ್ರದೇಶಗಳು ಭಿನ್ನವಾದಂತೆಲ್ಲ ವೈವಿಧ್ಯತೆ, ವಿಭಿನ್ನತೆಗಳು ಕಾಣಿಸಿಕೊಳ್ಳಲು ಪ್ರಾರಂಭಿಸುತ್ತವೆ. ಆ ವಿಭಿನ್ನತೆಗಳೆ ವೈಶಿಷ್ಟ್ಯತೆಗಳಾಗುವವು. ಇದು ಮೊದಲ ಘಟ್ಟದ ಕುಟುಂಬಗಳ ಭಾಷಾ ಜೀವಾಳವು ಹೀಗೆ ಅಭಿವ್ಯಕ್ತವಾಗಿದೆ. ಇಲ್ಲಿ ಕನ್ನಡದ ವಿವಿಧ ಭಾಗಗಳಲ್ಲಿ ಬರುವ ಜಾತಿ, ವರ್ಗಗಳ ಜನರು ದೈನಂದಿನ ಜೀವನದಲ್ಲಿ ಬಳಸುವ 'ನುಡಿಗಳು'. ಅಂದಿನ ಜನರ ಸ್ವಭಾವ

ಅರಿಯಲು ಸಹಾಯಕಾರಿಯಾಗಿದೆ. ಭಾಷೆಯ ಮುಖಾಂತರ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಅರಿಯಲು ಸಹಾಯಕಾರಿಯಾಗಿದೆ. ಒಂದು ಜನಸಮುದಾಯ ಆಶೆ ಆಕಾಂಕ್ಷೆ, ಕಾಮನೆ, ಚಿಂತನದಾಟಿ, ಸಾಮಾಜಿಕ ಸಮಸ್ಯೆಗಳ ಪ್ರತಿಫಲಿತವಾಗುತ್ತವೆ. ಪ್ರಾದೇಶಿಕ ವೈಶಿಷ್ಟ್ಯತೆ ತಲೆಮಾರುಗಳಿಂದ ಬಂದ ನೆಲೆ ವಾಸನೆಯ ವಿಶೇಷತೆಯನ್ನು ಪಡೆದುಕೊಂಡು ಜನಭಾಷೆಯನ್ನು ಅರಿಯಲು ಸಾಧ್ಯವಾಗುತ್ತದೆ.

ಕೆರೂರು ವಾಸುದೇವಾಚಾರ್ಯರ ಭಾಷೆಯಿಂದ ಪ್ರಾದೇಶಿಕತೆಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಲೇಖಕರ ಉತ್ತರ ಕರ್ನಾಟಕದ ಗ್ರಾಮ್ಯ ಭಾಷೆ ಹಾಗೂ ಮರಾಠಿ ಪ್ರಭಾವ ಕಂಡರೆ ಎಮ್.ಎಸ್. ಪುಟ್ಟಣ್ಣವರ ಕಾದಂಬರಿಗಳಲ್ಲಿ ಮೈಸೂರು ಭಾಗದ ಪ್ರಾದೇಶಿಕತೆ ಕಾಣುವುದು. ಗುಲ್ವಾಡಿ ವೆಂಕಟರಾಯ ಕಾದಂಬರಿಗಳಲ್ಲಿ ಕರಾವಳಿಯ ಪ್ರಭಾವ ಗೋಚರಿಸುವುದು. ಇಲ್ಲಿ ಭಾಷೆಯ ಬಳಕೆಗೆ ಗಾದೆ ಮಾತುಗಳು ಪಡೆನುಡಿ, ದ್ವಂದ್ವ ಉಕ್ತಿಗಳು, ದ್ವಿರುಕ್ತಿ, ಕೂಡು ಪದಗಳು ಹೇರಳವಾಗಿ ಬಳಕೆಯಾಗಿವೆ. ಧ್ವನಿಪೂರ್ಣತೆ, ಅರ್ಥವಂತಿಕೆ, ಗದ್ಯದ ಗಟ್ಟಿತನವೆಂದು ಹೇಳುತ್ತವೆ. ಕವಿತ್ವ ಶಕ್ತಿ ಅಲ್ಲಲ್ಲಿ ಅದು ಜನರ ಆಡು ಮಾತಿನದಲ್ಲಿದೆ. ಆಡುಮಾತಿನ ವ್ಯಂಗ್ಯ, ವಿನೋದ, ಛೇದನೆ ಉದ್ವೇಗಗಳಿಂದ ಕೂಡಿದ ರಸತ್ವ ಭಾಷೆ ಬಳಕೆಯಾಗಿದೆ.

ಮೊದಲ ಕಾದಂಬರಿಗಳು ಭಾಷಾ ವೈವಿಧ್ಯತೆಯಿಂದ ಕೂಡಿವೆ. ಇಂದಿರಾಬಾಯಿ ಕಾದಂಬರಿಯಲ್ಲಿ ಕೊಂಕಣಿ, ತುಳು ಮತ್ತು ಕನ್ನಡ-ಇಂಗ್ಲಿಷ್ ಭಾಷಾ ಮಿಶ್ರಣ ಕಂಡುಬರುವುದು. ಇಂದಿರಾ ಕಾದಂಬರಿಯಲ್ಲಿ ಉತ್ತರ ಕರ್ನಾಟಕದ ಗ್ರಾಮ್ಯ ಭಾಷಯೊಂದಿಗೆ ಮರಾಠಿ ಹಾಗೂ ಇಂಗ್ಲಿಷ್ ಸುಧಾರಣಾ ವಾದ ಭಾಷಾ ಪ್ರಯೋಗಗಳು ಕಾಣುವವು. ಹೀಗೆ ಶೃಂಗಾರ ಚಾತುರ್ಯೋಲ್ಲಾಸಿನಿ, ನಭಾ, ಸುಶೀಲೆ, ವಾಗ್ದೇವಿ, ಮಾಡಿದ್ದುಣ್ಣೋ ಮಹಾರಾಯ ಕೃತಿಗಳಲ್ಲಿ ಭಾಷಾವೈವಿಧ್ಯತೆ, ಭಿನ್ನ ಭಾಷಾ ಪ್ರಯೋಗ ಗುರುತಿಸಲಾಗಿದೆ. ಈ ಕಾಲದ ಕಾದಂಬರಿಕಾರರ ಸರಳ ತಿರ್ಮಾನಕ್ಕೆ ಅನುಗುಣವಾಗಿ ಭಾಷೆಯೂ ತೀರಾ ಸರಳವಾಗಿದೆ. ಕುತೂಹಲಕರ ಘಟನೆಗಳು ಭಾಷಾ ವೈವಿಧ್ಯತೆಯಿಂದ ಮೂಡಿಬಂದಿವೆ. ಅಲ್ಲಲ್ಲಿ ನೀರಸಗೊಂಡಿರುವುದು ಕಾಣುವುದು. ಕಾದಂಬರಿಯ ಕುತೂಹಲದ ತೀವ್ರತೆಯ ಭಾಷೆ ಈ ಕಾದಂಬರಿಗಳಲ್ಲಿ ಕಂಡು ಕಾಣದಂತಿದೆ.

ಅಡಿ ಟಿಪ್ಪಣೆಗಳು:

೧. ವಿಲಿಯಂ ಹೆನ್ರಿ ಹಡ್ಸನ್ ಮೂಲ, ಸಿ.ಪಿ.ಕೆ: ಅನುವಾದ, ಸಾಹಿತ್ಯ ಪ್ರವೇಶ. ಚೇತನಾ ಬುಕ್ ಹೌಸ್ -೨೦೦೯. ಪು-೯೭.

೨. ಭೈರಪ್ಪ ಎಸ್.ಎಲ್ – ಕಥೆ ಮತ್ತು ಕಥಾವಸ್ತು, ಸಾಹಿತ್ಯ ಭಂಡಾರ ಹುಬ್ಬಳ್ಳಿ-೧೯೬೯, ಪು.೧೨೪.

೩. ಗಿರಡ್ಡಿ ಗೋವಿಂದರಾಜ – ಕಾದಂಬರಿ ವಸ್ತು ಮತ್ತು ತಂತ್ರ-೧೯೭೮, ಪು.೧೦.

೪. ಗಿರಡ್ಡಿ ಗೋವಿಂದರಾಜ – ಕಾದಂಬರಿ ವಸ್ತು ಮತ್ತು ತಂತ್ರ-೧೯೭೮ ಪು.೧೧.

೫. ವಿಲಿಯಂ ಹೆನ್ರಿ ಹಡ್ಸನ್, ಅನುವಾದ : ಸಿಪಿಕೆ – ಸಾಹಿತ್ಯ ಪ್ರವೇಶ, ೨೦೦೯-೯೭.

೬. ವಿಲಿಯಂ ಹೆನ್ರಿ ಹಡ್ಸನ್, ಅನುವಾದ : ಸಿಪಿಕೆ – ಸಾಹಿತ್ಯ ಪ್ರವೇಶ, ೨೦೦೯-೯೮.

೭. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ-೨೦೧೧-ಪು.೧೦೨.

೮. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ-೨೦೧೧ ಪು.೨೦೯.

೯. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ ೨೦೧೧ ಪು.೯೮-೯೯.

೧೦. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ ೨೦೧೧. ಪು.೨೧೮-೨೧೯.

೧೧. ಕೆರೂರು ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೯೧.

೧೨. ಕೆರೂರು ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೯೧.

೧೩. ಕೆರೂರು ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೯೨.

೧೪. ಕೆರೂರು ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೧೧೯.

೧೫. ಕೆರೂರ ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೨೮೫.

೧೬. ಕೆರೂರು ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೩೦೩.

೧೭. ಕೆರೂರ ವಾಸುದೇವಾಚಾರ್ಯ-ಇಂದಿರಾ, ಪ್ರಕಟ-೧೯೭೮ ಪು.೧೧೧-೧೧೨.

೧೮. ಕೆರೂರ ವಾಸುದೇವಾರ್ಯ- ಸಂಪಾದಕ ಬಾಳಾಸಾಹೇಬ ಲೋಕಾಪುರ-೨೦೧೧ ಪು.೬೨.

೧೯. ಕೆರೂರ ವಾಸುದೇವಾರ್ಯ- ಸಂಪಾದಕ ಬಾಳಾಸಾಹೇಬ ಲೋಕಾಪುರ-೨೦೧೧ ಪು.೬೨. ಶ್ರೀರಾಮ ಇಟ್ಟಣ್ಣವರ ಅಧ್ಯಕ್ಷೀಯ ಸಮಾರೋಪ.

೨೦. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೋ ಮಹಾರಾಯ, ಪು.೮.

೨೧. ಸುಜಾತಾ ಎಚ್.ಎಸ್ – ಎಂ.ಎಸ್. ಪುಟ್ಟಣ್ಣವರ ಕಾದಂಬರಿಗಳು, ಪ್ರಕಟ–೨೦೦೬. ಪು.೫.

೨೨. ಪುಟ್ಟಣ್ಣ ಎಂ.ಎಸ್ – ಮಾಡಿದ್ದುಣ್ಣೋ ಮಹಾರಾಯ, ಪ್ರಕಟ–೨೦೧೧, ಪು.೧೩೯.

೨೩. ಮಂಗಳಾ ಟಿ.ನ – ನಂಜನಗೂಡು ತಿರುಮಲಾಂಬ, ಪ್ರಕಟ–೧೯೯೧, ಪು.೪೨.

೨೪. ನಂಜನಗೂಡು ತಿರುಮಲಾಂಬ ಸುಶೀಲೆ, ಪ್ರಕಟ–೧೯೧೩, ಪು–i-vi

೨೫. ಮಂಗಳಾ ಟಿ.ನ – ತಿರುಮಲಾಂಬ, ಪ್ರಕಟ–೧೯೯೧, ಪ್ರ.೪೩

೨೬. ಅಮೂರ ಜಿ.ಎಸ್ – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪ್ರಕಟ–೧೯೯೪. ಪ್ರ.೨೧.

೨೭. ಕೀರ್ತಿನಾಥ ಕುರ್ತುಕೋಟಿ, ವಿಮರ್ಶೆಯ ವಿನಯ ಕಾದಂಬರಿ, ಪ್ರಕಟ–೧೯೯೭, ಪು.೨೪

೨೮. ಶೇಷಗಿರಿರಾವ್ ಎಲ್.ಎಸ್ – ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ಪು.೭೩.

೨೯. ಹರಿಕೃಷ್ಣ ಭರಣ್ಯ – ಹೊಸಕನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಕಟ–೧೯೯೦, ಪು.೬೬.

೩೦. ಕೆರೂರ ವಾಸುದೇವಾಚಾರ್ಯ–ಇಂದಿರಾ, ಪ್ರಕಟ–೧೯೭೮, ಪು.೧೧೧–೧೧೨.

೩೧. ವಿವೇಕರೈ ಬಿ.ಎ – ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು ಸಂಗ್ರಹ, ಪ್ರಕಟ–೧೯೮೭, ಪು.೫೬.

೩೨. ವಿವೇಕರೈ ಬಿ.ಎ – ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು ಸಂಗ್ರಹ, ಪ್ರಕಟ–೧೯೮೭, ಪು.೫೬.

೩೩. ವಿವೇಕರೈ ಬಿ.ಎ – ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು ಸಂಗ್ರಹ, ಪ್ರಕಟ–೧೯೮೭, ಪು.೫೬.

೩೪. ಹರಿಕೃಷ್ಣ ಭರಣ್ಯ – ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ, ಪ್ರಕಟ–೧೯೮೭, ಪು.೬೭.

೩೫. ಅಮೂರ ಜಿ.ಎಸ್ – ಕನ್ನಡ ಕಾದಂಬರಿ ಬೆಳವಣಿಗೆ, ಪು.೧೦–೧೧.

೩೬. ನಾಯಕ ಜಿ.ಎಚ್ – ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಲೇಖನದಲ್ಲಿ.

೩೭. ಕೆರೂರ ವಾಸುದೇವಾಚಾರ್ಯರು – ಸಂ. ಬಾಳಾಸಾಹೇಬ ಲೋಕಾಪೂರ. ಪು.೨೯.
ಡಾ.ಗುರುಪಾದ ಮರಿಗುದ್ದಿಯವರ ಲೇಖನ.

೩೮. ವಿವೇಕರೈ ಬಿ.ಎ – ಕನ್ನಡ ಕಾದಂಬರಿಯ ಮೊದಲ ಹಜ್ಜೆಗಳು, ಪ್ರಕಟ–೧೯೮೭, ಪು.೧೪.

೩೯. ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಪ್ರಕಟ–೧೯೮೭. ಪು–೧೩೧ ಭಾಗೀರಥಿ ಪು–೧–೨

೪೦. ಬೆಳಗಲಿ ದು.ನಿಂ – ಕನ್ನಡದಲ್ಲಿ ಕಾದಂಬರಿ ಸಾಹಿತ್ಯ, ಪ್ರಕಟ–೧೯೭೫, ಪು.೩೦.

೪೧. ಗುರುಪಾದ ಮರಿಗುಡ್ಡಿ-ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ. ಪ್ರಕಟ-೧೯೮೯. ಪು.೧೮೭.

೪೨. ಪುಟ್ಟಣ್ಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪ್ರಕಟ-೨೦೧೧. ಪು.೧೧.

೪೩. ಪುಟ್ಟಣ್ಣ ಎಂ.ಎಸ್ - ಮಾಡಿದ್ದುಣ್ಣೋ ಮಹಾರಾಯ, ಪ್ರಕಟ-೨೦೧೧, ಪು.೪೫.

೪೪. ಶೇಷಗಿರಿರಾವ್ ಎಲ್.ಎಸ್ - ಕಾದಂಬರಿ ಸಾಮಾನ್ಯ ಮನುಷ್ಯ, ಪು.೭೬.

೪೫. ವಿವೇಕರೈ ಬಿ.ಎ - ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು-೨೨೨, ನಿಜಧನಿ ಪ್ರೊ.ಜಿ.ಹೆಚ್. ನಾಯಕ, ೧೯೮೮ ವರ್ಷ.

೪೬. ಗುರುಪಾದ ಮರಿಗುಡ್ಡಿ - ಸ್ವಾತಂತ್ರ್ಯ ಪೂರ್ವ ಕಾಲಿನ ಕಾದಂಬರಿಗಳು ಮತ್ತು ಇಂದಿರಾ ಕಾದಂಬರಿ ವಸ್ತು ಸ್ವರೂಪ, ಕೆರೂರು ವಾಸುದೇವಾಚಾರ್ಯ ಸಂ. ಬಾಳಾಸಾಹೇಬ ಲೋಕಾಪುರ, ಪ್ರಕಟ-೨೦೧೧.

೪೭. ವಿವೇಕರೈ ಬಿ.ಎ - ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಪುಟ.೧೬೦.

ಅಧ್ಯಾಯ – ೭

ಸಮಾರೋಪ ಮತ್ತು ಫಲಿತಗಳು

ಅಧ್ಯಾಯ - ೭

ಸಮಾರೋಪ ಮತ್ತು ಫಲಿತಗಳು

ಕಾದಂಬರಿ ಪ್ರಕಾರದ ಉಗಮ ಮತ್ತು ವಿಕಾಸದ ಹಿನ್ನೆಲೆಯಲ್ಲಿ ಸಾಮಾಜಿಕ ಸಂದರ್ಭಗಳನ್ನು ಗಮನಿಸುತ್ತಾ ಹೋದರೆ ಮೊದಲ ಹಂತದ ಸ್ವತಂತ್ರ ಕಾದಂಬರಿಗಳೆಲ್ಲವು ಸ್ತ್ರೀವಾಚಕವೆ. ಸ್ತ್ರೀ ವಿಚಾರಧಾರೆಯೊಂದಿಗೆ ಅತ್ಯಂತ ಗಾಢವಾಗಿ ತಟ್ಟುತ್ತವೆ. ಬಹುತೇಕ ಕಾದಂಬರಿಗಳು ಸ್ತ್ರೀ ಪಾತ್ರ, ಪ್ರಧಾನವಾದವುಗಳಾಗಿವೆ. ಸಂಕ್ರಮಣ ಕಾಲದ ಕಾದಂಬರಿಗಳು ಒಂದಲ್ಲ ಒಂದು ಬಗೆಯ ಮಹಿಳಾ ಪ್ರಧಾನವಾದವುಗಳು. ಮಹಿಳಾ ಚಿಂತನೆಗಳನ್ನು ಒಳಗೊಂಡಿರುವುದರಿಂದ ಸಾಮಾಜಿಕ ಸಂಘರ್ಷದ ನೆಲೆಗಳ ಹಿನ್ನೆಲೆಯಲ್ಲಿ ಕುತೂಹಲಕರ ಸಂಗತಿಗಳಿವೆ. ಸ್ತ್ರೀಪರ ನೆಲೆಯಷ್ಟೆ ಅಲ್ಲದೆ ಪುರುಷ ಪ್ರಧಾನ ಸಮಾಜದ ನಿಲುವಿನ ಅಭ್ಯಾಸವೂ ಅಲ್ಲಲ್ಲಿ ಕಾಣವುದು.

ಕಾದಂಬರಿ ಹುಟ್ಟು ಬೆಳವಣಿಗೆಗೆ ಸಂಬಂಧಿಸಿದಂತೆ ಪತ್ರಿಕೆಗಳ ಪಾತ್ರ ಮಹತ್ವದ್ದು. ಬದಲಾವಣೆಯಾಗುತ್ತಿದ್ದ ಯುಗದ ಸಾಮಾಜಿಕ ಚಿಂತನೆಯ ಕೇಂದ್ರವಾಗಿದ್ದ ಸ್ತ್ರೀಯ ಸ್ಥಿತಿಗತಿಗಳ ಕುರಿತು ವ್ಯಾಪಕವಾದ ಮತ್ತು ಸೂಕ್ಷ್ಮ ಸಂಗತಿಗಳನ್ನು ಬಿರುಸಾಗಿ ಆ ಪತ್ರಿಕೆಗಳಲ್ಲಿ ಚರ್ಚಿಸಿದ್ದಾರೆ. ಕನ್ನಡದ ಮೊದಲ ಸ್ವತಂತ್ರ ಕಾದಂಬರಿಗಳಲ್ಲಿ ಸ್ತ್ರೀ ಸುಧಾರಣೆ ಮತ್ತು ಸಾಮಾಜಿಕ ಸುಧಾರಣಾಪರ ನೆಲೆಯಲ್ಲಿ ಚರ್ಚೆನಡೆದ್ದಿದಿದೆ. ಸ್ತ್ರೀ ಸುಧಾರಣೆಯಲ್ಲಿ ಕೆಲವರು ಪಾಶ್ಚಾತ್ಯ ಮಾದರಿ ಸುಧಾರಣೆ ಬಯಸಿದರೆ ಕೆಲವರಿಗೆ ನಮ್ಮದೇ ಪ್ರಾಚೀನ ಪರಂಪರೆಯ ಪುನರುಜ್ಜೀವನವನ್ನು ಚಿತ್ರಿಸಿದ್ದಾರೆ. ಸೀತೆ ಸಾವಿತ್ರಿಯಂಥವರ ಆದರ್ಶವನ್ನು ಮೈಗೂಡಿಸಿಕೊಳ್ಳುವುದೇ ಕೆಲವರಿಗೆ ಸುಧಾರಣೆ. ಮತ್ತೆ ಕೆಲವರಿಗೆ ನಮ್ಮ ಪರಂಪರೆಯ ಹಾಗೂ ಪಾಶ್ಚಿಮಾತ್ಯ ಸಮನ್ವಯದಿಂದ ಮೂಡಿದ ಸ್ವರೂಪವೇ ಸುಧಾರಣೆ ಎಂಬ ಅಭಿಪ್ರಾಯಗಳ ತಿಕ್ಕಾಟದ ಪ್ರತಿಧ್ವನಿ ಕಾದಂಬರಿಗಳಲ್ಲಿ ಬಂದಿದೆ.

ಕನ್ನಡದ ಮೊದಲ ಕಾದಂಬರಿಗಳಲ್ಲಿ ಅನುವಾದಿತ ಕಾದಂಬರಿಗಳು ಪ್ರಮುಖಸ್ಥಾನವನ್ನು ಪಡೆದಿವೆ. ಸ್ವತಂತ್ರ ಕಾದಂಬರಿಗಳು ರೂಪುಗೊಳ್ಳುವುದಕ್ಕೆ ಮೊದಲು ಕನ್ನಡದಲ್ಲಿ ಮರಾಠಿ ಹಾಗೂ ಬಂಗಾಳಿ ಕಾದಂಬರಿಗಳ ಅನುವಾದಗಳು 'ಕಾದಂಬರಿ' ಕ್ಷೇತ್ರವನ್ನು ವಿಸ್ತರಿಸಿದವು. ಪುರಾಣ ಇತಿಹಾಸದ ಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಸಮಕಾಲೀನ ವಿದ್ಯಮಾನಗಳಿಗೆ ಸಾಂದರ್ಭಿಕವಾಗಿ ಸ್ಪಂದಿಸುತ್ತಾ ಬೆಳೆದ ಸಂಗತಿಗಳು ಕಾದಂಬರಿಗಳಲ್ಲಿ ಕಾಣುತ್ತೇವೆ. ಪುರಾಣ ಐತಿಹಾಸಿಕ ಸ್ತ್ರೀಯರ ಆದರ್ಶ ಪಾತ್ರಗಳನ್ನು ಪ್ರಚುರಪಡಿಸುವ ಉದ್ದೇಶದೊಂದಿಗೆ ಪಾಶ್ಚಾತ್ಯ ಸ್ತ್ರೀ ಮಾದರಿಗಳಿಗೆ ಭಾರತೀಯತೆಯನ್ನು ಪುನಃ ಸ್ಥಾಪಿಸುವುದಾಗಿದೆ. ಸಮಕಾಲೀನ ಸನ್ನಿವೇಶಗಳಿಗೂ, ಸ್ಪಂದಿಸಿದ ಕಾರಣದಿಂದ ಈ ಹಂತದ

ಕಾದಂಬರಿಗಳ ವಿಷಯ ವಸ್ತು ಪ್ರಾಧಾನ್ಯತೆಯನ್ನು ಹೆಚ್ಚು ಪಡೆದುಕೊಂಡವು. ಕನ್ನಡ ಕಾದಂಬರಿಯ ಮೊದಲ ಘಟ್ಟದಲ್ಲಿ ಮಹಿಳಾಪರ ಚಿಂತನೆ ಇರುವದರಿಂದ ಮಾನದಂಡವಾಗಿಟ್ಟುಕೊಂಡು ಸಾಮಾಜಿಕ ಸಂಘರ್ಷವನ್ನು ಪರಿಶೀಲಿಸಲಾಗಿದೆ. ಈ ಅಧ್ಯಯನದಲ್ಲಿ ಕಂಡುಕೊಂಡ ಸಂಗತಿಗಳು ವೈಶಿಷ್ಟ್ಯಪೂರ್ಣವಾಗಿವೆ.

ಭಾರತೀಯ ಸಂದರ್ಭದಲ್ಲಿ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳು ಮಹತ್ವದ್ದಾಗಿವೆ. ಈ ಕಾಲದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಸಂಪರ್ಕ ಭಾರತೀಯ ಭಾಷೆಗಳಿಗೆ ಒದಗಿ ಬಂದಿತು. ಈ ವಿಷಯದಲ್ಲಿ ಕನ್ನಡ ಭಾಷೆಯು ಹೊರತಾಗಿಲ್ಲ. ಇಂಗ್ಲಿಷ್ ಭಾಷೆಯ ಸಂಪರ್ಕದಿಂದ ಕಥೆ, ಕಾದಂಬರಿಯಂತಹ ಗದ್ಯ ಸಾಹಿತ್ಯ ಪ್ರಕಾರಗಳು ಕನ್ನಡ ಭಾಷೆಯಲ್ಲಿ ರೂಪಗೊಂಡವು. ಕಾದಂಬರಿ ಪ್ರಕಾರವು ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಜನಪ್ರಿಯ ಮಾಧ್ಯಮವಾಗಿ ಬೆಳೆಯಲು ಸಾಧ್ಯವಾಯಿತು. ಸಂಸ್ಕೃತಿ ಮತ್ತು ಸಾಮಾಜಿಕ ದೃಷ್ಟಿಯಿಂದ ಈ ಮೊದಲ ಹಂತದ ಕಾಲಘಟ್ಟವನ್ನು ಬದಲಾವಣೆಯ ಕಾಲವೆನ್ನಬಹುದು. ಹೊರಗಿನ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಭಾರತೀಯ ಪಾರಂಪರಿಕ ಜೀವನದ ಮೇಲೆ ಪ್ರಭಾವ ಬೀರಿದುದರಿಂದಾಗಿ ಇಲ್ಲಿ ಹೊಸ ಆವಿಷ್ಕಾರಗಳು, ಮನ್ವಂತರಗಳು ತಲೆದೋರಿದವು. ಈ ಸಮಯದಲ್ಲಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಸಮಾಜದ ಆಗು ಹೋಗುಗಳನ್ನು ತಿದ್ದುವ ಮತ್ತು ಮುನ್ನಡೆಸುವ ಚಿಂತನೆಗಳು ಪ್ರಕಟವಾಗಿವೆ. ಈ ಹಿನ್ನೆಲೆಯಲ್ಲಿ ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಸ್ತ್ರೀ ಸಮಾಜದ ಅವಿಭಾಜ್ಯ ಅಂಗವಾಗಿರುವುದರಿಂದ ಕನ್ನಡದ ಮೊದಲ ಘಟ್ಟದ ಕಾದಂಬರಿಗಳಿಂದ ಸಾಮಾಜಿಕ ಸ್ಥಿತ್ಯಂತರಗಳ ಕುರಿತು ಅಧ್ಯಯನಕ್ಕೆ ಅತ್ಯಂತ ಯೋಗ್ಯವಾಗಿವೆ. ಅವುಗಳಲ್ಲಿ ಬಹುಪಾಲು ಸ್ತ್ರೀಯರ ಸಮಸ್ಯೆಗಳಿಗಾಗಿ ಬರೆದ ಕಾದಂಬರಿಗಳಂತಿವೆ.

ಪಾಶ್ಚಿಮಾತ್ಯ ಜಗತ್ತಿನಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ಮಧ್ಯಮ ವರ್ಗದ ಸ್ತ್ರೀಯರಿಗೆ ಸಾಕಷ್ಟು ಬಿಡುವು ದೊರೆಯುವುದರಿಂದ ಆ ಬಿಡುವು ದುರುಪಯೋಗ ಪಡಿಸಿಕೊಳ್ಳಬಹುದೆಂಬ ಆತಂಕ ಇಲ್ಲಿ ಕಾಡುವುದು. ಅದಕ್ಕೆ ನೈತಿಕ. ಲೌಕಿಕ ಶಿಕ್ಷಣದ ಬಗ್ಗೆ ವಿಶೇಷ ಕಾಳಜಿ ಮಾಡಿ ಅನೇಕ ಪುಸ್ತಕ ಕೃತಿಗಳು ಪ್ರಕಟಗೊಂಡವು. ಸ್ತ್ರೀ ಶಿಕ್ಷಣವು ಅವಳ ನೈತಿಕ ಚಾರಿತ್ರ್ಯವನ್ನು ಉತ್ತಮಗೊಳಿಸಲು ಉತ್ತಮ ಮಾತೆಯಾಗಲು ಎಂಬ ಮಿತಿಯ ಒಳಗೆ ಪತ್ರಿಕೆಗಳು ಪ್ರಭಾವಕಾರಿ ಪರಿಣಾಮ ಬೀರಿದವು.

ಮೊದಲು ಕಾದಂಬರಿ 'ಮಹಿಳಾ ಪ್ರಕಾರ' ಸಾಹಿತ್ಯವೆಂಬ ಹೆಸರು ಪಡೆಯಿತು. ಇದು ನೇರವಾಗಿ ಮಹಿಳೆಯರ ಮೇಲೆ ಪ್ರಭಾವ ಬೀರಿದ್ದೆ ಇದಕ್ಕೆ ಕಾರಣ. ಸ್ತ್ರೀ ಬದುಕಿನ ಬದಲಾವಣೆ ಪ್ರತಿಬಿಂಬವೆಂಬಂತೆ ಅದು ಕಾರ್ಯನಿರ್ವಹಿಸಿತು. ಕಾಲಕ್ಕನುಗುಣವಾಗಿ ಪುರುಷರು ಬದಲಾದಂತೆ ಸ್ತ್ರೀಯರಿಗೂ

ಬದಲಾವಣೆಗೆ ಅವಕಾಶ ಸಿಗಬೇಕೆಂಬ ವಾದವನ್ನು ಪುರುಷರು ಪ್ರತಿಪಾದಿಸಿದರು. ಅವರಿಗೆ ಆ ಸ್ಥಾನಮಾನ ಸಿಗದಿದ್ದರೆ ಅವರೇ ಅದನ್ನು ಪಡೆಯಲು ಪ್ರಯತ್ನ ಪಡುವರು ಎಂದು ಸ್ತ್ರೀ ಸ್ವಾತಂತ್ರ್ಯಪರ ಮುನ್ನೋಟವು ಇಲ್ಲಿ ವ್ಯಕ್ತವಾಗಿರುವುದು. ವಿಧವಾ ವಿವಾಹ, ಬಾಲ್ಯ ವಿವಾಹದ ಪ್ರೋತ್ಸಾಹ, ಪ್ರೌಢವಿವಾಹದ ಸಮರ್ಥನೆ ಭಾರತೀಯ ಸಂದರ್ಭಕ್ಕೆ ವಿಶಿಷ್ಟವಾಗಿತ್ತು. ಇವುಗಳ ಖಂಡನೆ, ಸಮರ್ಥನೆಗಳಲ್ಲಿ ಶಾಸ್ತ್ರಾಧಾರಗಳ ಬಳಕೆ ವಿಶೇಷವಾಗಿತ್ತು. ಹಲವಾರು ಪತ್ರಿಕೆಗಳಲ್ಲಿ 'ಬಾಲ್ಯವಿವಾಹ ಖಂಡನ' ಕುರಿತು ಲೇಖನಗಳು ಪ್ರಕಟವಾಗಿದ್ದವು. ಮುಂಬಯಿಯ ವಿಧವಾವಿವಾಹ ವಾರ್ಷಿಕೋತ್ಸವ ನಡೆದ ಸಂಗತಿ ಜನರ ಸಹಾನುಭೂತಿಯನ್ನು ಗಳಿಸಲು ಪ್ರಯತ್ನಿಸಿದೆ. ಬಾಲವಿಧವೆಯರ ಅನಾಥ ಸ್ಥಿತಿಯನ್ನು ಸಾರುವ ಪತ್ರಿಕಾ ಪ್ರಕಟಣೆಗಳು ಗ್ರಾಮ ಗ್ರಾಮಗಳಿಗೂ ತಲುಪಿಸುವ ಪ್ರಚಾರ ತಂತ್ರವನ್ನು ಕೈಗೊಂಡಿದ್ದರು. ಬಾಲವಿಧವೆಯಾದ ಮಗಳ ಬಲತ್ಕಾರದ ಕೇಶ ಮುಂಡನ ಇಂದಿರಾಬಾಯಿ, ನಭಾ, ಕಾದಂಬರಿಗಳಲ್ಲಿ ಇದೆ. ತಂದೆ, ತಾಯಿ, ಸಂಬಂಧಿಕರು ಇದಕ್ಕೆ ಒತ್ತಾಯ ಪಡಿಸಿದ ಉದಾಹರಣೆಗಳಿವೆ. ಇದಕ್ಕೆ ಪರಿಹಾರ ಕಾಣುವ ರೀತಿಯಲ್ಲಿ ಈ ಕಾದಂಬರಿಗಳು ವಿಷಯ ಸಂಕಲಿಸಿವೆ.

ವಿಧವಾ ವಿವಾಹವನ್ನು ಸಮರ್ಥಿಸುವಾಗ ಆಕೆ ಗರ್ಭದಾನವಾಗಿರುವ ವಿಧವೆ ಎನ್ನುವದು ಮುಖ್ಯವಾಗಿತ್ತು. ಮಾತೆಯಾದವರ ಅಸಮ್ಮತಿಯ ಧೋರಣೆಯೇ ಸಾಮಾನ್ಯ ಅಭಿಪ್ರಾಯವಾಗಿತ್ತು. ಇಂತಹ ಸಂಗತಿಗಳು ರಾಷ್ಟ್ರಮಟ್ಟದ ಸುಧಾರಕರ ಪ್ರಗತಿಪರಚಿಂತನೆಗಳು ಪತ್ರಿಕಾ ಮಾಧ್ಯಮದ ಮೂಲಕ ಕನ್ನಡಿಗರ ಗಮನ ಸೆಳೆದವು. ಪಂಡಿತ ರಮಾಬಾಯಿ, ಸರಸ್ವತಿಯವರ "ಸ್ತ್ರೀಧರ್ಮನೀತಿ" ಮರಾಠಿ ಕೃತಿಯು ಕನ್ನಡ ಸೇರಿದಂತೆ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡು ಜನಪ್ರಿಯ ಕೃತಿಯಾಗಿ ಹೊಸ ಯುಗಕ್ಕೆ ಹೊರಳುವ ಸ್ತ್ರೀಯರಿಗೆ ಸ್ತ್ರೀಧರ್ಮ ನೀತಿ ಬೋಧಿಸುವ ಮಹತ್ವದ ಕೃತಿಯಾಗಿದೆ. ಗೃಹಿಣಿ ಧರ್ಮನೆನಪಿಸುವ, ಸ್ವೀಕರಿಸುವ 'ಹೆಂಡತಿಯ ಕರ್ತವ್ಯ' ದಂತಹ ಗ್ರಂಥಗಳು ನವೀನ ಶಿಕ್ಷಣದ ಪರಿಣಾಮವಾಗಿ ಅಲ್ಲಲ್ಲಿ ಕಾಣಿಸುತ್ತಿದ್ದ ಅವಿವಾಹಿತೆಯನ್ನು ಗಮನದಲ್ಲಿಟ್ಟುಕೊಂಡ 'ಅವಿವಾಹಿತರ ಸಮಸ್ಯೆ' ಯಂತಹ ಗ್ರಂಥಗಳು ಬೆಳಕು ಕಂಡಿವೆ. ಇಂತಹ ಕೃತಿಗಳ ಪ್ರಭಾವದಿಂದ ಸೂರ್ಯಕಾಂತ, ಇಂದಿರಾಬಾಯಿ, ಇಂದಿರಾ, ವಾಗ್ದೇವಿ, ಮಾಡಿದ್ದುಣ್ಣೋ ಮಹಾರಾಯ ನಭಾ, ಸುಶೀಲೆ, ವೀರಾಗಿಣಿ, ಮಾತೃನಂದಿನಿಯಂತಹ ಕೃತಿಗಳು ಬೆಳಕಿಗೆ ಬಂದು ಕಂಡು ಸಾಮಾಜಿಕ ಸುಧಾರಣೆಯ ಸಂಗತಿಗಳು ಪ್ರಯೋಗಶೀಲವಾದವು.

'ಸೂರ್ಯಕಾಂತ' ಕಾದಂಬರಿಯ ನಾಯಕನು ವಿದ್ಯಾಭ್ಯಾಸಕ್ಕಾಗಿ ಬೇರೆಡೆ ಹೋಗುವ ವೇಳೆ ವಿದ್ಯಾವಂಚಿತಳಾದ ತಂಗಿಯೊಡನೆ ತಂದೆಗೆ ಹೇಳಿ ಓದು ಬರಹ ಕಲಿತುಕೋ ಎಂಬ ಉಪದೇಶವು ಸ್ತ್ರೀ ಶಿಕ್ಷಣ ದೃಷ್ಟಿಯಿಂದ ಗಮನಾರ್ಹವಾದದ್ದು. ಹಿಂದಿನ ತಲೆಮಾರಿಗೆ ಮಿಷಟಾರಿಕ ಶಿಕ್ಷಣಕ್ಕೆ ಹೆಚ್ಚು ಅರ್ಹಳಲ್ಲ

ಎಂಬ ಭಾವನೆ ಇದ್ದರೆ ಅದರ ಮುಂದಿನ ತಲೆಮಾರಿನಲ್ಲಿ ಆದ ಒಳ್ಳೆಯ ಬದಲಾವಣೆಗಳನ್ನು ಕಾಣಬಹುದಾಗಿದೆ. ಸ್ತ್ರೀ ಎಂಬ ಕಾರಣಕ್ಕೆ ವಿದ್ಯಾವಂಚಿತರಾದ ಸಹೋದರಿಯರ ಬಗ್ಗೆ ಸಹಾನುಭೂತಿಯನ್ನೂ ಅಲ್ಪ ಸ್ವಲ್ಪ ಪ್ರೋತ್ಸಾಹದ ಧೋರಣೆಯನ್ನು ಕಾಣಬಹುವುದು.

ದಕ್ಷಿಣ ಕನ್ನಡದ ಸಾರಸ್ವತ ಸಮಾಜದಲ್ಲಿ ಸುಧಾರಣೆಯ ಅಲೆ ತೀವ್ರವಾಗಿತ್ತು. ಮಂಗಳೂರಲ್ಲಿ ೧೮೭೦-೮೦ರ ಸುಮಾರಿಗೆ ಬ್ರಹ್ಮ ಸಮಾಜದ ಕಾರ್ಯ ಚುರುಕಾಗಿತ್ತು. ಸುಧಾರಣಾ ಪರವಾದ ಉಪಾಸನಾ ಸಮಾಜ, ಥಿಯೋಸೊಫಿಕಲ್ ಸೊಸೈಟಿಗಳು ಕ್ರಿಯಾಶೀಲವಾಗಿದ್ದವು. ಗುಲ್ವಾಡಿ ವೆಂಕಟರಾಯರು, ಸುಧಾರಣಾ ಮನೋಧರ್ಮಕ್ಕೆ ಕಾದಂಬರಿ ಮಾಧ್ಯಮವನ್ನು ಆರಿಸುವಾಗ ವಿಡಂಬನಾ ತಂತ್ರದ ಬಳಕೆಗೆ ಬಹುಜನರು ಅಚ್ಚರಿಯನ್ನು ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕೆ ಗುಲ್ವಾಡಿಯವರನ್ನು 'ಕನ್ನಡದ ವೀರೇಶಲಿಂಗ ಪಂತಲು' ಆಗಿ ಗುರುತಿಸುವುದು. 'ಇಂದಿರಾಬಾಯಿ' ಕಾದಂಬರಿಯ ಕೇಂದ್ರ ಆಶಯ 'ವಿಧವಾವಿವಾಹ'. ಅದಕ್ಕೆ ಪೂರಕವಾದ ವಿಧವೆಯ ಅನೈತಿಕ ಬಾಳು, ಸಂತಮಂಡಳಿಯ ಪ್ರಸಂಗ, ವೇಶ್ಯೆಯರೆನಿಸಿಕೊಂಡು ಲೋಲುಪರಾಗಿ ಮೆರೆಯುವ ಯುವತಿಯರ ಬಾಳು ಸಮಾಜ ವಿಮರ್ಶೆಯಾಗಿ ಬಂದಿದೆ. ಉತ್ತರ ಕರ್ನಾಟಕದ ಸುಧಾರಣಾಪರ ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣ ಸಮಾಜಸೇವೆಯ ಕುರಿತು ಕರ್ವೆಯವರ ಚಿಂತನೆ ಪ್ರತಿಫಲಿಸಿದೆ.

ಸುಧಾರಣಾವಾದಿ ದ್ವಂದ್ವ ನಿಲುವು ಪ್ರಕಟವಾಗಿರುವ ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಯಲ್ಲಿ ವಿಧವಾ ವಿವಾಹ, ಸ್ತ್ರೀ ಸ್ವಾತಂತ್ರ್ಯ ಮುಂತಾದ ನವೀನ ವಿಚಾರಗಳ ಬಗ್ಗೆ ವ್ಯಂಗ್ಯದ ದೃಷ್ಟಿಕೋನವಿದೆ. ಕರ್ವೆಯವರ 'ವಿಧವಾ ಮಹೋದದಿ'ಯಲ್ಲಿ ಕಲಿತು ಬಂದ ಕಮಲಾ ಹಾಗೂ ಮೂರು ಬಾರಿ ಮದವೆಯಾದ ಪಂಡಿತ ರಾಧಾಬಾಯಿ ವ್ಯಂಗ್ಯಚಿತ್ರಗಳಂತೆ ಚಿತ್ರಿತವಾಗಿದ್ದಾರೆ. ಪಂಡಿತ ರಾಧಾಬಾಯಿಯ ಪಾತ್ರ ಚಿತ್ರಣದಲ್ಲಿ ಸುಧಾರಕಿ ಪಂಡಿತ ರಮಾಬಾಯಿ ಸರಸ್ವತಿ ಪಾತ್ರದ ಮಾದರಿ ಲೇಖಕರ ಮನದಲ್ಲಿತ್ತು ಎಂದು ಊಹೆ ಮಾಡಬಹುದಾಗಿದೆ. ವೀರೇಶ ಲಿಂಗಂಪಂತಲು, ವೆಂಕಟರಂಗೋ ಕಟ್ಟಿ, ಪಂಡಿತ ರಮಾಬಾಯಿ. ಮುಂತಾದ ಸುಧಾರಣಾವಾದಿಗಳ ವ್ಯಂಗ್ಯದ ಲೇವಡಿಯ ನಿಲುವು ಕಾದಂಬರಿಯಲ್ಲಿ ಪ್ರಕಟಗೊಂಡಿದೆ.

ರಮಾಕಾಂತ ಇಂದಿರೆಯವರ ಪ್ರಣಯದಲ್ಲಿ ಚಾರುದತ್ತ ವಸಂತ ಸೇನರ ಪ್ರಣಯದ ಸೂಕ್ಷ್ಮವನ್ನು ಕಾಣಲು ಸಾಧ್ಯವಾಗುತ್ತದೆ. ಕಾದಂಬರಿ ಕುರಿತಾದ ಪಾಶ್ಚಿಮಾತ್ಯ ಕಲ್ಪನೆ ಮತ್ತು ದೇಶೀಯತೆಯ ಪ್ರಣಯ ಕಥೆಯ ಮಾದರಿಯಲ್ಲಿ ಹದವರಿತು ಸಮನ್ವಯಗೊಳಿಸಲಾಗಿದೆ. ಈ ಕೃತಿಯಿಂದ ಕರ್ನಾಟಕದಲ್ಲಿ ಮಹಾರಾಷ್ಟ್ರದಷ್ಟು ನವೀನ ಸುಧಾರಣೆ ಕಾಣದಿರುವ ಸಂಗತಿಗಳಿವೆ. ಕಾದಂಬರಿಯಲ್ಲಿ ಪಾಶ್ಚಾತ್ಯಮಾದರಿ ಸುಧಾರಣೆಗೆ ತೀವ್ರ ಪ್ರಗತಿಯೇ ಇರುವ 'ಸುಧಾರಣಾಮುಖಿ' ಉದ್ದೇಶ ಆರ್ಯ ಮಹಿಳೆಯ

ಆದರ್ಶವನ್ನು ಸ್ಥಾಪಿಸುವುದು. ಮನುಸ್ಮೃತಿಗೆ ತಿದ್ದುಪಡಿ ಮಾಡಿ ಅಭಿನವಮನುಸ್ಮೃತಿ ಹಾಗೂ ಇತರ ಧರ್ಮ ಸ್ಮೃತಿ ಗ್ರಂಥಗಳನ್ನು ಸಮಾಜ ಜೀವನಕ್ಕೆ ಕೈಪಿಡಿಗಳಾಗಿ ತರಬೇಕೆಂಬ ಅಭಿಪ್ರಾಯ ವ್ಯಕ್ತವಾದಂತೆ ಕಾಣುವುದು. ದೇಶಿಯತೆಯ 'ಆರ್ಯಮಹಿಳೆ' ಎಂಬ ಪರಿಕಲ್ಪನೆ 'ಭಾರತ ಮಹಿಳೆ' ಕಲ್ಪನೆಗೆ ಅಭೇಧವಾಗಿ ಸಂವಾದಿಯಾಗಿ ಬಂದಂತಿದೆ. ಸುಧಾರಣೆಯ ಚಟುವಟಿಕೆಗಳನ್ನು ವ್ಯಂಗ್ಯದಿಂದ, ಅನುಮಾನದಿಂದ, ದ್ವೇಷದಿಂದ ಕಂಡ ಕೃತಿಗಳು ಅಂದಿನ ಕಾಲಘಟ್ಟದಲ್ಲಿ ಹೆಚ್ಚು ಉತ್ತರ ಕರ್ನಾಟಕದಲ್ಲಿ ಚರ್ಚಿತವಾಗಿವೆ.

ಹೊಸಗನ್ನಡದ ಆರಂಭದ ಕಾದಂಬರಿಕಾರರಲ್ಲಿ ಸಾಂಪ್ರದಾಯಿಕ ಧೋರಣೆಯುಳ್ಳ ಎಂ.ಎಸ್. ಪುಟ್ಟಣ್ಣನವರು 'ಮಾಡಿದ್ದುಣ್ಣೋ ಮಹಾರಾಯ' ಬಹು ಮಹತ್ವದ ಕೃತಿ. ದೇಶಿಯತೆಯ ಪ್ರತಿಪಾದನೆ, ಒಳಿತು-ಕೆಡುಕಿನ ಮಾರಾಮಾರಿ ಪ್ರಯೋಗಗಳ ಪ್ರತಿಬಿಂಬವಿದೆ. ಕಥನದಲ್ಲಿ ಸಾಮಾಜಿಕ, ಪೌರಾಣಿಕ ಅಂಶಗಳನ್ನು ಮೇಳೈಸಿದ್ದಾರೆ. ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಬರುವ ಆದರ್ಶ ಪಾತ್ರಗಳು ಧರ್ಮವನ್ನು ಪರಿಪಾಲಿಸುವ ಪಾತ್ರಗಳು. ಸೀತೆಯ ಪತಿವ್ರತಾ ಧರ್ಮದ ಕಲ್ಪನೆಯ ಬೇರುಗಳು ಇಳಿದಿರುವುದು ಸಾಂಪ್ರದಾಯಿಕ ಭಾರತದಲ್ಲಿ ಮಾತ್ರ. ಇದರಿಂದಲೆ ಕೇಡಿನ ಪರಿಕಲ್ಪನೆ ಸಾಧ್ಯವಾಗಿರುವುದು. ಧರ್ಮಚ್ಯುತಿಯಲ್ಲಿಯೇ ಕೇಡಿನ ಮೊಳಕೆಯು ಇರುವುದು. ಹಳೆಯ ಸಾಮಾಜಿಕ ಸಂಬಂಧಗಳು ತೀವ್ರವಾಗಿ ಬದಲಾಗುತ್ತಿರುವುದನ್ನು ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಪ್ರತಿಪಾದಿಸುವುದು.

ಹಳೆಯ ಮೈಸೂರಿನಿಂದ ಬರೆದ ಪುಟ್ಟಣ್ಣನವರು ಸಹಜವಾಗಿ ಸಂಪ್ರದಾಯವಾದಿ ನಿಲುವು ಪ್ರತಿಪಾದಿಸಿದ್ದಾರೆ. 'ಆದರ್ಶ'ದ ನ್ಯಾಯಬದ್ಧ ಪರಿಶೀಲನೆ, ಸಾಮಾಜಿಕ ಪರಿಸ್ಥಿತಿಯ ಎಲ್ಲಾ ಗೊಂದಲಗಳೊಡನೆ ಬೆಳೆದ ವಿವರವಾದ ಚಿತ್ರಣವಿದೆ. ಬ್ರಿಟಿಷ್ ಆಡಳಿತವು ಮಹಾರಾಜರ ಆಡಳಿತದ ಮೂಲಕ ಅನುಭವಕ್ಕೆ ಬಂದಿತು. ಬದಲಾವಣೆಯನ್ನು ಸಾರಾಸಗಟಾಗಿ ತಿರಸ್ಕರಿಸುವುದು ಪುಟ್ಟಣ್ಣನವರ ಉದ್ದೇಶವಾಗಿರಲಿಲ್ಲ. ಅವರದು ವಿದ್ಯಾವಂತ ಮನಸ್ಸು. ಆಧುನಿಕ ಪರಿವರ್ತನೆಗೆ ತೆರೆದು ಕೊಂಡಿರುವಂತಹದ್ದು. ಹಳೆಯ ಸಮಾಜದಲ್ಲಿ ಸ್ಥಾಪಿತವಾಗಿದ್ದ 'ಸಮತೋಲನವನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡಿರುವಂತಹದ್ದು. ಆದ್ದರಿಂದಲೇ ಹೊಸ ಪರಿವರ್ತನೆಗಳು 'ಧರ್ಮಚ್ಯುತಿ' ಯಂತೆ ನಿರೂಪಿತವಾಗಿದೆ.

ಕನ್ನಡ ಸಾಹಿತ್ಯದ ಆರಂಭದ ಕಾದಂಬರಿಕಾರರಲ್ಲಿ ಬೋಳಾರು ಬಾಬುರಾಯರ ವಾಗ್ದೇವಿ ಮಹತ್ವದ ಕೃತಿ. ಮುಗ್ಧ ಪ್ರೇಮದಿಂದ ತೊಡಗಿ, ಹಾದರ, ಮಠಗಳಲ್ಲಿನ ಅನಾಚಾರ, ಅತ್ಯಾಚಾರ, ಭ್ರಷ್ಟತನ, ಸ್ತ್ರೀ ಅಧಿಕಾರಲಾಲಸೆ, ಪಶ್ಚಾತಾಪದ ನೆರಳಿಗೆ ಹೊರಳುವುದೆ ಇದರ ವಿಷಯ ವಸ್ತು.

"ವಾಗ್ದೇವಿಯ ವಾಗ್ದಾನವನ್ನು" ಪೂರೈಸುವುದಾಗಿ ಪ್ರಮಾಣ ಮಾಡಿದ ಚಂಚಲನೇತ್ರ ಶ್ರೀ ಪಾದಂಗಳವರ ಆದೇಶದಂತೆ ವಾಗ್ದೇವಿಯ ಇಡೀ ಕುಟುಂಬ ಮಠದಲ್ಲಿ ನೆಲೆ ನಿಲ್ಲುವದು. ಸನ್ಯಾಸಿ ಚಂಚಲನೇತ್ರರು ಈವರೆಗಿನ ಸನ್ಯಾಸಕ್ಕೆ ತಿಲಾಂಜಲಿಯಿತ್ತು ವಾಗ್ದೇವಿಯೊಂದಿಗೆ ಬೆರೆತು, ಭೋಗಜೀವನದಲ್ಲಿ ತೃಪ್ತರಾಗುತ್ತಾರೆ. ವಾಗ್ದೇವಿ ಮೇಲಿನ ವ್ಯಾಮೋಹಕ್ಕಾಗಿ ಮತ್ತು ಅವಳನ್ನು ಮೆಚ್ಚಿಸಲಿಕ್ಕಾಗಿ ಹಣವನ್ನು ನೀರಿನಂತೆ ವ್ಯಯ ಮಾಡುತ್ತಾರೆ. ಇಷ್ಟಲ್ಲದೆ ಮಠದ ಆಡಳಿತವೇ ವಾಗ್ದೇವಿ ಪರಿಧಿಗೆ ಬರುವುದು. ಪತಿ ಅಬಾಚಾರ್ಯನಿದ್ದರೂ, ಮೈಮನಸನ್ನು ನೀಡಿ ನಿಜವಾದ ಗಂಡನೆಂದು ಒಪ್ಪಿದ್ದು ಚಂಚಲನೇತ್ರರನ್ನು. ಸಮಾಜದ ದೃಷ್ಟಿಗಾಗಿ ಗಂಡನಿಗೆ ತಗ್ಗಿ ಬಗ್ಗಿ ನಡೆಯುವಂತೆ ನಟಿಸುತ್ತಾಳೆ. ಈ ಸುದ್ದಿ ನಂತರ ಸರ್ವರಿಗೂ ತಿಳಿದು ಸೂರ್ಯನಾರಾಯನನ್ನು ಪೀಠಾಧಿಪತಿ ಮಾಡಲು ಚಂಚಲನೇತ್ರರು ಒಪ್ಪದಿರುವುದು, ಮುರಿದ ಒಪ್ಪಂದ ನಂತರ ಶೃಂಗಾರಿಗೆ ತನ್ನ ಗುಣಾವಗುಣ ಧಾರೆಯೆರೆವಳು. ಕೊನೆಗೆ ವಾಗ್ದೇವಿ ಪಶ್ಚಾತಾಪದಿಂದ ಸಾವಿಗೆ ಶರಣಾದಾಗ ಮಗನೆ ಕಾಪಾಡುವನು. ಒಟ್ಟಾರೆ ಕಾದಂಬರಿ ಮನೋವಿಕಾರಗಳ ಬೇಕು ಬೇಡಿಕೆಯ ಬೆನ್ನು ಹತ್ತಿದ ಮನುಷ್ಯನ ಅಂತ್ಯ ಅವಾಂತರದಿಂದ ಕೂಡಿರುವಂತೆ ವಾಗ್ದೇವಿ ಕಾದಂಬರಿಯ ಪಾತ್ರಗಳು ಚಿತ್ರಣವಾಗಿವೆ.

ತಿರುಮಲಾಂಬರವರು ರಚಿಸಿದ ಸಾಹಿತ್ಯ ಅಂದಿನ ದಿನಗಳಲ್ಲಿ ಅಲಕ್ಷ್ಯತನದಿಂದ ಕಾಣುತ್ತಿದ್ದರೆಂಬ ಅಭಿಪ್ರಾಯ ಕಾಣುತ್ತದೆ. ಮಹಿಳೆಯರ ಬರವಣಿಗೆಯಲ್ಲಿ ಉತ್ಕೃಷ್ಟತೆ ಕಂಡುಬಂದರೆ ಅದು ಪುರುಷ ಬರೆದದ್ದೆಂದು ತಿಳಿಯುವುತ್ತಿದ್ದರು. ಲೇಖಕೀಯರ ಬರವಣಿಗೆಯಲ್ಲಿ ತಮ್ಮತನವನ್ನು ನಿರಾಕರಿಸುವುದು ಈ ಸಮಯದಲ್ಲಿ ಕಂಡುಬರುವುದು. ಆಗ ಪುರುಷ ಬರವಣಿಗೆ ಶ್ರೇಷ್ಠ ಎಂಬ ತೀರ್ಮಾನಿಸಿದಂತೆ ಕಾಣುವುದು. ಮೊದಲ ಕಾದಂಬರಿಕಾರ್ತಿಯರು ಮಹಿಳೆಯನ್ನು ಒಟ್ಟಾಗಿಸಿಕೊಂಡು ಬರೆಯುವ ರೀತಿ 'ಮಹಿಳೆಯರಿಗೋಸ್ಕರ' ಎಂಬಂತೆ ಅವರ ಕೃತಿಗಳ ಸ್ವರೂಪ ಲೇಖಕರಿಗಿಂತ ಭಿನ್ನವಾಗಿಸುತ್ತವೆ. ಒಟ್ಟಾರೆ 'ಕರ್ನಾಟಕದ ಸ್ತ್ರೀ ಶಿಕ್ಷಣದ ಬಗ್ಗೆ ಮರಾಠಿಯವರಷ್ಟು ಪ್ರಗತಿಪರ ಚಿಂತನೆಯವರಲ್ಲ' ಎಂಬ ಅಭಿಪ್ರಾಯ ಹಲವು ಕಾದಂಬರಿಗಳಿಂದ ಪ್ರಚುರಗೊಂಡಿದೆ.

'ಸತಿಹಿತೈಷಿಣಿ,' 'ಮಾತೃನಂದಿನಿ','ವಿರಾಗಿಣಿ' ಮುಂತಾದ ಪದಬಳಕೆಯಲ್ಲಿ ತಿರುಮಲಾಂಬಾರವರ ಸಾಂಪ್ರದಾಯಿಕ ಮನೋಧರ್ಮವನ್ನು ಕಾಣಬಹುದು. ಗತಕಾಲದ ಭಾರತೀಯ 'ಆರ್ಯಕುಲಾಂಗನೆಯ' ಪ್ರತಿಮೆಯನ್ನು ಮಂಡಿಸುವುದು ಕೃತಿ ರಚನೆಯ ಉದ್ದೇಶ. ವಿಧವಾವಿವಾಹ ಸಮರ್ಥಿಸುವುದಿಲ್ಲ. ವಿಧವೆಯ ಕೇಶಮುಂಡನ, ಸಾಮಾಜಿಕ ಅನಾದರ, ಮುಂತಾದ ವಿಷಯಗಳ ಬಗ್ಗೆ ಅವುಗಳ ಕಾಳಜಿ ಇದೆ. ಸ್ತ್ರೀಯರ ಅವಿದ್ಯೆಗೆ ಕಾರಣವಾದ ಪುರುಷರ ಉಪೇಕ್ಷ ಹೇಳಿಕೆಗಳಿವೆ. ಹೊರಗೆ ದುಡಿಯುವ ಮಹಿಳೆ ಮನೆಗೆಲಸದಲ್ಲಿ ಸಹಕರಿಸುವ ಗಂಡ' ಈ ಕಲ್ಪನೆಯು ತಿರುಮಲಾಂಬಾರಿಗೆ ಹಿಡಿಸದ

ವಿಷಯದಂತಿದೆ. ತಾವೆ ಸ್ವತಃ ವಿಧವೆಯಾದದ್ದು ವಿಧವಾ ವಿವಾಹದ ಪರವಾಗಿ ಮಾತನಾಡಲು ಲೇಖಕಿಯರಿಗೆ ಮುಜುಗರ ಉಂಟಾಗಿರಬಹುದು. ಅವರ ಮೊದಲ ಕಾದಂಬರಿಗೆ ಪ್ರತಿಕ್ರಿಯೆ ಅಷ್ಟೇನೂ ಉತ್ಸಾಹದಾಯಕವಾಗಿರಲಿಲ್ಲ. ಓದುಗರಲ್ಲಿ ಸ್ತ್ರೀ ಲೇಖಕಿಯರ ಬಗ್ಗೆ ವಿಶೇಷವಾಗಿ ಓದುಗರ ಬಗ್ಗೆ ಅನುಮಾನ ಸಂದೇಹಗಳಿದ್ದವು.

ಹೆಂಡತಿಯ ಸ್ಥಾನವನ್ನು ಅಲಂಕರಿಸಿದ ಸ್ತ್ರೀಯರು ಪುರುಷನ ನೆರಳಿನಲ್ಲಿಯೇ ಜೀವನ ಸಾಗಿಸಿದವರು. ಈ ನೆಲೆಯಲ್ಲಿ ಚಿತ್ರಣಗೊಂಡಿರುವ ಸ್ತ್ರೀಯರ ಸಂಖ್ಯೆ ಹೆಚ್ಚಾಗಿದೆ. 'ಪ್ರಭುದ್ಧ ಪದ್ಮನಯನೆ ಕಾದಂಬರಿಯ ಮನಮೋಹಿನಿಯ ಮಗಳು ಪದ್ಮನಯನೆ ಮತ್ತು ಜೀವನಕಲೆ, 'ಇಂದಿರಾಬಾಯಿ' ಕಾದಂಬರಿಯ ಜಲಜಾಕ್ಷಿ, ಸುಶೀಲೆ, ಅಂಭಾಬಾಯಿ, 'ಮಾಡಿದ್ದುಣ್ಣೊ ಮಹಾರಾಯ' ಕಾದಂಬರಿಯ ತಿಮ್ಮಮ್ಮ, ಸೀತೆ, 'ಮಾತೃನಂದಿನಿ' ಕಾದಂಬರಿಯ ಚಿತ್ರ, 'ಸುಶೀಲಾ' ಕಾದಂಬರಿಯ ಸುಶೀಲೆ, 'ನಭಾ' ಕಾದಂಬರಿಯ ರಮಾಮಣಿ ಪಾತ್ರಗಳು ಕೇವಲ ಹೆಂಡತಿಯ ಸ್ಥಾನದ ಜವಾಬ್ದಾರಿಯ ಪ್ರತಿರೂಪಗಳಾಗಿವೆ ವಿನಹ ಎಲ್ಲೂ ಪ್ರತಿಭಟಿಸಿಲ್ಲ. ಹೆಣ್ಣು ಸಹವರ್ತಿನಿಯಾಗಿ ರೂಪಿಸಿದ ಬದುಕು ಮಾತ್ರ ಇಲ್ಲಿ ಕಾಣುವುದು.

ಈ ಶತಮಾನದ ಆರಂಭದಲ್ಲಿ ಬಾಲ್ಯವಿವಾಹ, ಸತಿಪದ್ಧತಿ, ವಿಧವಾ ಸಮಸ್ಯೆ, ವಿಧವಾ ಪುನರ್‌ವಿವಾಹ ಬಹುದೊಡ್ಡ ಸಮಸ್ಯೆಗಳಾಗಿದ್ದವು. ಈ ಸಂದರ್ಭದಲ್ಲಿ ಮೂಡಿ ಬಂದ ಮೊಟ್ಟ ಮೊದಲ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ' ರೋಗಗ್ರಸ್ತ ಸಮಾಜದ ಒಳ ಮುಖವನ್ನು ಬಿಚ್ಚಿಡುತ್ತದೆ. ಇಲ್ಲಿ ಬಾಲವಿಧವೆ ಇಂದಿರಾಬಾಯಿಯ ಗೋಳಿದೆ. ಇಂದಿರಾಬಾಯಿ ಕಾದಂಬರಿಯ ನಂತರ ಹೊರಬಂದ ಕೆರೂರು ಅವರ 'ಇಂದಿರೆ' ಕಾದಂಬರಿಯಲ್ಲಿ ಬಾಲ್ಯವಿವಾಹ ಸಮಸ್ಯೆಯಾಗಿ ತೋರಿಲ್ಲ. ಸ್ವತಂತ್ರ ವಿಧವಾ ವಿವಾಹಕ್ಕಾಗಿ ರಾಧಾಬಾಯಿಯ ಮುಖಾಂತರ ಸುಧಾರಣೆ ನಡೆದ ಹೋರಾಟದ ಚಿತ್ರಣ ಉತ್ತರದಂತಿದೆ. ಅದಕ್ಕೆ ಅವಳು ಮದರಾಸಿನ ರಣಧೀರಸಿಂಗ್ ನಂತರ ಅಮೆರಿಕಾದ ಕನಿಂಗ್‌ಹ್ಯಾಮ್ ಎಂಬ ಪಾದ್ರಿಯನ್ನು ಮದುವೆಯಾಗಿ ವಿಧವೆಯಾದವಳು. ಸಹಾಯಕಿ ಕಮಲಾಬಾಯಿ ವಿಧವೆ, ಸಾಂಪ್ರದಾಯಿಕ ಜೀವನಕ್ಕೆ ತುತ್ತಾಗಿದ್ದವಳು.

ನಭಾ ಕಾದಂಬರಿಯ ನಭಾ ವೈರಾಗ್ಯ ಜೀವನ ನಡೆಸುವ ನಿರ್ಧಾರ ಕೈಕೊಳ್ಳುತ್ತಾಳೆ. ಇದು ನಂಜನಗೂಡು ತಿರುಮಲಾಂಬ ಬದುಕಿನ ರೀತಿಯೂ ಹೌದು. ವೈಧವ್ಯವನ್ನು ಸಮಸ್ಯೆಯಾಗಿ ಅವರು ಸ್ವೀಕರಿಸಲಿಲ್ಲ. ಅಲ್ಲದೆ ಪುನರ್‌ವಿವಾಹವಾಗದೆ ಇರುವುದನ್ನು ಸಮರ್ಥಿಸಿಕೊಂಡಿದ್ದಕ್ಕೆ 'ನಭಾ'ಳ ಪಾತ್ರ ಸಾಕ್ಷಿ. ಒಂದು ವೇಳೆ ವಿಧವಾವಿವಾಹ ಮುಂದುವರೆದರೆ ಭಯಾನಕ ರೋಗಕ್ಕೆ ತುತ್ತಾಗುವ ಮುನ್ನೆಚ್ಚರಿಕೆ ನೀಡಿದ್ದಾಳೆ. ಹೀಗೆ ವೈಧವ್ಯ ಜೀವನದಲ್ಲಿ ಬದುಕು ಸಾಗಿಸುವ ಮನೋಹರಿ ಕಾದಂಬರಿಯ ಮನೋರಮೆ. 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯ ತಿಮ್ಮಮ್ಮ, ವೆಂಕಮ್ಮ, ಕಾವೇರಿ ಪಾತ್ರಗಳಲ್ಲಿ ಕಾಣುವದು.

ಮೇಲ್ವರ್ಗದ ಬ್ರಾಹ್ಮಣ ವಿಧವೆಯರಿಗೆ ಹೊರತಾಗಿ ಬಾಳಿದ ಮಧ್ಯಮ ಮತ್ತು ಕೆಳವರ್ಗದ ವಿಧವೆಯರ ಚಿತ್ರಣ ಇಲ್ಲಿದೆ. 'ಇಂದಿರಾಬಾಯಿ', 'ಇಂದಿರಾ' ಕಾದಂಬರಿಗಳಿಗೆ ವಿರುದ್ಧ ವಿಚಾರಗಳು ನಂಜನಗೂಡು ತಿರುಮಲಾಂಬರವರ 'ನಭಾ' 'ಸುಶೀಲೆ' 'ವೀರಾಗಿಣಿ' ಕಾದಂಬರಿಗಳಲ್ಲಿ ಚರ್ಚೆಯಾಗಿದೆ. ವಿಧವೆಯ ಮೇಲೆ ಅನಾವಶ್ಯಕವಾಗಿ ಒತ್ತಾಯದಿಂದ ಹೇರುವ ಗೊಡ್ಡು ಆಚರಣೆಗಳನ್ನು ತಿರುಮಲಾಂಬರವರು ವಿರೋಧಿಸುವರು.

ವೇಶ್ಯಾವೃತ್ತಿ ನಂಬಿಕೊಂಡವರು ಹಾಗೂ ಆರ್ಥಿಕ ಅಭದ್ರತೆಯ ಮೇಲೆ ಜೀವನ ಸಾಗಿಸುವ ಸ್ತ್ರೀಯರಿಗೆ ಸಮಸ್ಯೆಯಾಗಿ ಅವರು ವೇಶ್ಯಾವೃತ್ತಿಯಲ್ಲಿ ಮುಂದುವರೆಯುವದಕ್ಕೆ ಮೂಲ ಕಾರಣವಾಗುವುದು. 'ಮುಸುಕು ತೆಗೆಯೇ ಮಾಯಾಂಗನೆ' ಕಾದಂಬರಿಯಲ್ಲಿ ಹಣ ಕೊಟ್ಟವರಿಗೆ ಮೈ ಒಪ್ಪಿಸುವ ಚಿತ್ರಣ ಇದೆ. ಗುಲ್ವಾಡಿಯವರ 'ಇಂದಿರಾಬಾಯಿ' ಕಾದಂಬರಿಯ ಗುಲಾಬಿ, ಗೋಕುಳಿ ಸಂಗೀತ ನೃತ್ಯಗಳಿಗಿಂತಲೂ ಮೈ ಮಾಟಗಳಿಂದ ಒಲಿಸಿಕೊಂಡರು. ವಿಠಲರಾಯನ ಸೇವಕ ಗುಲಾಬಿಯನ್ನು ಉಪಪತ್ನಿಯಾಗಲು ಕೇಳುವ ಪ್ರಸಂಗ ವೇಶ್ಯಾವೃತ್ತಿಯ ಮುಂದುವರಿದ ಭಾಗ.

ವೇಶ್ಯಾ ಸಮಸ್ಯೆಯನ್ನು ವೈಯಕ್ತಿಕ ಸಮಸ್ಯೆಯಾಗಿ, ಸಾಮಾಜಿಕ ಸಮಸ್ಯೆಯಾಗಿಯೂ ಕಾಣುವ ಪ್ರಯತ್ನ ಈ ಕಾದಂಬರಿಗಳಲ್ಲಿ ಚರ್ಚೆಯಾಗಿದೆ. ಕೆಳವರ್ಗದ ಬದುಕನ್ನು ಸಂಧಿಸಿದ ಸಮಾಧಾನ ಕಾಣುವುದು. ಪತಿಗೆ ಕುರುಡ ನಿಷ್ಠೆಯನ್ನು ಹೊಂದುವುದರ ಬಗ್ಗೆ ಚರ್ಚೆಯಾಗಿದೆ. ಸ್ತ್ರೀಯರ ಕುರಿತಾಗಿ ತೋರುವ ದ್ವಿಮುಖ ನೀತಿಯನ್ನು ವಿಮರ್ಶಿಸುವ, ಉದಾತ್ತಿಕರಿಸುವ ವಿಷಮ ದಾಂಪತ್ಯದ ಸಮಸ್ಯೆಗಳ ಅನಾವರಣವಾಗಿವೆ. ಕನ್ನಡದ ಮೊದಲ ಕಾದಂಬರಿಕಾರರು ಸಾಮಾಜಿಕ ಸಮಸ್ಯೆಗಳ ಬಗೆಗೆ ಅವರು ಯಾವ ಬಗೆಯ ಕಾಳಜಿಯನ್ನು ಇರಿಸಿಕೊಂಡಿದ್ದಾರೆಂಬುದನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಮೊದಲ ಘಟ್ಟದ ಸ್ವತಂತ್ರ ಕಾದಂಬರಿಗಳು ಮೇಲ್ವರ್ಗದ ಲೇಖಕರು ಕಾದಂಬರಿಗಳನ್ನು ರಚಿಸುವುದರಿಂದ ಮಧ್ಯಮ, ಮೇಲ್ವರ್ಗದ ಬದುಕಿನ ಚಿತ್ರಣವೇ ಪ್ರಾಧಾನ್ಯತೆ ಪಡೆದಿದೆ. ಪುರುಷ ಸಾಹಿತ್ಯ ರಚನಾಕಾರರ 'ಸ್ತ್ರೀ ಸಂಬಂಧಿ ವಿಷಯ ವಸ್ತುಗಳ' ವಿಶ್ಲೇಷಣೆಯಾಗಿದೆ. ಅದರಲ್ಲೂ ಮೇಲ್ವರ್ಗದ ಸ್ತ್ರೀಯರ ಕುರಿತದ್ದು. ಮಹಿಳೆಯ ದುಡಿಮೆಗೆ ಗೌರವ, ಆರ್ಥಿಕ ಸ್ವಾವಲಂಬನೆಯ ಪರವಾಗಿ ವಿಡಂಬನೆ, ಸುಧಾರಣಾಪರ ನಿಲುವು, ಬಾಲ್ಯವಿವಾಹ, ವಿಧವಾ ವಿವಾಹ, ಸಮಾಜ ಸೇವೆಯ ಆಯ್ಕೆಯನ್ನು ಈ ಕಾಲದ ಲೇಖಕಿಯರು ಸಮರ್ಥಿಸಿದಂತಿದೆ.

ಶೀಲವು ಸ್ತ್ರೀ ಕಟ್ಟೆಚ್ಚರದಿಂದ ಕಾಪಾಡಿಕೊಳ್ಳಬೇಕಾದ ಒಂದು ವಿಧಿ ಬಹುತೇಕ ಕಾದಂಬರಿಗಳಲ್ಲಿ ಚರ್ಚಿತ ಸಂಗತಿ. ವಿಷಮ ಸನ್ನಿವೇಶಗಳಲ್ಲಿ ಸ್ತ್ರೀ ಪುರುಷ ವೇಷವನ್ನು ತೋರಿಸುವ ಮತ್ತು ಅದನ್ನು

ನಿಭಾಯಿಸುವ ಆಶಯಗಳು ಕಾಣುವವು. ಕರ್ನಾಟಕದ ಸ್ತ್ರೀಯರು ಮಹಾರಾಷ್ಟ್ರದ ಸ್ತ್ರೀಯರಿಗಿಂತ ಹಿಂದೆ ಎಂಬ ಅಭಿಪ್ರಾಯ ಈ ಕಾದಂಬರಿಗಳಲ್ಲಿ ಕಾಣುವುದು.

ಮಹಿಳಾಪರ ಕಾದಂಬರಿಗಳ ಬಗೆ ಪುರುಷರ ಪ್ರತಿಕ್ರಿಯೆ ಸಾಮಾನ್ಯವಾಗಿ ನಿರ್ಲಕ್ಷ್ಯಕ್ಕೊಳಗಾದಂತೆ ಕಾಣುವುದು. ಜೊತೆಗೆ ನಂಜನಗೂಡು ತಿರುಮಲಾಂಬ ಪ್ರತಿಕ್ರಿಯೆಯಂತೆ ಮೂಡಿಬಂದಿದೆ. ಸ್ತ್ರೀಯರು ಹಿಂದುಳಿಯಲು ಅವರಿಗೆ ವಿಧಿಸಿದ ಕಟ್ಟುಪಾಡುಗಳೇ ಮುಖ್ಯ ಕಾರಣವೆಂಬ ಅಂಶ ಈ ಕಾಲದ ಕಾದಂಬರಿಯಲ್ಲಿ ದಾಖಲಾಗಿದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಟ್ಟು ಪಾಡುಗಳು ಸಡಿಲಿಸಿದರೆ ಮಹಿಳೆ ಎಲ್ಲ ರೀತಿಯಿಂದಲೂ ಪ್ರಗತಿ ಹೊಂದಲು ಸಾಧ್ಯವೆಂಬ ಸಂಗತಿಗಳಿವೆ. ಸರ್ವ ಸ್ತ್ರೀಯರು ಓದು-ಬರಹ ಕಲಿಯಬೇಕೆಂಬ ಆಶಯ ಲೇಖಕರದ್ದಾಗಿತ್ತು. ಪುರುಷ ಸಮಾನತೆ ಸ್ತ್ರೀ ಸಾಧಿಸುವ ತವಕಗಳಿವೆ. ಬಾಲ್ಯವಿವಾಹ ತಿರಸ್ಕರಿಸುವ ತಿಳುವಳಿಕೆ ಪ್ರಚುರಪಡಿಸಿಬೇಕು, ಜನರಿಗೆ ಸಾಮಾಜಿಕ ಜಾಗೃತಿ ಮೂಡಿಸುವುದು ಮುಖ್ಯ ಗುರಿಯಾಗಿ ಚರ್ಚೆಯಾಗಿದೆ. ವಿಧವಾ ವಿವಾಹ, ಪುನರ್ವಿವಾಹಗಳು ಜರುಗಬೇಕೆಂಬ ಆಶೆಗಳ ತುಮುಲುಗಳು ಇಲ್ಲಿ ಕಾಣುವವು.

ಸಾಂಪ್ರದಾಯಿಕ ವಿವಾಹಗಳ ಪ್ರತಿನಿಧಿಯಂತಿರುವ ತಂದೆ-ತಾಯಿಗಳು ಹೆಣ್ಣುಮಕ್ಕಳು ಪ್ರೌಢರಾಗುವ ಮೊದಲೆ ಬಾಲ್ಯವಿವಾಹದಂತಹ ಹೊಂಡಕ್ಕೆ ನೂಕುತ್ತಾರೆ. ಬಾಲ್ಯವಿವಾಹವಾಗಿ ಬುದ್ಧಿ ಅರಳುವ ಮುನ್ನವೆ ಬಾಲ ವಿಧವೆಯರಾಗಿದ್ದಾರೆ. 'ಇಂದಿರಾಬಾಯಿ' ಕಾದಂಬರಿಯ ಇಂದಿರಾಬಾಯಿ, 'ಇಂದಿರಾ' ಕಾದಂಬರಿಯಲ್ಲಿನ ದೇವಯಾನಿ, 'ನಭಾ' ಕಾದಂಬರಿಯ ನಭಾ ಇವರನ್ನು ಗುರುತಿಸಬಹುದು. ಬ್ರಾಹ್ಮಣ ಜನಾಂಗದ ಕೆಲವು ಸ್ತ್ರೀಯರು ವಿದ್ಯಾವಂತೆಯರಾದರೆ ಇನ್ನೂ ಕೆಲವರು ಅವಿದ್ಯಾವಂತೆಯರು. ಇವರು ಬದುಕುವ ಪರಿಸರವೇ ಧರ್ಮವಾಗಿದ್ದರಿಂದ ಆ ಚೌಕಟ್ಟಿನಲ್ಲಿಯೇ ಸುಖ ಸಂತೋಷವನ್ನು ಕಂಡಿದ್ದಾರೆ. ದಾಂಪತ್ಯ ಕರ್ಮಾಧೀನವೆಂದು ಭಾವಿಸಿದವರು. ಅಂತೆಯೇ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಸೀತೆ, 'ಸುಶೀಲೆ' ಕಾದಂಬರಿಯ ಸುಶೀಲೆ, 'ವಿರಾಗಿಣಿ' ಕಾದಂಬರಿಯ ಚಂದ್ರಭಾಗೆ ಈ ಎಲ್ಲಾ ಸ್ತ್ರೀಯರು ವಿಷಮ ದಾಂಪತ್ಯಕ್ಕೆ ನಿದರ್ಶನವೇ ಸರಿ.

ಈ ಸಂದರ್ಭದಲ್ಲಿ ವರದಕ್ಷಿಣೆ ಪದ್ಧತಿ ಅಷ್ಟೊಂದು ಸಮಸ್ಯೆಯಾಗಿ ಕಾಡದಿದ್ದರೂ ಸ್ತ್ರೀಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಸಮಸ್ಯೆಯಾಗಿ ಪರಿಣಮಿಸಿದೆ. ಗುಲ್ವಾಡಿ ವೆಂಕಟರಾಯರ ಮೊದಲ ಸಾಮಾಜಿಕ ಕೃತಿ 'ಇಂದಿರಾಬಾಯಿ'(ಪ್ರ.[illegible]) ಕಾಣುವದು. ಸಾಮಾಜಿಕ ಕಾಳಜಿ ಈ ಕೃತಿಗಳಲ್ಲಿದೆ. ವೈಧವ್ಯವೆಂಬುದು ಸ್ತ್ರೀಯರ ಮೇಲೆ ಹೇರಿದ ಶಾಪ. ಬಾಲ್ಯವಿವಾಹ ಹೆಣ್ಣಿನ ವೈಧವ್ಯಕ್ಕೆ ಮೂಲವಾದರೆ, ಸತಿ ಹೋಗುವಿಕೆ ನಿಷೇಧವೇ ವಿಧವಾ ಸಮಸ್ಯೆಗೆ ಮೂಲ ಕಾರಣ. ಸ್ತ್ರೀ ಸುಧಾರಣೆಗಾಗಿ ಈಶ್ವರಚಂದ್ರ ವಿದ್ಯಾಸಾಗರರ ಪರಿಶ್ರಮ ಫಲವಾಗಿ ೧೮೫೬ರಲ್ಲಿ ಜಾರಿಗೆ ಬಂದ ವಿಧವಾ ವಿವಾಹ ಕಾನೂನು

ಪರವಾದರೂ ಶೋಷಣೆ ನಿಂತಿಲ್ಲ. ಈ ಸಮಯದಲ್ಲಿ ಈಶ್ವರಚಂದ್ರ ವಿದ್ಯಾಸಾಗರರ 'ಹಿಂದೂ ವಿಧವೆಯರ ವಿವಾಹ ಕೃತಿ' ಗಮನ ಸೆಳೆಯಿತು.

ಸ್ವಗೋತ್ರ, ಸ್ವಜಾತಿ ವಿವಾಹದಿಂದ ಸಂತತಿ ಸೋಂಕಿನಿಂದ ರೋಗಗ್ರಸ್ತವಾಗುತ್ತದೆ. ಆದ್ದರಿಂದ ಆ ವಿವಾಹ ಸಲ್ಲದೆಂಬ ವೈಜ್ಞಾನಿಕ ಪ್ರಭಾವ ಇಲ್ಲಿ ಕಾಣುವುದು. ಸಂತಾನವೇ ಸರ್ವಸ್ವವೆಂಬುದಕ್ಕೆ ಬಹುಪತ್ನಿತ್ವ ಪರಿಹಾರವಲ್ಲವೆಂಬ ಸಂಗತಿ ತಾರ್ಕಿಕ ವಿಶ್ಲೇಷಣೆ ಇಲ್ಲಿದೆ. ಧರ್ಮ, ನೀತಿ, ನಿಯಮಗಳು ಕೇವಲ ಸ್ತ್ರೀಗಲ್ಲ. ಗಂಡಿಗೂ ಸಂಬಂಧಿಸಿದ ಮೌಲ್ಯಗಳ ಪ್ರತಿಪಾದನೆ ಇದೆ. ಚಾರಿತ್ರ್ಯ, ಶೀಲ ಕೇವಲ ಹೆಣ್ಣಿಗೆ ಮಾತ್ರ ಸೀಮಿತವಲ್ಲ ಪುರುಷರಿಗೂ ಮುಟ್ಟಿಸುವ ತಂತ್ರಗಳಿವೆ.

ಓದುಗರು ನೀತಿಬೋಧನೆಗೆ ಮಹತ್ವ ನೀಡುತ್ತಿರುವ ಭಾಗಕ್ಕೆ ಅಡಿಗುರುತು ಮಾಡಿರುವುದು ವಿಶೇಷ. ಕೃತಿಗಳಲ್ಲಿ ನೀತಿ ಬೋಧೆಯಿದ್ದು, ವೇಶ್ಯಾ ಜೀವನ ಮತ್ತಿತರ ಆಶ್ಲೀಲ ಸನ್ನಿವೇಶಗಳಿದ್ದರೆ ಸ್ತ್ರೀಯರು ಓದತಕ್ಕದಲ್ಲ ಎಂಬ ಅಭಿಪ್ರಾಯ ಓದುಗರಿಂದಲೂ ವ್ಯಕ್ತವಾಗಿದೆ. ಸ್ತ್ರೀ ಕಾಳಜಿ ಲೇಖಕರಲ್ಲಿ ಸಾಮಾನ್ಯವಾಗಿತ್ತು. ವರದಕ್ಷಿಣೆ ಸಮಸ್ಯೆಗೆ ಬಲಿಯಾದ ಮಹಿಳಾ ಪರವಾದ ಕಾಳಜಿಗೆ ಗಡಿಹಾಕಿಕೊಂಡಂತಿಲ್ಲ. ಸ್ತ್ರೀ ಮೌಲ್ಯಗಳೆಂಬಂತೆ ಬಿಂಬಿತವಾದ ತ್ಯಾಗ, ಸಹನೆ, ಶೀಲ, ಪಾವಿತ್ರ್ಯ ಮುಂತಾದ ನಿತ್ಯ ಮೌಲ್ಯಗಳು ಸ್ತುತಿಸಲ್ಪಟ್ಟಿವೆ.

ಪತಿ, ಪತ್ನಿ ನಡುವೆ ಸ್ನೇಹ ಸಂಬಂಧಕ್ಕಿಂತ ಭಯ ಭಕ್ತಿಗಳ 'ಆಳುವ ಆಳಿಸಿಕೊಳ್ಳುವ' ಸಂಬಂಧವೇ ಕಾಣವುದು. ಸ್ತ್ರೀ ಪುರುಷನೊಂದಿಗೆ ಮಾತನಾಡಿದರೆ 'ಗಂಡುಬೀರಿ' ಎನಿಸಿಕೊಳ್ಳುವ ರೀತಿಯನ್ನು ಇಲ್ಲಿ ಬಿಂಬಿಸಿದ್ದಿವೆ. ಪತಿ-ಪತ್ನಿ ದೂರ, ಸಹಜ ನಡುವಳಿಕೆಗೆ ನಿರ್ಬಂಧದಿಂದ ಪತಿ ಅಡ್ಡದಾರಿ ಹಿಡಿದು ರಸಿಕತೆಗೆ ವೇಶ್ಯಾ ಸಂಗ ಮಾಡಿದ ಉದಾಹರಣೆಗಳಿವೆ, ಜೊತೆಗೆ ಪರಿಹಾರ ಸೂಚಿಸಿದ್ದಾರೆ. ಸ್ತ್ರೀ ಶಿಕ್ಷಣ ವಿವೇಕಯುತ ಗೃಹಿಣಿಯಾಗುವುದಕ್ಕೆ ಉದ್ಯೋಗ ಹಿಡಿದು ಪುರುಷನನ್ನು ಮೀರಿಸುವುದಕ್ಕಲ್ಲವೆಂಬ ಮೌಲ್ಯ ಪ್ರತಿಪಾದಿತವಾಗಿದೆ. ಗೃಹಿಣಿ ಧರ್ಮಕ್ಕೆ ಪ್ರಥಮ ಆದ್ಯತೆ, ಸಮಾಜ ಸೇವೆ ಮತ್ತೇನಿದ್ದರೂ ನಂತರ ಎಂಬ ಅಭಿಪ್ರಾಯಗಳಿವೆ. ಸುಧಾರಣೆಯ ಆಶಯ ಪ್ರಬಲವಾದಾಗ ಕಾದಂಬರಿಯಲ್ಲಿ ಸಮಾಜಶಾಸ್ತ್ರದ ಉಪನ್ಯಾಸಗಳು ದೊರೆಯುವವು. ಸುಧಾರಣಾ ಪರ ನಿಲವು ವ್ಯಕ್ತವಾಗಿವೆ.

ಸಾಧ್ವಿ-ದೈವ ನಿಷ್ಠೆಯುಳ್ಳ ಸ್ತ್ರೀ ವಿಧಿಯ ಕೈಗೊಂಬೆಯೆಂಬ ಸಂಗತಿಯ ಚರ್ಚೆಯಿದೆ. ಪತಿ ನಿಷ್ಠತೆ ದೈವ ವಿಶ್ವಾಸ ಪ್ರಸಂಗಗಳ ವಿಶ್ಲೇಷಣೆ. ಜಾಣ್ಮೆ, ಕ್ರಿಯಾಶೀಲ ಆಕೆಯೇ ಆರ್ಯ ಮಹಿಳೆಯ ಪ್ರತೀಕವೆಂಬ ಸಂಗತಿ ಕಾಣುವುದು. ಕಾರ್ಯ, ದ್ವೇಷ, ಮಾತ್ಸರ್ಯಗಳ ಅವಕಾಶವಂಚಿತರಾದ ಗಯ್ಯಾಳಿಗಳ ಚಿತ್ರಣ

ಚರ್ಚೆ ಇದೆ. ದೇವದಾಸಿ, ಹಸಬಿ ಪದ್ಧತಿಗಳ ಅನಾವರಣ ಅಲೆಮಾರಿಗಳ ಜಾತಿ ಜನಾಂಗಿಕ ಸಂಗತಿಗಳ ಕುರಿತು ಚರ್ಚೆ ಕಾಣುವುದು.

ಸ್ತ್ರೀ ಶಿಕ್ಷಣ ಪ್ರತಿಕೂಲ ಪರಿಣಾಮಗಳು ಇಲ್ಲಿ ಹಲವಾರು ಕೃತಿಗಳಲ್ಲಿ ಮೂಡಿಬಂದಿವೆ. ವ್ಯಕ್ತಿಯ ಮೇಲೆ ನಡೆಯುವ ಅನ್ಯಾಯ, ಅತ್ಯಾಚಾರ, ಹಿಂಸೆ, ಶೋಷಣೆಯ ಹಾಗೂ ಇನ್ನಿತರ ಮೂಢನಂಬಿಕೆಗಳಂತಹ ಆಚರಣೆಗಳನ್ನು ವಿರೋಧಿಸಿ ಮಾನವೀಯ ಗುಣಗಳನ್ನು ಬೆಳೆಸುವಂಥದ್ದೆ ಶಿಕ್ಷಣ. ಸಮಾಜಸುಧಾಕರರು, ಸಾಹಿತಿಗಳು ಶಿಕ್ಷಣಕ್ಕಾಗಿ ಶ್ರಮಿಸಿದರು. ಸ್ತ್ರೀ ಜೀವನವನ್ನೆ ಮುಖ್ಯ ಕಾಳಜಿಯಾಗಿಸಿದ 'ಇಂದಿರಾಬಾಯಿ', 'ಇಂದಿರಾ', 'ಮಾತೃನಂದಿನಿ', 'ಸುಶೀಲೆ' ಕಾದಂಬರಿಗಳು ಸ್ತ್ರೀಪರ ಶಿಕ್ಷಣವನ್ನು ಬಿಚ್ಚಿಡುತ್ತವೆ. ಆಧುನಿಕ ವಿದ್ಯಾಕ್ರಮ ಸಾಂಪ್ರದಾಯಿಕ ಓದಿನ ಅಭ್ಯಾಸವನ್ನು ನಿರ್ಣಾಯಕಗೊಳಿಸಿತು. ಕೃತಿಗಳ ಅಂದಿನ ಓದು ಇಂದಿನ ಓದಿನ ವ್ಯತ್ಯಾಸ ಗುರುತಿಸಿತು. ಸಮುದಾಯ, ವರ್ಗ, ಜಾತಿ, ಸಾಮಾಜಿಕ ಗುಂಪುಗಳು ತಮ್ಮ ಸಾಮಾಜಿಕ ಸ್ಥಾನಮಾನ ಅಗತ್ಯಗಳಿಗನುಸಾರವಾಗಿ ಪಠ್ಯಗಳನ್ನು ಓದಿ ಅರ್ಥೈಸಿಕೊಳ್ಳುವ ಉದ್ದೇಶ ಭಿನ್ನ ಭಿನ್ನವಾಗಿರುವ ಸಂಗತಿ ಇಲ್ಲಿದೆ.

ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ಪಾಶ್ಚಿಮಾತ್ಯರ ಆಗಮನವು ಶಿಕ್ಷಣದ ಪ್ರಜ್ಞೆಯನ್ನು ಎಚ್ಚರಿಸಿತು. ಅಲ್ಲಲ್ಲಿ ಸ್ತ್ರೀ ಶಿಕ್ಷಣದ ಧ್ವನಿ ಕೇಳುವದಾದರೂ ಅವರನ್ನು ಗೃಹ ಸ್ವಾಮಿನಿಯರನ್ನಾಗಿ ಭದ್ರಗೊಳಿಸಲು ಯತ್ನಿಸಿದರು. ಇಂತಹ ಸಂಪ್ರದಾಯವಾದಿಗಳು ಕಡಿಮೆಯಿರಲಿಲ್ಲ. ಭಾರತೀಯ ಸಮಾಜದ ಆಮೂಲಾಗ್ರ ಬದಲಾವಣೆಯನ್ನು ಬಯಸಿದ ಬಂಗಾಲದ ರಾಜಾರಾಮ ಮೋಹನರಾಯ, ಕಲ್ಕತ್ತಾದ ಬ್ಯಾನರ್ಜಿ, ಮದ್ರಾಸಿನ ವಿರೇಶಲಿಂಗಂ ಪಂತಲು, ಪುಣೆಯ ಡಿ.ಕೆ.ಕರ್ವೆ, ಈಶ್ವರಚಂದ್ರ ವಿದ್ಯಾಸಾಗರ, ಪಂಡಿತೆ ರಮಾಬಾಯಿ ಮುಂತಾದ ಸಮಾಜ ಸುಧಾರಕರು ಸ್ತ್ರೀ ಶಿಕ್ಷಣಕ್ಕಾಗಿ ಶ್ರಮಿಸಿದ್ದು ಇಲ್ಲಿದೆ. ಸ್ತ್ರೀ ಶಿಕ್ಷಣದ ಕುರಿತಾಗಿ ಕಾಳಜಿ ಕಳಕಳಿಯುಳ್ಳದ್ದೆಂದು ಹೇಳುವ ಮೊದಲ ಕಾದಂಬರಿ 'ಇಂದಿರಾಬಾಯಿ'. ಬಾಲವಿಧವೆ ಇಂದಿರಾಬಾಯಿ ಓದಿನಲ್ಲಿ ಆಸಕ್ತಿ ಉಳ್ಳವರಾಗಿದ್ದರೆ, ತಾಯಿ ಅಂಬಾಬಾಯಿ ನೀತಿ ಪುಸ್ತಕಗಳ ಓದಿನಿಂದ ಜಾತಿ ಕೆಡುವುದೆಂದು ಭಾವಿಸಿ ಮಗಳನ್ನು ಓನಾಯವಾಗಿ ಕಾಣುವ ಶಿಕ್ಷಣ ಸಂಘರ್ಷವಿದೆ. 'ಸುಶೀಲೆ' ಕಾದಂಬರಿಯ ಸುಶೀಲೆ, 'ನಿರ್ಭಾಗ್ಯವನಿತೆ' ಕಾದಂಬರಿಯ 'ಇಂದಿರೆ', ಪಾತ್ರಗಳು ಶಿಕ್ಷಣದ ತೀಕ್ಷ್ಣತೆಯ ತರ್ಕವಿದೆ. ನಂಜನಗೂಡು ತಿರುಮಲಾಂಬರವರ 'ಮಾತೃನಂದಿನಿ' ಕೃತಿಯಲ್ಲಿ ಬರುವ 'ವಿದ್ಯೆಯಿಂದ ಕೇಡೆಂದಿಗೂ ಉಂಟಾಗದು' ಎಂಬ ಶಿಕ್ಷಣದ ಮಹತ್ವದ ಪ್ರತಿಪಾದನೆ. ಮಹಿಳಾ ಶಿಕ್ಷಣಕ್ಕೆ ಪ್ರತಿಕೂಲವಾದ ವಾತಾವರಣ ಇರುವುದು ಈ ಕಾದಂಬರಿಯಲ್ಲಿ ಕಂಡುಬರುತ್ತದೆ.

ಪುರುಷನ ಉದಾರತನ, ಅವರ ಶಿಕ್ಷಣದ ಬಗೆಗಿನ ಒಲವು, ನಿಲುವುಗಳು ಸ್ವಲ್ಪಮಟ್ಟಿಗಾದರೂ ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಿವೆ. ಸ್ತ್ರೀ ಶಿಕ್ಷಣದ ಕಾಳಜಿ, ಕಳಕಳಿಯನ್ನು ಒಳಗೊಂಡ ತೀಕ್ಷ್ಣವಾದ, ಸಂಗತಿಗಳಿಂದ ಚಿತ್ರಿತವಾದ 'ಇಂದಿರಾಬಾಯಿ' 'ಇಂದಿರೆ', 'ನಭಾ', 'ಸುಶೀಲೆ' ಮುಂತಾದ ಕಾದಂಬರಿಗಳಲ್ಲಿ ವಿದ್ಯಾಭ್ಯಾಸದ ಸಂದಿಗ್ಧ ಪರಿಸ್ಥಿತಿಯಿದೆ. ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಸ್ತ್ರೀಯರ ಅಲ್ಪಸ್ವಲ್ಪ ಓದುಬರಹ ಕಲಿತಿರುವ ಸಮಾಜಕ್ಕೆ ಸ್ಪಂದಿಸಿರುವ ತರ್ಕವಂತಿಕೆ ವಿಚಾರಗಳ ಪ್ರಸ್ತುತತೆ ಇದೆ.

ವಿಲಾಸಿನಿಯರು ಸ್ವೇಚ್ಛಾಚಾರಗಳನ್ನು ರೂಢಿಸಿಕೊಂಡ ಸ್ತ್ರೀಯರ ರಕ್ಕಸಿ ಸ್ವಭಾವ, ಮನೋವಿಕಾರಗಳ ಚರ್ಚೆ ಇದೆ. ದೇಶೀಯವಾದ ವಿದ್ಯಾಬಲದಿಂದ ಉತ್ತಮ ವ್ಯಕ್ತಿತ್ವ, ಪ್ರಾಮಾಣಿಕತೆ ಸಮಾಜಸೇವಾ ಕಾರ್ಯಕರ್ತೆಯರು ಬೆಳೆದ ಸಂಗತಿ ಕಾಣುವುದು. ಆಂಗ್ಲ ವಿದ್ಯಾಭ್ಯಾಸ ಬಲದಿಂದ ಆಂಗ್ಲರ ರೀತಿ ನೀತಿಗಳ ಅನುಕರಿಸಿ, ಸ್ವೇಚ್ಛಾಚಾರಿಯಾದ ಇವರು ಸಮಾಜದ ಆರೋಗ್ಯವನ್ನು ಹಾಳುಮಾಡಿದ ಪ್ರಸಂಗಗಳಿವೆ.

'ಇಂದಿರಾಬಾಯಿ', 'ವಾಗ್ದೇವಿ', 'ಇಂದಿರಾ', 'ನಭಾ', 'ಸುಶೀಲೆ' ಕೃತಿಗಳಲ್ಲಿ ಸಂಪ್ರದಾಯ ಶರಣತೆ, ಧಾರ್ಮಿಕತೆಯ ಚೌಕಟ್ಟು ಅದರ ಮೌಲ್ಯಗಳನ್ನು ಈ ಕೃತಿಗಳು ಪ್ರಶ್ನಿಸುವುದಿಲ್ಲ. ಅಪ್ಪಟ ದೇಶಿಯ ಮೌಲ್ಯಗಳು ಅವನತಿ ಹೊಂದುವದರಿಂದ ಸಂಪ್ರದಾಯಶೀಲತೆ ಉಳಿಯಲು ಸಾಧ್ಯವಿಲ್ಲ ಎಂಬ ತರ್ಕ ಇಲ್ಲಿದೆ. ಕಾದಂಬರಿಕಾರರಿಗೆ ಧರ್ಮವು ಒಂದು ನೈತಿಕ ನಿಲುವು. ಈ ನೈತಿಕ ಧಾರ್ಮಿಕತೆಯು ಪ್ರಸ್ತುತ ಸಮಾಜದಲ್ಲಿ ಅವನತಿಯಾಗಿದೆ. ಭ್ರಷ್ಟವಾಗಿದೆ ಎಂಬುದರಿಂದ ಕೆಟ್ಟ ಧರ್ಮ ಅಳಿದು ಹೊಸ ನೈತಿಕ ಧರ್ಮದ ಪ್ರತಿಪಾದನೆಯಾಗುವದು. ಈ ಕಾದಂಬರಿಗಳ ಆದರ್ಶ, ಮೂಲತಃ ಪಾಶ್ಚಿಮಾತ್ಯ 'ಬಹುಜನಸುಖದ' 'ಸ್ವಯಂ ತಂತ್ರವಾದ' 'ಸುಧಾರಣಾವಾದಿ' ನಿಲುವಿಗೆ ಕಾರಣವಾಗುತ್ತದೆ. ಸದ್ಧರ್ಮ ವಿಜಯಕ್ಕೆ ಪಾಶ್ಚಿಮಾತ್ಯ ವೈಚಾರಿಕತೆಯನ್ನು ಈ ಕೃತಿಗಳು ಆಧರಿಸಿವೆ. ಗುಲ್ವಾಡಿಯವರು ರಾಜಾರಾಮ ಮೋಹನರಾಯರ ವಿಚಾರ ಸರಣಿಗೆ ಒಲಿದಂತೆ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಆಧ್ಯಾತ್ಮದ ಎಳೆತ ಇವರಲ್ಲಿ ಕಾಣಿಸುವುದಿಲ್ಲ. ಹಾಗೆ ವಾಗ್ದೇವಿ ಕಾದಂಬರಿಯ ಪಾತ್ರಗಳೆಲ್ಲವೂ ಧರ್ಮಚ್ಯುತಿ ಪಾತ್ರಗಳೆ. ಇಲ್ಲಿ ವ್ಯಕ್ತಿಗತ ಧರ್ಮದ ಅಧಃಪತನವಿದೆ. ಚಂಚಲನೇತ್ರರ ಯತಿಧರ್ಮ, ಅಬಾಚಾರ್ಯನ ಪತಿಧರ್ಮ, ವಾಗ್ದೇವಿಯ ಸತಿಧರ್ಮ ಆಕೆಯ ಮೇಲೆ ತಾಯಂದಿರು ತಮ್ಮ ತಮ್ಮ ಧರ್ಮಬಿಟ್ಟುಕೊಟ್ಟ ಪ್ರಮೇಯ ಸಾಧಿತ.

ಪುಟ್ಟಣ್ಣನವರ ಪ್ರಕಾರ ಧರ್ಮದ ಪರಿಕಲ್ಪನೆಯೊಂದಿದೆ. ಅದು ಪ್ರತೀತವಾಗುವ ಸಂಪ್ರದಾಯದ ನೈತಿಕತೆ ಪ್ರದರ್ಶಿಸುವದು. 'ಸ್ವಧರ್ಮ'ವನ್ನು ಪರಿಪಾಲಿಸುತ್ತಾ ಸಹಯೋಗದಲ್ಲಿ ಬಾಳುವ ಸಾಮರಸ್ಯದ ಸ್ಥಿತಿಯನ್ನು ಸಾಮಾಜಿಕ ಸ್ವಾಸ್ಥ್ಯದ ಆದರ್ಶ ಸ್ಥಿತಿಯೆಂದು ಪುಟ್ಟಣ್ಣನವರು ನಂಬುವರು. ಅವರ

ಕಾದಂಬರಿಯಲ್ಲಿ ಕಾಣುವ ಮೈಸೂರಿನ ರಾಜ ಸ್ಥಾನ ಹಳ್ಳಿಯ ಬ್ರಾಹ್ಮಣಮನೆ, ಸಂಜವಾಡಿಯ ಅಮ್ಮನವರ ಗುಡಿ ಅವರಲ್ಲಿಯೇ ಧರ್ಮಚ್ಯುತಿಯ ಸ್ಥಿತಿಯನ್ನು ಕಾದಂಬರಿಯಲ್ಲಿ ಧ್ವನಿಸುವವು.

ಕ್ರೈಸ್ತಧರ್ಮ ಪ್ರಚಾರದ ಉದ್ದೇಶದಿಂದ ಬಾಸೆಲ್ ಮಿಷನ್ ಸಂಸ್ಥೆಯ ಮಿಷನರಿಗಳು ಮಂಗಳೂರಲ್ಲಿ ಕೇಂದ್ರವೊಂದನ್ನು ಪ್ರಾರಂಭ ಮಾಡಿದರು. ೧೯೨೦ರ ತನಕವೂ ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ರಂಗದಲ್ಲಿ ಇದು ಕ್ರೀಯಾಶೀಲ ಪಾತ್ರ ವಹಿಸಿ. ಮುಂದೆ ಲಿಪಿ ಸುಧಾರಣೆ ಗ್ರಂಥಮುದ್ರಣ, ಗ್ರಂಥ ಸಂಪಾದನೆ, ನಿಘಂಟು–ಕೋಶಗಳ ರಚನೆ, ಪತ್ರಿಕೋದ್ಯಮ ಮೊದಲಾದ ಕನ್ನಡಭಾಷಾ ಕೆಲಸದ ಜೊತೆಗೆ ಔದ್ಯಮೀಕರಣವನ್ನು ಬಾಸೆಲ್ ಮಿಷನ್‌ನವರು ಆರಂಭಿಸಿದರು. ಇಂತಹ ಉದ್ಯಮಶೀಲತೆಯ ಹಿಂದೆ ಈ ಕೆಲಸಗಳ ತಳಹದಿ ಇದೆ. ಹೆಬಿಕ್, ಕಿಟೆಲ್, ಹಾಕ್, ಹೂಬರ್, ಕೀಸ್, ಮೊಗ್ಲಿಂಗ್, ಪ್ಲೆಬಿಸ್ಟ್ ಮುಂತಾದವರು ಬಾಸೆಲ್ ಮಿಷನ್ ಸಂಸ್ಥೆಯ ಪ್ರಮುಖ ಮಿಷನರಿಗಳು.

ಈ ಸಂದರ್ಭದಲ್ಲಿ ಮಿಷನರಿಗಳು ತಮ್ಮ ಶಾಲೆಗಳು ಮತ್ತು ಉದ್ಯಮಗಳ ಮೂಲಕ ಬಂಡವಾಳಶಾಹಿ ನೈತಿಕತೆಯಾದ ಉದ್ಯಮಶೀಲತೆ ಮತ್ತು ನಿರ್ಭಯ ದಕ್ಷತೆಗಳನ್ನು ಬೆಳೆಸಲು ಯತ್ನಿಸಿದರು. ಇವು ಮಿಷನರಿಗಳ ಕ್ರೈಸ್ತ ದೃಷ್ಟಿಕೋನದ ಆಧುನಿಕ ನಾಗರಿಕ ಪರಿಕಲ್ಪನೆ ನೇರವಾಗಿದ್ದವು. ಇಲ್ಲಿ ಜೀವನ ಪಲ್ಲಟ ಪ್ರಾರಂಭವಾಯಿತು. ಶಾಲೆಗಳ ಆರಂಭ ಮತ್ತು ಉದ್ಯಮ ಸ್ಥಾಪನೆಯನ್ನು ಈ ಸಂಸ್ಥೆಯು ಕೈಗೊಂಡಿತು.

ಭಾರತೀಯರ ಮೇಲೆ ಮತಾಂತರದ ಪ್ರಭಾವ ಕುರಿತಾದ ಕಾರಣ ಪರಿಣಾಮ ಸಾಮಾಜಿಕ ಸ್ವಾಸ್ಥ್ಯದ ಸಂಗತಿಗಳ ವಿಶ್ಲೇಷಣೆ. ಸ್ವಾತಂತ್ರ್ಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸಿದ ಸಂಘ ಸಂಸ್ಥೆಗಳ ಪಾತ್ರ ಮಹತ್ವದ್ದು. ಕೌಟುಂಬಿಕತೆಯ ಹಿನ್ನೆಲೆಯಲ್ಲಿ ಅವಿಭಕ್ತ ವಿಭಕ್ತ ಕುಟುಂಬಗಳ ಒಗುಬಗೆಯ ವಿವರವಿದೆ. ವರ್ಗ, ವರ್ಣ, ಲಿಂಗ ತಾರತಮ್ಯ ವಿವರ ವಿಶ್ಲೇಷಣೆ ಕಾಣುವುದು.

ಮುದ್ರಣಯಂತ್ರ ಆಗಮನ, ಗ್ರಂಥ ಉದ್ಯಮದ ಬೆಳವಣಿಗೆ ಶಿಕ್ಷಣ ಬೆಳವಣಿಗೆಯ ಸಂಬಂಧಿತವಾಗಿವೆ. ಮೊದಲು ವ್ಯಾಕರಣ, ಕ್ರಮಿಕ ಪುಸ್ತಕಗಳು, ಪತ್ರಗಳು ಈ ಶಿಕ್ಷಣ ವ್ಯವಸ್ಥೆಯ ಅಂಗವಾಗಿ ಪ್ರಕಟಗೊಂಡವು. ಪ್ರಾಥಮಿಕ ಶಿಕ್ಷಣ ಮುನ್ನಡೆಯು ಈ ಪ್ರಕಟಿತ ಕೃತಿಗಳು ಓದುವರ್ಗವನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದವು. ಶಿಕ್ಷಣಸುಧಾರಣೆಯನ್ನು ಮನ್ರೊ, ಎಲ್‌ಫಿನ್‌ಸ್ಟನ್ ಅವರು ಆರಂಭಿಸಿದರು. ಆಧುನಿಕ ವೈಜ್ಞಾನಿಕ ತಿಳುವಳಿಕೆ ಪಾಶ್ಚಿಮಾತ್ಯ ವೈಚಾರಿಕತೆಗಳಿಗೆ ಅನುಗುಣವಾಗಿ ಪತ್ರಗಳ ಪ್ರಚಾರವಾಗಲಾರಂಭಿಸಿದ್ದು ಈ ಪ್ರಾಥಮಿಕ ಶಾಲೆಗಳ ಮುಖಾಂತರವೆ. ಏನೇ ಆದರೂ ಪ್ರಾಥಮಿಕ ಶಿಕ್ಷಣವು ಹೊಸ ಓದುಗವರ್ಗವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿತು. ಹೊಸ

ಬಗೆಯ ಶಿಕ್ಷಣ ಕ್ರಮ, ಆಡಳಿತ ಶೈಲಿ, ಮತ್ತು ಸಾಮಾಜಿಕ, ಚಾರಿತ್ರಿಕ ಬದಲಾವಣೆಗಳು ಹೊಸ ಓದುಗ ವರ್ಗಕ್ಕೆ ಕಾರಣವಾದವು. ಸಾಕ್ಷರತೆ ಓದು ವರ್ಗದ ಬೆಳವಣಿಗೆಗೆ ಕಾರಣವಾದುದ್ದು ಇದೆ. ಮುದ್ರಣಯಂತ್ರ ಆಗಮನ, ಅಚ್ಚುಗಳು ಮಂಗಳೂರು, ಬಳ್ಳಾರಿ, ಬೆಂಗಳೂರು, ಧಾರವಾಡದಲ್ಲಿ ಉಂಟಾದ ಮುದ್ರಣ ಸಂಗತಿಗಳ ಚರ್ಚೆಯು ಭಾರತೀಯ ಸಾಹಿತ್ಯದಲ್ಲಿ ಕರ್ನಾಟಕ ಸಾಹಿತ್ಯ ಚಟುವಟಿಕೆಯ ಕ್ರೀಯಾಶೀಲವಾದ ಸಂಗತಿಯ ವಿವರ. ಮುದ್ರಣದ ಆಗಮನದ ತರುವಾಯ ಪತ್ರಿಕೆಗಳ ಪ್ರವೇಶ, ಬದಲಾದ ಶೈಕ್ಷಣಿಕ ನೆಲೆಗಟ್ಟು ಕುರಿತು ವಿಶ್ಲೇಷಣೆ. ಮಿಷನರಿಗಳ ಪಾತ್ರ, ಶಿಕ್ಷಣ ಪ್ರಸಾರ, ಧರ್ಮ ಪ್ರಸಾರ, ಪ್ರಭಾವ, ಪಾತ್ರ ಸ್ವರೂಪಗಳ ಕುರಿತು ಚರ್ಚೆ ಕಾಣುವುದು.

ಗ್ರಂಥ ಉದ್ಯಮ ಆಧುನಿಕ ರೀತಿಗೆ ಹೊಸ ಸಾಹಿತ್ಯದ ಪರಿಕಲ್ಪನೆಗೆ ಅನುಗುಣವಾಗಿ ಹಳೆಯ ಕಾವ್ಯಗಳನ್ನು ಪ್ರಕಟಿಸುವ ವಿದ್ಯಮಾನವು ಇಲ್ಲಿ ಕಾಣಿಸುವದು. ಕಥನ ಪ್ರಧಾನವಾದ ನೆಲೆಯಲ್ಲಿ ಗ್ರಂಥಪಾಠಗಳ ಮುದ್ರಣದ ಯತ್ನಗಳನ್ನು ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ೧೯೦೧ರ ಕರ್ನಾಟಕ ಗ್ರಂಥಮಾಲೆಯ ಸಂಚಿಕೆ ಗಮನಿಸಿದಾಗ ಸ್ಪಷ್ಟವಾಗುವುದು. ಚರಿತ್ರೆ, ನಾಟಕ, ಪದ್ಯ, ಸಂಗ್ರಹ, ಕಾದಂಬರಿ, ಅನುವಾದಗಳೆಂಬ ವಿವಿಧ ರೀತಿಯ ವಿಭಾಗ ಕ್ರಮ ಸಾಹಿತ್ಯ ಫಲವಂತಿಕೆಯಾಗಿದೆ. ಕನ್ನಡ ಕಾದಂಬರಿ ಪ್ರಸಾರವು ಮುಖ್ಯವಾದ ಕರ್ನಾಟಕ ವಿದ್ಯಾವರ್ಧಕ ಸಂಘ, ವಾಗ್ಭೂಷಣ, ಕರ್ನಾಟಕ ಗ್ರಂಥಮಾಲೆ, ಆನಂದವನ ಸದ್ಬೋಧ ಚಂದ್ರಿಕೆ ಮುಂತಾದ ಪತ್ರಿಕೆಗಳು ಕಾದಂಬರಿ ಪ್ರಕಟಿಸಲು ಅಣಿಯಾಗಿದ್ದವು.

ಅರುಣೋದಯ, ಆನಂದ ಚಂದ್ರಿಕೆ, ಕರ್ನಾಟಕ ವಾಣಿ ವಿಲಾಸ, ವಿಜ್ಞಾನ ದೀಪಿಕೆ, ಕನ್ನಡ ಸಹಕಾರಿ, ಸದ್ಬೋಧಚಂದ್ರಿಕೆ, ಸಚಿತ್ರಭಾರತ, ಶುಭೋದಯ ಅರ್ಥಸಾಧಕ, ಪರಮಾರ್ಥ, ಸರಸ್ವತಿ ಕರ್ನಾಟಕ ನಂದಿನಿ, ಅದ್ಯಾತ್ಮ ಪ್ರಕಾಶ, ಹಿತೋಪದೇಶ, ಲೋಕ ರಹಸ್ಯ, ಮಠಪತ್ರಿಕೆ, ಆದ್ಯಾತ್ಮ ಪ್ರಕಾಶ, ನಂದಿನಿ, ಸುವಾಸಿನಿ, ವಸಂತ, ಅರ್ಥಸಾಧಕ, ಶಿವಾನುಭವ, ಧರ್ಮತರಂಗಿಣಿ, ಮಾತೃಭೂಮಿ, ಪ್ರಬುದ್ಧ ಕರ್ನಾಟಕ, ವಿವೇಕೋದಯ, ಆರ್ಯಮತೋದ್ಧಾರಿಣಿ ಮುಂತಾದ ಪ್ರಮುಖ ಪತ್ರಿಕೆಗಳು ಆರಂಭ ಕಾಲದ ಕಾದಂಬರಿಗಳಿಗೆ ವೇದಿಕೆ ಒದಗಿಸಿಕೊಟ್ಟಿವೆ. ಇಂತಹ ಪತ್ರಿಕೆಗಳಲ್ಲಿ ಕಾದಂಬರಿಯನ್ನು ಪ್ರಕಟಿಸುವಾಗ ಆ ಕುರಿತು ಸಾಕಷ್ಟು ಕುತೂಹಲವನ್ನು ಕೆರಳಿಸುವ ಕೆಲಸವನ್ನು ಅಂದಿನ ಪತ್ರಕರ್ತರು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ದೊರಕುವ ಸುಮಾರು ೮೦ ಪತ್ರಿಕೆಗಳ ಪೈಕಿ ೩೦ಕ್ಕೂ ಮಿಕ್ಕಿದ ಪತ್ರಿಕೆಗಳು ಕಾದಂಬರಿಗಳನ್ನು ಪ್ರಕಟಿಸಿವೆ.

ಈ ಬಗೆಯ ಪತ್ರಿಕೆಯ ಹುಟ್ಟು ಬೆಳವಣಿಗೆಯು ಈ ಶತಮಾನದ ಆರಂಭದ ಅವಧಿಯಲ್ಲಿ ಸಾಮಾಜಿಕ ಆಸಕ್ತಿಯ ಹಿಗ್ಗಿಸುವಿಕೆಯನ್ನು ಪ್ರತಿನಿಧಿಸಿದೆ. ಹತ್ತೊಂಬತ್ತನೆಯ ಶತಮಾನದ ಒಂದು

ವರ್ಗವಾಗಿ ರೂಪಗೊಳ್ಳಲಾರಂಭಿಸಿದ ಇಂಗ್ಲಿಷ್ ವಿದ್ಯಾವಂತ ವರ್ಗದ ಆಧುನಿಕತೆಯ ಸಂವೇದನೆಯ ದ್ಯೋತಕವಾಗಿ ಈ ಬೆಳವಣಿಗೆಯನ್ನು ಗಮನಿಸಬಹುದು. ಈ ಬೆಳವಣಿಗೆ ಸಾಮಾಜಿಕ ಆರ್ಥಿಕ ಸ್ಥಿತಿಯೊಂದಿಗೆ ನಿಕಟ ಸಂಬಂಧವನ್ನು ಪಡೆದ್ದಿದಿದೆ.

ಪುರುಷ ನಿರ್ಮಿತ ವ್ಯವಸ್ಥೆಯಲ್ಲಿ ಜನ್ಮತಳೆದ ಕನ್ನಡ ಸಾಹಿತ್ಯ ಸ್ತ್ರೀಯನ್ನು ಗುಲಾಮಳಂತೆ ನಡೆಸಿಕೊಂಡು ಬಂದಿದೆ. ಇದು ಹೊಸ ರೂಪ ಪಡೆದು ಇಂದಿನವರೆಗೂ ಪ್ರಚಲಿತವಿದೆ. ಆದರೆ ಸ್ವತಂತ್ರ ಪೂರ್ವದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನೋಡುವಾಗ ಸ್ತ್ರೀ ಶೋಷಣೆಯ ಒಂದು ಮುಖದಂತಿದ್ದ ಪುರುಷ, ಅವಳ ಸುಧಾರಣೆಗೆ ಸ್ಪಂಧಿಸಿದವನು ಪುರುಷನೇ ಆಗಿದ್ದಾನೆ. ಮಾನವತಾವಾದದ ಆವಿಷ್ಕಾರದ ಫಲವಾಗಿ ಬದಲಾಗತೊಡಗಿದ ಸಮಾಜದ ಪರಿಸ್ಥಿತಿಗೆ ಲೇಖಕರು ಸ್ಪಂಧಿಸಿದಂತೆ ಸ್ತ್ರೀಯರು ಬದಲಾಗಬೇಕಾಯಿತು.

ಒಟ್ಟಾರೆಯಾಗಿ ಸ್ವಾತಂತ್ರ್ಯ ಪೂರ್ವ ಮೊದಲಘಟ್ಟದ ಸ್ವತಂತ್ರ ಕಾದಂಬರಿಗಳಲ್ಲಿ ದಾಖಲಾಗಿರುವ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಕುರಿತು ಅಧ್ಯಯನ ಮಾಡಿರುವುದು ಹೆಚ್ಚೆಚ್ಚು ಪ್ರಯೋಜನಕಾರಿಯಾಗಿದೆ. ಇದರಿಂದ ಮೊದಲ ಘಟ್ಟದ ಕಾದಂಬರಿಗಳಲ್ಲಿ ಕಾದಂಬರಿಕಾರರು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದ ರೀತಿ ಅನನ್ಯ. ವ್ಯಕ್ತಪಡಿಸಿರುವ ಸಹಾನುಭೂತಿ, ಕಾಳಜಿಯನ್ನು ಗುರುತಿಸಲು ಸಹಕಾರಿಯಾಗಿದೆ. ಈ ರೀತಿ ಅಧ್ಯಯನಗಳು, ಈ ಕಾಲಘಟ್ಟದ ಕಾದಂಬರಿ ಕ್ಷೇತ್ರ ಮಾತ್ರವಲ್ಲದೆ ಉಳಿದ ಸಾಹಿತ್ಯ ಪ್ರಕಾರಗಳಲ್ಲೂ ನಡೆದರೆ, ಸಾಹಿತ್ಯ ಕ್ಷೇತ್ರದಲ್ಲಿ ಸಾಮಾಜಿಕ ಚಿಂತನೆಗಳನ್ನು ಸಂಘರ್ಷಗಳನ್ನು ಶೋಧಿಸಲು ಸಹಕಾರಿಯಾಗುವುದು.

ಅನುಬಂಧಗಳು

ಅನುಬಂಧಗಳು

೧. ಕಾದಂಬರಿಗಳು:

೧. ಕೆರೂರು ವಾಸುದೇವಾಚಾರ್ಯ, ಇಂದಿರಾ, ಉಷಾ ಸಾಹಿತ್ಯ ಮಾಲೆ, ಮೈಸೂರು, ಪ್ರಕಟ-೧೯೭೮.

೨. ಗದಗಕರ ಲಕ್ಷ್ಮಣ ಭೀಮರಾವ್, ಸೂರ್ಯಕಾಂತ, ಹಿಂದೂ ಪ್ರಿಟಿಂಗ್ ವರ್ಕ್ಸ್, ಧಾರವಾಡ, ಪ್ರಕಟ-೧೮೯೨.

೩. ಗದಗಕರ ಲಕ್ಷ್ಮಣ ಭೀಮರಾವ್, ಚಂದ್ರಪ್ರಭಾ, ಕರ್ನಾಟಕ ಬುಕ್ ಡಿಪೋ, ಪ್ರಕಟ-೧೮೯೬.

೪. ಗಳಗನಾಥ, ಪ್ರಬುದ್ಧ ಪದ್ಮನಯನೆ, ಗಳಗನಾಥರ ಸುರಸ, ಗ್ರಂಥಮಾಲೆ, ಧಾರವಾಡ, ಪ್ರಕಟ-೧೯೫೭.

೫. ಗುಬ್ಬಿ. ಸೊ. ಮುರಗಾರಾಧ್ಯ, ಶೃಂಗಾರ ಚಾತುರ್ಯೋಲ್ಲಾಸಿನಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೯೬.

೬. ಗುಲ್ವಾಡಿ ವೆಂಕಟರಾಯ, ಇಂದಿರಾಬಾಯಿ, ಗುಲ್ವಾಡಿ ವೆಂಕಟರಾಯ, ಸ್ಮಾರಕ ಕೇಂದ್ರ ೨೭, ಅನಂತನಗರ ಮಣಿಪಾಲ (ದ.ಕ), ಪ್ರಕಟ-೧೯೭೮.

೭. ಗುಲ್ವಾಡಿ ವೆಂಕಟರಾಯ, ಬಾಗೀರಥಿ, ಧರ್ಮಪ್ರಕಾಶ, ಮುದ್ರಾಕ್ಷರ ಶಾಲೆ, ಮಂಗಳೂರು, ಪ್ರಕಟ-೧೯೦೦.

೮. ನಂಜನಗೂಡು ತಿರುಮಲಾಂಬ, ಸುಶೀಲೆ, ಹಿತೈಷಿಣಿಯ ಹೆಜ್ಜೆಗಳು (ಸಂ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪ್ರಕಟ-೧೯೯೩.

೯. ನಂಜನಗೂಡು ತಿರುಮಲಾಂಬ, ನಭಾ, ಸತೀಹಿತೈಷಿಣಿ ಮಾತೃಮಂದಿರ, ನಂಜನಗೂಡು, ಪ್ರಕಟ-೧೯೯೩.

೧೦. ನಂಜನಗೂಡು ತಿರುಮಲಾಂಬ, ವಿರಾಗಿಣಿ ಹಿತೈಷಿಣಿಯ ಹೆಜ್ಜೆಗಳು(ಸಂ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪ್ರಕಟ-೧೯೯೩.

೧೧. ಪುಟ್ಟಣ್ಣ ಎಂ.ಎಸ್. ಮಾಡಿದ್ದುಣ್ಣೋ ಮಹಾರಾಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೧೯೮೩.

೧೨. ಬೋಳಾರು ಬಾಬುರಾಯರು. ವಾಗ್ದೇವಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು. ಪ್ರಕಟ-೧೯೮೫.

೨. ಪರಾಮರ್ಶನ ಗ್ರಂಥಗಳು:

೧. ಅನಂತಮೂರ್ತಿ, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ ಸಾಗರ, ಪ್ರಕಟ-೧೯೭೧.

೨. ಅನಂತಮೂರ್ತಿ, ಸಮಕ್ಷಮ, ಅನನ್ಯ ಪ್ರಕಾಶನ, ಮೈಸೂರು, ಪ್ರಕಟ-೧೯೮೦.

೩. ಅಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ಪ್ರಕಟ-೧೯೯೪.

೪. ಅಮೂರ ಜಿ.ಎಸ್., ಸಮಕಾಲೀನ ಕಥೆ ಕಾದಂಬರಿಗಳ, ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೮೬.

೫. ಅರವಿಂದ ಮಾಲಗತ್ತಿ, ಕಾದಂಬರಿ ವಿಮರ್ಶೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪ್ರಕಟ-೨೦೦೦.

೬. ಅಶೋಕ ಟಿ. ಪಿ., ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಸಾಗರ, ಪ್ರಕಟ-೧೯೯೧.

೭. ಅಶೋಕ ಟಿ.ಪಿ., ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಸಾಗರ, ಪ್ರಕಟ-೧೯೯೧.

೮. ಆರ್ಕೆ ಮಣಿಪಾಲ, ಸಾಹಿತ್ಯ ಪ್ರಕ್ರಿಯೆ, ನವಕರ್ನಾಟ ಪ್ರಕಾಶನ, ಬೆಂಗಳೂರು, ಪ್ರಕಟ-೧೯೯೫.

೯. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಪ್ರಕಟ-೨೦೦೨.

೧೦. ಎಲಿಗಾರ ಚನ್ನಕ್ಕ, ಸಾಹಿತ್ಯ ಚೈತ್ರ, ಚನ್ನಗಂಗಾ ಪ್ರಕಾಶನ. ಧಾರವಾಡ. ಪ್ರಕಟ-೧೯೯೩.

೧೧. ಕರ್ನಾಟಕ ವಿದ್ಯಾವರ್ಧಕ ಸಂಘ. ಗಳಗನಾಥರ ಜೀವನ ವಿಮರ್ಶೆ. ಸಮಾಜ ಪುಸ್ತಕಾಲಯ. ಧಾರವಾಡ.

೧೨. ಕಲ್ಯಾಣಮ್ಮಾ ಆರ್. ಪ್ರಿಯಂವದೆ. ಡಾ. ಜಿ.ಎಸ್. ಸುಮಿತ್ರಾಬಾಯಿ(ಸಂ), ಕಲ್ಯಾಣ ಸರಸ್ವತಿ ಕರ್ನಾಟಕ ಲೇಖಿಕೆಯರ ಸಂಘ (ರಿ). ಬೆಂಗಳೂರು. ಪ್ರಕಟ-೧೯೭೮

೧೩. ಕುರ್ತಕೋಟಿ ಕೀರ್ತಿನಾಥ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ, ಪ್ರಕಟ-೨೦೦೨.

೧೪. ಕುರ್ತಕೋಟಿ ಕೀರ್ತಿನಾಥ, ಸಂಸ್ಕೃತಿ ಸ್ಪಂದನ, ಮನೋಹರ ಗ್ರಂಥಮಾಲೆ, ಧಾರವಾಡ, ೧೯೮೬.

೧೫. ಕುರ್ತಕೋಟಿ ಕೀರ್ತಿನಾಥ, ವಿಮರ್ಶೆಯ ವಿಷಯ ಕಾದಂಬರಿ, ಮನೋಹರ ಗ್ರಂಥಮಾಲೆ, ಧಾರವಾಡ, ಪ್ರಕಟ-೧೯೮೨.

೧೬. ಕುರ್ತಕೋಟಿ ಕೀರ್ತಿನಾಥ ಮತ್ತು ಜೋಶಿ ಜಿ. ಬಿ. (ಸಂಪಾದನೆ), ವಾಸುದೇವ ಪ್ರಶಸ್ತಿ, ವಿನೋದಿನಿ ನಾಟ್ಯ ಸಭೆ, ಬಾಗಲಕೋಟ, ಪ್ರಕಟ-೧೯೬೪.

೧೭. ಕೊರಟ ಶ್ರೀನಿವಾಸರಾವ್, ಕನ್ನಡ ಕಾದಂಬರಿಗಳಲ್ಲಿ ಇತಿಹಾಸ, ಚಿನ್ನದ ಗರಿ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಪ್ರಕಟ-೧೯೭೪.

೧೮. ಖಂಡೋಬಾ ಪಿ.ಕೆ, ಕನ್ನಡ ಪ್ರಾದೇಶಿಕ ಕಾದಂಬರಿಗಳ ಜನಪದೀಯತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೯೯.

೧೯. ಗಾಯತ್ರಿ ಎನ್, ಮಹಿಳಾ ಚಳುವಳಿಯ ಮಜಲುಗಳು, ನವ ಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ಪ್ರಕಟ-೧೯೯೮.

೨೦. ಗಿರಡ್ಡಿ ಗೋವಿಂದರಾಜ, ಕಾದಂಬರಿ ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಮೈಸೂರು, ಪ್ರಕಟ-೧೯೭೬.

೨೧. ಗೋಕಾಕ ವಿ.ಕೃ, ನವ್ಯತೆ, ಸುರುಚಿ ಪ್ರಕಾಶನ, ಮೈಸೂರು, ಪ್ರಕಟ-೧೯೭೫.

೨೨. ಗೋವಿಂದರಾಜ ಸಿ.ಆರ್, ನವಚಾರಿತ್ರಿಕವಾದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨ಪ್ರಕಟ-೦೦೯.

೨೩. ತರೀಕೆರೆ ರಹಮತ್, ಮರದೊಳಗಣ ಕಿಚ್ಚು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೧೦.

೨೪. ತರೀಕೆರೆ ರಹಮತ್, ಪ್ರತಿ ಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ಪ್ರಕಟ-೧೯೯೩.

೨೫. ತರೀಕೆರೆ ರಹಮತ್, ಕನ್ನಡ ಸಂಶೋಧನೆಯ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಪ್ರಕಟ-೨೦೦೭.

೨೬. ತಿಪ್ಪೆರುದ್ರಸ್ವಾಮಿ, ಕನ್ನಡ ವಿಮರ್ಶೆ, ಕವಲು ಹಾದಿಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪ್ರಕಟ-೧೯೭೮.

೨೭. ತಿಪ್ಪೆರುದ್ರಸ್ವಾಮಿ, ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ, ರಾಜೇಂದ್ರ ಪ್ರಿಂಟರ್ಸ್, ಬೆಂಗಳೂರು, ಪ್ರಕಟ-೧೯೭೯.

೨೮. ತಿಪ್ಪೆರುದ್ರಸ್ವಾಮಿ ಹೆಚ್, ಅಸ್ತಿತ್ವವಾದ, ಬೆಂಗಳೂರು ವಿಶ್ವವಿದ್ಯಾಲಯ, ಸಂಪಾದನಾ ಕೃತಿ, ಬೆಂಗಳೂರು, ಪ್ರಕಟ-೧೯೭೯.

೨೯. ತಿಪ್ಪೆರುದ್ರಸ್ವಾಮಿ ಹೆಚ್, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ವಿಶ್ವವಿದ್ಯಾಲಯ, ಸಂಪಾದನಾ ಕೃತಿ, ಬೆಂಗಳೂರು, ಪ್ರಕಟ-೧೯೭೧.

೩೦. ತೇಜಸ್ವಿನಿ ಸೀಮಂತಿನಿ ನಿರಂಜನ, ಸ್ತ್ರೀವಾದ ಸಾಹಿತ್ಯ ವಿಮರ್ಶೆ, ನವಕರ್ನಾಟಕ ಪ್ರಿಂಟರ್ಸ್ ಬೆಂಗಳೂರು, ಪ್ರಕಟ-೧೯೯೪.

೩೧. ಧರಣಿದೇವಿ ಮಾಲಗತ್ತಿ, ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್ ಹೌಸ್, ಬೆಂಗಳೂರು, ಪ್ರಕಟ-೧೯೯೮.

೩೨. ನಂಜನಗೂಡು ತಿರುಮಲಾಂಬಾ, ವಿರಾಗಿಣಿ, ಹಿತೈಷಿಣಿಯ ಹೆಜ್ಜೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೧೯೯೨.

೩೩. ನಾಗಭೂಷಣ ಸ್ವಾಮಿ ಓ.ಎಲ್, ವಿಮರ್ಶೆಯ ಪರಿಭಾಷೆ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೧೧.

೩೪. ನಾಗರಾಜ ಡಿ.ಆರ್, ಸಾಹಿತ್ಯ ಕಥನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೦೧.

೩೫. ನಾಯಕ ಜಿ.ಎಚ್(ಸಂಪಾದನೆ), ಶತಮಾನದ ಕನ್ನಡ ಸಾಹಿತ್ಯ, ರಾಘವೇಂದ್ರ ಪ್ರಕಾಶನ, ಅಂಕೋಲ, ಪ್ರಕಟ-೨೦೦೦.

೩೬. ನಾಯಕ ಜಿ.ಎಚ್, ಕೃತಿ ಸಾಕ್ಷಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪ್ರಕಟ-೨೦೦೬.

೩೭. ನಾಯಕ ಜಿ.ಎಚ್, ನಿಜದನಿ, ಅಕ್ಷರ ಪ್ರಕಾಶನ, ಸಾಗರ, ಪ್ರಕಟ-೧೯೮೮.

೩೮. ನಾಯಕ ಹಾ.ಮಾ, ಚಿನ್ನದ ಗರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪ್ರಕಟ-೧೯೭೫.

೩೯. ನಾರಾಯಣ ಕೆ.ವ್ಹಿ, ಬೇರು ಕಾಂಡ ಚಿಗರು, ವಿವೇಕ ಪ್ರಕಾಶನ ವಿಚಾರ ವೇದಿಕೆ, ಲಕ್ಕಸಂದ್ರ ಬಡಾವಣೆ, ಬೆಂಗಳೂರು, ಪ್ರಕಟ-೧೯೯೬.

೪೦. ಪಟ್ಟಾಬಿ ಆರ್ಯಾಂಬ, ಮಹಿಳೆ ಒಂದು ಅಧ್ಯಯನ, ಸಾಯಿಗೀತಾ ಪ್ರಕಾಶನ, ಚಾಮರಾಜಪುರಂ, ಮೈಸೂರು, ಪ್ರಕಟ-೧೯೯೮.

೪೧. ಪಟ್ಟಾಭಿಸೀತಾರಾಮಯ್ಯ, ಹಿಂದೂ ಕುಟುಂಬ ಪುನರ್ದರ್ಶನ, ಮನೋಹರ ಗ್ರಂಥ ಭಂಡಾರ, ಧಾರವಾಡ.

೪೨. ಬಸವರಾಜ ಸಾದರ, ಕನ್ನಡ ಸಾಹಿತ್ಯ ಘಟ್ಟಗಳು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ಪ್ರಕಟ-೨೦೦೨.

೪೩. ಬೆಳಗಲಿ ದು. ನಿಂ, ಕನ್ನಡದಲ್ಲಿ ಕಾದಂಬರಿ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೭೫.

೪೪. ಭೈರಪ್ಪ ಎಸ್.ಎಲ್, ಕಥೆ ಮತ್ತು ಕಥಾವಸ್ತು, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ಪ್ರಕಟ-೧೯೬೪.

೪೫. ಬೋರಲಿಂಗಯ್ಯ ಎನ್., ಸಂಘರ್ಷ, ವೃದ್ಧಿ ಪ್ರಕಾಶನ, ಮೈಸೂರು, ಪ್ರಕಟ-೧೯೭೨.

೪೬. ಮಂಗಳಾ ಟಿ.ನ, ಎಚ್ಚೆತ್ತ ಹಾದಿಯಲ್ಲಿ ಮಹಿಳೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪ್ರಕಟ-೧೯೯೦.

೪೭. ಮಂಗಳ ಟಿ.ನ, ತಿರುಮಲಾಂಬ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೯೧.

೪೮. ಮಹೇಶ್ವರಿ ಯು, ಇದು ಮಾನುಷಿಯ ಓದು, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ಪ್ರಕಟ-೨೦೦೧.

೪೯. ಮುಗಳಿ ರಂ.ಶ್ರೀ, ಸಾಹಿತ್ಯೋಪಾಸನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೦೬.

೫೦. ಮುಗಳಿ ರಂ.ಶ್ರೀ, ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೬೯.

೫೧. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಇತಿಹಾಸ ಕಾವ್ಯಾಲಯ, ಮೈಸೂರು, ಪ್ರಕಟ-೧೯೭೬.

೫೨. ರಂಗನಾಥ ಬಿ.ಎನ್, ಒಳನೋಟ, ಸ್ನೇಹ ಪ್ರಕಾಶನ, ಕೋರಮಂಗಲ ಬೆಂಗಳೂರು, ಪ್ರಕಟ-೧೯೮೦.

೫೩. ರಾಮಚಂದ್ರನ್ ಸಿ.ಎನ್. ಕಾದಂಬರಿ ೧೯೦೦. ೧೯೨೫. ಶತಮಾನದ ಕನ್ನಡ ಸಾಹಿತ್ಯ, ಪ್ರಕಟ-೨೦೦೦.

೫೪. ರಾಮಚಂದ್ರನ್ ಸಿ.ಎನ್. ಶಿಲ್ಪ ವಿನ್ಯಾಸ. ಸಂತ ಫಿಲೋಮಿನ ಕಾಲೇಜು, ಕನ್ನಡ ಸಂಘ ಪುತ್ತೂರು, ಪ್ರಕಟ-೧೯೮೬.

೫೫. ರಾಮಚಂದ್ರನ್ ಸಿ.ಎನ್. ಸಾಹಿತ್ಯ ವಿಮರ್ಶೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೧೧.

೫೬. ಲೋಕಾಪೂರ ಬಾಳಾಸಾಹೇಬ, ಕೆರೂರು ವಾಸುದೇವಾಚಾರ್ಯ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ಪ್ರಕಟ-೨೦೧೦.

೫೭. ವಿಜಯದಬ್ಬೆ, ಹಿತೈಷಿಣಿಯ ಹೆಜ್ಜೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪ್ರಕಟ-೧೯೯೨.

೫೮. ವಿಜಯಶ್ರೀ ಸಬರದ, ಸಾಹಿತ್ಯ ಸಂವಹನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೨೦೦೨.

೫೯. ವಿವೇಕ ರೈ ಬಿ.ಎ(ಸಂ)ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ಪ್ರಕಟ-೧೯೮೭

೬೦. ಶಂಕರ ಪಾಟೀಲ, ಕಾದಂಬರಿ ದರ್ಶನ (ಸಂ), ಕೃಷ್ಣಮೂರ್ತಿ ಪುರಾಣಿಕ ಸತ್ಕಾರ ಸಮಿತಿ, ಹುಬ್ಬಳ್ಳಿ, ಪ್ರಕಟ-೧೯೭೪.

೬೧. ಶಾಂತಿನಾಥ ದೇಸಾಯಿ, ಕನ್ನಡ ಕಾದಂಬರಿ ನಡೆದು ಬಂದ ರೀತಿ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರಕಟ-೧೯೮೯.

೬೨. ಶಿಂತ್ರಿ ಸರೋಜಿನಿ, ಮಹಿಳೆ ನಡೆದುಬಂದ ದಾರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೭೭.

೬೩. ಶೇಷಗಿರಿರಾವ್ ಎಲ್.ಎಸ್. ಕಾದಂಬರಿ: ಸಾಮಾನ್ಯ ಮನುಷ್ಯ, ಶಾರದಾ ಪ್ರಕಾಶನ, ಬೆಂಗಳೂರು, ಪ್ರಕಟ-೧೯೯೦.

೬೪. ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿ, ರಾಜಾ ಪ್ರಿಂಟರ್ಸ್ ಲಾಲ್‌ಬಾಗ್. ಬೆಂಗಳೂರು. ಪ್ರಕಟ-೨೦೦೬.

೧೫. ಶ್ರೀನಿವಾಸ ಹಾವನೂರ, ಕಾದಂಬರಿಕಾರ ಗಳಗನಾಥರು, ಸಾಹಿತ್ಯ ಅಕಾಡಮಿ, ಬೆಂಗಳೂರು, ಪ್ರಕಟ-೨೦೦೦.

೧೬. ಶಿವರುದ್ರಪ್ಪ ಜಿ.ಎಸ್, ಮಹಿಳೆ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪ್ರಕಟ-೧೯೭೯.

೧೭. ಸಬಿಹಾ ಭೂಮೀಗೌಡ, ಸಾಹಿತ್ಯ ಸಂಘರ್ಷದ ನೆಲೆಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ಪ್ರಕಟ-೨೦೧೧.

೧೮. ಸುಜಾತ ಎಚ್.ಎಸ್, ಎಂ.ಎಸ್. ಪುಟ್ಟಣ್ಣ, ಕಾದಂಬರಿಗಳು, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ, ಪ್ರಕಟ-೨೦೦೭.

೧೯. ಸುಜಾತ ಎಚ್.ಎಸ್, ಎಂ.ಎಸ್. ಪುಟ್ಟಣ್ಣ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪ್ರಕಟ-೨೦೦೧.

೨೦. ಸುಮಿತ್ರಾಬಾಯಿ ಬಿ.ಎನ್, ಡಾ. ದಂಡಪ್ಪ, ಸುವರ್ಣ ಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಕಟ-೨೦೦೬.

೨೧. ಸಿದ್ದಣ್ಣ ಉತ್ನಾಳ, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ, ಅಥಣಿ, ಪ್ರಕಟ-೧೯೯೭.

೨೨. ಸಿದ್ದಲಿಂಗಯ್ಯ ಜಿ.ಎಸ್ (ಸಂಪಾದನೆ). ಎಂ.ಎಚ್.ಕೃಷ್ಣಯ್ಯ, ಸಾಲು ದೀಪಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೨೦೦೧.

೩. ಸಂಶೋಧನಾ ಗ್ರಂಥಗಳು

೧. ಅಪ್ಪಾಜಿಗೌಡ ಅರ್ಜುನಪುರಿ, ನಂಜನಗೂಡು ತಿರುಮಲಾಂಬ : ಒಂದು ಅಧ್ಯಯನ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು, ಪ್ರಕಟ-೧೯೯೫.

೨. ಅಮೂರ ಜಿ.ಎಸ್, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ಪ್ರಕಟ-೧೯೯೪.

೩. ಎಲಿಗಾರ ಚನ್ನಕ್ಕ, ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೯೦.

೪. ಕಣವಿ ಮಹದೇವ, ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳ : ಒಂದು ಅಧ್ಯಯನ, ಪ್ರತಿಮಾ ಪ್ರಕಾಶನ, ಗುಳೇದಗುಡ್ಡ, ಪ್ರಕಟ-೧೯೯೪.

೫. ಕೃಷ್ಣಮೂರ್ತಿ ಕಿತ್ತೂರ, ಗಳಗನಾಥರ ಕಾದಂಬರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೭೮.

೬. ಗುರುಪಾದ ಮರಿಗುದ್ದಿ, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಪ್ರಕಟ.೧೯೮೯.

೭. ಧಾರವಾಡಕರ ರಾ.ಯ, ಹೊಸಗನ್ನಡ ಸಾಹಿತ್ಯದ ಉದಯ ಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೭೫.

೮. ಭಂಡಾರಿ ಎಸ್.ಆಯ್, ಕನ್ನಡ ಕಾದಂಬರಿಗಳಲ್ಲಿ ಸ್ತ್ರೀ, ಶರಣಸ್ಫೂರ್ತಿ ಎಸ್.ಬಿ. ಪ್ರತಿಷ್ಠಾನ, ಸಿಂದನಮಡು, ಗುಲ್ಬರ್ಗಾ ಜಿಲ್ಲೆ, ಪ್ರಕಟ-೨೦೦೦.

೯. ಭಂಡಾರಿ ಆರ್.ವ್ಹಿ, ಕನ್ನಡ ಕಾದಂಬರಿಗಳಲ್ಲಿ, ವರ್ಣ ಮತ್ತು ವರ್ಗ ಸಂಘರ್ಷ, ರಾಘವೇಂದ್ರ ಪ್ರಕಾಶನ, ಅಂಕೋಲಾ, ಪ್ರಕಟ-೨೦೦೩.

೧೦. ಭರಣ್ಯ ಹರಿಕೃಷ್ಣ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ ಮಧುರೈ, ಪ್ರಕಟ-೧೯೯೦.

೧೧. ಮಹೇಶ್ವರಿ ಯು, ಇದು ಮಾನಸಿಯ ಓದು, ಶಿವರಾಮ ಕಾರಂತ ಅಧ್ಯಯನ ಕೇಂದ್ರ,ಪುತ್ತೂರು, ಪ್ರಕಟ-೨೦೦೧.

೧೨. ಲಕ್ಷ್ಮಣಗೌಡ ಕೆ.ಟಿ, ಸ್ವಾತಂತ್ರ್ಯ ಪೂರ್ವ ಕನ್ನಡ ಕಾದಂಬರಿಗಳಲ್ಲಿ, ಸಾಮಾಜಿಕ ಸಾಂಪ್ರದಾಯಿಕ ಸಂಘರ್ಷ, ಮಂಗಳೂರು ವಿಶ್ವವಿದ್ಯಾಲಯ, ಪ್ರಕಟ-೧೯೯೧.

೧೩. ವಿನಯಾ ಜಿ ನಾಯಕ, ಕನ್ನಡದಲ್ಲಿ ಮಹಿಳಾ ಸಾಹಿತ್ಯದ, ವಿಕಾಸ ಘಟ್ಟಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೯೬.

೧೪. ಶಂಕರ ಎಂ, ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆ, ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೨೦೦೮.

೧೫. ಶಿವರಾಮ ಪಡಿಕ್ಕಲ್, ಕನ್ನಡ ನಾಡು ನುಡಿ ರೂಪಕ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ಪ್ರಕಟ-೨೦೦೧.

೧೬. ಶೇಷಗಿರಿರಾವ್ ಎಲ್.ಎಸ್, ಹೊಸಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೧೯೮೮.

೧೭. ಶ್ರೀಪತಿ ಹಳಗುಂದ, ಕನ್ನಡ ಕಾದಂಬರಿಗಳಲ್ಲಿ, ವೇಶ್ಯಾ ಜೀವನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೨೦೦೮.

೧೮. ಸಿದ್ಧನಗೌಡ ಪಾಟೀಲ, ಕನ್ನಡ ಕಾದಂಬರಿಗಳಲ್ಲಿ ವರ್ಗ ಸಂಘರ್ಷ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಟ-೧೯೯೨.

೧೯. ಸುಜಾತಾ ಎಚ್.ಎಸ್, ಎಂ.ಎಸ್.ಪುಟ್ಟಣ್ಣ: ಒಂದು ಅಧ್ಯಯನ, ಎಚ್.ಎಸ್.ಎನ್.ಆರ್.ವೈ.ಬಿ.ಎಚ್, ಬೆಂಗಳೂರು, ಪ್ರಕಟ-೧೯೮೧.

೨೦. ಸುರೇಶ ಪಾಟೀಲ, ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತು ವಿನ್ಯಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟ-೨೦೦೮.

೨೧. ಹುಣಶ್ಯಾಳ ಬಿ.ಆರ್, ನವೋದಯ ಕಥೆಗಳಲ್ಲಿ ಮಾನವತಾವಾದ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪ್ರಕಟ-೨೦೦೮.

೨೨. ಹಾವನೂರು ಶ್ರೀನಿವಾಸ, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪ್ರಕಟ-೨೦೦೦.

೪. ಅನುವಾದ ಗ್ರಂಥಗಳು:

೧. ಕೃಷ್ಣಕುಮಾರ ಸಿ.ಪಿ. (ಅನು), ಸಾಹಿತ್ಯ ಪ್ರವೇಶ, ಮೂಲ: ವಿಲಿಯಂ ಹೆನ್ರಿ ಹಡ್ಸನ್, ಚೇತನ್ ಬುಕ್ ಹೌಸ್, ಮೈಸೂರು, ಪ್ರಕಟ-೧೯೯೮.

೨. ಗೋಪಾಲರಾವ್ ಎಚ್.ಎಸ್, ಭಾರತೀಯ ಬಹುಮುಖಿ ಸಂಸ್ಕೃತಿ, ನವ ಕರ್ನಾಟಕ ಪ್ರಕಾಶನ, ಶರಣ ಭಗತ್ ಉಪಾಧ್ಯಾಯ ಶರಣ, ಬೆಂಗಳೂರು, ಪ್ರಕಟ-೨೦೦೫.

೩. ತುರಮರಿ ಗಂ. ಮ. (ಅನು), ಬಾಣ ಕಾದಂಬರಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಸಮಾಜ ಪುಸ್ತಕಾಲಯ, ಧಾರವಾಡ.

೪. ನವರತ್ನ ಶೇಷ (ಅನು), ಮನುಸ್ಮೃತಿ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ಪ್ರಕಟ-೧೯೯೭.

೫. ಪ್ರಧಾನ ಗುರುದತ್ತ (ಅನು), ಭಾರತೀಯ ಸಮಾಜದ ಐತಿಹಾಸಿಕ, ವಿಶ್ಲೇಷಣೆ ನವ ಕರ್ನಾಟಕ ಪ್ರಕಾಶನ, ಶರಣ ಭಗತ್ ಉಪಾಧ್ಯಾಯ ಶರಣ, ಬೆಂಗಳೂರು, ಪ್ರಕಟ-೧೯೮೬.

೬. ಲಲಿತಾಂಬ ಜಿ.ವೈ. (ಅನು), ಅಸ್ತಿತ್ವವಾದ, ಮೂಲ ಮೀರಾ ಚಕ್ರವರ್ತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪ್ರಕಟ-೧೯೭೬.

೭. ಸಿದ್ದವನಹಳ್ಳಿ ಕೃಷ್ಣಶರ್ಮ, ಹಿಂದೂ ಕುಟುಂಬ ಪುನರ್ದರ್ಶನ, ಮೂಲ ಪಟ್ಟಾಬಿಸೀತಾರಾಮಯ್ಯ, ಮನೋಹರ ಗ್ರಂಥ ಮಾಲಾ, ಭಂಡಾರ, ಧಾರವಾಡ.

೮. ಸುರೇಂದ್ರ ದಾನಿ (ಅನು), ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೂಲಗಳು ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪ್ರಕಟ-೧೯೮೨.

೫. ಲೇಖನಗಳು:

೧. ಇನಾಂದಾರ ವಿ.ಎಂ. 'ಮುನ್ನುಡಿ' ಇಂದಿರಾ(ಕೆರೂರು ವಾಸುದೇವಾಚಾರ್ಯ) ಉಷಾ ಸಾಹಿತ್ಯ ಮಾಲೆ, ಮೈಸೂರು, ಪ್ರಕಟ-೧೯೭೮.

೨. ಕೇಶವಮೂರ್ತಿರಾವ್, ಹೊಸಗನ್ನಡ ಗದ್ಯಪ್ರವರ್ತಕ ಎಮ್.ಎಸ್. ಪುಟ್ಟಣ್ಣನವರು, ಕನ್ನಡ ಪ್ರಭ, ಪ್ರಕಟ-೧೯೭೦, ಪು.೪.

೩. ಗುಂಡಪ್ಪ ಡಿ.ವ್ಹಿ., ಕನ್ನಡ ಕಾದಂಬರಿಗಳ ಪ್ರವರ್ತಕರು ಎಮ್.ಎಸ್.ಪುಟ್ಟಣ್ಣನವರು, ಕನ್ನಡ ನುಡಿ ಪ್ರಕಟ-ಜೂನ್-೧೯೬೩.

೪. ಗುರುಪಾದ ಮರಿಗುದ್ದಿ, ಸ್ವತಂತ್ರಪೂರ್ವ ಕಾಲೀನ ಕನ್ನಡ ಕಾದಂಬರಿಗಳು ಮತ್ತು ಇಂದಿರಾ ಕಾದಂಬರಿಯ ವಸ್ತು ಸ್ವರೂಪ, ಪ್ರಕಟ-೨೦೧೦.

೫. ಗುಲ್ವಾಡಿ ವೆಂಕಟರಾಯ 'ಜಾತಿ' ಸಂಕ್ರಮಣ, ಸಂಪುಟ, ೧೯ ಸಂಚಿಕೆ, ೪-೫-ಪ್ರಕಟ-೧೯೮೫.

೬. ಚಂದ್ರಶೇಖರ ಪಾಟೀಲ, ಸಂಕ್ರಮಣ ಸಂಪಾದಕೀಯ, ಆಗಸ್ಟ್, ಸಪ್ಟೆಂಬರ್, ಪ್ರಕಟ-೧೯೮೪.

೭. ನಾಯಕ ಜಿ.ಎಚ್. ಕನ್ನಡದ ಮೊಟ್ಟ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ, ಇಂದಿರಾಬಾಯಿ.

೮. ನಾಯಕ ಜಿ.ಎಚ್, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು : ಕೆಲವು ವಿಚಾರಗಳು.

೯. ನಿರಂಜನ, ಪ್ರಧಾನಸಂಪಾದಕ, ಎಮ್.ಎಸ್. ಪುಟ್ಟಣ್ಣ, ಜ್ಞಾನ ಗಂಗೋತ್ರಿ, ಕಲೆ, ಸಾಹಿತ್ಯ ಸಂಪುಟ ೫, ಮಾರ್ಚ್ ಪ್ರಕಟ-೧೯೭೩.

೧೦. ಮಹೇಶ ಚಿಂತಾಮಣಿ ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು : ಒಂದು ಅಧ್ಯಯನ, ವಿಮರ್ಶಾ ವಿಧಾನ.

೧೧. ವಿಜಯಕುಮಾರ ಕಟಗಿಹಳ್ಳಿಮಠ, ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು : ಒಂದು ಅಧ್ಯಯನ. ರಚನಾ ವಿನ್ಯಾಸ.

೧೨. ವೆಂಕಟೇಶ ಸಾಂಗಲಿ. ತಿರುಮಲಾಂಬ, ಕಸ್ತೂರಿ ಜನೇವರಿ, ೧೯೮೭, ಪು.೧೬-೨೨.

೧೩. ಶಶಿಕಲಾ ಮೊರಬದ, ಇಂದಿರಾ ಕಾದಂಬರಿಯಲ್ಲಿ ಸಾಂಸ್ಕೃತಿಕ ಸವಾಲುಗಳು, ಪ್ರಕಟ-೨೦೧೦.

೧೪. ಶ್ರೀಧರಮೂರ್ತಿ, ಎಮ್.ಎಸ್.ಪುಟ್ಟಣ್ಣವರ ಮಾಡಿದ್ದುಣ್ಣೋ ಮಹಾರಾಯ, ಪ್ರಜಾವಾಣಿ, ಪ್ರಕಟ-೧೯೭೩.

೧೫. ಶ್ರೀರಾಮ ಇಟ್ಟಣ್ಣವರ, ಕೆರೂರು ವಾಸುದೇವಾಚಾರ್ಯ ಕಾರ್ಯಾಗಾರದ ಅಧ್ಯಕ್ಷೀಯ ಟಿಪ್ಪಣಿ, ಪ್ರಕಟ-೨೦೧೦.

೧೬. ಶ್ಯಾಮಸುಂದರ ಬಿದರಕುಂದಿ, ಕೆರೂರು ವಾಸುದೇವಾಚಾರ್ಯ ಕಾದಂಬರಿ ಲೋಕ, ಪ್ರಕಟ-೨೦೧೦.

೧೭. ಸಬೀಹಾ ಭೂಮಿಗೌಡ, ಇಂದಿರಾಬಾಯಿ ಸದ್ಧರ್ಮದ ಪರಿಕಲ್ಪನೆ.

೧೮. ಸುಜಾತಾ ಎಚ್.ಎಸ್., ಎಮ್.ಎಸ್. ಪುಟ್ಟಣ್ಣನವರು, ಚಿತ್ರದುರ್ಗದಲ್ಲಿ ಗೋಷ್ಠಿಯ ಲೇಖನ, ಪ್ರಕಟ-೧೯೮೧.

೧೯. ಹಾವನೂರು ಶ್ರೀನಿವಾಸ, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು. ಕಸ್ತೂರಿ, ಪ್ರಕಟ-ಮೇ-೧೯೭೦.

೨೦. ಹಾವನೂರು ಶ್ರೀನಿವಾಸ. ಕನ್ನಡ ಪ್ರಥಮ ಸಾಮಾಜಿಕ ಕಾದಂಬರಿಯ ಹಿನ್ನೆಲೆ. ಪ್ರಬುದ್ಧ ಕರ್ನಾಟಕ ಸಂಪುಟ ೫೫, ಸಂಚಿಕೆ-೩, ಪ್ರಕಟ-೧೯೭೦.